Volume - XIX

6th January 1896 to

14th Dec 1896.

Karnataka Prakasika.

ಚಂದಾದರಗಳು —ಸ್ಥಳದವರಿಗೆ ಪರಸ್ಥಳದವರಿಗೆ, ಪೋಸ್ಟೇಜ್ ಸಹ

ಸಂ 1 ಕ್ಕೆ	3 0 0	ಸಂ 1 ಕ್ಕೆ	4 0 0
6 ತಿಂಗಳಿಗೆ,	2 0 0	6 ತಿಂಗಳಿಗೆ	2 8 0
3 ತಿಂಗಳಿಗೆ,	1 1 0	3 ತಿಂಗಳಿಗೆ	1 8 0

ಕರ್ಣಾಟಕ ಪ್ರಕಾಶಿಕಾ.

Published Every Monday Morning.

ಪ್ರಕಟನೆಯ ರವಾಜ್ { ಮೊದಲನೆಯದಫ ಪಙ್ತಿ ಒಂದಕ್ಕೆ 0 2 0 / ಎರಡನೆಯ ದಫ ಪಙ್ತಿ ಒಂದಕ್ಕೆ 0 1 0

[ಸೂಚನೆ:–ಎರಡು ಪಙ್ತಿಗಿಂತ ಜಾಸ್ತಿಯಾಗಿ ಎಷ್ಟು ದಫೆಯಾದರೂ ಪಙ್ತಿ ಒಂದಕ್ಕೆ ೧ ಆಣೆ ಯಂತೆಯೇ ಲೆಕ್ಕ ಮಾಡಲ್ಪಡುವದು.]

ಸ್ವಕಾಮನಿವಿಧಪ್ರವೃತ್ತ್ಯುಪಗತಸಾರ್ಥ ಕರ್ಣಾಟಕಸ್ರಕ್ಷನಸುರಾಬಿಧಾಪ್ರಥಿತಸಃಹಿತೀಕೃಭಿತಾ ॥ ಪ್ರಗುಣಂ ಕಹಿತವಾಸರನಿಹಿತಮುದ್ರಣಾ ಸಜ್ಜನೈರ್ದಿ ಖಾಸುಸಂತೋಷಿತಾ ದಿಶತಿ ನೂನಸಂಸಂಪದಂ ॥

Vol. XXIII. BANGALORE:—MONDAY, JANUARY 6, 1896. No. 1.

NOTICE

Fresh sealed tenders for the supply of Fodder (Horse Gram) to the Remount Depot Hosur from 1st April 1896 to 31st March 1897 will be received by the Superintendent, Remount Depot, up to noon on the 18th January 1896

For further particulars Vide *Fort St George Gazette*, No 11, page 1317, of 19th November 1895

Remount Depot, Hosur 1st Jan 1896 } E Chalmers Lt Col Supdt, *Remount Depot*

Select Telegrams

St Petersburg 31st Dec—The proposal of the British sympathisers with the Armenians, that Russia should undertake to pacify Armenia, is not favoured here

Calcutta 31st Dec—The following bulletin was issued yesterday afternoon regarding the Viceroy's condition:— The cold from which the Viceroy is suffering has caused some inflammation of the liver His Excellency, however, has passed a good night and is progressing favourably

To-day's bulletin regarding the condition of the Viceroy states that His Excellency passed a good night, and that the improvement of the previous day was maintained

London 2nd Jan—A sensational crisis endangers Great Britain's relations with Germany The German Press is demanding that the Government should intervene to protect the interests of the Boers and Germans at Johannesburg

Ottawa 2nd Jan—At the opening of Parliament yesterday the government announced that the Militia was to be armed and the defences strengthened

THE

Karnataka Prakasika.

MONDAY, JANUARY 6 1896

THE COMPLICATIONS IN EUROPE AND INDIA

The news from the West is of an alarming nature, and has been for sometime past This comes from several quarters, and it seems clear that the unrest caused will not soon be changed into confidence Let us first take what is known as the Armenian question, as it is nearer to us than the others, and would be certain to affect India should a struggle occur In the Turkish empire there are a good many Christians, many of whom are Armenians Most of these live in the Asiatic portion of the empire, though there are many in Europe, especially in Constantinople, the capital of the empire The bigotry of the Mohamedans has lately been excited, and terrible massacres have taken place in different parts, more especially in what is called Armenia It is believed that more than twenty thousand people have perished since the outrages began, and thousands are wandering about homeless, and without food to eat Many of these will die, and unless the powers bring about a change soon there will be no Christians to rescue The Turkish empire is in a miserable condition, it is falling to pieces as fast as it can, the central power cannot control the provinces, and the men sent to govern them do just what they like The Turks are dissatisfied, and not long ago there was a fear of a rising in the capital itself Everything shows that the Turkish empire cannot hold together much longer, even if the powers do not interfere, or if they do not divide it among themselves It seems as if the Government of the country was so bad that it was impossible to improve it, so that there is nothing to do but take it out of the way The powers would have done this long ago had it not been for the jealousies that existed among them They cannot agree which portion each is to take, and so they allow the Sultan to do pretty much what he pleases, or something like it It is not improbable that war may break out over this question, for one of the powers—probably Russia—may determine to seize a part of Turkey, and the others may object to the step When there is so much combustible matter a spark would be sufficient to set it on fire, and this fire would be something terrible Of course, should a war break out in the East of Europe it would affect this country, and to a very great extent, more especially if England was mixed up in it Troops would have to be sent from here to fight, as they were sent in 1878, when a struggle between England and Russia seemed imminent Indians would fight side by side with Englishmen, and thus a new factor would be introduced into European warfare But the cost to India would be great, and it is to be hoped that a struggle will be prevented though it may take place Then there is what may be called the American question, which affects England more nearly than that in the East of the continent The cause of the dispute is the following:—There is a tract of land in South America called British Guiana, and by the side of it there is a country called Venezuela There have been disputes about the boundary for many years past, and of late the Venezuelans have committed outrages upon British subjects For this they have been taken to task, and reparation has been demanded, which they are unwilling to give The Venezuelan Government makes a demand for land in several places within the British boundary line, which, of course, is denied The British, on the other hand, claim strips of territory in the Venezuelan tract of country, and hence the dispute is rather a complicated one It might be settled but for one factor in the matter—the United States, which country believes it has a perfect right to interfere By what is called the "Monroe doctrine" this nation has a right to take part in any quarrel that may take place anywhere on the continent of America It is an absurd doctrine to hold, and sometime or other it will bring the country into trouble The Government of the United States says it must settle the dispute in Venezuela without any reference to England, and this cannot be allowed Money has been granted by the Parliament of the United States to purchase war material, but the people do not see the necessity for war They know full well that it would cause much loss, much misery even if they gained what they went to war about. The commerce of the United States would suffer much if it was not entirely ruined, which it might be So the people of the country declare they do not want war, that the quarrel must be settled amicably, and the two countries must remain at peace It would be a terrible thing if the two were to go to war, for they are of the same nationality and profess the same religion They have many interests in common, the two countries are so intimately connected that a fight between them would resemble a civil war, than which nothing could be worse It is therefore sincerely to be hoped that the dispute will soon be settled, and that war will be avoided, and this, we think, will be the case Of course a war with America would not affect India as would one between England and Russia, but still it would be felt Troops would be sent from this land, but only English troops, we fancy, and the anxiety felt while the fight was going on would be very great In one respect a war with America might do good to India. It would lead to many more things being sent from here than is now the case For instance, if cotton could not be obtained from America, it would be obtained from India The same would be the case with wheat and other articles. But still the loss caused would outweigh the gain, and it is therefore to be hoped that matters will be patched up Since writing the above matters have improved for the better, and war may be avoided both in Europe and America It is sincerely to be hoped that such may be the case, for a struggle would be a terrible affair

News and Notes.

The next Congress meets at Calcutta

Sixty thousand rupees was voted for the Congress expenses in England

Mr A O Hume and D E Wacha were made General Secretaries to the Congress

A petition has been submitted to the Madras Government praying for the construction of a railway through Puducottah to the Zemindaries of Sivaganga and Ramnad.

Sir Henry Parker is strongly opposed to cycling as a pastime as far as the fair sex are concerned He says if the fashion becomes general there will scarcely be a woman with a straight back in the country

The Board of Directors of the South Indian Railway has acquiesced in the proposal of the Agent that a trial should be made on the line of an experiment of having separate refreshment rooms for Native passengers.

Owing to heavy floods on hills of Tirupati, at Renigunta all civil and rail roads were washed away Many tanks breached Communications are stopped, and repairs are being executed People suffered hitherto for want of water, now they suffer from excess of rain

At the opening of the Congress at Poona, two hundred native ladies were present This is a matter for congratulation The number of delegates assembled ranged from 1,500 to 2,000, and that of visitors from 2,500 to 3,000, thus the Poona Congress in point of numbers was one of the best ever held in India

Referring to the attitude of the Mahomedans towards the Congress, the *Statesman* of Calcutta writes. "On their own account we regret the indifference which the Mahomedan community as a whole shows towards the great movement, but their children will be wiser than themselves" We have no doubt they will be

The correspondent to the *Pioneer* telegraphing about Surendra Nath Bannerji's speech says:—The President spoke for two hours and 45 minutes It was the most brilliant performance of that practised orator and possessed high literary merit It expresses and emphasises the convictions of a life time The speech was well received.

Tinnevelly is surrounded by floods A portion of the third ward is under water A large number of thatched houses has been destroyed In the Tamraparni bridge, there is twenty seven feet of water Rain continued during the day when much danger was apprehended Towards evening the weather was better Flood has gone down a little Much paddy is damaged in shops near the railway station.

It is gratifying to learn, says the *Indian Mirror*, that another disciple of the late Ram Krishna Paramahamsa has proceeded to England to join Swami Vivekanand with the object of assisting him in his good work of the propagation of Hindu philosophy and religion in the Western world This gentleman, Swami Ram Krishnanandji, though not so brilliant as his elder brother in faith Swami Vivekanand, is well versed in the Hindu religious lore and in the English language

The following interesting anecdote is from the *Times of India* Previous to the President's arrival at the Congress pavilion, at Poona on the 27th, one of the warders appeared on the platform, with a small Hindoo child in his arms, and shouted in a stentorian voice "Any one missing this baby?" Apparently no one was, so at the suggestion of Mr Gokhale the juvenile Congresswallah was deposited on a seat in the space allotted to the ladies, many of whom graced the occasion by their presence.

The *Statesman* says:—The eleventh annual meeting of the Indian National Congress was inaugurated at Poona yesterday with a speech by the Hon'ble Surendra Nath Banerjea, the President for the year, which, for eloquence will compare not unfavourably with the best efforts of English oratory and in which the higher qualities of statesmanship are displayed in a hardly inferior degree In his treatment of the various subjects in the programme of the Congress Mr Banerjee showed a sense of proportion which has not been an invariable characteristic of similar addresses

A Poona correspondent wrote as follows on the 29th ultimo:—"A miraculous case happened this morning in the city of Poona under the following circumstances. A Brahmin, named Luxman, resident of Thana came here for the National Congress He was laid up with fever Yesterday he grew dangerously ill, and was thrown in a trance His friends, thinking him dead, made the necessary arrangements for his funeral. They placed the supposed dead man in a coffin for taking him to the river to be burned The funeral arrived near the Shani temple, where the head and hands of the dead man were seen to be moving by some passers by, who stopped the funeral, and having the coffin placed on the ground, removed the cloth from the face, when the man opened his eyes, and tried to speak He was immediately extricated from the coffin, and taken to the Karashikhana He was afterwards ordered to go home"

Local and Provincial.

PUBLIC OFFICES —Opened this morning after the Christmas holidays, and all the officials have returned to duty.

THE MYSORE SANITARY ENGINEER'S OFFICE.—This office will shorty be removed from the capital to Bangalore.

WE learn that a herd of 15 elephants was captured on the night of the 1st instant at Kakankote Kheddа, and His Excellency Lord Wenlock was present, having followed the drive day and night.

Under the provisions of Section 435 of the Code of Criminal Procedure, Mr. B. G. Krishnaiengar, Sub-Divisional Magistrate, Chikballapur, is invested with the power to call for records of inferior Courts

THE EXECUTIVE ENGINEER, C and M STATION.—The post of Executive Engineer that has for some months been vacant, has now been given to Mr. Ellis of Madras. He took up his appointment on the first of this month.

THE KHEDDAS.—The Maharani Regent, we learn, has placed the services of Mr. K. Shamiengar, Superintendent of Kheddas, at the disposal of Lord Wenlock, Governor of Madras, during His Excellency's stay in this Province, for the Christmas holidays on a shikar excursion.—*Mysore Herald.*

Under Article 188 of the Mysore Service Regulations, Mr. Lingo Malhar Naik, Sub-Assistant Superintendent, Mysore Revenue Survey, is granted privilege leave of absence for two months and twenty seven days from 6th January 1896, or from such other date as he may avail himself of the same

Under Article 188, 203 b (c) and 207 (c) of the Mysore Service Regulations, Mr K S. Chandrasekhara Iyer, B A, B L, General Assistant Commissioner, Hassan District, is granted privilege leave of absence for one month and twenty-five days from the 20th December 1895, or from such other date as he may avail himself of the same.

THE WEATHER —We had some very remarkable weather at the beginning of last week The sky was covered with clouds on Sunday, and there was about half an inch of rain on that day. It also rained on Monday, and the sky was cloudy for three or four days. Rain at this time of the year is very unusual and unseasonable It is to be feared it has done some injury to the crops. There was heavy rain in Madras, and in many parts of the Presidency, while there was some thing like a storm in the Bay of Bengal.

S. M. RAILWAY —Owing to the extensive extentions now being carried out at the City Railway Station it has been found necessary to open an outward goods shed, quite distinct from the inward goods shed, and by this arrangement, the goods are kept quite separate, and their despatch and delivery not delayed, it also facilitates marshalling up of trains, avoids accidents, and derailments It is altogether a move in the right direction. This arrangement was the outcome of the Traffic Manager's late inspection at Bangalore, during the Viceroy's visit.

Extracts.

THE NINETH SOCIAL CONFERENCE AT POONA.

Babu Surendranath Bannerjee, in supporting a Resolution Regarding female Education, said that he had the greatest admiration for the work of the Social Conference. He felt that standing upon that platform he would not be doing justice to his own feelings if he did not give utterance to what he felt with regard to this movement and with regard to its illustrious Secretary. It was said that the Social Conference movement represented so much waste of intellectual and moral power. It was said that their voice was like the voice of one crying in the wilderness (Cries of "no, no"). It was said that their labours were not destined to fructify even in the remotest future. He had great faith in all movements for the good of the public. It might be that at the present moment their voice was like that of one crying in the wilderness, but the day would come when the glad tidings of joy which they were preaching from their platform would be caught up and echoed and re-echoed throughout the breadth and length of this vast continent. They were all set down as talkers, but talk was necessary for the preparation of public opinion. The great American orator, Wendell Philips, remarked :—" Give me time and let me talk, and I will conquer the Universe." He felt that some such sentiment must inspire a great many of those who were listening to the sound of his voice. He perfectly recognised the fact that when any real effective reform had to be carried out, the caste leaders must take up the matter in their hands But caste leaders after all were members of society. They were influenced by public opinion The Reformers were preparing public opinion, preparing that motive power which would lead them on to this forward and beneficent course of action. They would set fire to the train which would set the country ablaze, fill it with inspiration, with joy and with unspeakable blessings so far as that great question was concerned He called himself a Hindu and a Brahmin. He had not laid aside his Brahminical character, he did not mean to lay it aside either. He was proud of that fact. To the last moment of his life he would call himself a Hindu He had the greatest reverence for that ancient system which in the past had afforded consolation to millions of his countrymen, which, remodelled and reorganised and adapted to the environments of the new situation, was destined to afford consolation to many a generation yet unborn. Great as might be their respect for that system, he felt that they must place it somewhat upon a new basis. They all felt that it must be somewhat remodelled in order that it might adapt itself to its present surroundings They were confronted with the destructive force of one of the most militant civilisations that the world had ever seen Brahmanism stood its ground against militant Mahomedanism. When Hinduism had been sought to be crushed by the sword, Sivaji sprang up as a proud saviour of the Hindu system and he had been its triumphant champion. But it was not with physical force that they were now called upon to contend. It was a moral force, which was invisible It was this force with which they were confronted at the present moment. And therefore, having regard to the character of the struggle in which they were engaged, having regard to the newly developed environment by which they were surrounded, if this ancient system of their fathers, which had come down to them as a heritage from the past, if it was to be preserved, then it must be preserved upon new conditions and new circumstances He was reminded of the grand old saying in the Bible —" Let us take our stand upon the old foundations let us look around and do that which is right " He took it that it was the model of the Social Conference He took it that what they did intend to do was this They wanted to take their stand upon the old foundations of the social and religious system, to change it here, to change elsewhere, and adapt that system to new surrounding in the midst of which they found themselves placed They remembered the well-known saying of the founder of modern conservative philosophy, Edmund Burke —" A system without the means of change is without the means of conservation " They lived in an ancient house, a house consecrated by the veneration of ages. That house they must preserve, that house they must amplify, that house they must make commodious for the purpose of the future. If so, change was necessary, cautious, prudent, tentative change But change they must have if the ancient system of their fathers was to be preserved. That was his attitude with regard to the Social Conference movement With regard to the question which had been placed in his hands, he regarded female education as part and parcel of the educational system of the country in which males and females were both concerned. They could not dissociate the one from the other. Female education was necessary for the purpose of male education. It was a matter of the gravest importance that they should educate their females They were the instructors, the guides, the sweet angels that presided over their hearths and homes From them they derived all the inspiration, all the motive power of the impulse, of that divine impulse which they might happen to possess with regard to all that was great and good. It was a matter of the highest national importance, so far as the education of their men was concerned, that they should educate their females in order that they might be qualified for that great trust which was assigned to them in the economy of their social system. (Cheers)

ಕರ್ಣಾಟಕ ಪ್ರಕಾಶಿಕಾ.

೧೮೯೬ನೇ ಇಸವಿ ಜನವರಿ ೬ನೇ ತಾ|| ಸೋಮವಾರ

೧೮೯೫ನೆಯ ಸಂವತ್ಸರ.

ಈ ಪತ್ರಿಕಾ ಪ್ರಕಟನಕಾರ್ಯವು ನಾವು ಕೈಗೊಂಡದ್ದು ಮೊದಲು, ಪ್ರತಿಸಂವತ್ಸರಾರಂಭದಲ್ಲೂ ಗತಸಂವತ್ಸರದೊಳು ನಡೆದ ವಿಶೇಷಾಂಶಗಳಂ ಸಂಗ್ರಹರೂಪವಾಗಿ ಅನುವದಿಸಿ, ನೂತನ ಸಂವತ್ಸರದಲ್ಲಿ ಪ್ರಜೆಗಳ ಶ್ರೇಯೋಭಿವರ್ಧನಾರ್ಥ ನಮ್ಮ ಕಾರ್ಯವಂ ಪ್ರಾರಂಭಿಸುವುದು ವಾಡಿಕೆಯಾಗಿರುತಿದೆ. ಆದಾಗ್ಯೂ ಸರ್ ೧೮೯೫ನೆಯ ಇಸವಿಯ ಅಂತ್ಯಭಾಗದಲ್ಲಿ, ಸಾಮಾನ್ಯವಾಗಿ ಈ ಇಂಡಿಯಾದೇಶಕ್ಕೂ, ವಿಶೇಷತಃ ಈ ಮಹಿಸೂರುದೇಶಕ್ಕೂ ಪ್ರಾಪ್ತವಾದ ಅನಿವಾರ್ಯವಾದ ನಷ್ಟದಬೆಸೆಯಿಂದ ೧೮೯೬ನೆಯ ಇಸವಿಯ ಪ್ರಾರಂಭದಲ್ಲಿ ಪ್ರಜೆಗಳಿಗೆ ಕೇವಲ ಹೃದಯವ್ಯಥಾಕಾರಿಯಾದ, ಶ್ರೀಮನ್ ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರ್ ಜಿ ಸಿ ಎಸ್ ಐ ಯವರಿಗೆ ಕಲ್ಕತ್ತೆಯೊಳ್ ಪ್ರಾಪ್ತವಾದ ಅಕಾಲಿಕಮರಣ ವೃತ್ತಾಂತವು ಈ ಪತ್ರಿಕಾಮೂಲಕ ಪ್ರಕಟಿಸಬೇಕಾದ ದುರ್ವಿಧಿಗೆ ನಾವು ವಿಷಾದಪಡುತ್ತ ಅದ್ಯಾಪಿ ನಮ್ಮ ಮನವು ಕುಂದುತಲಿದೆ. ೧೮೯೬ನೆಯ ಇಸವಿಯ ಪ್ರಾರಂಭವು ಸ್ವಲ್ಪಮಟ್ಟಿಗೆ ದುಃಖಮಯವಾದುದಾಗಿಯೂ, ಮುಂದೆ ಈ ದೇಶಕ್ಕೆ ಶುಭದಾಯಕವಾಗಿಯೂ ಇದ್ದುದರಿಂದ ಸದರೀ ಸಂವತ್ಸರದೊಳು ನಡೆದ ವಿಶೇಷಾಂಶಗಳಲ್ಲಿ ಕೇವಲ ಮುಖ್ಯವಾದವುಮಾತ್ರ ಈ ಸಂದರ್ಭದೊಳು ಪ್ರಸ್ತಾಪಿಸುವದು ಸರಿಯಾಗಿರುವುದೆಂದು ಭಾವಿಸುತ್ತೇವೆ. ಗತಿಸಿದ ಶ್ರೀಮನ್ಮಹಾರಾಜರವರ ಉತ್ತರಕ್ರಿಯೆಗಳು, ಪುರಾತನವಾದ ಈ ಸಂಸ್ಥಾನದ ಗೌರವಪ್ರಾಭವಾನುಗುಣವಾಗಿ ನೆರವೇರಿಸಲ್ಪಟ್ಟ ಮೇಲೆ, ಇಂಡ್ಯಾದ ವೈಸ್‌ರಾಯ್ ಸಾಹೇಬರವರು ಕಳುಹಿಸಿದ ಹುಕುಂ ಅನುಸರಿಸಿ, ೧೮೯೫ನೆಯ ಇಸವಿ ಫೆಬ್ರವರಿ ಗುರ್ತೇ ತಾರೀಖಿನಲ್ಲಿ, ಗತಿಸಿದ ಮಹಾರಾಜರವರ ಜ್ಯೇಷ್ಠಪುತ್ರರಾದ ಶ್ರೀಮನ್ ಕೃಷ್ಣರಾಜ ಒಡೆಯರ್ ಬಹದೂರವರು ಈ ಸಂಸ್ಥಾನದ ಮಹಾರಾಜರವರಾಗಿ ರತ್ನಸಿಂಹಾಸನದೊಳು ಸುಪ್ರತಿಷ್ಠಿತರಾದುದರಿಂದ ಸರ್ವರಿಗೂ ಶುಭದಿವಸವು ಚಿರಸ್ಮರಣೀಯವಾದುದು. ಬಾಲಕರಾದ ಶ್ರೀಮನ್ ಕೃಷ್ಣರಾಜ ಒಡೆಯರ್ ಬಹದೂರವರು ಪ್ರಾಪ್ತವಯಸ್ಕರಾಗಿ ರಾಜ್ಯಧುರವಂ ಕೈಗೊಳ್ಳುವವರೆಗೆ, ರಾಜ್ಯಾಧಿಕಾರವಂ ನಡೆಸುವದಕ್ಕೆ ಶ್ರೀಮನ್ ಮಹಾರಾಣೀ ವಾಣೀವಿಲಾಸ ಸನ್ನಿಧಾನದವರು ರೀಜಂಟರಾಗಿ ನಿಯಮಿಸಲ್ಪಡಬೇಕೆಂಬ ಈ ಸಂಸ್ಥಾನದ ಪ್ರಜೆಗಳ ಪ್ರಾರ್ಥನೆಯಂ ಇಂಡ್ಯಾಗವರ್ನಮೆಂಟಿನವರು ಅತ್ಯಾದರದೊಡನೆ ಆಲಿಸಿ, ಶ್ರೀ ಮಹಾರಾಣೀ ಸಾಹೇಬರವರಂ ರೀಜಂಟರಾಗಿ ನಿಯಮಿಸಿ, ರಾಜ್ಯಕಾರ್ಯಗಳಲ್ಲಿ ಆಕೆಯವರಿಗೆ ಸಹಾಯಕವಾಗಿರುವಂತೆ ಎಗ್ಸಿಕ್ಯೂಟಿವ್ ಕೌನ್ಸಿಲ್ ಎಂಬ ಕಾರ್ಯನಿರ್ವಾಹಕ ಸಭೆಯೊಂದನ್ನೇರ್ಪಡಿಸಿ, ಅದಕ್ಕೆ ವಿದ್ಯಾವಂತರಾಗಿಯೂ, ಗೌರವ್ಯರಾಗಿಯೂ, ಅನುಭವಶಾಲಿಗಳಾಗಿಯೂ, ದೇಶದ ಪ್ರಜೆಗಳ ಕ್ಷೇಮಾಭಿವೃದ್ಧಿಯಲ್ಲಿ ಆತುರವಾದ ಅಕ್ಕರೆಯುಳ್ಳವರಾಗಿಯೂ ಇರುವ ದೊಡ್ಡ ಮನುಷ್ಯರುಮೆಂಬರಗಳಾಗಿ ನಿಯಮಿಸಿ, ಈ ಸಂಸ್ಥಾನದ ದಿವಾನರವರನ್ನೇ ಅದಕ್ಕೆ ಅಗ್ರಾಸನಾಧಿಪತಿಯವರನ್ನಾಗಿ ಮಾಡಿದ್ದುಮಾತ್ರವಲ್ಲದೆ, ರಾಜ್ಯಕಾರ್ಯಗಳಲ್ಲಿ ಇಲ್ಲಿನ ಬ್ರಿಟಿಷ್ ರೆಸಿಡೆಂಟರವರಿಗೆ ಮೇಲ್ವಿಚಾರಣಾಧಿಕಾರವನ್ನುಂಟುಮಾಡಿದ್ದು ವಿಶೇಷತಃ ಕ್ಷೇಮಾವಹವೆಂತಲೇ ಹೇಳಬೇಕಾಗಿದೆ. ಮೇಲಿನ ಏರ್ಪಾಡುಗಳೆಲ್ಲ ಆ ಕಾಲದೊಳು ಇಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದ ಕರ್ನಲ್ ಪಿ. ಡಿ ಹೆಂಡರ್‌ಸನ್ ಸಾಹೇಬರವರ ಸಹಾಯವೇ ಪ್ರಾಧಾನ್ಯೇನ ಕಾರಣವಾಗಿದ್ದುದರಿಂದ ಸದರೀ ಸಾಹೇಬರವರ ವಿಷಯದಲ್ಲಿ ಈ ದೇಶೀಯರು ಯಾವಾಗ್ಯೂ ಕೃತಜ್ಞರಾಗಿರಬೇಕಾದವರಾಗಿರುತ್ತಾರೆ.

ಎರಡನೆಯದು—ಶ್ರೀರಂಗಪಟ್ಟಣದಲ್ಲಿನ ಶ್ರೀರಂಗನಾಥಸ್ವಾಮಿಗಳವರ ದೇವಸ್ಥಾನದ ಗರ್ಭಗುಡಿಯಲ್ಲಿ ಶೃಂಗೇರಿ ಶ್ರೀ ಸ್ವಾಮಿಗಳವರು ಪ್ರವೇಶಿಸಿ ದೇವರಿಗೆ ಅರ್ಚನೆ ಮಾಡಿದರೆಂಬುದು. ಈ ವಿಷಯದಲ್ಲಿ ಆವಶ್ಯಕಗಳಾಗಿ ಕಂಡುಬಂದ ಶಾಸ್ತ್ರವಿಚಾರವು ನಡೆದು, ಪಂಡಿತರಾದವರ ಅಭಿಪ್ರಾಯಗಳು ಸಂಗ್ರಹಿಸಲ್ಪಟ್ಟು, ಅವು ಈಗ ಮಹಾರಾಣೀ ರೀಜಂಟರವರ ನಿರ್ಣಯಕ್ಕೆ ಗುರಿಯಾಗಿರುವದರಿಂದ ಶಿಷ್ಟಪ್ರಿಯದವರೂ ಆಕೆಯವರ ಆಜ್ಞೆಯಂ ನಿರೀಕ್ಷಿಸುತ್ತ, ತದ್ವತ್ ವರ್ತಿಸುವದಕ್ಕೆ ಸನ್ನದ್ಧರಾಗಿರಬೇಕು.

ಮೂರನೆಯದು—ಈ ಸಂಸ್ಥಾನದ ಚೀಫ್ ಕೋರ್ಟ್ ಚೀಫ್ ಜಡ್ಜಿಯ ಅಧಿಕಾರಕ್ಕೆ ಅನುಭವಶಾಲಿಯಾದ ಮತ್ತು ನ್ಯಾಯಾಧಿಪತಿಗಳಾಗುವವರಲ್ಲಿ ಪ್ರಜೆಗಳು ಮುಖ್ಯವಾಗಿ ನಿರೀಕ್ಷಿಸುವ ಸಹನೆಯೆಂಬ ಸುಗುಣಭೂಷಿತರಾದ ಯೂರೋಪಿಯನ್ ಆಫೀಸರೊಬ್ಬರೂ, ಫಾರೆಸ್ಟ್ ಇಲಾಖೆಯಲ್ಲಿ ಮಿ|| ರಿಕೆಟ್ಸ್‌ರವರ ಸ್ಥಾನಕ್ಕೆ ಅನುಭವಶಾಲಿಯಾದ ಯೂರೋಪಿಯನ್ ಆಫೀಸರೊಬ್ಬರೂ ಕರೆಯಿಸಲ್ಪಟ್ಟದ್ದು.

ನಾಲ್ಕನೆಯದು—೧೮೭೭ನೆಯ ಇಸವಿ ಫೆಬ್ರವರಿ ಗುರ್ತೇ ತಾರೀಖಿನಲ್ಲಿ ಇಲ್ಲಿನ ಜುಡಿಷಿಯಲ್ ಕಮಿಷನರವರ ಕೋರ್ಟಿನ ಶಿರಸ್ತೇದಾರರಾಗಿ ನಿಯಮಿಸಲ್ಪಟ್ಟು ಈ ದೇಶಕ್ಕೆ ಬಂದು, ಕಾರ್ಯನಿರ್ವಹಣಶಕ್ತಿಯಿಂದಲೂ, ಪ್ರಾಮಾಣಿಕತೆಯಿಂದಲೂ, ನಿಷ್ಪಕ್ಷಪಾತತೆಯಿಂದಲೂ, ಕ್ರಮಕ್ರಮವಾಗಿ ಬಡ್ತಿಯಂ ಹೊಂದುತಬಂದು ಕಡೆಗೆ ಇಲ್ಲಿನ ಚೀಫ್ ಕೋರ್ಟ್ ಚೀಫ್‌ಜಡ್ಜಿಯ ಪದವಿಯಂ ಪಡೆದು, ಸರ್ವರ ಶ್ಲಾಘನೆಗೆ ವಿಷಯರಾಗಿರುತಲಿದ್ದ ಈಗ ಈ ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಸೀನಿಯರ್ ಮೆಂಬರಾಗಿರುವ ರಾಜಧರ್ಮಪ್ರವೀಣ ಮಿಸ್ಟರ್ ಟಿ. ಆರ್. ಎ. ತಂಬುಚೆಟ್ಟಿಯವರ ಯೋಗ್ಯತೆಯಂ ಪುರಸ್ಕರಿಸಿ ಇಂಡ್ಯಾಗವರ್ನಮೆಂಟಿನವರು ಅವರಿಗೆ ಸಿ. ಐ. ಇ ಎಂಬ ಪ್ರಶಸ್ತಿಬಿರುದಂ ಪಾಲಿಸಿದ್ದು, ಗತವರ್ಷದಲ್ಲಿ ನಡೆದ ವಿಶೇಷಗಳಲ್ಲೊಂದಾಗ್ಯ ಪರಿಗಣಿಸಲ್ಪಡತಕ್ಕ ಅಂಶವಾಗಿರುತಿದೆ.

ಐದನೆಯದು—ಈ ದೇಶಕ್ಕೆ ಇಂಡ್ಯಾರಾಜ್ಯದ ವೈಸ್‌ರಾಯ್ ಸಾಹೇಬರವರ ಆಗಮನವು ಇದನ್ನು ಮುಖ್ಯವಿಷಯಗಳಲ್ಲೊಂದಾಗಿ ಭಾವಿಸಬೇಕಾಗಿದೆ, ಏತಕ್ಕೆಂದರೆ, ಪತಿವಿಯೋಗಜನ್ಯವಾದ ದುಃಖಾನುಭವದಲ್ಲಿರುವ ಶ್ರೀಮನ್ಮಹಾರಾಣೀ ವಾಣೀವಿಲಾಸಸನ್ನಿಧಾನದವರಿಗೆ ಮರಳಿ ದರ್ಶನವನ್ನಿತ್ತು, ದುಃಖೋಪಶಮಕಗಳಾದ ಶಬ್ದಗಳಿಂದ ಆಕೆಯವರಂ ಸಮಾಧಾನಪಡಿಸಿ, ರಾಜ್ಯಕಾರ್ಯದಲ್ಲಿ ಆಕೆಯವರಿಗೆ ಪ್ರೋತ್ಸಾಹವನ್ನುಂಟುಮಾಡಿ, ಬಾಲಕರಾದ ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದೂರವರ ಪುರೋವೃದ್ಧಿ ವಿಷಯದೊಳು ಇಲ್ಲಿ ಮಾಡಲ್ಪಟ್ಟಿರುವ ಯೋಜನೆಗಳಂ ಖುದ್ದು ಪರಾಮರಿಸಿ, ಈ ಸಂಸ್ಥಾನದ ವಿಶೇಷಾಭಿವೃದ್ಧಿಗೆ ಆವಶ್ಯಕಗಳಾಗಿ ಕಂಡುಬಂದ ನೂತನ ಏರ್ಪಾಡುಗಳಂ ಸೂಚಿಸಿ ದಯಮಾಡಿದ್ದು, ಇಂಡ್ಯಾ ಗವರ್ನಮೆಂಟಿನವರು ಈ ಸಂಸ್ಥಾನದ ಪುರೋವೃದ್ಧಿವಿಷಯದಲ್ಲಿ ಸಂಪೂರ್ಣವಾದ ಅಕ್ಕರೆಯಂ ವಹಿಸಿರುತ್ತಾರೆಂಬುದಕ್ಕೆ ಒಂದು ನಿದರ್ಶನರೂಪವಾಗಿರುತಿದೆ.

ಆರನೆಯದು—ಕಳೆದ ಸಂವತ್ಸರದೊಳು ಪತ್ತಿಯಾಲಾ ಮೊದಲಾದ ಕೆಲವರು ನೇಟಿವ್ ಸಂಸ್ಥಾನಾಧಿಪತಿಗಳು ಈ ದೇಶಕ್ಕೆ ಬಂದಿದ್ದು, ಈ ಸಂಸ್ಥಾನದ ಗೌರವಾನುಗುಣವಾಗಿ ಅವರಿಗೆ ಮಾಡಲ್ಪಟ್ಟ ಆತಿಥ್ಯವಂ ಕೈಗೊಂಡು, ಈ ಸಂಸ್ಥಾನದ ಪ್ರಕೃತ ಆಡಳಿತಕ್ರಮವಂ ಖುದ್ದು ನೋಡಿ ಸಂತೃಪ್ತಿಯಂ ಹೊಂದಿ ಸ್ವದೇಶಗಳಿಗೆ ತೆರಳಿದರು

ಕಳೆದ ಸಂವತ್ಸರದಲ್ಲಿ ಈ ದೇಶದೊಳು ಧನಿಕರಾಗಿಯೂ ಧರ್ಮಕಾರ್ಯನಿರತರಾಗಿಯೂ ಇದ್ದ ಅಂತಾಪುರಂ ರಂಗಾಚಾರ್ಯರ ಮತ್ತು ಸಾಹುಕಾರ್ ನೀಲಗಿರಿ ಚಿಕ್ಕ ವಾಪಣ್ಣನವರ ಮರಣವು ಈ ದೇಶಕ್ಕೆ ನಷ್ಟರೂಪವೆಂದು ಭಾವಿಸುವೆವು

ಮೇಲಿನ ವಿಷಯಗಳ ವಿಮರ್ಶೆಯಂ ಪೂರ್ತಿಮಾಡುವದರಲ್ಲಿ, ಶ್ರೀಮನ್ ಮಹಾರಾಜರವರಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನೂ, ಅವರ ಪ್ರಜೆಗಳಿಗೆ ಸುಖಸಂತೋಷಾಭಿವೃದ್ಧಿಯನ್ನೂ ಶ್ರೀ ಹರಿಯು ಕೃಪೆಗೈಯಬೇಕೆಂದು ಪ್ರಾರ್ಥಿಸುವೆವು.

ಸ್ವವಿಷಯ.

ಈ ಪತ್ರಿಕೆಯನ್ನು ನಾವು ಪ್ರಕಟಿಸಲು ಪ್ರಾರಂಭಿಸಿದ್ದು ಮೊದಲು ಇಪ್ಪತ್ತೆರಡು ಸಂವತ್ಸರಗಳು ಕಳೆದು ಇಪ್ಪತ್ಮೂರನೆಯ ವರ್ಷವು ಪ್ರಾರಂಭವಾಗಿರುತ್ತದೆ. ಪ್ರಾರಂಭದ ಮೊದಲು, ಅಂದರೆ ಕಳೆದ ೨೨ ವರ್ಷಗಳ ಕಾಲದಿಂದ, ಅವಿಚ್ಛಿನ್ನವಾಗಿ ಈ ಪತ್ರಿಕೆಗೆ ಪೋಷಕರಾಗಿರುತ್ತಿರುವ ದೊಡ್ಡ ಮನುಷ್ಯರಿಗೆ ಕೃತಜ್ಞತಾಪೂರ್ವಕವಾದ ನಮ್ಮ ವಂದನೆಯನ್ನರ್ಪಿಸುವೆವು. ಇಲ್ಲಿ ನಾವು ಪ್ರಯೋಗಿಸಿರುವ "ಪೋಷಕ" ಶಬ್ದಕ್ಕೆ ಕೇವಲ ನಾಮಮಾತ್ರದಿಂ ನಮ್ಮ ಚಂದಾದಾರರ ರಿಜಿಸ್ಟರನ್ನಲಂಕರಿಸಿದವರಲ್ಲದೆ ಪಡೆತು ನಿಶ್ಚಯಿಸಲ್ಪಟ್ಟ ಕಾಲದಲ್ಲಿ ಚಂದಾ ಹಣಗಳಂ ಕಳುಹಿಸಿ ಕೊಡುವವರ ಮೂಲಕ ನಮಗೆ ಸಹಾಯವಾಗಿರುವವರೆಂದರ್ಥವು. ಈ ರಾಜ್ಯವು ನೇಟಿವ್ ಅರಸರ ಪಾಲನೆಗೆ ಒಳಪಟ್ಟದ್ದಾಗಿದ್ದಾಗ್ಯೂ ದೇಶಭಾಷಾ ವೃತ್ತಾಂತ ಪತ್ರಿಕೆಗಳಿಗೆ ನ್ಯಾಯ್ಯವಾಗಿ ಸರ್ಕಾರದಿಂದ ಲಭಿಸಬೇಕಾದ ಸಹಾಯವು ಸುತರಾಂ ವ್ಯರ್ಥವಾಗಿ ಹೋಗಿರುವದರಿಂದ ಸದರೀ ಪತ್ರಿಕೆಗಳಂ ಪೋಷಿಸುವ ಭಾರವು ದೇಶಾಭಿಮಾನಿಗಳಾದ ದೊಡ್ಡಮನುಷ್ಯರ ಮೇಲಿದ್ದಾಗಿರುತ್ತದೆ. ಆದುದರಿಂದ ನಮ್ಮ ಚಂದಾದಾರರೆಲ್ಲರೂ ಅವರವರ ಚಂದಾ ಹಣಗಳಂ ಕೂಡಲೆ ಕಳುಹಿಸಿ ನಮಗೆ ಪ್ರೋತ್ಸಾಹವನ್ನುಂಟುಮಾಡಿ ಪೋಷಕರ ಗೋಷ್ಠಿಯನ್ನಲಂಕರಿಸಬೇಕೆಂದು ಪ್ರಾರ್ಥಿಸುತ್ತೇವೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

ಮಿ॥ ಎ. ಪಿ. ಹ್ಯೂಂ ಮತ್ತು ವಿ. ಕಿ. ಐ ವಾಚಾ ಯೆಂಬವರು ನ್ಯಾಷನಲ್ ಕಾಂಗ್ರೆಸ್ ಜನರಲ್ ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟರು.

ಪುದುಕೋಟೆ ಮಾರ್ಗವಾಗಿ ಶಿವಗಂಗೆ ಮತ್ತು ರಾಮನಾಥಪುರದ ಜಮೀನ್ದಾರಿಗಳಿಗೆ ರೈಲು ರಸ್ತೆ ಹಾಕಿಸುವ ಕಂಪನಿ ಪ್ರಾರ್ಥನೆಯ ಮೇಲೆ ಅಲ್ಲಿ ಸರ್ವೆಗಳ ಪ ಮದರಾಸ್ ಗವರ್ನಮೆಂಟಿಗೆ ಮಾಡ ಜರಿಮಾಡ ಕಳುಹಿಸಿರುತ್ತಾರೆ.

ಮದರಾಸ್ ಹೈಕೋರ್ಟಿನ ಜಡ್ಜಿಯಾಗಿದ್ದು ಗತಿಸಿದ ಸರ್ ಟಿ. ಮುತ್ತುಸಾಮಿಅಯ್ಯರವರ ಜ್ಞಾಪಕವಂ ಊರ್ಜಿತಪಡಿಸುವ ಪ್ರಯತ್ನಕ್ಕೆ ಇದುವರೆಗೆ ೩೧,೫೧೬ ಚಿಲ್ಲರೆ ರೂಪಾಯಿಗಳು ಜಮಾ ಆಗಿದೆ.

ಈಚೆಗೆ ಕೆಲವು ದಿನಗಳ ಮೊದಲು ಮೈಸೂರು ರಾಜ್ಯದ ರೆಸಿಡೆಂಟ್ ಸಾಹೇಬರವರಿಗೆ ಶೀತಬಾಧೆಯಿಂದ ಅಸ್ವಸ್ಥಸ್ಥಿತಿಯುಳ್ಳವರಾಗಿದ್ದು ಈಗ ಕ್ರಮಕ್ರಮವಾಗಿ ರೋಗನಿವೃತ್ತಿಯಾಗುತ ಬರುತಿದೆಯೆಂದು ತಿಳಿದು ಸಂತೋಷಪಡುತ್ತೇವೆ.

ಕಳೆದ ಡಿಸೆಂಬರ್ ತಿಂಗಳ ಅಂತ್ಯಭಾಗದಲ್ಲಿ ಪುನೆಯೊಳು ನಡೆದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯಲ್ಲಿ, ೧೮೯೬ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆಯಬೇಕಾದ ಸದರೀ ಸಭೆಯನ್ನು ಕಲ್ಕತ್ತೆಯೊಳು ನಡೆಸತಕ್ಕದ್ದೆಂದು ತೀರ್ಮಾನವಾಯಿತು.

ಇಂಗ್ಲೀಷಿನಂಗುಸರು ವಿನೋದಾರ್ಥ ಸೈಕಲೆಂಬ ಎರಡು ಅಥವಾ ಮೂರುಚಕ್ರಗಳುಳ್ಳ ಕಬ್ಬಿಣದ ಗಾಡಿಗಳಲ್ಲಿ ಕುಳಿತು ತಿರುಗಾಡುವದಕ್ಕೆ ಪ್ರಾರಂಭಿಸುವರಾದರೆ ದೇಹದೊಳು ಬೆನ್ನು ನೆಟ್ಟಗಿರುವ ಯೋಗ್ಯರೇ ದುರ್ಲಭರಾಗುವರೆಂದು ಒಬ್ಬ ಇಂಗ್ಲೀಷ್ ದೊಡ್ಡಮನುಷ್ಯರು ಅಭಿಪ್ರಾಯಪಡುವುದು ಉಚಿತವಾಗಿಯೇ ತೋರುತಿದೆ.

ಈಸಲ ಪುನೆಯೊಳು ನಡೆದ ಕಾಂಗ್ರೆಸ್ ಸಮಾಜಕ್ಕೆ ಪ್ರಥಮ ದಿನದಲ್ಲಿ ಇನ್ನೂರು ಮಂದಿ ನೇಟಿವ್ ಲೇಡಿಗಳು ಬಂದಿದ್ದರೆಂತಲೂ, ಸುಮಾರು ೬,೦೦೦ ಮಂದಿಯವರಿಗೆ ಪ್ರತಿನಿಧಿಗಳು, ಮತ್ತು ೬,೫೦೦ಕ್ಕೆ ಮೇಲ್ಪಟ್ಟ ೩,೦೦೦ ಮಂದಿಯವರೆಗೆ ವೀಕ್ಷಕರೂ ಬಂದಿದ್ದರೆಂದು ಇಂಡಿಯಾ ಟೈಂಸ್ ಪತ್ರಿಕೆ ತಿಳಿಸುತಿದೆ.

ದಕ್ಷಿಣ ಇಂಡಿಯಾ ರೈಲ್ವೆ ಮಾರ್ಗದಲ್ಲಿ ಸಂಚರಿಸುವ ನೇಟಿವ್ ಪ್ರಯಾಣಸ್ಥರ ಉಪಯೋಗಾರ್ಥ ಪ್ರತ್ಯೇಕವಾಗಿ ಫಲಾಹಾರ ಸ್ಥಳಗಳಂ ಸದರೀ ರಸ್ತೆಯೊಳು ಅಲ್ಲಿ ಅಲ್ಲಿ ಏರ್ಪಡಿಸುವ ತಕ್ಕ ಏರ್ಪಾಡುಮಾಡಿ ನೋಡಬೇಕೆಂದು ಕಂಪೆನಿಯ ಏಜಂಟರವರು ತಿಳಿಸಿದ ಅಭಿಪ್ರಾಯವಂ ಬೋರ್ಡ್ ಆಫ್ ಡೈರೆಕ್ಟರುಗಳು ಒಪ್ಪಿದರೆಂದು ತಿಳಿಯಬರುತಿದೆ.

ತಿರುನಲ್ವೇಲಿ ಪ್ರಾಂತದಲ್ಲಿ ಆಚೆವಾರದಿಂದೀಚೆಗೆ ಆದ ಅತಿವೃಷ್ಟಿಯ ಬಿರುಸಿನಿಂದ, ನಾಲ್ಕು ಕಡೆಯಲ್ಲೂ ಅಪರಿಮಿತವಾಗಿ ಪ್ರವಾಹ ಹರಿಯುತ್ತ, ಬಡವರ ಗುಡಿಸಲುಗಳೆಲ್ಲವು ಕೊಚ್ಚಲ್ಪಟ್ಟು ಹೋದದ್ದಲ್ಲದೆ ಮೂವತ್ತು ಜನರು ಪ್ರವಾಹದಲ್ಲಿ ಸಿಕ್ಕಿ ಪ್ರಾಣಗಳಂ ಕಳೆದುಕೊಂಡರೆಂದು ತಂತಿವರ್ತಮಾನದ ಮೂಲಕ ತಿಳಿಯ ಬರುತಿದೆ.

ಈಚೆಗೆ ತಿರುಪತಿ ಪ್ರಾಂತದಲ್ಲಿನ ಬೆಟ್ಟಗಳ ಮೇಲೆ ಬಿದ್ದ ವರ್ಷದ ದೆಸೆಯಿಂದುಂಟಾದ ಪ್ರಬಲ ಪ್ರವಾಹದ ಮೂಲಕ ರೇಣಿಗುಂಟೆಯ ಬಳಿ ಸಾಮಾನ್ಯವಾಗಿ ರಸ್ತೆಗಳೂ ರೈಲ್ ರಸ್ತೆಯೂ ಕೊಚ್ಚಲ್ಪಟ್ಟು ಹೋದವು. ಅನೇಕ ಕೆರೆಗಳ ಕಟ್ಟೆಗಳು ಒಡೆದುಹೋದವು. ಗಾಡಿಗಳ ಸಂಚಾರ ಬಂದಾಗಿದೆ. ಕಾಮಗಾರಿಗಳು ನಡೆಯುತಲಿವೆ. ತಿರುಪತಿ ಪ್ರಾಂತದಲ್ಲಿ ಯಾವಾಗಲು ಜಲಕಷ್ಟ ತಪ್ಪಿದ್ದಲ್ಲವು, ಈಗ ಜಲದಿಂದ ಕಷ್ಟ ಪ್ರಾಪ್ತವಾಗಿದೆ.

ಮದರಾಸ್ ಹೈಕೋರ್ಟಿನಲ್ಲಿ ಕೆಲಸಗಳು ಅಧಿಕವಾಗಿ ಸುಸ್ತಿಗೆ ಬೀಳುತಬರುವದರಿಂದ, ಜಾಸ್ತಿಯಾಗಿ ಒಂದೆರಡು ವರ್ಷಗಳ ಕಾಲದವರೆಗೆ ಹಂಗಾಮಿಯಾಗಿ ಇನ್ನೊಬ್ಬ ಜಡ್ಜಿಯನ್ನು ನೇಮಕಮಾಡಬೇಕೆಂದು ಅಲ್ಲಿನ ಚೀಫ್ ಜಡ್ಜಿಯವರು ಗವರ್ನಮೆಂಟಿಗೆ ಬರೆದಿರುವುದು ಮಾತ್ರವಲ್ಲದೆ ಸದರೀ ಕೆಲಸಕ್ಕೆ ಸಿಟಿ-ಸಿವಿಲ್ ಕೋರ್ಟ್ ಜಡ್ಜಿಯವರಾದ ಮಿ॥ ಪಿ. ಶ್ರೀನಿವಾಸರಾಯರವರಿಗೆ ಕೊಡಬೇಕೆಂದು ಶಿಫಾರಸ ಮಾಡಿರುವದಾಗಿ ಸುದರ್ಶನ ಪತ್ರಿಕೆಯಿಂದು ತಿಳಿಸುತಿದೆ.

ಸ್ವಾಮಿ ವಿವೇಕಾನಂದ ಎಂಬ ಪರಮಹಂಸರೊಬ್ಬರು ಈಗ್ಗೆ ಸುಮಾರು ಎರಡುವರ್ಷಗಳ ಕಾಲದವರೆಗೂ ಅಮೆರಿಕಾ ದೇಶದೊಳಿರುವ ಅಲ್ಲಿನವರಿಗೆ, ಹಿಂದೂಗಳ ವೇದಾಂತ ಮತ್ತು ಮತರಹಸ್ಯಗಳಂ ಉಪನ್ಯಾಸದ ಮೂಲಕ ಬೋಧಿಸುತಲಿರುವುದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಇವರ ಗುರುಗಳಾದ ರಾಮಕೃಷ್ಣ ಪರಮಹಂಸರವರ ಇನ್ನೊಬ್ಬ ಅಂತೇವಾಸಿಯಾದ ಸ್ವಾಮಿ ರಾಮಕೃಷ್ಣಾನಂದಜಿ ಎಂಬವರು ತಮ್ಮ ಗುರುಬಾಯಿಯವರಾದ ಸ್ವಾಮಿ ವಿವೇಕಾನಂದ ಎಂಬವರಿಗೆ ಹಿಂದೂ ಮತಪ್ರಚಾರ ಕಾರ್ಯದಲ್ಲಿ ಸಹಾಯ ಮಾಡಬೇಕೆಂಬ ಉದ್ದೇಶದೊಡನೆ ಇಂಗ್ಲಾಂಡಿಗೆ ಪ್ರಯಾಣ ಮಾಡಿದರೆಂದು ಇಂಡಿಯನ್ ಮಿರರ್ ಎಂಬ ಪತ್ರಿಕೆ ತಿಳಿಸುತಿದೆ.

ಕಳೆದತಿಂಗಳ ೨೭ನೇ ತಾರೀಖಿನೊಳು ಪುನೆಯಲ್ಲಿ ನಡೆದ ಕಾಂಗ್ರೆಸ್ಸಿನಪ್ರೆಸಿಡೆಂಟರವರು ಚಪ್ಪರಕ್ಕೆ ಬರುವದಕ್ಕೆ ಮುಂಚೆ ಅಲ್ಲಿನ ಕಾವಲಿಗಾರರ ಪೈಕಿ ಯೊಬ್ಬಾತನು ಒಂದು ಹಿಂದೂಜಾತಿ ಸಣ್ಣಮಗುವನ್ನು ಭುಜದಮೇಲೆ ಹಾಕಿಕೊಂಡು ಬಂದು, ಈ ಮಗುವನ್ನು ಯಾರಾದರು ಕೈತಪ್ಪಿ ಬಿಟ್ಟುಬಿಟ್ಟರಾ? ಎಂದು ಪುಟ್ಟಯಾಗಿ ಕೂಗಿದನು. ವಾಲಂಟಿಯರರು ಯಾರೂ ಬಾರದೆಹೋದುದರಿಂದ, ಮಿ॥ ಗೋಖಲೆ ಎಂಬವರ ಸಲಹೆಯ ಮೇಲೆ, ಹೆಂಗುಸರ ಗುಂಪಿನಲ್ಲಿ ಒಂದು ಖುರ್ಚಿಯಮೇಲೆ ಸದರೀ ಮಗುವನ್ನು ಕುಳ್ಳಿರಿಸಿದರು, ಎಂದು ಮುಂಬೈ ಇಂಡಿಯ ಟೈಂಸ್ ಪತ್ರಿಕೆ ತಿಳಿಸುತಿದೆ.

ಮದರಾಸ್ ಮೆಯಿಲ್ ಪತ್ರಿಕೆಗೆ ಪುನೆಯಿಂದ ಒಬ್ಬ ಲೇಖಕರು ಬರೆಯುತ್ತಾರೇನೆಂದರೆ — ಈಸಲದ ಕಾಂಗ್ರೆಸ ಸಭೆಯಲ್ಲಿ ನಡೆಯುವ ವಿಶೇಷಗಳಂ ನೋಡುವದಕ್ಕಾಗಿ ನಾಣಿ ಎಂಬ ಸ್ಥಳದಿಂದ ಲಕ್ಷ್ಮಣನೆಂಬ ಹೆಸರುಳ್ಳ ಒಬ್ಬನು ಬಂದಿದ್ದನು. ಆತನಿಗೆ ಜ್ವರತಗಲಿ ಕೇವಲ ಪ್ರಾಣಾಪಾಯ ಚಿಂತೆಯುಂಟಾಗಿ ಕಡೆಗೆ ದೇಹಗತವಾದ ನಾಡಿಗಳ ಚಲನವು ಸಹ ನಿಂತುಹೋದಂತೆ ಕಂಡುಬರಲು ಆತನ ಮಿತ್ರರು ಕೆಲವರುಸೇರಿ ಪರಲೋಕಪ್ರಯಾಣ ಆವಶ್ಯಕಗಳಾದ ಸನ್ನಾಹಗಳಂ ಮಾಡಿ ಪ್ರೇತವಂ ಸಾಗಿಸಿಕೊಂಡು ಹೋಗುತ್ತಿರುವಲ್ಲಿ ಪ್ರೇತದ ತಲೆಯೂ ಕೈಗಳೂ ಚಲಿಸಿದ್ದಂ ದಾರಿಯಲ್ಲಿ ಹೋಗುವವನೊಬ್ಬನು ನೋಡಿ ಹೇಳಲು ಪಾಡೆಯಂ ಇಳಿಸಿ ಅದರಮೇಲೆ ಮುಚ್ಚಿದ್ದ ಬಟ್ಟೆಯಂ ತೆಗೆದು ನೋಡಲಾಗಿ, ಸದರೀ ಮನುಷ್ಯನು ಕಣ್ಣುಗಳಂ ತೆರೆದು ನೋಡಿ ಮಾತನಾಡುವದಕ್ಕೆ ಪ್ರಯತ್ನಪಟ್ಟನು. ಕೂಡಲೆ ಅವನನ್ನು ಪಾಡೆಯಿಂದ ಈಚೆಗೆ ತಂದು ತರುವಾಯ ಮನೆಗೆ ಕಳುಹಿಸಿಬಿಟ್ಟರು, ಎಂಬುದು.

ಶ್ರೀರಂಗಕ್ಷೇತ್ರದ ವೃತ್ತಾಂತ.—ಕಳೆದ ತಿಂಗಳ ೨೮ನೇ ತಾರೀಖ್ ದ್ವಾದಶೀದಿನ ಬೆಳಗ್ಗೆ ಸುಮಾರು ನಾಲ್ಕು ಘಂಟೆಯ ಸಮಯದಲ್ಲಿ ವೈಕುಂಠ ಏಕಾದಶಿ ಮಹೋತ್ಸವ ದರ್ಶನಾರ್ಥ ಸದರೀ ಪುಣ್ಯಕ್ಷೇತ್ರಕ್ಕೆ ಪರಸ್ಥಳಗಳಿಂದ ಬಂದಿದ್ದ ಹೆಂಗುಸರಲ್ಲಿ ನಾಲ್ವರು ಸೇರಿಕೊಂಡು ಸ್ನಾನಾರ್ಥ ಕೊಳ್ಳಿಡಕ್ಕೆ ಹೋದರು. ನದಿಯ ಕಟ್ಟೆಯಮೇಲಿರುವ ಮಂಟಪಕ್ಕೂ ಸ್ನಾನಕ್ಕೆ ಹೋದಸ್ಥಳಕ್ಕೂ ಸುಮಾರು ಒಂದು ಫರ್ಲಾಂಗ್ ಉಂಟು. ಸದರೀ ಹೆಂಗುಸರು ಸ್ನಾನಘಟ್ಟಕ್ಕೆ ಹೋದದಂ ನೋಡಿಕೊಂಡಿದ್ದ ನಾಲ್ವರು ಕಳ್ಳರು ಅವರ ಬೆನ್ನಟ್ಟಿಹೋಗಿ ಅವರಮೇಲೆ ಬಿದ್ದು ಹೊಡೆದು ಅವರ ಮೈಮೇಲಿದ್ದ ಒಡವೆಗಳಂ ಬಲಾತ್ಕಾರಪೂರ್ವಕ ಅಪಹರಿಸಿಕೊಂಡು ಹೋದರು. ಸದರೀ ಹೆಂಗುಸರಪೈಕಿ ಒಬ್ಬಾಕೆಗೆ ಪ್ರಾಣಘಾತಿಯಾದ ಗಾಯಗಳು ತಗಲಿದವು. ಶ್ರೀರಂಗದ ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡಿಸಿಕೊಳ್ಳುತಲಿದಾಳೆ, ಎಂಬದಾಗಿ ಶ್ರೀರಂಗದ ವೃತ್ತಾಂತಲೇಖಕರೊಬ್ಬರು ಮದರಾಸ್ ಪತ್ರಿಕೆಯೊಂದಕ್ಕೆ ಬರೆದಿರುತ್ತಾರೆ.

ಕಳೆದ ತಿಂಗಳ ಅಂತ್ಯಭಾಗದಲ್ಲಿ ಪುನೆಯೊಳು ನಡೆದ ನ್ಯಾಷನಲ್ ಕಾಂಗ್ರೆಸ ಸಭಾನಾಯಕರಾದ ಮಿ॥ ಸುರೇಂದ್ರನಾಥ ಬಾನರ್ಜಿಯವರು ಮಾಡಿದ ಉಪನ್ಯಾಸದ ವಿಷಯದಲ್ಲಿ ಪಯೋನಿಯರ್ ಪತ್ರಿಕೆಯ ವೃತ್ತಾಂತಲೇಖಕರು ತಂತಿಮೂಲಕ ಸದರೀ ಪತ್ರಿಕೆಗೆ ತಿಳಿಸಿದ ಅಭಿಪ್ರಾಯವೇನೆಂದರೆ :—ಪ್ರೆಸಿಡೆಂಟರವರು ಎರಡುಘಂಟೆ ನಾಲ್ವತ್ತೈದು ನಿಮಿಷಗಳಕಾಲ ಏಕೋಭ್ಯಾಸದಿಂ ಮಾತನಾಡಿದರು. ಸಭಾ ಮಧ್ಯದಲ್ಲಿ ಮಾತನಾಡುವದಕ್ಕೆ ಅಭ್ಯಾಸಮಾಡಿಕೊಂಡಿರುವ ಸದರೀ ಪ್ರಸಂಗಿಕರ ವಾಗ್ಝರಿಯು ಅತ್ಯಂತ ಶ್ಲಾಘ್ಯವಾಗಿದ್ದುದು ಮಾತ್ರವಲ್ಲದೆ ಬಹುಕಾಲದಿಂದಲು ಅವರ ಹೃದ್ಗತವಾಗಿರುವ ನಂಬಿಕೆಯನ್ನು ವ್ಯಕ್ತಪಡಿಸಿ ದೃಢಪಡಿಸತಕ್ಕದ್ದಾಗಿತ್ತು. ಅವರ ಉಪನ್ಯಾಸವು ಕೇಳಿದವರೆಲ್ಲರು ಕೇವಲ ಸಂತುಷ್ಟಮನಸ್ಕರಾದರು, ಎಂಬುದು. ಮಿ॥ ಸುರೇಂದ್ರನಾಥಬಾನರ್ಜಿಯವರು ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟು ಬರುತ್ತಾರೆಂಬ ವರ್ತಮಾನವು ಹೊರಗಾದಕೂಡಲೆ ಅವರ ಪ್ರಸಂಗವ ಕೇಳಬೇಕೆಂಬ ಉತ್ಕಟೇಚ್ಛೆಯಿಂದ ಅನೇಕರು ಪುನೆಗೆ ಪ್ರಯಾಣಮಾಡಿದರು. ಅಂತವರಿಗುಂಟಾದ ಅರ್ಥವ್ಯಯ, ಮತ್ತು ಶಾರೀರಕಶ್ರಮವು ವ್ಯರ್ಥವಾಗದೆ ಸಾಫಲ್ಯವಂ ಹೊಂದಿದಬಗ್ಗೆ ಬಹಳ ಸಂತೋಷಿಸಬೇಕಾಗಿದೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ಜಾತಿ ವೃತ್ತಾಂತಗಳು.

ಶ್ರೀಮನ್ ಮಹಾರಾಣೀ ರೀಜಂಟರವರು ಶ್ರೀಮನ್ಮಹಾರಾಜರವರೊಡನೆ ಇನ್ನು ಒಂದು ತಿಂಗಳಕಾಲಕ್ಕೆ ಮೇಲ್ಪಟ್ಟು ಈ ನಗರದಲ್ಲಿ ದಯಮಾಡಿರುವರೆಂದು ಕೇಳುತ್ತೇವೆ.

ಕ್ರಿಸಮಿಸ್ ಹಬ್ಬದಬಗ್ಗೆ ಕೊಡಲ್ಪಟ್ಟ ರಜಾದಿನ್ನೆಯದಿನದೊಡನೆ ಪೂರ್ತಿಯನ್ನೈದಿ ಈ ದಿವಸ ಪಿಡಿಪ್ಟ ಇಲಾಖೆಗಳಲ್ಲೂ ಮರಳಿ ಕೆಲಸಕ್ಕೆ ಪ್ರಾರಂಭವಾಗುತಿದೆ.

ಈ ತಿಂಗಳ ೨ನೇ ತಾರೀಖ್ ಬೃಹಸ್ಪತಿವಾರದ ಸರ್ಕಾರೀ ಗೆಜೆಟು ಕ್ರಿಸಮಸ ಹಬ್ಬದಬಗ್ಗೆ ನಿಲ್ಲಿಸಲ್ಪಟ್ಟದ್ದುದರಿಂದ ಈ ವಾರದ ಈ ಪತ್ರಿಕೆಯಲ್ಲಿ ಸರ್ಕಾರೀವರ್ತಮಾನಗಳಿಗೆ ಅವಕಾಶವಿಲ್ಲವಾಯಿತು.

ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ೮೩೫ನೇ ಸೆಕ್ಷನ್ ಮೇರೆ, ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ ಮಿಸ್ಟರ್ ಬಿ. ಜಿ. ಕೃಷ್ಣಯ್ಯಂಗಾರ್ರಿಗೆ, ಕೆಳಗಣ ಕೋರ್ಟುಗಳ ರಿಕಾರ್ಡುಗಳನ್ನು ತರಿಸಿಕೊಳ್ಳುವ ಅಧಿಕಾರ ಕೊಡಲ್ಪಟ್ಟಿರುತ್ತೆ.

ಈ ತಿಂಗಳ ಗುರುವಾರ ತಾರೀಖಿನ ರಾತ್ರಿ, ಕಾಕನಕೋಟೆಯ ಆನೆಬಂಗಡಿಯಲ್ಲಿ ಮರಳಿ ೧೫ ಆನೆಗಳು ಹಿಡಿಯಲ್ಪಟ್ಟವೆಂತಲೂ, ಈ ಸಂದರ್ಭದಲ್ಲಿ ಮದರಾಸ ಗವರ್ನರಾದ ಲಾರ್ಡ್ ವೆನ್‌ಲಾಕ್ ಸಾಹೇಬರವರು ದಯಮಾಡಿದ್ದರೆಂತಲೂ ತಿಳಿಯಬರುತಿದೆ.

ಈ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿಯವರ ಅಸಿಸ್ಟೆಂಟರಾದ ಮಿ॥ ಶಾಮರಾವ್, ಎಂ. ಎ. ಯವರೂ, ದಿವಾನರವರ ಅಳಿಯಂದರಾದ ಮಿ॥ ಸುಬ್ರಹ್ಮಣ್ಯ ಅಯ್ಯರ್ ಬಿ. ಎ. ಯವರೂ, ಅಸಿಸ್ಟೆಂಟ ಕಮಿಷನರ್‌ಗಳಾಗಿ ನೇಮಕರಾಗ್ಮಡಲ್ಪಟ್ಟರೆಂದು ನಮ್ಮ ಮೈಸೂರು ವೃತ್ತಾಂತಲೇಖಕರಮೂಲಕ ತಿಳಿಯಲಾದವು.

ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೪೪ನೇ ಆರ್ಟಿಕಲ್‌ಮೇರೆ, ಮೈಸೂರು ರೆವಿನ್ಯೂ ಸರ್ವೆ ಸಬ್ ಅಸಿಸ್ಟೆಂಟ ಸೂಪರಿಂಟೆಂಡೆಂಟ ಮಿ॥ ಲಿಂಗೋಪಾಲ್ಚಾರನಾಯಕ್ ಯವರಿಗೆ, ೧೮೯೬ನೇ ಇಸವಿ ಜನವರಿ ೬ನೇ ತಾರೀಖು ಲಾಗಾಯತು ಅಥವಾ ಅವರು ಪ್ರಯೋಗಿಸಿಕೊಳ್ಳುವ ತಾರೀಖಿನಾರಭ್ಯ ೨ ತಿಂಗಳು ೧೫ ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಈ ತಿಂಗಳ ೧೦ನೇ ತಾರೀಖ್ ಶುಕ್ರವಾರದ ದಿನ ಬೆಳಗ್ಗೆ ಇಲ್ಲಿನ ಮಾರ್ಕೆಟಿನಲ್ಲಿ ಪದ್ಧತಿಪ್ರಕಾರ, ಫಲಪುಷ್ಪಪ್ರದರ್ಶನವು ನಡೆಯುವುದು. ಅದಕ್ಕೆ ಆವಶ್ಯಕಗಳಾದ ಸಂವಿಭಾಗಗಳೆಲ್ಲವು ನಡೆಸಲ್ಪಡುತಿವೆ. ಈ ವಿಶೇಷ ಸಂದರ್ಭಕ್ಕೆ ಶ್ರೀಯುತ ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರು ಸಹ ದಯಮಾಡಬಹುದೆಂದು ತೋರುತಿದೆ.

ಈ ಷಹರ್ ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರಾಗಿರುವ ಮೆ॥ ಕೆ. ಶ್ರೀನಿವಾಸರಾಯರವರು ಕ್ಷಿಪ್ರದಲ್ಲಿ ಶಿವಮೊಗ್ಗ ಪೊಲೀಸ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟು ಅಲ್ಲಿಗೆ ಹೋಗುವರೆಂದು ಕೇಳುತ್ತೇವೆ. ಇಲ್ಲಿನ ವೈಸ್ ಪ್ರೆಸಿಡೆಂಟ ಕೆಲಸಕ್ಕೆ ಯಾರು ನಿಯಾಮಕರಾಗುವರೊ ಅದುಮಾತ್ರ ಇನ್ನು ಹೊರಗಾಗಲಿಲ್ಲವು.

ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೪೪, ೧೬೩ ಬಿ. (1) ಮತ್ತು ೧೬೩ (II) ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ ಕಮಿಷನರ್ ಮಿಸ್ಟರ್ ಕೆ. ಎಸ್. ಚಂದ್ರಶೇಖರ ಅಯ್ಯರ್ ಬಿ. ಎ. ಬಿ. ಎಲ್, ಯವರಿಗೆ, ೧೮೯೫ನೇ ಇಸವಿ ಡಿಸೆಂಬರ್ ೬ನೇ ಮರ್‍ಯಂ ಲಾಗಾಯತು ಅಥವಾ ಅವರು ಅದನ್ನು ಪ್ರಯೋಗಿಸಿಕೊಂಡ ತಾರೀಖು ಮೊದಲು ಒಂದು ತಿಂಗಳು ೧೫ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಆಚೇವಾರದಲ್ಲಿ ನಾಲ್ಕೈದು ದಿನಗಳಕಾಲ ಯಾವಾಗಲೂ ಮೋಡವಾಡುತ ಯಡಬಿಡದೆ ತುಂತುರುಮಳೆ ಬೀಳುತಲಿತ್ತು. ಅದರಿಂದೀಚೆಗೆ ಚೆನ್ನಾಗಿ ಬಿಸಿಲುಕಾಯುತಲಿದೆ. ಈ ಸಂವತ್ಸರದಲ್ಲಿ ಚಳಿಯು ದುಸ್ಸಹವಾಗಿದೆ. ಜನಾರೋಗ್ಯವು ಸಾಮಾನ್ಯವಾಗಿದೆ. ಆಹಾರ ಪದಾರ್ಥಗಳ ಧಾರಣೆಗಳು ಪ್ರಾಯಶಃ ಹಿಂದೇವಿಧವಾಗಿವೆಯೆಂ ಹೇಳಬಹುದು. ಈಸಲದ ಕಾಯಿಧಾನ್ಯಗಳು ಪೇಟೆಗಳಿಗೆ ಬರುವದಕ್ಕೆ ಇನ್ನು ಕಾಲ ಬರಲಿಲ್ಲವಾಗಿ ಧಾರಣೆಗಳು ಹ್ಯಾಗಾಗುವವೋ ಸದ್ಯಃ ಹೇಳುವದಕ್ಕಾಗುವದಿಲ್ಲವು. ಪದಾರ್ಥಗಳ ಧಾರಣೆಗಳು ಹೆಚ್ಚುವದಾಗಲಿ, ಇಳಿಯುವದಾಗಲಿ ಪರಸ್ಥಳಗಳ ಗಿರಾಕಿಯನ್ನು ಅನುಸರಿಸಿದ್ದಾಗಿರುತಿದೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಪೋರ್ಚುಗಲ್ ರಾಜನ ಕಿರೀಟವು ಮುನ್ನೂರು ಅಪ್ಪತ್ತು ಲಕ್ಷ ರೂಪಾಯಿಗಳ ಕ್ರಯ ಬಾಳುವದಂತೆ.

ಕಾಬೂಲ್ ಅಮೀರರು ಬಲಾತ್ಕಾರದಿಂದ ಯಾರನ್ನೂ ಮುಸಲ್ಮಾನರನ್ನಾಗಿ ಮಾಡಕೂಡದೆಂದು ಹುಕುಂ ಮಾಡಿರುತ್ತಾರೆ.

ಮಾಸ್ಕೋ ಪಟ್ಟಣದ ಉತ್ತರದಿಕ್ಕಿನಲ್ಲಿರುವ ತೋಪಖಾನೆಗೆ ಶೈತಾನ್ಯ ಲಿಂದ ಬೆಂಕಿಹತ್ತಿ ಒಪ್ಪತ್ತಿನ ೩,೦೦೦ ಜನರು ಮೃತಪಟ್ಟರಂತೆ.

ಯುನೈಟೆಡ್ ಸ್ಟೇಟ್ಸಿನಲ್ಲಿ ಕಾಗದದ ಮನೆಗಳನ್ನು ಕಟ್ಟಲಿಕ್ಕೆ ಪ್ರಾರಂಭಿಸಿರುತ್ತಾರೆ. ಕಾಗದದ ಇಟ್ಟಿಗೆಗಳು ಮಣ್ಣಿನಂತೆ ತಡೆಯುತವಂತೆ.

ಪೃಥ್ವಿಯಮೇಲೆ ಎಷ್ಟು ವಜ್ರಗಳು ದೊರೆಯುವವೋ ಅವೆಲ್ಲ ಆಕಾಶದಮೇಲಿಂದ ಬೀಳುವ ನಕ್ಷತ್ರಗಳಿಂದ ಆಗುತಲಿವೆಯೆಂದು ಒಬ್ಬ ಜರ್ಮನ್ ಶಾಸ್ತ್ರಜ್ಞನು ಶೋಧಿತೆಗೆದಿರುವನು.

ಪಂಜಾಬ ಪ್ರಾಂತದಲ್ಲಿ ಮಳೆಯು ಬಾರದೆ ಅದ್ದರಿಂದ ಜನರು ಬಹಳ ಗೋಳಾಡ ಹತ್ತಿರುತ್ತಾರೆ, ಮತ್ತು ಎಲ್ಲ ಬೆಳೆಗಳು ಕಟ್ಟುಹೋಗಿರುತವೆ.

ಅಮೇರಿಕೆಯಲ್ಲಿ ಮಿಸಸ್ ಲಾಂಗ್‌ಸ್ಟ್ರೀ ಎಂಬ ಕೆಸರಿನ ಹೆಂಗಸೊಬ್ಬಳು ಬಹಳ ಸುಸ್ವರೂಪಿಯಾಗಿರುವಳು. ಒಬ್ಬ ಫೋಟೋಗ್ರಾಫರನು ಇವಳ ಚಿತ್ರವನ್ನು ತೆಗೆದುಕೊಳ್ಳಲಿಕ್ಕೆ ಅವಳಿಗೆ ೧೦೦ ಪೌಂಡುಗಳನ್ನು ಕೊಟ್ಟು ತೆಗೆದುಕೊಂಡನು.

ಟರ್ಕಿ ರಾಜ್ಯದಲ್ಲಿ ಕಳವು ಮಾಡಿದವನನ್ನು ಸರ್ಕಾರದವರು ಹಿಡಿದ ಅವನ ಕೈಗಳನ್ನೂ ಕಾಲುಗಳನ್ನೂ ಕತ್ತರಿಸುತ್ತಾರಂತೆ. ಇಂತಾ ಶಿಕ್ಷೆಯು ಪೂರ್ವಕಾಲಕ್ಕೆ ಹೋಯಿತೆಂದು ತಿಳಿದಿದ್ದೆವು, ಕೈಕಾಲುಗಳನ್ನು ಕತ್ತರಿಸುವದಕ್ಕಿಂತ ಊ ಪ್ರಾಣವನ್ನೇ ತೆಗೆಯಬಹುದಾಗಿದೆ.

ಮುಂಬೈ ಪಟ್ಟಣದಲ್ಲಿ ಒಂದು ಪಬ್ಲಿಕ್ ಶಾಲೆನ್ನೂ ಒಂದು ಲೈಬ್ರರಿಯನ್ನೂ ಸ್ಥಾಪಿಸುವದಕ್ಕೆ ಅಲ್ಲನ ಬಾಯಿ ದಿನಶಾಯಿ ಸರಕಾರಕ್ಕೆ ಎಂಬ ಸಾಹುಕಾರರು ೪ ಲಕ್ಷ ರೂಪಾಯಿಗಳನ್ನು ಕೊಟ್ಟರು. ಮುಂಬೈ ಗವರ್ನಮೆಂಟಿನವರು ಇದಕ್ಕಾಗಿ ೭,೦೦೦ ಚದರ ಗಜದಷ್ಟು ವಿಸ್ತೀರ್ಣವುಳ್ಳ ಸರ್ಕಾರಿ ಭೂಮಿಯನ್ನು ಅರ್ಧಬೆಲೆಗೆ ಅಂದರೆ ಚದರ ಗಜ ಒಂದಕ್ಕೆ ೨೦ ರೂಪಾಯಿಯಂತೆ ಕೊಡಬೇಕೆಂದು ಹುಕುಂ ಮಾಡಿದ್ದಾರೆ. ಹೀಗೆ ಸರ್ಕಾರದವರು ಧರ್ಮಿಷ್ಟರಿಗೆ ಸಹಾಯ ಮಾಡುವದು ಅವಶ್ಯಕರ್ತವ್ಯವು.

ಸಿಕಂದರಾಬಾದಿನಲ್ಲಿರುವ ಮುಖ್ಯ ಹಿಂದೂ ವರ್ತಕರೂ ಸಾಹುಕಾರರೂ ಸೇರಿ ಒಂದು ಸಂಘವನ್ನು ಏರ್ಪಡಿಸಿಕೊಂಡು ಅದಕ್ಕೆ ಆ ಊರಿನಲ್ಲಿ ಮೊದಲನೇ ಸಾಹುಕಾರರಾದ ಕೃಷ್ಣಯ್ಯಚೆಟ್ಟಿ ಎಂಬುವರನ್ನು ಮುಖಂಡರನ್ನಾಗಿ ನಾಮಿಕರಿಸಿದ್ದಾರೆ. ಈ ಸಂಘಕ್ಕೆ ಸತ್ಯಬೋಧನದ ಪೋಷಕ ಎಂಬ ಹೆಸರನ್ನು ಇಟ್ಟಿದ್ದಾರೆ. ಈ ಸಂಘದವರು ಸಂಸ್ಕೃತ ವಿದ್ಯೆಯನ್ನು ಅಭಿವೃದ್ಧಿ ಪಡಿಸಬೇಕೆಂತಲೂ, ಪ್ರಜೆಗಳಿಗೆ ಇಹಲೋಕ ಪರಲೋಕ ವಿಷಯಗಳಲ್ಲಿ ಜ್ಞಾನ ಮಾಡಬೇಕೆಂತಲೂ ಉದ್ದೇಶಿಸಿ, ಬೇಕಾದಷ್ಟು ಹಣವನ್ನು ಚಂದಾ ಹಾಕಿರುತ್ತಾರೆ.

ಕ್ಯಾಪ್ಟನ್ ಕ್ಲೇರ್ ಸಂಸ್ಥಾನದ ಕೆಲವು ಜವಾಹಿರಗಳ ಹರಾಜಾದವು. ಅವುಗಳ ಪೈಕಿ ಮೂರು ಪಟ್ಟಿಗೆಗಳ ತುಂಬಾ ಅಗ್ರ ವಜ್ರಮಣಿಗಳನ್ನು ಒಬ್ಬ ಸಾಹುಕಾರನು ೩,೪೦,೦೦೦ ರೂಪಾಯಿಗೆ ಖರೀದಿ ಮಾಡಿ ತೆಗದುಕೊಂಡನು. ಇದರಮೇಲೆ ಅವನಿಗೆ ೬೦ ಸಹಸ್ರ ರೂಪಾಯಿಯ ವರೆಗೂ ಲಾಭ ಬರುತದೆಂದು ಹೇಳುತ್ತಾರೆ. ಇದಲ್ಲದೆ ಇನ್ನೊಂದು ಪೆಟ್ಟಿಗೆಯು ತುಂಬಾ ಪಚ್ಚೆ ಕಲ್ಲುಗಳು ಇರುತಿವೆ. ಇದನ್ನು ಇನ್ನೂ ಹರಾಜ್ ಹಾಕಿಲ್ಲ. ಈ ಪೆಟ್ಟಿಗೆಗೆ ೩,೧೫,೦೦೦ ರೂಪಾಯಿಯ ಕೊಡುತ್ತೇನೆ ಕೊಟ್ಟುಬಿಡಿ ಎಂದು ಅಲ್ಲಿನ ಒಬ್ಬ ಸಾಹುಕಾರನು ಕೇಳಿದನಂತೆ.

ದಕ್ಷಿಣ ಅಮೇರಿಕದ ವೆನಿಜುಲಾ ಯೆಂಬವೊಂದು ಸಣ್ಣ ಸಂಸ್ಥಾನದ ಸಂಬಂಧದಿಂದ ಉತ್ತರ ಅಮೇರಿಕದ ಸಂಯುಕ್ತ ಸಂಸ್ಥಾನದ ಸರಕಾರಕ್ಕೂ ಇಂಗ್ಲಿಷ್ ಸರಕಾರಕ್ಕೂ ಜಗಳ ಹುಟ್ಟಿರುತವೆ.

ಭೂಮಿಯಲ್ಲಿ ಅತಿ ಬಲಿಷ್ಟವಾದ ಈ ಯೆರಡು ಸರಕಾರಗಳಲ್ಲಿ ವಿರೋಧ ಹುಟ್ಟಿದ್ದರಿಂದ ವ್ಯಾಪಾರ ಉದ್ಯೋಗಗಳಿಗೆ ಪರಮಾವಧಿ ಕೇಡು ಪ್ರಾಪ್ತವಾಗಿರುತವೆ. ನ್ಯೂಯಾರ್ಕ್ ಪಟ್ಟಣದಲ್ಲಿ ದೊಡ್ಡ ದೊಡ್ಡ ಹೆಸರಾದ ಕಂಪನಿಗಳ ದಿವಾಳಿ ತೆಗಿಯ ಹತ್ತಿರುತವೆ. ೨೦ನೇ ತಾರೀಖಿನ ವರೆಗೆ ೫೦೦ ಕೋಟಿ ಡಾಲರುಗಳ ದಿವಾಳಿಗಳಾದವೆಂದು ತಂತಿ ವರ್ತಮಾನ ಬಂದಿರುತದೆ. ಒಂದು ಡಾಲರಿಂದರೆ ಸುಮಾರು ೩॥ ರೂಪಾಯಿಯಾಗುತದೆ. ಲಂಡನ್ನಿನಲ್ಲಿಯೂ ದಿವಾಳಿಗಳು ಹೊರಡುತಲಿವೆ.

EXTRACT.

ಸನ್ ೧೮೯೫ನೇ ಇಸವಿ ಸಂಬಂಧವಾಗಿ ರುಡಿಕಿಲ್ ಸಾಯಿಬರ ಭವಿಷ್ಯ ಕಥನವು.

ಸನ್ ೧೮೯೫ನೇ ಇಸವಿಯು ಪ್ರಾರಂಭವಾದಕೂಡಲೆ ಸರಕಾರಕ್ಕೆ ಹಣವು ಹುಟ್ಟಿ ಇತು, ಮತ್ತು ಒಳ್ಳೇ ಸಂಕಟವು ಪ್ರಾಪ್ತವಾಯಿತು.

೨. ಚಳಿಸಂಬಂಧವಾದ ಕಲಹಗಳುಂಟಾಗಿ ಅವರೊಳಗೆ ಅಮಿತವು ಒದಗಿತು.

೩. ಸ್ಪೈನದೇಶದಲ್ಲಿ ಭಯಂಕರವಾದ ಕೃತ್ಯಗಳು ಕಂಡುಬಂದವು, ನಶ್ವರದ ನಡೆಗಳು ಜೀವನವು ಮತ್ತೆ ಪ್ರಾಣಹಾನಿಯು ತಲೆದೋರಿತು.

೪. ಫ್ರೆಂಚರಲ್ಲಿ ಭಯಂಕರವಾದ ಸ್ಥಿತಿಯು ಒಂದು, ಅದು ವಾತಾವರಣದಲ್ಲಿ, ಸವಾರಿಗಳಲ್ಲಿ, ರಾಜಕೀಯ ಸಂಗತಿಗಳಲ್ಲಿ, ಎಲ್ಲಾ ವಿಧಗಳಲ್ಲಿ ಹೀಡಿಸಿತು, ಮತ್ತೆ ಜಗತ್ತಿನೊಳಗೆಲ್ಲಾ ಪ್ರದೇಶಗಳಲ್ಲಿ ಅನೇಕ ವಿಧಗಳಾದ ಉಪದ್ರವಗಳುಂಟಾದವು. ಮಾರ್ಚಿ ತಿಂಗಳಲ್ಲಿ ತುರ್ಕಿಸ್ಥಾನದಲ್ಲಿಯ ಕ್ರಿಸ್ತ ಪ್ರಜೆಗಳಿಗೋಸ್ಕರ ತೀಕ್ಷ್ಣವಾದ ಉಪಾಯಗಳನ್ನು ಹುಡುಕುವ ವೇಳೆಯು ಸರಕಾರಕ್ಕೆ ಪ್ರಾಪ್ತವಾಯಿತು. ಜರ್ಮನಿಯಲ್ಲಿ ನೋಬಿಲ ವಿಶ್ವ ರು ಹಾಗೂ ರಶಿಯಾದಲ್ಲಿ ನಿಹಿಲಿಸ್ಟರು ನಶ್ವರವನ್ನು ಹರಿಸಲು ಯುಕ್ತರಾದರು.

೫. ಏಪ್ರಿಲ್‌ನಲ್ಲಿ ಬಂಗಾಲ ಗಂಡಾಂತರದ ಜಗಳದ ನ್ಯಾಯ ಮತವನ್ನು ಕೊಡುತ್ತ ಅದಕ್ಕೆ ಬಾಧ್ಯರನ್ನು ಕಂಡುಹಿಡಿಯುವರು, ಮತ್ತೆ ಅದರ ರೀತಿಗಳಿಂದ ಅನೇಕ ಗಂಡಾಂತರವು ವಿಶೇಷವಾಗಿ ಯಾರ ಕೀರ್ತಿ ಸತ್ತಿ ನಾರು ಮೇ ತಿಂಗಳಲ್ಲಿ ದಕ್ಷಿಣ ಅಫ್ರಿಕಾ ದೇಶದೊಳು ಬಹಳ ಸಂಭ್ರಮವಾದ ಕಲಹಗಳುಂಟಾಗುವವು, ಮತ್ತೆ ದೇಶದ್ದ ದೊಡ್ಡ ಮನೆತನದವರಲ್ಲಿ ಕೊರೆಯ ಪ್ರಾಪ್ತಿಯಿತು. ರಾಜ್ಯದಾಳಿಯಲ್ಲಿ ಗಡಬಡಿಯುಂಟಾಯಿತು.

೬. ಜೂನ್ ತಿಂಗಳಲ್ಲಿ ಐರ್ಲಂಡಿನವರಿಗೆ ದಂಗೆ ಪ್ರಬೋಧಕರಿಗೆ ಗಲುಂಟಾದವು, ಮತ್ತೆ ಕೊಲೆಗಳ ಸಂಭವಿಸಿತು. ಫ್ರಾನ್ಸಿನಲ್ಲಿ ಒಳ್ಳೇ ಬಲವಾದ ಅರಸುರಾಳಿಕೆ ನೆರವೇರಿತು ೬ ತಿಂಗಳಲ್ಲಿ ೯ ರ ಹಾಗೂ ೯ನೇ ತಾರೀಖುಗಳ ಇತಿ ಯುರೋಪ ಒಳ್ಳೇ ಗಂಡಾಂತರಗಳಾಗುವವು, ಮತ್ತೆ ಈ ಗೊಂದಲದಲ್ಲಿ ಕೆಲವು ರಾಜರು ಮೃತ್ಯು ಗೂಡುವರು ಯಾವನು ಯೋಗದಿಂದ ಇತಿ ಯುರೋಪದಲ್ಲಿ ಒಬ್ಬ ಪ್ರಖರವಾದ ಸಂಗ್ರಾಮಾಗಲಿದ್ದರು. ಆಧಿಪಾ ರಾಜ್ಯಾಧಿಪತಿಯಾಗತಕ್ಕದ್ದು ನಿಜವಾಗಿ ತಪ್ಪುವದಿಲ್ಲವು. ಪೂರ್ವದೇಶದಲ್ಲಿ ಪ್ರಬಲವಾದ ಜಂಗುಗಳು ನಡೆಕೈ ಸಾಹಸ, ಅದರಲ್ಲಿ ಸೇರಿ ಬಂಗಾಲ ನಾಡಲ್ಲಿ ಜೋಗಬಿದ್ದರೆ ಈ ದೇಶವು ಒಳ್ಳೇ ಭಾಗ್ಯಶಾಲಿಯೆಂತೆ ತಿಳಿಯ ಕರ್ತವ್ಯವಾಗಿತು.

ಈ ವೇಳೆಗೆ ಪರಿಗಣಿಸಲ್ಪಟ್ಟಿರುವ ಭವಿಷ್ಯದ ಮೇಲಿಂದ ಸನ್ ೧೮೯೫ನೇ ವರ್ಷವು ಬಹು ಗಂಡಾಂತರವುಳ್ಳದ್ದಾಗಿ ಹೋಗಿರುವಂತೆ ತೋರುತ್ತದೆ. ಆದರೆ ಪರಮೇಶ್ವರನು ಇವುಗಳನ್ನೆಲ್ಲಾ ಜೋಡಿಸಿ ಬಿಡುವುವ ಬಗ್ಗೆ ಸ್ತುತಿಸುವಾತನಾಗಲಿಕೆಂದು ಪ್ರಾರ್ಥನೆಯಲ್ಲಿದೇಕು. ಕಲಿಶಾಲನು ಕಾಲವು ಸಿದ್ಧ ಸಂಗತಿಗಳನ್ನು ನಿಜ ಪಡಿಸತಕ್ಕದಾಗುವದು.—ಕೆ. ವೈ.

ವಾಂಮಿಯಾ ಪ್ರಕರಣದ ಪರಿಣಾಮವು.

ವಾಂಮಿಯಾಲ್ಲಿ ಹಿಂದಕ್ಕೆ ಸಂಭವಿಸಿದ್ದ ಸಂಗತಿಗಳು ನಮ್ಮ ವಾಚಕರ ಅವಧಾನದಲ್ಲಿ ಜಾಗ್ರತವಾಗಿರುತವೆ. ಈಗ ಸ್ವಲ್ಪ ದಿನಗಳ ಕೆಳಗೆ ಸತಾರೆಯ ಕಲೆಕ್ಟರರಾದ ಮಿ॥ ವಿಂಚೆಸ್ಟರ್ ಸಾಹೇಬರವರು ದೇಶಿಂತ ವಾಂಮಿಯಗೆ ಹೋಗಿ, ಹಿಂದೂ ಮುಸಲ್ಮಾನರ ಕಲಹದ ಕಾರಣಗಳನ್ನು ಸ್ವತಃ ಚಿತ್ತದಿಂದ ಕೇಳಿಕೊಂಡರು. ಸತಾರೆಯ ಪ್ರಸಿದ್ಧ ವಕೀಲರಾದ ರಾ. ರಾ. ಕರಂದೀಕರರವರೂ ಸಹ ಇದ್ದರು. ಇವರು ಹಿಂದೂಜನರ ಕಲಯಾಣ ಮತ್ತೆ ದುರ್ಗಾಕಾಳೀಜಿ ಪ್ರಜೆಗಳ ಮನವಿ ಇವರು ಮುಸಲ್ಮಾನರ ಕಡೆಯಿಂದ ಬಂದಿದ್ದರು. 'ಅಹೋರಾತ್ರಿ ನಾವು ಮಸೀದಿಗಳಲ್ಲಿ ಎಡಬಿಡದೆ ಪ್ರಾರ್ಥನೆಗಳನ್ನು ಮಾಡುತ್ತಿರುವದರಿಂದ, ಹಿಂದೂ ಜನರ ವಾದ್ಯಗಳಿಂದ ನಮ್ಮ ಪ್ರಾರ್ಥನೆಗೆ ವ್ಯತ್ಯಯವುಂಟಾಗುವ ಪ್ರಯುಕ್ತ ಹಿಂದೂ ಜನರು ಮಸೀದಿಗಳ ಮುಂದಿನಿಂದ ಎಂದೂ ವಾದ್ಯಗಳನ್ನು ಬಾರಿಸುತ ಹೋಗಕೂಡದು,' ಎಂತ ಮುಸಲ್ಮಾನರು ವಿವಾದಿಸಿದರು. ಮೆರವಣಿಗೆಯು ತಾವಿದ್ದವುಗಳು ವಾದ್ಯಗಳ ಸಹಿತ ನಿಣ್ಯೈಸಲ್ಪಟ್ಟಿರುವ ಮಾರ್ಗದಿಂದ ಹೋಗತಕ್ಕೆ ಪೂರ್ವದಿಂದ ನಡೆದು ಬಂದ ಸಂಪ್ರದಾಯವನ್ನು ನಿಲ್ಲಿಸಲಾಗದೆಂದು ಹಿಂದೂ ಜನರು ವಿವಾದಿಸಿದರು. ವಾದ್ಯ ಸೈರಿಸಲಾರದ ಜನರ ದೇವಾಲಯಗಳಲ್ಲಿ ಭಜನ ಪೂಜೆಗಳು ನಡೆಯುವಲ್ಲಿ ವೇಕೆಂತಲೂ ಹಿಂದೂ ಜನರು ಹೇಳಿದರು. ಮುಸಲ್ಮಾನರ ಮಾತು ಸರಿಯೋ ಇಲ್ಲವೋ ಎಂಬದನ್ನು ಪರೀಕ್ಷಿಸಲಿಕ್ಕೆ ಸಾಹೇಬರವರು ಜಿಲ್ಲೆಯ ಮಾಮಲೇದಾರರನ್ನು ಸಂಗಡ ಕರೆದುಕೊಂಡು ಪರೀಕ್ಷೆ ಪ್ರಯತ್ನ ಮಾಡಿದರು, ಮತ್ತೆ ಅಂದೇ ತಾವೊಬ್ಬರೇ ಮರಳ ವಾಂಮಿಯೊಳಗಿನ ಮಸೀದಿಗೆ ಒಂದು ನೋಡುವಲ್ಲಿ, ಒಬ್ಬ ಫಕೀರದವಿರುತ ಆ ಊರ ಮುಸಲ್ಮಾನರಲ್ಲಿ ಒಬ್ಬನೂ ಇದ್ದಿಲ್ಲ. ಅವರನ್ನು ಕರೆದು ವಿಚಾರಿಸಲು 'ನಾವಿಲ್ಲಿಗೆ ಬಂದು ೧೦-೧೫ ದಿನಗಳಾದವು. ಕಳೆದ ಶುಕ್ರವಾರ ಮಾತ್ರ ಜನರು ಕೂಡಿದ್ದರು ಉಳಿದ ದಿನಗಳಲ್ಲಿ ಒಬ್ಬನನ್ನೂ ನಾವು ಕಾಣಲಿಲ್ಲವೆಂತ ಆ ಫಕೀರರು ಹೇಳಿದರು. ಇದನ್ನು ಕೇಳಿ ಮುಸಲ್ಮಾನರು ಅಂದೇ ಅನಿಹೋಗಿ ತಿಳಿದ ಸುಳ್ಳೆಂದು ಸಾ. ಬ. ರವರಿಗೆ ತಿಳಿದ ಹೋತ್ತಾಗಿಯೇ ಹೊರೆಯಿತು. ನಿರಂತರದ ಮಂಗಳ ಸಮಾರಂಭಗಳಲ್ಲಿ ಊರೊಳಗೆ ಮೆರವಣಿಗೆಯಲ್ಲಿಯೂ ವಾದ್ಯಗಳನ್ನು ಬಾರಿಸಲಿಕ್ಕೆ ಅಡ್ಡಿಯಿಲ್ಲ, ವಾರ್ಷಿಕ ಉತ್ಸವ ಮುಂತಾದವುಗಳು ವಾಡಿಕೆಯಾದ ಮಾರ್ಗದಿಂದ ಉತ್ಸವಿಸುತ ಬಾರಿಸುತ ಹೋಗಬೇಕು. ಸರಕಾರಿ ಅಧಿಕಾರಿಗಳಿಲ್ಲದೇ ಉವ ವೇಳೆಯ ಮೊದಲು ಜುಮ್ಮಾ ಮಸೀದಿಯ ಮುಂದಿನಿಂದ ಮಾತ್ರ ಮೆರವಣಿಗೆಗಳನ್ನು ವಾದ್ಯಗಳಿಲ್ಲದೆ ಒಯ್ಯುವದಕ್ಕೆ ಅವರಿಗೆ ಅಡ್ಡಿಯಿಲ್ಲವೆಂದು ಸಾ. ಬ. ರವರು ನಿಶ್ಚಯಗೊಳಿಸಿ ಆದರಂತೆ ಅಪ್ಪಣೆಯನ್ನು ಮಾಡಿದರು.—ಕರ್ನಾಟಕವೃತ್ತ.

Bangalore City Municipality
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

ತಾ॥ ೨೩ನೇ ಡಿಸಂಬರ್ ೧೮೯೫.

ಮಮೂರಾಂಡಂ.

ಇದರಿಂದ ಪ್ರಕಟಿಸಲ್ಪಡುವದೇನೆಂದರೆ:—ಇದರಡಿ ತಿಳಿಸಲ್ಪಡುವ ರಸ್ತೆಗಳು ಅವುಗಳಿಗೆ ಉದ್ದವಾಗಿ ಭೂಮಿಯೊಳಗೆ ಸುರಂಗ ಡ್ರೈನ್ ಮಾಡುವದಕ್ಕಾಗಿ ಮುಂದೆ ತಿಳಿಸಲ್ಪಡುವತನಕ ಗಾಡಿಗಳ ಸಂಚಾರಕ್ಕೆ ಅವಕಾಶವಿಲ್ಲದಂತೆ ಬಂದು ಮಾಡಲ್ಪಡುವವು

೧ ಹಳೆ ಬಸ್ತಿ ರಸ್ತೆ.
೧ ಕೃಷ್ಣರಾಜ ರಸ್ತೆ.

K. SRINIVASA RAO,
Vice President,
City Municipal Commission.

Bangalore City Municipality.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

೨೭ನೇ ಡಿಸಂಬರ್ ೧೮೯೫,

ನೋಟೀಸ್.

ಬೆಂಗಳೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ ಆಫೀಸಿಗೆ ಇರುವ ಕೃಷ್ಣ ರಸ್ತೆಯು. ಜಮೆ ಹಾಲ ಚರಂಡಿ ಕಟ್ಟಿಸುವದಕ್ಕೆ ಹದಿ ನಲ್ಲಿಗಳನ್ನು ಹಾಕುವದಕ್ಕಾಗಿ ಗಾಡಿಗಳ ಸಂಚಾರಕ್ಕೆ ಅವಕಾಶವಿಲ್ಲವೆಂತೆ ಬಂದು ಮಾಡಲ್ಪಡುವುದು.

K. SRINIVASA RAO,
Vice President,
City Munl. Commission.

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—೧೮೯೬ನೇ ಇಸವಿ ಏಪ್ರಿಲ್ ಗುರ್ತೇ ತಾರೀಖ್ ಮೊದಲ್ಗೊಂಡು ೧೮೯೭ನೇ ಇಸವಿ ಮಾರ್ಚಿ ೩೧ನೇ ತಾರೀಖ್ ವರೆಗೆ, ಹೊಸೂರಿನಲ್ಲಿರುವ ರಿಮೌಂಟ್ ಡಿಪ್ಪೋದಲ್ಲಿಗೆ, ಕತ್ತೆ, ಅಂದರೆ ಹುರುಳಿ ಸರಬರಾಯಿ ಮಾಡುವ ಬಗ್ಗೆ ಮೊಹರ್ ಮಾಡಲ್ಪಟ್ಟ ಟೆಂಡರ್‌ಗಳನ್ನು, ರಿಮೌಂಟ್ ಡಿಪ್ಪೋ ಸೂಪರಿಂಟೆಂಡೆಂಟವರು ೧೮೯೬ನೇ ಇಸವಿ ಜನವರಿ ೧೫ನೇ ತಾರೀಖ್ ವರೆಗೆ ಬರಮಾಡಿಕೊಳ್ಳುವರು.

ಇತರ ತಪ್ಸೀಲುಗಳ ಬಗ್ಗೆ ಸನ್ ೧೮೯೫ನೇ ಇಸವಿ ನವಂಬರ್ ೧೯ನೇ ತಾರೀಖಿನ ಫೋರ್ಟ್ ಸೇಂಟ್ ಜಾರ್ಜ್ ಗೆಜೆಟ್ ೪೪ನೇ ಸಂಚಿಕೆ ೧೩೧೭ನೇ ಪುಟವನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ರಿಮೌಂಟ್ ಡಿಪ್ಪೋ,
ಹೊಸೂರು,
೧ನೇ ಜನವರಿ ೧೮೯೬.
C. Cousins, Lt Col.
Supdt, Remount Depot

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಸುವದೇನೆಂದರೆ:—

ತುಮಕೂರು ಡಿಸ್ಟ್ರಿಕ್ಟ್ ಮಧುಗಿರಿ ತಾಲ್ಲೂಕು ಮಿಡಿಗೇಶಿ ಸಮ್ಮತ್ ರಡ್ಡಿ ಹಳ್ಳಿಯಲ್ಲಿರುವ ಕುಂಚಿಟಿಗ ಒಕ್ಕಲಿಗರ ಜವರಾಯನ ಸಂಬಳಗೆ ದೊಡ್ಡ ಮುದ್ದುರಂಗಪ್ಪ, ದೊಡ್ಡ ಮುದ್ದಪ್ಪ, ಚಿಕ್ಕಮುದ್ದಪ್ಪ, ರಂಗೈಯ, ಎಂಬವಾಗಿ ನಾಲ್ಕು ಜನ ಗಂಡು ಮಕ್ಕಳು, ಇವರೆಲ್ಲಾ ವಿಭಕ್ತರು. ಈ ಪೈಕಿ ದೊಡ್ಡ ಮುದ್ದಪ್ಪನೆಂಬುವನು ತನ್ನ ಭಾಗಕ್ಕೆ ಬಂದ ಮೂವತ್ತು ಸಾವಿರ ರೂಪಾಯಿಗಳ ಚರ ಸ್ವತ್ತುಗಳನ್ನು ಮತ್ತು ಸ್ಥಿರ ಸ್ವತ್ತುಗಳನ್ನು ಸಹ ತನ್ನ ಹೆಂಡತಿ ರಾಮಕ್ಕ ನೆಂಬವಳಲ್ಲಿ ಬಿಟ್ಟು ಅಪುತ್ರವಂತನಾಗಿ ಕಳೆದ ಹದಿನೈದು ವರ್ಷಗಳ ಸುಮಾರಿನಲ್ಲಿ ಕಾಲವಾದನು. ಆ ಬಗ್ಗೆಯೂ ಆತನ ಹೆಂಡತಿ ರಾಮಕ್ಕನು ಸದರೀ ಸ್ವತ್ತುಗಳಲ್ಲಿ ಬಿಡತಕ್ಕ ಪ್ರಯೋಜನವನ್ನು ಅನುಭವಿಸುತ, ಚರಸ್ವತ್ತುಗಳನ್ನು ಸ್ವೇಚ್ಛೆಯಾಗಿ ಖರ್ಚುಮಾಡುತಲು ಇರುವದಲ್ಲದೆ ಮೇಲ್ಕಂಡ ಸಹೋದರರ ಕೈಗೆ ಒಂದು ಮನೆ ವಾಗಿ ರಂಗಪ್ಪನ ಚಿಕ್ಕಪ್ಪನವರನ್ನು ದತ್ತಕೆ ಮಾಡಿಕೊಂಡು, ಆತನ ಮುಖಾಂತರವಾಗಿ ಪೋಷಿಸುತ್ತ ಸದರೀ ರಾಮಕ್ಕನ ಉತ್ತರಾಧಿಕಾರವಾದ ನಮ್ಮ ಗಳಿಗೆ ಸದರೀ ಊರುಗಳಲ್ಲಿರುವ ಬಾಬತು ಭೂಮಿ ಸ್ವತ್ತುಗಳ ಆಗಲಿ, ಸಿಕ್ಕ ಲಾಭದಿಂದ ಆತ್ಮಸ್ವರದಿಂದ ನಿಷ್ಕಾರಣವಾಗಿ ಸುಳ್ಳುಸುಳ್ಳು ತಾನು ಹಿಂದೆ ಸಲುವಾಗಿ ಇದ್ದಂತೆಯೂ, ಅದಕ್ಕಾಗಿ ತನ್ನ ಗಂಡನ ಭಾಗದ ಸ್ಥಿರದ ಸ್ವತ್ತುಗಳನ್ನು ಅನ್ಯರ, ಪೋಗ್ಯ, ಕ್ರಯ ವಗೈರೆ ಮಾಡಿಸಿಕೊಂತ ಮಾಡಬೇಕೆಂತ ಆಲೋಚಿಸಿಕೊಂಡಿರುತ್ತಾಳೆ. ಈ ಸ್ಥಿತಿ ಮಾಡಲಿಕ್ಕೆ ಯಾವ್ಯಾವತ್ತೂ ಬಾರಿ ಇರುವದಿಲ್ಲ, ಮತ್ತು ಹಾಗೆ ಮಾಡುವ ಅಧಿಕಾರ ಮತ್ತು ಅವಶ್ಯಕತೆಯೂ ಇರುವದಿಲ್ಲ ಈ ರಾಮಕ್ಕ ಮತ್ತು ರಂಗಪ್ಪಯ್ಯ, ಇವರ ಮೋಸಕೃತ್ಯಕ್ಕೆ ಒಳಪಟ್ಟು ಯಾರುಯಾರು ಮಾಡಿದ್ದರ ನಷ್ಟವಡುವದಲ್ಲದೆ, ನಮ್ಮ ಖರ್ಚುಗಳಿಗೆ ಸಹ ಗುರಿಯಾಗ ಬೇಕಾಗುತ್ತೆ, ನಾವು ತಿಳಿಯಬೇಕು. ಈ ಸ್ಥಿತಿ ಮಾಡತಕ್ಕವೆಂತ ಆಕೆಗೂ, ರಂಗಪ್ಪಯ್ಯನವಾಗಿ ರಂಗಪ್ಪನಿಗೂ, ಮಿಡಿಗೇಶಿ ಮಧುಗಿರಿಯ ಭಿನ್ನಮಧ್ಯನವರಿಗೆ ಸಹ ಮಧ್ಯಗಿರಿ ಪ್ರಕಾಶ ಪಡಿಸಿ ಮೂಲಕ ನೋಟೀಸ್ ಕೊಡಿದುತ್ತೆ.

೧ ದೊಡ್ಡ ಮುದ್ದರಂಗಪ್ಪನ ರುಜು ಚಿಕ್ಕ ಮುದ್ದು ರಂಗಪ್ಪನ ಬರಹ.

೧ ಚಿಕ್ಕ ಮುದ್ದರಂಗಪ್ಪನ ರುಜು

ತಾರೀಖ್ ೨೩ನೇ ಡಿಸಂಬರ್ ೧೮೯೫

ಈ ಕಂಪನಿಯು ಸನ್ ೧೮೯೩ನೇ ಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯಂತ ಶ್ರಮಕರವಾದ ಪ್ರಯೋಗಗಳಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸತ್ವಗಳ ಸ್ವಭಾವಗಳನ್ನು ಕೊಟ್ಟು, ತುಪ್ಪದೊಳಗೆ ಬೆರಸಿ, ಒಳ್ಳೇ ಜೇನ್ನಿನ ತಯಾರಿಸಿ, ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ಪತ್ತಿಗಳು ಮಹೌಷಧಿಗಳಿದ್ದು, ಒಳ್ಳೇ ರುಚಿಯುಳ್ಳವವಿ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳು ಹೋಗುತ್ತವೆ. ೪೦ ವರ್ಷಗಳ ಪ್ರಾಯವುಳ್ಳ ವಯಸಿನ ಶರೀರಾವಯವಗಳ ಪದಾರ್ಥ ಗಂತ ಸರುತ ಪ್ರಜ್ವಲಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಹೀನವಾಗಿ ಸಪುಂಸಕತ್ವವು ಇಲ್ಲದಂತಾಗುತ್ತದೆ ಅಷ್ಟೇ ಅಲ್ಲದೆ ಮುಂದೆ ಅಧವಾ ಹಿಂದೆ ಸರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆ ಇಲ್ಲವಾಗಿ ವೀರ್ಯವು ಬೆಳೆದು ಸ್ತ್ರೀ ಬಣ್ಣವು ಸುಧಾರಿಸುತ್ತದೆ. ಪುರುಷ ಹಾಗೂ ಬಾಲಕರು ಬೇಗನೆ ಗರ್ಭ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿನಿಂದಲೂ ಅನ್ನವು ಜೀರ್ಣವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದರಿಂದ ತರ ಕಿರಿದರಲಿ ಸ್ವಪ್ನ ಸೌಖ್ಯವಾಗುತ್ತದೆ. ಮೆದು, ಉದರ, ರಮ್ಯ ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೀಜ ಇದ್ದರೆ ೧೦ ದಿನಗಳ ಪರ್ಯಂತ ನಲುವ ಒಂದು ಡಬ್ಬಿಯಿಂದ ಗುಣಪ್ರಾಪ್ತವಾಗುತ್ತದೆ. ಮತ್ತು ಹಳೆದದ್ದಿದ್ದರೆ ೩ ದಿನಗಳ ಮೇಲೆ ೫೦ ಬಾರಿ ೫೦ ದಿನಗಳವರೆಗೆ ಸಾಲುತ್ತ ೧ ಡಬ್ಬಿಗೆ ೧-೮-೦ ರೂ॥ ಬೆಂಗಳೂರಿನಲ್ಲಿ ೩ ಡಬ್ಬಿಗಳು ಕೊಳ್ಳುವವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕುತ್ತೆ. ಈ ಉತ್ಪತ್ತಿಯಿಂದ ಜನರು ಸಂತೋಷಪಡುತ್ತಾರೆ. ಅರಸ ಹಾಗೂ ಜಾಣರು ಬೇಸರಗಳ ಪೂಜಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ನೀಡಿ ಎಲ್ಲರವರನ್ನಾ ಇದರಿ, ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತದೆ. ನಾಲ್ಕು ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪನಿಯ ಹೊರ್ತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ. ಯಾವತ್ತು ದೇಶಗಳಲ್ಲಿಯು ವೈದ್ಯ ಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದ ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳ ಕಳುಹಿಸಿಕೊಟ್ಟಿತು. ಅಂಚೆಯ ಹಾಗೂ ಪ್ಯಾಕಿಂಗ್ ವೆಚ್ಚವು ಬೇರೆ ಕೊಡಬೇಕು. (ಉಚಿತ ಡಬ್ಬಿ ಬಿಡ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾ ಕಾರ್ಡಿನ ಎಲ್ಲಾ ಇಜಾರದ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚ ಕಡಮೆ ಬೀಳುವದು.)

ಮೇಲ್ವಿಳಾಸ—ಪಿ ಎಲ್ ಎ. ಬ್ರದರ್ಸ್ ಮತ್ತು ಕಂಪನಿ,

ಸರಕಾರಿ ಇಂಗ್ಲಿಷ್ ಬ್ರಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಷ್ಟ—ಬೆಳಗಾಂವ. Post BELGUAM.

BANGALORE—Printed and Published at the KARNATAKA PRESS, No. 40, Hospital Road City.—1896.

THE Karnataka Prakasika.

ಚಂದಾ ವರಗಳು — ಸ್ಥಳದವರಿಗೆ | ಪರಸ್ಥಳದವರಿಗೆ, ಪೋಸ್ಟೇಜ್ ಸಹ

	ಸ್ಥಳದವರಿಗೆ	ಪರಸ್ಥಳದವರಿಗೆ
ವರ್ಷ 1 ಕ್ಕೆ	3 0 0	4 0 0
6 ತಿಂಗಳಿಗೆ	2 0 0	2 8 0
3 ತಿಂಗಳಿಗೆ	1 4 0	1 8 0

ಕರ್ಣಾಟಕ ಪ್ರಕಾಶಿಕಾ.

Published Every Monday Morning.

ಪ್ರಕಟನೆಯ ದರಗಳು { ಮೊದಲನೆಯ ಸಾರಿ ಸಾಲು 1 ಕ್ಕೆ 0 2 0 / ಎರಡನೆಯ ಸಾರಿ ಸಾಲು 1 ಕ್ಕೆ 0 1 0 }

[illegible]

[illegible]

Vol XXIII | **BANGALORE —MONDAY, JANUARY 13, 1896.** | **No. 2.**

NOTICE

Tenders will be received for the supply of [illegible] to the Remount Department from 1st April 1896 to 31st March 1897 will be received by the Superintendent, Remount Depot, up to noon on the [illegible]

For further particulars vide Fort St George Gazette No 44 page 1317, of 19th November 1895

Remount Depot } [illegible] Chambers [illegible] C I
Hosur }
1st Jan 1896 } Supdt Remount Depot

THE Karnataka Prakasika.

MONDAY JANUARY 13 1896

THE INDIAN NATIONAL CONGRESS

ಪ್ರಪಂಚವು ಅಸಾಧ್ವತವಾದುದು, ನಾವೆಷ್ಟು ಮಟ್ಟಿಗೆ ಜೀವಿಸಿರುವೆವೋ ತಾವತ್ಪರ್ಯಂತ ಅದು ಶಾಶ್ವತವಾಗಿ ತೋರುತ್ತಿರುವುದು, ನಾವು ಕಣ್ಣುಮುಚ್ಚಿಕೊಂಡರೆ ಅಂಧಕಾರದಂತೆ ಸಕಲವೂ ಶೂನ್ಯವೇ ಹೊರತು ಸತ್ಯಾಭಾಸವೊಂದೂ ಉಳಿಯುವದಿಲ್ಲವು ಮೃತ್ಯು ನಮ್ಮನ್ನನುಸರಿಸುತ್ತಾ ಬಾಲ್ಯದಿಂದ ಅನುವರ್ತಿಸುತ್ತಲೂ, ಇತ್ತು ವಿನೋದಾದಿಯಲ್ಲಿ ಅಟ್ಟಿಕೊಂಡು ಬರುತಲೂ, ವ್ಯಾಘ್ರದಂತೆ ಒಂದೇ ಆವರ್ತಿ ಕಬಳಿಸುತಲೂ, ನಮ್ಮನ್ನು ನಿರ್ನಾಮ ಮಾಡಶಕ್ತವಾದುದರಿಂದ, ಸತ್ಕಾರ್ಯಗಳನ್ನು ಶೀಘ್ರವಾಗಿ ಮಾಡಿಬಿಡುವದೇ ಒಳ್ಳೆಯದು ಆದ ಮುಂದೆ ಮಾಡುವೆನೆಂದು ತಡೆಮಾಡಿದರೆ ಆಗ ನಮ್ಮಸ್ಥಿತಿ ಹೇಗಿರುವದೋ, ದೇಹತತ್ವವು ಹ್ಯಾಗೆ ಪರಿಣಮಿಸುವದೋ ಊಹಿಸಲಸಾಧ್ಯವು. ನಾವು ಮೃತರಾದ ಕೂಡಲೆ ಭಾರ್ಯೆಯು, ತಲೆಬಾಗಿಲುವರೆಗೂ, ಭೃತ್ಯರು ಆ ಬೀದಿಯ ಕೊನೆಯವರೆಗೂ, ಬಂಧುಗಳು ಊರಹೊರಗಿನವರೆಗೂ ಅನುಸರಿಸಿ, ಪುತ್ರರು ಸ್ಮಶಾನದವರೆಗೂ, ಬಂದು ಕ್ರಮೇಣ ಹಿಂದಿರುಗುವರಾದಕಾರಣ, ನಮ್ಮ ಸಂಗಡ ಬರುವುದು ಯಾವುದೂ ಇಲ್ಲವು ಬರಿಂತು ನಮ್ಮ ಕರ್ಮಮಾತ್ರ ನಮ್ಮನ್ನೆಂದಿಗೂ ಅಗಲಿರಲಾರದು. ಈ ಪ್ರಪಂಚದಲ್ಲಿ ನಮಗೆ ಹಿತವನ್ನಾಗಲಿ ಅಹಿತವನ್ನಾಗಲಿ ಮಾಡುವಂತವನೊಬ್ಬನಿದ್ದಾನೆಂದು ಭಾವಿಸುವುದು ಹುಚ್ಚತನವು ಜನ್ಮಾಂತರದಲ್ಲಿ ನಾವು ಮಾಡಿದಂತ ಕರ್ಮಫಲವನ್ನು ನಾವೇ ಅನುಭವಿಸಬೇಕಾದವರೆ ಹೊರತು ಅನ್ಯರಿಗೇನೂ ಕರ್ತೃತ್ವಶಕ್ತಿ ಇರುವದಿಲ್ಲವು, ಆದಕಾರಣ ಆಲಸ್ಯವಾದುದನ್ನಾಚರಿಸಿದರೆ ಅದು ಒಪ್ಪಲಾರದು. ಗಾಡಿಯನ್ನು ಬಿಟ್ಟು ಪಕ್ಷಿಗಳು ಹ್ಯಾಗೆ ಹಾರಿಹೋಗುವವೋ ಅದೇರೀತಿ ಶರೀರಾಂತರ್ಗತವಾದ ಜೀವಾತ್ಮನನ್ನಾಗಲಿ ನಾನಾ ಚಂಚಲ ಶಕ್ತಿಗಳಿಂದ ಪಂಚಪ್ರಾಣಗಳು ಆಯಾ ಕಾಲಗಳಲ್ಲಿ ಹಾರಿ ಹೋಗುತ್ತವೆ ಕಡೆಗೆ ಏನಿದ್ದರೂ ಅಂತ್ಯದಲ್ಲಿ ನೀರಿನಲ್ಲಿ ಸುರಿದಂತೆ ಅದು ವ್ಯರ್ಥವಾಗುವದು

ನಾವು ಒಬ್ಬನು ಅನೇಕಾವರ್ತಿ ನಿತ್ಯದಲ್ಲಿ ಹೀಗೆ ಮಾಡಬೇಕೆಂದು ಹೇಳಿದರೆ ನಾಳೆ ಕೆಲವು ಕಾಲಾನಂತರ ಕರ್ತವ್ಯವಾಗುವದು ಸಕಲರಿಗೂ ನಮಗೆ ಪತ್ರು ಮೃತ್ಯುವು ಅದರವಶನಾಗಿರ ಪವರಿಂದ ಕ್ಷಣಕಾಲವಾದರೂ ಸಮೀಪವಾಗಿರುವದಿಲ್ಲವು, ಹ್ಯಾಗೆಂದರೆ :—

ಶ್ಲೋ|| ಭೋಗೇಭೋಗಭಯಂ ಕುಲೇಚ್ಯುತಿಭಯಂ ವಿತ್ತೇ ನೃಪಾಲಾದ್ಭಯಂ | ಮಾನೇದೈನ್ಯಭಯಂ ಬಲೇರಿಪುಭಯಂ ರೂಪೇತರುಣ್ಯಾಭಯಂ ಶಾಸ್ತ್ರೇವಾದಿಭಯಂ ಗುಣೇಖಲಭಯಂ ಕಾಯೇಕೃತಾಂತಾದ್ಭಯಂ ಸರ್ವಂ ವಸ್ತುಭಯಾನ್ವಿತಂ ಭುವಿನೃಣಾಂ ವೈರಾಗ್ಯಮೇವಾಭಯಂ|| ಎಂಬದಾಗಿ

ವೈರಾಗ್ಯವೊಂದು ಮಾತ್ರವೇ ನಮಗೆ ಪ್ರಪಂಚದಲ್ಲಿ ಅಭಯಪ್ರದವಾದದ್ದಾಗಿರುವದರಿಂದ ಅದು ಸಿದ್ಧಿಸಿದರೆ ನಮ್ಮನ್ನು ಯಾರೂ ಗೆಲ್ಲುವಂತವರು ಯಾರೂ ಇಲ್ಲವು

೧ ಸಮುದ್ರದಲ್ಲಿ ಕವಾಚರ್ ಎಲ್ಲಿಯಾದರೊಂದು ಕಡೆ ಮುಳುಗಿಕೊಂಡ ಮಾತ್ರದಿಂದಲೇ ಅಲ್ಲಿ ಮುತ್ತು ದೊರೆಯದಿದ್ದಪಕ್ಷದಲ್ಲಿ ಪ್ರಯತ್ನವನ್ನು ತೊರೆದು ಸಮುದ್ರದಲ್ಲೇ ಮುತ್ತಿಲ್ಲವೆಂದು ನಿಶ್ಚಯಿಸಕೂಡದು. ಸಕಲಕಡೆ ಪ್ರಯತ್ನಿಸಿ ನೋಡಿದರೆ ನಿಜವಾಗಿ ದೊರೆಯುವುದು. ಆ ದೇಹಾಂತರ ಪುರುಷನು ಆತ್ಮಸ್ವರೂಪವನ್ನರಿಯ ಲಿಚ್ಛಿಸಿ ದಾವರ್ತಿ ಪ್ರಯತ್ನಪಟ್ಟು ಅದು ಲಭಿಸದಮಾತ್ರಕ್ಕೆ ಆತ್ಮಜ್ಞಾನವಿಲ್ಲವೆಂದು ತನ್ನ ಪ್ರಯತ್ನವಂ ಬಿಡಕೂಡದು, ದೀಕ್ಷಾತ್ಪರನಾಗಿ ಸಂಸಾರದಿಂದ ವಿರಕ್ತಿಯಲ್ಲಿ ಮಗ್ನನಾಗಿ ಬ್ರಹ್ಮವಿಚಾರವಂ ನಡಿಸಿದರೇನೆ ತತ್ಫಲವು ಕೈಗೂಡುವದು.

೨. ಒಂದು ಬೀಜವು ಪಾತಿ ಆದಮೇಲೆ ಕೆಸರಿನ ಸಹಿತ ಅದು ದಿನ ಮೊದಲಾದವು ಮೇಯದಂತೆಯೂ, ಹುಡುಗರು ಕಿತ್ತು ಎಸೆಯದಂತೆಯೂ, ಅದರ ರಕ್ಷಣೆಗಾಗಿ ಸುತ್ತಲೂ ಬೇಲಿಕಟ್ಟಿ ತಡೆ ಏರ್ಪಡಿಸುವದು ಆವಶ್ಯಕವಾಗಿರುತ್ತದೆ. ಅದೇ ಕಾಲಾಂತರದಲ್ಲಿ ದೊಡ್ಡವೃಕ್ಷವಾದ ಬಳಿಕ ಆ ತರು ಛಾಯಾಶ್ರಿತಗಳಾದ ಪಕ್ಷಿ ಮೊದಲಾದವುಗಳಿಗೆ ಸಹಕಾರಿಯಾಗುತ್ತದೆ ಹಾಗೆಯೇ ಶಿಷ್ಯನ ಮುಗ್ಧಾವಸ್ಥೆಯಲ್ಲಿ ದುಷ್ಪ್ರಸಂಗದಿಂದ ಕೆಡುಕುಂಟಾಗದಂತೆ ಆತನ ಜ್ಞಾನವು ಗುರುವಾದವನು ಕಾಪಾಡಿದರೆ ಆತನ ಜ್ಞಾನವು ದಿನೇದಿನೆ ವೃದ್ಧಿಯನ್ನೈದುತ ಕಡೆಗೆ ತಾನು ಜ್ಞಾನಿಯೆನಿಸಿ, ಅನೇಕರಿಗೆ ಆಶ್ರಯಭೂತನಾಗುವನು

೩ ಅನ್ನವು ಬೆನ್ನಾಗಿ ತೊಳೆದು ಮಣ್ಣು ಅದರಸ್ಥಾನದಲ್ಲಿ ತಂದುಕಟ್ಟಿದರೆ ಅದು ಹೊಸ್ತಿದಂತೆ ತನ್ನ ಸೊಂಡಲಿಂದ ಮಣ್ಣನ್ನೆತ್ತಿ ತಲೆಯಮೇಲೆ ಎರಚಿಕೊಳ್ಳುವುದು, ಆದಾಗ್ಯೂ ತೊಳೆಯದಿದ್ದರೆ ಶುಭ್ರವಾಗಿಯೇ ಇರುವುದು ತದ್ವತ್ ಬ್ರಹ್ಮವಿಚಾರವಂ ಆಚರಿಸಿದರೂ, ಪ್ರಾಪಂಚಿಕ ಸ್ವಭಾವಕೆಟ್ಟುಹೋಗದಿದ್ದರೆ ಅಭ್ಯಾಸವುಂಟಾಗುವುದು. ನಿಯಮವನ್ನನುಸರಿಸಿದರೆ ಮುಕ್ತಿಯುಂಟಾಗುವದೇನೂ ಅಸಾಧ್ಯವಲ್ಲವು.

೪. ಪಶ್ಚಾತ್ತಾಪವು ಮುಮುಕ್ಷುವಿಗೆ ಬಲವುಂಟಾಗುವುದು ಬೇರೆ ಭಕ್ಷ್ಯವಂತಿರುವ ಅಳುವ ಮಗುವಿಗೆ ಅದರ ತಾಯಿಯಾದವಳು ಮೊದಲಿರುವದನ್ನು ಕೊಟ್ಟು ಹ್ಯಾಗೆ ಸಮಾಧಾನಪಡಿಸುವಳೋ ಅದೇರೀತಿ ಪಶ್ಚಾತ್ತಾಪವುಳ್ಳಂತವನಿಗೇ ದಿಗಾದರೂ ಈಶ್ವರ ಸಾಕ್ಷಾತ್ಕಾರ ವುಂಟಾಗದೆ ಹೋಗಲಾರದು.

೫. ನಿರ್ಜನಪ್ರದೇಶವಾಗಲಿ ಭಗವತ್ಸ್ವರೂಪಾನುಸಂಧಾನಕ್ಕೆ ಯೋಗ್ಯವಾದ ಸ್ಥಾನವಾದರೂ ಸಂಗವಿವರ್ಜಿತನಿಗೆ ಸಕಲವೂ ಸಿದ್ಧಿಸುವದು.

೬. ರಾಗ, ತಾಳ, ಸ್ವರ ಯುಕ್ತವಾಗಿ ಮಧುರವಾದ ಹರಿನಾಮ ಸಂಕೀರ್ತನೆಯಂ ಮಾಡಬೇಕು. ಒಂದು ವೃಕ್ಷದ ಮೊಲದಲ್ಲಿ ಕುಳಿತು ಕೈಗಳಂ ತಟ್ಟಿಯಾಗಿ ತಟ್ಟಿ ಶಬ್ದ ಮಾಡಿದಕೂಡಲೆ ಆದರಮೇಲೆ ಕುಳಿತಿರುವ ಪಕ್ಷಿಗಳು ಕೂಗುತ ಹಾರಿಹೋಗುವದು ಹರಿನಾಮಸಂಕೀರ್ತನೆಯಿಂದ ಮನೋಗತವಾದ ಸಕಲ ದುರಾಲೋಚನೆಗಳೂ ದುರಾಶೆಗಳೂ ನಿವೃತ್ತಿಯಾಗುವವು.

೭. ರಿಕ್ತನೊಬ್ಬನು ಅಡವಿಗೆ ಹೋಗಿ ಕಟ್ಟಿಗೆಗಳಂ ಕಡಿದು ಹೊರೆಕಟ್ಟಿ ಪುರದಲ್ಲಿತಂದು ಮಾರಿ ತನಗೆ ಕಾಲಕ್ಷೇಪವನ ಮಾಡುತಲಿದ್ದನು. ಹೀಗಿರಲಾಗಿ ಒಂದುದಿವಸ ಸನ್ಯಾಸಿಯೊಬ್ಬನು ಈದಿನ ಅಡವಿಗೆ ಹೋಗುವೆಯಾದರೆ ನಿನಗೆ ವಿಶೇಷಲಾಭದೊರೆಯುವುದೆಂದು ಸದರೀ ರಿಕ್ತನೊಡನೆ ಹೇಳಿದನು. ಆದುದರಿಂದ ಆಶಾಪೀಡಿತನಾದ ಆ ರಿಕ್ತನು ಕೂಡಲೆ ಅಡವಿಗೆ ತೆರಳಿ ಸನ್ಯಾಸಿ ಹೇಳಿದಂತೆ ಸ್ಥಾನದಲ್ಲಿ ಹೋಗಿ ನೋಡಲು ಚಂದನವೃಕ್ಷವೊಂದು ಕಂಡುಬಂತು, ಅದನ್ನು ಅವನು ಕಡಿದು ತಾನು ಹೊರುವಷ್ಟು ಹೊರೆಕಟ್ಟಿಕೊಂಡು ಊರಿಗೆತಂದು ಮಾರಿದನು. ಹೀಗೆ ಮಾಡುತಿದ್ದ ರಿಕ್ತನ ಸನ್ಯಾಸಿಯು ಮಾತಿನಲ್ಲಿ ಗೌರವವು ಹೆಚ್ಚಿತು. ಮತ್ತೊಂದು ದಿನ ಇನ್ನೇನು ದೊರಿಯುವದೋ ನೋಡುವೆನೆಂದು ಪ್ರತ್ಯಾಶೆಯೊಡನೆ ಕಟ್ಟಿಗೆ ಮಾರುವವನು ಅಡವಿಯಲ್ಲಿ ಸ್ವಲ್ಪದೂರ ಹೋಗಿ ನೋಡಲಾಗಿ ರಾಗಿಯ ಹಳೆಯೊಂದು ದೊರೆಯಿತು. ಹೀಗೆ ಇನ್ನೂ ಸ್ವಲ್ಪದೂರ ಹೋಗುವಲ್ಲಿ ಚಿನ್ನದಗಣಿಯೊಂದು ದೊರೆಯಿತು, ಇವುಗಳಿಂದ ಬಹಳ ಐಶ್ವರ್ಯವಂತನಾದನು. ಹಾಗೆಯೇ ಗುರುವಾಕ್ಯದಂತೆ ಅರಣ್ಯದಲ್ಲಿ ಇನ್ನೂ ಸ್ವಲ್ಪದೂರ ಹೋಗಿ ನೋಡಲಾಗಿ ಬಂಗಾರದ ಮತ್ತು ರತ್ನದ ಗಣಿಗಳು ಕಂಡುಬಂದವು ಕ್ರಮೇಣ ನಿರವಧಿಕೈಶ್ವರ್ಯವುಳ್ಳವನಾಗಿ, ಸುಖದಿಂದಿರುತಲಿದ್ದನು. ಅದೇರೀತಿ ಸ್ವಲ್ಪಜ್ಞಾನವುಳ್ಳ ಪುರುಷನು ಎಡೆಬಿಡದೆ ವಿಚಾರಮಾಡುವದರಿಂದ ಮಹಾಜ್ಞಾನಿಯೆನಿಸಿ ಮುಕ್ತಿಯಂ ಹೊಂದುವದರಲ್ಲೇನೂ ಸಂದೇಹವಿಲ್ಲವು.

೮ ಕಲ್ಲಂಗಡಿ ಹಣ್ಣನ್ನು ಸುಲಿಯುವಂತವರು ಆದರ ಹಾಲು ಕೈಗೆ ಅಂಟದಿರುವದಕ್ಕಾಗಿ ಎಣ್ಣೆಯನ್ನು ಕೈಗಳಿಗೆ ಸವರಿಕೊಳ್ಳುವಂತೆ, ಜ್ಞಾನಿಯಾದ ಮತ್ತು ನಿರ್ಲಿಪ್ತನಾದ ಪುರುಷನಿಗೆ ಧನವೂ ಸ್ತ್ರೀ ಪುತ್ರಾದಿ ಸಂಬಂಧಗಳಾಗಲಿ ಅಂಟವು

೯ ಪಾಪರಿಕ್ತೆ ಕೂಪದಿಂದೇಳಲು ಹೇಳಿಕೊಳ್ಳುವಾತನು ಮೊದಲು ಹಗ್ಗವನ್ನು ಬಿಗಿಯಾಗಿ ಹಿಡಿದುಕೊಂಡು ಆದರ ಆಸರೆಯಿಂದ ನದಿಯಲ್ಲಿ ಈಜಲು ಪ್ರಾರಂಭಿಸಿ ಕಡೆಗೆ ಅದನ್ನು ಬಿಸುಟು ಸ್ವತಂತ್ರನಾಗಿ ಬೇಕಾದಹಾಗೆ ಪ್ರಯಾಣಮಾಡಲು ಈ ಮಾತ ಯೋಗ್ಯನಾದಕ್ಕೆ ಶಕ್ತನಾಗುವಂತೆ ಬ್ರಹ್ಮಜ್ಞಾನಾಭ್ಯಾಸದಲ್ಲಿ ಸಂಪಾದಿಸುವ ಅಪೇಕ್ಷೆಯುಳ್ಳಂತ ಪುರುಷನು ಜೀವನದ ಸಾಧನಗಳನ್ನು ಕ್ರಮಕ್ರಮವಾಗಿ ತ್ಯಜಿಸಬೇಕು.

೧೦ ದೇಹಾಭಿಮಾನವಂ ತೊರೆಯದಾತನಿಗೆ, ಮೋಕ್ಷವು ಸಿದ್ಧಿಸಲಾರದು.

೧೧. ಕಾಲಿನಲ್ಲಿ ಚುಚ್ಚಿದ ಮುಳ್ಳನ್ನು ಬೇರೆ ಮುಳ್ಳಿಂದ ತೆಗೆಯುವಂತೆ ನಮಗುಂಟಾಗಿರುವ ಅಜ್ಞಾನವು ಜ್ಞಾನದಿಂದಲೇ ನಿವೃತ್ತಿಯಾಗಬೇಕಾಗಿರುತ್ತದೆ ಜ್ಞಾನಾಭ್ಯಾಸದಿಂದ ಬಳಿಕ ಬ್ರಹ್ಮಸ್ವರೂಪವು ಪ್ರತ್ಯಕ್ಷವಾಗುವುದು

೧೨ ಸರ್ವಂ ಬ್ರಹ್ಮ, ಸರ್ವಂ ಶಿವ, ಸರ್ವಂ ವಿಷ್ಣುಮಯ ವೆಂಬ ಸಮದೃಷ್ಟಿಯುಂಟಾಗಿ ತದ್ವೈತ ಅನುಸಂಧಾನ ಸಕಲವಾಗ ಆ ಜ್ಞಾನವೂ, ಕರ್ಮವಾಸನೆಯೂ ನಿವೃತ್ತಿಯಾಗಿ ಮೋಕ್ಷವುಂಟಾಗುವುದು ನಿಶ್ಚಯವು—ವೇದೋಪಕಾರಿ

ADVERTISEMENTS.
ನೋಟೀಸ್.

ಬೆಂಗಳೂರು ಕೆಂಗೇರಿ ಬಾಗಿಲುಬಳಿ ಇರುವ ಬೈರೇದೇವರ ಗುಡಿ ಬೀದಿಯಲ್ಲಿ ೪ನೇ ನಂಬರ ಮನೆಯಲ್ಲಿ ವಾಸವಾಗಿರತಕ್ಕ ಗಂಗಂಡಿಕಾರ ಒಕ್ಕಲಿಗರ ಜಾತಿ ತಿಮ್ಮಪ್ಪನ ಮಗ ಅಣ್ಣಯ್ಯಪ್ಪನ ವಾಸವಾಗಿರುವ ತಮ್ಮಯ್ಯನು ಇದರಿಂದ ಸಕಲರಿಗೂ ತಿಳಿಯಪಡಿಸುವದೇನೆಂದರೆ—ನಾನೂ ನನ್ನ ತಂದೆಯೂ ಏಕ ಕುಟುಂಬವಾಗಿದ್ದು ನಮ್ಮಿಬ್ಬರಿಗೂ ಈಚೆಗೆ ಗೃಹಕೃತ್ಯದಲ್ಲಿ ಸರಿಬೀಳದೆ ಹೋದಕಾರಣ ನಾನು ಪ್ರತ್ಯೇಕಿಸಿ ಈಗ ಬೇರೆ ವಾಸ ಮಾಡಲಾರಂಭಿಸಿ, ಈಗ್ಗೆ ಮೂರು ನಾಲ್ಕು ತಿಂಗಳಾಗುತ ಬಂದವಷ್ಟೆ. ಈಚೆಗೆ ನನ್ನ ತಂದೆ ಕೆಲವರಾರ ದುರ್ಬೋಧನೆಯಿಂದ, ಕುಟುಂಬದ ಸ್ಥಿರ, ಚರ ಜಂದಿಗೆಗಳನ್ನೆಲ್ಲ ನನ್ನ ಅರಿವೇ ಇಲ್ಲದೆ ಕೆಲಲ್ಲಾದಿ ಅನ್ಯಾಕ್ರಾಂತಪಡಿಸುತ್ತಿರುವದು ಮಾತ್ರವಲ್ಲದೆ, ಇದರಿ ಕಂಡ ಸ್ಥಾವರ ಸ್ವತ್ತುಗಳನ್ನು ಕ್ರಯಮಾಡುವದಾಗಿ ತಿಳಿಯಬರುವದರಿಂದ ಅವುಗಳನ್ನು ಯಾರೊಬ್ಬರೂ ನನ್ನ ಅನುಮತಿಯಿಲ್ಲದೆ ತೆಗೆದುಕೊಳ್ಳಕೂಡದು, ಹಾಗೆ ಯಾರಾದರೂ ತೆಗೆದುಕೊಂಡರೆ, ಮುಂದೆ ಅದರಿಂದುಂಟಾಗಬಹುದಾದ ಲುಕ್ಸಾನಿಗೆ ಅವರು ಬಾಧ್ಯರಾಗಬೇಕಾಗಿರುವದಲ್ಲದೆ ಸ್ವತ್ತುಗಳನ್ನು ಸಹ ಕಳೆದುಕೊಳ್ಳಬೇಕಾಗಿರುವದೆಂದು ಖಂಡಿತವಾಗಿ ತಿಳಿಯತಕ್ಕದ್ದು.

ಹಾಲಿ ವಾಸವಾಗಿರುವ ಮೇಲ್ಕಂಡ ೪ ನೇ ನಂಬರ ಮನೆ ಒಂದು ಬಳೇಪೇಟೆಯಲ್ಲಿ ಚಿತ್ರಪ್ಪನ ತೋಟದ ಪಕ್ಕದಲ್ಲಿರುವ ನಮ್ಮ ಸ್ವಂತ ಛತ್ರ ಒಂದು ಸದರೀ ಛತ್ರದಲ್ಲಿರುವ ಪಟ್ಟಡಿಯಲ್ಲಿ ತಯಾರಾಗಿರುವ ೬ ಜೊತೆ ಗಾಡಿ ಚಕ್ರಗಳು, ಕಡೆದು ತಯಾರಾದ ಗುಂಬಗಳು ೭ ಜೋಡಿ, ಬಾಚೀ, ಕೊಬ್ಬಣ ಮುಂತಾದ ಚಿಲ್ಲರೆ ಸಾಮಾನುಗಳು, ಕೆಲಸ ಮಾಡತಕ್ಕ ಆಯುಧಗಳು.

ಮನೆಯಲ್ಲಿರುವ ಚಿನ್ನ ಬೆಳ್ಳಿ ನಗಗಳ ತಪ್ಸೀಲ್

ಉಂಗುರು ಅಡ್ಡಿಗೆ ೧, ಕಾಲು ಉಳಿ ೨, ಕೆಂಪಿನ ಓಲೆ ೨, ಚಿನ್ನದ ಮುರಿ ೨, ಚಿನ್ನದ ಬಳೆಗಳು ೨, ಚಿನ್ನದ ಸರಿಗೆಗಳು ೨, ಚಳತುಂಬು, ಓಲೆ, ಗುಂಡು, ಮುರ, ಕೆಂಪಿನ ಚಿಪ್ಪಮುರ, ವಗೈರೆ. ಇದಲ್ಲದೆ ೪೦೦ ರೂಪಾಯಿಗಳು ನಗದು ಇವುಗಳನ್ನೆಲ್ಲ ನನ್ನ ತಂದೆಯಾದ ಸದರೀ ಅಣ್ಣಯ್ಯಪ್ಪನು ಪರಭಾರೆ ಮಾಡಿದರೆ ಯಾರೊಬ್ಬರೂ ತೆಗೆದುಕೊಳ್ಳಕೂಡದೆಂದು ಇದರಿಂದ ಎಲ್ಲರಿಗೂ ಎಚ್ಚರಿಸಿದೇನೆ.

ಬೆಂಗಳೂರು ೧ನೇ ಫೆಬ್ರವರಿ ೧೮೯೬ } ಅಣ್ಣಯ್ಯಪ್ಪನ ಮಗನಾದ, ತಮ್ಮಯ್ಯನ ರುಜಾವು.

☞ BANGALORE.—Printed and Published at the KARNATAKA PRESS, No. 40, HOSPITAL ROAD CITY,—1896

THE

Karnataka Prakasika.

ಚಂದಾದರರಗಳು.—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸೇರಿ.

	ಸ್ಥಳದವರಿಗೆ	ಪರಸ್ಥಳದವರಿಗೆ
ಸಾಲ್ 1 ಕ್ಕೆ ...	3 0 0	4 0 0
6 ತಿಂಗಳಿಗೆ, ...	2 0 0	2 8 0
3 ತಿಂಗಳಿಗೆ, ...	1 4 0	1 8 0

ಕರ್ಣಾಟಕ ಪ್ರಕಾಶಿಕಾ.

Published Every Monday Morning.

ಪ್ರಕಟನೆಯ ರವಾಜ್. { ಮೊದಲನೆಯದಥಾ ಪಙ್ಕ್ತಿ ಒಂದಕ್ಕೆ 0 2 0
{ ಎರಡನೆಯ ದಥಾ ಪಙ್ಕ್ತಿ ಒಂದಕ್ಕೆ 0 1 0

[ಜಿಹ್ನೆ ಷರಾ- ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಛಾಯಿಸ್ಪಡುವ ಡಿವಾಗ್ಯೂ ಪಙ್ಕ್ತಿ ಒಂದಕ್ಕೆ ೦ ಆಣೆ ಯಂತೆಯೇ ಲೆಕ್ಕ ಮಾಡಲ್ಪಡುವದು.]

ಪ್ರಕಾಶಮವಿವಿಧಪ್ರನೃತ್ಯಪಗವಾರ್ಥ ಕರ್ಣಾಟಕಪ್ರಕಾಶಿಕಪರಾಬಿಧಾಪ್ರಥಿತಸಾಹಿತೀಶೋಭಿತಾ ॥ ಪ್ರೈಗುಂಕಹಿತವಾಸರನಿಹಿತಮುದ್ರಣಾ ಸಜ್ಜಸ್ವೃದ್ಧಿ ಕಾಸುಂರಿಪೋಷಿತಾ ವಿಶತಿಮಾನಸಂಸಂಮವದಂ ॥

VOL. XXIII. BANGALORE:—MONDAY, FEBRUARY 10, 1896. No. 6.

Select Telegrams

Berlin, 4th Feb—Emperor William has issued a rescript thanking the Germans throughout the world for their greetings on the occasion of his birthday, and expressing his gratification at their increasing readiness to co operate with his efforts to promote the welfare

Calcutta, 4th Feb—The Indian Railway Act of 1890 is to be amended and re drafted immediately in accordance with the recent orders of the Secretary of State

At the meeting of the Supreme Legislative Council on Thursday, Sir Alexander Miller will move that the Hon'ble Rai Bahadur Ananda Charlu be added to the Select Committee on the Bill to amend the Legal Practitioners' Act He will also move for leave to introduce a Bill to amend the Negotiable Instruments Act of 1881

Calcutta, 4th Feb—The Viceroy is none the worse for the long Legislative Council Meeting on Monday Unless His Excellency proceeds to Barrackpore on Friday, it is quite possible that he will go for another short sea trip

THE

Karnataka Prakasika.

MONDAY, FEBRUARY 10, 1896.

MORE SYMPATHY WANTED

It has been too much the habit of late to look to England for everything that the people of India required to be done They profess to believe that the home public will put everything right that is wrong. It will correct all the evils It will bring about a reformation, political, social and moral The people of this land have only to bring their grievances before this public, and they will be redressed This is the idea with many, and recent events have shown that it is far from being correct. The re imposition of the cotton duties has demonstrated that the English public is not entirely disinterested with regard to what takes place in India If the people at home do not lose by any change that may take place here they may gladly agree to it. They may talk about justice and wrong, they may hold forth about the officials that have authority in India, and say that they ought to be more impartial; that they ought to sympathise more with the inhabitants of this land But when it comes to money they are exceedingly unjust, all the advantages must be on their side; none on the side of the people of this land. As we have said, the cotton duties are a case in point. These duties were imposed because the revenue of the country demanded that they should be imposed Fine cloth was sent from Manchester, which was bought by the well-to-do, and a fair amount of money was raised The poor did not feel the impost in the least because they did not purchase the imported goods. They use the coarser cloth manufactured in the country When a duty was placed upon the goods sent from Manchester the people of that place complained, and as they had political influence they were listened to It was said that something must be done to please them, and something was done. One Viceroy after another took off a portion of the duty, till at last there was nothing left. Then the people of Manchester were satisfied They had obtained what they wanted, they had made the Governments of England and India obey their orders But a short time ago there was a deficit in the revenue of India; the treasury was empty, and no new taxes could be laid upon the people. It was then resolved to revive the cotton duty, and thus add to the revenue of the land This was done with the result that Manchester at once took the alarm. It protested against the imposition at the time, and since then it has not ceased to cry out We all know what has happened A Bill has been brought into the Legislative Council that makes a complete change with regard to these duties They have not been entirely taken off the goods sent out from Manchester, but they have been much reduced, and what is worse, a heavy excise duty has been placed upon the coarser cloth manufactured in this land, the cloth brought by the poorer classes of the community Thus these classes will not only have to pay much more for the cloths they wear but the duty on it is very much in excess of that paid on the finer kinds brought into the country. The rich will pay less for their goods, while the poor will pay much more, and this has been brought about by the English public! Of course, the men of Manchester have stirred up the matter, but the rest of the community has sided with them The blame must be laid at the door of all of them Take another instance of the way India is treated by England Last year the son of the Ameer of Afghanistan went to the latter country. The people of India did not care in the least whether he went or stopped at home. He was invited by the British Government for political reasons, and the money that he spent ought to have been provided by the British Government. From the news from home we gather that the cost of the Shazada's trip to Europe is to be borne by the Indian Government. The sum is twenty thousand pounds or nearly four lakhs of rupees, and this is to be paid out of the taxes collected from the people of this land for an object about which they care nothing at all The Ameer is nothing to them If the British public wishes to keep on good terms with the Ameer it may do so, but surely it is wrong to carry out the object at the expense of the Indian tax payer The Government of India is unable to resist the mandates sent out from home; it must obey them implicitly. And it appears to us that the Government of this land should be so strengthened that it could resist the unjust demands of the Home Government and people of England. What is wanted is that India should be governed in India and by India; but this is far from being the case at present. The most must be made of the enlarged Councils; the people must try to get them still more enlarged, and make them represent the voice of the country. They must do away with the rule by mandate. They must protest against an order being sent out by the Secretary of State which must be obeyed whether it will work good for the country or, whether it will work evil There must be a real Government in this land, and the people must have a part in it

News and Notes

THE *Bangabasi* says that the unfortunate Maharajah Kula Chandra of Manipore who was hitherto confined in the Andamans has been brought to Hazaribagh. Here he will be kept under surveillance

The Maharajah of Rewah is to be married this month to a sister of the Maharajah of Rutlam, and great preparations are being made in the bride's country for the ceremony The Maharajah's first wife is a lady of the Dumraon house, to whom he was married in 1892

On Wednesday the Maharajah of Jaipur gave a dinner to commemorate the occasion of his having received from Her Majesty the Queen two additional guns to his salute. The Maharajah received his guests, surrounded by his courtiers, in full Rajput costume Colonel V L Law, the Resident, and Mrs Law, presided at the dinner table

WE learn that the Maharana of Dholpur has bought from General Tillard Overlave rock for the sum of Rs 80 000 On the conclusion of the transaction the native Princes holding property in Ootacamund will be H. H. the Nizam of Hyderabad the Maharajah of Mysore, the Maharajah of Vizianagaram, the Jaghirdar of Arcot and the Maharana of Dholpur.

A largely attended public meeting of the leading Sikhs of the Punjab was held the other day at Amritsar under the presidency of Sirdar Sundar Majithia, son of the late Raja Surat Singh, C S I It was unanimously resolved that the Golden Temple should be illuminated with electric light The total sum required is Rs 30,000, and an appeal will shortly be issued to the Sikh Sirdars, Chiefs and gentlemen throughout the Punjab

The cost of the recent visit of the Shahzada to England is now approximately known. It is estimated that the bill will not be over £20,000, but the cost to British officials' health by the temper of the Amir's son is not put down in the losses It is understood the account passes to the Indian Exchequer. Several Indian Princes are expected to make the tour to England this summer, but at their own expense, which will be satisfactory to taxpayers

GOVERNMENT has approved the proposal of the Travancore Durbar to issue a notification directing the levy of excise duty on cotton yarns produced in the Quilon Cotton Mills of higher counts than 20s The Government has also sanctioned the abolition of the export duty levied by the Travancore Durbar on rice and paddy exported by land from Travancore, but no change is to be made in regard to the export of rice by sea from Travancore to British India and Cochin.

THE great mass meeting of over 2,000 Hindus that was held on the 2nd instant in the Chenga Bazaar Theatrical Hall was of a politico religious nature The Meeting was presided over by Mr. A C Parthasarathy Naidoo and lasted for more than four hours Mr Muthukrishna Naidoo, B. A explained the nature of the Bills and their effects on the people of this country when passed into law. Mr C V. Venkataramana Ayengar, B A, in seconding the proposition gave the history of the cotton duties question from the seventies, and after detailing the figures connected with the case, appealed to the audience to be always careful to purchase local goods in preference to foreign ones Mr. M Ramanjulu Naidoo, of Bellary, then read a letter that was addressed to the Chairman by Rai Bahadur A. Sabapathy Mudaliar of Bellary who declared the duties to be most unjust. The following telegram was then despatched to the Viceroy and the Hon. Rai Bahadur P Anantha Charlu —"Public Meeting this evening. About two thousand present. Resolved unanimously emphatic protest anent proposed re-arrangement cotton duties" The meeting also carried resolutions (1) appointing a Committee to arrange for religious lectures to Hindu converts, (2) Requesting the public of the Tanjore District to take up the Kumbaconum College under their management without leaving it in the hands of Missionaries, and (3) expressing its opinion that the additional Judgeship of the High Court should be conferred on Dewan Bahadur P Sreenivasa Row. An Association was then formed for the purpose of preaching Hinduism to the people at large and for publishing religious tracts. The speakers on this subject were M Muthukrishna Reddiar, Mr. Thyagaraja Dikshit and Mr. Subramania Siva.

Local and Provincial.

MR H F Wilkinson is appointed Superintendent of Railway Police, Mysore.

A POLO TOURNAMENT—Will commence this evening on the ground on the *maidan* on South Parade.

THE MAHARANI REGENT—Will leave for the Capital at 12 30 to day by special train The usual preparations have been made

THE DEWAN—Sir K. Seshadri Iyer will be out on circuit the whole of this month and a portion of the next He will make an extensive tour

TOUR OF THE DEWAN—Sir K Sheshadri Iyer left Bangalore on tour on the 5th instant. He will be out for about a month, and will return on or about the 2nd proximo

APPLYING FOR LEAVE—A correspondent from Shimoga informs the *Mysore Herald* that Mr. A Rangaswamy Iyengar has applied for three months' privilege leave owing to his ill health.

THE CHAMARAJENDRA AGRAHAR—The donees of the houses in Chamarajendra Agrahar were sumptuously fed on Thursday last and were formally put in position of their respective houses.

A LARGE CASE—The six lakh case, a decision in which was given by the Judge of Shimoga has been brought into the Chief Court on appeal. It will be heard on the 31st of August next,

LEAVE—We learn that Mr. H. J. Bhabha has applied for three months' leave for going to England, and that Mr Weir, principle of the Maharaja's College, is likely to be appointed to act for him during the said period—M H.

THE F. A EXAMINATION—The results of this examination are out and we are glad to find that the Central College has done very well. Seventy six appeared for the test and thirty six got through. At Mysore fifty candidates were examined of whom fourteen passed. The Matriculation results are expected to appear in a few days.

EASY SHAVING—Somewhat of a new departure has been made in local enterprise Some Hindu barbers have opened a shop in Nullah Road, St. John's Hill. The concern seems to be carried on on the Joint Stock principle; and all sorts and conditions of men are shaved, strictly according to the fashion of their respective castes creeds, and colours.

The Akhila Vaishnavas.—We learn that the Akhila Vaishnavas not being satisfied with the decision of H. H. the Maharaja in the Seringapatam Temple case, contemplate taking civil action against H. H. the Sree Sringeri Swamy for the wrong alleged to have been committed by him.—M. H.

Construction of a new Station.—We are informed that the Agent, the Manager, the Chief Engineer and the Consulting Engineer of the Southern Maratta Railway had come to the city on the 30th Ultimo and returned next morning by their special train. Rumour says that the proposal of a new spacious station has been the object of their visit.—M. H.

The Mysore Gazette

Bangalore, Thursday, February 6, 1896.

NOTIFICATIONS BY THE GOVERNMENT OF MYSORE.

No. 6755—R. 2605, dated 27th January 1896.

Under Article 186 of the Mysore Service Regulations, T. M. Narananiya, Amildar of the Gowribidnur Taluk, is granted privilege leave of absence for one month with effect from such date as he may avail himself of the same.

Tirumalachar, Taluk Sheristadar, will be in charge of the Taluk during the absence of T. M. Narananiya on leave, or until further orders.

No. 6851—R. 2672, dated 28th January 1896.

Under Article 172 of the Mysore Service Regulations, D. Subba Rao, Deputy Amildar of Seringapatam, is granted casual leave of absence for ten days, with effect from such date as he may avail himself of the same.

The Taluk Amildar will, in addition to his own duties, be in charge of the Deputy Amildar's office during the absence of Subba Rao, on leave or until further orders.

No. 6789—R. 2631, dated 29th January 1896.

The following transfers of Amildars are ordered:—

Jausale Srinivasa Rao, from the Challakere Taluk to the Gowribidnur Taluk (to join on relief).

T. M. Narananiya, from the Gowribidnur Taluk to the Challakere Taluk (to join after the expiry of his leave).

No. 6793—R. 2635, dated 29th Jan. 1896.

Under Article 188 of the Mysore Service Regulations, Mr. J. W. Knight, Assistant Commissioner, on General duty in the Hassan District, is granted privilege leave of absence for three months, with effect from the 20th February 1896, or from such other date as he may avail himself of the same.

Mr. Chandy, B. A., Probationary Assistant Commissioner, Bangalore District, is temporarily transferred to the Hassan District for employment during the absence of Mr. J. W. Knight on leave or until further orders.

Mr. M. Shama Rao, M. A., Probationary Assistant Commissioner, is temporarily posted to the Bangalore District.

No. 6798—R. 2640, dated 29th January 1896.

Under Article 188 of the Mysore Service Regulations, V. Parthasarathi Iyengar, Amildar of the Kunigal Taluk, is granted privilege leave of absence for forty days from such date as he may avail himself of the same.

Tirunarananiengar, Deputy Amildar of Huliyar Sub-Taluk, is appointed to act as Amildar and 3rd Class Magistrate of the Kunigal Taluk during the absence of V. Parthasarathi Iyengar on leave, or until further orders.

A. Krishnaswamiengar, B. A., Clerk in the Dewan's office, is appointed to act as Deputy Amildar and 3rd Class Magistrate of the Huliyar Sub-Taluk during the absence of Tirunarananiengar on other duty or until further orders.

No. 6780—R. 2923, dated 30th Jan. 96.

Under Article 188 of the Mysore Service Regulations, Mr. C. Rama Rao, Huzur Head Sheristadar, is granted privilege leave of absence for two months, with effect from the 5th February 1896, or from such other date as he may avail himself of the same.

No. 6805—R. 2647, dated 30th January 96.

S. Venkataramaiya, Deputy Amildar of the Alur Sub-Taluk, is appointed to act as Amildar and 3rd Class Magistrate of the Channarayapatna Taluk during the absence of A. Krishna Aiyar on leave or until further orders.

M. Krishnaswamiengar, B. A., Clerk, Dewan's office, is appointed to act as Deputy Amildar and 3rd Class Magistrate of the Alur Sub-Taluk during the employment of S. Venkataramaiya on other duty or until further orders.

No. 6802—R. 2644, dated 31st January 1896.

Mr. L. Anantaswami Rao, Under-Secretary to Government, having returned to duty on the forenoon of the 31st instant, the unexpired portion of the furlough granted to him in Government Notification No. 21695—G. 5670, dated 30th May 1895, is hereby cancelled.

No. 6933—F. F. 119-95, dated 31st Jan. 1896.

Under Article 171 of the Mysore Service Regulations, Mr. H. Muttappa, Assistant Conservator of Forests on special duty, is granted casual leave of absence for five days, with effect from the 5th February 1896, or from such other date as he may avail himself of the same.

No. 8791—J. 958, dated 29th January 1896.

Under Section 6 of the registration act III of 1877, the Government are pleased to make the following appointments of Special Sub-Registrars with effect from the 15th February 1896.

A. Mahadeva Mudaliar, Head Clerk, Tumkur District Registrar's office, to be third grade Sub-Registrar of Devanhalli.

H. N. Shama Rao, [illegible] to be 3rd grade Sub-Registrar of Nelamangala.

Mr. L. B. Venkatachar, Deputy Translator, Legislative Department, to be 3rd grade Sub-Registrar of Tumkur.

No. 8836—Ed. 240, dated [illegible] January 1896.

Mr. T. K. V[illegible] Naidu, Professor of Mathematics, Central College, Bangalore, is appointed [illegible] Inspector-General of Education in Mysore [illegible].

No. 8875—L. F. 245, dated 31st January 1896.

The undermentioned officers have passed the Kannada Examination required for the Mysore Civil Service according to the standard prescribed by Government in Proceedings No. 21411-21—G. F. 387-92, dated 24th June 1893:—

1. Mr. R. Rangaraja Iyer, M. A., Probationary Assistant Commissioner.
2. Mr. K. Chandy, B. A., Probationary Assistant Commissioner.

No. 8392—J. 370, dated 31st January 1896.

Mr. V. P. Madhava Rao, Inspector-General of Police in Mysore, resumed charge of his office from Mr. K. P. Puttanna Chetty on the forenoon of the 27th January 1896.

The unexpired portion of the one month's privilege leave granted to him in Notification No. 7161—J. 834, dated 3rd January 1896 is hereby cancelled.

No. 8992—Mis. 1249, dated 4th February 1896.

Under Article 172 of the Mysore Service Regulations, Mr. B. Puttaiya, Assistant Surgeon in charge of the Medical Stores, and the Vaccine Institute, Bangalore, is granted privilege leave of absence for thirty five days, from the 29th January 1896, or from such other date as he may avail himself of the same.

No. 9045—Mis. 1218, dated 5th February 1896.

Under Article 188 of the Mysore Service Regulations, Mr. K. Krishna Iyer, Private Secretary to the Dewan, is granted 2 months' privilege leave of absence from the 10th February 1896 or from such other date as he may avail himself of the same.

2. The Dewan has been pleased to appoint Mr. C. Srikanteswara Iyer, as his Private Secretary in addition to his own duties as Assistant Secretary to Government, during the absence of Mr. Krishna Iyer or until further orders.

No. 9102—Mis. 1253, dated 6th February 1896.

Mr. A. Srinivasachariar is confirmed as Inspector General of Registration and Registrar of Companies in addition to his duties as Muzrai Superintendent and Secretary to Government in the Muzrai Department.

No. 9104—Mis. 1255, dated 6th February 1896.

Consequent upon the retirement of Mr. L. Ricketts, the following appointments are ordered:—

Mr. P. N. Purnaiya, Deputy Commissioner, Bangalore District, to be Excise Commissioner.

Mr. V. N. Narasimmiyengar, General Secretary to Government, to be Deputy Commissioner and District Magistrate of the Bangalore District.

No. 9108—Mis. 1259, dated 6th February 1896.

The General and Revenue Departments of the Government, as constituted in Notification No. 24385—G. 6208, dated 25th June 1895, will hereafter be placed under one Secretary to be styled "The Secretary to Government, General and Revenue Departments," and all communications relating to those Departments must in future be addressed to him.

No. 9109—Mis. 1260, dated 6th February 1896.

Mr. S. Ramaswami Iyer, Assistant Government Advocate, is appointed Government Advocate.

ಕರ್ಣಾಟಕ ಪ್ರಕಾಶಿಕಾ.

೧೮೯೬ನೇ ಇಸವಿ ಫೆಬ್ರವರಿ ೧೦ನೇ ತಾ| ಸೋಮವಾರ.

ಹಿಂದೂ ಸಂಸ್ಥಾನಾಧಿಪತಿಗಳ ಮತ್ತು ಪೊಲಿಟಿಕಲ್ ಏಜಂಟರ ಅನ್ಯೋನ್ಯತೆಯುಂ ಕುರಿತು.

ಹಿಂದೂ ಸಂಸ್ಥಾನಗಳಲ್ಲಿರುವ ಪೊಲಿಟಿಕಲ್ ಏಜಂಟರುಗಳ ವರ್ತನೆಯ ತಾರತಮ್ಯದಿಂ ಪ್ರಜೆಗಳು ಮೂರು ಪ್ರಭೇದಗಳುಳ್ಳವರಾಗಿದಾರೆ. ಅದೇರೀತಿ ಗುಣಗಳಿಂದಲೂ ಮೂರು ಪ್ರಕಾರದವರಾಗಿರುತ್ತಾರೆ. ಶತ್ರು ಮಿತ್ರ ತಾಟಸ್ಥ್ಯ ಭಾವಗಳುಳ್ಳವರ ಮನಗಳೊಂದೆಂದು ಕಡೆ ಒಂದೊಂದುಬಗೆಯಾಗಿ ಏರ್ಪಡುತ್ತ ಪ್ರಸ್ತಾಪ ಸ್ಥಾನದಲ್ಲಿ ಅರ್ಥಹೀನವಾಗಿ ಪರಿಣಮಿಸುವವೆ. ಪ್ರತ್ಯರ್ಥಿಗಳಾದ ಪೊಲಿಟಿಕಲ್ ಏಜಂಟರುಗಳು ದರ್ಪದಿಂ ಕಾಮಾತುರರೂ ಉನ್ಮತ್ತರಾಗಿ ಪ್ರಭುವಿಗೆ ವಿರುದ್ಧವಾದ ಕಕ್ಷಿಯನ್ನವಲಂಬಿಸಿ, ತಪ್ಪುತಿಳುವಳಿಕೆಗಳನ್ನು ಕಲ್ಪಿಸಿ ಪ್ರೋತ್ಸಾಹಗೊಳಿಸುತ, ಕಡೆಗೆ ಅರಸನಿಗೆ ಪ್ರಭುತ್ವಕ್ಕೆ ನಷ್ಟತೆಯು ಕಲ್ಪಿಸಿ, ಆತನು ಏನು ಮಾಡಲು ಆಗದಂತೆ ಮಾಡಲಿಕ್ಕೆ ಬೇಕಾದ ಸಂಧಾನಗಳನ್ನು ನಡೆಸುವರು. ಅವರ ಮೇಲೆ ಇಲ್ಲದ ದೋಷಗಳನ್ನು ಹೊರಿಸಿ ಗವರ್ನಮೆಂಟಿಗೆ ಬರೆಯುತ್ತಿರುತ್ತಾರೆ. ಮಿತ್ರಭಾವವುಳ್ಳವರು ಸಂಸ್ಥಾನ ಪತಿಯ ದಾಕ್ಷಿಣ್ಯಕ್ಕೆ ಒಳಪಟ್ಟವರಾಗಿ ಆತನ ಅವಿವೇಕಗಳನ್ನೆಲ್ಲ ಗುಣತ್ವೇನ ಭಾವಿಸಿ, ಅವನ ಸ್ತುತಿಸುತ್ತಲಿರುತ್ತಾರೆ. ತಾಟಸ್ಥ್ಯಭಾವವುಳ್ಳವರು, ನೇಟಿವ್ ಸಂಸ್ಥಾನಗಳ ಆಂತರಂಗಿಕ ವ್ಯವಹಾರಗಳಲ್ಲಿ ಪ್ರವೇಶಿಸದೆ ಕೇವಲ ಬ್ರಿಟಿಷರ ಪ್ರಯೋಜನವನ್ನು ಮಾತ್ರ ಕಾಪಾಡುತಲಿದ್ದು, ತಮ್ಮ ಉದ್ಯೋಗಕಾಲವು ಮುಗಿದರೆ ಸಾಕೆಂದು ಯೋಚಿಸುವವರಾಗಿರುತ್ತಾರೆ. ಪ್ರಕೃತ ಈ ಪೊಲಿಟಿಕಲ್ ಏಜಂಟರುಗಳ ಸಂಬಂಧ ಪ್ರತಿಪತ್ತಿಯುಳ್ಳ ಹಿಂದೂ ಸಂಸ್ಥಾನಾಧಿಪತಿಗಳ ವಸ್ತುಸ್ಥಿತಿಯಂ ಕುರಿತು ಸ್ವಲ್ಪಮಟ್ಟಿಗೆ ವಿಚಾರಿಸಲಿಕ್ಕೆ ಪ್ರಯತ್ನಿಸುವೆವು. ಇದರಿಂದ ಪೊಲಿಟಿಕಲ್ ಏಜಂಟರು ನೇಟಿವ್ ಸಂಸ್ಥಾನಾಧಿಪತಿಗಳನ್ನು ಮೂಲೆಗೊತ್ತರಿಸಿ, ಕಾರ್ಯತಃ ತಾವೇ ಪ್ರಭುತ್ವವಂ ನಡೆಸುತಲಿರುತ್ತಾರೆ. ಇದರಿಂದ ಪ್ರತಿಸಂಸ್ಥಾನದಲ್ಲಿಯೂ ಪ್ರಜೆಗಳಲ್ಲಿ ಕಕ್ಷಿಭೇದಗಳೇರ್ಪಟ್ಟು, ಕೆಲವರು ರೆಸಿಡೆಂಟರ ಪಕ್ಷವನ್ನು ಮತ್ತು ಕೆಲವರು ಹಿಂದೂ ಅರಸರ ಪಕ್ಷವನ್ನು ಅವಲಂಬಿಸಿ ಪಿತೂರಿ ಮಾಡುತಲಿರುತ್ತಾರೆ. ಇದಕ್ಕೆ ಬರೋಡೆ, ಕಾಶ್ಮೀರ ಮುಂತಾದ ಪ್ರಸಿದ್ಧ ಸಂಸ್ಥಾನಗಳೇ ಸಾಕಾದ ದೃಷ್ಟಾಂತಗಳಾಗಿರುತಿವೆ. ಉತ್ತರದೇಶದ ಹಿಂದೂ ಸಂಸ್ಥಾನಗಳಲ್ಲೊಂದಾದ ಝಾಲವಾರ್ ಸಂಸ್ಥಾನದ ಪ್ರಕೃತ ಸ್ಥಿತಿಯಂ ಕುರಿತು ಉತ್ತರದೇಶದ ಪತ್ರಿಕೆಗಳಲ್ಲಿ ಬರೆಯಲ್ಪಟ್ಟಿರುವ ಅಂಶವು ಸಾಮಾನ್ಯವಾಗಿ ಎಲ್ಲರಿಗೂ ವಿಶೇಷ ಅಸಮಾಧಾನವನ್ನುಂಟುಮಾಡುವಂತಹುದಾಗಿದೆ. ಕಳೆದ ತಿಂಗಳ ೩೧ನೇ ತಾರೀಖಿನಲ್ಲಿ ಆ ಪ್ರಾಂತದಿಂದ ಅಲಹಾಬಾದ್ ಪಯನೀರ್ ಪ್ರೋಸ್ಟ್ ಪತ್ರಿಕೆಗೆ ಬರೆಯಲ್ಪಟ್ಟ ಒಂದು ಲೇಖನದಿಂದ ಝಾಲವಾರ್ ಸಂಸ್ಥಾನದ ಪ್ರಜೆಗಳು ಬಹಳ ಕಳವಳಗೊಂಡಿರುವರೆಂಬುದೂ, ಅದು ಕ್ರಮೇಣ ವಿಶೇಷ ಕ್ಷೋಭೆಗೆ ಕಾರಣವಾಗುವದೆಂತಲೂ ತಿಳಿಯಬರುತಿದೆ. ಅಲ್ಲಿನ ಪೊಲಿಟಿಕಲ್ ಏಜಂಟರು ಸ್ವತಃ ಸಂಪೂರ್ಣ ಸ್ವಾತಂತ್ರ್ಯವಂ ವಹಿಸಿ ಮಹಾರಾಜಾ ರಾಣಾಯವರ ಸಕಲಾಧಿಕಾರವನ್ನೂ ಅಪಹರಿಸಿ ಸ್ವರೂಪತಃ ಅವರು ಪದಭ್ರಷ್ಟರನ್ನಾಗಿ ಮಾಡಿ ಇಂಡ್ಯಾ ಗವರ್ನಮೆಂಟಿನವರ ಹೆಸರಿನಿಂದ ಅವರನ್ನು ಭಯಪಡಿಸುತಲಿದಾರೆ. ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಅಂಬಾಲಾಲ್ ಎಂಬವರು ಪೊಲಿಟಿಕಲ್ ಏಜಂಟರವರ ಬಲಾತ್ಕಾರಕ್ಕಾಗಿಯೂ, ಜೀವ ಭಯದಿಂದಲೂ ತಮ್ಮ ನೌಕರಿಯಂಬಿಟ್ಟು ಹೊರಟುಹೋದರು. ಅದೇರೀತಿ ಮಹಾರಾಜರ ಖಾಸ ನೌಕರರೆಲ್ಲರು ತಮ್ಮತಮ್ಮ ನೌಕರಿಗಳಿಂದ ನಿವೃತ್ತರಾದರು. ಅನಾವಶ್ಯಕವಾಗಿ ಕರೆಯಿಸಲ್ಪಟ್ಟಿರುವ ಬ್ರಿಟಿಷ್ ಸೈನ್ಯಗಳು ಸಂಸ್ಥಾನದ ಖರ್ಚಿನಿಂದ ಪೋಷಿಸಲ್ಪಡುತಿವೆ. ಮಹಾರಾಜರವರು ದಿಗ್ಭ್ರಮೆಯೊಡನೆ ಆಗ್ರಹವುಳ್ಳವರಾಗಿದಾರೆ. ಪ್ರಾಮಾಣಿಕರಾದ ಮತ್ತು ರಾಜಭಕ್ತಿಯುಳ್ಳ ಸೈನಿಕರೆಲ್ಲರು ದಸ್ತಗಿರಿ ಮಾಡಲ್ಪಟ್ಟು ದಂಡಿಸಲ್ಪಟ್ಟಿದಾರೆ. ಮಹಾರಾಜರವರು ತಾವು ಕಲ್ಕತ್ತೆಗೆ ಹೋಗಿ ತಮ್ಮ ವಿಷಯವನ್ನು ವೈಸ್ರಾಯ್ ಸಾಹೇಬರವರಲ್ಲಿ ಖುದ್ದು ತಿಳಿಸಬೇಕಾಗಿರುವುದೂ, ಅದಕ್ಕಾಗಿ ಅವರ ಅಪ್ಪಣೆಯುಂ ಕರುಣಿಸಬೇಕೆಂತಲೂ ಪೊಲಿಟಿಕಲ್ ಏಜಂಟರಿಗೆ ಕಳುಹಿದ ಬರೆಯಲು, ಅವರು ಝಾಲವಾರ್ ಸಂಸ್ಥಾನದ ಸರಹದ್ದನ್ನು ಬಿಟ್ಟು ಹೋಗಲಾಗದೆಂದ ಖಂಡಿತವಾದ ಉತ್ತರವಂ ಕಳುಹಿಸಿದರು. ಇದಲ್ಲದೆ ಮಹಾರಾಜರಮೇಲೆ ಹೊರಿಸಲ್ಪಟ್ಟ ಆಕ್ಷೇಪಣೆಗಳು ಆತ್ಯಂತಿಕವಾಗಿ ನಿರ್ಧಾರವಾಗುವವರೆಗೆ ಅವರನ್ನು ಲಾರ್ಡ್ ಎಲ್ಗಿನ್ ಯವರು ನೋಡುವ ತಾತ್ಪರ್ಯವುಳ್ಳವರಾಗಿಲ್ಲವೆಂದು ಎಂತ ತಿಳಿಯಿತು. ಸದರೀ ಸಂಸ್ಥಾನಕ್ಕೆ ಸೇರಿದ ಪ್ರಾಮಾಣಿಕರಾದ ಉದ್ಯೋಗಸ್ಥರ ನೌಕರಿಗೆ ರಾಜೀನಾಮೆಗಳು ಕೊಡಲ್ಪಟ್ಟಿರುವಂತೆಯೂ, ಇದರಿಂದ ಜನಗಳು ಬಹಳ ಉದ್ರೇಕದಿಂದ ಕಳವಳ ಪಡುತಲಿರುವಂತೆಯೂ ವರ್ತಮಾನಬಂದಿರುತಿದೆ. ಮಹಾರಾಜರವರಮೇಲೆ ಈಗ ಆರೋಪಿಸಲ್ಪಟ್ಟಿರುವ ದೋಷಗಳ ಸ್ವರೂಪವು ವ್ಯಕ್ತವಾಗಲಿಲ್ಲ. ಪರಂತು ಪೊಲಿಟಿಕಲ್ ಏಜಂಟರು ವಹಿಸಿರುವ ಸ್ವಾತಂತ್ರ್ಯವು ಆಕ್ಷೇಪಣೀಯವಾಗಿರುತಿದೆ, ಎಂಬುದು ಈ ವಿಷಯವು ಸಾಕಾಗಲಿ.

ಈ ತಿಂಗಳ ೭ನೇ ತಾರೀಖಿನಲ್ಲಿ ಕಲ್ಕತ್ತೆಯೊಳು ಸೇರಿದ್ದ ನ್ಯಾಯವಿಧಾಯಕ ಸಭೆಯಲ್ಲಿ ಅದರ ಮೆಂಬರಲ್ಲೊಬ್ಬರಾದ ಆನರೆಬಲ್ ಮೊಭ ರೇಕರ್ ಎಂಬವರು, ಮಧ್ಯ ಇಂಡ್ಯಾಗಳಲ್ಲಿರುವ ಧಾರ್ ಎಂಬ ಅರಸರವರು ಈಚೆಗೆ ತಮ್ಮ ಭಾರ್ಯೆಯನ್ನು ಕೊಂದು ಆತ್ಮಹತ್ಯಮಾಡಿಕೊಂಡರೆಂದು ಕುರಿತು ವೃತ್ತಾಂತಪತ್ರಿಕೆಗಳಲ್ಲಿ ಪ್ರಕಟಿಸಿರುವ ಪ್ರಸ್ತಾಪಗಳ ವಿಚಾರವಾಗಿ ಗವರ್ನಮೆಂಟಿನವರಿಗೆ ಯಾವದಾದರೂ ವರ್ತಮಾನಬಂದಿರುತಿದೆಯೇ, ಮತ್ತು ಆ ವಿಷಯದಲ್ಲಿ ಅವರಿಂದೇನಾದರು ವಿಚಾರಣೆ ಮಾಡಲ್ಪಟ್ಟಿತೆ ಎಂದು ಪ್ರಶ್ನೆ ಮಾಡಲು, ಅದಕ್ಕೆ ಆನರೆಬಲ್ ಸರ್ ಉಡ್‌ಬರ್ನ್ ಎಂಬವರು ಜವಾಬ್ ಕೊಟ್ಟರೇನೆಂದರೆ—ಮಹಾರಾಜರವರು ತಮ್ಮ ಭಾರ್ಯೆಯನ್ನು ಮೊದಲು ಬಾಕುವಿನಿಂದ ಸುಟ್ಟು ಬಳಿಕ ತಾವೂ ಸುಟ್ಟುಕೊಂಡರು. ಪೊಲಿಟಿಕಲ್ ಏಜಂಟರು ಕೂಡಲೆ ಅರಮನೆಗೆ ಹೋಗಿ ಸಣ್ಣ ಆಗ ವಿಚಾರಣೆ ಮಾಡಿದರು. ಈ ಕೃತ್ಯನಡೆಸಲ್ಪಟ್ಟ ಕಾಲದಲ್ಲಿ ಮಹಾರಾಜರವರು ಉನ್ಮತ್ತಾವಸ್ಥೆಯೊಳಿದ್ದಂತೆ ವ್ಯಕ್ತವಾಗುತಿದೆ. ಮಹಾರಾಜರವರು ಪಟ್ಟಕಟ್ಟಲ್ಪಡುವ ಮೊದಲು ಗುಣವ್ಯತಿರಿಕ್ತ ಸ್ವಭಾವಿಯಾಗಿಯೂ, ಅತುರರಾಗಿಯೂ ಅತಿ ಕೋಪಿಷ್ಠರಾಗಿಯೂ ದರ್ಪದತೆಯುಳ್ಳವರಾಗಿಯೂ ಇರುತಲಿದ್ದರು. ಚೀಫ್ ಕಮಿಷನರರವರು ಸದರೀ ಮಹಾರಾಜರವರನ್ನು ಕ್ರಮವಾದ ಸ್ಥಿತಿಗೆ ತರಬೇಕೆಂಬ ಕೋರಿಕೆಯುಳ್ಳವರಾಗಿ ಸಾಧ್ಯಗಳಾದ ಪ್ರಯತ್ನಗಳಂ ಮಾಡಿ, ಅವರಿಗೆ ಹಿತೋಕ್ತಿಗಳನ್ನರುಹಿದರು. ಪರಂತು ಅವರ ಪ್ರಯತ್ನಗಳು ಕಾರ್ಯಕಾರಿಯಾಗದೆ ಹೋದವು. ಮಹಾರಾಣಿಯವರು ಅತರಾಫೆನೊಳಿರುವ ಸಂಸ್ಥಾನಾಧಿಪತಿಯ ಸಹೋದರಿಯಾಗಿಯೂ, ಪ್ರಜೆಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿಯೂ, ರೆಸಿಡೆಂಟರ ಪ್ರಾಮಾಣಿಕತೆಗೆ ವಿಷಯರಾಗಿಯೂ, ಇದ್ದರು. ಮಹಾರಾಜರವರು ತಮ್ಮ ಭಾರ್ಯೆಯನ್ನು ವಧಿಸಿ ತಾವೂ ಮೃತಪಡಲಿಕ್ಕೆ ಉಂಟಾದ ಕಾರಣವಂ ಕುರಿತು ಪೊಲಿಟಿಕಲ್ ಏಜಂಟರವರು ತಿಳಿಸಿದಬಗೆ ಹ್ಯಾಗೆಂದರೆ—ಮಹಾರಾಜರವರು ಇಂಗ್ಲಂಡಿಗೆ ಹೋಗಬೇಕೆಂಬ ಸಂಕಲ್ಪವುಳ್ಳವರಾಗಿದ್ದದರಿಂದ ಅದರ ಖರ್ಚಿಗಾಗಿ ತಮಗೆ ಇಪ್ಪತ್ತುಸಾವಿರ ರೂಪಾಯಿಗಳನ್ನು ಕೊಡಬೇಕೆಂದು ರಾಣಿಯವರು ಕೇಳಲು ಅದಕ್ಕೆ ಆಕೆ ನಿರಾಕರಿಸಿದ್ದರಿಂದ ದುರಾಗ್ರಹಪೀಡಿತರಾಗಿ ಸದರೀ ಕೃತ್ಯವಂ ನಡೆಸಿದಂತೆ ತಿಳಿಯಬರುತಿದೆ, ಎಂಬುದು ಸರ್ಕಾರೀ ರಿಪೋರ್ಟಿನ ಸ್ವರೂಪವಿವರಣಾದಿಗಳು. ಪ್ರಸಕ್ತ ವಿಷಯದಲ್ಲಿ ಮತ್ತೊಂದುವಿಧವಾದ ವೃತ್ತಾಂತವೇನೆಂದರೆ—ಜನವರಿ ೩ನೇ ತಾರೀಖಿನಲ್ಲಿ ಬುಲ್ಗೀರ್ ಎಂಬ ಪ್ರದೇಶದಿಂದ ಮಹಾರಾಜರವರು ಪೊಲಿಟಿಕಲ್ ಏಜಂಟರಿಗೆ ಬರೆದ ಇದರ ಕಂಡ

ಒಂದು ಲೇಖನದಿಂದ ಅವರಿಬ್ಬರಿಗೂ ನೆಲೆಗೊಂಡಿದ್ದ ಮನಸ್ತಾಪವೂ ಅದು ಕಡೆಗೆ ಪರಿಣಮಿಸಿದ ರೀತಿಯೂ ಸ್ಪಷ್ಟವಾಗದೆ ಹೋಗಲಾರದು.

"ನೀವು ಸರ್ವದಾ ನನ್ನ ವಿಷಯದಲ್ಲಿ ಅತೃಪ್ತರಾಗಿರುವಂತೆ ನಿಮ್ಮ ವ್ಯವಹಾರಗಳಿಂದ ಕಂಡುಬರುವದಲ್ಲದೆ ನಿಮ್ಮ ತಿರಸ್ಕಾರಗಳಿಗೂ ಜಿಗುಪ್ಸೆಗೂ ನಾನು ವಿಷಯನಾಗಿರಲಿಕ್ಕೇನು ಕಾರಣವೋ ತಿಳಿಯಲಿಲ್ಲವು. ನನ್ನ ಗೌರವಾಧಿಕಾರಗಳನ್ನು ಸ್ವಲ್ಪವೂ ಪರ್ಯಾಲೋಚಿಸದೆ ಸ್ವಕಾರ್ಯಗಳಲ್ಲೂ ಸರ್ಕಾರೀ ಆಡಳಿತಗಳಲ್ಲೂ ನೀವಾವಾಗಲೂ ಪ್ರವೇಶಿಸುತಲಿರುತ್ತೀರಿ. ಮಧ್ಯಸ್ಥಯುಕ್ತವಾದ ನಿಮ್ಮ ವರ್ತನವು ಒಬ್ಬ ನಿಗ್ರಾಹಿತನಾದವನ ಗುಲಾಮನನ್ನು ಅವನ ಯಜಮಾನನು ಯಾವರೀತಿಯಿಂದ ಕಾಣುತಲಿರುವನೋ ಸಾಕ್ಷಾತ್ತಾಗಿಲ್ಲದಿದ್ದರೂ ತತ್ಸದೃಶವಾಗಿದೆ. ಸಾರ್ವಭೌಮರಾದ ಬ್ರಿಟಿಷಗವರ್ನಮೆಂಟ ಪ್ರತಿನಿಧಿಯಾದ ನಿಮ್ಮ ಮಾತುಗಳಾವಾಗಲೂ ನನ್ನ ದಕ್ಷಿಣಾತಲು ವಿಶೇಷಾದರಣೀಯಗಳಾದವೆಂತಲೂ, ಗೌರವವುಳ್ಳವೆಂತಲೂ ನಾನು ಚೆನ್ನಾಗಿ ಅರಿತಿರುವೆನು. ಸಹಾಯಶೂನ್ಯನಾದ ನನ್ನ ಮೇಲೆಯೇ ಕಡೆಗೆ ಸಂಪೂರ್ಣ ನಿಂದೆಯು ಹೊರಿಸಲ್ಪಡುವದೆಂಬುದು ನನ್ನ ಬುದ್ಧಿಯಲ್ಲಿ ತೋರದೆ ಹೋಗಲಿಲ್ಲವು. ನಮ್ಮ ಪರಸ್ಪರ ಕಲಹದಲ್ಲಿ ಕಡೆಗೆ ನಿಮಗೆ ಜಯವೂ, ನನಗೆ ಅಪಜಯವೂ ಲಭಿಸುವದರಲ್ಲಿ ಲವಲೇಶವೂ ಅನುಮಾನವಿರುವದಿಲ್ಲವು. ಇದು ಸಕಲರಿಗೂ ತಿಳಿದ ವಿಷಯವಾಗಿರುತಿದೆ. ಗವರ್ನಮೆಂಟಿನವರಿಗೆ ನನ್ನ ವಿಷಯವಾಗಿ ನೀವೇನು ಬರೆದಾಗ್ಯೂ ಕಡೆಗೆ ನನಗೆ ನಿಂದೆಯೂ, ನೀಚೋಪಮಾನಗಳೂ, ಅಧಿಕಾರ ಲೋಪವೂ ಪ್ರಾಪ್ತವಾಗುವದರೊಳಗೇನೂ ಸಂದೇಹವಿರಲಾರದು. ಪರಂತು ಅದೃಷ್ಟವಶಾತ್ ಒಂದುವೇಳೆ ತಾವೇ ನಾನಾಗಿದ್ದಿರುವೆನಾದರೆ, ನಾನು ಭಗವಂತನಿಗೆ ಅಂಜಿ ಪರಲೋಕಕ್ಕಾಗಿ ಲೋಕನಿಂದೆಗೆ ಭೀತನಾಗಿ ವರ್ತಿಸುತಲಿದ್ದೆನು. ನಾನು ನಿಮ್ಮನ್ನು ಬಂಧನದೊಳಗಿಡಲಿಲ್ಲವೆಂದಾಕ್ಷೇಪಿಸಿ ಗವರ್ನಮೆಂಟಿಗೆ ನನ್ನ ವಿಷಯವಾಗಿ ಬರೆದುದು ನಿಮ್ಮ ಜ್ಞಾಪಕದಲ್ಲಿಲ್ಲದೆ ಹೋಗಿರಲಾರದು. ಪರಂತು ಅಂತಾದಿನವು ನಾನು ಹೋಗಿರಲಿಕ್ಕೆ ಸಾಧ್ಯವಲ್ಲದೆ ಮತಸಂಬಂಧವಾದ ಒಂದು ವಿಶೇಷದಿನವೆಂಬದಂಮಾತ್ರ ನೀವು ತಿಳಿಸದೆ ಹೋದಿರಿ. ಈ ಕಲಹವನ್ನು ಪ್ರಥಮತಃ ನಮ್ಮಿಬ್ಬರಲ್ಲಿ ಯಾರು ಪಕ್ರಮಮಾಡಿದರು? ನನ್ನ ಮತ ಸಂಬಂಧವಿಷಯಗಳಲ್ಲಿಕೂಡ ಅಕ್ರಮವಾಗಿ ಪ್ರವೇಶಿಸಿದ್ದಲ್ಲದೆ ಉರಿಯುತಲಿರುವ ಬಿಸಿಲಿನ ಝಳದಲ್ಲಿ ನನ್ನನ್ನು ಅನ್ಯಾಯವಾಗಿ ದಂಡಿಸಿದಿರಿ. ನನ್ನ ಅಧಿಕಾರಗಳನ್ನೆಲ್ಲ ನೀವು ಕಸುಗೊಂಡದುಮಾತ್ರವಲ್ಲದೆ ನನ್ನ ಸ್ಥಿತಿಗಾಗಿ ನಿಮಗೆ ಸ್ವಲ್ಪವೂ ಅನುತಾಪವಿಲ್ಲದೆ ಹೋಯಿತು. ನನ್ನ ವಿಷಯದಲ್ಲಿ ನೀವು ದಿನೇದಿನೆ ಅತಿಕ್ರೂರರಾಗುತ ಬರುತಲಿದ್ದೀರಿ. ನಿಮ್ಮ ಮನಸ್ಸಂತೃಪ್ತಿಯಂ ನಾನೆಂತು ಗೈವೆನೆಂದು ತಿಳಿಯದು. ಅದರ ರೀತಿಯನ್ನಾದರೂ ತಾವು ನನಗೆ ದಯಮಾಡಿ ತಿಳಿಸಬೇಕು. ಪೂರ್ವಕ್ಕಿಂತಲೂ ನಾನೀಗ ನಿಮ್ಮನ್ನು ಅಧಿಕವಾಗಿ ಖುಷಾಮತ್ ಮಾಡುತಲಿದೇನೆಂದು ನಾನು ಭಾವಿಸಿದ್ದೇನೆ. ಆದರೂ ನೀವುಮಾತ್ರ ಅತಿಕಾಠಿಣ್ಯವಂ ತೋರ್ಪಡಿಸುತ್ತೀರಿ. ನಿಮಗೆ ಕೊಡಲ್ಪಟ್ಟಿರುವ ಜವಾಬ್ದಾರಿಯನ್ನು ನಿಮ್ಮ ತಾಬೇದಾರನಾದ ದಿವಾನರಿಗೆ ನೀವು ವರ್ಗಮಾಡಿರುತ್ತೀರಿ. ನನ್ನ ತೀರ್ಮಾನವೂ ದಿವಾನರ ತೀರ್ಮಾನವೂ ಕಡೆಗೆ ಏಕರೂಪವಾದುದೇ ಎಂದು ನೀವು ಭಾವಿಸಿರುವಂತೆ ಸ್ಪಷ್ಟವಾಗುತಿದೆ. ನಿಮ್ಮಿಂದ ಪ್ರೋತ್ಸಾಹಿತನಾದಂತ ದಿವಾನನು ತನ್ನ ಪ್ರಭುವಿಗೆ ಹ್ಯಾಗೆ ವಿಧೇಯನಾಗಿ ವರ್ತಿಸುವನು! ಅದು ನಾನೆಂತು ನಿರೀಕ್ಷಿಸಲಿ? ಪೊಲಿಟಿಕಲ್ ಏಜಂಟರು ಅಸಹಾಯನಾಗಿ ಅವರಧೀನದೊಳಿರುವವನು ಈಪ್ರಕಾರ ಬೈದು ಹಿಂಸಿಸಿ, ತೊಂದರೆಗೊಳಪಡಿಸಿ ಅಗೌರವ ಮಾಡುವದು ಯುಕ್ತವಲ್ಲವು, ಎಂಬದು."

ಮೇಲಿನಂತ ಲೇಖನವನ್ನೆಲ್ಲರು ವಿಶೇಷಾವಧಾನದೊಡನೆ ಓದಬೇಕೆಂದು ಕೋರುವೆವು. ಬ್ರಿಟಿಷ್ ರೆಸಿಡೆಂಟರುಗಳ ಸಂಬಂಧವನ್ನಿದರಿಂದಲೆ ಬೇಕಾದಮಟ್ಟಿಗೆ ಅವರವರೂಹಿಸಿಕೊಳ್ಳಬಹುದಲ್ಲದೆ ನೇಟಿವ್ ಅರಸರಸ್ಥಿತಿಯನ್ನೂ ನಿರ್ಧರಿಸಿ ಅರಿಯಬಹುದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

ಬರುವ ವಸಂತ ಕಾಲದಲ್ಲಿ ನೇಪಾಲ ಸಂಸ್ಥಾನದ ಮಹಾರಾಜರವರು ಬಹುಮಂದಿ ಪರಿಜನ ಪರಿಚಾರಕರೊಡನೆ ಯೂರೋಪ್ ಖಂಡಕ್ಕೂ ಇಂಗ್ಲಾಂಡ್ ದೇಶಕ್ಕೂ ಹೋಗಿಬರುವ ಸಂಭವ ಕಂಡುಬರುತಿದೆ. ಇದಕ್ಕಾಗಿ ಮಹಾರಾಜರವರು ಒಂದು ಹೊಗೇ ಜಹಜನ್ನು ಗೊತ್ತುಮಾಡಿಕೊಳ್ಳಬೇಕೆಂದು ಯೋಚಿಸುತಲಿದಾರೆ.

ರತ್ಲಾಂಸಂಸ್ಥಾನದ ಮಹಾರಾಜರವರ ಸೋದರಿಯವರನ್ನು ರೀವಾ ಸಂಸ್ಥಾನದ ಮಹಾರಾಜರವರಿಗೆ ಕನ್ಯಾದಾನ ಮಾಡುವಂತೆ ನಿಷ್ಕರ್ಷೆಯಾಗಿ, ಈ ತಿಂಗಳಲ್ಲಿ ವಿವಾಹ ಮಹೋತ್ಸವವು ನಡೆಯತಕ್ಕಬಗ್ಗೆ ರತ್ಲಾಂ ಸಂಸ್ಥಾನದಲ್ಲಿ ಪ್ರಬಲ ಸನ್ನಾಹಗಳು ನಡೆಸಲ್ಪಡುತಿವೆಯೆಂದು ತಿಳಿಯಬರುತಿದೆ.

ಶ್ರೀಮನ್ಮಹಾರಾಣಿಯವರ ಅಳಿಯಂದಿರವರಾದ ಪ್ರಿನ್ಸ್ ಹೆನ್ರಿಯವರ ಖನನಕ್ರಿಯೆಯು ಈ ತಿಂಗಳ ಬುಧವಾರದಿನ ಸಕಲ ಸೈನಿಕಮರ್ಯಾದೆಗಳೊಡನೆ ನೆರವೇರಿಸಲ್ಪಟ್ಟಿತು. ಮೃತಭರ್ತೃಕೆಯಾದ ಪ್ರಿನ್ಸೆಸ್ ಬೀಟ್ರಿಸ್‌ಯವರೂ, ಶ್ರೀಮನ್ಮಹಾರಾಣಿಯವರೂ ಪ್ರಿನ್ಸರವರ ಕಳೇಬರದೊಡನೆ ವಿಪಿಂಗ್‌ಹಾಂ ಎಂಬ ಪ್ರದೇಶಕ್ಕೆ ದಯಮಾಡಿದ್ದರು.

ಗತಿಸಿದ ಶ್ರೀ ಫ್ರಾಂಜಿ ಜಿಜಿಭಾಯಿ ಪೆಟಿಟ್ ಎಂಬವರ ಜ್ಞಾಪಕಾರ್ಥ, ಸರ್ ದಿನ್ಷಾ ಮಾಣಿಕ್ಯಜಿ ಪೆಟಿಟ್ ಬ್ಯಾರನೆಟ್ಟಿಯವರು, ಬಾಯಿ ಸಕರ್‌ಬಾಯಿ ದಿನ್ಷಾ ಪೆಟಿಟಿಯವರ ಜಾನ್ವರ್ ಆಸ್ಪತ್ರೆಯ ಟ್ರಸ್ಟಿಗಳ ವಶಕ್ಕೆ ೭೫೦೦ ರೂಪಾಯಿಗಳನ್ನು ಕೊಟ್ಟು ಅದರ ಬಡ್ಡಿಯನ್ನು ರೋಗಪೀಡಿತಗಳಾಗಿ ಚಿಕಿತ್ಸೆಯಬಗ್ಗೆ ಸದರೀ ಆಸ್ಪತ್ರೆಯಲ್ಲಿರಿಸಲ್ಪಟ್ಟಿರುವ ಜಾನ್ವರಗಳ ಪೋಷಣೆಯ ಬಗ್ಗೆ ಉಪಯೋಗಿಸತಕ್ಕದ್ದೆಂದು ಅಪೇಕ್ಷಿಸಿರುತ್ತಾರೆ.

ಜಪಾನ್ ದೇಶೀಯರಿಗೂ ಚೀನಾ ದೇಶೀಯರಿಗೂ ಈಚೆಗೆ ನಡೆದ ಯುದ್ಧದಲ್ಲಿ ಜಪಾನ್ ದೇಶದ ಸೈನಿಕರಿಗುಂಟಾದ ಜಯದ ಜ್ಞಾಪಕಾರ್ಥವಾಗಿ, ಕಿಯೋಟೋ ಎಂಬ ತುಕಡಿಯ ಜನರು, ಯುದ್ಧದಲ್ಲಿ ಶತ್ರುಗಳಿಂದ ಕಿತ್ತುಕೊಂಡ ಲೋಹದ ತೋಪುಗಳನ್ನೆಲ್ಲ ಕರಗಿಸಿ, ನೂರಐವತ್ತು ಅಡಿಗಳ ಎತ್ತರ ಉಳ್ಳ ಒಂದು ಬೌದ್ಧ ಪ್ರತಿಮೆಯನ್ನು ಮಾಡಿಸಿ ಸ್ಥಾಪಿಸಬೇಕೆಂದು ಯೋಚಿಸುತ್ತಾರೆಂದು ಹಿಂದಾನೊಂದು ಪತ್ರಿಕೆಯು ತಿಳಿಸುತಿದೆ.

ಈ ಸಲದ ಪಂಜಾಬ್ ಯೂನಿವರ್ಸಿಟಿಯ ಎಲ್. ಎಲ್ ಬಿ. ಪರೀಕ್ಷೆಗೆ ಹೋಗಿದ್ದ ಹದಿನೈದುಮಂದಿ ಉಮೇದ್ವಾರರಲ್ಲಿ ಒಬ್ಬನು ಮಾತ್ರವೇ ತೇರ್ಗಡೆಯಾದನೆಂತಲೂ, ಮಿಕ್ಕ ಹದಿನಾಲ್ಕುಜನರು ಸಿಂಡಿಕೇಟಿಗಳಿಗೆ ಅರ್ಜಿ ಬರೆದುಕೊಂಡು ಅದರಲ್ಲಿ ಒಂದೆರಡು ಗ್ರಂಥಗಳಲ್ಲಿನ ಪ್ರಶ್ನೆಗಳು ಕಠಿಣಗಳಾಗಿದ್ದವಲ್ಲದೆ ರೋಮನ್‌ಲಾದಲ್ಲಿ ಪ್ಯಾಸಾಗಲಿಕ್ಕೆ ತೆಗೆಯಬೇಕಾಗಿರುವ ಮಾರ್ಕುಗಳ ಸಂಖ್ಯೆ ಹೆಚ್ಚಾಗಿಡಲ್ಪಟ್ಟಿದೆಯೆಂದು ತಿಳಿಸಿದಾರೆಂತಲೂ, ತಿಳಿಯಬರುತಿದೆ.

ಬಳ್ಳಾರಿ, ವಿಶಾಖಪಟ್ಣ, ಮಧುರೆ ಈ ಪ್ರಾಂತಗಳಲ್ಲಿ ಸಬ್‌ಜಡ್ಜಿ ಕೆಲಸದೊಳಿದ್ದು ಕೆಲವು ಸಂವತ್ಸರಗಳ ಹಿಂದೆ ಕಾಲಗತಿಯನ್ನೈದಿದ ಮ॥ರಾ॥ ಎ. ಎಸ್. ವೆಂಕಟರಮಣ ಪಂತುಲುಯವರ ಕುಮಾರಿಯರೊಬ್ಬಾಕೆಯು ಈಚೆಗೆ ಕೆಲವು ದಿವಸಗಳ ಹಿಂದೆ ಕ್ರಿಸ್ತುಮತವನ್ನವಲಂಬಿಸಿದಳೆಂದು ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈಕೆಯ ಪತಿಯು ಮದರಾಸ್ ಹೈಕೋರ್ಟಿನರೊಬ್ಬ ಕೈಕಾರ್ಗಿದಾರೆಂದು ಕೇಳುತ್ತೇವೆ. ಹಿಂದೂ ಸ್ತ್ರೀಯರ ವಿದ್ಯಾಭಿವೃದ್ಧಿಯು ಕಡೆಗೆ ಜಾತಿಭ್ರಷ್ಟತ್ವಕ್ಕೆ ಪ್ರಯುಕ್ತವಾಗುತ ಬರುವದಕ್ಕಾಗಿ ಚಿಂತಿಸಬೇಕಾಗಿದೆ.

ಭಾವನಗರದ ಮಹಾರಾಜರವರು ಕಾಲಗತಿಯನ್ನೈದಿದ ವೃತ್ತಾಂತವಂ ನಾವು ಗತವಾರದ ಪತ್ರಿಕಾಮೂಲಕ ಪ್ರಕಟಿಸಿದ್ದೆವಷ್ಟೆ. ಸದರೀ ಸಂಸ್ಥಾನಕ್ಕೆ ಉತ್ತರಾಧಿಕಾರಿಗಳಾದ ಈಗಿನ ರಾಜಕುಮಾರರು ಪ್ರಾಪ್ತವಯಸ್ಕರಾಗಿಯೂ, ವಿದ್ಯಾಬುದ್ಧಿ ಜಾಗರೂಕತೆ ಸೌಲಭ್ಯವೊದಲಾದ ಅನೇಕ ಸುಗುಣಗಳಂ ಪಡೆದು, ಅರ್ಹರಾಗಿಯೂ ಇದ್ದಾರೆಂದು ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ. ಈ ಮಹಾರಾಜ ಕುಮಾರರು ೧೮೭೫ನೇ ಇಸವಿಯಲ್ಲಿ ಜನಿಸಿ, ರಾಜಕುಮಾರ್ ಕಾಲೇಜಿನಲ್ಲಿ ವಿದ್ಯಾಸಂಗ್ರಹಣಗೈದು ಒಳ್ಳೆಯ ವೈದುಷ್ಯವನು ಸಂಪಾದಿಸಿದಾರಂತೆ.

ಲಾಹೋರ್ ಪಟ್ಟಣದಲ್ಲಿ ಛಾಪಿಸಲ್ಪಡುತಲಿರುವ "ಅಜರ್ಕನ್" ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವದೇನೆಂದರೆ, ಸಂವತ್ಸರಾದಿ ಚುಂಬನವು—ಫಾರ್ಸಿದೇಶದಲ್ಲಿ ಸಂವತ್ಸರಾದಿಯದಿನ ಸಂಕ್ರಾಂತಿಯ ಸಮಯದಲ್ಲಿ ಕೃತಜ್ಞಸ್ಮರಣವಾಗಿ ಒಬ್ಬರನೊಬ್ಬರು ಮುದ್ದಿಡುವ ಸಂಪ್ರದಾಯವು ನೆಲೆಗೊಂಡಿರುತಿದೆ. ಈ ಪದ್ಧತಿಯನ್ನನುಸರಿಸಿ ಯುಗಾದಿಯದಿನ ಹಾಸಿಗೆಯಿಂದ ಎದ್ದಕೂಡಲೆ ತೊಂಭತ್ತುಲಕ್ಷ ಪುರುಷರು ತಮ್ಮ ಭಾರ್ಯೆಯರನು ಮುದ್ದಿಟ್ಟುಕೊಂಡಿರಬಹುದೆಂದು ಒಂದಾನೊಂದು ಪತ್ರಿಕೆಗೆ ಪೇರಿಸ್ ಪಟ್ಟಣದಿಂದ ಒಬ್ಬ ಬಾತಮಿದಾರನು ಬರೆದಿರುತ್ತಾನೆ. ಇದರೊಡನೆ ಅನ್ಯರಭಾರ್ಯೆಯರನ್ನಾಲಿಂಗಿಸಿ ಮುದ್ದಿಟ್ಟುಕೊಳ್ಳುವ ಸಂಪ್ರದಾಯವು ಕೆಲ ಠಿಕಾಣೆಗಳೊಳು ಬಂದಿರುತಿವೆ," ಎಂಬುದು. ಇಲ್ಲಿನ ನಾಗರಿಕಾಭಿಲಾಷಿಗಳದನ್ನೇಕೆ ಅನುಷ್ಠಿಸಬಾರದು?

ಕಳೆದ ತಿಂಗಳ ೪ನೇ ತಾರೀಖಿನಲ್ಲಿ ತುರ್ಕಿ ಸಂಸ್ಥಾನದ ರಾಯಭಾರಿಯಾದ ಆರಿಫ್‌ಪಾಷಾ ಯೆಂಬವರು ಸೆಂಟ್‌ಪೀಟರ್ಸ್‌ಬರ್ಗ್ ಪಟ್ಟಣದಿಂದ ಕಾನ್‌ಸ್ಟಾಂಟಿನೋಪಿಲಿಗೆ ಪ್ರಯಾಣವಾದರು. ರಷ್ಯಾ ಚಕ್ರವರ್ತಿಯವರಿಗೆ ಸುಲ್ತಾನರವರು ಕೊಟ್ಟು ಕಳುಹಿಸಿದ ಅನೇಕವಿಧ ಬಹುಮಾನಗಳನ್ನು ಸದರೀ ಆರಿಫ್‌ಪಾಷಾಯವರು ತೆಗದುಕೊಂಡು ಹೋಗಿದ್ದುದು ಮಾತ್ರವಲ್ಲದೆ ಸುಲ್ತಾನರು ಬರೆದು ಕಳುಹಿಸಿದ ಒಂದು ಪತ್ರವನ್ನು ಸಹ ತೆಗದುಕೊಂಡುಹೋಗಿ ಒಪ್ಪಿಸಿಬಂದರು. ಹೀಗೆಯೇ ಜರ್ಮನೀ ಚಕ್ರವರ್ತಿಯವರು ಕೂಡ ತಮ್ಮ ರಾಯಭಾರಿಯವರ ಮೂಲಕ ಜಾರಿ ಯವರಿಗೆ ಒಂದು ಲೆಟರ್ ಬರೆದು ಕಳುಹಿಸಿದ್ದರು. ಜರ್ಮನೀ ಚಕ್ರವರ್ತಿಯವರು ಈ ರೀತಿ ಆಗಿಂದಾಗ್ಯೆ ಜಾರಿಯವರೊಡನೆ ಸ್ನೇಹಗೌರವನಂ ಬೆಳೆಸುತಲಿರುವುದು ಆಕ್ಷೇಪಣೀಯವೆಂದು ತಿಳಿಸಿ ಮದರಾಸ್ ಮೆಯಿಲ್‌ಪತ್ರಿಕೆಯು ಅಂತಃ ಅಸಮಾಧಾನಪಡುತಿದೆ.

ಈ ಸಲದ ಮದುರೆ ಡಿಸ್ಟ್ರಿಕ್ಟ ಸೆಷನ್ಸ್ ವಿಚಾರಣೆಯಲ್ಲಿ ಖೂನಿ ತಕ್ಸೀರಿಗಾಗಿ ಕಮಿಟ್ಟಿ ಮಾಡಲ್ಪಟ್ಟ ಒಂದು ಮೊಕದ್ದಮೆಯು ದರ್ಯಾಪ್ತಾಗಿ ತೀರ್ಮಾನಿಸಲ್ಪಟ್ಟಿತು. ಬೆಳದಿನಾಯಕನೂರ್ ಜಮೀನ್ದಾರರ ದೂರಸಂಬಂಧಿಯಾದ ಸುಮಾರ್ ೧೭ ವರುಷಗಳ ವಯಸ್ಸಿನ ಒಬ್ಬ ಬಾಲಕನು, ಪ್ರಸಕ್ತ ಮೊಕದ್ದಮೆಯಲ್ಲಿ ಆಪಾದಿಸಲ್ಪಟ್ಟಿರುತ್ತಾನೆ. ಈತನೊಂದುದಿನ ಸಾಯಂಕಾಲ ಬಂದೂಖಿನಿಂದ ಒಬ್ಬನಂ ಸಾಯುವಂತೆ ಹೊಡೆದುಬಿಟ್ಟು ತಾನಾಗಿ ಪೋಲೀಸ್ ಸ್ಟೇಷನಿಗೆ ಹೋಗಿ ತಾನುಮಾಡಿದ ಕೃತ್ಯವಂ ತಿಳಿಸಿ, ಪೋಲೀಸಿನವರ ದಸ್ತಗಿರಿಗೊಳಗಾದನು. ಮೃತಪಟ್ಟವನ ಒಡಹುಟ್ಟಿದವಳೊಡನೆ ಕೆಲವುಕಾಲದಮೊದಲು ಸದರೀ ಅಪರಾಧಿಯು ಸಂಬಂಧವುಳ್ಳವನಾಗಿರಲು ಈ ಖೂನಿ ನಡೆದದಿನ ಸಾಯಂಕಾಲ ಆತನು ತನ್ನ ಪ್ರಿಯೆಯೊಡನೆ ಗಾಡಿಯಲ್ಲಿ ಕುಳಿತು ಹೋಗುತಲಿರುವಾಗ ಮೃತಪಟ್ಟವನು ರಿವಾಲ್ವರನ್ನು ಹಿಡಿದು ಗಾಡಿಯಂ ನಿಲ್ಲಿಸಿಬಿಟ್ಟು ಅವರಂ ಕೊಂದುಬಿಡುವಂತೆ ಹೆದರಿಸಿದನು. ಆಗ ಆತ್ಮರಕ್ಷಣೆಗಾಗಿ ಆ ಬಾಲಕನು ಬಂದೂಖು ತೆಗದುಕೊಂಡು ಅದರಿಂದಲೇ ಅವನನ್ನು ಹೊಡೆದು ಕೊಂದುಹಾಕಿದನೆಂದು ಏರ್ಪಟ್ಟಿತು.

ಈ ತಿಂಗಳ ೩ನೇ ತಾರೀಖಿಗೆ ಪ್ರಾರಂಭವಾಗಿರಬೇಕಾದ ಮದರಾಸ್ ಪ್ಲೀಡರ್‌ಟೆಸ್ಟ್ ಪರೀಕ್ಷೆಯು, ಅದರ ಪ್ರಶ್ನಪತ್ರಿಕೆಗಳಲ್ಲೊಂದು ಪರೀಕ್ಷಾಕಾಲಕ್ಕೆ ಪೂರ್ವದಲ್ಲೇ ಹೊರಗಾದುದರಿಂದ ಸದ್ಯಕ್ಕೆ ತಡೆದಿಡಲ್ಪಟ್ಟಿದೆ. ಪರೀಕ್ಷೆಯದಿನ ಪ್ರಶ್ನಪತ್ರಿಕೆಗಳ ನಿರೀಕ್ಷಣೆಯೊಡನೆ ಸೆನೆಟ್‌ಹೌಸ್‌ನಲ್ಲಿ ನೆರೆದಿದ್ದ ಉಮೇದುವಾರರಿಗೆ ಹೈಕೋರ್ಟ್ ರೆಜಿಸ್ಟ್ರಾರ್‌ರವರು ತಿಳಿಸಿದರೇನೆಂದರೆ—ಪ್ರಶ್ನಪತ್ರಿಕೆಗಳು ಹೊರಗಾಗಿ ಬಿಟ್ಟದ್ದರಿಂದ ಬೋರ್ಡಿನವರು ಪರೀಕ್ಷೆಯನ್ನ ನಡೆಸದೆ ನಿಲ್ಲಿಸಬೇಕೆಂದು ಆಜ್ಞಾಪಿಸಿದರಾಗಿ, ಈ ಪರೀಕ್ಷೆಯು ಮತ್ತೊಂದು ತಾರೀಖಿನಲ್ಲಿ ಜರಿಗಿಸಲ್ಪಡುವುದು. ಆ ತಾರೀಖ್ ಪೋರ್ಟ್‌ಸೇಂಟ್‌ಜಾರ್ಜ್ ಗೆಜೆಟ್‌ಪತ್ರಿಕೆಯಲ್ಲಿನ ನೋಟೀಸುಮೂಲಕ ಎಲ್ಲರಿಗೂ ತಿಳಿಸಲ್ಪಡುವುದು. ಆದಕಾರಣ ನೀವೆಲ್ಲರು ಸದ್ಯಕ್ಕೆ ಮನೆಗೆ ಹೋಗಬಹುದೆಂಬುದು. ಇದು ಕೇಳಲು ಹೇಳನಾಸ್ಪದವಾದ ಅಂಶವಾಗಿರುತಿದೆ. ಈ ಸಂವತ್ಸರದ ಪರೀಕ್ಷೆಗಳ ಪರಿಣಾಮವೆಲ್ಲವು ಈ ರೀತಿ ಹಾಸ್ಯಾಸ್ಪದವಾಗಿ ಪರ್ಯವಸಾನಕ್ಕಾಗಿ ಚಿಂತಿಸುತ್ತೇವೆ. ಮೆಟ್ರಿಕ್ಯುಲೇಷನ್ ಪರೀಕ್ಷೆಯಮೊದಲು ಎಲ್ಲದರಲ್ಲಿಯೂ ಇಂತ ಅಕ್ರಮವು ಜರಿಗಿಸಲ್ಪಟ್ಟಂತೆ ವೃತ್ತಾಂತಪತ್ರಿಕಾಮೂಲಕ ತಿಳಿಯಬಂದಿರುತಿದೆ. ಇಂತ ಅವ್ಯವಸ್ಥಿತ ಕಾರ್ಯಕರ್ತೃಯು ಮದರಾಸ್ ಪ್ರೆಸಿಡೆನ್ಸಿಯಲ್ಲಿ ಅಧಿಕವಾಗಿರುವಂತೆ ಇತರ ಪ್ರಾವಿನ್ಸಿಗಳಲ್ಲಿ ಕಾಣಿಸಲಿಲ್ಲವು. ಇದರ ಮೂಲಕಾರಣವನ್ನರಿತು ಕ್ರಮಪಡಿಸಲಾರದೆ ಹೋದರೆ ಪರೀಕ್ಷೆಯನ್ನು ವಜಾಮಾಡುವುದು ಬಹಳ ಗೌರವವಾಗಿರುವುದು.

LOCAL AND PROVINCIAL NEWS
ಒಳದೇಶವಾರ್ತಾ ತಾಲ್ಲೂಕ ಕಿಜಾತಿವೃತ್ತಾಂತಗಳು.

ಶ್ರೀರಂಗಪಟ್ಟಣದ ದೇವಸ್ಥಾನದ ಮೊಕದ್ದಮೆಯು ಆಖೈರು ತೀರ್ಮಾನಕ್ಕೆ ಗುರಿಯಾದರೂ ವೈಷ್ಣವರು ಸಿವಿಲ್‌ಕೋರ್ಟಿಗೆ ಹೋಗುವರೆಂಬ ಪ್ರವಾದವಿದೆ.

ಆಚೆ ಗುರುವಾರದದಿವಸ ಶ್ರೀಚಾಮರಾಜೇಂದ್ರ ಅಗ್ರಹಾರದ ಮನೆಗಳ ಪ್ರತಿಗ್ರಹೀತೃಗಳಿಗೆ ಸಂತರ್ಪಣೆ ನಡೆದು ಮನೆಗಳು ಅವರವರಿಗೆ ಸ್ವಾಧೀನ ಮಾಡಲ್ಪಟ್ಟವು.

ಮ॥ ಬಾ ಭಾ ಯವರು ಇಂಗ್ಲಾಂಡಿಗೆ ಹೋಗಲು ಮೂರು ತಿಂಗಳ ರಜಾ ಪಡೆಯುವರೆಂತಲೂ ಅವರ ಕೆಲಸವನ್ನು ಮಹಾರಾಜಾ ಕಾಲೇಜಿನ ಪ್ರಿನ್ಸಿಪಲ್ ಮ॥ ವಿಯರ್‌ಯವರು ನೋಡುವರೆಂತಲೂ ಕೇಳುತ್ತೇವೆ.

ಶ್ರೀಮನ್ಮಹಾರಾಣೀ ರೀಜೆಂಟರವರು ಶ್ರೀ[illegible] ಮಹಾರಾಜರವರು ಮತ್ತು ಪರಿಜನರೊಡನೆ, ಈ ದಿನ ಮಧ್ಯಾಹ್ನ ಎರಡು ಘಂಟೆಗೆ ಇಲ್ಲಿಂದ ಸ್ಪೆಷಲ್ ಟ್ರೈನಿನಲ್ಲಿ ರಾಜಧಾನಿಗೆ ದಯಮಾಡುವರು.

ಮಿಸ್ಟರ್ ಎಚ್ ಎಫ಼ ವಿಲ್ಕಿನ್ಸನ್ ಎಂಬವರು ಮೈಸೂರು ರೆಯಿಲ್ವೆ ಪೋಲೀಸ್ ಸೂಪರಿಂಟೆಂಡೆಂಟರಾಗಿ ಮೊಕರರ್ ಮಾಡಲ್ಪಟ್ಟಿರುವಂತೆ ಇಂಡ್ಯಾ ಗವರ್ನಮೆಂಟ್ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿದೆ.

ಮೈಸೂರ್ ಚಾಮರಾಜಪೇಟೆಯಲ್ಲಿರುವ ರಾಮಾಪಂಡಿತರ ಮನೆಯಲ್ಲಿ ನಡೆದ ಮದುವೆಗೋಸ್ಕರ ಹಾಕಿದ್ದ ಬಹಳ ದೊಡ್ಡ ಚಪ್ಪರಕ್ಕೆ ಬೆಂಕಿ ತಗಲಿ ಚಪ್ಪರವೆಲ್ಲ ಬೆಂದು ಹೋದದ್ದಲ್ಲದೆ ಮನೆಯೂ ಬೆಂದು ಸಾಮಾನುಗಳು ನಷ್ಟವಾದವೆಂದು ಕೇಳಲು ವಿಷಾದಿಸುತ್ತೇವೆ.

ಮೈಸೂರ್ ಶ್ರೀರಾಮಪೇಟೆಯಲ್ಲಿರುವ ಕೆಂಪಣ್ಣನ ಕಾರಖಾನೆಯಬಳಿ ಒಬ್ಬ ಫಕೀರನು ಒಂದು ಕಿರುಬನ್ನ ತಂದಿದಾನೆ. ಇದು ವಿನೋದತಮಾಷಗಳು ಮಾಡುತ್ತದೆಂತಲೂ, ಮಹಾರಾಜರವರು ಈ ಊರಿಗೆ ಬರುವವರಿಗೆ ಯಾವದೂ ಮಾಡಿಸುವದಿಲ್ಲವೆಂದು ಹೇಳುತ್ತಾನೆಂತಲೂ ತಿಳಿಯಬರುತ್ತೆ. ಕಿರಬಗಳನ್ನು ಆಡಿಸುವದಕ್ಕೆ ತಂದದ್ದು ಪ್ರಾಯಶಃ ಇದೇ ಮೊದಲನೇ ಸಲವೆಂದು ಹೇಳಬೇಕು.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಲರಾದ ಮ॥ ಕುಕ್ ಸಾಹೇಬರ ಸಂಬಳವನ್ನು ಮಾಹೆ ೧ಕ್ಕೆ ೧,೫೦೦ ರೂಪಾಯಿಗೆ ಬಡ್ತಿ ಮಾಡಿರುತ್ತಾರೆ. ಇದಲ್ಲದೆ ಮ॥ ಲೆನಾರ್ಡ್, ಮ॥ ಟೇಟ್, ಮ॥ ವಿಯರ್ ಸಾಹೇಬರುಗಳ ಸಂಬಳಗಳನ್ನು ತಿಂಗಳಿಗೆ ೭೫೦ ರೂಪಾಯಿನಂತೆ ಗೊತ್ತುಮಾಡಿ ಪ್ರತಿ ವರುಷವೂ ೫೦ ರೂಪಾಯಿನಂತೆ ೧,೦೦೦ ರೂಪಾಯಿ ತನಕ ಇಜಾಫೆ ಆಗತಕ್ಕದ್ದೆಂತಲೂ ಸರ್ಕಾರದವರು ಹುಕುಂ ಮಾಡಿದಾರೆ.

THE MYSORE GAZETTE

ಮೈಸೂರು ಗೆಜೆಟ್.

ಗುರುವಾರ, ತಾ ೬ನೇ ಫೆಬ್ರವರಿ ೧೮೯೬

ಮೈಸೂರ್ ಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ರೆವಿನ್ಯೂ

ತಾರೀಖು ೨೭ನೇ ಜನವರಿ ೧೮೯೬

ನಂ|| ೬೩೧೯–ರೆ ೭೩೦೯—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೮೯ನೇ ಆರ್ಟಿಕಲ್ ಅನುಸರಿಸಿ, ಗೋರೀಬಿದನೂರು ತಾಲ್ಲೂಕು ಅಮಲ್ದಾರ್ ಟಿ ಯಂ ನಾರಣಪ್ಪನವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ

ಟಿ ಯಂ ನಾರಣಪ್ಪನವರು ರಜಾಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕು ಶಿರಸ್ತೇದಾರ್ ತಿರುಮಲಾಚಾರ್ಯ ಡಿಟ್ಟೋ ತಾಲ್ಲೂಕು ಚಾರ್ಜ ವಹಿಸತಕ್ಕದ್ದು

ನಂ|| ೬೪೯೬–ರೆ, ೭೬೦೯—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೦ನೇ ಆರ್ಟಿಕಲ್ ಅನುಸರಿಸಿ, ಆನೇಕಲ್ ತಾಲ್ಲೂಕು ಅಮಲ್ದಾರ್ ಬಿ ಶ್ರೀನಿವಾಸ ರಾಯರಿಗೆ, ೧೮೯೬ನೇ ಇಸವಿ ಜನವರಿ ೨೦ನೇ ಮಧ್ಯಾಹ್ನ ಲಾಗಾಯಿತು ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ಆರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ

ಬಿ ಶ್ರೀನಿವಾಸರಾಯರು ರಜಾಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕು ಶಿರಸ್ತೇದಾರ್ಯ ಡಿಟ್ಟೋ ತಾಲ್ಲೂಕಿನ ಚಾಲ್ತೀ ಕೆಲಸಗಳ ಚಾರ್ಜನ್ನು ವಹಿಸತಕ್ಕದ್ದು

ತಾರೀಖು ೨೮ನೇ ಜನವರಿ ೧೮೯೬

ನಂ|| ೬೯೫೧–ರೆ ೭೬೩೦—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೦ನೇ ಆರ್ಟಿಕಲ್ ಮೇರೆ, ಶ್ರೀರಂಗಪಟ್ಟಣದ ಡೆ ಅಮಲ್ದಾರ್ ಡಿ ಸುಬ್ಬರಾಯರಿಗೆ, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಲಾಗಾಯಿತು ೧೦ ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸುಬ್ಬರಾಯರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸದರೀ ತಾಲ್ಲೂಕ್ ಅಮಲ್ದಾರರು ತಮ್ಮ ಕೆಲಸಗಳ ಜೊತೆಗೆ ಡೆಪ್ಯುಟಿ ಅಮಲ್ದಾರ್ರ ಆಫೀಸ್ ಚಾರ್ಜನ್ನು ವಹಿಸತಕ್ಕದ್ದು

ತಾರೀಖು ೨೯ನೇ ಜನವರಿ ೧೮೯೬

ನಂ|| ೬೭೯೮–ರೆ ೭೬೩೦—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೮೯ನೇ ಆರ್ಟಿಕಲ್ ಅನುಸರಿಸಿ ಕುಣಿಗಲ್ ತಾಲ್ಲೂಕು ಅಮಲ್ದಾರ್ ಎ ಪಾರ್ಥಸಾರಥಯ್ಯಂಗಾರ್ರಿಗೆ, ಅವರು ಉಪಯೋಗಿಸಿ ಕೊಳ್ಳುವ ತಾರೀಖ್ ಲಾಗಾಯಿತು ನಲವತ್ತು ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

ಎ ಪಾರ್ಥಸಾರಥಯ್ಯಂಗಾರ್ರು ರಜಾಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹುಳಿಯಾರ ಸಬ್‌ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ತಿರುನಾರಣಯ್ಯಂಗಾರ್ರು ಕುಣಿಗಲ್ ತಾಲ್ಲೂಕಿನ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸನೋಡುವಂತೆ ಮೊಕರರ್ರು ಮಾಡಲ್ಪಟ್ಟಿರುತ್ತಾರೆ

ವಿರ್ವಾರವರ ಆಫೀಸ್ ಕ್ಲರ್ಕ್ ಎ ಕೃಷ್ಣಸ್ವಾಮಯ್ಯಂಗಾರ್ ಬಿ ಎ ಯವರು, ತಿರುನಾರಣಯ್ಯಂಗಾರ್ರು ಇತರಕೆಲಸದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹುಳಿಯಾರ ಸಬ್‌ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುವಂತೆ ಮೊಕರರ್ರು ಮಾಡಲ್ಪಟ್ಟಿರುತ್ತಾರೆ

ನಂ|| ೬೭೯೯–ರೆ, ೭೬೩೧—ಇದರಡಿ ಕಂಡ ಅಮಲ್ದಾರ್ರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತಿವೆ—

ಜಾಗೀರ್ದಾರ್ ಶ್ರೀನಿವಾಸರಾಯರು ಚಳ್ಳಕೆರೆ ತಾಲ್ಲೂಕಿನಿಂದ ಗೋರೀಬಿದನೂರು ತಾಲ್ಲೂಕಿಗೆ ಚಾರ್ಜ ಒಪ್ಪಿಸಿದನಂತರ ಹೋಗತಕ್ಕದ್ದು

ಟಿ ಯಂ ನಾರಣಪ್ಪನವರು ಗೋರೀಬಿದನೂರು ತಾಲ್ಲೂಕಿನಿಂದ ಚಳ್ಳಕೆರೆ ತಾಲ್ಲೂಕಿಗೆ, ರಜಾ ಪಾಯಿದೆ ಮುಗಿದ ತರುವಾಯ ಹೋಗತಕ್ಕದ್ದು

ನಂ|| ೬೮೦೩–ರೆ ೭೬೩೯—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೮೯ನೇ ಆರ್ಟಿಕಲ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿಯಮೇಲಿರುವ ಅಸಿಸ್ಟೆಂಟ್ ಕಮಿಷನರ್ ಮ|| ಜೆ ಹಟ್ಟಿಯಪ್ಪ ಸೈಟ್ ಯವರಿಗೆ, ೧೮೯೬ನೇ ಇಸವಿ ಫೆಬ್ರವರಿ ೨ನೇ ಮಧ್ಯಾಹ್ನ ಲಾಗಾಯಿತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

ಬೆಂಗಳೂರು ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ಬಾಂಡಿ ಬಿ. ಎ ಯವರು, ಮ|| ಜೆ ಹಟ್ಟಿಯಪ್ಪ ಸೈಟ್ ಯವರು ರಜಾಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೆಲಸಕ್ಕೋಸ್ಕರ ಹಾಸನ ಡಿಸ್ಟ್ರಿಕ್ಟಿಗೆ ಹಂಗಾಮಿ ತರೀಕೆ ವರ್ಗ ಮಾಡಲ್ಪಟ್ಟಿರುತ್ತಾರೆ

ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ಯಂ ಹಾಮಿದ್ ಎಂ. ಎ ಯವರು ಹಂಗಾಮಿ ತರೀಕೆ ಬೆಂಗಳೂರು ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ

ತಾರೀಖು ೩೧ನೇ ಜನವರಿ ೧೮೯೬

ನಂ|| ೬೮೦೫ ರೆ ೭೬೪೨—ಆಲೂರು ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಎಸ್ ವೆಂಕಟರಮಣಯ್ಯನವರು, ಎ ಕೃಷ್ಣಯ್ಯರವರು, ರಜಾಮೇಲಿರುವ ಕಾಲದಲ್ಲ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಚನ್ನರಾಯಪಟ್ಟಣ ತಾಲ್ಲೂಕು ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುವಂತೆ ಮೊಕರರ್ರು ಮಾಡಲ್ಪಟ್ಟಿರುತ್ತಾರೆ

ದಿವಾನರವರ ಆಫೀಸ್ ಕ್ಲರ್ಕ್ ಎಂ ಕೃಷ್ಣಸ್ವಾಮಯ್ಯಂಗಾರ್ ಬಿ ಎ ಯವರು, ಎಸ್ ವೆಂಕಟರಮಣಯ್ಯನವರು ಇತರ ಕೆಲಸದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ಆಲೂರು ಸಬ್‌ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುವಂತೆ ಮೊಕರರ್ರು ಮಾಡಲ್ಪಟ್ಟಿರುತ್ತಾರೆ

ನಂ|| ೬೮೦೬–ರೆ ೭೬೪೩—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೮೯ನೇ ಆರ್ಟಿಕಲ್ ಅನುಸರಿಸಿ, ಹುಣಸೂರು ಪಟ್ಟಣ ಶಿರಸ್ತೇದಾರ್ ಮ|| ರಾ|| ರಾಮಸ್ವಾಮಯ್ಯನವರು ೧೮೯೬ನೇ ಇಸವಿ ಫೆಬ್ರವರಿ ೩ನೇ ಮಧ್ಯಾಹ್ನ ಲಾಗಾಯಿತು ಯಾ ಅವರು ಉಪಯೋಗಿಸಿಕೊಂಡ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ತಾ|| ೩೧ನೇ ಜನವರಿ ೧೮೯೬

ನಂ|| ೬೮೧೦–ರೆ ೭೬೪೪ ಗವರ್ನಮೆಂಟಿನ ಅಂಡರ್ ಸೆಕ್ರೆಟರಿಯವರಾದ ಮ|| ಎಲ್ ಆನಂದ ರಾವ್ ರವರು ರಜಾ ಮೇಲೆ ಮಹೀಸೂರು ೩ನೇ ಮಧ್ಯಾಹ್ನ ಪೂರ್ವ ಸ್ಥಳದಲ್ಲಿ ನಾನಾ ಕಾರಣಗಳ ಮೂಲಕ ಬಂದಿರುತ್ತಾರಾಗಿ ೧೮೯೫ನೇ ಇಸವಿ ಡಿಸೆಂಬರ್ ೩ನೇ ಮಧ್ಯಾಹ್ನ ೨೩ರ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ಫರ್ಲೋ ರಜಾ ವೈಕಿ ಉಳಿದ ಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ

೬೮೧೧–ಫರೆಸ್ಟ್ ೭೬೪೫—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೮೦ನೇ ಆರ್ಟಿಕಲ್ ಮೇರೆ, ವಿಶೇಷ ಕೆಲಸದಮೇಲಿರುವ ಫರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ಹೆಚ್ ಮುತ್ತಣ್ಣನವರು ೧೮೯೬ನೇ ಇಸವಿ ಫೆಬ್ರವರಿ ೫ನೇ ಮಧ್ಯಾಹ್ನ ಲಾಗಾಯಿತು ಇದವಾ ಅವರದನ್ನುಪಯೋಗಿಸಿಕೊಳ್ಳುವ ತಾರೀಖಿನಿಂದ ೫ ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಜನರಲ್.

ತಾ ೬೩ ೩೧ನೇ ಜನವರಿ ೧೮೯೬

ನಂ|೪೬೭೮–ಜಿ ೭೬೪೬—೧೮೯೬ನೇ ಇಸವಿ ೫ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ ೬ನೇ ಸೆಕ್ಷನ್ ಅನುಸರಿಸಿ ಗವರ್ನಮೆಂಟ್‌ನವರು ಅಪ್ಪಣೆ ಹಿಸುವದೇನೆಂದರೆ, ಇದರಡಿ ಕಂಡ ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳ ನೇಮಕಾತಿಯು, ೧೮೯೬ನೇ ಇಸವಿ ಫೆಬ್ರವರಿ ೧ನೇ ಮಧ್ಯಾಹ್ನ ಲಾಗಾಯಿತು ಜಾರಿಯಲ್ಲಿ ಇರತಕ್ಕದ್ದು

೧ ತುಮಕೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫೀಸ್ ಹೆಡ್ ಕ್ಲರ್ಕ್ ಎ ಮಹದೇವಯ್ಯನವರು, ದೇವನಹಳ್ಳಿಯ ೩ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿರತಕ್ಕದ್ದು

೨ ಎಸ್ ಶಾಮರಾವ್ ಬಿ ಎ ಯವರು ನೆಲಮಂಗಲದ ೩ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿರತಕ್ಕದ್ದು

೩ ಲಿಮಿಟೆಡ್ ಸರ್ವಿಸ್ ಡೆಪ್ಯುಟಿ ಟ್ರಾನ್ಸ್ಲೇಟರ್ ಬಿ ವೆಂಕಟರಾಯರು, ತುಮಕೂರಿನ ೩ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿರತಕ್ಕದ್ದು

ತಾರೀಖು ೩ನೇ ಜನವರಿ ೧೮೯೬

ನಂ|| ೪೬೭೯–ಜಿ ೭೬೪೭—ಬೆಂಗಳೂರು ಸೆಂಟ್ರಲ್ ಕಾಲೇಜಿನ ಮಧ್ಯವರ್ತಿ ಯಾನೆ ಗಣಿತಶಾಸ್ತ್ರದ ಪ್ರೊಫೆಸರ್ ಆದ ಮ|| ಟಿ ಆರ್ ವೆಂಕಟರಾಮ ನಾಯುಡುರವರು ಮೈಸೂರ್ ಎಜ್ಯುಕೇಷನ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅಸಿಸ್ಟೆಂಟಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ ಹಾಲಿ ಇರತಕ್ಕ ಉದ್ಯೋಗದ ಚಾರ್ಜು ಒಪ್ಪಿಸಿದ ತರುವಾಯ ಮೊಕರರ್ ಕೆಲಸವಮೇಲೆ ಹಾಜರಾಗತಕ್ಕದ್ದು

ತಾ|| ೩೧ನೇ ಜನವರಿ ೧೮೯೬

ನಂ|| ೪೬೮೦–ಜಿ ೭೬೪೮ ಇದರಡಿ ಕಂಡ ಆಫೀಸರ್‌ಗಳು, ಮೈಸೂರು ಸಿವಿಲ್ ಸರ್ವೀಸ್‌ಗೆ ೧೮೯೬ನೇ ಇಸವಿ ಜಾನ್ ೨೭ನೇ ಮಧ್ಯಾಹ್ನ ೨೩ರ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್‌ನಲ್ಲಿ ವಿಧಿಸಲ್ಪಟ್ಟ ದರ್ಜೆಯ ಉದ್ಯೋಗದಲ್ಲಿ ಕಂಡಿಟ್ಟು ತೀರ್ಮಾನಿಸಲಾಗಿರುತ್ತಾರೆ—

೧ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ವಿ ಆರ್ ತ್ಯಾಗರಾಜಯ್ಯರ್ ಎಂ ಎ ಯವರು

೨ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ಕೆ ಚಂಡಿ ಬಿ ಎ ಯವರು

ನಂ|| ೪೬೮೧–ಜಿ ೭೬೫೦—ಮೈಸೂರು ಡಿವಿಜನ್ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾದ ಮ|| ವಿ. ಪಿ ಮಾಧವರಾಯರವರು ಅವರ ಆಫೀಸ್ ಚಾರ್ಜನ್ನು ೧೮೯೬ನೇ ಇಸವಿ ಜನವರಿ ೨೭ನೇ ಮಧ್ಯಾಹ್ನದ ಪೂರ್ವದಲ್ಲಿ ಮ|| ಕೆ. ಪಿ ಪುಟ್ಟಣ್ಣಶೆಟ್ಟಿರವರಿಂದ ವಹಿಸಿರುತ್ತಾರೆ

೧೮೯೬ನೇ ಇಸವಿ ಜನವರಿ ೩ನೇ ಮಧ್ಯಾಹ್ನ ೬೫೬೨ ನೇ ನಂಬರ್ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ಒಂದು ತಿಂಗಳ ಪ್ರಿವಿಲೇಜ್ ರಜಾ ವೈಕಿ ಉಳಿದ ಭಾಗ ಅಂದರೆ, ಹತ್ತು ದಿವಸಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ

ತಾ|| ೩ನೇ ಫೆಬ್ರವರಿ ೧೮೯೬

ನಂ|| ೪೬೮೫—ಮಿಸ್ ೭೬೫೮—ಬೆಂಗಳೂರು ಮೆಡಿಕಲ್ ಸ್ಕೂಲ್ ಮತ್ತು ವ್ಯಾಕ್ಸಿನ್ ಇನ್‌ಸ್ಟಿಟ್ಯೂಟಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಸರ್ಜನ್ ಮ|| ಬಿ ಪಿಳ್ಳೆ ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೮೯ನೇ ಆರ್ಟಿಕಲ್ ಅನುಸರಿಸಿ, ೧೮೯೬ನೇ ಇಸವಿ ಜನವರಿ ೨೦ನೇ ತಾರೀಖ್ ಲಾಗಾಯಿತು ಅಥವಾ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು, ದೊಡತ್ತೈದು ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ

ತಾ|| ೩ನೇ ಫೆಬ್ರವರಿ ೧೮೯೬.

ನಂ|| ೯೩೧೯-ಮಿಸ್ ೭೬೫೯—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೮೯ನೇ ಆರ್ಟಿಕಲ್ ಅನುಸರಿಸಿ, ದಿವಾನರವರ ಪ್ರೈವೇಟ್ ಸೆಕ್ರೆಟರಿ ಮ|| ಕೆ ಕೃಷ್ಣಯ್ಯರ್ ಯವರಿಗೆ ೧೮೯೬ ಇಸವಿ ಫೆಬ್ರವರಿ ೧ನೇ ತಾರೀಖು ಲಾಗಾಯಿತು ಅಥವಾ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು, ಐದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ ಮ|| ಕೃಷ್ಣಯ್ಯರವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಮ|| ಸಿ ಶ್ರೀಕಂಠೇಶ್ವರಯ್ಯರವರನ್ನು ಗವರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿಯವರ ಅವರ ಸ್ವಂತ ಕೆಲಸಗಳಜೊತೆಗೆ, ದಿವಾನರವರ ತಮ್ಮ ಪ್ರೈವೇಟ್ ಸೆಕ್ರೆಟರಿಯಾಗಿ ನಿಯಮಿಸಿರುತ್ತಾರೆ

ತಾರೀಖು ೩ನೇ ಫೆಬ್ರವರಿ ೧೮೯೬

ನಂ | ೯೩೨೦ ಮಿಸ್ ೭೬೬೦—ಮ | ಎ ಕೆ ಶ್ರೀನಿವಾಸಾಚಾರ್ಯರವರು ಅವರ ಸ್ವಂತಕೆಲಸಗಳಿಂದ ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಗವರ್ನಮೆಂಟ್ ಮುಜರಾಯಿ ಇಲಾಖಾ ಸೆಕ್ರೆಟರಿ ಉದ್ಯೋಗದಜೊತೆಗೆ ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲರವರಾಗಿಯೂ ಕೆಲಸನೋಡುವದಕ್ಕಾಗಿ ನಿಯಮಿಸಲ್ಪಟ್ಟಿರುತ್ತಾರೆ

ತ ೪ನೇ ಫೆಬ್ರವರಿ ೧೮೯೬

ನಂ|| ೯೩೨೧ ಮಿಸ್ ೭೬೬೧—ಮ|| ಎಸ್ ರಂಗಸ್ವಾಮಯ್ಯರವರು ತಮ್ಮ ಕೆಲಸದಿಂದ ನಿವೃತ್ತರಾದ ಪ್ರಯುಕ್ತ ಇದರಡಿ ಕಂಡ ಮೊಕರರಾತಿಗಳು ಮಾಡಲ್ಪಟ್ಟಿವೆ —

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಪಿ ಎನ್ ಕೃಷ್ಣಮೂರ್ತಿಯವರು ಎಕ್ಸೈಜ್ ಕಮಿಷನರಾಗಿರತಕ್ಕದ್ದು ಗವರ್ನಮೆಂಟ್ ಜನರಲ್ ಸೆಕ್ರೆಟರಿ ಮ|| ವಿ ಎನ್ ನರಸಿಂಹಯ್ಯಂಗಾರರವರು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು

ತಾರೀಖು ೬ನೇ ಫೆಬ್ರವರಿ ೧೮೯೬

ನಂ|| ೯೩೨೨ ಮಿಸ್ ೭೬೬೨—೧೮೯೬ನೇ ಇಸವಿ ೫ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯ ಪ್ರಕಾರ ಗವರ್ನಮೆಂಟಿನ ರೆವಿನ್ಯೂ ಮತ್ತು ಜನರಲ್ ಇಲಾಖೆಗಳು ಅನ್ನುವುದು ಮುಂದೆ ಒಬ್ಬ ಸೆಕ್ರೆಟರಿಯ ಅಧೀನದಲ್ಲಿಡಲ್ಪಟ್ಟು "ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ" ಎಂದು ವ್ಯವಹರಿಸಲ್ಪಡತಕ್ಕದ್ದಲ್ಲದೆ ಸದರೀ ಇಲಾಖೆಗೆ ಸಂಬಂಧಪಟ್ಟ ವರ್ತಮಾನ ಪತ್ರಗಳು ಅನ್ನುವೋರು ಅವರ ಹೆಸರಿಗೇ ಬರೆಯಲ್ಪಡತಕ್ಕದ್ದು

ತಾ|| ೬ನೇ ಫೆಬ್ರವರಿ ೧೮೯೬

ನಂ ೯೩೨೩ ಮಿಸ್ ೭೬೬೩—ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೊಕೇಟ್ ಮ|| ಎಸ್ ರಾಮಸ್ವಾಮಯ್ಯರವರು ಗವರ್ನಮೆಂಟ್ ಅಡ್ವೊಕೇಟರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ

ADVERTISEMENTS

NOTICE

VIDYASARA SANGRAHA.

A TREATISE ON THE PRINCIPLES OF

HINDU MEDICINE

Price, including Postage Rs 5—0—0

ವೈದ್ಯಸಾರ ಸಂಗ್ರಹ.

ಇದು ಚರಕ, ವಾಗ್ಭಟ, ಸುಶ್ರುತ, ಇತ್ಯಾದಿ ಗ್ರಂಥಗಳ ಸಾರಾಂಶ ಪೂರ್ವಗ್ರಂಥಗಳ ಸಂಗ್ರಹರೂಪವಾಗಿರುತದೆ

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಿಲ ಒಳಗೊಂಡು ಪ್ರತಿ ಒಂದಕ್ಕೆ ರೂ ೫–೦–೦

BANGALORE CITY MUNICIPALITY.

ಬೆಂಗಳೂರ್ ಸಿಟೀ ಮ್ಯುನಿಸಿಪಾಲಿಟಿ.

ನೋಟೀಸ್.

Fresh sealed Tenders for the supply of Coltee (Horse Gram) to the Remount Depot, Hosur, from 1st April 1896 to 31st March 1897, will be received by the Superintendent Remount Depot, up to noon on the 9th March 1896.

For further particulars Vide Fort St George Gazette No 44 page 1317 of 19th November 1895.

Remount Depot, Hosur, 19th Feb 1896 } E. CHAMBERS, L. Col, *Supdt Remount Depot*

Select Telegrams

London 19th Feb The British Consul at Archangel telegraphs that the explorer Nansen is returning having reached the North Pole.

London 19th Feb —Mr Dillon has been elected Leader of the Irish Party by 38 against 21 votes

Calcutta 19th Feb —Mr Cunningham, Secretary to the Foreign Office, proceeds to India on the 11th April on six months' leave Colonel Sir A Talbot will probably proceed to Kashmir and Mr Barnes will take over charge from Mr Cunningham about the same time.

THE

Karnataka Prakasika.

MONDAY, FEBRUARY 24 1896

WATER SUPPLY C AND M STATION

At last the question of the water supply for the Civil and Military Station of Bangalore has been settled. The place is to be supplied with this necessary article from Hessaraghatta. In other words, the Station is to become independent of the City for its supply of water. It is believed that a sufficient quantity can be obtained to supply both parts of the place, and so the Station will now have a supply of its own. An agreement has been entered into between the Mysore Government, and that of India on the subject, and in a short time we may expect to see pipes being laid down in the Civil and Military Station to convey the water to the places where it is required. When it is brought two thirds will be placed at the disposal of the Civil population and one-third at the disposal of the Military, and the contribution towards the upkeep will be in this proportion. It is calculated that the Station will have to pay about Rs. 62,000 a year on account of the supply, the greater portion of which will be handed over to the Mysore Government. Some, of course, will be required for repairs and for wear and tear. Pipes may have to be renewed, breakages may occur, and the money must be forthcoming to meet the demand. We fancy the sum mentioned in the letter by the Assistant Resident will not be found too great. Perhaps more will have to be collected. But this remains to be seen. It is to be hoped that there will be water enough for both parts of the place, but however little there may be, the Civil and Military Station must have its share. This is in the agreement, and cannot be got over. It is said that plenty for both places will be forthcoming, and no doubt this is now the case for we had a very good down fall last year. But should a season be dry it might happen that the reservoirs would not be filled, and so the water that might be sufficient for one part of the town would not be sufficient for both. The Civil and Military Station is to be congratulated that it is at last to get a water supply after waiting for it fifty years. All sorts of schemes have been talked about and written about, but nothing further was done. It was proposed to bring in the water from Maligal, but the scheme was generally condemned, and so the Government of India has abandoned it for Hessaraghatta. The people of the Station were in favour of this scheme, and at a large meeting held some months ago, they unanimously resolved to petition the Government to allow them to get the water from the same source as the people of the City. The authorities on the spot opposed this arrangement, but the Viceroy and his advisers saw the advantage of it, and so gave sanction for the scheme to be carried out. The Mysore Government is also to be congratulated on having been able to come to the assistance of the people living in the Civil and Military Station.

THE MATRICULATION EXAMINATION.

The Matriculation list is now out, and, upon the whole, the institutions in Bangalore and the Province generally have done well, very well indeed as compared with last year. Then there was a terrible slaughter throughout the country; very few got through, and great dissatisfaction was expressed. From the accounts to hand a little more than one third of the candidates who appeared passed the examination. This is fair when we take into consideration how difficult the examination has become of late years. It has been made harder and harder, and the students have to pay more attention to their lessons. Then again, there is no English text book allowed for the Matriculation, and this very much increases the difficulty of passing. We think the abolition of the books was a step in the right direction, though it has made it harder for the candidates to get through, and they most certainly do not think very highly of the changes. We fancy that the youths who pass now learn a good deal more English than did their predecessors, and this must be ascribed to the manner this language is now taught. There is another cause that tends to keep the list low as compared with the number sent up. Many candidates are allowed to appear who are anything but well prepared. They beg of their teachers to be allowed to try their chance, and of course, they fail and reduce the list considerably. It is a pity that the heads of schools are not more careful in sending up candidates, for they suffer by it as well as the University and education generally. The practice of sending up youths for examinations before they are properly prepared has long been in existence, in fact, ever since the University was established. Some years ago any youth who paid his fees would appear for the Matriculation test, but so many presented themselves who were totally unprepared that the Syndicate laid down a law that only those who were allowed by their teachers to go up should do so. But this, as we have said has not entirely put a stop to the evil. It has mitigated it to a certain extent, but this is all. The teachers have it in their power to bring about a new order of things in this respect, and it is to be hoped they will do it. The Central College, as was expected, takes the lead in the list, and then come the other schools most of which have done well. The classes have been formed for the F A examination in the Central College, and the work is going on at its height in all the schools.

News and Notes

The Laws relating to usury are to be completely revised in accordance with the recent instructions from the Secretary of State.

The proposed visit of the Maharaja of Nepal to England, in connection with which the Resident, Colonel Wylie, has been at Calcutta, will not take place this year.

There are four richest persons in the world of whom two are in Europe and two in China. Of four one in China is the richest. His wealth is estimated at 500 crores of rupees.

Herbert Spencer never accepts a University degree nor any other honorary trademark from any society. He wants to stand wholly on his own merits or to be forgotten.

A well connected Bengali Hindu youth we are informed, embraced Islam a short time ago at Ferozepore. This makes the third conversion of a Bengali Hindu to Islam, during the last twelve months, in the Punjab.

The Hon'ble Mr Ananda Charlu presided at a largely attended meeting of the Calcutta University Union for the purpose of presenting an Address to Surendra Nath Banerjea in recognition of his services at the last session of the Congress at Poona.

Mr Gladstone is the owner of the largest lead pencil in the world. It is the gift of a pencil maker at Keswick, and is 32 inches in length. In place of the customary rubber cap, it has a gold cap. Its owner uses it for a walking stick.

Papers in connection with the question of making enactments to provide for the discipline of the Imperial Service troops on active service or when serving in British India, have been forwarded by this week's Mail to the Secretary of State for approval.

Several Namburi women in Malabar have to remain maidens all through their lives, as they cannot pay the sum demanded by bridegrooms who do not care to marry ... get as many Nayar women as they want for wives with no marrying them ceremoniously.

A native of India has been appointed an examiner in English for the examination for the Master of Arts Degree. The recipient of this distinction is Lala Madan Gopal, M. A., Barrister at Law, and a Fellow of the Punjab University who has been made a Rai Bahadur on the 1st ultimo.

An audacious dacoity was perpetrated on Wednesday night in a village called Arore in Sind within five miles of Sukkur. The dacoits pillaged the village, killing one man and wounding twelve others. Several houses were burnt down and property estimated at Rs. 2,000 carried away.

The superiority of the lance over the sword as a Cavalry weapon is now so generally recognised that many Commandants of Native Cavalry are anxious to have their regiments turned into Lancers. In the case of the 3rd and 16th Bengal Cavalry, sanction has been given to the front rank being armed with lances.

A correspondent telegraphs to a Bombay paper: Hajee Yusuf Mahomed Suleman Bota has generously agreed to pay Rs. 1,11,000 for supplying the town of Rander with good drinking water. His offer has been accepted by Mr Lely, Collector, with thanks. This grant will greatly assist the carrying out of the Surat water-supplying scheme.

A somewhat grotesque incident is reported as having occurred in connection with one of the three English officers who were with Dr Jameson's force in the march on Johannesburg. After the defeat and finding himself a prisoner in the gaol at Pretoria he telegraphed to the War Office applying for an extension of leave!

Two sepoys had, the other day, gone to shoot in the Koh Morni jungles in Patiala State. They separated in the search of game, and when gliding through some bushes one of them was taken for a *shikar* by his comrade and shot dead. Seeing his fatal mistake the other man was so confounded that he put the barrel into his mouth and blew out his brains.

A Calcutta correspondent refers to a curious paragraph in the *Capital* about Mr. Mano Mohun Ghose being made a Queen's Counsel. Of course, Mr Ghose is in every way worthy of the distinction which the title implies, and the probabilities are that the report is true. Not only Mr Ghose, but Mr. W C Bonnerjee, Mr. Tyabji and Mr. Mehta are all distinguished Barristers who have well merited the honor.

The inhabitants of certain villages in the Pudukota State having petitioned the Dewan for permission to celebrate the usual "Manjivirattoo" festival, a festival when goring bulls are let loose for the purpose of propitiating the village deities, this permission has been refused by the Dewan on the ground that it is detrimental to public safety, and that the barbarous festival is not necessary for the propitiation of the deity.

The *Ceylon Independent* hears on good authority that there is a prospect of disturbances at the Maldives again. The dethronement of the present Sultan, it is stated, is imminent, and if this were to take place, a state of anarchy would be the result. The annual revenue is Rs 200,000 and the expenditure almost nil. Our contemporary advises the appointment of a British Resident to teach the Maldivians how to manage their affairs.

The *Pall Mall Gazette* of the 31st ultimo publishes some remarkable statements respecting the situation at Constantinople by its correspondent in that city which show that there is much diplomatic activity on the part of Russia. The writer states that M Nelidoff, the Russian Ambassador, frequently visits the Sultan's palace in disguise, and that many telegrams are being exchanged between him and the Government at St. Petersburg. He further asserts that M Nelidoff has quarrelled with Sir Philip Currie, the British Ambassador.

The game of living chess recently played at Prague was an extraordinary affair. The

board was laid out in the midst of a huge amphitheatre, and each piece was represented by a group of figures The idea of the game was the defeat of the Hungarian King, Matthias *Corvinus* by King George *Podjebrad* Pawns took their stations as halberdiers in proper historical costumes The Knights, on *gorgeously caparisoned horses*, were attended by squires in gay attire Battlemented wag gons represented the castles, and bore the *banners and standards of the rival Kings* In all, 256 people took part in the game

A scarcity of cash, the ordinary currency of the Chinese, has resulted in a revival of a very ancient mode of making bank notes The Governor of Soochow has, says the *China Gazette*, issued *permission for the place of cash* to be taken by strips of bamboo stamped with the number of cash they represent The Financial Treasurer of Soochow has issued a proclamation permitting the money changers to issue bamboo money This money consists of strips of bamboo about two inches long, each bearing the characters "equal to 200 large cash," and stamped with the name of the issuing bank or money changer

The *Hindu* congratulates the management of the Commercial and Land Mortgage Bank *on its continued success and prosperity* At the 10th Annual meeting of the shareholders, held last week, the Chairman observed that the past year of the Bank was a year of steady progress, the Bank having not only maintained the dividend at 10 per cent, but added Rs 37,500 to the Reserve Fund and specially provided for equalising the dividends Everybody should be glad that a local Bank which is highly useful to the public, has been able to do such good business

A respectable educated Indian, who has just returned to Bombay from *Natal*, draws a sad picture of the lot of the Indians in South Africa He asserts that the competition of *Indian traders has raised bad feelings* in the European colonists, who treat the Indians in a spirit of persecution and vexatious tyranny *All Indians without distinction* are called "coolies" and are indiscriminately classed with the Kafirs and other uncivilised native *tribes* In fact, the Indian is bitterly hated and is treated more like a pariah dog than a human being. The tramcars are not for him and the doors of hotels are closed against him

A CROWDED meeting of the inhabitants of Yeotmal was held in front of Mahadeo's temple on the 11th instant Mr Narayan Ganesh Deshpande, Jahagirdar of Parmah, presided The following resolutions were unanimously *passed —That the action of the Government* of India in passing the recent Cotton Duties Bill against the united voice of the people of *this country was unjust and greatly detri*mental to the mill industry of this country 2 —That in future every person of this town should resolve to wear cloth *manufactured in* this country 3—That copies of these resolutions be forwarded to the Government of India, the Secretary of State for India, and to Sir William Wedderburn.

A CASE of a startling nature has been detected by Mr P Wilkins, an Inspector of Police in Bombay Being informed that a Hindu girl from the Kathiawar side had been *taken to a brothel in Bombay*, this officer at once instituted enquiries in the matter He was able to find out that the girl was only *nine years old, and Bijli*, a Hindu woman, had kept her in her room The girl said her name was Hurkha, and she was taken to Bombay *from the Pipla village of Borsad taluq* Bijli was questioned as to whence she brought the child, and produced a stamped document purporting to be a deed of sale, dated the 15th instant, by virtue of which Hurkha was sold to Bijli, by Nanabhoy Valubhdas Patel, resident of the Pipla village, Borsad taluq, for Rs 18 The deed of sale was duly signed by Nanabhoy, who accepted all responsibilities regarding any claim that might be made for the girl by any person in future Bijli was at once taken into custody, and the document (deed of sale) was seized The accused woman was placed before the Chief Presidency Magistrate on a charge of buying a minor *for immoral purposes*, and a remand was obtained on the *application of Superintendent Gennan*, to enable the Police to arrest Nanabhoy, the *person who sold the girl to this woman*

Local and Provincial.

THE BRITISH RESIDENT —Is expected back in Bangalore to morrow

THE DEWAN —Sir K Sheshadri Iyer, the *Dewan, is expected at Tarikere* in a few days He will be back in Bangalore about the 4th of next month

AN APPOINTMENT.—It is said that Mrs *Sajith Ali Khan, the widow* of the late Deputy Commissioner of Bangalore has been appointed Inspectress of Girls Schools in Mysore on a salary of Rs 100 a month

THE WEATHER —Is now very hot for this time of the year, and from signs that are visible we may expect a very hot season hotter than any we have had for a long time past The grass is all dried up, and even the trees look somewhat scorched

INFANT MARRIAGE PROSECUTIONS —A propos of Government order, Seshappa grand father of the bride Tirumalamma, and Lakshmipatiengar, *father of the bird, were tried* by the District Magistrate of Hassan and found guilty of having performed the marriage of *the girl at Hassan before she attained the re*quired age as per rules in force, and sentenced to pay a fine of Rs 20 each, in default to *suffer 5 days' simple imprisonment* Similarly Budar Djanni, husband of the girl and Tippi, mother of the girl, were fined by the District *Magistrate of Chitaldrug one rupee each for* their share of the offence —D P

The Mysore Gazette

Bangalore, Thursday February 1. 1896
NOTIFICATIONS BY THE GOVERNMENT OF MYSORE

No 9446—*J, 1023 dated 11th February* 1896
Under Section 12 of the Code of Criminal Procedure, T K Sundara Raj iengar, Amildar and 3rd Class Magistrate, Kadur, is appointed a Magistrate of the Second Class to try cases, under the Mysore Railway Regulation and Penal Code, within the Railway precincts of his Taluk
No 9448—J 10.. dated 11th February 1896
Mr A Ananda Rao (Munsiff) of Chitaldrug, is granted one month's privilege leave on full pay under Article 204 of the Mysore Service Regulations with effect from the 29th February 1896
Ramanujaiengar Sheristedar of the District *and Sessions Court of Nagar*, will act for Mr A Ananda Rao during his absence
No 9670—J 1062, dated 19th February 1896
Mr S Vydianatha Iyer, *City Magistrate*, Bangalore, is granted casual leave for eleven days under Section 172 of the Mysore Service Regulations from the 17th to 27th February 1896 both days inclusive.

Extracts.

THE BURNING TREE OF BURMAH

There has lately been added to the collection of plants at the Botanic Gardens at Madras, India, a specimen of a strange tree It is in size scarcely more than a bush, but others of its species are known to have attained, *in their habitat in the Himalayas, Burmah* and Malay Peninsula, the dimensions of a large tree, ie fifty to seventy five feet in *height The Madras specimen is surrounded* by a strong railing which bears the sign "Dangerous—all persons are forbidden to *touch the leaves or branches of this tree*", It is, therefore, a forbidden tree in the midst of the garden, but no one is tempted to touch it, for it is known to be a "burning tree" This name is a misnomer, for the tree stings rather than burns Beneath the leaves are stings comparable to those nettles which when touched pierce the skin and secrete a fluid which certainly has a burning effect The sting leaves no outward sign, but the sensation of pain persists sometimes for months and is especially keen on damp days, or when the place which has been wounded is plunged in water The natives in the parts of Burmah where this tree grows are *in such terror of it* that they fly in haste when they perceive the peculiar odour which it exhales If they hap*pen to touch it they fall on the ground* and roll over and over on the earth with shrieks Dogs touched by it yelp and run, biting and *tearing the part of their bodies* that has been touched A horse which had come in contact with a "burning tree" ran like a mad thing, biting everything and everybody that it could reach A missionary at Mandalay, who investigated a leaf of the plant with his fore*finger, suffered agony for several weeks, and* for ten months felt occasional darting pain in his finger —E G

ಕರ್ನಾಟಕ ಪ್ರಕಾಶಿಕಾ.

೧೮೯೬ನೇ ಇಸವಿ ಫೆಬ್ರವರಿ ೨೪ನೇ ತಾ|| ಸೋಮವಾರ

ಮೈಸೂರು ರೆಯಿಲ್ವೆ ಪೋಲೀಸ್

ಈ ದೇಶದ ರೆಯಿಲ್ ಮಾರ್ಗಗಳಿಗೆ ಸಂಬಂಧಪಟ್ಟ ಪೋಲೀಸ್ ಅಧಿಕಾರವನ್ನು ಬ್ರಿಟಿಷ್ ಸರ್ಕಾರದವರು ಸ್ವಾಯುಂ ವಹಿಸಿಕೊಳ್ಳಬೇಕೆಂದು ಯೋಚಿಸುತಲಿರುವಂತೆ, ಈಗ್ಗೆ ಒಂದೆರಡು ವರ್ಷಗಳ ಕಾಲದ ಮೊದಲು ಇಲ್ಲಿ ಪ್ರಚುರಗೊಂಡಿದ್ದ ಪ್ರವಾದವು ಈಗ ಕಾರ್ಯತಃ ಆಚರಣೆಯೊಳಗೆ ತರಲ್ಪಟ್ಟಿರುವಂತೆ, ಈಚೆಗೆ ಇಂಡ್ಯ ಗವರ್ನಮೆಂಟಿನವರು ಅದೇ ವಿಷಯದಲ್ಲಿ ರಚಿಸಿ ಪ್ರಕಟಿಸಿರುವ ನಿರ್ಣಯಗಳ ಮೂಲಕ ಸ್ಪಷ್ಟವಾಗುತಿದೆ. ಈ ನೂತನ ಏರ್ಪಾಡಿನ ದೆಸೆಯಿಂದ (೧) ಜೋಲಾರಪಟ್ಟಯಿಂದ ಬೆಂಗಳೂರು ಸ್ಟೇಷನ್ ವರೆಗೆ; (೨) ಬೆಂಗಳೂರು ಸ್ಟೇಷನ್ನಿಂದ ಹರಿಹರದ ರೆಯಿಲ್ವೆ ಸ್ಟೇಷನ್ ವರೆಗೆ; (೩) ಯಶವಂತಪುರದ ಜಂಕ್ಷನ್ ಸ್ಟೇಷನ್ ಮೊದಲು ಈ ದೇಶದ ಸರಹದ್ದಾದ ಹಿಂದೂಪುರದ ಸ್ಟೇಷನ್ ವರೆಗೆ, (೪) ಕೋಲಾರದ ಚಿನ್ನದ ಗನಿಗಳ ರೆಯಿಲ್ ರಸ್ತೆ ಇವೆಲ್ಲವು ಬ್ರಿಟಿಷ್ ಸರ್ಕಾರದ ಪೋಲೀಸ್ ಇಲಾಖೆಗೆ ಸೇರಿದಂತಾಯಿತು. ಈಗ ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಜಾರಿಯೊಳಿರುವ ಕಾನೂನುಗಳೆಲ್ಲವು ಮೇಲೆ ತಿಳಿಸಲ್ಪಟ್ಟಿರುವ ರೈಲ್ ಮಾರ್ಗಗಳಲ್ಲಿ ಜಾರಿಯೊಳಿರುವಂತೆ ಭಾವಿಸಲ್ಪಡತಕ್ಕದ್ದೆಂದು ಇಂಡ್ಯ ಗವರ್ನಮೆಂಟಿನವರು ವಿಧಿಸಿರುತ್ತಾರೆ. ಸದರೀ ರೆಯಿಲ್ ಮಾರ್ಗಗಳಲ್ಲಿ ಕ್ರಿಮಿನಲ್ ಅಧಿಕಾರವನ್ನು ಚಲಾಯಿಸತಕ್ಕ ಬಗ್ಗೆ, ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೇ ರೆಯಿಲ್ವೇ ಮ್ಯಾಜಿಸ್ಟ್ರೇಟರಾಗಿರುತ್ತ, ಇವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗಿರುವ ಅಧಿಕಾರವನ್ನೆಲ್ಲ ಪಡೆದಿರುವರು. ರೆಯಿಲ್ವೇ ಪೋಲೀಸ್ ಸೂಪರಿಂಟೆಂಡೆಂಟರೊಬ್ಬರು ಮುಕರರ್ರು ಮಾಡಲ್ಪಟ್ಟು ಅವರಿಗೆ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರ ಅಧಿಕಾರಗಳೂ, ಅವ್ವಲ್ ತರಗತಿ ಮ್ಯಾಜಿಸ್ಟ್ರೇಟರಿಗೆ ಉಂಟಾದ ಸಾಮಾನ್ಯ ಅಧಿಕಾರಗಳೂ ಕೊಡಲ್ಪಡುವವು. ಮೈಸೂರು ರೆಸಿಡೆಂಟರವರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲವರ ಅಧಿಕಾರವನ್ನೂ, ಲೋಕಲ್ ಗವರ್ನಮೆಂಟಿನ ಅಧಿಕಾರವನ್ನೂ ಪಡೆದಿರುವರು. ರೆಸಿಡೆಂಟರ ಫಸ್ಟ್ ಅಸಿಸ್ಟೆಂಟರು, ರೆಯಿಲ್ವೆ ಮ್ಯಾಜಿಸ್ಟ್ರೇಟರು ಅಥವಾ ರೆಯಿಲ್ವೇ ಪೋಲೀಸ್ ಸೂಪರಿಂಟೆಂಡೆಂಟರು ಯಾವ ತಕ್ಸೀರುಗಳ ವಿಷಯದಲ್ಲಿ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಚಲಾಯಿಸುತ್ತಾರೆಯೊ, ಅದೇ ವಿಷಯದಲ್ಲಿ ಸೆಷನ್ ಕೋರ್ಟಿನವರ ಅಧಿಕಾರವು ಪಡೆದಿರುವರು ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರು ಯಾವ ತಕ್ಸೀರುಗಳ ವಿಷಯದಲ್ಲಿ ಸೆಷನ್ ಕೋರ್ಟಿನ ಅಧಿಕಾರವನ್ನು ಚಲಾಯಿಸುವರೊ ಅದೇ ತಕ್ಸೀರ್‌ಗಳ ವಿಷಯದಲ್ಲಿ ಮೈಸೂರು ರೆಸಿಡೆಂಟರವರು ಹೈಕೋರ್ಟಿನ ಅಧಿಕಾರಗಳಂ ಪಡೆದಿರುವರು.

ಸದರೀ ರೆಯಿಲ್ ಮಾರ್ಗಗಳೊಳು ಸಿವಿಲ್ ಅಧಿಕಾರದ ವಿಷಯದಲ್ಲಿ ೫೦೦ ರೂಪಾಯಿಗಳಿಗೆ ಮೇಲ್ಪಡದ ಮೊಕದ್ದಮೆಗಳಂ ಹಿಡಿಯುವದಕ್ಕೆ ಒಂದು, ೫೦ ರೂಪಾಯಿಗಳಿಗೆ ಮೇಲ್ಪಡದ ಮೊಕದ್ದಮೆಗಳಂ ಹಿಡಿಯುವದಕ್ಕೆ ಒಂದು, ಈ ಮೇರೆ ಯೆರಡು ಸ್ಮಾಲ್‌ಕಾಸ್ ಕೋರ್ಟುಗಳು ಯೇರ್ಪಡಿಸಲ್ಪಡುವವು. ಈ ಯೆರಡರಲ್ಲಿ ಮೊದಲನೆಯದಕ್ಕೆ ಸಿವಿಲ್ ವ ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ್ ಜಡ್ಜಿಯವರೂ, ಎರಡನೆಯದಕ್ಕೆ ರೆಯಿಲ್ವೆ ಪೋಲೀಸ್ ಸೂಪರಿಂಟೆಂಡೆಂಟರೂ ಜಡ್ಜಿಗಳಾಗಿರುವರು. ದಾವಾ ಮೊಬಲಗು ಯೆಷ್ಟಾಗಿರಲಿ, ಅಸಲ್ ವ್ಯಾಜ್ಯಗಳಂ ಹಿಡಿಯುವದಕ್ಕೆ ಡಿಸ್ಟ್ರಿಕ್ಟ್ ಕೋರ್ಟಿನ ಅಧಿಕಾರಗಳೊಡನೆ ಒಂದು ಡಿಸ್ಟ್ರಿಕ್ಟ್ ಕೋರ್ಟ್ ಇರುವದು. ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ್ ಜಡ್ಜಿಯವರು ಡಿಸ್ಟ್ರಿಕ್ಟ್ ಜಡ್ಜಿಯಾಗಿರುವರು. ಇವರು ಮಾಡುವ ಫೈಸಲಿನಮೇಲೆ, ಅಪೀಲುಗಳನ್ನು ಹಿಡಿಯುವ ಅಧಿಕಾರವು ಮೈಸೂರು ರೆಸಿಡೆಂಟರವರಿಗೆ ಕೊಡಲ್ಪಟ್ಟಿರುತದೆ.

ಈ ಯೇರ್ಪಾಡುಗಳ ದೆಸೆಯಿಂದ ಮೇಲೆ ತಿಳಿಸಲ್ಪಟ್ಟಿರುವ ರೈಲ್ ಮಾರ್ಗಗಳಲ್ಲಿ ನಡೆಯುವ ಕ್ರಿಮಿನಲ್ ವ ಸಿವಿಲ್ ಮೊಕದ್ದಮೆಗಳಿಗೆ ಸಂಬಂಧಪಟ್ಟ ಕಕ್ಷಿಗಾರರೂ ಅವರವರ ತರಫ್ ಸಾಕ್ಷಿಗಳೂ ವಿಚಾರಣೆ ಬಗ್ಗೆ ಬೆಂಗಳೂರಿಗೆ ಬರಬೇಕಾದವರೆಂದು ಸ್ಪಷ್ಟವಾಗುತಿದೆ. ಪೋಲೀಸ್ ಸೂಪರಿಂಟೆಂಡೆಂಟರಿಗೆ ಕ್ರಿಮಿನಲ್ ಅಧಿಕಾರವು ಕೊಡಲ್ಪಟ್ಟದರಿಂದ ಅಪರಾಧಿಗಳೆಂದು ತಮಗೆ ಕಂಡುಬರುವವರನ್ನು ಅವರೇ ಚಾರ್ಜ್ ಮಾಡುವದಕ್ಕೂ ಅವರನ್ನು ದಂಡಿಸುವದಕ್ಕೂ ಒಂದು ಸೌಲಭ್ಯ ಕಲ್ಪಿಸಿದಂತೆ ಆಗುತದೆ. ಈಗ ಪೋಲೀಸಿನವರಿಂದ ತರಲ್ಪಡುವ ಮೊಕದ್ದಮೆಗಳು ಅನೇಕ ಸಂದರ್ಭಗಳಲ್ಲಿ ಮ್ಯಾಜಿಸ್ಟ್ರೇಟರುಗಳಿಂದ ವಜಾ ಮಾಡಲ್ಪಟ್ಟು ಅಪರಾಧಿಗಳು ನಿರಪರಾಧಿಗಳಾಗುತ್ತಾರೆಂದು ಪೋಲೀಸಿನವರು ಮಾಡುತಲಿರುವ ಪುಕಾರೆಗೆ ರೆಯಿಲ್ವೆ ಮಾರ್ಗಗಳ ವಿಷಯದಲ್ಲಿ ಅವಕಾಶವಿಲ್ಲದಂತಾಯಿತು. ಅಪರಾಧಿಗಳನ್ನು ಶೋಧಿಸತಕ್ಕ ಮತ್ತು ಅವರಂ ವಿಚಾರಿಸತಕ್ಕ ಅಧಿಕಾರವು ಏಕ ವ್ಯಕ್ತಿಯಲ್ಲೇ ನೆಲೆಗೊಳಿಸಲ್ಪಟ್ಟದರಿಂದ ಈ ಮೂಲಕ ಪ್ರಜೆಗಳಿಗೆ ಉಂಟಾಗಬಹುದಾದ ಸುಖವು ಸ್ಪಷ್ಟವಾಗಿಯೇ ಇರುತಿದೆ. ಬೆಂಗಳೂರು ರೆಯಿಲ್ವೆ ಸ್ಟೇಷನ್ ಸರಹದ್ದಿನ ಹೊರಗಡೆಯಿಂದ ನಂಜನಗೂಡು ರೆಯಿಲ್ವೆ ಸ್ಟೇಷನ್ ವರೆಗೆ ಪೋಲೀಸ್ ಅಧಿಕಾರವು ಸದ್ಯಃ ಮೈಸೂರು ಸರ್ಕಾರಕ್ಕೆ ಉಳಿಸಲ್ಪಟ್ಟದ್ದಾಗ್ಯೂ ನಂಜನಗೂಡಿನಿಂದ ರಸ್ತೆಯು ಈರೋಡ್ ಲೈನಿಗೆ ಸೇರಿಸಲ್ಪಟ್ಟಮೇಲೆ ಇತರ ರೆಯಿಲ್ ರಸ್ತೆಗಳ ವಿಷಯದಲ್ಲಿ ಮಾಡಲ್ಪಟ್ಟ ನೂತನ ಯೇರ್ಪಾಡುಗಳೆಲ್ಲವು ಅಲ್ಲಿಯೂ ಜಾರಿಯೊಳು ತರಲ್ಪಡುವದರಲ್ಲಿ ಸಂಶಯ ಲೇಶವೂ ನಮ್ಮ ಬುದ್ಧಿಗೆ ತೋರಿಬರಲಿಲ್ಲವು. ಈ ಯೇರ್ಪಾಡುಗಳೆಲ್ಲವು ಕ್ಷಿಪ್ರದಲ್ಲಿ ಜಾರಿಯೊಳು ತರಲ್ಪಡುವವೆಂದು ಕೇಳುತ್ತೇವೆ

ಈ ಷಹರಿನ ಜಲವಸತಿ

ಈ ಪ್ರಾಂತಿಗೆ ಕಾಲವರ್ಷವಿಲ್ಲದೆ ಆಗಿಂದಾಗ್ಗೆ ಪ್ರಾಪ್ತವಾಗುವ ಜಲಕಷ್ಟವಂ ನಿವಾರಿಸಬೇಕೆಂಬ ಉದ್ದೇಶದೊಡನೆ ಮೈಸೂರು ಗವರ್ನಮೆಂಟಿನವರು ಬಹ್ವರ್ಥ ವ್ಯಯದ ಮೂಲಕ ಇಲ್ಲಿಗೆ ಸುಮಾರು ಹದಿನೈದು ಮೈಲಿಗಳ ದೂರದಲ್ಲಿರುವ ಹೆಸರುಘಟ್ಟ ವೆಂಬ ಸ್ಥಳದಲ್ಲಿ ಬಹಳ ದೊಡ್ಡದಾಗಿ ಒಂದು ಕೆರೆಯನ್ನು ಕಟ್ಟಿಸಿ, ಅಲ್ಲಿಂದ ನಳ್ಳಿಗಳ ಮೂಲಕ ನೀರು ತರುವದಕ್ಕೆ ಆವಶ್ಯಕಗಳಾದ ಕಾಮಗಾರಿಗಳು ಬಹಳಮಟ್ಟಿಗೆ ನಡೆಸಿ ಈಗ ಬೀದಿ ಬೀದಿಗೆ ನಳ್ಳಿಗಳನ್ನು ಇಡುತಲಿದ್ದಾರೆ. ಇನ್ನು ನಾಲ್ಕಾರು ತಿಂಗಳ ಕಾಲದೊಳಗಾಗಿ ಅದು ಪೂರ್ತಿಯನ್ನೈದಿ ಪ್ರಜೆಗಳಿಗೆ ಜಲಕಷ್ಟ ನಿವೃತ್ತಿಯಾಗಬಹುದೆಂದು ತೋರುತಿದೆ. ಇದು ಹೀಗಿರುವಲ್ಲಿ, ಇಲ್ಲಿನ ಮಿಲಿಟರಿ ಸ್ಟೇಷನಿಗೆ ಜಲವಸತಿಯನ್ನುಂಟುಮಾಡಬೇಕೆಂದು ಅಲ್ಲಿನ ಅಧಿಕಾರಿಗಳು ಯೋಚಿಸಿ, ಮಾಲಿಗಾಲ್ ಎಂಬ ಪ್ರದೇಶದಲ್ಲಿ ಕೆರೆಯಂ ಕಟ್ಟಿಸಬೇಕೆಂದು ಯತ್ನಿಸಿ, ಸುಮಾರು ಒಂದು ಲಕ್ಷ ರೂಪಾಯಿಗಳ ವರೆಗೆ ರೈತರಿಗೆ ಕಂಪೆನ್ಸೇಷನ್ ಕೊಟ್ಟು ಅವರ ಜಮೀನುಗಳನ್ನೆಲ್ಲ ವಶಕೊಂಡು ಕಾಮಗಾರಿಗೆ ಪ್ರಾರಂಭಿಸಬೇಕಾದ ಕಾಲದಲ್ಲಿ, ಅಲ್ಲಿನ ಜನರು ವೈಸ್‌ರಾಯ್ ಸಾಹೇಬರವರು ಇಲ್ಲಿಗೆ ಬಂದಿದ್ದ ಕಾಲದಲ್ಲಿ, ಹೆಸರುಘಟ್ಟದ ನೀರಿನಿಂದಲೇ ತಮಗೂ ನೀರು ಕೊಡಿಸಬೇಕೆಂದು ಅರ್ಜಿ ಮೂಲಕ ಪ್ರಾರ್ಥಿಸಲಾಗಿ ಅವರ ಅಪೇಕ್ಷಾನುಸಾರ ವೈಸ್‌ರಾಯ್ ಸಾಹೇಬರವರು ಮಂಜೂರ್ಮಾಡಿ ಮೈಸೂರು ಗವರ್ನಮೆಂಟನ್ನು ಕೇಳಲಾಗಿ ಅವರು ಕೆಲವು ಷರತ್ತುಗಳಮೇಲೆ ಹೆಸರುಘಟ್ಟದ ನೀರಿನಿಂದ ಮಿಲಿಟರಿ ಸ್ಟೇಷನಿಗೂ ನೀರು ಕೊಡುವದಾಗಿ ಒಪ್ಪಿಕೊಂಡು, ಆಬಗ್ಗೆ ಪೂರ್ವಭಾವಿಯಾಗಿ ನಡೆಸಲ್ಪಡಬೇಕಾದ ಯೇರ್ಪಾಡುಗಳೆಲ್ಲವಂ ಪೂರ್ತಿ ಮಾಡಿರುವಂತೆ ಕೇಳುತ್ತೇವೆ.

ಹಿಂದೆ ಮೈಸೂರು ಸರ್ಕಾರದ ಹಣದಿಂದ ಕಟ್ಟಿಸಿದ ಸ್ಯಾಂಕಿ ರಿಜರ್ವಾಯರ್ ಎಂಬ ಕೆರೆಯನ್ನು ಮಿಲಿಟರಿ ಸ್ಟೇಷನ್ ಅಧಿಕಾರಿಗಳು ಆಕ್ರಮಿಸಿಕೊಂಡು, ಇಲ್ಲಿನ ಧರ್ಮಾಂಬುಧಿ ಕೆರೆಯಲ್ಲಿ ನೀರು ಕಡಿಮೆಯಾದ ಕಾಲದಲ್ಲಿ ಕೇವಲ ಆಸಮ್ಮ

ಶೀಘ್ರದಲ್ಲೇ ಅಳತೆ ಮಾಡಿ ನೀರು ಕೊಡುತ್ತೇವೆಂಬ ತ್ವರೆಯಾಗಿ, ಹೆಸರುಘಟ್ಟದ ನೀರಿನ ವಿಷಯದಲ್ಲೂ ಅಂತ ನಿರ್ಬಂಧಗಳುಂಟಾಗಬಹುದೆಂತಲೂ ಮರುತು ನೀರಿನ ವಿಷಯದಲ್ಲಿ ತಾವು ಕೊಡಬೇಕಾಗಿ ಬರುವ ಜಾಸ್ತೀ ಕಂದಾಯ ತಮಗೆ ತಪ್ಪಿದ್ದಲ್ಲವೆಂತಲೂ ಪೇಟೆಯ ಜನರು ಬಹಳ ಅಸಂತುಷ್ಟಿಯೊಡನೆ ಕೇವಲ ಭೀತರಾಗಿರುತ್ತಾರೆ. ಇದು ಅಸಂಭವವೆಂದು ನಾವು ಯೋಚಿಸಲಾರೆವು. ಮುಖ್ಯವಾಗಿ ನೀರಿನ ವಿಷಯದಲ್ಲಿ ಮೈಸೂರು ಸರ್ಕಾರಕ್ಕೆ ಬ್ರಿಟಿಷ್‌ನವರ, ತತ್ರಾಪಿ ಬ್ರಿಟಿಷ್ ಮಿಲಿಟರಿ ಯವರ ಸಂಬಂಧ ಮುಟ್ಟಾಗದೆ ಇದ್ದರೆ ಪೇಟೆಯ ಪ್ರಜೆಗಳಿಗೆ ಸುಖಕರವಾಗಿರುವುದು. ಈಗ ಅದಕ್ಕವಕಾಶ ತಪ್ಪಿಹೋದಬಗ್ಗೆ ಚಿಂತಿಸುತ್ತೇವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಂದ ಕೊಡಲ್ಪಟ್ಟ ಹುಕುಂ ಅನುಸರಿಸಿ, ದುಬಾರೆ ಬತ್ತಿಯನ್ನು ಕುರಿತ ಕಾನೂನು ಪುನಾ ವಿಮರ್ಶೆಗೆ ಗುರಿ ಮಾಡಲ್ಪಡುವುದು.

ಈಚೆಗೆ ಕಲ್ಕತ್ತೆಯ ಟಂಕಶಾಲೆಯಲ್ಲಿ, ಎರಡಾಣೆ, ಪಾವಲಿ, ಅರ್ಧರೂಪಾಯಿ, ಈ ಬಾಬತು ಚಿಲ್ಲರೆ ನಾಣ್ಯಗಳು ದಿನ ಒಂದಕ್ಕೆ ಒಂದು ಲಕ್ಷ ರೂಪಾಯಿಗಳ ಮೇರೆ ಛಾಪಿಸಲ್ಪಡುವಂತೆ ತಿಳಿಯಬರುತದೆ.

ಬಂಗಾಳ ದೇಶದೊಳಗೆ, ಗೌರವ್ಯವಾದ ಒಂದು ಹಿಂದು ಕುಟುಂಬಕ್ಕೆ ಸೇರಿದ ಬಾಲಕನೊಬ್ಬನು ಮಹಮ್ಮದೀಯ ಮತಕ್ಕೆ ಸೇರಿಹೋದನೆಂತಲೂ, ಕಳೆದ ಹನ್ನೆರಡು ತಿಂಗಳೊಳಗಾಗಿ, ಈತನೊಡನೆ ಮೂವರು ಹಿಂದುಗಳು ಸದರೀ ಮತವನ್ನವಲಂಬಿಸಿದರೆಂತಲೂ, ಉತ್ತರದೇಶದ ಪತ್ರಿಕೆಯೊಂದು ತಿಳಿಸುತಿದೆ

ನೇಪಾಲ ಸಂಸ್ಥಾನದ ಮಹಾರಾಜರವರು ಶೀಘ್ರದಲ್ಲಿ ಇಂಗ್ಲಾಂಡಿಗೆ ಹೋಗಿ ಬರಬೇಕೆಂದು ಯೋಚಿಸುತಲಿರುವಂತೆ ಈಚೆಗೆ ವೃತ್ತಾಂತಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತಲಿತ್ತಷ್ಟೆ. ಸದರೀ ಮಹಾರಾಜರವರ ಪ್ರಸಕ್ತ ಪ್ರಯಾಣವು ಈ ಸಂವತ್ಸರದಲ್ಲಿ ಮುಲ್ತವೀ ಮಾಡಲ್ಪಟ್ಟಂತೆ ಈಚೆಗೆ ತಿಳಿಯಬರುತದೆ.

೧೮೮೨ನೆಯ ಇಸವಿ ಮೊದಲು ೮೭ನೆಯ ಇಸವಿಯ ವರೆಗೆ ಪಂಜಾಬ್ ದೇಶದ ಲೆಫ್ಟಿನೆಂಟ್ ಗವರ್ನರಾಗಿದ್ದು ನಿವೃತ್ತಿ ಸುಖದಬಗ್ಗೆ ತಮ್ಮ ಅಧಿಕಾರನಂತರ ಸ್ವದೇಶಕ್ಕೆ ಹೊರಟುಹೋದ ಸರ್ ಚಾರ್ಲಿಸ್ ಎಚಿಸನ್ ಸಾಹೇಬರವರು ಕಳೆದವಾರದಲ್ಲಿ ಕಾಲಗತಿಯನ್ನೈದಿದರೆಂದು ತಂತಿವೃತ್ತಾಂತದ ಮೂಲಕ ತಿಳಿಯಬರುತದೆ.

ಈಚೆಗೆ ಒಂದೆರಡು ವಾರಗಳ ಹಿಂದೆ, ಸಿಂಧು ದೇಶಕ್ಕೆ ಸೇರಿದ ಸುಕ್ಕೂರೆಂಬ ಸ್ಥಳಕ್ಕೆ ಐದು ಮೈಲಿಗಳ ದೂರದಲ್ಲಿರುವ ಒಂದು ಗ್ರಾಮಕ್ಕೆ ದರೋಡೆಕಳ್ಳರು ನುಗ್ಗಿ, ಒಬ್ಬನನ್ನು ಕೊಂದು, ಹನ್ನೆರಡು ಮಂದಿಯನ್ನು ಚೆನ್ನಾಗಿ ಹೊಡೆದು ಘಾಯಗಳುಮಾಡಿ, ಅನೇಕ ಮನೆಗಳಿಗೆ ಬೆಂಕಿ ಹಚ್ಚಿ ಸುಟ್ಟುಹಾಕಿ ಎರಡುಸಾವಿರ ರೂಪಾಯಿಗಳು ಬಾಳುವಷ್ಟು ಮಾಲುಗಳೊಡನೆ ಪರಾರೀಯಾದರು.

ಈತಿಂಗಳ ೧೯ನೇ ತಾರೀಖಿನಲ್ಲಿ, ಮದರಾಸ್ನೊಳ್ಳು, ನಾಲ್ಕು ವರ್ಷಗಳ ವಯಸ್ಸುಳ್ಳ ಒಬ್ಬ ನೇಟಿವ್ ಹುಡುಗಿಯು ತನ್ನ ಮನೆಯ ಬಾಗಿಲೊಳು ಆಡುತ್ತಿರುವಲ್ಲಿ ಹ್ಯಾಗೂ ಅವಳ ಹೊಟ್ಟೆಯ ಮೇಲೆ ಒಂದು ಸಣ್ಣ ಚೇಳು ಹೊಡೆದು, ಅದರ ವಿಷ ನಿವೃತ್ತಿಯಬಗ್ಗೆ ಮಾಡಲ್ಪಟ್ಟ ಚಿಕಿತ್ಸೆಗಳೆಲ್ಲವು ವ್ಯರ್ಥವಾಗಿ ಒಂದುಘಂಟೆಯ ಕಾಲದೊಳಗಾಗಿ ಮೃತಪಟ್ಟಳೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ.

ಕಲ್ಕತ್ತೆಯ ಬೆಥೂನ್ ಕಾಲೇಜ ಪ್ರಥಮೋಪಾಧ್ಯಾಯನಿಯಾದ ಮಿಸ್ ಚಂದ್ರಮುಖಿಘೋಸ್ ಎಂ. ಎ. ಎಂಬವರು ಈಗ ಮದರಾಸಿಗೆ ಬಂದಿರುವಂತೆ ಅಲ್ಲಿನ ಪತ್ರಿಕೆ ಯೊಂದು ತಿಳಿಸುತಿದೆ ಮಿಸ್ ಎಂಬ ವಿಶೇಷಣಪದ ಪ್ರಯೋಗದಿಂದ ಆಕೆಯು ಅವಿವಾಹಿತೆಯೆಂದರ್ಥವಾಗುತಿದೆ. ಇದುವರೆಗೆ ವಿವಾಹವಿಲ್ಲದಿರುವದರಿಂದ ಆಕೆಗೆ ಬಾಲ್ಯವಯಸ್ಸೆಂದು ಸ್ಪಷ್ಟವಾಗಿ ಕಾಣುತಿದೆ. ಹೆಂಗಸರು ಈ ವಯಸ್ಸಿನಲ್ಲಿ ಎಂ. ಎ. ಪರೀಕ್ಷೆಯಂ ಕೊಟ್ಟು ಒಂದು ಕಾಲೇಜ್ ಪಾಠಶಾಲೆಯಲ್ಲಿ ಪ್ರಥಮೋಪಾಧ್ಯಾಯಿನಿಯರಾಗಿರುವುದು ಇಂಡ್ಯ ದೇಶದಲ್ಲಿ ಅಶ್ರುತಪೂರ್ವವಾದ ವಿಷಯವೆಂದೆಣಿಸುತ್ತೇವೆ.

ನೋಟಿಸ್.

೧೮೯೬ನೇ ಇಸವಿ ಏಪ್ರಿಲ್ ೧ನೇ ತಾರೀಖ್ ಮೊದಲು ೧೮೯೭ನೇ ಇಸವಿ ಮಾರ್ಚಿ ೩೧ನೇ ತಾರೀಖ್‌ವರೆಗೆ, ಹೊಸೂರು ರಿಮೌಂಟ್ ಡೆಪೋವಿಗೆ ಹುರಳಿ ಸರಬರಾಯ್ ಬಗ್ಗೆ ಸೀಲ್ ಮಾಡಿ ಕಳುಹಿಸಲ್ಪಡುವ ಹೊಸ ದರಖಾಸ್ತುಗಳನ್ನು ಹೊಸೂರು ರಿಮೌಂಟ್ ಡೆಪೊ ಸೂಪರಿಂಟೆಂಡೆಂಟರವರು ಸನ್ ೧೮೯೬ನೇ ಇಸವಿ ಮಾರ್ಚಿ ೯ನೇ ತಾರೀಖಿನ ಮಧ್ಯಾಹ್ನ ೨ ಘಂಟೆ ಬರಮಾಡಿಕೊಳ್ಳುವರು.

ಇತರ ತಪ್ಸೀಲುಗಳ ವಿಷಯದಲ್ಲಿ ೧೮೯೫ನೇ ಇಸವಿ ನವಂಬರ್ ೯ನೇ ಮಂಗಳವಾರ ೪೮ನೇ ನಂಬರ್ ಪೋರ್ಟ್‌ಸೇಂಟ್‌ಜಾರ್ಜ್ ಗೆಜೆಟ್ಟಿನ ೧೩೦೨ನೆ ಪುಟವನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ರಿಮೌಂಟ್ ಡೆಪೊ,
ಹೊಸೂರು.
೧—೨—೯೬.

E Chalmers Lt, Col
Suptt, Remount Depot

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

ಇಲ್ಲಿನ ಬ್ರಿಟಿಷ್ ರೆಸಿಡೆಂಟರವರು ಈಗ ಸರ್ಕ್ಯೂಟಿನಲ್ಲಿದ್ದಾರೆಯಷ್ಟೆ. ಸದರೀ ಸಾಹೇಬರವರು ನಾಳೆಯದಿನ ಇಲ್ಲಿಗೆ ವಾಪಸ್ ಬಂದು ಸೇರುವರೆಂದು ಕೇಳುತ್ತೇವೆ.

ಚಿಕ್ಕಮಗಳೂರಲ್ಲಿರುವ ಪ್ರಮುಖರಾದ ದೊಡ್ಡಮನುಷ್ಯರು ಕೆಲವರು ಸೇರಿ ಅಲ್ಲಿ ವ್ಯವಸಾಯೋಪಯೋಗಿಯಾದ ಒಂದು ಬ್ಯಾಂಕನ್ನು ಸ್ಥಾಪಿಸಬೇಕೆಂದು ಯೋಚಿಸುತಲಿರುವಂತೆ ತಿಳಿದು ಸಂತೋಷಿಸುತ್ತೇವೆ.

ಒಬ್ಬಾನೊಬ್ಬ ನಾಟುಕೋಟೆ ಶೆಟ್ಟಿಯು ಶೃಂಗೇರಿಯಲ್ಲಿ ಚಂದ್ರಮೌಳೀಶ್ವರಸ್ವಾಮಿಗೆ ೨-೩ ಲಕ್ಷ ರೂಪಾಯಿಗಳನ್ನು ಮುಟ್ಟಿಸಿ ಒಂದು ದೇವಸ್ಥಾನವನ್ನು ಕಟ್ಟಿಸುತ್ತಾರೆಂದು ಕೇಳುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾಗಿದ್ದು ಹೈದರಾಬಾದ್‌ನಲ್ಲಿ ಮೃತಪಟ್ಟ ಮ|| ಸುಜಾಯತ್ ಅಲ್ಲೀಖಾನರವರ ಭಾರ್ಯೆಯವರು ಮೈಸೂರು ದೇಶದ ಬಾಲಿಕಾ ಪಾಠಶಾಲೆಗಳ ಇನ್ಸ್‌ಪೆಕ್ಟ್ರೆಸ್ಸಾಗಿ ನೇಮಕರಾಗ್ಯಲ್ಪಟ್ಟಂತೆ ಒಳದೇಶದ ಡೆಯಿಲೀ ಪೋಸ್ಟ್ ಪತ್ರಿಕೆ ತಿಳಿಸುತಿದೆ.

ಮೈಸೂರು ಸ್ಪೆಷ್ಯಲ್ ಮೊಕದ್ದಮೆಯಲ್ಲಿ ಅಪರಾಧಿಗಳಾಗಿದ್ದ ಇಬ್ಬರನ್ನು ಬಿಡುಗಡೆಮಾಡಿ ನಂದಿದುರ್ಗ ಡಿವಿಜನ್ ಸೆಷನ್ ಜಡ್ಜಿಯವರು ಕೊಟ್ಟ ಫೈಸಲಿನಮೇಲೆ ಮೈಸೂರು ಗವರ್ನ್‌ಮೆಂಟಿನವರು ಅಪೀಲ್ ಮಾಡಿರುವಂತೆ ಹೇಳಿಕೊಳ್ಳುತ್ತಾರೆ.

ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಮೆ|| ಮೆಕ್ ನರ್ತ್ ಯಂಗ್ ಸಾಹೇಬರವರು ಶೀಘ್ರದಲ್ಲಿ ಪಂಜಾಬದೇಶದ ಲೆಫ್ಟಿನೆಂಟ್ ಗವರ್ನರಾಗಿ ನೇಮಕರಾಗಲ್ಪಟ್ಟು ಹೊರಟುಹೋಗುವರೆಂದು ಈಚೆಗೆ ಯುಂಟಾದ ಪ್ರವಾದವನ್ನು ದಿ ಟೈಮ್ಸ್ ಆಫ್ ಇಂಡಿಯ ಎಂಬ ಪತ್ರಿಕೆಯು ದೃಢಪಡಿಸುತಿದೆ.

ಮೈಸೂರಲ್ಲಿ ಸ್ಥಾಪಿಸಲ್ಪಟ್ಟಿರುವ ಕೈಗಾರಿಕೆಗಳನ್ನು ಕಲಿಸುವ ಪಾಠಶಾಲೆಯಿಂದ ಕಳೆದ ವರುಷದಲ್ಲಿ ಸರ್ಕಾರಕ್ಕೆ ೬೪೧ ಚಿಲ್ಲರೆ ರೂಪಾಯಿ ಉತ್ಪತ್ತಿಯೂ, ಆ ಸಾಲಿಗೆ ಒಟ್ಟು ೧೦,೫೨೮ ರೂಪಾಯಿಗಳು ಖರ್ಚಾಯಿತೆಂತಲೂ, ಈವರುಷಕ್ಕೆ ೧೨೩೪೦ ರೂಪಾಯಿಗಳ ಖರ್ಚನ್ನು ಸಾಂಗ್ಷನ್ ಮಾಡಿದಾರೆಂತಲೂ ತಿಳಿಯಬರುತಿದೆ.

ಕಾಲಸ್ಥಿತಿ—ಬಿಸಿಲು ದಿನೇದಿನೆ ಜೋರಾಗುತಲಿದೆ. ಚಳಿ ಮರೆಯಾಯಿತು ಗಾಳಿಯ ದೆಸೆಯಿಂದ ಧೂಳುಯೆದ್ದು ಹಗಲು ಹತ್ತು ಘಂಟೆಯಮೇಲೆ ಹೊರಗಿನ ಸಂಚಾರವು ಕಷ್ಟವಾಯಿತು. ವಾಸಗೃಹಗಳ ಬಾವಿಗಳಲ್ಲಿ ನೀರು ಬತ್ತಿತು, ಆಹಾರ ಪದಾರ್ಥಗಳ ಧಾರಣೆಗಳು ಒಂದೇ ವಿಧವಾಗಿವೆ. ಸಿಡುಬುರೋಗದ ಬಾಧೆ ವಿನಾ ಇನ್ನೇನು ಇಲ್ಲವು.

ಮುಂದಿನ ಶುಕ್ರವಾರ ಹೋಳಿಕೋತ್ಸವವಾದುದರಿಂದ ಆಬಗ್ಗೆ ವಿಶಿಷ್ಟ ಇಲಾಖೆಗಳಿಗೂ ಮಾಮೂಲ್ ಅನುಸರಿಸಿ ರಜಾ ಕೊಡಲ್ಪಡುವುದು. ಮರುದಿನ ಈ ತಿಂಗಳಲ್ಲಿ ಕಡೇ ಶನಿವಾರವಾದುದರಿಂದಲೂ, ಅದರ ಮರುದಿನ ಆದಿತ್ಯವಾರವಾದುದರಿಂದಲೂ ಅನುಸ್ಯೂತವಾಗಿ ಸರ್ಕಾರ್ ಉದ್ಯೋಗಸ್ಥರಿಗೆಲ್ಲ ಮೂರು ದಿನಗಳ ವಿರಾಮ ದೊರೆತಂತ ಆಗುತಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಶಿರಸ್ತೇದಾರರಾಗಿದ್ದ ಮ|| ಗೋಪಾಲಯ್ಯಂಗಾರ್ಯವರು ದೊಡ್ಡಬಳ್ಳಾಪುರತಾಲ್ಲೂಕು ಅಮಲ್ದಾರರಾಗಿ ನೇಮಕರಾಗ್ಯಲ್ಪಟ್ಟದರಿಂದ ಸದರೀ ಶಿರಸ್ತೇ ಕೆಲಸಕ್ಕೆ ಸಿಟಿ ಮ್ಯುನಿಸಿಪಲ್ ಚೀಫ್ ಮ್ಯಾನೇಜರಾಗಿದ್ದ ಮೆ| ಗುರುರಾಯರವರೂ, ಅವರ ಕೆಲಸಕ್ಕೆ ಇಲ್ಲಿನ ಫಸ್ಟ್ ಅಸಿಸ್ಟೆಂಟ್ ಕೋರ್ಟಿನಲ್ಲಿದ್ದ ಮ|| ನರಸಿಂಹಮೂರ್ತಿ ಎಂಬವರೂ ನಿಯಾಮಕರಾದರೆಂದು ಕೇಳುತ್ತೇವೆ

ಈ ತಿಂಗಳ ಎಂಟು ಒಂಭತ್ತನೇ ತಾರೀಖ್ ಸುಮಾರಿಗೆ ಚೆನ್ನಪಟ್ಟಣದಲ್ಲಿ ಒಬ್ಬ ಮನುಷ್ಯನನ್ನು ಖೂನಿಮಾಡಿ ಬಟ್ಟೆಯಲ್ಲಿ ಕಟ್ಟಿ ಒಂದು ಭಾವಿಯೊಳಗೆ ಹಾಕಿದ್ದದ್ದು ಈಚೆಗೆ ಕಂಡುಬಂದು, ಈ ಕ್ರೂರಕೃತ್ಯವನ್ನು ನಡೆಸಿದವರ ಪತ್ತೇ ವಿಷಯದಲ್ಲಿ ಪೋಲೀಸ್ ಅಧಿಕಾರಿಗಳು ಬಹಳ ತರದೂದ್ ನಡೆಸುತಲಿರುವಂತೆ ಒಬ್ಬ ವೃತ್ತಾಂತ ಲೇಖಕರು ತಿಳಿಸಿರುತ್ತಾರೆ ಇದರ ತಪ್ಸೀಲನ್ನು ಮುಂದೆ ಪ್ರಕಟಿಸುವೆವು

ಈಗ್ಗೆ ಎರಡು ಮೂರು ದಿನಗಳ ಹಿಂದೆ ಕಾಮನ ಹಬ್ಬಕ್ಕೆ ಪ್ರಾರಂಭವಾಗಿ ತಮ್ಮಟಧ್ವನಿ ಮೊದಲಾದ ಅದರ ಚಿಹ್ನೆಗಳು ದಿನೇದಿನೆ ವೃದ್ಧಿಯಾಗುತಲಿವೆ, ಪರಂತು ಅದು ಉಲ್ಬಣಸ್ಥಿತಿಗೆ ಬರುವದಕ್ಕೆ ಇನ್ನು ಕಾಲವ್ಯವಧಾನವಿರುವದರಿಂದ ಅದರ ವೈಖರಿಯನ್ನೂ ಅದರಲ್ಲಿ ಸಾಮಾನ್ಯ ಜನರಿಗುಂಟಾಗಿರುವ ಕುತೂಹಲವನ್ನೂ ಅನುಗುಣಗಳಾದ ಶಬ್ದಗಳಿಂದ ತಿಳಿಸುವದಕ್ಕೆ ಈ ವಾರದಲ್ಲಿ ಅವಕಾಶವಿಲ್ಲವಾಯಿತು.

ಈ ಸಂಸ್ಥಾನದ ರಜಿಸ್ಟ್ರೇಷನ್ ಸೆಕ್ರೆಟರಿ ಮತ್ತು ರಿಜಿಸ್ಟ್ರಾರ್ ಜನರಲರಾಗಿದ್ದ ಮೆಸ್ಟರ್ ಮೀನಾಕ್ಷಯ್ಯನವರು ಚೀಫ್‌ಕೋರ್ಟ್ ಮೂರನೆಯ ಜಡ್ಜಿಯ ಕೆಲಸದಲ್ಲಿ ನೇಮಕರಾಗ್ಯಲ್ಪಟ್ಟಮೇಲೆ ಅವರು ನೋಡುತಲಿದ್ದ ಗವರ್ನ್‌ಮೆಂಟ್ ಅಡ್ವೊಕೇಟ್ ಕೆಲಸವನ್ನು ಅವರ ಅಸಿಸ್ಟೆಂಟರಾದ ಮೆ|| ರಾಮಸ್ವಾಮಯ್ಯರವರು ಅದುಮೊದಲು ಬದಲೀ ನೋಡುತ ಬಂದು ಈಚೆಗೆ ಅದೇ ಅಧಿಕಾರದಲ್ಲಿ ಕಾಯಂ ಮಾಡಲ್ಪಟ್ಟ ಕಾಲದಲ್ಲಿ ಅಸಿಸ್ಟೆಂಟ್ ಅಡ್ವೊಕೇಟ್ ಕೆಲಸವು ವಜಾ ಮಾಡಲ್ಪಟ್ಟಂತೆ ಕೇಳುತ್ತೇವೆ.

ಈ ವರುಷದಿಂದ ಮೈಸೂರು ಸರ್ಕಾರದವರು ಇಂಡ್ಯ ಗವರ್ನಮೆಂಟಿಗೆ ಹೆಚ್ಚು ಪಗದಿಯನ್ನು, ಅಂದರೆ ಸರಿಯಾಗಿ ೩೫ಲಕ್ಷ ರೂಪಾಯಿಗಳನ್ನು ಸಲ್ಲಿಸಬೇಕಾಗಿದೆಯಷ್ಟೆ. ಈ ಹೆಚ್ಚು ಹಣವನ್ನು ಉತ್ಪತ್ತಿ ಮಾಡುವದು ಹ್ಯಾಗೆಂದು ಈ ಸರ್ಕಾರದವರು ಆಲೋಚಿಸುತಲಿರುವಾಗ್ಯೆ ಕೆಲವು ಮುಖ್ಯಾಧಿಕಾರಿಗಳು ಸಂಸ್ಥಾನದ ಕೆಲವು ತಾಲ್ಲೂಕುಗಳನ್ನು ವಜಾ ಮಾಡಿದರೆ ಈ ಹಣವನ್ನು ಪಾವತೀ ಮಾಡಬಹುದೆಂದು ಹೇಳಿದರೆಂತಲೂ, ಅದಕ್ಕೆ ಮಹಾರಾಣೀ ರೀಜಂಟರವರು ಒಪ್ಪದೆ, ಇದಕ್ಕೆ ಬದಲಾಗಿ ಈ ಸಂಸ್ಥಾನದಲ್ಲಿ ಮಾಹೆ ೧ಕ್ಕೆ ೩೦೦ ರೂಪಾಯಿಗಿಂತಲೂ ಹೆಚ್ಚು ಸಂಬಳವನ್ನು ಪಡೆಯುತಲಿರುವವರ ಸಂಬಳಗಳನ್ನೆಲ್ಲ ಕಡಮೆಮಾಡಿ ಮಿಕ್ಕಿಂದ ಹಣವನ್ನು ಪಾವತೀ ಮಾಡಬೇಕೆಂದು ಅಪ್ಪಣೆ ಕೊಡಿಸಿದರೆಂತಲೂ ಒಳದೇಶದ ಪತ್ರಿಕೆ ಯೊಂದು ತಿಳಿಸುತಿದೆ.

ಈ ವೂರು ನಗರ್ತರಪೇಟೆಯಲ್ಲಿರುವ ಮ|| ರಾ|| ವೈರಾಗಿಶೆಟ್ಟಿ ದೊಡ್ಡ ಬಸಣ್ಣನವರೆಂಬ ವರ್ತಕರು, ಕಳೆದ ಸೋಮವಾರದ ದಿನ ತಮ್ಮ ಮಗಳಿಗೆ ವಿವಾಹೋತ್ಸವವಂ ಅತಿ ವಿಜೃಂಭಣೆಯೊಡನೆ ನಡೆಸಿದರು. ಈ ಶುಭಕ್ಕಾಗಿ ಸುಮಾರು ೪೦೦ ರೂಪಾಯಿಗಳ ವರೆಗೆ ಖರ್ಚುಮಾಡಿ ಅತಿ ರಮಣೀಯವಾಗಿ ಚಪ್ಪರವಂ ಹಾಕಿಸಿ, ಹುವ್ವಿನ ಗಿಡಗಳು, ಲತೆಗಳು, ನಾನಾವಿಧ ಗುಲೋಪುಗಳು, ಲಸ್ತರ್‌ಗಳಿಂದಲಂಕರಿಸಿದ್ದರು. ಮದರಾಸಿನಿಂದ ಓಲಗದವರು ಕರೆಯಿಸಲ್ಪಟ್ಟಿದ್ದರು. ಮುಹೂರ್ತದಿನ ಭೋಜನಂ ನಾಲ್ಕಾಣೆ ಮೊದಲು ಒಂದು ರೂಪಾಯಿನ ವರೆಗೆ ಬ್ರಾಹ್ಮಣರಿಗೆ ಭೂರಿ ಕೊಟ್ಟರು. ಅದು ಮೊದಲು ನಾಗವಲ್ಲಿಯ ವರೆಗೆ ಪ್ರತಿದಿನದಲ್ಲೂ [illegible]ವರಿಗೆ ದಕ್ಷಿಣೆ ತಾಂಬೂಲಗಳಂ ಕೊಡುತಬಂದರು. ಈ ಷಹರ್ ದೊಡ್ಡಮನುಷ್ಯರನೇಕರಂ ಅಹ್ವಾನ ಪತ್ರಿಕೆಗಳ ಪೂರ್ವಕ ಕರೆಯಿಸಿ ಸನ್ಮಾನಿಸಿದರು. ಈ ಶುಭಕ್ಕೆ ಅಂಗಗಳಾದ ಇತರವಿಧಿಗಳೆಲ್ಲವು ಲೋಪ ಲೇಶವೂ ಇಲ್ಲದೆ ನಡೆಯುತಬರುತಿವೆ. ಈ ವೂರು ವರ್ತಕ ಮಂಡಲಿಯಲ್ಲಿ ಇದುವರೆಗೆ ಇಷ್ಟು ವಿಜೃಂಭಣೆಯೊಡನೆ ಶುಭವಂ ನಡೆಸಿದವರು ಕೇವಲ ದುರ್ಲಭರೆಂದು ತೋರುತಿದೆ.

ಈ ತಿಂಗಳ ೧೧ ನೇ ತಾರೀಖ್ ಹಗಲು ೧೧ ೪ ಘಂಟೆಗೆ ಮೈಸೂರೊಳು ಶ್ರೀಮನ್ಮಹಾರಾಣೀ ರೀಜಂಟರವರು, ಶ್ರೀಮನ್ಮಹಾರಾಜರವರು, ಯುವರಾಜರವರು, ಹೆಣ್ಣುಮಕ್ಕಳು, ಪ್ರೈವೇಟ್ ಸೆಕ್ರೆಟರಿ ಮೆ|| ಕಾಂತರಾಜೆ ಅರಸಿನವರು, ದರ್ಬಾರ್ ಬಕ್ಷಿ ಮೆ|| ಲಿಂಗರಾಜೇ ಅರಸಿನವರು ಸಹ ಚಾಮರಾಜ ಅಗ್ರಹಾರಕ್ಕೆ ದಯಮಾಡಿದ್ದರು. ಡೆಪ್ಯುಟಿ ಕಮಿಷನರವರು, ಕಂಟ್ರೋಲರು, ವೈಸ್ ಪ್ರೆಸಿಡೆಂಟರು, ಬಿಲ್ಡಿಂಗ್ ಕಮಿಟಿ ಮೆಂಬರುಗಳು, ಧರ್ಮಾಧಿಕಾರಿಗಳು, ಅಗ್ರಹಾರಸ್ಥರು, ಇವರೆಲ್ಲರು ಎದುರ್ಗೊಂಡರು. ಶ್ರೀಮನ್ಮಹಾರಾಜರು ಈಅಧಿಕಾರಿಗಳು ಸಹಿತ ಪಕ್ಷ್ಯವಾದಿಯಾಗಿ ಅಗ್ರಹಾರದ ಪ್ರತಿಮನೆಗೂ ಪ್ರವೇಶಿಸಿ ಅವರುಗಳಿಂದ ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿದರು. ಅನಂತರ ಶ್ರೀಮನ್ಮಹಾರಾಣಿಯವರು ಗೃಹಸಂಖ್ಯಾಪ್ರಕಾರ ಗಾಡಿಯಲ್ಲಿ ದಯಮಾಡಿ ಅಗ್ರಹಾರಸ್ಥರು ಒಪ್ಪಿಸಿದ ಫಲ ಮಂತ್ರಾಕ್ಷತೆಯನ್ನು ಸ್ವೀಕರಿಸಿದರು, ಮತ್ತು ಪ್ರಾರ್ಥಿಸಿಕೊಂಡ ಅಗ್ರಹಾರಸ್ಥರು ಅಂದರೆ ಸುಮಾರು ೧೩ ಜನಗಳ ಮನೆಗೆ ಗಾಡಿಯಿಂದ ಇಳಿದು ಒಳಗೆ ದಯಮಾಡಿ ಅಗ್ರಹಾರಸ್ಥರ ಹೆಂಗಸರು ಮಾಡಿದ ಉಪಚಾರವನ್ನು ಸ್ವೀಕರಿಸಿಕೊಂಡು ಪುನಃ ಗಾಡಿಯಲ್ಲಿ ಮುಹೂರ್ತಮಾಡಿ ಅರಮನೆಗೆ ದಯಮಾಡಿದರು.—ವೃ. ಚಿ.

ತಾಲ್ಲೂಕುಜಾತಿನಲ್ಲಿ ಸಣ್ಣ ಕೆರೆಗಳ ಕೆಳಗೆ ವೈಶಾಖೀ ಸಾಗುವಳಿ ಮಾಡಿದವರು, ಪೈರು ಹೊರಡುವ ಸಮಯದಲ್ಲಿ ಕೆರೆಯೊಳು ನೀರು ಬತ್ತಿಹೋಗಿ ಪೈರು ಒಣಗುತಲಿದೆಯೆಂದು ಕಣ್ಣೀರು ಬಿಡುತಲಿದಾರೆ. ಇದು ಹೀಗಿರುವಲ್ಲಿ ಡಿಸ್ಟ್ರಿಕ್ಟ್ ಅಧಿಕಾರಿಗಳು ಕಂದಾಯದ ವಸೂಲೀ ವಿಷಯದಲ್ಲಿ ತಾಲ್ಲೂಕ್ ಅಮಲ್ದಾರರಿಗೂ, ಅಮಲ್ದಾರರು ಆಯಾ ಹೋಬಳಿ ಶೇಕ್ದಾರ್, ಪಟೇಲ್ ಶಾನುಭೋಗರಿಗೂ ಕೊಡುತಬರುವ ಸಖ್ತ ತಗಾದೆಯನ್ನು ಹೇಳಲಳವಲ್ಲದೆ ಇದೆ. ಒಂದು ಡಿಸ್ಟ್ರಿಕ್ಟಿನ ಒಂದು ತಾಲ್ಲೂಕಿನಲ್ಲಿ, ಚಿಲ್ಲರೆ ನೌಕರರು ಸಾಧಾರಣವಾಗಿ ನಡೆಸುವ ಸಾಮಾನ್ಯ ತಪ್ಪಿತಗಳಬಗ್ಗೆ ಎರಡುಸಾವಿರ ರೂಪಾಯಿಗಳ ವರೆಗೆ ಮೇಲ್ಪಟ್ಟ ಅಧಿಕಾರಿಗಳು ಜುರ್ಮಾನೆ ಹಾಕಿ ವಸೂಲ್ಮಾಡಿರುತ್ತಾರೆಂದು ನಮ್ಮ ವೃತ್ತಾಂತಲೇಖಕರು ಬರೆದಿರುತ್ತಾರೆ. ಈಸಲ ಜಲಾಧಾರ ಕಡಮೆಯಾಗಿ, ಫಸಲ್ಗಳು ಒಣಗಿಹೋದಕಡೆ ಉಚಿತವಾಗಿ ಕಂಡುಬರುವಷ್ಟು ರಿಮಿಷನ್ ಕೊಡಬೇಕೆಂದು ಸರ್ಕಾರದವರು ಆಲೋಚಿಸುತಲಿರುವಂತೆ ಒಂದು ಪ್ರವಾದವಿದೆ. ಗವರ್ನಮೆಂಟಿನವರಿಗೆ ರೈತರ ವಿಷಯದಲ್ಲಿ ಕರುಣೆಯುಂಟಾಗಿ ರಿಮಿಷನ್ ಕೊಟ್ಟಾಗ್ಯೂ ಸರ್ಕಾರದ ಆಯುತಿಯಲ್ಲಿ ಕೊರತೆಯುಂಟಾಗಲಾರದು. ಅವರು ಕೊಡಬಹುದಾದ ರಿಮಿಷನ್ ಮೊಬಲಗನ್ನು ಡಿಸ್ಟ್ರಿಕ್ಟ್ ಅಧಿಕಾರಿಗಳು ಚಿಲ್ಲರೆ ನೌಕರರಿಗೆ ಹಾಕುವ ಜುರ್ಮಾನೆ ಮೂಲಕ ಸರ್ಕಾರ್ ಖಜಾನೆಗೆ ಈಡು ಮಾಡಬೇಕೆಂದು ಯೋಚಿಸುತಲಿರುವಂತೆ ಕಾಣುತಿದೆ. ಗವರ್ನಮೆಂಟಿನವರು ಈ ಅಧಿಕಾರಿಯ ಮಹನತ್ತನ್ನು ಪುರಸ್ಕರಿಸಿ ಅವರಿಗೆ ಶೀಘ್ರದಲ್ಲಿ ಬಡ್ತಿ ಕೊಡುವದರ ಮೂಲಕ ಇನ್ನಷ್ಟು ಪ್ರೋತ್ಸಾಹವನ್ನುಂಟುಮಾಡಿದರೆ ಸರ್ಕಾರಕ್ಕೆ ವಿಶೇಷ ಪ್ರಯೋಜನಕರವಾಗಿರುವುದು.

THE MYSORE GAZETTE.
ಮೈಸೂರು ಗೆಜೆಟ್.

ಗುರುವಾರ, ತಾ|| ೨೦ನೇ ಫೆಬ್ರವರಿ ೧೮೯೬.
ಮೈಸೂರ್ ಗವರ್ನಮೆಂಟಿನವರಿಂದ ಹೊರಡಿಸಿರುವ ಇಸ್ತಿಹಾರ್ನಾಮೆಗಳು.

ತಾರೀಖು ೧೪ನೇ ಫೆಬ್ರವರಿ ೧೮೯೬

ನಂ|| ೯೬೩೩—ಜ. ೧೦೨೩—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೨೨ನೇ ಸೆಕ್ಷನ್ ಮೇರೆ, ಕಡೂರು ತಾಲ್ಲೂಕು ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಟಿ. ಕೆ ಸುಂದರರಾಜಯ್ಯಂಗಾರ್ರು, ಅದರ ತಾಲ್ಲೂಕಿನ ಸರಹದ್ದುಗಳೊಳಗೆ ಮೈಸೂರು ರೆಮಿಡೀ ರೆಗ್ಯುಲೇಷನ್ ವ ಪೀನಲ್ ಕೋಡನ್ನನುಸರಿಸಿ, ಮೊಕದ್ದಮೆಗಳನ್ನು ವಿಚಾರಣೆ ಮಾಡಲು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕರಾಗ್ಮಹಲ್ಪಟ್ಟಿರುತ್ತಾರೆ.

ನಂ|| ೯೬೩೮—ಜ. ೧೦೨೪—ಚಿತ್ರದುರ್ಗದ ಮುನ್ಸೀಫರಾದ ಮೆ|| ಎ. ಆನಂದರಾಯರವರಿಗೆ, ಮೈಸೂರು ಸರ್ವೀಸ್ ರೆಗ್ಯುಲೇಷನ್‌ಗಳ ೨೦೩ನೇ ಆರ್ಟಿಕಲ್ ಮೇರೆ, ೧೮೯೬ನೇ ಇಸವಿ ಫೆಬ್ರವರಿ ೨೯ನೇ ಮಧ್ಯಾಹ್ನ ಆರಭ್ಯ ಪೂರಾ ಸಂಬಳದ ಮೇಲೆ ಒಂದು ತಿಂಗಳ್ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆ|| ಎ. ಆನಂದರಾಯರ ಗೈರುಹಾಜರಿ ಕಾಲದಲ್ಲಿ ನಗರ ಡಿಸ್ಟ್ರಿಕ್ಟ್ ವ ಸೆಷನ್ಸ್ ಕೋರ್ಟ್ ಶಿರಸ್ತೇದಾರ್ ರಾಮಾನುಜ ಯ್ಯಂಗಾರ್ರು ಆಕ್ಟಿಂಗ್ ತಾಕೀತಾಗಿ ಕೆಲಸ ನೋಡತಕ್ಕದ್ದು.

ತಾ|| ೧೫ನೇ ಫೆಬ್ರವರಿ ೧೮೯೬.

ನಂ|| ೯೬೩೦—ಜ. ೧೦೨೨—ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾದ ಮೆ|| ಎಸ್. ವೈದ್ಯನಾಥ ಅಯ್ಯರವರಿಗೆ, ಮೈಸೂರು ಸರ್ವೀಸ್ ರೆಗ್ಯುಲೇಷನ್‌ಗಳ ೧೭೦ ನೇ ಸೆಕ್ಷನ್ ಪ್ರಕಾರ ೧೮೯೬ನೇ ಇಸವಿ ಫೆಬ್ರವರಿ ೧೬ನೇ ಮಧ್ಯಾಹ್ನ ಆರಭ್ಯ ೨೭ನೇ ಮಧ್ಯಾಹ್ನ ವರಿವಿಗೆ ಈ ಉಭಯ ದಿವಸಗಳೂ ಸೇರಿ ೧೧ ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ವಾಯುವ್ಯ ಇಲಾಖೆಯ ದಕ್ಷಿಣಭಾಗ, ಅಂದರೆ ರಜಪೂತ್‌ಸ್ಥಾನ, ಗ್ವಾಲಿಯರ್, ರೇವಾ ಸಂಸ್ಥಾನಗಳು, ಇವುಗಳ ಪ್ರದೇಶಗಳಲ್ಲಿ ಸಧ್ಯಕ್ಕೆ ಬರ ಬಿದ್ದಿರುತ್ತಿದೆ. ರಿಲೀಫ್ ಕಾಮಗಾರಿಗಳು ಪ್ರಾರಂಭವಾಗಿರುತ್ತಿವೆ.

ಮಾಂಸ ಭಕ್ಷಣವು ಶರೀರಕ್ಕೆ ಬಾಧಕವನ್ನುಂಟುಮಾಡುವದೆಂತಲೂ, ಮಾಂಸದಲ್ಲಿರುವ ಕ್ರಿಮಿಗಳೂ ಮತ್ತೂ ಅನಾರೋಗ್ಯಕರವಾದ ಸಾರವೂ ಮನುಷ್ಯನ ದೇಹದಲ್ಲಿ ವ್ಯಾಪಿಸಿ ಆರೋಗ್ಯಕ್ಕೆ ಭಂಗವನ್ನುಂಟುಮಾಡುತದೆಂತಲೂ ಡಾಕ್ಟರ್ ಸ್ಮಿತ್ ಎಂಬವರು ಅಭಿಪ್ರಾಯ ಪಡುತ್ತಾರೆ.

ಕಾಬೂಲ್ ಅಮೀರವರು ಈಗ ಇಂಗ್ಲಿಷಿನವರಿಗೆ ಹೇಳುವದೇನಂದರೆ—ನೀವು ಇಂಗ್ಲೆಂಡ್ ದರ್ಬಾರಿನಲ್ಲಿ ನಮ್ಮ ಕಡೆಯ ವಕೀಲನನ್ನು ಇಡಲಿಕ್ಕೆ ಕಬೂಲ್ ಮಾಡದಿದ್ದರೆ, ನಮ್ಮ ನಿಮ್ಮ ಸ್ನೇಹ ಸಂಬಂಧ ಉಳಿಯಲಿಕ್ಕಿಲ್ಲ, ಮತ್ತು ನಾವು ನಿಸ್ಸಂಶಯವಾಗಿ ಷರತ್ತು ಮುರಿಯುವೆವು, ಎಂಬುದು.

ಮಳೆಯಾಳದಲ್ಲಿ ನಂಬೂರಿ ಹೆಂಗಸರನ್ನು ಮದುವೆ ಮಾಡಿಕೊಳ್ಳಬೇಕಾದರೆ ಅಳಿಯನಿಗೆ ಕೇಳಿದಷ್ಟು ಹಣವನ್ನು ಕೊಡಬೇಕು, ಕೊಡಲಾರದವರು ಅನೇಕ ಹೆಂಗಸರು ಕನ್ಯೆಯರಾಗಿಯೇ ಸಾಯುವರು, ಇದಕ್ಕೆ ಕಾರಣವು ನಾಯರ ಯೆಂಬ ಜಾತಿಯ ಹೆಂಗಸರು ಮದುವೆ ಯೆಂಬ ಕರ್ಮದ ಆವಶ್ಯಕತೆ ಇಲ್ಲದೆಯೆ ಹೆಂಡತಿಯರಾಗಿ ಸಿಕ್ಕುವದೇ ಯೆಂದು ತಿಳಿಯಬರುತ್ತಿದೆ.

ಆಚೆ ಗುರುವಾರ ಹೈದರಾಬಾದಿನಲ್ಲಿ ನವಾಬ್ ಫಕರುಲ್ ಮುಲ್ಕ್ ಬಹದೂರವರು ತಮ್ಮ ಕುಮಾರನಿಗೆ ಬಹು ವಿಜೃಂಭಣೆಯಾಗಿ ಮದುವೆ ಮಾಡಿದರು. ಇಷ್ಟು ಆಟ್ಟಹಾಸದಿಂದ ಹೈದರಾಬಾದಿನಲ್ಲಿ ಇನ್ಯಾರೂ ಮದುವೆ ಮಾಡಲಾರರೆಂದು ಅಲ್ಲಿನ ಜನರು ಹೇಳುತ್ತಿದ್ದರೆ. ಅವರು ಕೊಟ್ಟ ಬಿಲ್ಲತ್ತುಗಳು ನಗಗಳು ಅಲ್ಲದೆ ನಗದಾಗಿ ಈ ಮದುವೆಗೆ ೨ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚುಮಾಡಿದರೆಂದು ತಿಳಿಯಬರುತ್ತಿದೆ.

ರಂಗೂನಿನಲ್ಲಿ ಒಂದು ಕಂಪೆನಿಯವರ ಕೋಠಿಯಲ್ಲಿ ವ್ಯಾಪಾರಕ್ಕೆ ಸಂಗ್ರಹಿಸಿಟ್ಟ ಹತ್ತು ಹನ್ನೆರಡುನೂರುಮಣ ಡೈನಾಮೈಟ್ ಎಂಬ ಮದ್ದಿಗೆ ಬೆಂಕಿಹತ್ತಿದ್ದರಿಂದ ಆ ಪಟ್ಟಣದಲ್ಲಿ ಭೂಕಂಪವಾದಹಾಗಾಯಿತು. ಆ ಕೋಠಿಯು ಪಟ್ಟಣದ ಹೊರಗೆ ೬ ಮೈಲಿ ಆಚೆಯಲ್ಲಿದ್ದಾಗ್ಯೂ ಅದರ ಸಪ್ಪಳದಿಂದ ಭೂಮಿಯು ಬಹಳವಾಗಿ ಅದಿರಿ ಯೆಷ್ಟೋ ಮನೆಗಳು ಬಿದ್ದವು, ಲಕ್ಷಾವಧಿ ರೂಪಾಯಿಗಳ ಮಾಲ್ ಹಾಳಾಯಿತು. ಆದರೆ ಯಾರಿಗೂ ಜೀವಕ್ಕೆ ಅಪಾಯವಾಗಲಿಲ್ಲ.

ಧಾರವಾಡದ ಹತ್ತಿರ ಅಳ್ನಾವರವೆಂಬ ಊರಿನಲ್ಲಿ ಹಾಜೀ ಇಷ್ಮೈಲ್ ಮಿರ್ಜಾ ಎಂಬ ಚಿನ್ನದ ವ್ಯಾಪಾರಸ್ಥನು ಹಳ್ಳಿಯ ಹತ್ತಿರ ಕೆಲವು ಕಲ್ಲುಗಳನ್ನು ನೋಡಿ ಅಲ್ಲಿ ಚಿನ್ನ ಸಿಕ್ಕುವದೆಂದು ಗೊತ್ತುಮಾಡಿ ಆ ಸ್ಥಳವನ್ನೆಲ್ಲ ಖರೀದಿಗೆ ತೆಗೆದುಕೊಂಡು ಸರ್ಕಾರಿ ಅಧಿಕಾರಿಗಳ ಎದುರಿಗೆ ಆ ಕಲ್ಲುಗಳನ್ನು ಪುಡಿಮಾಡಿ ಅದರಿಂದ ಚಿನ್ನವನ್ನು ತೆಗೆದು ತೋರಿಸಿದನು. ಸರ್ಕಾರದವರಿಗೂ ಅಲ್ಲಿ ಚಿನ್ನ ಸಿಕ್ಕುತ್ತೆನ್ನುವದು ಗೊತ್ತಾಯಿತು. ಇದಕ್ಕಾಗಿ ಒಂದು ಕಂಪೆನಿಯನ್ನು ಸ್ಥಾಪಿಸಬೇಕೆಂದಿದ್ದಾರಂತೆ.

ಅಫ್ಘಾನಿಸ್ತಾನ ಅಮೀರರು ತಮ್ಮ ರಾಜಧಾನಿಯಾದ ಕಾಬೂಲ್ ಪಟ್ಟಣದಲ್ಲಿ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸುತ ಬಂದಿದಾರೆ ಬಂದೂಖ್, ಗುಂಡು, ತೋಟಾ ಮುಂತಾದವನ್ನು ಮಾಡಿಸುತ್ತಾರೆ. ಈ ಕಾರ್ಖಾನೆಯಲ್ಲಿ ದಿನ ೧ಕ್ಕೆ ೨೨,೦೦೦ ತೋಟಾಗಳು, ೧೫ ಬಂದೂಖ್‌ಗಳು, ವಾರಕ್ಕೆ ಎರಡು ಫಿರಂಗಿಗಳು ತಯಾರಾಗುತಲಿವೆ. ಮತ್ತನ್ನು ಮೊಡುವದಕ್ಕೆ ಒಂದು ಹೊಸ ಕಾರ್ಖಾನೆಯನ್ನು ಇಡುವದರಲ್ಲಿದ್ದಾರೆ. ಪಶ್ಚಿಮ ರಾಜ್ಯಗಳ ನಾಗರಿಕತೆಯು ಯೆಲ್ಲೆಲ್ಲಿಯೂ ಪ್ರಚಾರದಲ್ಲಿ ಬಂದಿರುತ್ತಿತೆಯೆಂದು ಸಂತೋಷಿಸಬೇಕಾಗಿದೆ.

ಚೆಂಗಲ್ಪಟ್ ಡಿಸ್ಟ್ರಿಕ್ಟಿಗೆ ಸೇರಿದ ಪೊಗಯೂರಿನಲ್ಲಿ ಪಳಿ ಕಾಡಧನ ಎಂಬವನು ಮಾಂತ್ರಿಕನಾಗಿ ಎಂತಲೂ, ಅವನು ಮಾಟಮಾಡಿ ಅನೇಕರನ್ನು ಕೊಲ್ಲುತ್ತಾನೆಂತಲೂ ಊರಿನವರೆಲ್ಲರು ತಿಳಿದು ಹೆದರುತಲಿದ್ದರು. ಇದಕ್ಕೆ ಸರಿಯಾಗಿ ಒಂದು ಸಂಸಾರದಲ್ಲಿ ೭ ಮಂದಿ ಒಬ್ಬರಮೇಲೊಬ್ಬರು ಕ್ರಮವಾಗಿ ಸತ್ತುಹೋದರು. ಅವರು ಈ ಮನೆಯವರಿಗೆ ಮಾಟ ಮಾಡಿದನೆಂದು ಆ ಮನೆಯವನು ತಿಳಿದು ಆ ಮಾಟಗಾರನನ್ನು ಕೊಂದುಬಿಟ್ಟನು. ಪೊಲೀಸಿನವರು ಈ ಕೊಲೆ ಮಾಡಿದವನನ್ನು ಹಿಡಿದು ಸೆಷನ್ನಿನಲ್ಲಿ ವಿಚಾರಣೆ ಮಾಡಿದಾಗ ಸೆಷನ್ ಜಡ್ಜಿಗಳು ಅಪರಾಧಿಗೆ ಫಾಸೀ ಸಜಾ ವಿಧಿಸಿದರು ಇವನು ಮದರಾಸ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿದನು. ಹೈಕೋರ್ಟ್ ಜಡ್ಜಿಗಳು ಈ ಅಪರಾಧಿಯು ತನ್ನ ಪ್ರಾಣವನ್ನೂ ಇತರರ ಪ್ರಾಣವನ್ನೂ ಉಳಿಸಿಕೊಳ್ಳುವದಕ್ಕೆ ಈ ಕೊಲೆಯನ್ನು ಮಾಡಿದನೆಂದು ನಂಬಿ ಅವನಿಗೆ ವಿಧಿಸಿದ್ದ ಫಾಸೀ ಸಜಾವನ್ನು ತಪ್ಪಿಸಿ ಯಾವಜ್ಜೀವವೂ ಬಂಕೋಲೆ ಶಿಕ್ಷೆಯನ್ನು ಅನುಭವಿಸ ಬೇಕೆಂಬದಾಗಿ ತೀರ್ಮಾನ ಮಾಡಿದರು.

ಅಫಗಾನರು ಕಾಫರಿಸ್ಥಾನದ ಮೇಲೆ ಯುದ್ಧ ಮಾಡಿದ್ದರಿಂದ ತಮ್ಮ ಸೈನ್ಯದಲ್ಲಿ ೧೫೦ ಹತ್ಯಾರ್ ಜನರು ಅನೇಕ ಘಾಯಗಳಾಂತಿದರು. ಈ ಪೈಕಿ ೩೦೦ ಜನರು ಇನ್ನು ಔಷಧಿ ಹೊಂದುತಲಿದಾರೆ. ಅಮೀರರ ಸೈನ್ಯವು ೨೫ ಕೋಟೆಗಳನ್ನು ಮುತ್ತಿ ಸ್ವಾಧೀನ ಮಾಡಿಕೊಂಡದ್ದಲ್ಲದೆ ೫೦ ದೇವಾಲಯಗಳಿಗೆ ನುಗ್ಗಿ ಲೂಟಿಮಾಡಿ ವಿಗ್ರಹಗಳನ್ನೆಲ್ಲ ಒಡೆದು ಅಮೀರರ ಬಳಿಗೆ ಕಳುಹಿಸಿದುತ್ತಾರೆ. ಕಾಫರ್ ಜನರ ಹತ್ತಿರ ಕೆಲವು ಮದ್ದು ಗುಂಡು ಬಂದೂಖ್‌ಗಳಿದ್ದವು. ಅವನ್ನೆಲ್ಲ ಕಿತ್ತುಕೊಂಡರು ಕಾಫರರು ವಿಶೇಷವಾಗಿ ಬಿಲ್ಲು ಅಂಬುಗಳನ್ನು ಯುದ್ಧದಲ್ಲಿ ಉಪಯೋಗಿಸುತಲಿದ್ದರು. ಇವನ್ನೆಲ್ಲ ಅಫಗಾನ ಜನರು ಕಿತ್ತುಕೊಂಡು ೧೦೦ ಒಂಟೆಗಳಮೇಲೆ ಹೊರಿಸಿಕೊಂಡು ಅಫಗಾನಿಗೆ ಸಾಗಿಸಿರುತ್ತಾರೆ ಅಫಗಾನದ ಕಡೆ ಸೇನಾಪತಿಗಳಾದ್ದ ಜಯವೃತವನ್ನು ತಿಳಿದ ಕೂಡಲೆ ಅಮೀರ ಬಹದ್ದೂರರಿಗೆ ೬ ಎಣಗು ಚಿನ್ನದ ತೋಡಾಗಳನ್ನು ಹಾಕಿಸಬೇಕೆಂದು ಹೇಳಿರುತ್ತಾರೆ. ರಾಜ್ಯವೂ ಅಮೀರರ ಅಧಿಕಾರವೂ ದಿನೇ ದಿನೆ ಅಭಿವೃದ್ಧಿಯಾಗುತಲಿದೆ—ರಸಿಕರಂಜಿನಿ.

EXTRACT.

ಹಿಂದುಸ್ಥಾನ ಸರ್ಕಾರದ ತಿಜೋರಿಯಲ್ಲಿ ಹಣದ ಕೊರತೆ ಬೀಳುವದೆಂದು ನಮ್ಮ ಸರ್ಕಾರದವರು ಸ್ವಲ್ಪ ದಿವಸಗಳ ಕೆಳಗೆ ವಿಲಾಯತಿಯಿಂದ ಬರತಕ್ಕ ಬಟ್ಟೆಗಳಮೇಲೆ ೧೦೦ಕ್ಕೆ ೫ ರಂತೆ ಸುಂಕವನ್ನು ಹೇರಿದ್ದರಷ್ಟೆ. ಆದರೆ ಇದರಿಂದ ಹಿಂದುಸ್ಥಾನದೊಳಗಿನ ಗಿರಣಿಗಳಿಗೆ ವೃಥಾ ಉತ್ತೇಜನ ದೊರೆಯುವದಿಲ್ಲವೆಂದು ಲ್ಯಾಂಕಾಷಯರ್ ಮತ್ತು ಮಾಂಚೆಸ್ಟರ್ ವ್ಯಾಪಾರಿಗಳು ಕೂಗಾಟ ಮಾಡಿದ್ದರಿಂದ ಹಿಂದುಸ್ಥಾನದೊಳಗಿನ ಗಿರಣಿಗಳೊಳಗಿಂದ ಹೊರಡುವ ಬಟ್ಟೆಗಳಮೇಲೂ ಸುಂಕವು ಸ್ಥಾಪಿಸಲ್ಪಟ್ಟಿತು ಆದರೆ ವಿಲಾಯತಿಯಿಂದ ಉರುಟು ಅರಿವೆಯು ಇತ್ತಕಡೆಗೆ ಬಹಳವಾಗಿ ಬರುವದಿಲ್ಲವು. ಆದ್ದರಿಂದ ಹಿಂದುಸ್ಥಾನ ಸರ್ಕಾರದವರು ಇಲ್ಲಿನ ಗಿರಣಿಯಲ್ಲಿ ತಯಾರಾಗುವ ೨೦ನೇ ನಂಬರ್ ನೂಲಿನಮೇಲೂ, ಅದರಿಂದಾಗುವ ಬಟ್ಟೆಯಮೇಲೂ ೧೦೦ಕ್ಕೆ ೫ರಂತೆ ಸುಂಕವನ್ನು ಹಾಕಿದರು. ಆದಾಗ್ಯೂ ಮ್ಯಾಂಚೆಸ್ಟರ್ ಮತ್ತು ಲ್ಯಾಂಕಾಷಯರ್ ಜನರು ಸರ್ಕಾರಕ್ಕೆ ಎಡೆಬಿಡದೆ ಬೆನ್ನು ಹತ್ತಿದ್ದರಿಂದ ೫ ರೂಪಾಯಿ ಇದ್ದದನ್ನು ೩|| ರೂಪಾಯಿ ಮಾಡಿದರು, ಮತ್ತು ನಮ್ಮ ದೇಶದಲ್ಲಿ ತಯಾರಾಗುವ ವಿಶಿಷ್ಟ ಬಟ್ಟೆಗಳಿಗೂ ಮೇಲಿನಂತೆ ಸುಂಕವನ್ನು ಹಾಕಿದ್ದರಿಂದ ಮೊದಲು ೨೦ನೇ ನಂಬರಿನ ನೂಲಿನದಕ್ಕೆ ಸುಂಕವು ವಸೂಲ್ಮಾಡಲ್ಪಡುತಲಿತ್ತು, ಈಗ್ಯೆ ಈಪ್ರಕಾರವಾದ್ದರಿಂದ ಬಡಜನರಿಗೆ ದೊರೆಯುವ ಉರುಟು ಬಟ್ಟೆಗಳು ಸಹ ದೊರೆಯುವಂತಾದವು. ಇತ್ತಕಡೆ ಸರ್ಕಾರದ ಲಕ್ಷ್ಯವು ಯಾಕೆ ಬೀಳದೆ ಇದ್ದವು ಆಶ್ಚರ್ಯವು. ಮುಂಬೈ ಗಿರಣಿಯವರೂ ಚೇಂಬರ್ ಆಫ್ ಕಾಮರ್ಸ್ ಸಭೆಯವರೂ ಈ ತೀರ್ಪಿನ ಸಂಬಂಧವಾಗಿ ಕಳುಹಿಸಿದ ಅರ್ಜಿಯು ಇನ್ನೂ ವಿಲಾಯತಿ ಮುಟ್ಟಿರುವದೊ ಇಲ್ಲವೋ ಇಷ್ಟರಲ್ಲಿ ತ್ವರೆಮಾಡಿ ಹಿಂದುಸ್ಥಾನ ಸರ್ಕಾರದ ಮತಕ್ಕೆ ದುರ್ಲಕ್ಷ್ಯಮಾಡಿ ಈ ಕಾಯಿದೆಯನ್ನು ಪೈಸಲ್‌ಮಾಡಿದರು. ಈ ನೂತನ ವ್ಯವಸ್ಥೆಯಿಂದ ಸರ್ಕಾರದ ಖಜಾನೆಯಲ್ಲಿ ತಿರುಗಿ ೫೧ ರ ಲಕ್ಷರೂಪಾಯಿಗಳು ಕೊರತೆ ಬೀಳುವವೆಂದು ತೋರುತ್ತಿವೆ. ಇದರ ಭರ್ತಿ ಆಗಬೇಕಾದರೆ ಸರ್ಕಾರದವರು ಯೇನು ಮಾಡುವರೆಂಬುವದು ಗೊತ್ತಿಲ್ಲದ್ದೆ ಆದೆ. ಈಪ್ರಕಾರ ನಮ್ಮ ಸರ್ಕಾರದಿಂದ ಆಗಾಗ್ಯೆ ಅನ್ಯಾಯವಾಗುತಲಿದ್ದು ಇದರ ಯೋಗದಿಂದ ಬಡ ಪ್ರಜೆಗಳು ಗೋಳಾಡುವದು ಕಣ್ಣಾರ ಕಂಡು ಕಣ್ಣು ಮುಚ್ಚಿಕೊಳ್ಳುತ್ತಾರೆಂದಮೇಲೆ ಇವರ ಆಡಳಿತಕ್ಕೆ ಪ್ರಜೆಗಳು ಯೆಷ್ಟು ಬೇಸರ ಗೊಂಡಿರುವರೆಂಬದನ್ನು ಹೇಳಲಸಾಧ್ಯವು.—ರಸಿಕರಂಜಿನಿ

BANGALORE CITY MUNICIPALITY.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸ್.

ರಸ್ತೆಗಳ ದಳವಾಡಾ ಜಮಾವಣೆ, ಮತ್ತು ಬಿಛಾವಣಿ ಸಾಮಾನ್‌ಗಳಿಗಾಗಿ ದರಖಾಸ್ತು.

ಚಾಲ್ತೀ ಸಾಲಿನಲ್ಲಿ ಸಿಟಿ ಮ್ಯುನಿಸಿಪಲ್ ರೋಡುಗಳ ರಿಪೇರಿಗೆ ಅವಶ್ಯಕತೆಗಳಾಗಿರುವ ದಳವಾಡಾ ಜಮಾವಣೆ ಮತ್ತು ಬಿಛಾವಣೆ ಸಾಮಾನ್‌ಗಳಂದರೆ, ಲಾಟರೇಟ್, ಕಾಡುಜಲ್ಲಿ ಮತ್ತು ಗ್ರಾವಲ್‌ಗಳ ಬಗ್ಗೆ, ಅದಗು ಮೊಹರ್‌ನಿಶಿ ಕೊಡಲ್ಪಡುವ ದರಖಾಸ್ತುಗಳನ್ನು, ಈಕೆಳಗೆ ರುಜು ಮಾಡಿರುವವರು ೧೮೯೬ನೇ ಇಸವಿ ಫೆಬ್ರವರಿ ೨೯ನೇ ತಾರೀಖಿನ ಮಧ್ಯಾಹ್ನದ ವರೆಗೂ ಅಂಗೀಕರಿಸುವರು. ಮೇಲೆ ಕಂಡ ಸಾಮಾನ್‌ಗಳ ಅಂದಾಜಿನ ಪ್ರಮಾಣವು ಎದರು ಪ್ರಕಟಿಸಿರುವ ಪಟ್ಟಿಯಲ್ಲಿ ನಮೂದಿಸಲ್ಪಟ್ಟಿರುವದಲ್ಲದೆ ಅವು ೧೮೯೬ನೇ ಇಸವಿ ಮೇ ಮಾಹೆಯ ಆಖೈರ್ ವೊಳಗಾಗಿ ಪೂರ್ತಿಯಾಗಿ ಸರಬರಾಯಿ ಮಾಡಲ್ಪಡತಕ್ಕದ್ದು.

೧ ದರಖಾಸ್ತುದಾರರು ಮೇಲೆ ನಮೂದಿಸಲ್ಪಟ್ಟ ಪಟ್ಟಿಯಲ್ಲಿ ಕಾಣಿಸಿರುವ ಪ್ರತಿಯೊಂದು ಸರ್ಕಲಿನ ಬಾಬತು ಸಾಮಾನ್‌ಗಳಿಗಾಗಿ ಪ್ರತ್ಯೇಕ ದರಖಾಸ್ತುಗಳನ್ನು ಕಳುಹಿಸಬೇಕಾದ್ದಲ್ಲದೆ, ತಮ್ಮ ದರಖಾಸ್ತುಗಳಲ್ಲಿ, ಸಲ ಗಜ ಒಂದಕ್ಕೆ ತಗಲಬಹುದಾದ ರಿವಾಜನ್ನೂ, ಸದರೀ ಸರ್ಕಲಿನ ದಳವಾಡಾ ಸಾಮಾನ್‌ಗಳನ್ನು ಒಂದು ತಿಂಗಳಲ್ಲಿ ಎಷ್ಟು ಮಟ್ಟಿಗೆ ಜಮಾಯಿಸಲಿಕ್ಕೆ ಶಕ್ತರೋ ಆ ಅಂಶವನ್ನೂ ನಮೂದಿಸತಕ್ಕದ್ದು, ಮತ್ತು ಅಡ್ವಾನ್ಸ್ ತರೀಕ ೫೦ ರೂಪಾಯಿಗಳನ್ನು, ನಗದಾಗಿಯಾಗಲಿ, ಕರೆನ್ಸೀ ನೋಟು ಮೂಲಕವಾಗಿಯಾಗಲಿ ಠೇವಣಿ ಇಡತಕ್ಕದ್ದು.

೨ ಮಂಜೂರ್ಮಾಡಲ್ಪಡತಕ್ಕ ದರಖಾಸ್ತುದಾರನು ಕಂಟ್ರಾಕ್ಟ್ ಕರಾರ್ ಪತ್ರವನ್ನು ಬರೆದು ಕೊಡಬೇಕಲ್ಲದೆ, ನೋಟಿಸ್ ಕೊಡಲ್ಪಟ್ಟ ಒಂದು ವಾರದ ವಾಯಿದೆಯೊಳಗಾಗಿ ೧೦೦ ರೂಪಾಯಿಗಳನ್ನು, ಸದರೀ ಕರಾರ್‌ನಲ್ಲಿ ನಮೂದಿಸಿರುವ ಷರತ್ತುಗಳಂತೆ ನಡೆಯುತಕ್ಕ ಖಾತರೀಬಗ್ಗೆ ಜಾಮೀನ್ ತರೀಕ ಠೇವಣಿ ಇಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಅಡ್ವಾನ್ಸ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವುದು.

೩ ಮ್ಯುನಿಸಿಪಲ್ ಪ್ರೆಸಿಡೆಂಟರವರು ಯಾವದರಖಾಸ್ತನ್ನಾಗಲಿ ಕಾರಣ ನಮೂದಿಸದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಸ್ವತಃ ಉಳಿಸಿಕೊಂಡಿರುತ್ತಾರೆ.

೪. ಈ ವಿಷಯದಲ್ಲಿ ತಿಳಿಯಬೇಕಾದ ಇತರ ತಪಸೀಲುಗಳನ್ನೂ ದರಖಾಸ್ತಿನ ನಮೂನೆಯನ್ನು ಬೆಂಗಳೂರ್ ಕೋಟೆಯಲ್ಲಿರುವ ಮ್ಯುನಿಸಿಪಲ್ ಯೆಗ್ಸಿಕ್ಯೂಟಿವ್ ಇಂಜನಿಯರವರ ಆಫೀಸಿನಲ್ಲಿ, ಪ್ರತಿ ಆಫೀಸ್ ದಿವಸದಲ್ಲಿಯೂ, ನೋಡಿ ತಿಳಿದುಕೊಳ್ಳಬಹುದು.

ಸರಬರಾಯಿ ಮಾಡಲ್ಪಡಬೇಕಾದ ಸಾಮಾನ್‌ಗಳ ಪಟ್ಟಿ.

ಸರ್ಕಲ್,	ಲೇಟರೈಟ್‌ಕಲ್ಲು ಸಲಗಜ.	ಜಂಗ್ಲಿ ಕಲ್ಲು ಸಲಗಜ.	ಗ್ರಾವಲ್ ಸಲಗಜ.	ಷರಾ.
I.	660	1663	1038	ಬಳೇಪೇಟೆ ಡಿವಿಜನೂ ಡಿಗ್ರಾಂಡ್ ಡಿವಿಜನಿನ ಪಶ್ಚಿಮಭಾಗ.
II.	1286	974	985	ಹಲಸೂರುಪೇಟೆ ಡಿವಿಜನೂ ಡಿಗ್ರಾಂಡ್ ಡಿವಿಜನಿನ ಪೂರ್ವಭಾಗ.
III	,,	2934	2323	ಮಾಮೂಲ್ ಪೇಟೆ ಮತ್ತು ಕೋಟೆ ಡಿವಿಜನ್.
IV	110	1247	672	ನಗರ್ತರ ಪೇಟೆ ಮತ್ತು ಲಾಲಬಾಗ್ ಡಿವಿಜನ್.

ತಾರೀಖ್ ೩ನೇ ಫೆಬ್ರವರಿ, 1896

K. SRINIVASA RAO,
Vice President,
City Municipal Commission.

ಈ ಕಂಪೆನಿಯು ಸನ್ ೧೮೭೩ನೇ ಇಸವಿಯಲ್ಲಿ ಸ್ಥಾಪಿತವಾಯಿತು
ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತತ್ತಿಯು.

ಅತ್ಯಾಶ್ಚರ್ಯಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ತತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಬೆಚ್ಚನೆ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ತತ್ತಿಗಳು ಮಹಾ ಪೌಷ್ಟಿಕಗಳಿದ್ದು, ಒಳ್ಳೇ ರುಚಿಯುಳ್ಳವುವೆ. ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಶರೀರವಾದರೂ ಹರೆಯದ ಗಂಡಸರಂತೆ ಪ್ರಜ್ವಲಿಸುತ್ತದೆ. ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ, ಲಘ್ವಿಯ ಮುಂಚೆ ಅಥವಾ ಹಿಂಚೆ ಸರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಲ್ಲಿ ಆಗುವದಿಲ್ಲ ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ ಪರಮ ಹಾಗೂ ಉಷ್ಣಸಂಬಂಧಿಕ ಬೇನೆಗಳ ತಸರು ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ ಮೂರು ಹೊತ್ತುಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಸೌಚವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಕಾಲುವೆ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ ಮತ್ತು ಹಳೆಬದ್ದಲ್ಲಿ ೮ ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳ ವರೆಗೆ ಸಾಲತಕ್ಕ ೧ ಡಬ್ಬಿಗೆ ೧-೪-೦ ರೂ|| ಒಂದೇಸಾರ್ತಿಗೆ ೪ ಡಬ್ಬಿಗಳು ತರಿಸತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಎಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ಬೇನೆ ಇಲ್ಲದವರನ್ನಾಗಿಮಾಡಿ, ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ, ಈ ಔಷಧವು ಈ ಕಂಪೆನಿಯ ಹೊರ್ತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ. ಯಾವತ್ತು ದೇಶಗಳಲ್ಲಿಯು ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತವೆ ಬರೆದು ಬಂದ ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು ಅಂಚೆಯ ಹಾಗೂ ವ್ಯಾಲ್ಯು ಪೇಯಬಲ್ ವೆಚ್ಚ ಬೇರೆ ಕೊಡಬೇಕು. (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖಜೂರ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು)

ಮಾಲೀಕರು—ಪಿ ಎಚ್ ಎ. ಬ್ರದರ್ಸ್ ಮತ್ತು ಕಂಪೆನಿ,
ಕರೆಂಟ್ ಇಂಗ್ಲಿಷ್ ಟ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.
ಪೋಸ್ಟ್—ಬೆಳಗಾಂವ. Post BELGAUM.

BANGALORE :—Printed and Published at the KARNATAKA PRESS, No. 40, HOSPITAL ROAD, CITY,—1896.

THE

Karnataka Prakasika.

ಚಂದಾದರಗಳು.—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸಹ.
ಸಾಲಿ 1 ಕ್ಕೆ ... 3 0 0 | ಸಾಲಿ 1 ಕ್ಕೆ . 4 0 0
6 ತಿಂಗಳಿಗೆ, ... 2 0 0 | 6 ತಿಂಗಳಿಗೆ . . 2 8 0
3 ತಿಂಗಳಿಗೆ, ... 1 4 0 | 3 ತಿಂಗಳಿಗೆ . . 1 8 0

ಕರ್ನಾಟಕ ಪ್ರಕಾಶಿಕಾ.

Published Every Monday Morning.

ಪ್ರಕಟನೆಯ ಚಾರ್ಜು { ಮೊದಲನೆಯದಫ ಪಙ್ಕ್ತಿ ಒಂದಕ್ಕೆ 0 2 0 / ಎರಡನೆಯ ದಫ ಪಙ್ಕ್ತಿ ಒಂದಕ್ಕೆ 0 1 0 }

[[illegible]]

[illegible]

VOL. XXIII. BANGALORE:—MONDAY, MARCH 2, 1896. No. 9.

Select Telegrams

London 22nd Feb —Mr J hn Morley has been elected for Montrose Burghs, having polled 4,565 votes against 2,562 polled by Mr Wilson, the Unionist candidate

Sir F. H. Evans, (Liberal), has been elected for Southampton, defeating Mr Candy (Conservative) by a majority of 25 votes and replacing Mr Chamberlayne, who was unseated

London 26th Feb —The *Times* correspondent at Constantinople telegraphs that, in reply to the Sultan's invitation to regulate the situation in Egypt, Lord Salisbury has stated that the suggestions of the Turkish Ambassador are too vague. The Sultan has therefore appointed a commission to formulate concrete proposals

The French Press eagerly discusses the question, and urges a Franco English understanding to effect a settlement based upon the British evacuation of Egypt

London 27th Feb —The Foreign Office and the Turkish Ambassador in London alike deny the statements of the *Times* correspondent at Constantinople in regard to Egypt It transpires, however that negotiations in regard to Egypt are proceeding between Great Britain and France

London 26th Feb —Many arrests have been made at Constantinople, it is reported, in connection with a plot on the life of the Sultan

London 28th Feb —Mr Wogne, the Radical candidate, has been elected for Lichfield by a majority of 530, defeating Major Darwin, Unionist, and replacing Mr Fulford, who was unseated

Calcutta 29th Feb, 3 p m —The Moplah outbreak is increasing The fanatics now number over 130, and have split into three or four parties Attempts have been made to hem them in the Chemlrashori jungle, but have proved fruitless owing to the extent and thickness of the jungle Of the four murders one was a Police sepoy One gang of Moplahs threaten a rising in Nenmini Amshom near Pandiood Special Police have been sent there. The Manjeri Treasury is threatened by another large gang Nearly 200 soldiers and 100 Police are at the front Mr Hewetson, the Collector, is at Angadipuram directing operations More soldiers are marching from Cannanore to-day Some sepoys have also been ordered to Calicut The Reserve Police have been ordered to mobilise There is a strong rumour that the Police Inspector of Chekkattu has been murdered I am enquiring into this

THE

Karnataka Prakasika.

MONDAY, MARCH 2, 1896.

THE ARMY AND INDIA.

The Chartered Company has asked Government to send 500 men from the Cape to reinforce Buluwayo

Reuter learns that Government will send 5,000 men to the Cape as soon as possible to be ready for any emergency that may arise

London, 2nd April—There is no official confirmation of the statement that 5,000 troops were to be despatched to the Cape

Masses of Dervishes attacked the Italian position at Kassala on Saturday. The Italians suffered a slight loss

The new Chinese Loan is largely covered in London and Berlin

Calicut, 2nd April—Another riot is reported from Alathur, near Palghat. Its cause and the names of those participating in it are not yet known but news arrives that two Moplahs were killed

Simla, 1st April—Mr Barnes, Foreign Secretary, took over charge at Simla to-day

Lahore, 1st April—Captain Kaye, Settlement Commissioner in Kashmir, has been deputed by the Council to decide the long standing boundary dispute between Kashmir and the Poonch States near Chikar

THE

Karnataka Prakasika.

MONDAY, APRIL 6 1896

EUROPEAN AFFAIRS

THE state of Europe at the present time is anything but re-assuring. From all parts we hear of something remarkable transpiring. For months past the Armenian atrocities have been the talk of many people in many lands. These subjects of the Sultan have been most ruthlessly treated, and they can obtain no redress. The powers of Europe joined together to compel the ruler of Turkey to do them justice, but to no effect. England was the only nation earnest in the matter. Russia found it to her advantage to side with the Sultan, and France sided with Russia. Then Germany took the part of the two, and England was left alone to fight the battle of the oppressed. She could do nothing, and so the Armenians have been abandoned to their fate. The way this has been brought about is a disgrace to these powers. They do not seem to care for justice, for right, only for their own interests. This Armenian business is certain to recoil upon the heads of those powers who have left the people to their fate, and the blood of the murdered will be required at the hands of the sovereigns that abandoned them to their fate. Then we have the powers of Europe watching each other in a most sinister manner. The armies are so enormous, the power is so evenly balanced that each nation has to be careful that its neighbour does not steal a march upon it. France has a grudge against Germany of twenty five years' standing. Twenty five years ago France was defeated by the other power, lost two Provinces, and had to pay a large indemnity. She has not forgotten this, nor is she likely to do so till she has had her revenge. There must be a war sooner or later between the two powers, and till it has come off neither can afford to disarm or in any way diminish its strength. Something may arise at any time to force the two into the field, and then the duel will be fought out that began in 1870. It is believed that the strain of keeping up a large force is felt far more severely by Germany than by France, and every year of peace adds greatly to the strength of the latter. Then it is believed that there is not a very good feeling between Germany and Russia, while an alliance, understood, if not openly avowed, has been formed between the latter country and France. France has backed up Russia in the Armenian business, and does the bidding of the Czar whatever that may be. Next we turn to Italy. This power has lately received a terrible blow in Abyssinia. A large force was sent into that country, a great battle was fought, and the invaders were completely defeated. It was given out at first that the greater part of the force was annihilated, but matters were not quite so bad as this, though they were bad enough. The result will be that Italy will for a time, at least, be left out of account in reckoning up the strength of Europe, and it may be a long time before it recovers itself. The people have determined to carry on the war and this they are doing, but if the King of Abyssinia is willing to grant them pretty good terms, we fancy they will be only too glad to accept them. The country requires rest, the taxes are very heavy, and the people are bitterly complaining of the amount they have to pay. Italy will not be able to do much for sometime to come in the councils of Europe. Now we turn to England. This country has troubles, and not a few of them. She is undertaking a campaign in the Soudan, and this is opposed by France backed up, it is believed, by Russia. The former wants England to evacuate Egypt and the idea of the country being enlarged while under British protection is very hateful to the French. They seem determined to give trouble, and not a little. If the campaign in the Soudan should turn out a success the French will be angry, and they would rejoice should the forces sent into the desert be defeated. It is difficult to understand why France opposes England so strenuously in Egypt. The people profess not to desire to take possession of the country, but yet they will not allow the British to stop there if they can possibly help it. Germany is, at the present time, inimical to England. It is believed she is supporting the Boers in their opposition to the suzerain power. The telegram sent by the Emperor of Germany to the President of the Transvaal was a very unfriendly document, and opened the eyes of the English to the feeling of the Germans against them. The latter have nothing to gain by their opposition, and if they went to war with England their commerce would be destroyed in a few days, and their coast towns bombarded. The large army of the nation could do nothing, for it could not land on the shores of England when the ships were destroyed. Russia, as we have said, is opposed to England on the Armenian question, and is backed up by France with regard to Egypt. Then again the American Republic has not settled matters with England. The Venezuelan question is still hanging fire though the Government of the States professes to be willing to call in arbitration. Whether it would abide by it is another question. It remains to be seen whether the British will accede to the request of President Cleveland. From what we have said it is clear that the political atmosphere is not so transparent as it ought to be and it is to be hoped that something will take place to bring about an improvement

News and Notes

THE next Provincial Conference of Bengal will be held in June at Krishnaghar, the birth place of Mr M M Ghose

THE Brahmins of the city of Bombay contemplate holding a meeting shortly in connection with the custom of shaving the heads of widows

SNAKES are reported to have again made their appearance in the Calcutta water supply. One measuring six inches in length was taken from a tap and sent to the Commissioner of Police for inspection

MESSRS Tata and Co Bombay have just received telegraphic news from Japan that the Japanese Government has abolished both the import duty on cotton and the export duty on yarn. The import duty on raw cotton was 40 cents, of a dollar per picul (133⅓ lbs) and the export duty on yarn was 5 per cent *ad valorem*

A Mahomedan servant in the employ of Mr Oliver Thomas is awaiting trial in Calcutta on a charge of having kidnapped his master's daughter, Miss Edith Thomas, about fourteen years of age. He took her, it is alleged, to Monghyr, where they were joined by a Mahomedan cook, recently in the same employ. A warrant has been issued for the arrest of the cook who is still at large

A PETITION was lately presented to the Agent and Manager of the Madras Railway by Native passengers passing through Renigunta that the Rest house for their use there could not be made use of by many people, owing to the prohibitive rates charged for its use. Mr Moss before he went on leave passed an order that the rate should be reduced so that all classes of the Native community might partake of the benefits of the Renigunta rest house

THE Agent of the S I Ry has submitted to the Board proposals for the improvement of the subordinate staff of the Traffic Department and they relate to the compulsory retirement at a fixed age, a system of grading and a scale of salaries, a service register to be kept by each employer, appointing European Station-Masters for important Stations, instituting examinations, and a better system of supervision by the superior staff and giving an increase of pay to Assistant Station-Masters and Station Masters.

CURIOUS are the ways of Hyderabad politics. The Legislative Council, which a fiat of the Nizam has called into existence, is so little in touch with public opinion that, according to a well informed contemporary, the local press is not even informed of the meetings of the Legislators of the country. Neither are the proceedings sent to the press for publication. It is, however, difficult to believe that there is not a single member in the whole assembly who can realize the advantage of public criticism on matters of importance which are supposed to be discussed in the Council Chamber.

LORD SANDHURST'S "slumming" expedition was not known to the public till after His Excellency and party emerged from the filthiest of Bombay alleys into the crowded Bhendi Bazar. A local paper writes that there, for the first time, an intelligent public awoke to the fact that the Governor in person was in their midst. They thronged round him with loyal curiosity, and when he drove off to Government House, the large crowd which had collected gave a ringing cheer, having instinctively divined that His Excellency's visit was prompted by a sympathetic interest in their condition

HERE are some hard nuts to crack for the anti-vaccination fanatics. In the Hyderabad Assigned Districts, in the year 1872 73 the ratio per thousand of the population successfully vaccinated was 8 92 while the death rate per thousand from small-pox was 2 03, in 1877 78 the first ratio had increased to 25 72, and the second declined in corresponding measure to 1 50; ten years later, the vaccination rate was 34 68 and the death-rate 0 55; in 1893 94 the former figure had further advanced to 35 50 and the latter fallen to 0 [illegible] in 1[illegible] 95, with a drop in the vaccination rate to [illegible], there was a corresponding rise in the

death rate to 37. These are hard figures for any anti-vaccinationist to explain away

---

The revenue of the United Kingdom has for *the first time in history reached £100,000,000* sterling Reuter informs us that last year's Revenue amounts to the huge total of £109,000,000 The previous year it amounted to £93,175,000 It is remarkable that the *Economist* anticipated a few weeks ago that the Revenue for the year would amount on a liberal estimate to £102,400,000, so that during the last few weeks of the year the incomings must have been quite exceptionally large. As the Budget Estimates amounted only to £96,150,000, there is an enormous surplus of something like £13,000,000

An excellent arrangement has just been started in Darjeeling It consists in a box set up in a conspicuous place on the Chowrasta to receive complaints and suggestions for the Police and Municipal authorities Judging from the stories that last year's visitors brought down with them from Darjeeling the box should have a lively function to perform and the Deputy Superintendent of Police is an enterprising person to have started it That it will serve to show the Municipal authorities what indignant visitors think of the odours of Darjeeling is very possible that it will tend to effect an improvement is also possible though perhaps not too probable

---

A Correspondent writes to the Daily Post —I don't know if any European has ever before now eaten the flesh of a tiger, it all events although I have killed several I could never make up my mind to try the experiment The other day the four Belgian Noblemen, however, had some of the flesh of the tiger shot by one of them cooked, and pronounced it to be excellent eating, and free from any disagreeable taste, they said that they rather like the taste and flavour of it Other sportsmen I hope, will, when they get a tiger, give the flesh a trial and let the public know what *they think of it The Belgian Noblemen* assured me that they relished it, and did not find it tough

---

Owing to a large number of books being lost and other inconveniences arising from the present system of issuing books from the Judges' Library the Acting Registrar of Madras High Court has issued a notice under the orders of the *Hon'ble the Chief* Justice and Judges of the High Court to the effect that the room to the north of the Library will be made available for the use of practitioners where Library books will *be issued to them between the hours of* 11 A M and 6 P M, but will on no account be allowed to be taken out of the room Any practitioner requiring a book from the Library for *use in Court* may apply to the Registrar who will order it to be there produced The Bench Clerk on duty will return the book

---

On Saturday the 28th March the Faculty of Arts of Calcutta University met to consider 3 resolutions put by the Banga Sahitya Parishad headed by Mr. R C. Dutt, (1) to adopt the Bengalee language as optional test in the B A. and F A examinations in addition to Sanskrit (2) to put papers on Bengalee translation and composition in F A, (3) to examine the entrance candidates in Geography, History and Mathematics in Bengalee Mr Ram Chunder Mitter moved the first resolution which was not seconded The second resolution to appoint a Committee to consider the second proposition moved by Mr Guru Das Banerjee and seconded by Gopal Sastri was carried by 22 votes against 21 The third resolution moved by Mr Guru Das Bannerjee and seconded by Gopal Sastri was lost

---

Professor Shankar Abaji Bhise, of Bombay is spoken of as a very successful exponent of the science of thought-reading The Professor recently *gave a demonstration at the residence* of a well known Bombay citizen and according to a correspondent to a local paper "conclusively demonstrated to what a pitch of perfection the science of thought reading may be brought by a combination of eastern tradition with western practice Professor Bhise is still quite a young man, but his exceptional talents in scientific research, together with the possession of ample private means, which have permitted him to indulge in this somewhat expensive amusement have enabled him at this early stage to achieve such a success as is denied *to those* whose talents are not of such a high order, or have not the time and money to devote to it In London and Manchester he was so much appreciated that he is shortly returning to Europe, where we are convinced that he will achieve a still greater success"

Local and Provincial.

The Easter Holidays —Began on Friday last and terminate to morrow

---

Mysore Police Report —We have received a copy of this Report, and shall review it in our next issue

---

The Dewan —As the Royal family is not proceeding to the Hills the Dewan returned to Bangalore last Thursday

---

The Maharani —It is now said that Her Highness will not go to Ootacamund this year on account of the illness of the second Prince

---

The Weather —This is still very hot, and there are no signs of rain The ground looks quite parched, and some of the tanks are drying up fast The heat during the day has rarely been greater in Bangalore than it is now

---

A Forest Ranger in Trouble —The Forest Ranger of Arsikere, Hassan District, has been accused of theft of large quantities of gallnuts which, it would appear were sold to a Bangalore merchant who may also be hauled up

---

A New Probationer —We learn that Mr K Subba Row, Son-in-law of the *Head* of Madras has been appointed a Probationer on Rs 100 a month and posted to the Dewan's Office *Truly* this appointment does not appear to have been made for want of capable men in the Province !

Theosophy in Mysore —A Local Branch of the Theosophical Society was formed last Sunday last with about 40 members Mr A Narasimha Iyengar, B A, has been elected President Mr M Ramaswami Iyengar, B A, Sessions Judge, Vice President, Mr M Sastri, Secretary and Mr A Govindacharlu, Treasurer

---

The Government of India has selected Mr Fraser to be tutor and guardian to the young Maharajah of Mysore, desiring apparently to keep so important a charge under one of its own *Political Officers* Mr Whiteley who has filled the duties hitherto with great ability is to be given another appointment as a solatium, namely, to act for Mr Mallet lun

---

Mr K Chandy —This gentleman a probationary Assistant Commissioner who has passed creditably the Revenue and the Civil branches of the local Service Examination and who has failed in the Criminal branch, for want of 3 marks, requested the Durbar to take his case into consideration and to declare him to have completed the test or to confirm him in his appointment A special meeting of the Board of Examiners was held yesterday in the Durbar office to settle this affair

The Mysore Gazette

Bangalore Thursday, March 26, 1896

NOTIFICATIONS BY THE GOVERNMENT OF MYSORE

No 11026—*Mis* F 155 92, *dated 20th March* 96

Under Article 188 of the Mysore Service Regulations Dr A S Fernandez, Civil Surgeon, Kadur District *is granted* privilege leave of absence for three months from the 11th April 1896 or from such other date as he may avail himself of the same

No 8931—*E* 3465, *dated 31st March* 1896

Under Article 171 of the Mysore Service Regulations, Mr B G Krishnaiengar, Offg Deputy Commissioner, Kolar District, is granted casual leave of absence for three days with effect from the 6th April 1896 or such other date as he may avail himself of the same

The Senior Assistant Commissioner will be in charge of the current duties of the Deputy Commissioner during Mr Krishnaiengar's absence on leave

Notification dated 27th March 1896

Her Highness the Maharani-Regent, C I, of Mysore is pleased to appoint Subadar Major Venkoji Rao, (retired) as Riding Master to His Highness the Maharaja of Mysore, with effect from the 10th February 1896 He will take rank with *Risaldars of Cavalry Regiments* according to seniority

ಕರ್ಣಾಟಕ ಪ್ರಕಾಶಿಕಾ.

೧೮೯೬ ನೇ ಇಸವಿ ಏಪ್ರಿಲ್ ೬ನೇ ತಾ॥ ಸೋಮವಾರ

ಕರ್ನಲ್ ಆಲ್ಕಾಟ್ ಯವರ ಪ್ರಸಂಗವು

ಕಳೆದ ತಿಂಗಳ ೩೧ನೇ ತಾರೀಖ್ ಬುಧವಾರ ಸಾಯಂಕಾಲ ಮೈಸೂರು ಟೌನ್ ಹಾಲ್‌ನಲ್ಲಿ ಥಿಯಾಸಾಫಿಕಲ್ ಸೊಸೈಟಿಯ ಪ್ರೆಸಿಡೆಂಟರಾದ ಕರ್ನಲ್ ಆಲ್ಕಾಟಿಯವರು ಮಾಡಿದ ಉಪನ್ಯಾಸವಂ ಕೇಳಬೇಕೆಂಬ ಕುತೂಹಲದೊಡನೆ ಬಹು ಮಂದಿ ಬಾಲಕರು ನೆರೆದಿದ್ದರು. ಸದರೀ ಪ್ರಸಂಗವು ಕೇವಲ ತರುಣೋದ್ದಿಷ್ಟವಾದುದರಿಂದ ಸಭೆಯು ಬಾಲಕರ ತರಳತೆಯಿಂ ನೀಗುವಂತಾದ್ದಾಗಿತ್ತು. ಆ ಸಾಯಂಕಾಲ ೬½ ಘಂಟೆಗೆ ಸರಿಯಾಗಿ ಕರ್ನಲ್ ಆಲ್ಕಾಟಿಯವರು ತರುಣ ಸಮೂಹದೊಳು ತರಣಿಯಂತೆ ಪ್ರಕಾಶಿಸುತ ಅವರನ್ನುದ್ದೇಶಿಸಿ ಮುಕ್ಕಾಲು ಘಂಟೆಯ ಕಾಲಕ್ಕೆ ಮೇಲ್ಪಟ್ಟು ಪ್ರಸಂಗವಂ ಮಾಡಿದರು. ಆ ಪ್ರಸಂಗದ ಸಾರಾಂಶವೇನೆಂದರೆ ಹಿಂದೂ ಬಾಲಕರಾರ್ಜಿಸಬೇಕಾದ ಉತ್ತಮ ನಿಷ್ಠೆಯಂ ಕುರಿತು ಉಪಪಾದನವಂ ಗೈದು ತಿಳಿಸಿದ್ದೇನೆಂದರೆ—ಹಿಂದೂ ಬಾಲಕರ ಮಾತಾಪಿತೃಗಳು ಸ್ವಮತ ವಿಷಯಕವಾದ ಜ್ಞಾನವನ್ನು ಪಡೆಯುವುದಕ್ಕೆ ಸ್ವಲ್ಪವೂ ಶ್ರದ್ಧೆಯಂ ವಹಿಸದೆ ಉಪೇಕ್ಷಿಸಿ ಬಿಡುತ್ತಾರೆ. ಬಾಲಕರಿಗ ಸ್ವಭಾಷಾ ಜ್ಞಾನವು ಯಥೋಚಿತ ಪ್ರಮಾಣಕ್ಕೆ ಮುಂಚಿತವಾಗಿಯೇ ಅವರನ್ನು ಇಂಗ್ಲಿಷ್ ಭಾಷಾಭ್ಯಾಸಕ್ಕಾಗಿ ಮಿಷನ್ ಸ್ಕೂಲುಗಳಿಗೆ ಕಳುಹಿಸುವ ಪದ್ಧತಿಯನ್ನಂಗೀಕರಿಸಿರುತ್ತಾರೆ. ಕ್ರಿಶ್ಚಿಯನ್ ಮಿಷನರಿಗಳು ತಮ್ಮ ಮತ ಸಿದ್ಧಾಂತಗಳನ್ನು ಸದರೀ ಬಾಲಕರಿಗೆ ಬೋಧಿಸಿ ಸಾಧ್ಯವಾದಮಟ್ಟಿಗೆ ಅವರ ಚಿತ್ತವೃತ್ತಿಯಂ ಸ್ವಾಯತ್ತಪಡಿಸಿಕೊಳ್ಳಲಿಕ್ಕೆ ವಿಶೇಷ ಶ್ರದ್ಧೆಯನ್ನೂ, ಅಸಾಧಾರಣವಾದ ವಾತ್ಸಲ್ಯವನ್ನೂ, ನಿರತಿಶಯವಾದ ಔದಾರ್ಯವನ್ನೂ ವ್ಯಕ್ತಪಡಿಸುವದರಲ್ಲಿ ಬಹಳ ಆಸಕ್ತಿಯಂ ತೋರಿಸುವಂತವರಾಗಿರುತ್ತಾರೆ. ಇದರಿಂದ ನಮ್ಮ ಬಾಲಕರಿಗೆ ಸ್ವಮತವಿಷಯಕವಾದ ಜ್ಞಾನೋದಯಕ್ಕಿಂತಲೂ ತದ್ವಿರುದ್ಧಮತ ಜ್ಞಾನವು ಅತಿ ಸುಲಭವಾಗಿಯೂ, ಶೀಘ್ರವಾಗಿಯೂ ಉಂಟಾಗುತಿದೆ. ಕಡೆಗ ನಮ್ಮ ಬಾಲಕರನೇಕರಿಗೆ ತಮ್ಮ ಮತ ಪ್ರವರ್ತಕರು ಯಾರೋ, ಅದರಲ್ಲೇನು ತಿಳಿಸಲ್ಪಟ್ಟಿದೆಯೋ ಆ ಅಂಶವೇ ಗೊತ್ತಿಲ್ಲದೆ ಹೋಗಿದೆ. ದೇಶವೊಳ್ಯಾವತ್ತು ಪಾಠಶಾಲೆಗಳನ್ನೂ ನೆಲೆಗೊಳಿಸಿ ಬಾಲಕರಿಗೆ ವಿದ್ಯಾಭ್ಯಾಸ ಮಾಡಿಸುವ ವ್ಯಾಜದಿಂದ ಕ್ರಿಸ್ತ ಮತವನ್ನುಪದೇಶಿಸಿ ತಮ್ಮ ಮತಗ್ರಂಥವಂ ಪ್ರಚಾರದೊಳು ತರುವದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಮಿಷನರಿಗಳು ಶೇಖರಿಸಿಟ್ಟು ತನ್ಮೂಲಕ ತಮ್ಮ ಉದ್ದೇಶವಂ ನಾನಾವಿಧದಿಂ ಪ್ರಾರ್ಥಿಸಿಕೊಳ್ಳುತ್ತಾರೆ. ಬಾಲಕರ ಹೃದಯದೊಳು ಪ್ರಥಮತಃ ನೆಲೆಗೊಳ್ಳುವಭಾವನವೇ ಚಿರನಿರೂಢವಾಗುವುದು ಸಹಜವಾದುದರಿಂದ, ಶೈಶವಾವಸ್ಥೆಯಲ್ಲಿ ಯುಕ್ತಾಯುಕ್ತ ಪರಿಜ್ಞಾನವಿಲ್ಲದಿರುವಾಗ ಸ್ವಮತ ಗಂಧಾನಭಿಜ್ಞರಾಗಿ ಪರಮತ ವಿಷಯಕ ಜ್ಞಾನವಂ ಸಂಪಾದಿಸುವುದು ಕಡೆಗೆ ಅನರ್ಥಹೇತುವಾಗದೆ ಹೋಗುವದಿಲ್ಲವು. ಬಾಲಕರು ತಮ್ಮ ಜೀವಿತ ಕಾಲದೊಳು ಬಹಳ ಉಪಯುಕ್ತಭಾಗವನ್ನು, ಪರಮತ ವಿಷಯ ವ್ಯಾಸಂಗದಲ್ಲಿ ಕಳೆಯುವದರಿಂದಲೂ, ಸ್ವವಿಷಯಕ ಜ್ಞಾನವಿಲ್ಲದೆ ಹೋಗುವದರಿಂದಲೂ, ಪರಿಣಗಳಂತೆ ಸ್ವಮತ ವಿರೋಧಿಗಳಾಗಲಿಕ್ಕೊಳಗಾಗುತ್ತಾರೆ. ಮನುಸ್ಮೃತಿಯೊಳಗಿನ ಕೆಲವು ಶ್ಲೋಕಗಳನ್ನುದಹರಿಸಿ ನಿಮ್ಮ ಮತದೊಳಿಲ್ಲದಂತ ಅಧಿಕಾಂಶವೇನೂ ಅನ್ಯ ಮತದಲ್ಲಿಲ್ಲವೆಂದು ತಿಳಿಸಿ ಪ್ರಾಸಂಗಿಕರು ಮರಳಿ ಬಾಲಕರಂ ಕುರಿತು, ಸಕಲ ಅಂಶಗಳೂ ಸಕಲ ತತ್ವಗಳೂ, ಸರ್ವ ರಹಸ್ಯಗಳೂ ನಿಮ್ಮಲ್ಲಿರುವಾಗ ಅವಂ ನೀವು ಗ್ರಹಿಸಲಿಕ್ಕೆ ಸ್ವಲ್ಪವೂ ಪ್ರವರ್ತಿಸದೆ ನಿಮ್ಮ ಮತದಿಂದಂಕುರಿಸಿದ ಅನ್ಯ ಮತವನ್ನವಲಂಬಿಸಲಿಕ್ಕೆ ನೀವೇತಕ್ಕೆ ಹಾತೊರೆಯುತ್ತೀರೋ ತಿಳಿಯಲಿಲ್ಲವು, ಇಹ ಜನ್ಮದಲ್ಲಿಯೂ ಜನ್ಮಾಂತರದಲ್ಲಿಯೂ ಉತ್ತಮ ಮಾರ್ಗದಿಂ ಜೀವಿಸಿ, ಧನ್ಯರಾಗಲಿಕ್ಕೆ ಆವಶ್ಯಕಗಳಾದ ಸಕಲ ಸಾಧನಗಳೂ ಹಸ್ತಗತವಾಗಿವೆ, ಸಾಹಸಪರರಾದ ಮಿಷನರಿಗಳವೋಲ್ಪದನಾಸ್ಯಕ್ಕೆ ಸುಲಭವಾಗಿ ಪತ್ಯರಾಗುವಂತ ಶೋಚನೀಯಾವಸ್ಥೆಯಲ್ಲಿ ಮುಗ್ಧರನ್ನಾಗಿ ನಿಮ್ಮನ್ನಿಡುವದರಿಂದ ನಿಮಗೆ ಉತ್ತರೋತ್ತರ ಸಂಭವಿಸಬಹುದಾದಂತೆ ಅನರ್ಥಗಳನ್ನು ನಿಮ್ಮ ಮಾತಾಪಿತೃಗಳು ಸ್ವಲ್ಪವೂ ಭಾವಿಸುವವರಲ್ಲದೆ ಹೋಗಿದಾರೆ. ಇದಕ್ಕೆ ಪ್ರತಿಯಾಗಿ ನಿಮ್ಮ ಮಾತಾಪಿತೃಗಳು, ನೀವು ಈಗ ವರ್ತಿಸುತಲಿರುವಂತ ಅಪಾಯಕರವಾದ ದುಷ್ಪಥದಿಂದ ನಿಮ್ಮನ್ನಗಲಿಸಿ, ನಾನಾ ವಿಷಯಗಳಲ್ಲಿ ಅನಾವಶ್ಯಕವಾಗ ಮಾಡುವ ಅತಿ ವ್ಯಯಗಳನ್ನು ತಗ್ಗಿಸಿ ಅದನವ ನಿಮಗುಪಯುಕ್ತವಾದ ಮಾರ್ಗದಲ್ಲಿ ವಿನಿಯೋಗಿಸುತ ನಿಮ್ಮ ಮತ ವಿಷಯಕವಾದ ಜ್ಞಾನವಂ ನಿಮಗುಂಟುಮಾಡಲಿಕ್ಕೆ ಸಾಧಕವಾಗಿ ಪಾಠಶಾಲೆಗಳನ್ನೇರ್ಪಡಿಸಿ ಅವುಗಳಲ್ಲಿ ಸಮರ್ಥರಾದ ಬೋಧಕರನ್ನಿಟ್ಟು ತನ್ಮೂಲಕ ನಿಮ್ಮ ಜ್ಞಾನವಂ ಅನಾಕರ್ಷಿತವಾಗದೆ ದೃಢವಾಗಿ ಕಾಪಾಡಿಕೊಳ್ಳಬೇಕಾದದು ಅವರ ಪ್ರಥಮ ಕರ್ತವ್ಯವಾಗಿರುತಿದೆ. ಹೀಗೆ ಮಾಡುವದರಿಂದ ಉತ್ತರೋತ್ತರ ಪ್ರಾಪ್ತವಾಗಬಹುದಾದ ಪ್ರಯೋಜನವೇನೆಂದರೆ—ಕ್ರಮೇಣ ನೀವೆಲ್ಲರು ಸ್ವವಿಷಯಕಜ್ಞಾನ ಸಂಪಾದನದಿಂದ ಪ್ರವೀಣರಾಗಿ, ಇಂಡ್ಯಾ ದೇಶದೊಳು ಕ್ರಿಶ್ಚಿಯನ್ ಮತದ ನೆಲೆಯೇ ಇಲ್ಲದಿರುವದಾಗ, ತನ್ಮತಾವಲಂಬಿಗಳನ್ನು ವಾದ ಬಲದಿಂ ಗೆದ್ದು ಪ್ರತಿವಾದಿ ಭೀಕರರೆನಿಸುವವರೆಂಬೇನೂ ಸಂದೇಹವಿರಲಾರದು. ಅಥವಾ ನೀವು ಸ್ವಮತ ದಕ್ಷರಾಗಿಯಾದರೂ ಆಗಬಹುದು. ತತ್ತದ್ವ್ಯಕ್ತಿನಿಷ್ಠವಾದ ಕರ್ತವ್ಯಗಳನ್ನವರವರು ನೆರವೇರಿಸಲಿಕ್ಕೆ ಶಕ್ತರಲ್ಲವೆ ಹೋದರೂ ಸಾಮುದಾಯಕ ಪ್ರಯತ್ನದಿಂದಲಾದರೂ ಸಾಧ್ಯವಾದ ಮಟ್ಟಿಗೆ ತಮ್ಮ ಅಪೇಕ್ಷಿತಾಂಶಗಳನ್ನು ಸಾಧಿಸಿಕೊಳ್ಳಬೇಕಾಗಿರುತಿದೆ ಎಂದು ನುಡಿದು, ಈದಿನದ ತಮ್ಮ ಯಾಂಮನ್ನೇಶವು ಹಿಂದೂ ಬಾಲಕರ ಶ್ರೇಯೋಭಿವೃದ್ಧಿಯಂ ಬಯಸಿ ಆರ್ಯಬಾಲ ಸಮಾಜವೆಂಬ ಹೆಸರಿನಲ್ಲೊಂದು ಸಂಘ ನಿರ್ಮಾಣವಂ ಮಾಡವೇಕಾದುದಾಗಿರುತಿದೆ, ಮೇಲಿನ ಅಂಶದ ಲ್ಲೊಂದು ಸಭೆಯು ಪ್ರಕೃತಸ್ಥಿತಿಯೊಳು ನಿಮಗೆ ಅಪೇಕ್ಷಿತವೇ ಇಲ್ಲವೆ ಎಂದು ಕರ್ನಲ್ ಆಲ್ಕಾಟಿ ಯವರು ಅಲ್ಲಿ ನೆರದಿದ್ದ ಬಾಲಕರನ್ನು ಪ್ರಶ್ನೆ ಮಾಡಲು ಎಲ್ಲರೂ ತಮ್ಮ ಅಭಿಮತವಂ ತಿಳಿಸಿದರು. ತರುವಾಯ ಸಂಘಾಂಗಭೂತವಾದ ಅಧ್ಯಕ್ಷ ನಿರ್ಮಾಣವೂ, ಸಭಾ ಕಾರ್ಯದರ್ಶಿ ಮತ್ತು ಕೋಶಾಧ್ಯಕ್ಷರ ವ್ಯವಸ್ಥಾಪನೆಯೂ ಕೂಡಲೆ ಬಾಲಕರಿಂದ ಮಾಡಲ್ಪಟ್ಟವು. ಅನಂತರ ಕರ್ನಲ್ ಆಲ್ಕಾಟಿಯವರು ಅಲ್ಲಿ ಹಾಜರಿದ್ದ ದೊಡ್ಡಮನುಷ್ಯರನ್ನೂ, ಬಾಲಕರ ಇಷ್ಟಬಂಧುಗಳನ್ನೂ ಕುರಿತು, ಪ್ರಸಕ್ತ ಸಂಘಕ್ಕೆ ಒಂದು ಸರಸ್ವತೀ ಭಂಡಾರವು ಆವಶ್ಯಕವಾಗಿರುವದರಿಂದ ತಾವೆಲ್ಲರೂ ಆ ಬಗ್ಗೆ ಧನಸಹಾಯ ಮಾಡುವದುಚಿತವೆಂದರುಹಿದರು. ವಕ್ತೃಗೌರವದಿಂದ ಅಲ್ಲಿದ್ದವರೆಲ್ಲರು ಧಾರಾಳವಾಗಿ ಧನಸಹಾಯ ಮಾಡುವದಾಗಿ, ವಾಚಾ ಅತ್ಯೌದಾರ್ಯವು ಅನಪೇಕ್ಷಿತವಾಗಿ ಆದರದೊಡನೆ ವ್ಯಕ್ತಪಡಿಸಿದರು. ಬಹುಜನರಪ್ರತಿಜ್ಞಾಪೂರ್ವಕ ಮಾಡಿದ ಸರಸ್ವತೀ ಪ್ರಸನ್ನತೆಯಿಂದ ಲಭ್ಯವಾದ ಧನಸಹಾಯವಾದ್ಯಂತವು ಮುನ್ನೂರು ರೂಪಾಯಿಗಳಿಗಿಂತಧಿಕವಾಗಿಲ್ಲವು ಪ್ರಾಸಂಗಿಕರ ಉಪದೇಶ ಪ್ರಯತ್ನಗಳೆಲ್ಲವು ವ್ಯರ್ಥಗಳಾಗದೆ ಸ್ವಲ್ಪಮಟ್ಟಿಗಾದರೂ ಸಾರ್ಥಕ್ಯವನ್ನೈದಬೇಕೆಂದು ಕೋರುವೆವು. ಆದರೆ ಕರ್ನಲ್ ಆಲ್ಕಾಟಿಯವರು ಅರ್ಥೈಕ ಸಾಧ್ಯವಾದ ಅಂಶಗಳನ್ನರುಹುತೆಯೂ, ತನ್ಮೂಲಕ ಯಾವ ಸಹಾಯವನ್ನಿರೀಕ್ಷಿಸದೆಯೂ ಕೇವಲ ಔಪಚಾರಿಕನಾಗಿ ಅವರಿಗೆ ಒಂದು ಸಂಬಂಧವಂ ಕಲ್ಪಿಸಿ ಪ್ರಶಂಸಿಸಿದ್ದಿರುವರಾದರೆ ಅಲ್ಪಾಲ್ಪಕಾಲವಾದರೂ ಆದಿನದ ಪ್ರಯತ್ನಲಾಂಛನವು ಯಥೋಚಿತ ಕಂಡುಬರಬಹುದು. ಹಾಗಿಲ್ಲದೆ ಧನಮೂಲಕವಾದ ಪ್ರಯತ್ನವಾದುದರಿಂದ ಇದು ಅವರಂ ಧ್ಯಾನಿಸುವಂತ ಸಹಪ್ರೇರಿಸಲೊಲ್ಲದೆಂದೆಣಿಸುತ್ತೇವೆ.

ಅಧಿಕಾರದುರಾಗ್ರಹಜನ್ಯಸನ್ನಿಪಾತದೋಷವು.

ಲೋಕದಲ್ಲಿ ಮಾನವನಿಗೆ ಧನವಿದ್ಯಾಧಿಕಾರಗಳು ಕೇವಲ ಜನ್ಮಾಂತರ ಸುಕೃತ ವಿಶೇಷದಿಂದ ಲಭಿಸಬೇಕಾದವಾಗಿರುತಿವೆ. ಈ ಮೂರು ಪ್ರ

ಪ್ರಯೋಜನಗಳಿಂದಲೇ ಮಿಕ್ಕ ಇತರ ಪ್ರಯೋಜನಗಳು ಸಿದ್ಧಿಸಬೇಕಾದವಾಗಿರುತಿವೆ. ಇವುಗಳಲ್ಲಿ ಮೊದಲನೆಯದು ಸ್ವಾರ್ಥ ಪರಾರ್ಥೋಭಯಸಿದ್ಧ್ಯರ್ಥವಾದವಾಗಿಯೂ, ಎರಡನೆಯದು ಕೇವಲ ಸ್ವೋದ್ದಿಷ್ಟವಾದುದಾಗಿಯೂ, ಮೂರನೆಯದು ಕೇವಲ ಪರಾರ್ಥವಾದುದಾಗಿಯೂ ಏರ್ಪಟ್ಟವಾಗಿರುತಿವೆ. ಇದರಲ್ಲಿ ಒಂದೆರಡನೆಯದಕ್ಕಿಂತಲೂ ಮೂರನೆಯದರಲ್ಲಿ ಪರರಿಗೆ ಉಪಕಾರವಂ ಮಾಡುವದಕ್ಕಾಗಲಿ ಅಪಕಾರವಂ ಮಾಡುವದಕ್ಕಾಗಲಿ, ಮನುಷ್ಯನಿಗೆ ಸಾಧ್ಯವಾಗುವಂತೆ ಅನ್ಯತರದಿಂ ಸಾಧ್ಯವಲ್ಲವು. ಇಂತ ಪರಪ್ರಯೋಜನೋದ್ದಿಷ್ಟವಾದ ಅಧಿಕಾರವು ಪ್ರಾಪ್ತವಾದ ಕೂಡಲೆ ಪುರುಷನಿಗೆ ಸಕಲೇಂದ್ರಿಯಪಾಟವವು ತಪ್ಪಿಹೋಗುತಿವೆ. ಇದಂ ಸಾಮಾನ್ಯರೂಪೇಣ ನುಡಿಯಲಾಗದೆಂದು ಪಂಡಿತರು ಕದಾಚಿತ್ ಅಭಿಪ್ರಾಯ ಪಡಬಹುದು. ಇದಂ ನಾವು ಯಾಥಾರ್ಥ್ಯೇನ ಅಂಗೀಕರಿಸುವೆವು. ಪರಂತು, ತದಿತರ ಗುಣವುಂಟಾಗುವುದು ಕೇವಲ ಅಪೂರ್ವವಾಗಿರುವದರಿಂದ ಮೇಲೆ ನಾವು ಉದಹರಿಸಿರುವ ಗುಣವ್ಯತಿರೇಕ್ಯಾದಿ ಲಕ್ಷಣಗಳೇ ಸಾಮಾನ್ಯವಾದವವೆಂದು ಭಾವಿಸಬೇಕಾಗಿದೆ. ರೋಗದ ಪೂರ್ವರೂಪದಲ್ಲಿಯೂ, ವ್ಯವಸ್ಥೆಯಲ್ಲಿಯೂ, ಪರಿಣಾಮದಲ್ಲಿಯೂ ರೋಗಿಯ ಅವಸ್ಥೆಯು ಹೇಗೆ ಭಿನ್ನಿಸುವವೋ, ಅದೇರೀತಿ ಅಧಿಕಾರವು ಎರಡು ವ್ಯವಸಾನಕಾಲಗಳಲ್ಲಿ ಪುರುಷನ ಲಕ್ಷಣಗಳಂ ಬಹಳವಾಗಿ ಮಾರ್ಪಡಿಸುತಿದೆ. ತತ್ಕಾಲದಲ್ಲಿ ಅನಿರೀಕ್ಷಿತವಾಗಿ ಪುರುಷನಿಗೆ ಬರುವ ಅಧಿಕಾರವನ್ನು ಸನ್ನಿಪಾತರೋಗಕ್ಕೆ ಸಮಾನವೆಂದು ಭಾವಿಸಬೇಕಾಗಿದೆ. ಬಹುಮುಖ್ಯವಾದ ಪ್ರಬಲರೋಗಗಳನೇಕವಾಗಿದ್ದರೂ, ನಿಜವಾದ ಸನ್ನಿಪಾತ ಲಕ್ಷಣಗಳು ಅನ್ಯರೋಗಗಳಿಗೆ ಇರುವದಿಲ್ಲವು. ಅತಏವ ಅಧಿಕಾರವೂ ಸನ್ನಿಪಾತವೂ ಸಮಾನವಾದುವೆಂದು ಎಣಿಸುವೆವು. ಅದು ಹ್ಯಾಗೆಂದರೆ:—ಜ್ವರಾಧಿಕ್ಯದಿಂದ ಶೀತಳ ಪ್ರಬಲವಾಗಿ ಅದರಿಂದ ದೇಹವು ಪ್ರಾಪ್ತನಾದ ಕೂಡಲೆ, ಪ್ರಥಮತಃ ಪ್ರಜ್ಞಾಭಂಗವು, ಅನಂತರ ಸ್ವರಭಂಗವು, ಬಳಿಕ ವೈವರ್ಣ್ಯವು, ತರುವಾಯ ನೇತ್ರಮಾಂದ್ಯವು, ಆಮೇಲೆ ಚಿತ್ತವೈಕಲ್ಯವು, ಕರಚರಣಾದಿಗಳ ಅಸ್ವಾಧೀನತೆ, ಪಿಪಾಸ ಮುಂತಾದ ವಿಪರೀತ ಲಕ್ಷಣಗಳು ತಲೆದೋರುವಣವು ಸ್ವಾಭಾವಿಕವಾಗಿಯೂ ಸಕಲರಿಗೂ ತಿಳಿದ ಅಂಶಗಳಾಗಿಯೂ ಇವೆ. ಇವುಗಳ ಪರಿಮಾಣವು ರೋಗಿಯ ಅದೃಷ್ಟಾನುಗುಣವಾಗಿರುತಿದೆ. ಇವು ಚಿಕಿತ್ಸೆಕ ಸಾಧ್ಯವಾಗುವುದೂ ಪ್ರಾಯಃ ಮರಣಾಂತಕ ಪರಿಣಾಮವಾಗುವುದೂ ಉಂಟು. ಹೀಗೆಯೇ ಅಲ್ಪರಿಗೆ ಅಧಿಕಾರಪ್ರಾಪ್ತಿಯು ಅನಿರೀಕ್ಷಿತವಾಗಿ ಲಭಿಸುವದರಿಂದ ಅದು ಪ್ರಾಪ್ತವಾದ ಕೂಡಲೇ ಮೇಲೆ ಕಂಡ ಅಸಾಧ್ಯ ಸನ್ನಿಪಾತ ಲಕ್ಷಣಗಳು ತೀವ್ರವಾಗಿಯೇ ತಲೆದೋರುವವೆ, ಹ್ಯಾಗೆಂದರೆ:—ಕ್ಷಯಾತುರನಿಗೆ ಅನ್ನಾತುರವು ಹೆಚ್ಚುವಣವೂ, ಆತುರದಿಂ ಸ್ವಶಕ್ತಿಯಂ ಮೀರಿ ಭುಜಿಸುವಣವೂ, ಅಮಿತವಾಗಿ ಭುಜಿಸಿದ್ದು ಪಚನವಾಗದೆ ಅಜೀರ್ಣರೂಪವಾಗಿ ಪರಿಣಮಿಸುವಣವೂ, ಅಜೀರ್ಣದಿಂದ ಪ್ರವರ್ತಿಯೂ, ಪ್ರವರ್ತಿಯಿಂದ ಜ್ವರವೂ, ಜ್ವರದಿಂ ಸನ್ನಿಪಾತವೂ ಕ್ರಮೇಣ ಪ್ರಾಪ್ತವಾಗುವಂತೆ, ಸಾಮಾನ್ಯ ಸ್ಥಿತಿಯೊಳಿರುವಂತ ಪುರುಷನಿಗೆ ತಾನು ನಿರೀಕ್ಷಿಸದಂತ ಉನ್ನತ ಪದವಿಯು ಅದೃಷ್ಟವಶಾತ್ ಲಭಿಸಿದರೆ, ಕೂಡಲೆ ತಾನು ಇತರಾಪೇಕ್ಷೆಯಾ ಶ್ರೇಷ್ಠತ್ವವನ್ನೈದಿ ವ್ಯಾವರ್ತಕನಾಗಬೇಕೆಂಬ ಆತುರವು ಮೊದಲು ತಲೆದೋರುತಿದೆ. ಆ ಆತುರ ವೃದ್ಧಿಸಿದ ಕೂಡಲೆ, ಇತರರಲ್ಲಿ ಅಲಕ್ಷ್ಯತಾ ಜ್ಞಾನವು ಅಂಕುರಿಸುತಿದೆ. ಅಲಕ್ಷ್ಯದಿಂ ಜಿಗುಪ್ಸೆಯುಂಟಾಗುತಿದೆ. ಇದೇ ಪ್ರಥಮ ಲಕ್ಷಣವು. ಜಿಗುಪ್ಸೆಯಿಂದ ಸಮಾನಸ್ಥಿತಿಯೊಳಿರಬೇಕಾದ ಪ್ರಜ್ಞೆಯು ವಕ್ರಗತಿಯನ್ನೈದುತಿದೆ, ಅಥವಾ ಹೀನವಾಗುತಿದೆ. ಪ್ರಜ್ಞಾಲೋಪವಾದ ಕೂಡಲೆ ದೃಷ್ಟಿಪಾಟವವು ತಪ್ಪಿ ಕೂಡಲೆ ಸ್ವರಭಂಗ ಪ್ರಾಪ್ತವಾಗುವಣ ಸಹಜಲಕ್ಷಣವು. ಸ್ವರಭಂಗ ಪ್ರಾಪ್ತವಾದ ಕೂಡಲೆ ಸ್ವಾಭಾವಿಕವಾದ ಮುಖಕಾಂತಿಯು ಮಾರಿ ವೈವರ್ಣ್ಯವು ಅಭಿವ್ಯಕ್ತವಾಗುತಿದೆ. ಅನಂತರ ಅಕಾರಣವೈರದೂಷಿತವಾದ ಹೃದಯದಲ್ಲಿ ದ್ವೇಷವೂ ಅಸೂಯೆಯೂ, ತಲೆದೋರಿ ಅವು ಚಿತ್ತವೈಕಲ್ಯವನ್ನೂ ಅನಾವಶ್ಯಕವಾದ ಆಗ್ರಹವನ್ನೂ ಉಂಟುಮಾಡುತಿವೆ. ಇವುಗಳಿಂದ ಕ್ರಮೇಣ ಇಷ್ಟಾನಿಷ್ಟ ವಂದ್ಯನಿಂದ್ಯ ಶತ್ರುಮಿತ್ರ ಪರಿಜ್ಞಾನವು ತಪ್ಪಿ ಹೋಗುತಿದೆ. ಇಂತವರು ಇತರರಿಗೆ ಹ್ಯಾಗೆ ದುರ್ಗಮರಾಗಿಯೂ ಅಸ್ವಾಧೀನರಾಗಿಯೂ, ಅದರ್ಶನೀಯರಾಗಿಯೂ ಏರ್ಪಡುತ್ತಾರೆಯೋ ತದ್ವತ್ ಅನ್ಯರಿಗೂ ಅವರು ಉದಾಸೀನರಾಗುತ್ತಾರೆ. ಇವ್ವರ ಸ್ಥಿತಿ ವಿಪರ್ಯಯವನ್ನುಂಟುಮಾಡುವ ಅಧಿಕಾರ ಬಲದೊಡನೆ ದುರಾಗ್ರಹವೆಂಬ ಕೃಷ್ಣದೋಷವು ಪ್ರಬಲಿಸಿದೊಡೆ ಅದು ಎಂದಿಗೂ ಚಿಕಿತ್ಸೆಗೆ ಸಾಧ್ಯವಾಗಲಾರದು. ಸಾಮಾನ್ಯೇನ ಪುರುಷನಿಗೆ ಕೋಪವೆಂಬುವುದು ಆತ್ಮವೈರಿ ಯೆನಿಸಿ ಮಹದನರ್ಥಗಳನ್ನುಂಟುಮಾಡತಕ್ಕದಾಗಿರುತಿವೆ. ಸಕಲ ಕಾರ್ಯನಾಶಕಕ್ಕೂ ಇದೇ ಆಧಾರಭೂತವಾದುದು. ಕೋಪವು ಸರ್ವ ಪಾಪಹೇತುಭೂತವಾಗಿ ಲೋಕನಿಂದ್ಯವಾದ ಕರ್ಮಗಳಿಗೆ ಪ್ರೇರಕವಾಗುತಿದೆ. ಇದು ಕುರಿತು ಶ್ರೀರಾಮರು, ಮಹಾ ಪ್ರಜ್ಞಾಶಾಲಿಯಾದ ಶ್ರೀಮದ್ಧನುಮಂತನಿಗೆ, ಇದರಡಿ ಕಂಡ ಶ್ಲೋಕದ್ವಯದಿಂದ ವಿವರಿಸಿರುತ್ತಾರೆ —

ಕ್ರುದ್ಧಃ ಪಾಪಂ ನ ಕುರ್ಯಾತ್ಕಃ ಕ್ರುದ್ಧೋ ಹನ್ಯಾದ್ಗುರೂನಪಿ।
ಕ್ರುದ್ಧಃ ಪರುಷಯಾ ವಾಚಾ ನರಃ ಸಾಧೂನಧಿಕ್ಷಿಪೇತ್ ॥
ವಾಚ್ಯಾವಾಚ್ಯಂ ಪ್ರಕುಪಿತೋ ನ ವಿಜಾನಾತಿ ಕರ್ಹಿಚಿತ್ ।
ನಾಕಾರ್ಯಮಸ್ತಿ ಕ್ರುದ್ಧಸ್ಯ ನಾವಾಚ್ಯಂ ವಿದ್ಯತೇ ಕ್ವಚಿತ್ ॥

ಎಂಬದಾಗಿ ಕೋಪವು ಒಂದುಂಟಾದರೆ ಸಕಲ ಪಾಪಕ್ಕೂ ಮೂಲವಾಗಿ ಲೋಕಹಿಂಸಾಕರವಾದ ಕ್ರೂರಕರ್ಮವನ್ನು ಯಾವನು ತಾನೇ ಮಾಡದೆ ಬಿಡುವನು? ಕೋಪಿಯಾದವನು ಪೂಜ್ಯರಾದ ತನ್ನ ಮಾತಾಪಿತೃಗಳನ್ನಾಗಲಿ, ಶ್ರೇಯೋತ್ತರಕರಾದ ಗುರು ಹಿರಿಯರನ್ನಾಗಲಿ, ಪ್ರಿಯತಮರಾದ ಬಂಧುಪುತ್ರರನ್ನಾಗಲಿ, ಕರುಣೆಯಿಲ್ಲದೆ ಕೊಲ್ಲಲಿಕ್ಕೆ ಹಿಂಜರಿಯಲಾರನು. ಇಷ್ಟುಮಾತ್ರವೇ ಅಲ್ಲದೆ ಕೋಪ ಹೊಂದುತ್ತಿರುವನಾದೊಡೆ ಕ್ರೋಧಾವಿಷ್ಟನಾದ ನರಾಧಮನು ಪರುಷಗಳಾದ ವಾಕ್ಯಗಳಿಂದ ಸಾಧುಗಳನ್ನೂ ಸಜ್ಜನರನ್ನೂ ಹಿಂಸಿಸದಿರಲಾರನು. ಪ್ರಕುಪಿತನಾದ ಪುರುಷನಿಗೆ ವಾಚ್ಯಾವಾಚ್ಯ ಪರಿಜ್ಞಾನವು ದುರ್ಲಭವು. ಅವನು ಲೋಕಾಪಕಾರರೂಪವಾದ ವಿರುದ್ಧ ಕಾರ್ಯಗಳನ್ನೇ ಮಾಡತಕ್ಕವನಾದ ಕಾರಣ ಸರ್ವಜನ ದೂಷ್ಯನಾಗುತ್ತಾನೆ. ಆ ಕಾರಣ,

ಧನ್ಯಾಸ್ತೇ ಪುರುಷಶ್ರೇಷ್ಠಾ ಯೇ ಬುದ್ಧ್ಯಾ ಕೋಪಮುತ್ಥಿತಂ।
ನಿರುಂಧಂತಿ ಮಹಾತ್ಮಾನೋ ದೀಪ್ತಮಗ್ನಿಮಿವಾಂಭಸಾ॥
ಯಸ್ಸಮುತ್ಪತಿತಂ ಕ್ರೋಧಂ ಕ್ಷಮಯೈವ ನಿರಸ್ಯತಿ।
ಯಥೋರಗಸ್ತ್ವಚಂ ಜೀರ್ಣಾಂ ಸ ವೈ ಪುರುಷ ಉಚ್ಯತೇ॥

ಜ್ವಲಿಸುತಲಿರುವ ಅಗ್ನಿಯು ಉದಕದಿಂದ ಹ್ಯಾಗೆ ನಿವಾರಿಸಲ್ಪಡಬಹುದೋ ಹಾಗೆ ಯಾವ ಮಹಾತ್ಮರು ತಮಗುಂಟಾಗುವ ಸರ್ವಾನರ್ಥಹೇತುಭೂತವಾದ ಕೋಪಾವೇಶವನ್ನು ಯುಕ್ತಾಯುಕ್ತ ಪರಿಜ್ಞಾನದಿಂ ನಿವಾರಿಸಲೆತ್ನಿಸುವರೋ ಅವರೇ ಧನ್ಯರು. ಅಂತವರೇ ಪುರುಷಶ್ರೇಷ್ಠರು, ಯಾವ ಮಹನೀಯರು ತಮಗೆ ಕೋಪಬಂದಾಗ ಆತುರವಂ ನೀಗಿ ಕ್ಷಮೆಯಂ ತಾಳಿ, ಉಪಶಾಂತಚಿತ್ತರಾಗಿ, ಜೀರ್ಣವಾದ ಚರ್ಮವನ್ನು ಸರ್ಪವು ತೊರೆದು ಬಿಡುವಂತೆ, ತಮ್ಮ ಕೋಪವನ್ನು ಶಮಿಸುವಂತೆ ಮಾಡಿಕೊಳ್ಳುವರೋ ಅವರೇ ಪುರುಷರು. ಅಂತವರಿಗೆ ಎಷ್ಟರ ಸಂಪದಧಿಕಾರಗಳು ಪ್ರಾಪ್ತವಾದರೂ ಅವು ನಿರುಪದ್ರವವಾಗಿಯೂ ಲೋಕಹಿತಪ್ರದವಾಗಿಯೂ ಇರುವುದು. ಹಾಗಿಲ್ಲದೆ ಲೋಕಾನುಭವವು ಲೇಶವೂ ಸಾಲದಂತ ಯುಕ್ತಾಯುಕ್ತ ಪರಿಜ್ಞಾನಶೂನ್ಯರಿಗೆ ಜನರ ಪ್ರಾಣ ಮಾನ ಧನ ರಕ್ಷಣಾಧಿಕಾರವನ್ನಿತ್ತು ಅವರ ವಿಚಾರಣೆಗೆ ಜನರನ್ನೊಪ್ಪಿಸಿದರೆ, ಗೋರಕ್ಷಣಾಧಿಕಾರವಂ ವ್ಯಾಘ್ರಕ್ಕೊಪ್ಪಿಸಿದಂತೆಯೂ, ವೃಶ್ಚಿಕಕ್ಕೆ ಮಂಡಲಾಧಿಕಾರವನ್ನಿತ್ತಂತೆಯೂ, ಅವರು ಮೇಲೆಕಂಡ ಸನ್ನಿಪಾತ ದೋಷಾವಿಷ್ಟರಾಗಿ "ಸ್ವಯಂ ನಷ್ಟಃ ಪರಾನ್ನಾಶಯತಿ" ಎಂಬಂತೆ ತಾವೂ ಕೆಟ್ಟು ತಮ್ಮ ಅಧಿಕಾರಕ್ಕೊಳಪಟ್ಟವರನ್ನೂ ಕೆಡಿಸಿ ಲೋಕಕಂಟಕರಾಗಿ ತಮ್ಮ ಸಾತವನನ್ನೆಲ್ಲರೂ ಅನವರತ ಕೋಪಮತ್ತೆ ತರ್ಲಸುವರು. ಅಂತವರನೇಕರು ಈ ಕಾಲದಲ್ಲಿ ನಮ್ಮ ದೃಷ್ಟಿಗೆ ವಿಷಯರಾಗಿರಲಿಕ್ಕೆ ಅದರಿಂದ ಪಾಲಿತರೆನಿಸಿರುವ ನಮ್ಮ ದುರ್ವಿಧಿಯೇ ಕಾರಣವೆಂದು ತಿಳಿದು ಅನವರತ ವ್ಯಥೆ ಪಡಬೇಕಾಗಿರುತಿದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

ಅಲಹಾಬಾದ್ ಪ್ರಾಂತದಲ್ಲಿ ಪಿಡುಗುರೋಗ ಅಧಿಕವಾಗಿ ಅದು ತಗಲಿದವರಲ್ಲಿ ಬಾಲ ವೃದ್ಧರೆಂಬ ತಾರತಮ್ಯ ಲೇಶವಿಲ್ಲದೆ, ನೂರಕ್ಕೆ ಎಪ್ಪತ್ತೈದು ಮಂದಿಯವರೇ ಮೃತಪಡುತಲಿರುವದಾಗಿ ಉತ್ತರದೇಶದ ಪತ್ರಿಕೆಗಳ ಮೂಲಕ ತಿಳಿದು ಬಹಳ ವಿಷಾದಿಸುತ್ತೇವೆ.

ಬ್ರಾಹ್ಮಣ ಪಿತಂತಗಳಿಗೆ ಮುಂದನ ಮಾಡಿಸುವದರ ಸಂಬಂಧ ಯುಕ್ತಾಯುಕ್ತತೆಯಂ ಕುರಿತು ಯೋಚಿಸಿ ನಿರ್ಧರಿಸುವದಕ್ಕಾಗಿ ಮುಂಬೈ ಷಹರ್ ನಿವಾಸಿಗಳಾದ ಬ್ರಾಹ್ಮಣರು ಒಂದು ಸಮಾಜ ಸೇರಿಸಬೇಕೆಂದು ಯೋಚಿಸುತಲಿರುವದಾಗಿ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

ಈಗ ಕಲ್ಕತ್ತೆಯೊಳು ಅಸಾಧಾರಣವಾದ ಬಿಸಲಿನ ಝಳದ ಮೂಲಕ ಯುರೋಪಿಯನ್ನರಲ್ಲಿ ಪ್ರಾಣಹಾನಿಗಳು ಬಹಳವಾಗಿ ಉಂಟಾಗುತಿವೆಯೆಂತಲೂ, ಇದರೊಡನೆ ವಾಂತಿ ಬೇದಿ ರೋಗವೂ ವ್ಯಾಪಿಸಿ ತನ್ಮೂಲಕ ಪ್ರಾಣಹಾನಿಗಳುಂಟಾಗುತಿವೆಯೆಂತಲೂ ಕೇಳಲಿಕ್ಕೆ ಬಹಳ ವಿಷಾದಿಸುತ್ತೇವೆ.

ದಕ್ಷಿಣ ಇಂಡಿಯಾ ರೈಲ್ ಮಾರ್ಗದೊಳು ಯಾವಯಾವ ಸ್ಟೇಷನ್ಗಳಲ್ಲಿ ಪ್ರಯಾಣಸ್ಥರು ಅಧಿಕವಾಗಿ ಸೇರುತ್ತಾರೆಯೊ ಆ ಸ್ಟೇಷನ್ಗಳಲ್ಲೆಲ್ಲ ಸ್ವದೇಶದ ಹೆಂಗಸರು ಕುಳಿತುಕೊಳ್ಳುವದಕ್ಕೆ ಪ್ರತ್ಯೇಕವಾದ ಸ್ಥಳವಂ ಏರ್ಪಡಿಸುವದಕ್ಕೆ ಹುಕುಂ ಆಗಲೀಯೆಂದು ಸದರೀ ರೈಲ್ವೇ ಯಜಮಾನರವರು ಬೋರ್ಡ್ ಆಫ್ ಡೈರೆಕ್ಟರುಗಳಿಗೆ ಬರೆದಿರುತ್ತಾರೆ.

ಬತ್ತಿಯಾ ಸಂಸ್ಥಾನದ ಮಹಾರಾಜರವರು ಪುತ್ರಸಂತಾನವಿಲ್ಲದೆ ಮೃತಪಟ್ಟರೆಂಬ ಅಂಶ ಪ್ರಸಿದ್ಧವಾಗಿದೆಯಷ್ಟೆ. ಈಚೆಗೆ ಮಹಾರಾಣೀಯವರು ಮೃತಪಟ್ಟರೆಂದು ಆತಿ ವರ್ತಮಾನ ಬಂದಿರುತಿದೆ. ಇವರು ಸಂಸ್ಥಾನಕ್ಕೆ ಬಾಧ್ಯಸ್ಥರನ್ನಾಗಿ ಯಾರನ್ನೂ ಚುನಾಯಿಸದೆ ಹೋದದರಿಂದ ಆ ವಿಷಯದಲ್ಲಿ ವ್ಯರ್ಥವಾದ ಪ್ರಬಲ ಕಲಹಗಳಿಗೆ ಅವಕಾಶವುಂಟಾಗಿದೆಯೆಂದು ಕೇಳಲಿಕ್ಕೆ ಬಹಳ ವಿಷಾದಿಸುತ್ತೇವೆ.

LOCAL AND PROVINCIAL NEWS
ಒಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು

ಸರ್ವಪ್ರಜಾಪ್ರಿಯರಾದ ಕಂಠೀರವ ನರಸರಾಜ ವಡೆಯರವರಿಗೆ ಇನ್‌ಫ್ಲುಯಂಜಾ ಜ್ವರವು ಪ್ರಾಪ್ತವಾಗಿ ಈಗ ಅವರು ಆರೋಗ್ಯವಾಗಿದಾರೆಂದು ತಿಳಿದು ಸಂತೋಷಿಸುತ್ತೇವೆ.

ಮದರಾಸಿನಲ್ಲಿ ಲೇಡಿ ವೆನ್‌ಲಾಕ್‌ಯವರ ಹೆಸರಿನಲ್ಲಿ ಕಟ್ಟಿಸುವ ಉದ್ಯಾನವನಕ್ಕೆ ಶ್ರೀಮನ್ಮಹಾರಾಣೀ ರೀಜೆಂಟರವರು ೧,೦೦೦ ರೂಪಾಯಿ ಕೊಡುವದಾಗಿ ವಾಗ್ದಾನ ಮಾಡಿರುತ್ತಾರೆಂದು ಕೇಳುತ್ತೇವೆ.

ಮಹಾರಾಣೀ ರೀಜೆಂಟರವರು ಪರಿವಾರ ಸಮೇತರಾಗಿ ಕಳೆದಸೋಮವಾರದ ದಿನ ಸಾಯಂಕಾಲ ಚಾಮುಂಡಿ ಬೆಟ್ಟದ ಮೇಲಕ್ಕೆ ದಯಮಾಡಿದರೆಂತಲೂ ಇನ್ನೂ ಈ ವಾರ ಅಲ್ಲೇ ಇರುವರೆಂತಲೂ ಕೇಳುತ್ತೇವೆ.

ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ಸಹಾಯೋಪಾಧ್ಯಾಯಿನಿಯಾಗಿರುವ ಮಿಸ್ ಪ್ರಾಷಾಂತಿ ಎಂಬ ಬಂಗಾಳಿ ಯುವತಿಯು ಮೂರು ದಿನ ವಾರದಲ್ಲಿ ತನ್ನ ಕೆಲಸವನ್ನು ಬಿಟ್ಟು ವಾಪಸು ಹೋಗುತ್ತಾಳೆಂತಲೂ ಆಕೆಗೆ ಬದಲಾಗಿ ಮ್ಯಾಡಂ ಸಪ್ಲ, ಬಿ ಎ ಯವರನ್ನು ನೇಮಿಸುತ್ತಾರೆಂತಲೂ ತಿಳಿದುಬಂದಿದೆ.

ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಸಂಪ್ರೋಕ್ಷಣೆ ಮಾಗದೇ ಇದ್ದಕ್ಕೆ ಕಾರಣಗಳೇನೆಂದು ಮಹಾರಾಣಿಯವರ [illegible] ಸಮಾಜದವರು ಪುನಃ ರೆಸಿಡೆಂಟರವರಿಗೆ ಅದೇ ವಿಷಯವಾಗಿ ಅರ್ಜಿ ಮಾಡಿಕೊಂಡಿದ್ದರು. ಆದರೆ ಈಗ ರೆಸಿಡೆಂಟರು, ಮಹಾರಾಣಿಯವರು ಕೊಟ್ಟಿರುವ ಪೈಸಲನ್ನು ಪುನಃ ವಿಮರ್ಶೆ ಮಾಡಬೇಕಾದ ಆವಶ್ಯಕತೆ ಕಂಡುಬರುವದಿಲ್ಲವೆಂದು ಮೇಲ್ಕಂಡ ಸಮಾಜದವರಿಗೆ ಉತ್ತರ ಕೊಟ್ಟಿರುತ್ತಾರೆ.—ವೃ. ಬೋ.

ಫೋಟೋಗ್ರಾಫಿ ಎಂದರೆ ಛಾಯಾಚಿತ್ರ. ಬೆಳಕಿನ ಕಿರಣಗಳು ಗಾಜಿನಮೇಲಿರುವ ಕೆಲವು ಪದಾರ್ಥಗಳ ಮೇಲೆ ಬೀಳುವದರಿಂದ ಅಂಥಾ ಛಾಯಚಿತ್ರವು ಉಂಟಾಗುತ್ತೆ. ಬೆಳಕು ನಾನಾ ಬಗೆಯಾಗಿಯೂ, ಕೆಂಪು, ಹಳದಿ, ನೀಲಿ, ಮುಂತಾದ ಬೇರೆ ಬೇರೆ ಬಣ್ಣಗಳುಳ್ಳದ್ದಾಗಿಯೂ ಇರುತದೆ. ಈ ಕಿರಣಗಳು ಇಂಥಾ ಬಣ್ಣದ್ದೆಂದು ನಮ್ಮ ಕಣ್ಣಿಂದ ವಿಂಗಡಿಸಿ ಹೇಳಬಹುದು. ಈ ಬೆಳಕಿನ ಕಿರಣಗಳು ಶ್ವೇತವಾಗಿರುವಂಥಾ ಪದಾರ್ಥಗಳ, ಅಂದರೆ ನೀರು ಗಾಜುಗಳ ಮುಖಾಂತರ ಪ್ರವೇಶಿಸಿ ಆಚೆಗೆ ಹೊರಟುಹೋಗುತವೆ. ಆದರೆ ಅದೇ ಕಿರಣಗಳಿಗೂ ನಮ್ಮ ಕಣ್ಣಿಗೂ ಅಡ್ಡವಾಗಿ ಮರ, ಕಲ್ಲು, ಗೋಡೆ, ತೆರೆ ಮುಂತಾದ್ದು ಇದ್ದರೆ ನಮಗೆ ಕಾಣಬರುವದಿಲ್ಲ. ಇಂಥಾ ಕಿರಣಗಳಲ್ಲದೆ ನಮ್ಮ ಕಣ್ಣಿಗೆ ಕಾಣದೆ ಇರುವಂಥಾ ಕಿರಣಗಳೂ ಉಂಟು. ಅವನ್ನು ನಾವು ನೋಡಲಾರೆವು. ಆದಾಗ್ಯೂ ಆ ಕಿರಣಗಳೇನೋ ಅಲ್ಲಿ ಇದ್ದೇ ಇರುವದು ನಿಜ. ಅಂಥಾ ಕಿರಣಗಳ ವಿಷಯದಲ್ಲಿ ನಮಗೆ ತಿಳಿಯುವದು ಬಹುಸ್ವಲ್ಪವೇ ಆದ್ದರಿಂದ ಅಂಥವುಗಳನ್ನು ಅದೃಶ್ಯಕಿರಣಗಳು ಎಂದು ಹೇಳುತ್ತೇವೆ.

ಈ ಅದೃಶ್ಯ ಕಿರಣಗಳು ಮರದಂಥಾ ಪದಾರ್ಥಗಳ ಮೂಲಕ ಪ್ರವೇಶಿಸಿ ಆಚೆಗೆ ಹೊರಟು ಹೋಗುತ್ತವೆಂತಲೂ, ಲೋಹ, ಮೂಳೆ ಮುಂತಾದ ಪದಾರ್ಥಗಳ ಮೂಲಕ ಪ್ರವೇಶಿಸಲಾರವೆಂತಲೂ ಗೊತ್ತಾಗಿದೆ. ಆದದರಿಂದ ಈ ಅದೃಶ್ಯ ಕಿರಣಗಳ ಫೋಟೋವನ್ನು ತೆಗೆಯುವದರಿಂದ ಒಂದು ಮರದ ಪೆಟ್ಟಿಗೆಯೊಳಗೆ ಮುಚ್ಚಲ್ಪಟ್ಟ ಪದಾರ್ಥಗಳ ಅಥವಾ ಮನುಷ್ಯನ ದೇಹದೊಳಗಿರುವ ಮೂಳೆಗಳ ಸ್ಥಿತಿಗತಿಗಳನ್ನು ಹೀಗೆಂದು ಗೊತ್ತುಮಾಡಲು ಅನುಕೂಲವಾಗುತ್ತೆ. ಒಂದು ಪೆಟ್ಟಿಗೆಯೊಳಗೆ ಕೆಲವು ಪದಾರ್ಥಗಳನ್ನಿಟ್ಟು ಪೆಟ್ಟಿಗೆಯ ಫೋಟೋವನ್ನು ತೆಗೆದರೆ ಅದರೊಳಗಿರುವ ಪದಾರ್ಥಗಳು ಇಂಥಾವೆಂದು ಗೊತ್ತಾಗುತ್ತೆ. ಮತ್ತು ಮನುಷ್ಯನ ದೇಹದ ಫೋಟೋವನ್ನು ತೆಗೆದರೆ ಒಳಗಿರುವ ಮೂಳೆಗಳು ಯಾವ ಸ್ಥಿತಿಯಲ್ಲಿರುತ್ತವೋ ಗೊತ್ತಾಗುತ್ತೆ. ಈ ರೀತಿಯಾಗಿ ಹೊಸತರದ ಫೋಟೋ ತೆಗೆಯುವ ಮಾರ್ಗವನ್ನು ಶಾಸ್ತ್ರಪರೀಕ್ಷಕರು ಕಂಡು ಹಿಡಿದಿರುತ್ತಾರೆ. ಒಬ್ಬನ ದೇಹದೊಳಗೆ ತುಪಾಕಿಯ ಗೋಲಿಯು ಹೊಕ್ಕಿದ್ದರೆ ಸಾಧಾರಣವಾಗಿ ಆ ಗೋಲಿ ಅವನ ದೇಹದಲ್ಲಿ ಇಂಥಾ ಕಡೆ ನಾಟಿಕೊಂಡಿದೆ ಎಂದು ಯಾರೂ ಹೇಳಲಾರರಷ್ಟೆ. ಆದರೆ ಮೇಲ್ಕಂಡ ತರಹಾದಲ್ಲಿ ಆ ಮನುಷ್ಯನ ಫೋಟೋವನ್ನು ತೆಗೆದರೆ ಅದರ ಮೂಲಕ ಆ ಗೋಲಿಯು ಅವನ ದೇಹದಲ್ಲಿ ಯಾವಕಡೆ ಸೇರಿಕೊಂಡಿದೆ ಎಂಬುವದನ್ನು ಸ್ಪಷ್ಟವಾಗಿ ತಿಳಿಯಪಡಿಸುತ್ತದೆ. ಇದಕ್ಕೆ ಸ್ವಲ್ಪವೂ ಸಂಶಯವಿಲ್ಲ. ವೈದ್ಯರಿಗೆ ಇಷ್ಟುಮಾತ್ರ ಗೊತ್ತಾದರೆ ಅವರು ಅವನ ದೇಹವನ್ನು ಆ ಗೋಲಿ ಇರುವ ಕಡೆಯಲ್ಲಿ ಕೊಯಿದು ತೆಗೆದು ಸುಲಭವಾಗಿ ವಾಸಿ ಮಾಡಬಲ್ಲರು.

ಈ ಮೇಲ್ಕಂಡ ಹೊಸತರದ ಫೋಟೋಗ್ರಾಫಿ ಅದ್ಭುತವಾದದ್ದೇಸರಿ. ಇದರ ಸಹಾಯದಿಂದ ಪೆಟ್ಟಿಗೆಯನ್ನು ತೆರೆಯದೇನೆ ಅದರೊಳಗಿರುವ ಪದಾರ್ಥಗಳಿಂದಿಂಥಾವೆಂದು ಗೊತ್ತು ಮಾಡಿಕೊಳ್ಳಬಹುದಾಗಿದೆ. ಇದಲ್ಲದೆ ಮನುಷ್ಯನು ಬದುಕಿರುವಾಗಲೇ ಅವನ ಶರೀರದಲ್ಲಿ ಯಾವ ಯಾವ ಮೂಳೆಗಳು ಯಾವ ಯಾವ ಸ್ಥಿತಿಯಲ್ಲಿವೆ ಎಂಬುವದನ್ನೂ ತಿಳುಕೊಳ್ಳಬಹುದಾಗಿದೆ. ಈ ಫೋಟೋಗ್ರಾಫನ್ನು ತೆಗೆಯುವ ಕ್ರಮಗಳು ಇನ್ನೂ ಈ ರಾಷ್ಟ್ರಕ್ಕೆ ತಿಳಿದುಬಂದಿಲ್ಲ. ಯೂರೋಪ್ ಖಂಡದಲ್ಲಿ ಈಗತಾನೇ ಪ್ರಕಟವಾಗುತ್ತಾ ಬಂದಿದೆ. ಇನ್ನು ಕೆಲವು ಕಾಲದೊಳಗಾಗಿ ಇಲ್ಲಿನ ವಿದ್ವಾಂಸರೂ ಅವುಗಳನ್ನು ಕಲಿತು ಪ್ರಯೋಗದಲ್ಲಿ ತರುವರೆಂದು ನಂಬಿದ್ದೇವೆ.—ಸೈ ವ

CORRESPONDENCE.

[ಬಾತಮೀದಾರರ ಕಾಗದಗಳಲ್ಲಿ ಪ್ರಕಟಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು.—ಎಡಿಟರ್, ಕ. ಪ್ರ.]

ಮ॥ರಾ॥ ಕರ್ಣಾಟಕಪ್ರಕಾಶಿಕಾ ಎಡಿಟರವರ ಸನ್ನಿಧಿಗೆ.

ಸ್ವಾಮಿ,—ತಮ್ಮ ಅಮೂಲ್ಯವಾದ ನಿಷ್ಪಕ್ಷಪಾತವಾದ ಮತ್ತು ಪ್ರಜಾರಂಜಕವಾದ ಪತ್ರಿಕೆಯಲ್ಲಿ ಇದರಡಿ ಕಂಡ ವಿಜ್ಞಾಪನೆಗಳಿಗೆ ದಯವಿಟ್ಟು ಸ್ವಲ್ಪ ಸ್ಥಳವನ್ನೀಯುವಿರೆಂದು ನಂಬಿ ಪ್ರಾರ್ಥಿಸುತ್ತೇನೆ.

ಕಳೆದ ತಿಂಗಳ ೨೩ ನೇ ತಾರೀಖಿನ ತಮ್ಮ ಪತ್ರಿಕೆಯಲ್ಲಿ "ಯಥಾರ್ಥವಾದಿ" ಎಂಬುವರು ಕೆಲವು ಸಂಗತಿಗಳನ್ನು ನಮೂದಿಸಿರುತ್ತಾರೆಯಷ್ಟೆ. ಅವರ ಸದರೀ ವಿಜ್ಞಾಪನೆಗಳು ಸ್ವಲ್ಪಮಟ್ಟಿಗೆ ಸಂಶೋಧಿಸತಕ್ಕವಾಗಿರುತ್ತವೆ. ಶ್ರೀಯುತ ಅಮಲ್ದಾರ್ ಮ॥ ರಾ॥ ಶ್ರೀ. ಕೃಷ್ಣಪ್ಪನವರಿಗೆ ಇಲ್ಲಿನ ಕೆಲವು ಭಾಗದ ಬ್ರಾಹ್ಮಣ ಮಂಡಲಿಯವರು ಕೊಟ್ಟರೆಂಬ ಅರ್ಜಿಯು ಆ ಕ್ಷಣದಲ್ಲಿ ಅಂದರೆ, ರಥೋತ್ಸವ ನಡೆಯುವೇಳೆಯ ಕಾಲಕ್ಕೆ ಕೇವಲ ಸಮೀಪ ಕಾಲದಲ್ಲಿಯೇ ಕೊಡಲ್ಪಟ್ಟಿತಲ್ಲದೆ ಅನೇಕವಿಧವಾದ ತಕರಾರುಗಳು ನಡೆಸಲ್ಪಟ್ಟು ರಥೋತ್ಸವವು ಜರಗಲು ವಿಘಾತವಾಗುವ ರೀತಿ ಮಾಡಲಾಯಿತು. ಆದರೆ ಭಗವದನುಗ್ರಹದಿಂದ ಶ್ರೀಯವರ ಉತ್ಸವವು ಸಾಂಗವಾಗಿ ಬಹಳ ವಿಜೃಂಭಣೆಯಿಂದ ಯಾವದಿಗಿಂತಲೂ ಮುಂಚಿತವಾಗಿ ಈ ರಥವು ನೆಲೆಗೆ ತರಲ್ಪಟ್ಟಿತು. ದೇವಸ್ಥಾನಗಳನ್ನು ಕಟ್ಟಿಸಿ ಜೀರ್ಣೋದ್ಧಾರ ಮಾಡಿದ ಮಹಾತ್ಮರು ಧರ್ಮಕರ್ತರು ಸಹ ಹಾವುವಿನಲ್ಲಿ ತ್ರಿಮತಸ್ಥರು ಒಂದೇ ಸ್ಥಳದಲ್ಲಿ ಏಕಕಾಲದೊಳು ಸಹೃದಯರಾಗಿ ಸೇರಿ ಭಗವತ್ಸೇವೆಗಳನ್ನು ಸಂತೃಪ್ತಿಯಿಂದ ಶ್ರದ್ಧೆಯಾಗಿ ನಡೆಸಿಕೊಳ್ಳಲು ಎಡೆಯಾಗುವದಕ್ಕೆ ಅನುಕೂಲವಾಗಿ ದೇವಾಲಯಗಳಲ್ಲಿ ವಿಷ್ಣುದೇವರುಗಳನ್ನೂ ವಿಷ್ಣು ದೇವಾಲಯಗಳಲ್ಲಿ ಗಣಪತಿ ವಗೈರೆ ಶಿವ ಸಂಬಂಧವಾದ ಮೂರ್ತಿಗಳನ್ನೂ ಪ್ರತಿಷ್ಠೆ ಮಾಡಿಸಿರುವರು ಮತ್ತು ಪುರಾಣ ಇತಿಹಾಸ ಮತ್ತು ಶ್ರುತಿಸ್ಮೃತಿಗಳಲ್ಲಿ ತ್ರಿಮೂರ್ತಿಗಳಿಗೂ ಹೇಳಿರುವ ಪರಸ್ಪರ ಸಂಬಂಧ ಅನುಭವಗಳು ನಹ ಜ್ಞಾನದಲ್ಲಿ ತಂದುಕೊಂಡರೆ ತ್ರಿಮತಸ್ಥರೂ ಏಕೀಭವಿಸಿ ಹಾಲು ನೀರು ಬೆರೆದಂತೆ ಅನ್ಯೋನ್ಯಭಾವದಿಂದ ಇದ್ದುಕೊಂಡು ತಮ್ಮ ತಮ್ಮ ಅಂತರಂಗವಾದ ಉಪಾಸನೆಗಳನ್ನು ಉತ್ಸವಕಾಲಗಳಲ್ಲಿ ತೀರ್ಮಾನಿಸದೆ ಸ್ವಾತಂತ್ರ್ಯವಾಗಿ ನಡೆಯಲೋಸುಗ ಉದ್ದೇಶಿಸಿರುವ ಇಂತಾ ಮಹತ್ಕಾರ್ಯಗಳಲ್ಲಿ ಸರ್ವರು ಏಕೀಭವಿಸಿ ನಡೆಯತಕ್ಕದ್ದು ಯುಕ್ತವೆಂದು ಸ್ವತಸ್ಸಿದ್ಧವಾಗಿ ತೋರುತ್ತ ಅಲ್ಲದೆ ಹಾಗೆ ಏಕೀಭವಿಸಿ ನಡೆಯುವವರಲ್ಲಿ ಸರ್ವರಿಗೂ ಶ್ರೇಯಸ್ಕರವಾಗಿಯೂ, ಐಹಿಕ ಪ್ರಪಂಚದಲ್ಲಿ ಪರಸ್ಪರ ಸುಖಾನುರಾಗಗಳೂ, ಪರದಲ್ಲಿ ಒಳ್ಳೇ ಗತಿಯೂ ಉಂಟಾಗುವದಲ್ಲದೆ ಭಗವದ್ಭಾಗವತಾಪಚಾರ ಸಂಭವಿಸದೆಯೂ ಮನಸ್ಸಾಕ್ಷಿಗೆ ಕಂಟಕ ಬಾರದೆಯೂ ಪ್ರತಿಬಂಧ ರೂಪ ಸಂಶಯದ ಬಳವೆಂಬುದು ಪ್ರಾಜ್ಞರಾದವರಿಗೆಲ್ಲರಿಗೂ ತಿಳಿದೇಇದೆ. ಇದಕ್ಕೆ ಬದಲಾಗಿ, ಪ್ರಜ್ವಲಿಸುತಲಿರುವ ಸೂರ್ಯ ಚಂದ್ರರಿಗೇ ಇಲ್ಲವೆಂದು "ಎತ್ತಿಗೆ ರೋಗಬಂದರೆ ಎಮ್ಮೆಗೆ ಬರೆ ಹಾಕು" ಎಂಬ ನಾಣ್ಣುಡಿಯನ್ನನುಸರಿಸಿ ನಿಮಿತ್ತವಾದ ಯಾವದೋ ಒಂದು ನೆಪವನ್ನಿಟ್ಟುಕೊಂಡು ಪರಸ್ಪರ ಇರುವ ನೆಮ್ಮದಿಗೆ ವೃಥಾ ಭಂಗವನ್ನುಂಟುಮಾಡುವದರಲ್ಲಿ ಯಾರೊಬ್ಬರಿಗೂ ಏನೊಂದು ಪ್ರಯೋಜನವೂ ಇಲ್ಲವು. ಜ್ಞಾನದ ನಾಗರಿಕತೆ ಮತ್ತು ಅಭಿವೃದ್ಧಿ ಹೊಂದಿದ ತಿಳುವಳಿಕೆಯುಳ್ಳ ಈಗಿನಕಾಲದಲ್ಲಿಯೂ ಸಹ "ಶಿವನೇ ದೊಡ್ಡವರೆಂತಲೂ, ಆವೇನರು ಚಿಕ್ಕವರೆಂತಲೂ, ಇದು ಶ್ರೇಷ್ಠವೆಂತಲೂ ಅದು ಶ್ರೇಷ್ಠನಲ್ಲವೆಂತಲೂ" ಹೇಳತಕ್ಕದ್ದು ಬ್ರಾಹ್ಮಣೇತರರು ಕೇಳಿ ಹಾಸ್ಯಮಾಡುವಂತಿಲ್ಲವೆ? ಭಕ್ತಿವೃದ್ಧಿಯಾಗಲಿ, ನ್ಯಾಯವೃದ್ಧಿಯಾಗಲಿ, ಪರಸ್ಪರ ಅನುರಾಗ ವೃದ್ಧಿಯಾಗಲಿ, ಇಂತಾ ಅಭಿಪ್ರಾಯವು ಕಾರ್ಯಕಾರಿಗಳಾಗುವವಲ್ಲವು. ಹೀಗಿರುತ ಕೊಂಚ ಕಾಲಕ್ಕೆ ಆಕ್ಟಿಂಗ್ ಕೆಲಸ ನೋಡಲು ಬಂದಿದ್ದ ಇಲ್ಲಿಗೆ ದಯಮಾಡಿದ್ದ ಮ॥ ರಾ॥ ಅಮಲ್ದಾರ್ ಕೃಷ್ಣಪ್ಪನವರನ್ನು ವರ್ಣಿಸಲಸಾಧ್ಯವಾದ ತೊಂದರೆಗೂ ಮತ್ತು ಅಧೈರ್ಯಕ್ಕೂ ಗುರಿ ಪಡಿಸುವ ತರಹೂದುಗಳು ವಿಶೇಷವಾಗಿ ನಡೆಸಲ್ಪಟ್ಟದ್ದನ್ನು ಸೂಚಿಸಲು ಅಸಾಧ್ಯವಾಗಿದೆ. ಇದಕ್ಕೆ ಒಂದು ಸಣ್ಣ ಕಥೆಯುಂಟು. ಒಂದು ಅಗ್ರಹಾರದಲ್ಲಿ ಒಬ್ಬ ಬ್ರಾಹ್ಮಣಶ್ರೇಷ್ಠನು ಯಜ್ಞವನ್ನು ಮಾಡಬೇಕೆಂಬ ಉದ್ದೇಶದಿಂದ ೧೨ ಮೈಲಿ ಫಾಸಲೆ ಮುಖ್ಯ ಒಂದು ಸಂತೆಗೆ ಹೋಗಿ ಶಾಸ್ತ್ರೋಕ್ತವಾದ ಒಂದು ಪಶುವನ್ನು ಕ್ರಯಕ್ಕೆ ಕೊಂಡು ಅದನ್ನು ತನ್ನ ಬಾಜಾದಮೇಲೆ ಹೊತ್ತುಕೊಂಡು ಊರಿಗೆ ಬರುತಿರುವಲ್ಲಿ ಅವನ ಉದ್ದೇಶವಂ ತಿಳಿದು ಇವನಿಗೆ ಮೋಸಮಾಡಬೇಕೆಂದಿದ್ದ ನಾಲ್ವರು ಸೇರಿ ಮಾರ್ಗದಲ್ಲಿ ಸ್ವಲ್ಪ ಸ್ವಲ್ಪ ದೂರವಾಗಿ ಪ್ರತಿಬಂಧಕರು ಕಣ್ಮರೆಯಾಗಿ ನಿಂತರು. ೧ನೇ ಯವನು ಈ ಬ್ರಾಹ್ಮಣನನ್ನು ಕಂಡು ಕೇವಲ ಶ್ರೇಷ್ಠನಾದ ಶ್ರೋತ್ರಿಯನಾಗಿದ್ದುಕೊಂಡು ಇಂತಾ ಅಶುಚಿ ಪ್ರಾಣಿಯಾದ ನಾಯಿ ಮರಿಯನ್ನು ಮುಟ್ಟಬಹುದೇ ಎಂದು ಕೇಳಲಾಗಿ, ಬ್ರಾಹ್ಮಣನು ಅದಕ್ಕೆ ಲಕ್ಷ್ಯಮಾಡದೆ ಮುಂದಕ್ಕೆ ಹೋದನು. ಅಲ್ಲಿ ೨ನೇಯವನು ಬದಸ್ಸೂಗಾಗಿ ಆಕ್ಷೇಪಿಸಲು ಬ್ರಾಹ್ಮಣನಿಗೆ ಕೊಂಚ ಅನುಮಾನ ಹುಟ್ಟಿ ತನ್ನ ಹೆಗಲಿನಮೇಲೆ ಇದ್ದ ಪ್ರಾಣಿಯನ್ನು ಕೆಳಕ್ಕೆ ಇಳಿಸಿ ನೋಡಿದನು. ಆನುಮಾನವೇನೂ ತೋರಲಿಲ್ಲವು. ಸುಳ್ಳೆಂದು ಭಾವಿಸಿ ಇನ್ನು ಮುಂದಕ್ಕೆ ಹೋದನು. ಅಲ್ಲಿ ಕಾದಿದ್ದ ೩ನೇಯವನು ತದ್ವತ್ ಕೇಳಿದ್ದಕ್ಕೆ ಬ್ರಾಹ್ಮಣನಿಗೆ ಭ್ರಾಂತಿಯೂ ಭೀತಿಯೂ ಉಂಟಾಗಿ ಕೇವಲ ಸ್ಪಷ್ಟವಾಗಿ ಅಜಮಾಯಿಷಿ ಮಾಡಿದನು. ಅವರೂ ಸ್ವಲ್ಪವು ಅನುಮಾನ ತೋರಲಿಲ್ಲವು. ಇನ್ನು ಸ್ವಲ್ಪ ಮುಂದೆ ಹೋಗಲಾಗಿ ನಾಲ್ಕನೆಯವನು ಅದೇರೀತಿ ಆಕ್ಷೇಪಿಸಿದ್ದಕ್ಕೆ ಬ್ರಾಹ್ಮಣನಿಗೆ ವಿಶೇಷ ಅನುಮಾನವೂ ಸ್ವಂತ ತಿಳುವಳಿಕೆಯಲ್ಲಿಯೇ ಅಪನಂಬಿಕೆಯೂ ಮತ್ತು ಅಸಹ್ಯವೂ ತೋರಿ ತನ್ನಲ್ಲಿದ್ದ ಯಜ್ಞ ಪಶುವನ್ನು ಅಲ್ಲಿಯೇ ಬಿಟ್ಟುಬಿಟ್ಟನು. ಕಾತನು ಮುಂದಕ್ಕೆ ಜರಗಿದನಂತರ ೪ ಜನರೂ ಒಟ್ಟು ಸೇರಿ ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಂಡರು. ಈ ರೀತಿ ಬಹುಜನರ ಹೇಳಿಕೆಯಲ್ಲಿ ನಿಜವನ್ನು ಕಂಡುಹಿಡಿಯುವದು ಅಸಾಧ್ಯವೆಂದೂ "ಯಥಾರ್ಥವಾದಿ ಲೋಕವಿರೋಧಿ" ಎಂಬ ಲೋಕೋಕ್ತಿಯನ್ನನುಸರಿಸಿ ಈ ಕಲಿಕಾಲದಲ್ಲಿ ನಿಜವನ್ನು ಸ್ಥಾಪಿಸುವದು ಬಹು ಕಷ್ಟವಾಗಿದೆ. ಮುಖ್ಯವಾಗ ಮ॥ರಾ॥ ಶ್ರೀ. ಕೃಷ್ಣಪ್ಪನವರ ಮಹನತ್ತನ್ನು ಮತ್ತು ನಿಷ್ಪಕ್ಷಪಾತವನ್ನು ಜಗನ್ನಂತನೇ ಬಲ್ಲ. ಅವರ ವಿಷಯದಲ್ಲಿ ನಿರಾಧಾರವಾಗಿ ಉಂಟಾಗಿರುವ ಸಂಶಯಗಳಿಗೆ ಸರ್ವಜ್ಞನಾದ ದೇವರೇ ಪರಿಹಾರವನ್ನು ಕೃಪೆಯಿಂದ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ತಮ್ಮ ಅತ್ಯಂತ ವಿಧೇಯ,

ನ್ಯಾಯಾಭಿಮಾನಿ.

SUMMARY OF NEWS.

ವೃತ್ತಾಂತ ಸಂಗ್ರಹವು.

ಇಕ್ಕೇರಿಯ ಸರ್ಕಾರದವರು ಟರಾನ್ಸೀಯ ಅರಸನೊಡನೆ ಒಡಂಬಡಿಕೆಯ ಮಾತ್ಯಸ್ಥವನ್ನು ಆರಂಭಿಸಿದಾರೆ.

ಉಯಿನ್ಯಾ ಕಡೆಯ ಟಾ ನಲ್ಲಿ ೯ ಕೋಟಿ ಟನ್ನಿನ ಒಂದು ಉಪ್ಪಿನ ಖಣಿಕಾ ಸಿಕ್ಕಿರುವದೆಂದು ತಿಳಿಯಬರುತಿದೆ.

ಮೋಣದ ಬತ್ತಿಯು ಬಂದನಾಗಿ ಉರಿಯು ಆರುವದೆ ಅದನ್ನು ಮೊದಲು ಒಂದು ದಿವಸ ತಣ್ಣೀರಲ್ಲಿಟ್ಟು ಮರುದಿವಸ ಒಣಗಿಸಿ ಉಪಯೋಗ ಮಾಡಿದರೆ ಹಿಂತವಾಗಿ ಉರಿಯುವದು.

ಯೂರೋಪ ಖಂಡದಲ್ಲಿ ಮಾಂಟಬ್ಲ್ಯಾಂಕ್ ಎಂಬ ಪರ್ವತದ ಶಿಖರದ ಫೋಟೋ (ನಕ್ಷೆ) ಯನ್ನು ೩೬ ಮೈಲಿ ದೂರದಿಂದ ತೆಗೆದಿರುತ್ತಾರೆ.

ಹಿಂದುಸ್ಥಾನದೊಳಗಿನ ಕೆಲವರು ಸರಕಾರ್ ಕಚೇರಿ ಕೊಡುವದಕ್ಕಿಂತ ಭಜನೆಗಳನ್ನು ಕೊಡುವವರಿಂದ ಹೆಚ್ಚಿಗೆ ಉಪಯೋಗವಾಗುವದೆಂದು ತಿಳಿದು ಎಲ್ಲ ಸಾವಿರ ಪತ್ರ್ಯರುಗಳನ್ನು ತೆಗೆದುಕೊಂಡು ಅವುಗಳಿಗೆ ಬದಲಾಗಿ ಭಜನೆಗಳನ್ನು ಕೊಡುವದೇಬು ಗೊತ್ತು ಮಾಡಿದಾರಂತೆ.

ಅಮೇರಿಕದವನೊಬ್ಬನು ಯುದ್ಧದ ಒಂದು ಸಿದ್ಧಪಡಿಸಿದಾನೆ. ಅದರಿಂದ ಒಂದು ಸಾವಿರ ಕಿಲ್ಲ ಕಮಪುಷ್ಟವೂ, ತೋಫೆ ಒಂದೆ ಹಾಕುವದೂ, ಮನುಷ್ಯರ ಸಂಹಾರ ಮಾಡುವದೂ, ಈ ಮುಂತಾದ ಕೆಲಸಗಳು ಸಹಜವಾಗಿ ಆಗುತವೆ. ಮತ್ತು ಅದಕ್ಕೆ ವಿಶೇಷ ಮದ್ದು ಬೇಕಾಗುವದಿಲ್ಲವು, ನೀರಿನ ವಿದ್ಯುತ ಮಾತ್ರ ಬೇಕು.

ಆ ಭಾವಿಸ್ಥಾನದಲ್ಲಿ ಷಹಜಾದಾಪುರದಲ್ಲಿ ಬಜಾರದಲಿಗೆ ಅಲ್ಲಿನ ಜೈಲ ಅಧಿಕಾರಿಗಳು ದಿನಂಪ್ರತಿ ಖೈದಿಗಳಿಗೆ ೬೦ ಮಣ ಗೋದಿಯನ್ನು ಕೊಡಬೇಕಾಗಿದೆ. ಬಂತಲೂ ಜೈಲಿನಲ್ಲಿ ಕೈದಿಗಳು ಎಷ್ಟ ಜಪ್ಪಾಗಿದ ಸೆಂತಲೂ ರಿಪೋರ್ಟ ಮಾಡಿದ್ದರಮೇಲೆ ಹ ಎಲ್ಲ ಮಾನಸನರು ಈ ರಿಪೋರ್ಟನ್ನು ನೋಡಿ ಈ ಕ್ಷಣ ಹಷ್ಟ ಖೈದಿಗಳನ್ನು ಜೈಲಿನಿಂದ ಬಿಡಬೇಕೆಂದು ಹುಕುಂ ಕೊಟ್ಟರು.

ಕೃತ್ರಿಮ ಸುವರ್ಣ ಮಾಡುವ ರೀತಿಯು ಒಂದಾನೊಂದು ಫ್ರೆಂಚ್ ಪತ್ರದಲ್ಲಿ ಕೆಳಗೆ ಬಂದ ರೀತಿಯಿಂದ ಬಂಗಾರ ಮಾಡಲಿಕ್ಕೆ ಬರುತದೆಂದು ಬರೆದಿದೆ. ೯೬ ಭಾಗ ತಾಂಬ್ರದ ರಸವನ್ನು ಮಾಡಿ ಅದರಲ್ಲಿ ೬ ಭಾಗ ಅಣಿ ಮಣಿ ಕೂಡಿಸಿ ಆ ತಯಾರಾದ ಧಾತುವಿಗೆ ಸ್ವಲ್ಪ ಮ್ಯಾಗ್ನೇಸಿಯಂ ಕಾರ್ಬೋನೇಟ ಕೂಡಿಸಿದರೆ ಅದು ಬಂಗಾರದಂತೆ ಆಗುತಿದೆ. ಇದರಿಂದ ತಂತಿಗಳನ್ನೆಳೆಯುವದಕ್ಕೂ, ತಗಡು ಬಡಿಯುವದಕ್ಕೂ ಬರುತಿದೆ. ಅದು ಬಂಗಾರದಂತೆ ಚಕಚಕಾಯಮಾನವಾಗಿದ್ದು ಒಂದು ಸೇರಿಗೆ ೧೨ ಆಣೆ ಕ್ರಯ ಬೀಳುವದಂತೆ.

ಜೋಧಪುರ ಕಲ್ಕತ್ತಾ ಪಟ್ಟಣಕ್ಕೆ ಸೇರಿದ ಕಿಷ್ಣಪುರವೆಂಬ ಭಾಗದಲ್ಲಿ ಬಂಕಿ ಬಿದ್ದು ಸುಮಾರು ೧೫೦೦ ಮನೆಗಳು ಸುಟ್ಟುಹೋದವು. ಏಳುಮಂದಿ ಉರಿಯಲ್ಲಿ ಸಿಕ್ಕಿ ಸತ್ತುಹೋದರು. ಮತ್ತು ಸುಮಾರು ೧ ಲಕ್ಷ ರೂಪಾಯಿನವರೆಗೆ ಸುವರ್ಣಗಳು ನಷ್ಟವಾಗಿರುತಿವೆ. ಅನೇಕ ಎತ್ತುಗಳೂ ಹಸುಗಳೂ, ಕುರಿಗಳೂ, ಆಡುಗಳೂ, ಕೋಳಿ ಮುಂತಾದವೂ ಸುಟ್ಟುಹೋದವು. ಸಾವಿರಾರು ಪ್ರಜೆಗಳಿಗೆ ಮನೆಗಳಿಲ್ಲದೆ ಅಲೆಯುತಲಿರಾರೆ. ಇಂತಾ ಬಂಕಿ ಬಿದ್ದು ಸುಟ್ಟುಹೋದದ್ದು ಆ ಪಟ್ಟಣದಲ್ಲಿ ೨೦ ವರುಷಗಳಿಂದೀಚೆಗೆ ಇದು ಮೊದಲೆಂದು ತಿಳಿಯಬರುತಿದೆ.

ಕಲ್ಕತ್ತೆಯಲ್ಲಿ ಬಾಬೂ ನರೇಶ ಚಂದ್ರಮಿತ್ರ ಎಂಬ ವಕೀಲನ ಮನೆಯ ಜವಾನನು ಆ ವಕೀಲರನ್ನೂ ಅವರ ಹೆಂಡತಿಯನ್ನೂ ಒಂದು ದಿನ ರಾತ್ರಿ ಅವರು ಕೋಣೆಯಲ್ಲಿ ಮಲಗಿರುವಾಗ ಬಾಗಿಲು ಎಳದು ಬೀಗ ಹಾಕಿಬಿಟ್ಟು ಅವರ ಮನೆಯಲ್ಲಿ ೨೦೦೦ ರೂಪಾಯಿನ ಜಿಂದಗಿಯನ್ನು ಕದ್ದುಕೊಂಡು ಆವರ ಹಾಗೆ ಅವರ ಬಟ್ಟೆಗಳನ್ನೆಲ್ಲ ಹಾಕಿಕೊಂಡು ತಾನೇ ಆ ವಕೀಲನೋ ಎಂಬಂತೆ ಡಂಭ ಮಾಡುತ ಬೀದಿಯಲ್ಲಿ ಹೋಗುತಿದ್ದನು. ಜನರಿಗೆ ಇವನಲ್ಲಿ ಅನುಮಾನ ಹುಟ್ಟಿ ಇವನನ್ನು ಹಿಡಿದು ನೋಡಿದಾಗ ಮೋಸಗಾರನೆಂದು ಗೊತ್ತಾಯಿತು. ಪೋಲೀಸಿನವರು ಇವನಿಗೆ ಕಠಿಣ ಸಜಾ ಮಾಡಿಸಿದರು.

ಕಲ್ಕತ್ತೆಯಲ್ಲಿ ಬಂಕಿಯಿಂದ ಕೆಲವು ಮನೆಗಳು ಸುಟ್ಟುಹೋದ ವಿಷಯದಲ್ಲಿ ಕಳೆದ ಶುಕ್ರವಾರದದಿನ ಅಲ್ಲಿನ ದೊಡ್ಡ ಮನುಷ್ಯರೆಲ್ಲರೂ ಸೇರಿ ಸಭೆ ಮಾಡಿದಾಗ ಪೋಲೀಸ ಕಮಿಷನರು ಒಂದು ಮೈಲಿ ಉದ್ದ, ೬೦೦ ಗಜ ಅಗಲದ ಸ್ಥಳದಲ್ಲಿನ ಮನೆಗಳೆಲ್ಲ ಸುಟ್ಟು ಹೋದವೆಂತಲೂ, ಹೀಗೆ ಸುಟ್ಟುಹೋದದ್ದು ೧೫೦೩ ಮನೆಗಳೆಂತಲೂ, ೩,೫೦೦ ಜನರಿಗೆ ನೆರಳಿಲ್ಲದೆ ತೊಂದರೆ ಯುಂಟಾಗಿದಯೆಂತಲೂ, ವಿಪರೀತ ಸಾಮಾನುಗಳೂ, ಅನೇಕ ದನ ಕರುಗಳೂ ನಷ್ಟವಾದವೆಂತಲೂ, ತಿಳಿಸಿದರು. ಕಷ್ಟ ಪಡುತಿರುವ ಜನರಿಗೆ ಸಹಾಯ ಮಾಡುವದಕ್ಕೆ ಅನೇಕರು ಚಂದಾ ಮೂಲಕ ಹಣ ಕೊಡುತ್ತೇವೆಂದು ಒಪ್ಪಿ ರುಜು ಹಾಕಿದರು. ಅದರಲ್ಲಿ ಒಬ್ಬ ದೊಡ್ಡಮನುಷ್ಯರು ೫,೦೦೦ ರೂಪಾಯಿಯನ್ನೂ ದರ್ಭಂಗಾ ಮಹಾರಾಜರವರು ೨,೫೦೦ ರೂಪಾಯಿಯನ್ನೂ ಕೊಟ್ಟರುನರೆಂದು ಆಗಿ ತಂತಿ ವರ್ತಮಾನ ಬಂದಿರುತಿದೆ.

EXTRACT.

ಲಂಡನ್ ಷಹರಿನಲ್ಲಿ ೬೦ ಲಕ್ಷ ಜನವಸತಿಯುಂಟು. ಇದರ ದಕ್ಷಿಣೋತ್ತರ ಅಗಲ ಅಳತೆಯು ೧೪ ಮತ್ತು ಪೂರ್ವಪಶ್ಚಿಮ ಉದ್ದಳತೆ ೧೭ ಮೈಲಿವೆ. ಹಾದಿಗಳ ಉದ್ದಳತೆ ೫೦೦೦ ಮೈಲುಂಟು. ಪ್ರತಿದಿನವೂ ೪೦೦ ಮಕ್ಕಳ ಜನನವಾಗುತಿದೆ ಮತ್ತು ೨೦೦ ಜನರು ಮೃತಪಡುತ್ತಾರೆ. ನರ ದಿವಸ ೨೫೦೦ ಹುಡುಗರು ವಿದ್ಯಾರಂಭ ಮಾಡುತ್ತಾರೆ, ಮತ್ತು ೭೦೦ ತರುಣಜನರು ಉದ್ಯೋಗವಾರಿ ಮಾಡತೊಡಗುತ್ತಾರೆ, ನಿತ್ಯ ೧೫೦ ಜನರ ಲಗ್ನಗಳಾಗುತಿವೆ. ೧೮೯೫ರಲ್ಲಿ ಪರ ತಿಂಗಳಿಗೆ ೯೦೦ ರಂತೆ ಮನೆಗಳು ಕಟ್ಟಲ್ಪಟ್ಟವು. ಪಾಲಿಸ್ಟೈನಕ್ಕಿಂತಲೂ ಹೆಚ್ಚಾಗಿ ಎಹೂದ್ಯರೂ, ಗ್ಲಾಸಿಗೋಕ್ಕಿಂತ ಹೆಚ್ಚು ಸ್ಕಾಚ್ ಜನರೂ, ಡಬ್ಲಿನಗಿಂತಲೂ ಹೆಚ್ಚು ಐರಿಷ ಜನರೂ, ಇಲ್ಲಿದ್ದಾರೆ. ಅಲ್ಲಿ ೫ ಲಕ್ಷ ಜನರೂ, ಅಷ್ಟೇ ಜರ್ಮನರೂ ಇದಾರೆ. ಅದರಂತೆ ಫ್ರೆಂಚ್, ಡಚ್, ಸ್ಪ್ಯಾನಿಸ್, ಇಟಾಲಿ, ಚೈನೀಜನರು ಇದಾರೆ. ಈ ಷಹರಿನಲ್ಲಿ ೨೪ ಘಂಟೆಗಳಲ್ಲಿ ೯೫೦ ಸಾವಿರ ಜನರು ವಾಹನಗಳಲ್ಲಿಯೂ, ೬೦೦ ಸಾವಿರ ಜನರು ಪಾದಚಾರಿಗಳಾಗಿಯೂ ತಿರುಗಾಡುತ್ತಾರೆ. ಇವರ ಬಂದೋಬಸ್ತಿಯ ಸಲುವಾಗಿ ೧೫೦೦೦ ಪೋಲೀಸ ಸಿಪಾಯಿಗಳು ತೊಡಗಿರುತ್ತಾರೆ. ಇಲ್ಲಿ ೬೦೨ ರೈಲ್ವೆ ಸ್ಟೇಷನ್‌ಗಳಿವೆ. ಇದರ ಸುತ್ತುಮುತ್ತ ೧೨ ಮೈಲಿಗಳ ವಿಸ್ತೀರ್ಣದಲ್ಲಿ ೩೧೦ ಮೈಲು ರೈಲ್ವೆ ಮಾರ್ಗವಿದೆ. ಥೇಮ್ಸ ನದಿಯ ಮೇಲೆ ಬೇರೆ ಬೇರೆ ರೈಲ್ವೆ ಕಂಪನಿಗಳ ೧೨ ದೊಡ್ಡ ಪೋಲುಗಳಿವೆ. ಅಲ್ಲ ಬಂದರದೊಳಗಿಂದ ಹೊರಡುವ ಗಾಡಿಗಳು ಯೆಷ್ಟೋ. ಇದಲ್ಲದೆ ಪ್ರತಿ ೪ ಮಿನಿಟಿಗೊಂದು ಗಾಡಿ ಹೊರಡುತಲಿದೆ. ಮತ್ತು ರೈಯಿಲ್ವೆಯಿಂದ ನಿತ್ಯ ೪೦ ಲಕ್ಷಕ್ಕಿಂತ ಹೆಚ್ಚು ಜನರು ಪ್ರಯಾಣ ಮಾಡುತ್ತಾರೆ. ಆಗಗಾಡಿಗಳು ಹೊರ್ತಾಗಿ ವಾಹನದಿಂದ ಹೋಗುವ ಜನರಿಗಾಗಿ ೫ ಸಾವಿರ ಅಗ್ನಿ ರಥಗಳೂ, ೬೪೦೦ ಟ್ರಾಂವೇಗಳೂ, ೧೫೫೦೦ ಕ್ಯಾಬಗಾಡಿಗಳೂ, ೩,೫೦೦ ಹಾಷ್ಟಂ ಗಾಡಿಗಳೂ ಬೇಕಾಗುತಿವೆ. ಇವುಗಳೊಳಗಿಂದ ೨೫ ಲಕ್ಷ ಜನರು ತಿರುಗಾಡುತ್ತಾರೆ. ಪ್ರತಿ ವರ್ಷ ೧೫,೦೦೦ ಸಾವಿರ ಪಂಕಿ ಹಾಕುತ್ತಾರೆ. ಸಾರ್ವಜನಿಕ ಸ್ವಾಸ್ಥ್ಯವನ್ನಿಡುವದಕ್ಕಾಗಿ ೧೫,೦೦೦ ಸಾವಿರಕ್ಕಿಂತಲೂ ಹೆಚ್ಚಾಗಿ ಪೋಲೀಸಿನವರೂ ೪೦೦ ಜನ ಗುಪ್ತ ಪೋಲೀಸಿನವರೂ ಇದಾರೆ. ಮತ್ತು ಫೌಜದಾರಿ ಜನಗಳತೊಂಟೆಗಳ ನಿಕಾಲಿ ಮಾಡುವದಕ್ಕಾಗಿ ೨೫ ಜನ ಪೋಲೀಸ ಮ್ಯಾಜಿಸ್ಟ್ರೇಟರು ಇದಾರೆ. ಇಷ್ಟಲ್ಲದೆ ಥೇಮ್ಸ ನದಿಯ ದಂಡೆಯಮೇಲೆ ನಡೆಯುವ ವ್ಯಾಪಾರದ ಬಂದೋಬಸ್ತಿಗಾಗಿ ೫೦೦ಜನರು ಬೇರೆಯೇ ಇದಾರೆ. ಪ್ರತಿ ವರ್ಷ ೩೫,೦೦೦ ಜನರಿಗೆ ಕೈದಿನ ಶಿಕ್ಷೆ ಯಾಗುತ ಇದರಲ್ಲಿ ೫೦೦೦ ಮಂದಿ ಸಾರಾಯಿ ಕುಡಿದದ್ದರಿಂದ ಶಿಕ್ಷೆ ಹೊಂದುತಲಿದಾರೆ.

ಈ ಲಂಡನ್ ಷಹರಿಗೆ ಅನ್ನ ಸಾಮಗ್ರಿಯು ಬಹಳವಾಗಿ ಬೇಕಾಗುತಿದೆ. ಪ್ರತಿವಾರಕ್ಕೆ ೨,೦೦೦ ಟನ ದೊಡ್ಡ ಜಾನ್ವರಗಳ ಮಾಂಸವೂ, ೩,೦೦೦ ಟನ ಮೀನುಗಳೂ, ೧ ಲಕ್ಷ ಕೋಳಿಗಳೂ ಬೇಕಾಗುತಿವೆ. ಇದರಂತೆ ಹಣ್ಣು ಹಂಪಲು ತಾಯಿಪಲ್ಲೆ ಕೂಡಿ ೬,೦೦೦ ಟ ಬೇಕಾಗುತಲಿದೆ. ಇದಲ್ಲದೆ ೨೫ ಲಕ್ಷ ಕ್ವಾಟರು ಹಾಲು, ೨೦ ಲಕ್ಷ ಗುಡ್ಡು, ೩೦ ಲಕ್ಷ ಪೌಂಡ್ ಬೆಣ್ಣೆ, ಮತ್ತು ೨೦ ಲಕ್ಷ ಕ್ವಾರ್ಟರ್ ಹಾಲು ಬೇಕಾಗುತಿದೆ. ಬಾಲಿಗೂಸ್ತರ ೪೫,೦೦೦ ಸಾವಿರ ಅಕಳುಗಳನ್ನು ಲಂಡನ ಗವಳಿಗರು ಸಾಕಿದ್ದಾರೆ. ಇದರ ಹೊರ್ತಾಗಿ ೪೫,೦೦೦ ಸಾವಿರ ಗ್ಯಾಲನ ಹೊರಗಿನಿಂದ ಬರುತಲಿದೆ. ಈ ಷಹರಿನಲ್ಲಿ ಪ್ರತಿ ವರ್ಷ ಒಂದು ಕೋಟಿ ಅರವತ್ತುಲಕ್ಷ ಟ ಇದ್ದಲು ಬೇಕಾಗುತದೆ.

ADVERTISEMENTS

NOTICE

VIDYASARA SANGAHA
A TREATISE ON THE PRINCIPLES OF
HINDU MEDICINE
Price including Postage Rs 5—0—0

ವೈದ್ಯಸಾರ ಸಂಗ್ರಹ.

ಇದು, ಚರಕ, ಬಾಹಟ, ಸುಶ್ರುತ, ಶಿಜ್ಞಧನ್ವಂತರೀಕ ಪ್ರಾಚ್ಯಗ್ರಂಥಗಳ ಸಂಗ್ರಹರೂಪವಾಗಿರುತಿವೆ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ದಲ್ಲೆಲ್ ಸಹಿತ ಒಂದಕ್ಕೆ ರೂ ೫ -0 0

ಈ ಕಂಪನಿಯು ಸನ್ ೧೮೯೨ನೇದರಲ್ಲಿ ಸ್ಥಾಪಿಸಲಾಯಿತು

ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತಮ ಔಷಧಿಯು.

ಅತ್ಯಂತ ಶ್ರೇಷ್ಠಕರವಾದ ಬಳಕೆಗಳ ತಕ್ಕ ಈ ಉತ್ತಮ ಔಷಧಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ರಸಗಳ ಪುಟಗಳನ್ನು ಕೊಟ್ಟು, ಖರ್ಜೂರದೊಳಗೆ ಮಾಗಿಸಿ, ಒಳ್ಳೇ ಜಪ್ಪನ ತರಹದಿಯ ಸಕ್ಕರೆಯ ಪಾಕದಲ್ಲಿ ಇಟ್ಟು ಮಾಡಿರುತ್ತೇವೆ. ಈ ಔಷಧಿಗಳು ಮಹಾ ಪದರ್ಥಗಳಿದ್ದು, ಒಳ್ಳೇ ರುಚಿಯುಳ್ಳವಾದವೆ. ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಅನೇಕ ತರದ ವ್ಯಾಧಿಗಳು ಹೋಗುತ್ತವೆ. ೬೦ ವರ್ಷಗಳ ವೃದ್ಧಾಪ್ಯವಸ್ಥೆಯದವರಾದರೂ ಹದಿನಾರು ವರ್ಷದವರಂತೆ ಸ್ಫೂರ್ತಿಯುಳ್ಳವರಾಗುತ್ತಾರೆ. ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಲಘುಶಂಕೆಯ ಮುಂಚೆ ಆಥವಾ ಹಿಂದೆ ಬೀಳುವ ಧಾತು ನಿಲ್ಲುತ್ತದೆ. ಸ್ವಪ್ನದೋಷವು ನಿಲ್ಲುತ್ತದೆ. ಮೂತ್ರ ಬೆಳ್ಳಗೆ ಹಳದಿ ಬಣ್ಣವು ಸುಧಾರಿಸುತ್ತದೆ. ಪರಮ ಉಷ್ಣದಿಂದಾಗುವ ರೋಗಗಳ ಹೆಸರಿಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿನಲ್ಲಿ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೊಗೆಬಾಧೆಯಿಂದಲೂ ಕೂಡಲೇ ಸ್ವಸ್ಥ ಸೌಖ್ಯವಾಗುತ್ತದೆ. ವಾಯು, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ರೋಗ ಇದ್ದಲ್ಲಿ ೧೧ ದಿವಸಗಳ ವರೆಗ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆದಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳವರಿಗೆ ಸಾಲತಕ್ಕ ೧ ಡಬ್ಬಿಗೆ ೧—೮—೦ ರೂ॥ ಒಂದೇಸಾರ್ತಿಗೆ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತಮಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಬಾಣಂತಿ ರೋಗಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸುಲಭವಾಗಿ ರೋಗ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ. ಈ ಔಷಧವು ಈ ಕಂಪನಿಯ ಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯಶಾಸ್ತ್ರಜ್ಞರುಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯು ಪೆಯಬಲ್ ವೆಚ್ಚ ಬೇರೆ ಕೊಡಬೇಕು. (ಉಚಿತ ಡಬ್ಬಿ ಸಹ ೬ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖಜೂರದ ಪಾಕ ರವಾನಿಸುವವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು.)

ಮೋಲ್ಕಿಹಾಸಿ—ಪಿ. ಎಲ್ ಎ. ಬ್ರದರ್ಸ್ ಮತ್ತು ಕಂಪನಿ,

ಸರೆಂಡ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGAUM.

BANGALORE.—Printed and Published at the KARNATAKA PRESS, No. 10, HOSPITAL ROAD, CITY,—1896

THE

Karnataka Prakasika.

ಚಂದಾದರಗಳು.—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸೇರಿ.

ಸ್ಥಳದವರಿಗೆ		ಪರಸ್ಥಳದವರಿಗೆ	
ಸಾಲ್ 1 ಕ್ಕೆ	... 3 0 0	ಸಾಲ್ 1 ಕ್ಕೆ	. 4 0 0
6 ತಿಂಗಳಿಗೆ	.. 2 0 0	6 ತಿಂಗಳಿಗೆ	.. 2 8 0
3 ತಿಂಗಳಿಗೆ	... 1 4 0	3 ತಿಂಗಳಿಗೆ	... 1 8 0

ಕರ್ಣಾಟಕ ಪ್ರಕಾಶಿಕಾ.

Published Every Monday Morning.

ಪ್ರಕಟಿಸೋದು ರಿವಾಜ್. { ಮೊದಲನೆಯದಫಾ ಪಜ್ತಿ ಒಂದಕ್ಕೆ 0 2 0 / ಎರಡನೆಯ ದಫಾ ಪಜ್ತಿ ಒಂದಕ್ಕೆ 0 1 0

[ಜ್ಯಾಸ್ತಿ ... ಒಂದಕ್ಕೆ ... ಮಾಡಲ್ಪಡುವದು.]

ಪ್ರಕಾಮವಿವಿಧಪ್ರವೃತ್ತ್ಯುದಗವಾರ್ತ ಕರ್ಣಾಟಕಪ್ರಕಾಶಿಕಾ ... ॥ ... ॥

Vol. XXIII. BANGALORE:—MONDAY, APRIL 13, 1896. No. 15.

WANTED

A Brahman Contractor to work the Native Refreshment Room at Tumkur. He should pay to the Southern Mahratta Railway Company annual rent of Rs 138 8-0 for the building. For rates and other particulars apply to the District Traffic Superintendent, S M Ry, Bangalore.

Select Telegrams

London, 6th April—The *Times* states that the Matabele have massacred altogether 200 whites.

Cairo, 6th April,—A strong Dervish force threatens Fort Halib, on the Red Sea, and another force has arrived at Kokreb. This will necessitate the despatch of another Egyptian battalion to Suakim—

Simla, 8th April—It is rumoured that a more or less serious rising has taken place near Roshan, on the Afghan frontier. The intelligence, however, so far lacks official confirmation.

London, 8th April—The *Daily News* states that it has reason to believe that Indian troops are being held in readiness to sail for Suakin if necessary.

The Dervishes have appeared at Tamanieb, near Suakin.

Rome, 8th April—The Italian loss at Kassala on the 3rd instant was 10 officers and 300 men. The Commandant was confident of capturing the remainder of the Dervish positions next day, but was ordered to evacuate.

London, 8th April—Two whites and several Friendlies were killed in yesterday's fight with the Matabele. Three forces engaged in this were ... by the Matabele, who were finally repulsed with the loss of 100 killed. More fighting is expected.

THE

Karnataka Prakasika.

MONDAY, APRIL 13, 1896.

POLICE ADMINISTRATION IN MYSORE.

ಈ ಸಂಸ್ಥಾನದ ಪೋಲೀಸ್ ಕಾನ್ಸ್ಟೇಬಲ್‌ಗಳ ತಲಬಸ್ವಲ್ಪ ಹೆಚ್ಚಿಸಲ್ಪಟ್ಟಿತು. ಇದುವರೆಗೆ ಮಾಹೆಯಾನಾ ಆರುರೂಪಾಯಿಗಳತಲಬ ಪಡೆಯುತಲಿದ್ದವರಿಗೆ ಏಳುರೂಪಾಯಿಗಳೂ, ಏಳುರೂಪಾಯಿಗಳು ಪಡೆಯುತಲಿದ್ದವರಿಗೆ ಎಂಟುರೂಪಾಯಿಗಳೂ ಮಾಡಲ್ಪಟ್ಟ ಈಬದ್ತಿಯು ಈ ತಿಂಗಳಮೊದಲು ಜಾರೀಯಲ್ಲಿಬರುವುದು

ತುಮಕೂರಲ್ಲಿ ಹೆಂಗುಸರಿಗಾಗಿಯೇ ಪ್ರತ್ಯೇಕವಾಗಿ ಒಂದು ವೈದ್ಯಶಾಲೆಯಂ ಕಟ್ಟಿಸಬೇಕಾದ ಆವಶ್ಯಕತೆಕಂಡುಬಂದು ಅದಕ್ಕಾಗಿ ಗವರ್ನಮೆಂಟನವರು ೬,೦೦೦ ರೂಪಾಯಿಗಳು ಮಂಜೂರ್ಮಾಡಿರುವಂತೆಯೂ, ಸದರೀಕಟ್ಟಡವು ತುಮಕೂರು ಪಹರ್ಮಧ್ಯದಲ್ಲಿ ಯೆತ್ತರವಾದ ಒಂದು ಪ್ರದೇಶದೊಳು ಕಟ್ಟಲ್ಪಡುವದೆಂತಲೂ ಕೇಳುತ್ತೇವೆ

ಹೊಳೇ ನರಸೀ ಪುರದಲ್ಲಿ ಒಬ್ಬ ಪ್ಲೀಡರು ಯಾವದೋ ಒಂದು ಮೊಕದ್ದಮೆಯಲ್ಲಿ ಎರಡು ಕಡೆಗೂ ನಿಂತು ಹಣ ತೆಗದುಕೊಂಡು ಕೆಲಸ ಮಾಡಿದರೆಂದು ಅಲ್ಲಿನ ಮುನಸಫರಿಗೆ ತಿಳಿಯಬಂದದಾಗೂ ಮುನಸಫರು ಆ ಪ್ಲೀಡರನ್ನು ಈ ವಿಷಯಕ್ಕಾಗಿ ಕ್ರಿಮಿನಲ್ ವಿಚಾರಣೆ ಮಾಡಬೇಕೆಂದು ಹುಕುಂ ಮಾಡಿರುವದಾಗೂ ತಿಳಿಯಬಂದಿದೆ.

ಶ್ರೀಮನ್ಮಹಾರಾಣೀ ರೀಜೆಂಟರವರು ಜನ್ಮಪುತ್ರ ಪುತ್ರೀರತ್ನಗಳಿಗೆ ನಡೆದ ಶುಭಕ್ಕಾಗಿ ಬಂದಿದ್ದವರಿಗೆ ಸನ್ಮಾನ ಮಾಡುವದರಲ್ಲಿ ಲೋಪ ಲೇಶವು ಎಲ್ಲಿಯೂ ಇರಬಾರದೆಂಬ ಉದಾರಭಾವದಿಂದ ನೆ ಇನ್ನು ವಿಚಾರಿಸಿ ವಿಚಾರಿಸಿ ಬಹುಮಾನಗಳು ಕೊಡಿಸುತಲಿರುವುತ ಕೇಳಿ ಶ್ರೀಮನ್ಮಹಾರಾಣಿಯವರ ಔದಾರ್ಯಗುಣಕ್ಕಾಗಿ ಬಹಳ ಸಂತೋಷಿಸುತ್ತೇವೆ.

ಈಚೆಗೆ ನಡೆದ ರಾಜಪುತ್ರಿಯವರ ವಿವಾಹಾರ್ಥವಾಗಿಯೂ, ಶ್ರೀಮನ್ಮಹಾರಾಜಾಸಾಹೇಬರವರ ಉಪನಯನಾರ್ಥವಾಗಿಯೂ ಆಹೂತರಾಗಿ ಬಂದಿದ್ದವರಿಂದ ಒಪ್ಪಿಸಲ್ಪಟ್ಟ ಬಹುಮಾನಗಳಲ್ಲಿ ವಿಜಯನಗರದ ಮಹಾರಾಜರವರಿಂದ ಕಳುಹಿಸಲ್ಪಟ್ಟದ್ದು ಉತ್ತಮವಾದುದೆಂತಲೂ ಅಪ್ರತಿಮವಾದುದೆಂತಲೂ ಮೈಸೂರು ಹೆರಲ್ಡಪತ್ರಿಕೆ ತಿಳಿಸುತಿದೆ.

ಕಳೆದ ವಾರದಲ್ಲಿ ಎರಡುದಿನ ಬಲವಾಗಿ ವರ್ಷಬಿದ್ದು ಅದರಿಂದ ಬಹಳ ತನುವುಂಟಾಯಿತು. ಈಚೆಗೆ ಮೂರುದಿನಗಳ ಮೋಡವು ಮಳೆಯಿಲ್ಲ. ಆದಾಗ್ಯೂ ಶೀಘ್ರದಲ್ಲಿ ವರ್ಷಬರಬಹುದೆಂದು ಕಾಣುತಿದೆ. ಶಿರೂಬುರೋಗದವ್ಯಾಪಕತೆ ತಪ್ಪಿರುತದೆ. ಜನಾರೋಗ್ಯವು ಸಾಮಾನ್ಯವಾಗಿದೆ. ಆಹಾರ ಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇವಿಧವಾಗಿವೆ.

ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರು ಶಿವಮೊಗ್ಗೆಗೂ, ಬೆಂಗಳೂರು ಡೆಪ್ಯುಟಿಕಮಿಷನರು ಮೈಸೂರಿಗೂ, ಶಿವಮೊಗ್ಗಾ ಡೆಪ್ಯುಟಿಕಮಿಷನರವರು ಬೆಂಗಳೂರಿಗೂ ವರ್ಗಮಾಡಲ್ಪಡುವರೆಂದು ಒಳದೇಶದ ವೃತ್ತಾಂತಬೋಧಿನಿಯೆಂಬ ಪತ್ರಿಕೆ ತಿಳಿಸುತಿದೆ. ಇದಕ್ಕೆಂಟು ಆಕಾರಣವು ಸದ್ಯಃ ಸದರೀಪತ್ರಿಕೆಗೆಮಾತ್ರವೇ ತಿಳಿದಿರುವಂತೆ ಯೆಣಿಸಬೇಕಾಗಿದೆ.

ನೇಟಿವ್ ಸಂಸ್ಥಾನಾಧಿಪತಿಗಳ ಆಗಮನ ಮತ್ತು ನಿರ್ಗಮನಕಾಲಗಳಲ್ಲಿ ಮರ್ಯಾದಾರ್ಥ ಹಾಕಲ್ಪಡತಕ್ಕದ್ದಿರುವ ತೋಪುಗಳಸಂಖ್ಯೆಯನ್ನು ಇಂಡ್ಯ ಗವರ್ನಮೆಂಟಿನವರು ಈಚೆಗೆ ವಿಮರ್ಶೆ ಮಾಡಿ ಪ್ರಕಟಿಸಿರುವ ಪಟ್ಟಿಯಲ್ಲಿ ಈ ಸಂಸ್ಥಾನದ ಮಹಾರಾಣಿಯವರು ರೀಜೆಂಟ ಆದಿಕಾರದಿಂ ಇರುವ ಕಾಲದವರೆಗೆ ಅವರಿಗೆ ೧೯ತೋಪುಗಳ ಮರ್ಯಾದೆಯನ್ನುಂಟುಮಾಡಿರುತ್ತಾರೆ.

ಶ್ರೀಮನ್ಮಹಾರಾಣಿಯವರ ಪ್ರೈವೇಟ ಸೆಕ್ರೆಟರಿಯಾದ ಕರ್ನಲ್ ಕ್ಯಾಂಬಲ್ ಸಾಹೇಬರವರ ಮಕ್ಕಳಾದ ಮೆ. ಇ. ಟಿ ಕ್ಯಾಂಬಲ್‌ಯವರನ್ನು ಮೈಸೂರು ಸರ್ಕಾರ ನೌಕರಿಯಲ್ಲಿ ಮಾಹೇಯಾನಾ ೧೫೦ ರೂಪಾಯಿಗಳ ತಲಬಿನಮೇಲೆ ಅಸಿಸ್ಟೆಂಟ ಇಂಜನಿಯರಾಗಿ ಇಟ್ಟುಕೊಳ್ಳುವದಕ್ಕೆ ಇಂಡ್ಯಗವರ್ನಮೆಂಟಿನ ಅನುಮತಿಯಂ ತರಿಸಿಕೊಡಬೇಕೆಂದು ಮೈಸೂರು ಗವರ್ನಮೆಂಟಿನವರು ಬ್ರಿಟಿಷ್ ರೆಸಿಡೆಂಟರನ್ನು ಕೇಳಿರುವದಾಗಿ ಒಳದೇಶದ ಡೆಯಿಲಿಪೋಸ್ಟು ತಿಳಿಸುತಿದೆ.

ಈಗ ಮದರಾಸ್ ಶಹರನಲ್ಲಿ ಹಾಕಲ್ಪಟ್ಟಿರುವಂತೆ ಈನ್ನೂರಲ್ಲೂ ಟ್ರಾಂವೆ ಎಂಬ ಕಬ್ಬಿಣ ಮಾರ್ಗವಂ ಕಲ್ಪಿಸಬೇಕೆಂದು ಸಿವಿಲಿಬರಿಸ್ಟೇಷನ ಮ್ಯುನಿಸಿಪಾಲಿಟಿಯವರು ಆಲೋಚಿಸುತಲಿರುವಂತೆ ಹಿಂದಿನವಾರದ ಪತ್ರಿಕೆಯಮೂಲಕ ತಿಳಿಸಿರುತ್ತೇವೆಯಷ್ಟೆ. ಮದರಾಸಿನಲ್ಲಿ ಸದರೀ ಮಾರ್ಗವು ಯಾವರೀತಿಯಲ್ಲಿ ನಡೆಸಲ್ಪಡುತಿದೆ ಎಂಬದನ್ನು ಖುದ್ದು ನೋಡಿಕೊಂಡುಬರುವದಕ್ಕಾಗಿ ಸಿವಿಲಿಬರಿ ಸ್ಟೇಷನ ಮ್ಯುನಿಸಿಪಲ್ ಕಮಿಷನರ್‌ಗಳು ಕೆಲವರು ಮದರಾಸಿಗೆ ಹೋಗಿರುವಂತೆ ತಿಳಿಯಬರುತಿದೆ.

ಈಗ ಕೋಯಮುತ್ತೂರು ಜಿಲ್ಲೆ ಡಿಸ್ಟ್ರಿಕ್ಟ್ ಜಡ್ಜಿಗಳಾಗಿರುವ ಮೆ. ಥಾಮಸ್ ವಿಯರ್ ಬಿ. ಎ. ಸಿ. ಎಸ್. ಸಾಹೇಬರವರು ಬರುವ ಅಕ್ಟೋಬರ್ ಅಥವಾ ನವಂಬರಲ್ಲಿ ಪೆನ್ಷನಮೇಲೆ ನಿವೃತ್ತರಾಗುತ್ತಾರೆಂತಲೂ, ಅನಂತರ ಮೈಸೂರು ಸರ್ಕಾರದವರು ಈ ಸಾಹೇಬರವರನ್ನು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಕೆಲಸಕ್ಕೆ ನಿಯಮಿಸಿಕೊಳ್ಳುವಂತೆ ಗೊತ್ತುಮಾಡಿದಾರೆಂತಲೂ, ಈ ಸಾಹೇಬರವರು ಮೂರು ವರುಷಕಾಲ ಮಾತ್ರ ಕೆಲಸ ಮಾಡಿ ಅನಂತರ ಹೊರಟುಹೋಗುತ್ತೇವೆಂದು ಮಾತು ಕೊಟ್ಟಿದಾರೆಂತಲೂ ಕೇಳುತ್ತೇವೆ

ಈಗ ಒಂದು ವಾರದಿಂದ ನಂಜನಗೂಡಿನಲ್ಲಿ ಕೊಗು ಮಾರೆಮ್ಮನೆಂಬ ದೇವತೆಯು ಪ್ರತಿ ರಾತ್ರಿಯೂ ಪ್ರತಿ ಮನೆಗೂ ಬಂದು ಮನೆಯವರ ಹೆಸರನ್ನು ಹಿಡಿದು ಕೂಗುತಾಳೆಂತಲೂ, ಪ್ರತ್ಯುತ್ತರ ಕೊಟ್ಟವರನ್ನು ಸಂಹರಿಸುತ್ತಾಳೆಂತಲೂ, ಅದ್ಭುತವಾದ ವರ್ತಮಾನ ಹುಟ್ಟಿ ಮೂಢರಾದ ಹೆಂಗಸರು ಮಕ್ಕಳು ಮುಂತಾದವರಿಗೆ ವಿಶೇಷ ಭೀತಿಯನ್ನುಂಟುಮಾಡುತಲಿದೆ. ಅಂತ ಅಪಮೃತ್ಯುವನ್ನು ತಪ್ಪಿಸಿಕೊಳ್ಳಲು ಪ್ರತಿ ಮನೆಯವರು ತಾವು ವಿಷ್ಣುಭಕ್ತರೆಂದು ತೋರಿಸಿಕೊಳ್ಳುವದಕ್ಕೋಸ್ಕರ ತಮ್ಮ ಮನೆಯ ಬಾಗಿಲಮೇಲೆ ಸುಣ್ಣ ಕೆಮ್ಮಣ್ಣುಗಳಿಂದ ಮೂರು ನಾಮಗಳನ್ನು ಬರೆದರೆ ಆ ದೇವತೆಯು ಆ ಮನೆಯನ್ನು ಪ್ರವೇಶಿಸದೆ ಬಿಟ್ಟು ಹೋಗುವಳೆಂದು ಒಬ್ಬ ಹುಡುಗನಮೇಲೆ ಆವೇಶ ಬಂದು ತಿಳಿಸಿರುವದ ರಿಂದ ಊರಿನವರೆಲ್ಲರು ದಿಗಿಲುಪಡುತಲಿದಾರೆ, ಅದೇಮೇರಿಗೆ ಊರಿನ ಎಲ್ಲ ಮನೆಯ ಬಾಗಿಲುಗಳಮೇಲೂ ನಾಲ್ಕಾರು ನಾಮಗಳನ್ನುಹಾಕಿರುತ್ತಾರೆಂಬದಾಗಿ ಅಲ್ಲಿನ ಒಬ್ಬ ದಾತರು ಬರೆಯುವರು—ಪ್ರ ಪ.

THE MYSORE GAZETTE.
ಮೈಸೂರು ಗೆಜೆಟ.

ಗುರುವಾರ, ತಾ|| ೩ ನೇ ಏಪ್ರಿಲ್ ೧೮೯೬,
ಮೈಸೂರ ಗವರ್ನಮೆಂಟಿನವರಿಂದ ಹೊರಡಿಸಿದ
ಇಸ್ತಿಹಾರನಾಮೆಗಳು,

ಜನರಲ್ ಮತ್ತು ರೆವಿನ್ಯೂ

ಮೊಕಾಂ ಮೈಸೂರ್, ತಾ||೨೮ನೇ ಏಪ್ರಿಲ್ ೧೮೯೬

ಸಿ ನಂ||೨೦೩—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ೧೦ನೇ ಸೆಕ್ಷನ್ ಅನುಸರಿಸಿ, ಮೆ||ಕೆ ಪಿ ಪುಟ್ಟಣ್ಣ ಶೆಟ್ಟಿ ಯವರು ೧ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ನೊಕರರ್ನಾಗಿ ಮಾಡಲ್ಪಟ್ಟು ಮತ್ತು ೧೪ನೇ ಸೆಕ್ಷನ್ ಅನುಸರಿಸಿ ಸದರೀ ಯವರು ಕ್ಲೋಸಪೇಟ ಸಬಡಿವಿಜನ್ ಚಾರ್ಜಿಗೆ ನಿಯಮಿಸಲ್ಪಟ್ಟಿರುತ್ತಾರೆ

೨ ಮೆ|| ಕೆ ಪಿ ಪುಟ್ಟಣ್ಣ ಶೆಟ್ಟಿಯವರು ೩೭ ನೇ ಸೆಕ್ಷನ್ ಅನುಸರಿಸಿ ಸಬಡಿವಿಜನಲ್ ಮ್ಯಾಜಿಸ್ಟ್ರೇಟರ, ಡವನ್ನ ಸಾಧಾರಣ ಅಧಿಕಾರಗಳೊಂದಿಗೆ ೩೭ನೇ ಸೆಕ್ಷನ್ ಅನುಸರಿಸಿ ೧ನೇ ಕ್ಲಾಸ ಮ್ಯಾಜಿಸ್ಟ್ರೇಟುಗಳು ವ ಸಬಡಿವಿಜನಲ್ ಮ್ಯಾಜಿಸ್ಟ್ರೇಟುಗಳಿಗೆ ಗವರ್ನಮೆಂಟಿನವರಿಂದ ಕೊಡಲ್ಪಡುವ IVನೇ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ವರೋಬಸ್ತು ಜಾಸ್ತೀ ಅಧಿಕಾರಗಳೂ ಅಂದರೆ ಪ್ರಾಟಾಗಿ ದರ್ಯಾಫ್ತು ಮಾಡುವ ಬಗ್ಯೆ ಅಧಿಕಾರ ವಿನಾ ಮಿಕ್ಕ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ

ಸಿ ನಂ|| ೨೦೩ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ೧೪ನೇ ಸೆಕ್ಷನ್ ಅನುಸರಿಸಿ ಅಸಿಸ್ಟೆಂಟ ಕಮಿಷನರ್ ಮೆ|| ಕೆ. ಎಸ ದೊರಸ್ವಾಮಿ ಅಯ್ಯರ್ ಯವರು ಚಿಕ್ಕಬಳ್ಳಾಪುರದ ಸಬಡಿವಿಜನಿನ ಚಾರ್ಜಿಗೆ ಹಂಗಾಮಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ

೨ ಮೆ|| ದೊರಸ್ವಾಮಿ ಅಯ್ಯರ್ ಯವರು ೩೭ನೇ ಸೆಕ್ಷನ್ ಅನುಸರಿಸಿ, ಸಬ ಡಿವಿಜನಲ್ ಮ್ಯಾಜಿಸ್ಟ್ರೇಟರ, ಡವನ್ನ ಸಾಧಾರಣ ಅಧಿಕಾರಗಳೊಂದಿಗೆ ೩೭ನೇ ಸೆಕ್ಷನ್ ಅನುಸರಿಸಿ, ೧ನೇ ಕ್ಲಾಸ ಮ್ಯಾಜಿಸ್ಟ್ರೇಟುಗಳು ವ ಸಬಡಿವಿಜನಲ್ ಮ್ಯಾಜಿಸ್ಟ್ರೇಟುಗಳಿಗೆ ಗವರ್ನಮೆಂಟಿನವರಿಂದ ಕೊಡಲ್ಪಡುವ IVನೇ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ದರೋಬಸ್ತು ಜಾಸ್ತೀ ಅಧಿಕಾರಗಳು ಅಂದರೆ ಪ್ರಾಟಾಗಿ ದರ್ಯಾಫ್ತು ಮಾಡುವವ್ಯೆ ಅಧಿಕಾರ ವಿನಾ ಮಿಕ್ಕ ಅಧಿಕಾರಗಳೂ ಹಂಗಾಮಿಯಾಗಿ ಕೊಡಲ್ಪಟ್ಟಿರುತ್ತಾರೆ

ಸಿ ನಂ||೨೧೮—ಕ್ರಿಮಿನಲ್ ಪ್ರೊಸಿಡ್ಯೂರ ಕೋಡಿನ ೧೪ನೇ ಸೆಕ್ಷನ್ ಅನುಸರಿಸಿ, ಅಸಿಸ್ಟೆಂಟ ಕಮಿಷನರ ಮೆ|| ಕೆ ರಾಮಚಂದ್ರರಾಯರವರು, ಸಾಗರ ಸಬಡಿವಿಜನಿನ ಚಾರ್ಜಿಗೆ ಹಂಗಾಮಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ

೨ ಮೆ|| ಕೆ. ರಾಮಚಂದ್ರ ರಾಯರವರು ೩೭ ನೇ ಸೆಕ್ಷನ್ ಅನುಸರಿಸಿ ೧ನೇ ಕ್ಲಾಸ ಮ್ಯಾಜಿಸ್ಟ್ರೇಟುಗಳೂ, ವ ಸಬ ಡಿವಿಜನಲ್ ಮ್ಯಾಜಿಸ್ಟ್ರೇಟುಗಳಿಗೆ ಗವರ್ನಮೆಂಟಿನವರಿಂದ ಕೊಡಲ್ಪಡುವ IVನೇ ಷೆಡ್ಯೂಲನಲ್ಲಿ ವಿವರಿಸಲ್ಪಟ್ಟ ದರೋಬಸ್ತು ಜಾಸ್ತೀ ಅಧಿಕಾರಗಳೂ ಅಂದರೆ ಪ್ರಾಟಾಗಿ ದರ್ಯಾಫ್ತೀ ಮಾಡುವ ಬಗ್ಯೆ ಅಧಿಕಾರ ವಿನಾ ಮಿಕ್ಕ ಅಧಿಕಾರಗಳೂ ಹಂಗಾಮಿಯಾಗಿ ಕೊಡಲ್ಪಟ್ಟಿರುತ್ತಾರೆ

ಸಿ ನಂ|| ೨೨೮—ಹೊಸಕೋಟೆ ತಾಲ್ಲೂಕು ಅಮಲ್ದಾರ್ ಟಿ ಬಾಬಾ ರಾಯರಿಗೆ ಮಾರ್ಚಿ ಮಾಹೆ ೨೮ ನೇ ಮಾರ್ಚಿ ೦ ಲಾಗಾಯಿತು ಯಾ ಅವರುಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

ರೆವಿನ್ಯೂ ಪ್ರೊಬೇಷನ್ಸಾದ ಸಿ ಕೃಷ್ಣಸ್ವಾಮಿ ನಾಯುಡು ಯವರು ಸದರೀ ಟಿ ಬಾಬಾ ರಾಯರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹೊಸಕೋಟೆ ತಾಲ್ಲೂಕು ಅಮಲ್ದಾರ್ ವ ೨ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ನೊಕರರ್ನಾಗಿ ಮಾಡಲ್ಪಟ್ಟಿರುತ್ತಾರೆ

ಸಿ ನಂ|| ೨೩೯—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೧೮೯ ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿನಲ್ಲಿರುವ ಎಕಸ್ಟ್ರಾ ಅಸಿಸ್ಟೆಂಟ ಕಮಿಷನರ್ ಮೆ|| ಕೃಷ್ಣ ರಾಯರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

೨ ಬೆಂಗಳೂರು ಡಿಸ್ಟ್ರಿಕ್ಟ ಪ್ರೊಬೇಷನರ್ ಅಸಿಸ್ಟೆಂಟ್ ಕಮಿಷನರ್ ಮೆ||ವಿ ಆರ ತ್ಯಾಗರಾಜ ಅಯ್ಯರ್ ಎಂ ಎ ಯವರು, ಹಂಗಾಮಿಯಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟು ಮತ್ತು ಸದರೀ ಮೆ||ಸಿ ಕೃಷ್ಣರಾಯರವರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿಗೆ ನಿಯಮಿಸಲ್ಪಟ್ಟಿರುತ್ತಾರೆ

ಸಿ ನಂ||೨೪೩—ಸರ್ಜನ್ ಕರ್ನಲ್ ಟಿ ಜೆ ಮೆಗ್ಗಾರ್ ಯವರು ಬ್ರಿಟಿಷ್ ನೌಕರಿಗೆ ವಾಪಸ ಹೊರಟು ಹೋದ ಸಬಬ್ ಅವರಡಿ ಕಂಡ ಬಿಡ್ತಿಗಳು ೧೮೯೬ನೇ ಇಸವಿ ಏಪ್ರಿಲ್ ೩೦ನೇ ಮಾರ್ಚಿಂ ಲಾಗಾಯಿತು ಹುಕುಂ ಮಾಡಲ್ಪಟ್ಟಿರುತವೆ —

ಮೈಸೂರು ಸಿವಿಲಸರ್ಜನ್ ಲೆಫ್ಟಿನೆಂಟ ಕರ್ನಲ ಪಿ ಎಚ್ ಬೆನ್ಸರ್ ಎಂ ಬಿ ಸಿ ಎಂ, ೨೦ ಆರ್ ಸಿ ಎಸ, ಯವರು ಸಬ ಪ್ರೋಟೆಮಾಗಿ ಸೀನಿಯರ ಸರ್ಜನ್ ಮತ್ತು ಮೈಸೂರು ಗವರ್ನಮೆಂಟ್ ಎಕ್ಸ ಅಫಿಷಿಯೊ ಸಾನಿಟರಿ ಕಮಿಷನರಾಗಿರತಕ್ಕದ್ದು

ಅಸಿಸ್ಟೆಂಟ ಸರ್ಜನ್‌ರಾದ ಮೆ|| ಟ ಎ ಅಯ್ಯಂಗ ಮೊದಲಿಯಾರ ಎಂ ಬಿ ಸಿ ಎಂ ಯವರು ಸಬ ಪ್ರೋಟೆಂ ತರೀಕ ಮೈಸೂರು ೧ನೇ ಕ್ಲಾಸ ಸಿವಿಲಸರ್ಜನ್‌ರಾಗಿ ಆಕ್ಟ ಮಾಡತಕ್ಕದ್ದು

ಮೊಕಾಂ ಮೈಸೂರು, ತಾ|| ೪ನೇ ಮೇ ೧೮೯೬

ಕ್ಯಾಂಪ ನಂ|| ೩೪೮—ಸಿದ್ಲಘಟ್ಟ ತಾಲ್ಲೂಕು ಅಮಲ್ದಾರ ಎನ್ ಶ್ರೀನಿವಾಸ ರಾಯರಿಗೆ, ೧೮೯೬ನೇ ಏಪ್ರಿಲ್ ೧೬ನೆ ಮಾರ್ಚಿಂ ೯೦೫೦—೨೬ ಮೆ ೯೬—೯೭ ನೇ ನಂಬರ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಸ್ವಂತ ಕೆಲಸದಮೇಲಿನ ರಜಾವನ್ನು ಇನ್ನು ಒಂದು ತಿಂಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ

ತಾಲ್ಲೂಕು ಶಿರಸ್ತೇದಾರ ಕನ್ನಯ್ಯ ಶಾಸ್ತ್ರಿಯವರು, ಸದರೀ ಶ್ರೀನಿವಾಸ ರಾಯರು ರಜಾವನ್ನು ಉಪಯೋಗಿಸಿಕೊಂಡ ತಾರೀಖ್ ಲಾಗಾಯಿತು ಸಿದ್ಲಘಟ್ಟ ತಾಲ್ಲೂಕು ಅಮಲ್ದಾರ ವ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ ತರೀಖ ನೊಕರರ್ನಾಗಿ ಮಾಡಲ್ಪಟ್ಟಿರುತ್ತಾರೆ

ಮೊಕಾಂ ಬೆಂಗಳೂರು ತಾ|| ೫ನೇ ಮೇ ೧೮೯೬

ನಂ|| ೧೨೩೩೧—೫೫, ೧೩೯೧ ಕ್ರಿಮಿನಲ್ ಪ್ರೊ ಸಿಡ್ಯೂರ್ ಕೋಡ ೧೨ನೇ ಸೆಕ್ಷನ್ ಅನುಸರಿಸಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಶಿರಸ್ತೇದಾರ ರಂಗಣ್ಣನವರು ಸದರೀ ತಾಲ್ಲೂಕು ಚಾರ್ಜಿನಲ್ಲಿರುವ ಕಾಲದಲ್ಲಿ ೩ನೇ ಕ್ಲಾಸ ಮ್ಯಾಜಿಸ್ಟ್ರೇಟ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ

ಮೊಕಾಂ ಮೈಸೂರು ತಾ|| ೨೮ನೇ ಏಪ್ರಿಲ್ ೧೮೯೬

ನಂ|| ೯೬೦೩ ಆರ ಎಫ್ ೧೨೩—೯೬ —ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಕ್ಲೋಸಪೇಟ ಸಬ ತಾಲ್ಲೂಕು ಷೆರಸ್ತೆ ಉಮಲ್ದಾರ ಜಿ ತಿರುನಾರಣಯ್ಯಂಗಾರ್ಯರವರು ೧೮೯೬ನೇ ಇಸವಿ ಏಪ್ರಿಲ್ ೨೦ನೇ ತಾರೀಖ್ ಮೊದಲು ಒಂದೂವರೆ ತಿಂಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುತ್ತಾರೆ

೧೮೯೬ನೇ ಇಸವಿ ಏಪ್ರಿಲು ೨೦ನೇ ಮಡ್ರಾಸುಮುಳ್ ೩೩೦೦—೨೮೩ನೇ ನಂಬರ್ ಇಸ್ತಿಹಾರನಾಮೆ ಮೊಲಕ ಸಬತಾಲ್ಲೂಕು ಚಾರ್ಜ ವಿಷಯವನ್ನು ಮಾಡಲ್ಪಟ್ಟ ಆಕ್ಟಿಂಗ ಏಪಾ ಹುಗಳು, ತಿರುನಾರಣಯ್ಯಂಗಾರ್ಯರವರು ರಜಾಮೇಲೆ ಗೈರಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೂ ಜಾರಿಯಲ್ಲಿರತಕ್ಕದ್ದು

=

SUMMARY OF NEWS.
ವೃತ್ತಾಂತ ಸಂಗ್ರಹವು.

ಬಸೋರಾ ಎಂಬ ಪ್ರದೇಶದಲ್ಲಿ ಒಬ್ಬ ಕಾಲಾಳು ಕುದುರೆಯನ್ನು ಲಗ್ನ ಮಾಡಿಕೊಂಡು ಎರಡು ಮಕ್ಕಳನ್ನು ಪಡೆದನು. ಎಲ್ಲಾ ತಂದೆ ತಾಯಿಗಳಂತೆ ಬಾಳಿದೆ

ಮುಜಫರನಗರದಲ್ಲಿ ಸೂರಿಚ್ಚಾ ಎಂಬೊಬ್ಬ ಮನಸಾದೀಯನು ೩ ಅಡಿ ೬ ಅಂಗುಲ ಪ್ರಮಾಣವುಳ್ಳವನಾಗಿದ್ದಾನೆ ಜನರೆಲ್ಲ ಇವನನ್ನು ನೋಡಿಕೊಂಡು ಬರುವದಕ್ಕೆ ಹೋಗುತಿದ್ದಾರೆ, ಮತ್ತು ನೋಡಿದವರು ಬಹಳ ಆಶ್ಚರ್ಯಪಡುತಿರುವರು.

ಪ್ರೊಫೆಸರ್ ಗ್ಯಾರ್ನ್ನಿಯರ್ ಯೆಂಬವರು ಕೋತಿಗಳ ಭಾಷೆಯನ್ನು ಸಂಗ್ರಹಿಸುತಿರುವರಷ್ಟೆ ಪ್ರೊಫೆಸರ ಮಾರ್ಷ್ಯಾಕ್ಲರ ಯೆಂಬವರು ಶ್ವಾನಗಳ ಭಾಷೆಯನ್ನು ಸಂಗ್ರಹಿಸುತಿರುವರು ಈವರೆಗೆ ೭ ಪದಾರ್ಥಗಳನ್ನು ಸಂಗ್ರಹಿಸಿರುವರು.

ಅಲಹಾಬಾದಿನಲ್ಲಿ ನಡೆದ ಪಕೀಲರ ಪರೀಕ್ಷೆಯಲ್ಲಿ ಘೋಷ್, ಎಂಬ ಮನುಷ್ಯನನು ತನ್ನ ಬಾವಮೈದುನನಾಗಿ ಹೋಗಿ ಪ್ರಶ್ನಪತ್ರಿಕೆಗಳನ್ನು ತೆಗೆದುಕೊಂಡು ಅವುಗಳಿಗೆ ಉತ್ತರಗಳನ್ನು ಬರೆದುಕೊಟ್ಟು ಬಂದನು ಈ ಮೋಸವು ಸರ್ಕಾರಕ್ಕೆ ಗೊತ್ತಾಯಿತು ಇದಕ್ಕಾಗಿ ಅವನಿಗೆ ೧೦೦ ರೂಪಾಯಿ ಜುಲ್ಮಾನೆ ಹಾಕಿದರು

ಒರ್ಸ್ಸಾ ದೇಶಕ್ಕೆ ಸೇರಿದ ಪೆಗೂ ಪಟ್ಟಣದಲ್ಲಿ ನೇಟಿವ ಜನಗಳ ವಿವಾಹಗಳಲ್ಲಿ ಮದುವೆಯಾದನಂತರ ಜನರೆಲ್ಲ ಸೇರಿ ಮದುವೆ ಮನೆಯಮೇಲೆ ಕಲ್ಲುಗಳನ್ನು ಎಸೆಯುವರು ಅನಂತರ ಮದುವೆ ಮಾಡಿಕೊಳ್ಳುವ ಗಂಡು ಹೆಣ್ಣು ಸೇರಿ ಕಲ್ಲೆಸೆದವರನ್ನೆಲ್ಲ ಕರೆಸಿ ಅವರಿಗೆ ದುಡ್ಡು ಕೊಟ್ಟು ಕಳುಹಿಸುವರೂ ಬಹುಕಾಲದಿಂದ ಪದ್ಧತಿಯಾಗಿದೆ

ಕಳೆದ ಜ್ಯೈಷ್ಠ ಪೌರ್ಣಮಿದಿನ ಸಿಂಧು ನದಿಯ ಸಂಗಮಸ್ಥಳದಲ್ಲಿ ಅನೇಕ ಮಂದಿ ಸ್ತ್ರೀಯರು ಆಭರಣಗಳನ್ನು ಇಟ್ಟುಕೊಂಡು ಗಂಗೆಯನ್ನು ಪೂಜೆ ಮಾಡುತಲಿರುವಾಗ್ಗೆ ಕಳ್ಳರು ಗುರುತು ತಿಳಿಯದಂತೆ ಮುಖವಾಡಗಳನ್ನು ಕಟ್ಟಿಕೊಂಡು ಹೆಂಗಸರನ್ನು ತೋಳುಗಳಿಗೆ ಎತ್ತಿಕೊಂಡು ಹೋಗಿ ಅವರ ಮೈಮೇಲಿದ್ದ ಒಡವೆಗಳನ್ನೆಲ್ಲ ಕಳಚಿಕೊಂಡರು ಈಗ ಅವರ್ಯಾರೋ ಪತ್ತೇ ಆಗಿಲ್ಲ ಸರ್ಕಾರದವರು ಇದನ್ನು ಪಟ್ಟು ಹುಡುಕಿಸುತಲಿದ್ದಾರೆ

ಈಚೆಗೆ ಇಂಗ್ಲಿಷ ಜನರು ಅಮೆರಿಕಾ ದೇಶಕ್ಕೆ ಹೋಗಿ ಅಲ್ಲಿನ ಐಶ್ವರ್ಯವತಿಯಾದ ಸ್ತ್ರೀಯರನ್ನು ವರಿಸಿ ಮದುವೆ ಮಾಡಿಕೊಂಡು ಬರುತಲಿದ್ದಾರೆ, ಅಮೆರಿಕಾ ಸರ್ಕಾರದವರು ಈ ಸಂಗತಿಯನ್ನು ತಿಳಿದು ಇಂತಾ ಮದುವೆಗಳನ್ನು ಇನ್ನು ಮೇಲೆ ನಡೆಸಿದರೆ ನೂತನ ಗಂಡಂದಿರು ಸರ್ಕಾರಕ್ಕೆ ಇಷ್ಟು ದ್ರವ್ಯ ಕೊಡಬೇಕೆಂದು ಒಂದು ಕಾನೂನನ್ನು ಜಾರಿಯಲ್ಲಿ ತರುವರು ಇದರಿಂದ ಸರ್ಕಾರಕ್ಕೆ ವರುಷ ೧ಕ್ಕೆ ೨೦ ಲಕ್ಷ ಪೌಂಡುಗಳು ಆದಾಯವಾಗುತ್ತದೆಂದು ಅಂದಾಜು ಮಾಡಿರುವರು

ADVERTISEMENTS

ಸಿಟಿ ಮ್ಯೂನಿಸಿಪಾಲಿಟಿ.
ನೋಟಿಸ್

ಇದರಿಂದ ಸಮಸ್ತ ಜನರಿಗೂ ತಿಳಿಸಲ್ಪಡುವದೇನೆಂದರೆ :—

೧೮೯೬ನೇ ಇಸವಿ ಮೇ ತಿಂಗಳಲ್ಲಿ ಅವಿನ್ಯೂ ರಸ್ತೆಯೊಳು ದೊಡ್ಡನಲ್ಲಿಗಳದಲ್ಪತುವವಾಗಿ ನಡನೀರರಸ್ತೆಯಲ್ಲಿ ಅರ್ಧಭಾಗ ಗಾಡಿಗಳ ಸಂಚಾರಕ್ಕೆ ಅವಕಾಶವಿಲ್ಲದಂತೆ ಬಂದು ಮಾಡಲ್ಪಡುವುದು

T T LEONARD,
President,
Municipal Commn.,
Bangalore City

ಸಿಟಿ ಮ್ಯೂನಿಸಿಪಾಲಿಟಿ,
ಬೆಂಗಳೂರು,
೯ನೇ ಮೇ ೧೮೯೬

ದಕ್ಷಿಣ ಮಹಾರಾಷ್ಟ್ರ ರಯಿಲ್ವೆ

ನೋಟಿಸ್

ಸನ್ ೧೮೯೬ ನೇ ಇಸವಿ ಜುಲೈ ಗುಡ್ಸ್ ತರೀಫ್‌ನಲ್ಲಿ ಪ್ರಾರಂಭವಾಗುವ ಸಾಲಿನಲ್ಲಿ ಬೇಕಾಗಿರುವ ಇದರ ಕೆಳಗೆ ಬರೆದಿರುವ ಸಾಮಾನು ೪ ವರುಷಗಳ ಬಗ್ಗೆ ಸನ್ ೧೮೯೬ನೇ ಇಸವಿ ಮೇ ೨೫ನೇ ತಾರೀಖ ಎರಡು ಘಂಟೆ ವರೆಗೆ ದರಖಾಸ್ತುಗಳು ಬರಮಾಡಿಕೊಳ್ಳಲ್ಪಡುವವು —

೧ ಈ ದೇಶದಲ್ಲಿ ತಯಾರಾಗುವ ಚಿಲ್ಲರೆ ಸಾಮಾನುಗಳು

೨ ಎಣ್ಣೆಗಳು, ಜಿಡ್ಡು ಇತ್ಯಾದಿ

೩ ಉಡುಪುಗಳು

೪, ಕಾಗದ, ಪೆನ್ನು, ಇಂಕ ವಗೈರೆ ಸಾಮಾನುಗಳು

೨ ದರಖಾಸ್ತುಗಳನ್ನು ಟೆಂಡರಿನ ಷೆಡ್ಯೂಲ್ ಎಂಬ ಛಾಪಾ ಹಾಕಲ್ಪಟ್ಟ ನಮೂನೆಗಳಲ್ಲಿ ಬರೆದು ಕಳುಹಿಸಿಕೊಡತಕ್ಕದ್ದು, ಅವುಗಳಲ್ಲಿ ೧ ರಿಂದ ೩ನೇ ಬಾಕಿ ನಮೂನೆಗಳನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ ಕೀಪರಿಂದಲೂ, ೩ನೆ, ೪ ನ ನಮೂನೆಯನ್ನು ಧಾರ್ವಾಡದಲ್ಲಿರುವ ಟ್ರಾಫಿಕ ಮ್ಯಾನೇಜರ ಅವರಿಂದಲೂ, ೫ನೇ ಬಾಕಿ ನಮೂನೆಯನ್ನು ಧಾರ್ವಾಡದಲ್ಲಿರುವ ಅಡಿಟರಿಂದಲೂ ನಮೂನೆ ೧ಕ್ಕೆ ೪ ಆಣೆ ಬೆಲೆ ಕೊಟ್ಟು ಪಡೆಯಬಹುದು.

೩ ಕಂಪನಿಯು ಯಾವ ತಹ್ನೀಲ್ ಮತ್ತು ಷರತ್ತುಗಳ ಮೇಲೆ ಕಂಟ್ರಾಕ್ಟುಗಳು ಕೊಡಲ್ಪಡುತಿವೆಯೊ ಅವು ಟೆಂಡರ್ಸ್ಸ ಷೆಡ್ಯೂಲಿನ ಪ್ರತಿಯೊಂದು ನಮೂನೆಗೂ ಸೇರಿಸಲ್ಪಟ್ಟಿರುತಿವೆ ಜಾಸ್ತೀ ಸಂಗತಿಗಳೇನಾದರು ತಿಳಿಯಬೇಕಾಗಿದ್ದರೆ ಆಯಾ ಖಾತೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ತಿಳಿದುಕೊಳ್ಳಬಹುದು.

೪. ದರಖಾಸ್ತುಗಳನ್ನು ಬರೆದು ಲಕೋಟೆಯಲ್ಲಿ ಹಾಕಿ ಸೀಲ್ ಮಾಡಿ ಧಾರ್ವಾಡದಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ಕಂಪನಿಯ ಏಜಂಟರವರ ಹೆಸರಿಗೆ ವಿಳಾಸ ಬರೆದು,

- ಈ ದೇಶದ ತಯಾರಿ ಸಾಮಾನುಗಳ ಬಗ್ಗೆ ದರಖಾಸ್ತು
- ಎಣ್ಣೆ ವಗೈರೆ ಬಗ್ಗೆ ದರಖಾಸ್ತು,
- ಉಡುಪುಗಳ ಬಗ್ಗೆ ದರಖಾಸ್ತು,
- ಕಾಗದ ಪೆನ್ನು ವಗೈರೆ ಬಗ್ಗೆ ದರಖಾಸ್ತು,

ಎಂಬದಾಗಿ ಆಯಾ ಬಾಬತುಗಳನ್ನು ನಮೂದ ಮಾಡತಕ್ಕದ್ದು ಈ ದರಖಾಸ್ತುಗಳಿಗೆ ಯಾವದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಏಜಂಟರವರು ಬದ್ಧರಾಗಿರುವದಿಲ್ಲವು

ಏಜಂಟರ ಆಫಿಸ್, ಧಾರ್ವಾಡ
೨೮ನೇ ಏಪ್ರಿಲ್ ೧೮೯೬

J BURN MURDOCH,
Major, R E
Agent

ನೋಟಿಸ.

ಬೆಂಗಳೂರು ರಣಸಿಂಗಪೇಟೆ ವ್ಯಾಪಾರಿಯಲ್ಲಿರುವ ಕಿಸ್ಟಾ ಕೆಂಪಣ್ಣನವರ ರಂಗಣ್ಣ ಶೆಟ್ಟಿ ಯು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

ನನ್ನ ತಂದೆಯಾದ ಕೆಂಪಣ್ಣನು ತನ್ನ ಸಂಪಾದನೆಯಿಂದಲೇ ಆಗಲಿ ಅಥವಾ ಆತನ ಪಿತರಾರ್ಜಿತದಿಂದಲೇ ಆಗಲಿ ನನಗೆ ಯಾವದೊಂದು ಆಸ್ತಿಯನ್ನೂ ಕೊಟ್ಟಿರುವದಿಲ್ಲ ಹಾಲಿ ನನ್ನ ಅನುಭವದಲ್ಲಿರುವ ಆಸ್ತಿ ಯಾವತ್ತೂ ನನ್ನ ಸ್ವಯಾರ್ಜಿತವಾದದ್ದು ಇನ್ಯಾರಿಗೂ ಅದರಲ್ಲಿ ಹಕ್ಕು ಇರುವದಿಲ್ಲ ನನಗೆ ೧ ಕೆಂಪ ೨ ರಂಗ ೩ ಮುನಿಸ್ವಾಮಿ ಯೆಂಬದಾಗಿ ಮೂರುಜನ ಮಕ್ಕಳು ಇರುತ್ತಾರೆ ಇವರು ನನಗೆ ವಿಧೇಯರಾಗಿರುವದಿಲ್ಲ, ಇವರು ಒದ್ದಬಾಳ ಜನಗಳ ಸಹವಾಸದಲ್ಲಿ ಇದ್ದುಕೊಂಡು ನನ್ನ ತಿಳುವಳಿಕೆ ಯಿಲ್ಲದಂತೆ ತಪ್ಪುಗಳ ಮಾಡುವದಕ್ಕೋಸ್ಕರ ಸಾಲಗಳು ಮಾಡುವದಾಗಿ ವರ್ತಮಾನ ಕೇಳುತ್ತೇನೆ ನನ್ನ ಆಸ್ತಿಯಲ್ಲಿ ಅವರಿಗೆ ಯಾವ ವಗೈರೆ ಹಕ್ಕು ಇರುವದಿಲ್ಲ ಅಂತಾ ಹಕ್ಕು ಯೇನಾದರೂ ಯಿರುತ್ತೆಂಬ ಭ್ರಾಂತಿಯಿಂದ ನನ್ನ ಆಸ್ತಿಯ ಆಧಾರದಮೇಲೆ ಯಾರಾದರು ಅವರಿಗೆ ಸಾಲ ಕೊಟ್ಟಿದ್ದೇ ಆದರೆ ಅಂಥವರು ನಷ್ಟಪಡುವರು ಮೋಸಗತಿಯಿಂದ ಜನಗಳು ನಷ್ಟಕ್ಕೆ ಗುರಿಯಾಗಬಾರದೆಂಬ ಯೋಚನೆಯಿಂದ ಈ ತಿಳುವಳಿಕೆ ನೋಟಿಸು ಕೊಟ್ಟಿರುತ್ತೇನೆ, ಚಿತ್ತವಿಸುವುದು

೨೭ನೇ ಏಪ್ರಿಲ್, ೧೮೯೬ | ಕೆಂಪಣ್ಣನವರ ರಂಗಣ್ಣ ಶೆಟ್ಟಿ ರುಜು

ಈ ಕಂಪನಿಯು ಸನ್ ೧೮೭೩ನೇ ಯಲ್ಲಿ ಸ್ಥಾಪಿತವಾಯಿತು
ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತತ್ತಿಯು.

ಅತ್ಯಾಶ್ಚರ್ಯಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ತತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು ತುಪ್ಪದೊಳಗೆ ಹಾಗಿಸಿ, ಒಳ್ಳೇ ಜೇನ್ನಿನ ತರಗಿಯು ಸಕ್ಕರೆಯು ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ತತ್ತಿಗಳು ಮಹಾ ಔಷಧಗಳಿದ್ದು, ಒಳ್ಳೇ ರುಚಿಯುಕ್ತವವೆ ಇವುಗಳ ಸೇವನೆಯಿಂದ ಕಫ, ವಾತ. ಪಿತ್ತ ಈ ತ್ರಿದೋಷಗಳುಂಟಾಗತಕ್ಕ ಐವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ ೬೦ ವರ್ಷಗಳ ಪ್ರಾಯದವನ್ನ ಮುದುಕರ ಕಾಮವಿಕಾರವಾದರೂ ಹರೆಯಾದ ಗಂಡಸರಂತೆ ಪ್ರಜ್ವಲಿತವಾಗುತ್ತದೆ ಜನನೇಂದ್ರಿಯದಲ್ಲಿ ಬಲ ವುಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವೀಯು ಮಂಜೆ ಅಥವಾ ಹಿಂಬೆ ಹರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ ಪರಮಾ ಹಾಗೂ ಉಷ್ಣಸಂಬಂಧಿಕ ರೋಗಗಳ ತಸರ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ ಮೂರು ಹೊತ್ತಿಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದರಿಂದ ತಡ ಕೂಡಲೇ ಸ್ವಚ್ಛ ಶೌಚವಾಗುತ್ತದೆ ಷೆಯು, ಖುದಗ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ರೋಗ ಇದ್ದಲ್ಲಿ ೧೧ ದಿನಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ ಮತ್ತು ಹಳಬಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳ ವರಿಗೆ ಸಾಲತಕ್ಕ ೧ ಡಬ್ಬಿಗೆ ೧ ೪—೦ ರೂ||ಒಂದೇ ಸಾರ್ವಳಕ್ಕೆ ೩ ಡಬ್ಬಿಗಳು ತಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಎಳೆ ೩ ರೋಗಗಳ ಮಾಸಿಹೋಗುತ್ತವೆ ಎಲ್ಲರನ್ನೂ ಸರಿಯಾಗಿ ರೋಗ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ ಬೆಳಸುತ್ತವೆ ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪನೀ ಹೊರ್ತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ ಯಾವತ್ತು ದೇಶಗಳಲ್ಲಿಯು ವೈದ್ಯರಿಗೆ ಸಗಟಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು ಅಂಚೆಯ ಹಾಗೂ ವ್ಯಾಲ್ಯೂ ಪೆಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಲ್ಲಿ ಎಲ್ಲಾ ಖಜೂರ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು)

ಮೋಲ್ಮೈಳಾಸ—ಪಿ. ಎಲ್ ಎ. ಬ್ರದರ್ಸ್ ಮತ್ತು ಕಂಪೆನಿ,

ಸಕೆಂಡ್ ಇಂಗ್ಲಿಷ್ ಬ್ರ್ಯಾಂಚ್ ಆಫಿಸ್, ಡಿಸ್ಟ್ರಿಕ್ಟ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGUAM.

BANGALORE —Printed and Published at the KARNATAKA PRESS, No 10, HOSPITAL ROAD, CITY,—1896

THE

Karnataka Prakasika.

ಚಂದಾದರಗಳು,—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸಹ

	ಸ್ಥಳದವರಿಗೆ	ಪರಸ್ಥಳದವರಿಗೆ
ಸಾಲ್ 1 ಕ್ಕೆ	3 0 0	4 0 0
6 ತಿಂಗಳಿಗೆ	2 0 0	2 8 0
3 ತಿಂಗಳಿಗೆ	1 4 0	1 6 0

ಕರ್ಣಾಟಕ ಪ್ರಕಾಶಿಕಾ.

Published Every Monday Morning.

ಪ್ರಕಟನೆಯ ದರಾಪ್. { ಮೊದಲನೆಯದರ ಪಙ್ಕ್ತಿ 1 ಕ್ಕೆ 0 2 0 ; ಎರಡನೆಯ ಪಙ್ಕ್ತಿ ಒಂದಕ್ಕೆ 0 1 0

[ಎರಡು-ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸಬೇಕಾದರೆ ಪಙ್ಕ್ತಿ ಒಂದಕ್ಕೆ ... ಮಾತಿಲ್ಲವಾದರು.]

ಪ್ರಕಾಶವಿವಿಧಪ್ರವೃತ್ತ್ಯುಪಗತವಾರ್ತಾ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸುಹಿತೈರೀಕ್ಷಿತಾ ॥ ವ್ಯಾಗಾಂಕಹಿತವಾಸರನಿಹಿತಮುದ್ರಣಾ ಸಜ್ಜನೈಃ ಸಮುಪಯೋಷಿತಾ ದಿಶತುವಾನಸಂಕಲ್ಪದಂ ॥

Vol. XXIII. BANGALORE:—MONDAY, MAY 18, 1896. **No. 20.**

Select Telegrams

London, 13th May—Mr Curzon, in reply to a question, said it was not intended that Indian troops should partake in the operations on the Nile but only be used in defence of Suakim and its neighbourhood according to the judgment of the Sirdar, General Kitchener

In the House of Commons, Mr Balfour, replying to a question, promised to appoint a day for a discussion of the question of the employment of Indian troops at Suakim

London 13th May—China, yielding to Russian pressure, has granted to Russia a concession on the foreshore at Chefoo Since British subjects have vested interests in the land embraced in the concession, the British Government is instituting enquiries in respect thereto

London 13th May—Sir M Hicks Beach replying to a question in the Commons, assumed it would be decided in conformity with precedents that the ordinary expenditure on the Indian troops at Suakim would be charged to the Indian Government The question whether the Egyptian Government would defray any further expense was a matter for consideration

THE

Karnataka Prakasika.

MONDAY, MAY 18, 1896

THE TRAVANCORE ADMINISTRATION

III

We shall say a few more words about the Police in to-day's issue The number *of cases pending investigation at the close* of the year was 53 against 57 at the close of the preceding year Eight were pending over a month, three over two months, and eleven over three months We are told that there was a satisfactory decline in the number of murder cases reported compared with that of the previous year Fifty per cent of the murders committed were in Kottayam District The number dealt with by the Police during the year was fourteen, and the number convicted was nine, against 20 and 10 respectively in *1893—94* This is considered to be very satisfactory The percentage of convictions in respect of cases charged was 64 2 and of persons in 1 43 1 against 50 and 35 7 in 1893—94 We can see *that there is an improvement We find that* the number of dacoities committed during the year was 69 Fifty cases were referred as false, and 17, including a case pending at the beginning of the year, were charged, but conviction was only secured in two cases. This result is quite unsatisfactory. The number of cases and the number convicted in the previous year were sixteen and eight respectively The percentage of property recovered was only 20 4 against 47 3 in 1893—94 This is anything but good. We find that there were 364 cases of robbery during the year against *198* in the year before But we find that 292 or 80 2 per cent were referred as false The tendency adverted to in former reports to exaggerate trespasses and other petty occurrences into dacoities and robberies accounts for the apparent rise in the volume of these grave crimes reported The number of cases charged during the year was 74, the number convicted 23, and the percentage 31 08 compared with 51,16 and 32 6 respectively in the previous year Of persons arrested, 24 5 per cent were convicted against 26 1 in the preceding year The percentage of property recovered was 78 8 against 78 7 in 1893—94 There were 396 cases of house breaking and theft reported of which 242 *were referred as false The number* charged during the year was 163 against 161 in the year before Conviction was secured in 100 cases or 61 3 per cent against 95 cases or 59 006 per cent The percentage of conviction of *persons* arrested was 45 1 against 40 5 in the previous year. There was a marked improvement in the amount of property recovered, the percentage being 61 6 against 24 1 in the year before 956 cases were referred by the Police for the orders of the Magistrates of which 796 or 83 2 per cent were ordered to be struck off *against 1 380 and 1,143 or 82 8* per cent respectively in the previous year. This is a decided improvement—So much for the Police We now come to crime and offences and we find that the *total number of the latter reported* was 17647 against 17,609 in the previous year, the increase being only 38. Offences under the Penal Code showed a decrease of 252, but those under Local and Special Laws, an increase of 290 The former class formed 86 72 per cent and the latter 13 28 per cent of the total offences reported, compared *with 88 34 and* 11 66 per cent in the preceding year In the Madras Presidency, we are told only 40 96 per cent of the offences reported in 1896 were under the Penal Code, while 59 04 *per cent* were under Local and Special Laws Of the total number of cases reported during the year 651 were dismissed as disclosing no sufficient ground for proceeding, and 1,012 cases were struck off as false, frivolous or vexatious 15,984 cases or 90 58 of the number reported were thus returned as true against 15,603 or *88 61 per cent in the previous year Of the* cases reported under the Penal Code and under Special and Local Laws, 89 38 per cent of the former and 98 38 per cent of the latter were returned as true against *88 11 and 92 35 per cent of the year before* In the Madras Presidency in the year 1894, 88 98 per cent of the offences reported under the Penal Code and 99 63 of those under Special and Local Laws were return*ed as true The comparison is not un*favourable, though there is still room for improvement There was a satisfactory decrease during the year in offences affecting life, wrongful restraint and wrongful confinement, theft, robbery, dacoity criminal breach of trust, receiving stolen property &c The increase was chiefly in criminal *trespass and other offences relating to pos*session of property and in criminal force and assault Some other offences also showed an increase, but the general feature of the year was a fall in the graver kinds *of offences against person and as well as* property Fifty nine cases affecting life were reported during the year against 70 in the previous year Of these, 30 were cases of murder, eleven cases of culpable homicide not amounting to murder, three of causing death by rash or negligent acts, and 15 of attempt at or abetment of suicide compared with 33, 85 and 24 respectively in 1893—94 We are glad to see that there was a decrease of 279 in the number of females charged with offences during the *year, but there was a rise in the number* as well as the percentage of convictions No female was convicted of the grave offence of murder or robbery Upon the whole Travancore shows well as regards *crime*

News and Notes.

A MAN in Bombay was the other day, sentenced to one month's hard labour for putting eyes on his younger brother to keep him from running away from home

TENDERS are being invited for the lighting by electricity of Government House, Madras, including the Banqueting Hall and A. D. C quarters, and also Government House Guindy

THE Government of India are furnishing monthly reports to the Secretary of State regarding the scarcity in the North-West Provinces, Central India and Rajputana There are now about 242,000 persons on relief works

THE Burmese Buddists of Rangoon have engaged the services of two well known Advocates to present a petition for them to the Government of India through the Local Government asking that the orders of the Collector of Buddha Gaya *regarding the removal of* one of the images at the Buddist temple at that place may be stayed

A systematic and extensive fraud has been discovered at Yellandu Station, on the Nizam's Railway A goods clerk is reported to have suddenly absconded without accounting for sums amounting to over Rs 2,000 The Railway Police have tried to capture the man but have failed It appears the money has been made away with from time to time

A proposal to impose a tax on bicycles and *tricycles in Calcutta, where "wheeling"* has suddenly become extraordinarily popular, has been set aside on the ground that the Commissioners have no power under the Municipal Act to levy such a tax. In this respect at any rate Madras cyclists have some reason to feel envious of their Calcutta brethren

THE Nawab Sultan ul Mulk of Hyderabad arrived at Constantinople on the 21st ultimo. He was met at the station by an Aide-de-Camp of the Sultan and Mr Shipley, one of the dragomans of the British Embassy, and *drove to his hotel in a Court carriage* In the afternoon the Nawab visited Sir Philip Currie.

ALL public offices at the Presidency and in the Provinces will be closed on Wednesday, the 20th instant, in honour of the Birthday, of Her Majesty the Queen Empress of India The Banks and Mercantile Offices in Madras will also be closed on that day, and also on Monday and Tuesday following for the Whitsuntide holidays

THE construction of the Nilgiri Railway is *going on apace The line from Mettapollium* to Kallar only requires a few minor works to render it completely finished, and the remainder of the section *as far as Coonoor will, it is* said, be ready for use by the beginning of next year, when the whole line will be finally inspected by the Consulting Engineer to the Government of Madras The total expenditure on the Nilgiri Railway up to date amounts to Rs, 23,00,000

The diamondiferous tract of Wajra Karur in the Ballary District of Madras Presidency, is about to be prospected by Mr T. H Lowinsky, Agent of the Deccan Mining Company, at his own expense With the exception of a small patch, practically the whole District has been leased out to Mr Lowinsky Wajra Karur has remained untouched from the time of Tippu Sultan The fields are declared by a Kimberley expert to be rich in diamonds, the real matrix of which has never yet been reached by the local natives who have been known to pick up gems from the surface of deposits

A CURIOUS case was heard in Calcutta on the 8th instant by the Joint Magistrate of Alipore Some time ago an idol at Joynagore was *robbed of ornaments to the* value of several thousands of its rupees. All Police enquiries proved futile Quite recently, however, a man named Hadim a Sirdar appeared at Joynagore thanna and confessed to the robbery of the idol's ornaments He produced the ornaments and said that ever since the sacrilegious act he had not been able to sleep and was feeling as if he would go mad He could no longer keep the booty He was sentenced to four month's rigorous imprisonment

Local and Provincial.

THE QUEEN'S Birthday—Will be observed on Wednesday the 20th as the 24th of this year falls on Monday next.

THE DEWAN—Left for Ootacamund on Monday last He has not been well, and is gone to the Hills for a change, which, we trust, will do him good

NUPTIAL CEREMONY OF THE SECOND PRINCESS—The nuptial ceremony of Princess Krishnarajammanni and Lieutenant Colonel Desraj Urs was celebrated on Friday the 8th instant

OFF TO EGYPT—Two companies of the Sappers and Miners left Bangalore for Suakin on *Friday last* They go first to Bombay when they will embark with the other troops going to the same place.

AN ESCORT FOR LIEUTENANT COLONEL DESRAJ URS—Her Highness the Maharani regent has been pleased to sanction an escort of two Sil'edar horses for Lieutenant Colonel Desraj urs during his stay in Mysore.

BIRTHDAY—The ninth birthday of Prince Narasaraja Wadayar Bahadur was celebrated on the *morning of Friday*, the 8th instant. The grand procession to several temples in the fort took place at about 6 P. M. and the usual evening Durbar was held in the Palace

QUARTERS FOR LIEUTENANT COLONEL DESRAJ URS.—The splendid house that had been occupied by Dr. McGann has been reserved for Lieutenant Colonel Desraj Urs. It is jokularly called "Smith's folly," as Smith who was for some time an Advocate in Bangalore, foolishly spent a very large sum of money *in the construction of it.*

THE WEATHER.—Is getting hot again. We have had no rain for more than ten days, and the ground looks very dry, and the grass burnt up. The few showers we have had have put some water into our tanks, so that there is no fear of a water famine this year. We want a good downfall to make things pleasant.

A COMMISSION OF ENQUIRY.—Her Highness the Maharani Regent has appointed a commission to enquire into all the complaints that are now being received at the Palace in connection with the invitation affair. This in itself is a sufficient warning to blundering officials. It appears that the Municipal Commissioners and the members of the Representative Assembly were also shown scanty courtesy by the palace authorities, and that some of the "injured" members have taken the matter seriously. Possibly this is enough to make a saint swear.—*Mysore Standard.*

ATTENDANCE OF WITNESSES.—The Chief Court has issued a circular to all Magistrates in the Province, directing them that they should not, in calculating the duration, show a witness as having attended the Court only on the day on which he was examined and calculate his attendance from that day, but that *they should show him as having* attended from the date of his arrival, and also in every case whether it is adjourned or the enquiry is commenced or proceeded with from day to day every attendance of a witness must be entered in the Register and taken into account in calculating the duration.

The Mysore Gazette

Bangalore, Thursday, April 23, 1896.

NOTIFICATIONS BY THE GOVERNMENT OF MYSORE

GENERAL AND REVENUE

No. 12358—Mis.F 3 94, dated, Camp Mysore, 9th May 1896.

Mr. V. Abboy Naidu, L.M. & S., Sub-Assistant Surgeon, is transferred from the Vaccine Institute, Bangalore, to the Local Fund Dispensary, Saklespur.

2. Mr. T. V. Kuppasami Mudaliar, L.M. & S., Sub-Assistant Surgeon, is transferred from the Local Fund Dispensary, Saklespur to do duty in the Vaccine Institute, Bangalore.

No. 272, dated Camp Mysore, 10th May 1896.

Whereas, for the preservation of the public peace and in order to prevent a collision between two rival factions of Muhammadans residing in the town of Chikballapur, the Amildar and 2nd Class Magistrate of the Chikballapur Taluk has passed an order, dated 11th March 1896, under the provisions of Section 144 of the Criminal Procedure Code, directing the said Muhammadan community of the said town of *Chikballapur to abstain from* entering the Jumma Masjid and Eedga in that place for performing namaz therein, and whereas it has been represented that the hostility between the said two factions continues unabated and there is a likelihood of a riot or affray, should the Amildar-Magistrate's order *cease to be in force, the Government of Mysore* are hereby pleased to direct under the last para *of Section 144, Criminal Procedure Code* that the said order of the Amildar Magistrate which in the usual course would cease to have *force from and after 11th May 1896,* do continue in force for a further period of six months from the said date.

No. 12444—Ed. 1391, *dated Bangalore, 13th May 1896.*

Under Article 188 of the Mysore Service Regulations, Mr. K. Rangappa, Deputy Inspector of Schools, Chitaldroog District, is granted privilege leave of absence for one month with effect from the 12th April 1896, or from such other date as he may avail himself of the same.

Mr. Virabhadraiya, B.A., 1st Assistant, Chitaldroog High School, is in addition to his *own duties appointed to act as Deputy Inspector of Schools,* Chitaldroog District, during the absence of Mr. K. Rangappa on leave or until further orders.

ಕರ್ಣಾಟಕ ಪ್ರಕಾಶಿಕಾ.

[illegible]

ವಿವಾಹಕಾರ್ಯ ನಿರ್ವಾಹಕರ ಬೇದಾಸೀನ್ಯವು

ಈಚೆಗೆ ಮೈಸೂರಿನಲ್ಲಿ ನಡೆದ ರಾಜಪುತ್ರಿಯರ ವಿವಾಹ ಮತ್ತು ಶ್ರೀಮನ್ಮಹಾರಾಜ ರಾಜಕುಮಾರರವರ ಉಪನಯನ, ಈ ಎರಡು ಶುಭಗಳೂ ನಿರ್ವಿಘ್ನವಾಗಿಯೂ ಅತಿ ವಿಭವದೊಡನೆಯೂ ನೆರವೇರಿ, ಸದರೀ ಶುಭಗಳಬಗ್ಗೆ ಆಹೂತರಾಗಿ ರಾಜಧಾನಿಗೆ ಹೋಗಿದ್ದವರಲ್ಲಿ, ಅನ್ಯ ಸಂಸ್ಥಾನಗಳ ಪ್ರತಿನಿಧಿಗಳಿಗೆ ಉಚಿತ ಪರ್ಯ್ಯಾದೆಗಳೊಡನೆ ಬಂದಿದ್ದವರು ಆಯಾ ಸಂಸ್ಥಾನಗಳ ಗೌರವಾನುಗುಣವಾಗಿಯೂ, ಬರಸ್ಥಳಗಳಿಂದ ದೇಶ್ಯಮನುಷ್ಯರೆನ್ನಿಸಿಕೊಂಡು ಬಂದಿದ್ದವರು ಅವರವರ ಗೌರವಾನುಗುಣವಾಗಿಯೂ ಅರಮನೆಯಿಂದ ಸನ್ಮಾನಗಳಂ ಹೊಂದಿ ಅವರವರ ಸ್ಥಳಗಳಿಗೆ ಹಿಂದಿರುಗಿ ಹೋದರು. ಈ ಶುಭ್ಯಾಚರಣೆಯ ಬಗ್ಗೆ ಆಹ್ವಾನ ಪತ್ರಿಕೆಗಳಂ ಕಳುಹಿಸುವವರಲ್ಲೂ, ಏತದರ್ಥ ಮೈಸೂರಿಗೆ ಬಂದವರನ್ನು ಉಚಿತ ರೀತಿಯಿಂದ ಪುರಸ್ಕರಿಸಿ ಅವರ ವಿಷಯದಲ್ಲಿ ತೋರಿಸತಕ್ಕ ಮರ್ಯ್ಯಾದೆಯಲ್ಲೂ, ಅತ್ಯಕ್ಕೆ ನೇಮಕಗೊಂಡಿದ್ದ ಅಧಿಕಾರಿಗಳು ವ್ಯಕ್ತಪಡಿಸಿದ ಪಕ್ಷಪಾತದೌದಾಸೀನ್ಯಕರವಾದ ತಾರತಮ್ಯವಂ ಕುರಿತು ಇದುವರೆಗೆ ನಮಗೆ ಅನೇಕಲೇಖನಗಳು ಬಂದಿದ್ದಾಗ್ಯೂ ಅವುಗಳಲ್ಲಿನ ಯಥಾರ್ಥ್ಯವಂ ಗೌರವವಾದ ಮಾರ್ಗದಿಂ ವಿಚಾರಿಸಿನಿರ್ಧರಿಸಿಕೊಳ್ಳುವವರೆಗೆ ಸದರೀ ಲೇಖನಗಳಿಗೆ ಈ ಪತ್ರಿಕೆಯಲ್ಲಿ ಅವಕಾಶವಂ ಕೊಡುವದುಚಿತವಲ್ಲವೆಂಬ ಭಾವದೊಡನೆ ಮೌನಸಿಕ ಮಾಡಿದ್ದೆವು ಕಳೆದ ಸೋಮವಾರದ ಮೈಸೂರು ಹೆರಾಲ್ಡ್ ಪತ್ರಿಕೆಯೂ, ಬೃಹಸ್ಪತಿವಾರದ ಈವನಿಂಗ್ ಮೈಯಿಲ್ ಪತ್ರಿಕೆಯೂ ಸದರೀ ವಿಷಯವು ಕುರಿತು ಪ್ರಾಧಾನ್ಯೇನ ದೋಷೋದ್ಘಾಟನ ಪೂರ್ವಕ ವಿಚಾರಮಾಡಲಾರಂಭಿಸಿರುವದರಿಂದ, ಅದೇ ವಿಷಯವಂ ಕುರಿತು ನಮಗೆ ಬಂದ ಲೇಖನಗಳಲ್ಲಿ ತಿಳಿಸಲ್ಪಟ್ಟಿರುವ ಅನೇಕ ದೋಷಗಳಲ್ಲಿ ಕೆಲವಾದರು ನಿಕ್ಷ್ಯಯವಾಗಿರಬೇಕೆಂದು ನಂಬುವದಕ್ಕೆ ಸಂಕೃಪಾರ್ಪಕಕಾರಕವಿಲ್ಲವೆ ಹೋಗಲಿಲ್ಲವು. ಇಂತಪ್ರಬಲ ಕಾರ್ಯ್ಯಗಳ ನಿರ್ವಹಣೆಗೆ ಕೇವಲ ನಿಸ್ಸಾರಹೀನದ ಅಧಿಕಾರಿಯು ದೊರೆಯುವುದು ಬಹಳ ಅಪರೂಪವಾದುದು, ಒಂದುವೇಳೆ ಸ್ವವಿಷಯದಲ್ಲಿ ನಿಸ್ಪೃಹರಾದವರು ದೊರೆತಾಗ್ಯೂ, ಅಂತವರು ಪರಮ ಲೋಭಿಗಳಾಗಿರುತ, ತಮ್ಮ ಪೈಪ್ರಸಂಬಂಧಿಗಳಗೂ, ಆಶ್ರಿತಕೋಟಿಗೂ, ಸ್ನೇಹಿತರಿಗೂ ಒಂದು ಸಮೂಹಕ್ಕೆ ಸೇರಿದವರಿಗೂ, ವಿದ್ವಾಂಸರಾದವರಿಗೂ ಸಹಾಯ ಮಾಡುವದಕ್ಕೆ ಇದು ಉಚಿತ ಸಮಯವೆಂಬ ಭಾವದೊಡನೆ, ಸದರೀ ಅಧಿಕಾರಿಗಳ ಕಾಲವೂ ಅವಧಾನವೂ ಅವರ ವಿಷಯದಲ್ಲೇ ಉಪಯೋಗಿಸಲ್ಪಡುವುದು ವಾಡಿಕೆಯಾಗಿರುತಿದೆ. ಅರಮನೆಯಲ್ಲಿ ನಡೆಯುವ ಮೇಲಿನಂತ ಪ್ರಬಲ ಕಾರ್ಯ್ಯಗಳ ನಿರ್ವಹಣೆಗೆ ಸಂಸ್ಥಾನದ ಮರ್ಯ್ಯಾದೆಯನ್ನರಿತವರಾಗಿಯೂ, ಪುರಾತನ ಸಂಪ್ರದಾಯವ ತಿಳಿದವರಾಗಿಯೂ, ಸಂಸ್ಥಾನದ ಕೀರ್ತಿ ಪ್ರತಿಷ್ಠೆಗಳಿಗೆ ಯಾವಭಾಗದಲ್ಲೂ ಹಾನಿಯುಂಟಾಗದಂತೆ ಎಲ್ಲ ಕಾರ್ಯವಂ ನಿರ್ವಹಿಸುವವರಲ್ಲಿ ಬದ್ಧ ಸಂಕಲ್ಪ ವುಳ್ಳವರಾಗಿಯೂ ಇರುವ ಅಧಿಕಾರಿಯಂ ನಿಯಮಿಸಿಕೊಳ್ಳಬೇಕಾದುದು ಪ್ರಥಮ ಕರ್ತವ್ಯವಾಗಿರುತಿದೆ. ಈ ಸಂಸ್ಥಾನದಲ್ಲಿ ಪ್ರತಿಯೊಂದು ವಿಶೇಷ ಸಂದರ್ಭದಲ್ಲೂ ಕಾರ್ಯ್ಯ ನಿರ್ವಹಣಾಧಿಕಾರಿಗಳಾಗಿ ಯಾವಾಗ್ಯೂ ಮುಜರೇ ಕುದುರುತ್ತಾರೆ. ಸದರೀ ತ್ರಿಮೂರ್ತಿಗಳು ಆಯಾ ಸಂದರ್ಭಗಳಲ್ಲಿ ತೋರಿಸುವ ಮತಪ್ರಯುಕ್ತವಾದ ಮತ್ತು ಅಸೂಯಾಜನಕವಾದತಾರತಮ್ಯಗಳಿಂದ ಆಹೂತರಾಗಿ ಬಂದವರು ಖಿನ್ನಮನಸ್ಕರಾಗುವುದು ಮಾತ್ರವಲ್ಲದೆ ಸಂಸ್ಥಾನದ ಪ್ರಕಾಶಕ್ಕೆ ಎತ್ತಿಂಚಿತ ಮಾಲಿನ್ಯ ಪ್ರಂಟಾಗುವುದು ವಾಡಿಕೆಯಾಗಿರುತಿದೆ. ಪ್ರಸಕ್ತ ಸಂದರ್ಭದಲ್ಲೂ ಪ್ರಾಯಶಃ ಸದರೀ ಮೂವರೇ ವಿಶಿಷ್ಟ ಕಾರ್ಯ್ಯಗಳಗೂ ಮುಖ್ಯಾಧಿಕಾರಿಗಳಾಗಿಯೂ, ಅವರ ಸಹಾಯಾರ್ಥ ಅವರಿಂದಲೇ ನಿಯಾಮಕರಾದವರು ಸಹ ಗುರುವಿಗೆ ತಿರುಮಂತ್ರೋಪದೇಶಕರಾಗಿ ಯೂ ಕುದುರಿದ್ದುದರಿಂದ ವಿವಾಹಾರ್ಥ ಆಹ್ವಾನ ಪತ್ರಿಕೆಗಳಂ ಕಳುಹಿಸುವದರಲ್ಲೂ, ಬಂದವರನ್ನು ಉಪಚರಿಸುವದರಲ್ಲೂ, ಅವರಿಗೆ ಅರಮನೆಯಿಂದ ನಡೆಸಬೇಕಾದ ಮರ್ಯ್ಯಾದೆಯ ವಿಷಯದಲ್ಲೂ ವ್ಯಕ್ತಿ ನಿಷ್ಠವಾದ ತಾರತಮ್ಯ ಪರಿಗಣನೆಯಿಲ್ಲದೆ ಹೋಗಿ, ಕಾರ್ಯ್ಯ ನಿರ್ವಾಹಕರ ವಾಲ್ಲಭ್ಯವೇ ಪ್ರಾಧಾನ್ಯೇನ ಒಂದು ಅರ್ಹತೆಯಾಗಿ ಕಂಡಿತು. ತದನುಸಾರವಾಗಿಯೇ ಮರ್ಯ್ಯಾದೆಗಳೂ ನಡೆಸಲ್ಪಟ್ಟಂತೆ ಕೇಳುತ್ತೇವೆ. ಪ್ರಸಕ್ತ ಶುಭ ಕಾರ್ಯ್ಯಗಳಿಗಾಗಿ ಶ್ರೀಮನ್ಮಹಾರಾಣೀ ರೀಜಂಟರವರು ಕೇವಲ ಉದಾರ ಮನಸ್ಕರಾಗಿ ನಾಲ್ಕಾರು ಲಕ್ಷ ರೂಪಾಯಿಗಳಂ ವ್ಯಯ ಮಾಡಿದದರಿಂದುವದರಲ್ಲಿ ಸ್ವಲ್ಪವೂ ಸಂಶಯವಿರಲಾರದು. ಪರಂತು ಕೆಲವು ವಿಷಯಗಳಲ್ಲಿ ಕಾರ್ಯ್ಯ ಪ್ರವರ್ತಕರಾದವರು ನಡೆಸಿದ ಏಚ್ಛಿಕ ವ್ಯಾಪಾರಗಳು ಹೊರಗಾಗಿ ವೃತ್ತಾಂತ ಪತ್ರಿಕೆಗಳ ವಿಚಾರಕ್ಕೆ ವಿಷಯವಾದ ಬಗ್ಗೆ ಬಹಳ ವಿಷಾದಿಸುತ್ತೇವೆ. ಮುಖ್ಯವಾಗಿ ಈ ಪ್ರಬಲ ಸಂದರ್ಭದಲ್ಲಿ ಗೌರವಾರ್ಹರಾದ ಸ್ವದೇಶೀಯರು ಕೆಲರಂ ಆಹ್ವಾನಿಸಿ, ಅವರ ಕಡೆಯಿಂದ ವಿಶಿಷ್ಟ ಕಾರ್ಯ್ಯಗಳಂ ಒಪ್ಪಿಸಿದ್ದರೆ ಈಗ ಪ್ರಸ್ತಾಪಕ್ಕೆ ವಿಷಯವಾಗಿರುವ ಅಸಮಾಧಾನಗಳಿಗೆ ಅವಕಾಶ ಪ್ರಸಕ್ತಿ ಇರಲಾರದು.

ಮೇಲೆ ತಿಳಿಸಲ್ಪಟ್ಟಿರುವ ಅಕ್ರಮಗಳಂ ಸಮಾಧಿಸಿ ಶ್ರೀಮನ್ಮಹಾರಾಣೀ ರೀಜಂಟರವರಿಗೆ ಅರ್ಜಿಗಳು ಹೋಗಿ, ಅವುಗಳಲ್ಲಿ ತಿಳಿಸಲ್ಪಟ್ಟಿರುವ ಅಂಶಗಳಂ ವಿಚಾರಿಸಿ ರಿಪೋರ್ಟ್ ಮಾಡುವಂತೆ ಮ್ಯಾನೇಜರ್ ಸನ್ನಿಧಿ ಒಂದು ಕಮಿಟಿ ನೇಮಕವಾಗಿರುವಂತೆ ಮೈಸೂರು ಸ್ಟಾಂಡರ್ಡ್ ಎಂಬ ಪತ್ರಿಕೆ ತಿಳಿಸುವುದ ಇದರ ಪರ್ಯ್ಯವಸಾನವು ಹ್ಯಾಗಾಗುವದೆಂಬ ಮುಂದೆ ತಿಳಿಯಬೇಕು. ಈ ವಿಷಯದಲ್ಲಿ ಅರ್ಜಿದಾರರು ನಿರೀಕ್ಷಿಸುವಷ್ಟು ಫಲವು ಸಧ್ಯಕ್ಕೆ ಲಭಿಸದೆಹೋದಾಗ್ಯೂ, ಇನ್ನುಮುಂದೆ ಅರಮನೆಯಲ್ಲಿ ಏತದ್ವಿಧವಾದ ಕಾರ್ಯ್ಯಗಳ ವಿವಾದೊಡನೆ ಶುಭಗಳು ನಡೆಯಬೇಕಾದ ಕಾಲವು ದೂರದಲ್ಲಿರುವಾಗ ಆಸಮರ್ಥಗಳಾದವರು ಕಾರ್ಯ್ಯನಿರ್ವಹಣೆಗೆ ಅರ್ಹರಾದವರು ಚೂರಿಯಸಿ ನಿಯಮಿಸುವದಕ್ಕೆ ಇದುಪ್ರಚಾರಿಯಾಗಿರುವದರಲ್ಲಿ ಸಂಶಯವಿರಲಾರದು.

Occasional Notes

ನೈಮಿತ್ತಿಕ ವಿಷಯನ್ಯಾಸ.

ಲಕ್ನೋ ಪಟ್ಟಣದಲ್ಲಿ ಶಿಡುಬಿರೆ ಸೇಗ ತಗಲಿರುವ ಜನರ ಸಂಖ್ಯೆಯನ್ನರಿತು ಅಲ್ಲಿನವರು ಕೇವಲ ಭೀತರಾಗಿರುವಂತೆ ತಿಳಿಯಬರುತಿದೆ.

ಬರೋಡೆ ಗಾಯಕವಾಡ ಮಹಾರಾಜರವರು ಈಗ ಮಸೂರಿಯಲ್ಲಿರುತ್ತಾರೆಯಷ್ಟೆ ಅಲ್ಲಿಂದ ಯಾತ್ರಾರ್ಥ ಗಂಗೋತ್ತರಕ್ಕೆ ದಯಮಾಡುತ್ತಾರೆಂದು ತಿಳಿಯಬರುತಿದೆ.

ಈತಿಂಗಳ ೧೧ನೇತಾರೀಖಿನ ರಾತ್ರಿ ಹತ್ತು ಘಂಟೆಗೆ ವಿಜಯನಗರ ಮಹಾರಾಜರವರ ಭಾರ್ಯೆಯವರು ಕರುಳು ಉರಿ ರೋಗದಿಂದ ಕಾಶಿಯಲ್ಲಿ ಕಾಲಗತಿಯನ್ನೈದಿದರೆಂದು ಕೇಳಿ ಬಹಳ ವಿಷಾದಿಸುತ್ತೇವೆ.

ಆಫ್ಘಾನಿಸ್ಥಾನ ದೇಶದ ಅಮೀರರವರಕಡೆ ಮುಂಬೈ ಏಜಂಟರವರು, ಮಹಾರಾಜ್ಞೀಯವರಿಗೆ ಒಪ್ಪಿಸುವದಕ್ಕಾಗಿ ಹದಿಮೂರುಲಕ್ಷ ರೂಪಾಯಿಗಳ ಕ್ರಯ ಬಾಳುವಷ್ಟು ಇನಾಂಗಳೊಡನೆ ಇಂಗ್ಲಾಂಡಿಗೆ ಪ್ರಯಾಣ ಮಾಡಿರುತ್ತಾರೆಂದು ಒಂದಾನೊಂದು ಪತ್ರಿಕೆ ತಿಳಿಸುತಿದೆ.

ಭಾವನಗರ ಪ್ರಾಂತದಲ್ಲಿ ಒಂದು ಕಡೆ ಒಂದು ಕುಟುಂಬದವರು ವಿವಾಹಾರ್ಥ ಮೆರವಣೆಗೆಹೋಗುತಿರುವಲ್ಲಿ ದರೋಡೆ ಕಳ್ಳರು ಅವರಮೇಲೆ ಬಿದ್ದು ಅವರನ್ನೆಲ್ಲ ದೊಣ್ಣೆಗಳಿಂದ ಹೊಡೆದು ಅವರಲ್ಲಿದ್ದ ಸುಮಾರು ೩೦,೦೦೦ ರೂಪಾಯಿಗಳ ಕ್ರಯ ಬಾಳುವಷ್ಟು ಒಡವೆಗಳನ್ನೆಲ್ಲ ದೋಚಿಕೊಂಡು ಪರಾರಿಯಾದರು.

ಇಂಡಿಯಾ ದೇಶದೊಳು ಈಗ ಜಾರಿಯೊಳಿರುವ ಕಾನೂನುಗಳನ್ನೆಲ್ಲ ವಿಮರ್ಶೆ ಮಾಡಿಸುವದಕ್ಕಾಗಿ ಇಂಡ್ಯ ಗವರ್ನಮೆಂಟಿನವರು ಸರ್ ಹರ್ಬಿ ಪ್ರಿನ್ಸೆಪ್ ಎಂಬವರನ್ನು ಚುನಾಯಿಸಿರುವರೆಯೂ, ಸದರೀ ಯವರು ಕ್ಲೈವ್‌ಲ್ಯಾಂಡಿನಲ್ಲಿ ಇಂಡ್ಯ ದೇಶಕ್ಕೆ ವಾಪಸ್ ಬಂದು ಮೇಲಿನ ಕಾರ್ಯ್ಯವನ್ನು ಪ್ರಾರಂಭಿಸುವರೆಂತಲೂ ತಿಳಿಯಲಾದೆವು.

ಹೈದರಾಬಾದ್ ಸ್ಟೇಟ್ ರೈಲ್ವೆಗೆ ಸೇರಿದ ಒಂದು ಸ್ಟೇಷನಿನ ಸರಕುಗಳ ಪಿಲಿವೊ ರೈಟರೊಬ್ಬನು ತನ್ನಲ್ಲಿ ಜವಾಬಾಗಿದ್ದ ಎರಡುನೂರರೂಪಾಯಿಗಳ ಲೆಕ್ಕ ಕೊಡದೆ ಪರಾರೀ ಆಗಿರುವಂತೆಯೂ, ಅವನ ದಸ್ತಗಿರಿಯಬಗ್ಗೆ ರೈಲ್ವೆ ಪೋಲಿ ಸಿನವರು ನಡೆಸಿದ ಪ್ರಯತ್ನಗಳೆಲ್ಲವು ಫಲಕಾರಿಯಾಗದೆ ಹೋಗಿರುತಿವೆಯೆಂತಲೂ ತತ್ತನ ಪರಿಮಾಣ ಬಂದಿರುತಿದೆ.

ಮುಂಬೈಯಲ್ಲಿ ಒಬ್ಬ ಮನುಷ್ಯನು, ತನ್ನ ತಮ್ಮನು ಆಗಿಂದಾಗ್ಗೆ ಮನೆಯ ಬಿಟ್ಟು ಓಡಿಹೋಗುತಲಿರುವದಂ ಕಂಡು ಅವನಿಗೆ ಕಾಲಿಗೆ ಬೇಡಿ ಹಾಕಿ ನಿರ್ಬಂಧದಲ್ಲಿಟ್ಟಿದ್ದನು. ಅಲ್ಲಿನ ಅಧಿಕಾರಿಗಳು ಈಕೃತ್ಯವಂ ಒಂದು ಅಪರಾಧವಾಗಿ ಭಾವಿಸಿ ಸದರೀ ಮನುಷ್ಯನಿಗೆ ಒಂದು ತಿಂಗಳ ಕಠಿಣ ಶಿಕ್ಷೆ ಸಜಾ ವಿಧಿಸಿದರೆಂದು ಮುಂಬೈ ಪತ್ರಿಕೆಯೊಂದು ತಿಳಿಸುತಿದೆ.

ಈ ಪ್ರಪಂಚದಲ್ಲಿ ಅನೇಕರು ತಮಗೆ ಶೀತಬಾಧೆಯುಂಟಾದಾಗ, ಆಲ್ಕೋಹಾಲ್ ಎಂಬ ಮದ್ಯಸಾರವಂ ತಿನವಾಂಬುರಲ್ ಅದು ದೇಹದಲ್ಲಿ ಬಿಸ್ವತ್ತನ್ನುಂಟುಮಾಡುವದೆಂಬ ಭಾವದಿಂದ ಪಾನಮಾಡುತ್ತಾರೆ. ಹಾಗೆ ಮಾಡುವದು ತಪ್ಪಾದಕಾರ್ಯವು, ಅದರಿಂದ ಶೀತವು ಹೆಚ್ಚು ವೃದ್ಧಿಯಾಗುವದೆಂದು ಒಬ್ಬ ವೈದ್ಯಶ್ರೇಷ್ಠನು ಅಭಿಪ್ರಾಯ ಪಡುತ್ತಾನೆ.

ಇಂಡ್ಯ ಗವರ್ನಮೆಂಟಿನವರು ವಾಯುವ್ಯದೇಶ, ಮಧ್ಯ ಇಂಡಿಯಾ, ಮತ್ತು ರಾಜಪುಟಣಾ, ಈ ಪ್ರಾಂತಗಳಲ್ಲಿ ಈಗ ವ್ಯಾಪಿಸಿರುವ ದುರ್ಭಿಕ್ಷವನ್ನು ಕುರಿತು ಸ್ಟೇಟ್ ಸೆಕ್ರೆಟರಿಯವರಿಗೆ ಕಳುಹಿಸುವ ಮಾಸವಾರಿ ರಿಪೋರ್ಟಿನಲ್ಲಿ ೨೨೩,೦೦೦ ಜನರು ಪ್ರಾಮಿನ ರಕ್ಷಕ ಕಾಮಗಾರಿಗಳಲ್ಲಿ ಕೆಲಸ ಮಾಡುವದರ ಮೂಲಕ ಜೀವಿಸುತಲಿರುವಂತೆ ನಮೂದಿ ಮಾಡಿರುತ್ತಾರೆ.

ನೀಲಗಿರಿಗೆ ಹೋಕಲ್ಪಡುತಲಿರುವ ರೈಲುಬೀದಿ ಕಾಮಗಾರಿಯು ಅತಿ ಜಾಗ್ರತೆಯಿಂದ ನಡೆಸಲ್ಪಡುತಿದೆಯಾಗಿ ಈಗ ಇನ್ನು ಬಾಕಿಯಲ್ಲಿರುವ ಕೆಲವು ಚಿಲ್ಲರೆ ಕೆಲಸಗಳೆಲ್ಲವು ಮುಂದಿನ ವರ್ಷದ ಪ್ರಾರಂಭದೊಳಗಾಗಿ ಪೂರೈಸಲ್ಪಟ್ಟು ಗಾಡಿಗಳಂ ಬಿಡುವದಕ್ಕೆ ಸಿದ್ಧವಾಗುವುದು. ಸದರೀ ರೈಲ್ ಮಾರ್ಗಕ್ಕೆ ಇದುವರೆಗೆ ೨೫,೦೦,೦೦೦ ರೂಪಾಯಿಗಳು ಒಟ್ಟು ಖರ್ಚಾಗಿವೆ.

ಬುದ್ಧ ಗಯೆಯಲ್ಲಿರುವ ಬೌದ್ಧ ದೇವಸ್ಥಾನದಲ್ಲಿದ್ದ ಹೊಸದಾಗಿ ಇಡಲ್ಪಟ್ಟ ಒಂದು ವಿಗ್ರಹವನ್ನು ತೆಗೆದು ಬಿಡತಕ್ಕದ್ದೆಂದು ಬುದ್ಧ ಗಯೆಯ ಕಲೆಕ್ಟರವರು ಕೊಟ್ಟ ಹುಕುಮನ್ನು ಜಾರಿಯೊಳು ತಾರದೆ ನಿಲ್ಲಿಸಬೇಕೆಂದು ಬ್ರಾಹ್ಮಿನ್ಸ್, ಲೋಕಲ್ ಗವರ್ನಮೆಂಟ ಮಾರ್ಗವಾಗಿ ಇಂಡ್ಯ ಗವರ್ನಮೆಂಟಿಗೆ ಒಂದು ಅರ್ಜಿಯನ್ನು ತೆಗೆದುಕೊಡುವದಕ್ಕಾಗಿ ರಂಗೂನ್ನಲ್ಲಿರುವ ಬರ್ಮಾದೇಶದ ಬೌದ್ಧ ಜನರು ಪ್ರಸಿದ್ಧರಾದ ಒಬ್ಬ ಲಾಯರನ್ನು ನಿಯಮಿಸಿರುತ್ತಾರೆ.

ಕಲ್ಕತ್ತೆಯೊಳು ಎರಡು ಮೂರು ಚಕ್ರಗಳುಳ್ಳ ಬೈಸಿಕೆಲ್ ಟ್ರೈಸೈಕಲ್ ಎಂಬ ಕಬ್ಬಿಣದ ಗಾಡಿಗಳನ್ನು ಅಲ್ಲಿನವರು ಉಪಯೋಗಿಸುವದಪ್ಪು ಅಧಿಕವಾಗುತ ಬಂದುದಂ ಕಂಡು ಅಲ್ಲಿನ ಮ್ಯುನಿಸಿಪಾಲಿಟಿಯವರು ಅವುಗಳಿಗೆ ತೆರಿಗೆಯನ್ನು ಹಾಕಬೇಕೆಂದು ಯೋಚಿಸುವಲ್ಲಿ, ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರ ಕಮ್ಮಿಷನರುಗಳಿಗೆ ಅಂತ ತೆರಿಗೆಯಂ ಹಾಕುವದಕ್ಕೆ ಅಧಿಕಾರವಿಲ್ಲವೆಂದು ವ್ಯವಸ್ಥೆಯಾಯಿತು. ಮದರಾಸಿನಲ್ಲಿ ಸದರೀ ಗಾಡಿಗಳಮೇಲೆ ಮ್ಯುನಿಸಿಪಾಲಿಟಿಯವರು ತೆರಿಗೆಯಂ ಹಾಕಿರುವಂತೆ ಕಾಣುತಿದೆ.

ರಾವಲ್ ಪಿಂಡಿಯಲ್ಲಿ ಅಗ್ನಿ ಭಯವು ದಿನೇದಿನೆ ವೃದ್ಧಿಯಾಗುತಲಿರುವಂತೆ ಕಾಣುತಿದೆ. ಈಚೆಗೆ ಅಲ್ಲಿನ ಕಮಿಸೆರಿಯಾಟ್ ಇಲಾಖೆಯ ಉಪಯೋಗಾರ್ಥ ದಾಸ್ತಾನ್ ಇಟ್ಟಿದ್ದ ಹುಲ್ಲಿನಮೆದೆಗಳಿಗೆ ಬೆಂಕಿ ಬಿದ್ದು ಸುಟ್ಟುಹೋದವಲ್ಲದೆ, ಬೇರೆಯೊಂದು ಗಡಂಗು ಸಹ ಪೂರಾ ನಾಶವಾ

ಹೊಂದಿತು. ಇದೂ ಅಲ್ಲದೆ ಕೂಡಲೆ ಆಯುಧಶಾಲೆಗಳಲ್ಲಿಟ್ಟಿದ್ದ ಡೇರೆಗಳಿಗೆ ಬೆಂಕಿ ತಗಲಿ ಎಲ್ಲವೂ ಸುಟ್ಟುಹೋದವು. ಈ ತಿಂಗಳಲ್ಲಿ ಸದರೀ ಷಹರಿನೊಳು ಒಂದುಭಾಗವೆ ನಾಶವಾಯಿತೆಂದು ತುತಿ ವೃತ್ತಾಂತದ ಮೂಲಕ ತಿಳಿಯಬರುತಿದೆ

ಈಸಲದ ಬಿ ಎಲ್ ಪರೀಕ್ಷೆಯ ಪ್ರಥಮಭಾಗವು ಈಗ ಪ್ರಾರಂಭವಾಗಿ ನಡೆಯುತಲಿದೆಯಷ್ಟೆ ಸದರೀ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿ ಅನೇಕ ಸ್ಥಳಗಳೊಳು ಲಾಟಿನ್ ಶಬ್ದಗಳನ್ನು ಉಪಯೋಗಿಸಿರುವದರಿಂದ ಉಮೇದವಾರರಿಗೆ ಸದರೀ ಶಬ್ದಗಳ ಅರ್ಥ ತಿಳಿಯದೆ ಕೆಲರು ಬರೆಯದೆ ಪರೀಕ್ಷೆಗೆ ಹೋಗಲಿಲ್ಲವೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ ಇದೂ ಅಲ್ಲದೆ ಸದರೀ ಪರೀಕ್ಷೆಯ ಬಗ್ಗೆ ನಿಷ್ಕರ್ಷೆಯಾಗಿರುವ ಗ್ರಂಥಗಳಲ್ಲಿ ಯಾವ ಭಾಗವನ್ನು ಉಮೇದವಾರರು ಓದಬೇಕಾದುದಿಲ್ಲವೆಂದು ಮುಂಚಿತವಾಗಿ ವ್ಯವಸ್ಥೆಯಾಗಿರುತಿದ್ದರೋ ಅಂತಾ ಭಾಗಗಳಲ್ಲಿ ವಿಶೇಷವಾಗಿ ಪ್ರಶ್ನೆಗಳು ಕೇಳಿರುವದರಿಂದ ತನ್ನಿಮಿತ್ತವಾಗಿಯೂ ಬಹಳ ಅಸಮಾಧಾನವುಂಟಾಗಿರುವಂತೆ ಕೇಳುತೇವೆ ಮದರಾಸ್ ಯೂನಿವರ್ಸಿಟಿ ಪರೀಕ್ಷೆಗಳ ಇಂತಹ ಕ್ರಮಗಳ ಪರಿಹಾರವು ಯಾವ ಕಾಲವು ಆಗುವದೋ ತಿಳಿಯದು

ಕಲ್ಕತ್ತೆಗೆ ಸೇರಿದ ಜಹನಗರವೆಂಬ ಪ್ರದೇಶದಲ್ಲಿರುವ ಒಂದು ದೇವಸ್ಥಾನದ ವಿಗ್ರಹಕ್ಕೆ ಅಲಂಕರಿಸಿದ್ದ ಅನೇಕ ಸಹಸ್ರ ರೂಪಾಯಿ ಬೆಲೆಯುಳ್ಳ ಆಭರಣಗಳು ಕಳವಾದವು ಇವರ ಕರ್ತೃಯು ನಿಷೇಧವಲ್ಲಿ ಅಲ್ಲಿನ ಪೋಲೀಸಿನವರು ನಾನಾವಿಧ ಪ್ರಯತ್ನಗಳಲ್ಲಿದ್ದು ಫಲಕಾರಿಯಾಗದೆ ಹೋದರು ಆದಾಗ್ಯೂ ಈಚೆಗೆ ಕೆಲವು ದಿನಗಳ ಹಿಂದೆ, ಹರಿದಾಸನೆಂಬ ಸಧರ್ಮನೊಬ್ಬಾತನು ಆ ನಗರದ ಪೋಲೀಸ್ ಠಾಣೆಗೆ ತಾನಾಗಿ ಹೋಗಿ, ಮೇಲೆ ತಿಳಿಸಲ್ಪಟ್ಟ ಕಳವನ್ನು ತಾನು ಮಾಡಿದ್ದಾಗಿ ಒಪ್ಪಿಕೊಂಡು ಒಡವೆಗಳನ್ನೆಲ್ಲ ಹಾಜರ್ಮಾಡಿ, ಸದರೀ ದುಷ್ಕೃತ್ಯವನ್ನು ತಾನು ನಡೆಸಿದ್ದು ಮೊದಲು ತನಗೆ ನಿದ್ರೆ ಬರಲಿಲ್ಲವೆಂತಲೂ, ತನಗೆ ಬದ್ಧಿ ಸರಿಯಾಗಿಲ್ಲವೆಂತಲೂ, ಇವನ್ನು ಕಳವು ಮಾಡಿದವುಗಳನ್ನು ಇಟ್ಟುಕೊಂಡಿರುವದಕ್ಕೆ ತನಗೆ ಸಾಧ್ಯವಾಗುವದಿಲ್ಲವೆಂತಲೂ ಹೇಳಿ ಎಲ್ಲವನ್ನು ಕೊಟ್ಟುಬಿಟ್ಟನು ಆದಾಗ್ಯೂ ಮ್ಯಾಜಿಸ್ಟ್ರೇಟರು ಅವನಿಗೆ ನಾಲ್ಕು ತಿಂಗಳ ಕಠಿಣ ಶಿಕ್ಷೆ ಸಜಾ ವಿಧಿಸಿದರು.

LOCAL AND PROVINCIAL NEWS
ಒಳದೇಶವರ್ತಮಾನಗಳು ಸ್ಥಳ ವೃತ್ತಾಂತಗಳು

ಈಸಂಸ್ಥಾನದ ದಿವಾನರವರಿಗೆ ಈಚೆಗೆ ದೇಹದಲ್ಲಿ ಸ್ವಲ್ಪ ಆಲಸ್ಯವುಂಟಾಗಿ ಚಿಕಿತ್ಸಾರ್ಥ ನೀಲಗಿರಿಗೆ ಹೋಗಿರುವಂತೆ ಕೇಳುತ್ತೇವೆ

ಇಲ್ಲಿನ ಚೀಫ್ ಕೋರ್ಟಿನಲ್ಲಿ ಹಿಂದೆ ಜಡ್ಜ್ ಆಗಿದ್ದ ಮೆ॥ ಅಯತಾಚಾರ್ ಎಂಬವರು ಕಳೆದ ಬೃಹಸ್ಪತಿವಾರದ ದಿನ ಕಾಲಗತರಾದರೆಂದು ಕೇಳಿ ಬಹಳ ವಿಷಾದಿಸುತ್ತೇವೆ

ಈಸಂಸ್ಥಾನ ಕೌನ್ಸಲಿನ ಎರಡನೆ ಮೆಂಬರಾದ ಮೆ॥ ಪಿ ಎನ್ ಕೃಷ್ಣಮೂರ್ತಿ ಯವರು ಕಳೆದ ಶನಿವಾರದಿನ ರಾತ್ರಿ ನೀಲಗಿರಿಗೆ ಪ್ರಯಾಣಮಾಡಿದರೆಂದು ತಿಳಿಯಲಾದೆವು

ಈ ತಿಂಗಳ ೨೦ ನೇ ತಾರೀಖ್ ಬುಧವಾರದ ದಿನ ಶ್ರೀಮನ್ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ವರ್ಧಂತಿ ಮಹೋತ್ಸವವಾದ ದರಿಂದ ಅದರ ಗೌರವಾರ್ಥ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ಆದಿನ ರಜಾಕೊಡಲ್ಪಡುವುದು

ಲೆಫ್ಟಿನೆಂಟ್ ಕರ್ನಲ್ ದೇಶರಾಜ ಅರಸಿನವರು ಮೈಸೂರಲ್ಲಿರುವ ಕಾಲದೊಳು ಅವರ ಸಂಚಾರ ಕಾಲದಲ್ಲಿ ಗೌರವಾರ್ಥ ಎರಡು ಸವಾರರು ಅವರನ್ನನುವರ್ತಿಸಿ ಹೋಗತಕ್ಕದ್ದೆಂದು ಶ್ರೀಮನ್ಮಹಾರಾಣೀ ರೀಜಂಟರವರು ಹುಕುಂ ಮಾಡಿರುವಂತೆ ಕೇಳುತ್ತೇವೆ

ಈ ಪುರದಲ್ಲಿ ಪ್ರಸಿದ್ಧ ಲಾಯರಾಗಿದ್ದು ಗತಿಸಿದ ಮೆ॥ ಸಿಡ್ನಿ ಸ್ಮಿತ್ ಸಾಹೇಬರವರು ಅನೇಕ ಸಹಸ್ರ ರೂಪಾಯಿಗಳ ಲಾಗುವದರಿಂದ ಕಟ್ಟಿಸಿ ಕಡೆಗೆ ಮಾರಿಬಿಟ್ಟು, ಡಾಕ್ಟರ್ ಮೆಗ್ರಾಗ್ ಸಾಹೇಬರವರು ವಾಸ ಮಾಡುತಲಿದ್ದ ಬಂಗ್ಲೆಯನ್ನು ಲೆಫ್ಟಿನೆಂಟ್ ಕರ್ನಲ್ ದೇಶರಾಜೆ ಅರಸಿನವರ ವಾಸಕ್ಕೆ ಗೊತ್ತು ಮಾಡಿರುವಂತೆ ಕೇಳುತ್ತೇವೆ

ಈಚೆಗೆ ಒಂದು ವಾರದವರೆಗೂ ವರ್ಷದ ಸೂಚನೆಗಳು ಸುತರಾಂ ಇಲ್ಲವು ಬಿಸಿಲು ಜೋರಾಗಿ ಕಾಯುತಲಿದೆ ರಾತ್ರಿ ಕಾಲದಲ್ಲಿ ಸೆಕೆ ಜಾಸ್ತಿಯಾಗಿದೆ ಆಹಾರ ಪದಾರ್ಥಗಳ ಧಾರಣೆಗಳು ಒಂದೆ ವಿಧವಾಗಿವೆ ಜಲ ಸಮೃದ್ಧಿಯು ಸಾಲದು. ಆದಾಗ್ಯೂ ಇನ್ನು ಒಂದು ತಿಂಗಳ ಕಾಲದವರೆಗೆ ನೀರು ಸಿಕ್ಕಬಹುದು ಅದರೊಳಗೆ ಒಳ್ಳೆಯ ವರ್ಷ ಬಿದ್ದು ಜಲಸಮೃದ್ಧಿ ಯಾಗಬೇಕು.

ಈ ಪುರದ ಕೋಟೆಯ ಪಶ್ಚಿಮದ ಕಡೆ ಹೊಸದಾಗಿ ಕಟ್ಟಲ್ಪಟ್ಟಿರುವ ಚಾಮರಾಜಪೇಟೆಯ ನಿವಾಸಿಗಳ ಗಂಡು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಅಲ್ಲಿ ಒಂದು ಪಾಠಶಾಲೆಯು ಬೇಕಾದ ಆವಶ್ಯಕವಾಗಿರುವದರಿಂದ ಒಂದನ್ನು ಸ್ಥಾಪಿಸಬೇಕೆಂದು ಗವರ್ನಮೆಂಟಿಗೆ ಮುನಿಸಿಪಾಲಿಟಿಗೆ ಸದರೀ ಪೇಟೆಯ ನಿವಾಸಿಗಳು ಅರ್ಜಿ ಬರೆದುಕೊಳ್ಳಬೇಕೆಂದು ಆಲೋಚಿಸುತಲಿರುವುದಾಗಿ ಕೇಳುತ್ತೇವೆ

ಲೀಗಲ್ ಪ್ರಾಕ್ಟಿಷನರ್ಸ್ ಆಕ್ಟೆಂಬ ಲಾಯರುಗಳ ನಡವಳಿಕೆಯ ಕ್ರಮವನ್ನು ವಿಧಿಸುವ ಕಾನೂನು ಅನುಸರಿಸಿ ಅವರವರ ಮೇಲೆ ಆರೋಪಿಸುವ ದೋಷಗಳು ಇದುವರೆಗೆ ಇಲ್ಲಿನ ಚೀಫ್ ಕೋರ್ಟಿನಲ್ಲಿ ಮೂವರು ಜಡ್ಜಿಗಳು ಸೇರಿ ವಿಚಾರಣೆ ಮಾಡುವುದು ವಾಡಿಕೆಯಾಗಿದ್ದರೂ ಒಬ್ಬರು ಅಥವಾ ಇಬ್ಬರು ಜಡ್ಜಿಗಳು ಸೇರಿ ವ್ಯವಸ್ಥೆ ಮಾಡಬಹುದೆಂದು ಚೀಫ್ ಕೋರ್ಟಿನವರು ಗವರ್ನಮೆಂಟಿಗೆ ಸೂಚಿಸಿರುವಂತೆಯೂ, ಈಸಲಹೆಯು ಕೇವಲ ಆಕ್ಷೇಪಣೀಯವಾದುದೆಂತಲೂ ಮೈಸೂರು ಹೆರಾಲ್ಡ್ ಪತ್ರಿಕೆಯ ಅಭಿಪ್ರಾಯವಾಗಿದೆ

ಕಳೆದ ಶುಕ್ರವಾರದ ದಿನ ಬೆಳಗ್ಗೆ ಮೈಸೂರ್ ಅರಮನೆಯ ಕನ್ನಡಿ ತೊಟ್ಟಿಯಲ್ಲಿ ಮ॥ ದೇಶರಾಜೇ ಅರಸಿನವರಿಗೆ ನಿಷೇಕಪ್ರಸ್ತುತವೂ, ಅನಂತರ ಅಂಬಾ ವಿಲಾಸದಲ್ಲಿ ಸಹಸ್ರಾಯುತ ಗಾದ ನರಸರಾಜ ಒಡೆಯರವರಿಗೆ ೭ನೇ ವರ್ಷ ವರ್ಧಂತಿ ಪ್ರಯುಕ್ತ ವಾದ ಅಕ್ಷತೆಯೂ ನಡೆದವು ಆಕಾಲದಲ್ಲಿ ರಾಜಯೋಗ್ಯವಾದ ಸಕಲ ಮರ್ಯಾದೆಗಳೂ ನಡೆದವು ಆ ದಿನ ಸಾಯಂಕಾಲ ೫½ ಘಂಟೆಗೆ ಯುವರಾಜರಾದ ನರಸರಾಜ ಒಡೆಯರವರು ಸಕಲ ಕಾವಲುಯುಕ್ತರಾಗಿ ಬಂಗಾರದ ಪಲ್ಲಕ್ಕಿಯಲ್ಲಿ ಕುಳಿತುಕೊಂಡು, ಎಲ್ಲ ಮರ್ಯಾದೆಗಳೊಡನೆ ಗಂಡಿ, ಕೋಟೆಯ ನಾಲ್ಕು ಬೀದಿಗಳಲ್ಲಿ ಮೆರವಣಿಗೆ ದಯಮಾಡಿ ತ್ರಿನಯನೇಶ್ವರ, ಪರಾಪರಸ್ವಾಮಿ, ಕೃಷ್ಣಸ್ವಾಮಿ, ಲಕ್ಷ್ಮೀರಮಣಸ್ವಾಮಿ ದೇವಸ್ಥಾನಗಳಿಗೆ ಹೋಗಿ, ಬೇಸರುಗಳಿಗ ಮಂಗಳಾರತಿ ಮಾಡಿಸಿ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ, ರಾತ್ರಿ ೭½ ಘಂಟೆ ಹೊತ್ತಿಗೆ ಅರಮನೆಯ ಮುಂದಕ್ಕೆ ಬಂದು, ಅಲ್ಲಿ ನಾನಾವಿಧ ಚಿತ್ರವಿಚಿತ್ರ ಬಾಣ ಬಿರುಸುಗಳು ಹತ್ತಿಸಿದ್ದನ್ನು ನೋಡಿಕೊಂಡು, ಅರಮನೆಯೊಳಕ್ಕೆ ದಯಮಾಡಿ ಮಹಾರಾಜರವರ ಎಡಪಾರ್ಶ್ವದಲ್ಲಿ ಕುಳಿತುಕೊಂಡರು. ಅಲ್ಲಿ ಆರ್ತಿಅಕ್ಷತೆಯನ್ನು ಮಾಡಿದರು

ಲಗ್ನಪತ್ರಿಕೆಗಳನ್ನು ಕಳುಹಿಸಿ ಕರೆಯಿಸಿಕೊಂಡಿದ್ದ ದೊಡ್ಡಮನುಷ್ಯರು ಮುಂತಾದವರಲ್ಲಿ ಕೆಲವರಿಗೆ ಆರ್ತಿಅಕ್ಷತೆ ಕಾಲದಲ್ಲಿ ಶಾಲುಜೋಡಿ, ಕಲಾಪತ್ತಿನ ಪಂಚೆ ದುಪ್ಪಟ್ಟ, ಪೇಟಾ ಖಿಲ್ಲತ್ತುಗಳನ್ನು ಕೊಡಿಸಿದರು ದಿವಾನರಿಗೂ ಕೌನ್ಸಿಲ್ ಮೆಂಬರುಗಳಿಗೂ, ಮೆ॥ ಸೀತಾರಾಮರಾಯರಿಗೂ, ಮೆ॥ ಲಿಂಗರಾಜೆ ಅರಸಿನವರಿಗೂ ವಜ್ರದ ಉಂಗುರಗಳನ್ನೂ ಶಾಲುಜೋಡಿಗಳನ್ನೂ ಕೊಡಿಸಿದರು. ಸೋಮವಾರ ಮಂಗಳವಾರಗಳಲ್ಲಿ ಶ್ರೀಮನ್ಮಹಾರಾಜರವರು ಮೆ॥ ದಳವಾಯಿ ದೇವರಾಜೆ ಅರಸಿನವರ ಮನೆಗೆ ದಯಮಾಡಿ ಅವರ ಆತಿಥ್ಯವನ್ನು ಸ್ವೀಕರಿಸಿದರು—ವೃ ಬೋ

THE MYSORE GAZETTE
ಮೈಸೂರು ಗೆಜೆಟ್

ಗುರುವಾರ, ತಾ॥ ೧೪ ನೇ ಮೇ ೧೮೯೬
ಮೈಸೂರ್ ಗವರ್ನಮೆಂಟಿನವರಿಂದ ಹೊರಡಿಸಿದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ಮೊಕಾಂ ಮೈಸೂರ್, ತಾ॥ ೯ನೇ ಮೇ ೧೮೯೬

ನಂ॥ ೧೬೩೯೪—ಮಿಸಲೇನಿಯಸ್ ಎನ್ನೆ ೯—೯೬— ಸಬ್ ಅಸಿಸ್ಟೆಂಟ್ ಸರ್ಜನ್ ಮೆ॥ ವಿ ಅಬ್ದುಲ್ ನಾಯಡು, ಎಲ್ ಎಂ ಮತ್ತು ಎಸ್ ಯವರು ಬೆಂಗಳೂರಲ್ಲಿರುವ ದೇವೀಗುಂಡಿ ಆಸ್ಪತ್ರೆಯಿಂದ ಸಕಲೇಶಪುರದ ಲೋಕಲ್ ಫಂಡ್ ಡಿಸ್ಪೆನ್ಸರಿಗೆ ವರ್ಗಮಾಡಲ್ಪಟ್ಟಿರುತ್ತಾರೆ

೨ ಸಬ್ ಅಸಿಸ್ಟೆಂಟ್ ಸರ್ಜನ್ ಮೆ॥ ಟಿ ವಿ ಕುಪ್ಪುಸ್ವಾಮಿ ಮುದಲಿಯಾರ್ರವರು ಸಕಲೇಶಪುರದ ಲೋಕಲ್ ಫಂಡ್ ಡಿಸ್ಪೆನ್ಸರಿಯಿಂದ ಬೆಂಗಳೂರಲ್ಲಿರುವ ದೇವೀಗುಂಡಿ ಆಸ್ಪತ್ರೆಯಲ್ಲಿ ಕೆಲಸ ಮಾಡುವಂತೆ ವರ್ಗ ಮಾಡಲ್ಪಟ್ಟಿರುತ್ತಾರೆ

ಮೊಕಾಂ ಮೈಸೂರು, ತಾ॥ ೧೧ನೇ ಮೇ ೧೮೯೬

ನಂ॥ ೬೭೨೬—ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ ೧೪೪ನೇ ಸೆಕ್ಷನ್ ಅನುಸರಿಸಿ ಪ್ರಜೆಗಳ ನೆಮ್ಮದಿಯ ಕಾಪಾಡುವದಕ್ಕಾಗಿಯೂ, ಚಿಕ್ಕಬಳ್ಳಾಪುರ ಷಹರ್ ನಿವಾಸಿಗಳಾದ ಮತಭೇದ ಜನರಲ್ಲಿ ಪರಸ್ಪರ ದ್ವೇಷವುಳ್ಳ ಎರಡು ಕಕ್ಷಿಗಳು ಏರ್ಪಟ್ಟಿರುವದರಿಂದ ಅವರಲ್ಲಿ ಜಗಳಕ್ಕೆ ಅವಕಾಶವನ್ನು ತಪ್ಪಿಸತಕ್ಕ ಬಗ್ಗೆ ಸದರೀ ತಾಲ್ಲೂಕ ಅಮಲ್ದಾರ್ ನ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರು, (ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ ೧೪೪ನೇ ಸೆಕ್ಷನ್ ನಿಯಮವನ್ನನುಸರಿಸಿ) ಸದರೀ ಷಹರ್ ನಿವಾಸಿಗಳಾದ ಮಹಮ್ಮದೀಯ ಒಬ್ಬರು ನಿರ್ವಾಹ ಮಾಡತಕ್ಕ ಬಗ್ಗೆ ಅಲ್ಲಿರುವ ಜುಮ್ಮಾ ಮಸೀದಿ ಮತ್ತು ಕಾಂಪೌಂಡಿನಲ್ಲಿ ಪ್ರವೇಶ ಮಾಡಕೂಡದೆಂದು ೧೮೯೬ನೇ ಇಸವಿ ಮಾರ್ಚ್ ೧೧ನೇ ತಾರೀಖಿನಲ್ಲಿ ಹುಕುಂ ಕೊಟ್ಟಿರುವದರಿಂದಲೂ, ಸದರಿ ಎರಡು ಕಕ್ಷಿಯವರಿಗುಂಟಾಗಿರುವ ದ್ವೇಷವು ಇಂತವರೆಗೆ ಇರುತ್ತ ಅಮಲ್ದಾರ್ ಮ್ಯಾಜಿಸ್ಟ್ರೇಟರ ಹುಕುಂ ೧೮೯೬ನೇ ಇಸವಿ ಮೇ ೧೧ನೇ ತಾರೀಖ್ ಮೊದಲು ವಜ ಅದರ ತರುವಾಯ ಅಮಲ್ ತಪ್ಪಿ ಹೋಗುವದಾದುದರಿಂದ ಅದು ಜಾರಿಯೊಳಿಲ್ಲದೆ ಪುನಃ ಏರೆ ಕಲಹ ಪ್ರಾರಂಭವಾಗಬಹುದೆಂದು ತಿಳಿಸಲ್ಪಟ್ಟಿರುವದರಿಂದಲೂ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ ೧೪೪ನೇ ಸೆಕ್ಷನಿನ ಕಡೇ ವ್ಯಾಖ್ಯಾನಸಹಿತ, ಅಮಲ್ದಾರ್ ಮ್ಯಾಜಿಸ್ಟ್ರೇಟರು ಕೊಟ್ಟಿರುವ ಹುಕುಂ ಸದರೀ ತಾರೀಖ್ ಮೊದಲುಗೊಂಡು ಇನ್ನು ಆರು ತಿಂಗಳ ಕಾಲ ಜಾರಿಯಲ್ಲಿರತಕ್ಕದ್ದೆಂದು ಗವರ್ನಮೆಂಟಿನವರು ಇದರಿಂದ ಹುಕುಂ ಮಾಡುತ್ತಾರೆ

ಮೊಕಾಂ ಮೈಸೂರು ತಾ॥ ೧೩ನೇ ಮೇ ೧೮೯೬

ನಂ॥ ೧೬೫೮೫—ಡಿ ಇ ೪೯೬—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೯೫ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಮೆ॥ ಕೆ ರಂಗಪ್ಪನವರಿಗೆ, ೧೮೯೬ನೇ ಇಸವಿ ಏಪ್ರಿಲ್ ೨೨ನೇ ತಾರೀಖ್ ಮೊದಲು ಅಥವಾ ಅವರದನ್ನು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ

ಚಿತ್ರದುರ್ಗ ಹೈಸ್ಕೂಲ್ ಫಸ್ಟ್ ಅಸಿಸ್ಟೆಂಟ್ ಮಾಸ್ಟರ್ ಮೆ॥ ವೀರಭದ್ರಯ್ಯ, ಬಿ ಎ ಯವರು ತಮ್ಮ ಸ್ವಂತ ಕೆಲಸಗಳೊಂದಿಗೆ ಮೆ॥ ಕೆ ರಂಗಪ್ಪನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರಾಗಿ ಬದಲೀ ನಡೆಸುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ

SUMMARY OF NEWS
ವೃತ್ತಾಂತ ಸಂಗ್ರಹ

ವಿಕ್ಟೋರಿಯಾದಲ್ಲಿ ಕಾಣಿಕೆಗೆ ತಲೆ ೨೦ ಗಿರುವ ಒಂದು ವಿಧವಾದ ಕನ್ನಡಿಯಿಂದ ಮನುಷ್ಯನ ಶರೀರದೊಳಗಿನ ಅಸ್ಥಿಪಂಜರಗಳು ಸಹ ಕಾಣುವವಂತೆ

ವೈಯನಾ ಪಟ್ಟಣದಲ್ಲಿ ಒಂದು ಟ್ರೇಯಿನಿನಲ್ಲಿ ಬ್ಯಾಂಕಿನ ನೋಟುಗಳನ್ನು ಎಣಿಸುತಲಿರುವಾಗ ಇದ್ದಕ್ಕಿದ್ದ ಹಾಗೆ ಪ್ರಾಣ ಬಿಟ್ಟನಂತೆ ಡಾಕ್ಟರು ಪರೀಕ್ಷೆಯಲ್ಲಿ ಅವನು ನೋಟುಗಳು ಜಾರುವಾಗ್ಗೆ ಆಗಾಗ್ಯೆ ಕೈಯನ್ನು ಬಾಯಲ್ಲಿ ಇಟ್ಟುಕೊಳ್ಳುತಲಿದ್ದದರಿಂದ ವಿಷವು ವ್ಯಾಪಿಸಿ ಸತ್ತನೆಂದು ಗೊತ್ತಾಯಿತು

ಎರಡು ಚಕ್ರಗಳ (ಬೈಸೈಕಲ್) ಎಂಬ ಯಂತ್ರ ಯಾನಗಳು ಈಗ ಎಲ್ಲೆಲ್ಲಿಯೂ ಇರುವವಷ್ಟೆ, ಸಮುದ್ರದಲ್ಲಿ ನೀರಿನಮೇಲೆ ನಡೆಸುವ ಈ ತರದ ಯಂತ್ರಗಳನ್ನು ಅಮೆರಿಕಾ ದೇಶದಲ್ಲೊಬ್ಬನು ನಿರ್ಮಿಸಿ ಉಪಯೋಗಿಸುತಲಿರುವನೆಂದು ಒಂದು ವರ್ತಮಾನ ಪತ್ರಿಕೆಯು ತಿಳಿಸುತಿದೆ ಅಮೆರಿಕಾದವರು ವಿಶ್ವಕರ್ಮ ವಂಶಜರಾಗಿರಬಹುದು

ಬಿಕಾನೀರ್ ಸಂಸ್ಥಾನಕ್ಕೆ ಸೇರಿದ ಷಹರ್ ಎಂಬ ಊರಿನಲ್ಲಿ ಮೂರುಮಂದಿ ಹೆಂಗಸರು ತಮ್ಮ ಗಂಡಂದಿರ ಅಪ್ಪಣೆಯನ್ನು ಪಡೆದು ಕಳೆದ ವೈಶಾಖಶುದ್ಧ ಚವಿಗೆಯುವವನ ಸನ್ಯಾಸಿಗಳಾದರು ಇವರು ಕೆರೆಯಲ್ಲಿ ಸ್ನಾನ ಮಾಡಿ ತಲೆಯ ಕೂದಲನ್ನೆಲ್ಲ ಸಂಪೂರ್ಣವಾಗಿ ಕ್ಷೌರ ಮಾಡಿಸಿಕೊಂಡು ಕಾವಿಗಳನ್ನು ಬಿಳಿ ಕಾವಿ ಕಾಷಾಯ ವಸ್ತ್ರಗಳನ್ನು ಧರಿಸಿ ಬಟ್ಟೆ ಗುರುವಿನಿಂದ ಉಪದೇಶ ಹೊಂದಿದರು

ಒಂದು ದೇಶದಲ್ಲಿ (ಮುಖ್ಯವಾಗಿ ಶೆಗೊ ಪಟ್ಟಣದಲ್ಲಿ) ಅದೇ ಕಷ್ಟಗಳಲ್ಲಿ, ಮಹಮ್ಮದೀಯರುಗಳಲ್ಲಿ, ಮದುವೆಯನ್ನು ಮಾಡಿಕೊಂಡರೆ ಮೊದಲು ಅಲ್ಲಿನ ಕೆಲವು ತುಂಟ ಹುಡುಗರಿಗೆ ಬಹುಮಾನವನ್ನು ಮಾಡಿ ಅವರ ಅಪ್ಪಣೆಯನ್ನು ಪಡೆಯಬೇಕೆಂತಲೂ ಈಚೆಗೆ ಮಹಮ್ಮದೀಯರಲ್ಲಿ ಒಬ್ಬನು ಹಾಗೆ ಮಾಡದ್ದರಿಂದ ರಾತ್ರಿಯೆಲ್ಲ ಮನೆಯ ಮುಂದೆ ಕಲ್ಲಿನ ಮಳೆಯನ್ನು ಗರೆಸಿ ಹುಡುಗರು ಅವನ ಮದುವೆಯನ್ನು ನಡೆಯದ ಹಾಗೆ ಮಾಡಿದರೆಂತಲೂ ತಿಳಿಯಬರುತಿದೆ

ಫ್ರಾನ್ಸಿನಲ್ಲಿ ಕೊಬ್ಬರ್ಲಿನ್ ಎಂಬ ಬ್ಯಾಂಕಿಗೆ ಹತ್ತು ಸಾವಿರ ರೂಪಾಯಿಗಳಿದ್ದ ಹಣದ ಪೆಟ್ಟಿಗೆಗಳನ್ನು ಸಾಗಿಸುವವರು ಕೆಲವು ದಿನಗಳ ಕೆಳಗೆ ಕಾಣಿಸದೆಹೋದರೆಂತಲೂ ಅದರ ಉಸ್ತುವಾರಿಗಾಗಿ ನೇಮಿಸಿ ಕಳುಹಿಸಲ್ಪಟ್ಟಿದ್ದ ಪೋಲೀಸ್ ಇನ್ಸ್ಪೆಕ್ಟರ್ ಮೆಸ್ನಾರ್ ಎಂಬವನು ಆ ಪೆಟ್ಟಿಗೆ ಒಂದು ಪೆಟ್ಟಿಗೆಯನ್ನು ಒಡೆದು ೧೨,೦೦೦ ರೂಪಾಯಿಗಳನ್ನು ತೆಗೆದು ಇಂತು ಅದಕ್ಕೆ ಬದಲಾಗಿ ಪೆಟ್ಟಿಗೆಯೊಳಕ್ಕೆ ಹಣದ ಕಲ್ಲುಗಳನ್ನು ಭರ್ತಿಮಾಡಿದನೆಂತಲೂ ಕೊನೆಗೆ ಇವನು ಸಿಕ್ಕಿಬಿದ್ದು ಅವನೂ ಅವನ ಹೆಂಡತಿಯೂ ಸಿಕ್ಕಿ ವಿಚಾರಣೆ ನಡೆದು ಇವರಿಗೆ ಶಿಕ್ಷೆಗೆ ಒಪ್ಪಿಸ ಮಾಡಲ್ಪಟ್ಟಿದ್ದರೆಂತಲೂ ಹಿಂದೆಯೇ ನಮ್ಮ ವಾಚಕರಿಗೆ ತಿಳಿಸಿದ್ದೇವಷ್ಟೆ ಈ ಮೊಕದ್ದಮೆಯು ಕಳೆದ ಮಂಗಳವಾರ ಸೆಷನ್ಸ್ ನಲ್ಲಿ ವಿಚಾರಣೆ ಆಯಿತು ಕೇಸಿನೊಳಗೆ ಮೆಸ್ನಾರ್ ಎಂಬ ಅವನಿಗೆ ೪ ವರುಷ ಕಠಿಣ ಶಿಕ್ಷೆಯೂ ೧,೦೦೦ ರೂಪಾಯಿ ಜುಲ್ಮಾನೆ ಕೊಡದಿದ್ದರೆ ಇನ್ನೊಂದು ವರುಷ ಕಠಿಣ ಶಿಕ್ಷೆಯೂ ಅನುಭವಿಸಬೇಕೆಂತಲೂ ಅವನ ಹೆಂಡತಿಗೆ ೬ ತಿಂಗಳು ಸಾದಾ ಶಿಕ್ಷೆಯೂ ವಿಧಿಸಲ್ಪಟ್ಟಿತು ಶಿಕ್ಷೆ ವಿಧಿಸಲ್ಪಟ್ಟ ದಿವಸ ಕೋರ್ಟಿನಲ್ಲಿ ಅವನ ಹೆಂಡತಿಯು ಗಟ್ಟಿಯಾಗಿ ಅತ್ತುಕೊಂಡು ಬಹಳ ದುಃಖ ಮಾಡಿದಳೆಂದು ತಿಳಿದುಬಂದಿದೆ

Extracts

ಬರೋಡೆ ಸಂಸ್ಥಾನದಲ್ಲಿ ಹಿಂದೆ ನಡೆಯುತಿದ್ದ ಪದ್ಧತಿಯಂತೆ ಆದರಲ್ಲಿ ಈಚೆಗೆ ಒಂದು ಕಲಹವು ಉಂಟಾಗಿದೆ. ಯಾವ ಸರ್ಕಾರದ (ಬರೋಡೆ) ನೌಕರನೇ ಆಗಲಿ ತನ್ನ ಕೆಲಸದಲ್ಲಿ ಏನು ಗುನ್ಹೆ ಮಾಡಿದರೆ ಅವನಿಗೆ ಸರ್ಕಾರದವರ ತೀರ್ಪಿನ ವಿನಾ ಬೇರೆ ಶಿಕ್ಷೆಯಿಲ್ಲ ಆ ನೌಕರನಮೇಲೆ ಜಪ್ತಿ ಮಾಡಬೇಕು, ಆ ತಪ್ಪಿಗಾಗಿ ಅವನಿಗೆ ಮೂರು ತಿಂಗಳು ಕಠಿಣ ಶಿಕ್ಷೆಯು ಅಥವಾ ಅದಕ್ಕೆ ಬದಲಾಗಿ ಛಡಿಯೇಟುಗಳನ್ನು ಹೊಡೆಯುವ ಶಿಕ್ಷೆಯು ಈಕಲಹವನ್ನು ಇನ್ನು ಶ್ರೀಮಂತ ಗಾಯಕವಾಡ ಸರ್ಕಾರದವರು ಪಸಂದುಮಾಡುವವರಲ್ಲ, ಇದನ್ನು ಪಸಂದು ಮಾಡಿ ಸರ್ಕಾರದವರು ವ್ಯಾಸ ಮಾಡಲಾರರೆಂದು ಆ ಸಂಸ್ಥಾನದವರ ಅಭಿಪ್ರಾಯವಿರುತಿದೆ ಆದಾಗ್ಯೂ ಈ ಕಲಹವು ವಿಶೇಷವಾಗಿ ಆ ಸರ್ಕಾರೀ ನೌಕರರು ಬಹಳ ಅಸಂತೋಷ ಪಡುವರು ಈ ತರದ ಶಿಕ್ಷೆಯು ಒಂದು ಕಠೋರವಾದದ್ದು, ಇಂತಹ ಶಿಕ್ಷೆಯನ್ನು ಕೊಡಬೇಕಾದರೆ ಯಾವ ತರಹದ ಮನುಷ್ಯರಿಗೆ ಕೊಡತಕ್ಕದ್ದೆಂಬುವದನ್ನು ಕಾಯಿದೆ ಮಾಡುವವರು ಸ್ವಲ್ಪ ಮನಸ್ಸಿನಲ್ಲಿ ವಿಚಾರ ಮಾಡತಕ್ಕದ್ದು, ಈ ಶಿಕ್ಷೆಯು ಕೇವಲ ಅಭಿಮಾನರಹಿತರಾದ ನೀಚ ಮನುಷ್ಯರಿಗೆ ತಕ್ಕುದಾಗಿದೆ ಸರಕಾರಿ ನೌಕರಿ ಮಾಡುವವರಲ್ಲಿ ಇಂತಹ ನೀಚತರಗತಿಯವರು ಬಹಳವಾಗಿರುವದಿಲ್ಲ ಇರುವವರೇ ಇರುತ್ತಾರೆ ಅಂತವರು ಸರ್ಕಾರದವರ ಹುಕುಮಿಗೆ ಅವಮಾನ್ಯ ಮಾಡುವರು ಎಂದಿಗೂ ಆಗುವದಿಲ್ಲ, ಆದುದರಿಂದ ಅಪೇಕ್ಷಿತವಾದ ತಿಳುವಳಿಕೆ ತಪ್ಪಾಗಿ ಆಗುವವು ಬುದ್ಧಿಪೂರ್ವಕವಾಗಿ ಆಗಲಾರವು ಇಂತ ವಿಷಯದಲ್ಲಿ ಇಂತ ಕಠೋರತರವಾದ ಶಿಕ್ಷೆಯನ್ನು ನಿಯಮಿಸಿದರೆ ಬಾಳೆ ಹಣ್ಣನ್ನು ಸುಲಿಯುವದಕ್ಕೆ ಕೊಡ್ಲಿ ತೆಗೆದುಕೊಂಡಂತೆ ಆಗುತಿದೆ ಇರಲಿ ಈ ಪ್ರಕಾರ ಮಾಡುವದಕ್ಕೆ ಸೂಚನೆ ಮಾಡಿದವರಿಗೆ ಒಳ್ಳೇ ಬುದ್ಧಿಪ್ರದವೆಂದು ಅನ್ನುವದಕ್ಕೆ ಏನೂ ಅಡ್ಡಿ ಇಲ್ಲ, ಇಂತವರು ಹಿಂದಿನ ಮೊಗಲಾಯಿ ರಾಜ್ಯದ ವೇಳೆಗೆ ಜನ್ಮಧಾರಣ ಮಾಡಿದ್ದರೆ ಬಹು ದೊಡ್ಡ ಕೀರ್ತಿಯನ್ನು ಸಂಪಾದನೆ ಮಾಡುತಲಿದ್ದರು

ಈ ದುರ್ಮುಖಿ ಸಂವತ್ಸರದ ಸಾಲಿನವಳುಂಟು ಹಿಂದೂಸ್ಥಾನಕ್ಕೆ ಇಲ್ಲವೆಂದು ಕಂಡು ಬರುತಿದೆ ಈ ವರ್ಷ ಪ್ರಾರಂಭವಾದದು ಮೊದಲು ವೆಂಕಟೇಶ ಅಗ್ನಿ ಭಯವು ಜನರು ನಿರಾಶ್ರಿತರಾಗಿದ್ದಾರೆ ಅಗ್ನಿನಾರಾಯಣನು ತನ್ನ ನಾಲಿಗೆಯನ್ನು ಚಾಚಿದ ವರ್ತಮಾನವಿಲ್ಲದ ವಾರವಿಲ್ಲ ಸುರತ ಷಹರಿನವರು ಮೇಲಿಂದಮೇಲೆ ಒದಗುವ ಈ ಭಯಂಕರ ಪ್ರಸಂಗದಿಂದ ಉಳಿಕೊಳ್ಳುವ ಹಂಚಿಕೆಯನ್ನು ಯಾಕೆ ಮಾಡುವದಿಲ್ಲವೋ ತಿಳಿಯದು ಕಳೆದ ತಿಂಗಳ ೨೭ನೇ ತಾರೀಖಿನ ದಿವಸ ಬೆಂಕಿ ಹತ್ತಿ ೧೫೦ ಮನೆಗಳು ಸುಟ್ಟವು ಮತ್ತು ಈ ಜಿಲ್ಲೆಯ ಬಂದರೊಳಿ ಇತ್ತೀಚಿನ ಒಂದು ಹಳ್ಳಿಗೆ ಬೆಂಕಿ ಹತ್ತಿ ೩೦೦ ಮನೆಗಳು ಸುಟ್ಟು ೨ಲಕ್ಷ ರೂಪಾಯಿಗಳು ಲುಕ್ಸಾನವಾಯಿತು ಇದು ಸುರತಿನ ಅವಸ್ಥೆಯು, ಅದೇ ಬುಧವಾರ ಗುರುವಾರ ಭೀಮನಗರದಲ್ಲಿ ಬೆಂಕಿ ಹತ್ತಿ ೪೦ ಮನೆಗಳು, ಕೆಲವು ರಿ ಎತ್ತುಗಳು ಕೋರಿಯ ೩ ಸುಟ್ಟು ಹೋಗಿರುವವು ಲುಕ್ಸಾನ್ ೩ ಲಕ್ಷ ದಷ್ಟಾಗಿರುವದು ಮತ್ತು ಆದಿನದ ಕೊಲ್ಹಾಪುರದ ಪೇಟೆ ಚೌಕ್ ಕ್ವಾರ್ಟರ್‌ನಲ್ಲಿ ಬೆಂಕಿ ಬಿದ್ದು ೪೦೦ ಗುಡಿಸಲುಗಳು ಸುಟ್ಟುಹೋದವಲ್ಲದೆ ಒಬ್ಬ ಕುರಿ ನು ಅಗ್ನಿಗೆ

ಉಂಟಾಗಿದ್ದನು. ತಾಣೀದಲ್ಲಿ ವಿಶಾಲ ಸಂಡಿಗಳಿಗೆ ಬೆಂಕಿ ಹತ್ತಿ ಆ ದೇವಾಲಯದಲ್ಲಿ ಇಟ್ಟಿದ್ದ ಗಾಂಜಿ ವಗೈರೆ ಕೂಡಿ ೨೫,೦೦೦ ರೂ॥ ವರೆಗೆ ಲುಕ್ಸಾನವಾಯಿತು. ಕಲ್ಕತ್ತೆಯಲ್ಲಿ ಕಳೆದ ರವಿವಾರ ಒಂದು ಗಿರಣಿಗೆ ಬೆಂಕಿ ಹತ್ತಿ ೨೦ ಅಂಗಡಿಗಳು ಸುಟ್ಟುಹೋದವು. ಏರ್ಣಾಕೊಲಂನಲ್ಲಿ ಬೆಂಕಿ ಹತ್ತಿ ೭ ಜನ ಹೆಂಗಸರೂ ೩ ಮಂದಿ ಮಕ್ಕಳೂ ಮೃತಪಟ್ಟರು. ಖಾಂಡವಾದಲ್ಲಿ ಮಾರ್ಕೆಟ್ಟಿಗೆ ಬೆಂಕಿ ಹತ್ತಿ ಗಾಳಿಗೆ ಸಾಲೇ ಸುಟ್ಟು ೩೦,೦೦೦ ರೂಪಾಯಿ ಲುಕ್ಸಾನವಾಯಿತು. ಇನ್ನು ಯಿದೂ ಬೆಂಕಿ ಅಗ್ನಿ ನಾರಾಯಣನು ಪ್ರಬಲವಾಗಿದ್ದು ಇದ್ದದ್ದೆಲ್ಲ ಚೈತ್ರ ವೈಶಾಖ ಎರಡು ಮಾಸಗಳಲ್ಲೇ ನಡೆದಿರುತ್ತವೆ. ಇದು ಇಷ್ಟಕ್ಕೆ ಶಾಂತವಾದರೆ ಸಾಕು ಇಲ್ಲದಿದ್ದರೆ ದುರ್ಮುಖಿ ಸಂವತ್ಸರವು ಜನರಿಗೆ ಬಹಳ ಕೇಡಾಗುವದು. ಹು ಪ

ಚಿಮಣಿ ಎಣ್ಣೆಯ ಉಪಯೋಗವು ಈಗ ಮೂರು ಮನೆಗಳರುವ ಹಳ್ಳಿಯಲ್ಲಿ ಸಹ ಆಗುತಲಿರುವದು ಎಲ್ಲರಿಗೂ ಗೊತ್ತುಂಟು. ಇದರಿಂದ ಆಗಾಗ್ಯೆ ಎಷ್ಟೋ ಅನರ್ಥಗಳು ಆಗುತಲಿರುವದು ಕಣ್ಣಾರ ಕಂಡೂ ಕೇಳಿಯೂ ಇದರ ಉಪಯೋಗವನ್ನು ಮತ್ತೆ ಜನರು ಮಾಡುತಲಿರುವರು. ಇದರ ಕಾರಣವು ಈ ಎಣ್ಣೆಯು ನಮ್ಮಲ್ಲಿ ದೊರೆಯುವ ಒಳ್ಳೆ ಎಣ್ಣೆಗಿಂತಲೂ ಅಗ್ಗವಾಗಿ ದೊರೆಯುವದೇ. ಪ ಊರಿನವರು ಈ ಎಣ್ಣೆಯಿಂದ ಅನರ್ಥಗಳಾಗುವದನ್ನು ಕಂಡು ಬಹುದಿನದಿಂದಲೂ ಜನರು ಇದರ ಉಪಯೋಗವನ್ನು ಮಾಡಲಿಕ್ಕಿಲ್ಲ ಎಂದು ಠರಾವ ಮಾಡಿ ಅದನ್ನು ತ್ಯಾಗ ಮಾಡಿರುವರು. ಅಲ್ಲಿನ ಜನರ ಹೀಗೆ ನಿಶ್ಚಯಿಸಿದ ಒಂದೇ ಕಾರಣದಿಂದ ಈ ಎಣ್ಣೆಯ ಉಪಯೋಗ ಮಾಡುವದನ್ನು ಬಿಟ್ಟಿಲ್ಲ; ಇದಕ್ಕೆ ಬಲವತ್ತರವಾದ ಇನ್ನೊಂದು ಕಾರಣವನ್ನು ಮನೆ ಮಾಡಿದ್ದಾರೆ. ಅವರು ಕಳೆದ ಡಿಸೆಂಬರ್ ಜನವರಿ ತಿಂಗಳಲ್ಲಿ ಅಲ್ಲಿ ಪ ಡಿ ಕೊಂಡಿದ್ದ ಇಫ್ಲುಯೆಂಜಾ ರೋಗವು ಈ ಎಣ್ಣೆಯನ್ನು ಉಪಯೋಗ ಮಾಡುವದರಿಂದಲೇ ಹಬ್ಬಿತು; ಜನರು ಭಯಂಕರ ಸ್ಥಿತಿಗೊಳಗಾದದರಿಂದ ಎಲ್ಲರೂ ಕಲ್ಪನೆಮಾಡಿ ಈ ಎಣ್ಣೆಯ ಉಪಯೋಗವನ್ನು ಮಾಡಬಾರದೆಂದು ಗೊತ್ತು ಮಾಡಿ ತಮ್ಮ ತಮ್ಮ ಮನೆಗಳ ದೀಪಗಳನ್ನು ತೆಗೆದುಕೊಂಡು ಹೋಗಿ ಸೂಳೆ ಅರ್ಪಣ ಮಾಡಿದರು. ಇವರು ಈ ಅಂತಸ್ತ ಕಾರಣವನ್ನು ಹುಡುಕಿ ತೆಗೆದು ಜನರಿಗೆ ಇದರಿಂದ ಆಗುವ ಹಾನಿಯನ್ನು ಕಂಡು ತಿಳಿಸಿದ್ದು ಉಪಕಾರ ಮಾಡಿದಂತಾಯಿತು. ಇತ್ತರಕಡೆಗೆ ಯಾವತ್ತು ಜನರು ಲಕ್ಷ್ಯ ಕೊಟ್ಟು ಈ ಎಣ್ಣೆಯ ಉಪಯೋಗವನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡುತ ಹೋಗಿ ತಮ್ಮ ಶರೀರ ಪ್ರಕೃತಿಯನ್ನು ಸಂರಕ್ಷಿಸಿಕೊಳ್ಳಬೇಕೆಂದು ಹೇಳುತ್ತೇವೆ. ಹು ಪ

ಮನುಷ್ಯನ ಆಶೆಗೆ ಪಾರವೇ ಇಲ್ಲ. ಹ್ಯಾಗೆ ಹ್ಯಾಗೆ ಮನುಷ್ಯನಿಗೆ ಪರಮೇಶ್ವರನು ಹೆಚ್ಚೆಚ್ಚು ಸ್ಥಿತಿಯನ್ನು ಕೊಡುತ್ತಾನೆಯೋ ಹಾಗೆ ಹಾಗೆ ಅವನ ಆಶೆ ಹೆಚ್ಚಾಗುತ ಹೋಗುತ್ತದೆ. ಪ್ರಥಮತಃ ದುರ್ಭಾಗ್ಯಕ್ಕೆ ಆಧಾರವಾಗಿದ್ದಾರೆ ಆವನು ಅಷ್ಟು ದೊರೆತರೆ ಸಾಕೆಂದು ಪರಮೇಶ್ವರನ ಕುರಿತು ಪ್ರಾರ್ಥನೆ ಮಾಡುತಲಿರುತ್ತಾನೆ. ಪರಮೇಶ್ವರನ ಕೃಪೆಯಿಂದ ಅಷ್ಟು ದೊರೆಯುವದಕ್ಕೆ ಪ್ರಾರಂಭವಾಯಿತೆಂದರೆ ಕೂಡಲೇ ಒಂದು ವರ್ಷದ ಜನ್ಮ ಸಂಗ್ರಹವಾಗೂ ಮನೆಯಲ್ಲಿದ್ದರೆ ಒಳ್ಳೆದೆಂದು ಗ್ರಹಿಸುತ್ತಾನೆ. ಅನು ದೈವಯೋಗದಿಂದ ಅನುಕೂಲವಾಯಿತೆಂದರೆ ಜನರಲ್ಲಿ ಬಹು ಶ್ರೀಮಂತನೂ, ಮನ್ನಣೆದಸ್ತನೂ ಅನಿಸಿಕೊಳ್ಳಬೇಕೆಂದು ಆಲೋಚಿಸಿ ಅವುಗಳನ್ನು ಸಂಪಾದನ ಮಾಡುವದಕ್ಕಾಗಿ ಮನಕ್ಕೆ ಬಂದ ಅನೀತಿಗಳನ್ನು ಮಾಡುವದಕ್ಕೆ ಉದ್ಯುಕ್ತನಾಗುತ್ತಾನೆ. ದೈವಯೋಗದಿಂದ ಅದು ಸಹ ಅನುಕೂಲವಾದರೆ ಅನಂತರ ಸ್ವಲ್ಪ ಪ್ರಾಂತಕ್ಕಾದರೂ ಅಧಿಪತಿಯಾದರೆ ಯೋಗ್ಯವಾಗಿರುವದೆಂದು ನೆನಸುತ್ತಾನೆ. ಅದೂ ಅನುಕೂಲವಾದರೆ ಪೃಥ್ವೀಪತಿಯಾಗಿ ಸಾರ್ವಭೌಮನೆನಿಸಿಕೊಳ್ಳಬೇಕೆಂದಪೇಕ್ಷಿಸುತ್ತಾನೆ. ಅದು ಸಹ ಅನುಕೂಲವಾಯಿತೆಂದರೆ ಮುಂದ ನಾನೇ ಪರಮೇಶ್ವರನಾದರೆ ಯೋಗ್ಯವೆಂದು ಅಪೇಕ್ಷಿಸುತ್ತಾನೆ. ಅಂತು ಮನುಷ್ಯನ ಆಶೆಗೆ ಪರ್ಯವಸಾನವಿಲ್ಲವು. ಹ್ಯಾಗೆ ಹ್ಯಾಗೆ ಹೆಚ್ಚೆಚ್ಚು ಭೋಗ್ಯತೆಯು ಹೆಚ್ಚುವದೋ ಹಾಗಾಗಿ ದುರಾಶೆಯು ಅದಕ್ಕೆ ಮುಂದೆಯೇ ಹೆಚ್ಚುತ್ತಿಹಲಾರಂಭಿಸುತ್ತದೆ. ಆದರೆ ಈ ತರದ ದುರಾಶೆಯುಳ್ಳವರು ಅಂತವರು ಮಾತ್ರವೇ ಎಂಬುದಿಲ್ಲ. ಈ ಜಗತ್ತಿನಲ್ಲಿ ಪ್ರತಿಯೊಬ್ಬನೂ ಇದಕ್ಕೆ ದುರಾಶೆಯುಳ್ಳವನಾಗಿರುತ್ತಾನೆ. ಅಂತ ದುರಾಶೆಯಿಂದ ಬಾಧೆಯೊಂದು ಸಮಯದಲ್ಲಿ ಮನುಷ್ಯನು ಇಷ್ಟು ಅಥವಾ ನಾಗುತ್ತಾನೆಲ್ಲ. ನೀತಿ ಅನೀತಿ ಎಂಬುವದು ಏನೂ ಗೊತ್ತಾಗುವದಿಲ್ಲ. ಒಳಗಾದ ಅನೀತಿಯನ್ನು ಮಾಡಿ ತನ್ನ ಆಶೆಪೂರ್ತಿ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಅದರಿಂದ ಜನರು ತನ್ನನ್ನು ನೀತಿಹೀನನೂ ಅಪ್ರಯೋಜಕನೂ ಎಂದು ಎನ್ನುವರೆಂಬ ಭಯವೇ ಉಳಿಯುವದಿಲ್ಲ. ಮತ್ತು ಪರಾಧೀನನಾದ ಅದ್ಯಾಕಾರ ಆವನನ್ನು ಅಂದರೂ ಅವನ್ನು ಅವನು ತನಗೆ ಕೆಟ್ಟ ಮಾತನ್ನಾಡುತ್ತಾರೆಂದು ತಿಳಿದುಕೊಳ್ಳುವದಿಲ್ಲ. ಆದರೊಂದು ಭೂಷಣವಾಗಿ ಹಚ್ಚಿಕೊಳ್ಳುತ್ತಾನೆ. ನೋಡಿರಿ, ಊರಲ್ಲಿ ಯಾವನಾದರೂ ದುಷ್ಟತನದ ಪ್ರಬಲನಾಗಿದ್ದರೆ, ಜನರು ಅವನನ್ನು ಹಿಸುಕಿದ್ದು, ನಿನ್ನ ಕಂತ ಕೂಡಲೇ ಬಿಟ್ಟಿರು ಹೇಳುತ್ತಾರೆ. ಆದರೆ ಅದಕ್ಕವನು ನನಗೆ ನೀಚನನ್ನು ಅತ್ತರೆಂದು ತಿಳಿದುಕೊಳ್ಳುವದಿಲ್ಲ. ನಾನು ಪ್ರಭುತ್ವದಿಂದ ಅದಕ್ಕಾಗಿಯೇ ನನ್ನನ್ನು ಕಂಡಕೂಡಲೆ ಜನರು ಹೆದರುತ್ತಾರೆಂದು ತಿಳಿದುಕೊಳ್ಳುತ್ತಾನೆ. ಇದೊಂದು ತರದ ಮನುಷ್ಯನ ಪೀಳಿಗೆ ಇದು ತಿಳಿಯಬೇಕು.—ಸ ವೃ

ADVERTISEMENTS.

ದಕ್ಷಿಣ ಮಹಾರಾಷ್ಟ್ರ ರೈಲ್ವೆ
ನೋಟಿಸ್

ಸನ್ ೧೮೯೬ ನೇ ಇಸವಿ ಜೂನ್ ತಿಂಗಳ ತಾರೀಖಿನಲ್ಲಿ ಪ್ರಾರಂಭವಾಗುವ ಸಾಲಿನಲ್ಲಿ ಬೇಕಾಗಿರುವ ಇದರಡಿ ವಿಳಸಲ್ಪಡುವ ಸಾಮಗ್ರಿಗಳ ಸರಬರಾಯಿ ಬಗ್ಗೆ, ಸನ್ ೧೮೯೬ನೇ ಇಸವಿ ಮೇ ೨೭ನೇ ತಾರೀಖು ಬುಧವಾರದ ವರೆಗೆ ಟೆಂಡರುಗಳು ಬರಮಾಡಿಕೊಳ್ಳಲ್ಪಡುವವು —

೧ ಈ ದೇಶದಲ್ಲಿ ತಯಾರಾಗುವ ಚಿಲ್ಲರ ಸಾಮಾನುಗಳು
೨ ಎಣ್ಣೆಗಳು, ಚಿಂದಿ ಬಟ್ಟೆ
೩ ಉರುವಲುಗಳು
೪ ಕಾಗದ, ಪೆನ್ಸಿಲ್, ಇಂಕ್ ವಗೈರೆ ಸಾಮಾನುಗಳು

೨ ದರಖಾಸ್ತುಗಳನ್ನು ಟೆಂಡರಿನ ಷೆಡ್ಯೂಲ್ ಎಂಬ ಛಾಪಾ ಹಾಕಲ್ಪಟ್ಟ ನಮೂನೆಗಳಲ್ಲಿ ಬರೆದು ಕಳುಹಿಸಕೊಡತಕ್ಕದ್ದು. ಅವುಗಳಲ್ಲಿ ೧ ನೇ ಜಾಬ ನಮೂನೆಗಳನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದಲೂ, ೩ನೇ ಜಾಬ ನಮೂನೆಯನ್ನು ಧಾರವಾಡದಲ್ಲಿರುವ ಟ್ರಾಫಿಕ್ ಮ್ಯಾನೇಜರಿಂದಲೂ, ೨ನೇ ಜಾಬ ನಮೂನೆಯನ್ನು ಧಾರವಾಡದಲ್ಲಿರುವ ಆಡಿಟರಿಂದಲೂ ನಮೂನೆ ಒಕ್ಕೆ ೪ ಆಣೆ ಕೊಟ್ಟು ಪಡೆಯಬಹುದು.

೩ ಕಂಪೆನಿಯು ಅವರ ತಪ್ಸೀಲ ಮತ್ತು ಷರತ್ತುಗಳು ಮತ್ತು ಕಂಟ್ರ್ಯಾಕ್ಟುಗಳು ಕೊಡಲ್ಪಡುತ್ತಿರುವೆಯೋ ಅವು ಟೆಂಡರ್ಸ ಷೆಡ್ಯೂಲಿನ ಪ್ರತಿಯೊಂದು ನಮೂನೆಗೂ ಸೇರಿಸಲ್ಪಟ್ಟಿರುವ ಜಾಬ್ತೇ ಅಂಶಗಳನ್ನು, ದರ ತಿಳಿಯಬೇಕಾಗಿದ್ದರೆ ಆಯಾ ಜಾಬುಗಳಿಗೆ ಸಂಬಂಧಪಟ್ಟ ಆಫೀಸರುಗಳಿಂದ ತಿಳಿದುಕೊಳ್ಳಬಹುದು.

೪ ದರಖಾಸ್ತುಗಳನ್ನು ಬರೆದು ಲಕೋಟೆಯಲ್ಲಿ ಹಾಕಿ ಸೀಲ್ ಮಾಡಿ ಧಾರವಾಡದಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯ ಏಜಂಟರವರ ಹೆಸರಿಗೆ ವಿಲಾಸ ಬರೆದು ಈ ದೇಶದ ತಯಾರಾದ ಸಾಮಾನುಗಳ ಬಗ್ಗೆ ದರಖಾಸ್ತು ಎಣ್ಣೆ ವಗೈರೆ ಬಗ್ಗೆ ದರಖಾಸ್ತು ಉರುವಲುಗಳ ಬಗ್ಗೆ ದರಖಾಸ್ತು ಕಾಗದ ಪೆನ್ಸಿಲ್ ವಗೈರೆ ಬಗ್ಗೆ ದರಖಾಸ್ತು ಎಂದು ಬರೆದು ಆಯಾ ಜಾಬುಗಳನ್ನು ನಮೂದು ಮಾಡತಕ್ಕದ್ದು. ಕಂಪೆನಿಯು ಎಲ್ಲಾ ದರಖಾಸ್ತುಗಳಲ್ಲಿ ಯಾವದನ್ನಾದರೂ ಅಂಗೀಕರಿಸುವದಕ್ಕೆ ಏಜಂಟರವರು ಬದ್ಧರಾಗಿರುವದಿಲ್ಲವು.

ಏಜಂಟರ ಆಫೀಸ್, ಧಾರವಾಡ, ೨೭ನೇ ಏಪ್ರಿಲ್ ೧೮೯೬. } J. BURNMORD &c, *Major, R. E.* *Agent.*

ನೋಟೀಸ್.

ಬೆಂಗಳೂರು ಕರ್ನಾಟಕ ಪ್ರೆಸ್ಸಿನಲ್ಲಿ ಬಿಕರಿಗಿರುವ ಪುಸ್ತಕಗಳು.

ಇದರ ಕೆಳಗಿನ ಪಟ್ಟಿಯಲ್ಲಿ ಕಾಣಿಸಲ್ಪಟ್ಟಿರುವ ಗ್ರಂಥಗಳಿಗೆ ಇದುವರೆಗೆ ನಿಷ್ಕರ್ಷೆಯಾಗಿದ್ದ ಕ್ರಯಗಳನ್ನು ಸ್ವಲ್ಪ ಸಾಲ್ಪಕ್ಕೆ ರೂಪಾಯಿಗಳಿಗೆ ಇಳಿಸಲ್ಪಟ್ಟಿದೆ. ಕಡಿಮೆ ಮಾಡಿರುತ್ತೇವಷ್ಟಾಗಿ ಪಾಠಕರು ಆಯಾ ಗ್ರಂಥಗಳ ಕ್ರಯವನ್ನು ಕಳುಹಿಸಿ ತರಿಸಿಕೊಳ್ಳಬಹುದು. ಈ ಪಟ್ಟಿಯಲ್ಲಿ ಕಂಡ ಕ್ರಯದಲ್ಲಿ ತಪಾಲ್ ಹಾಸಲ್ ಸೇರಿರುವದಿಲ್ಲವು. ಅದು ಆಯಾ ಗ್ರಂಥಗಳ ತೂಕಕ್ಕೆ ತಕ್ಕಂತೆ ಸೇರಿಸಲ್ಪಡುವುದು.

ಶಿವಗೀತೆ (ಟೀಕಾ) ..	0	6	0
ಶಿವಾನಂದಲಹರಿ ಡಿಟೊ	0	4	0
ಚಾಣಕ್ಯನ ಸುಭಾಷಿತ ಡಿಟೊ	0	2	0
ಬಾಲರಾಮಾಯಣ ಡಿಟೊ .	0	1	6
ಕಾಲಾಮೃತ ಡಿಟೊ	0	8	0
ವಿಷ್ಣು ಸಹಸ್ರನಾಮ	0	1	6
ಸೂರ್ಯ ಸಹಸ್ರನಾಮ	0	1	3
ಕೃಷ್ಣ ಕರ್ಣಾಮೃತ ಮೂಲ .	0	1	0
ತ್ರಿಶೋಕ ಅಮರ ಮೂಲ	0	1	6
ಪಂಚಭಾಷಾ ಬಾಲಲೀಲೆ	0	3	6
ಹನುಮದ್ವಿಲಾಸ	0	4	0
ಕರ್ಣಾ ಪರಿಣಯ .	0	1	6
ಸುಭದ್ರಾಪರಿಣಯ	0	1	0
ಸುಧನ್ವ ಚರಿತ್ರೆ .	0	1	0
ಕಾಳೀಯ ಮರ್ದನ	0	1	0
ಬಾಲಗ್ರಹ ಚಿಕಿತ್ಸೆ .	0	1	0
ಭೇತಾಳ ಪಂಚವಿಂಶತಿ	0	1	0
ಮಾಸಮ್ಮರ್ದ ಲಾ ಇಂಗ್ಲಿಷ್ ಕನ್ನಡ	0	6	0
ಅರೇಬಿಯನ್ ನೈಟ್ಸ್ ಕಥೆ 37 ರಾತ್ರಿಯವರೆಗೆ	0	8	0
ಪ್ಯಾರಾವಣನ ಕಥೆ	0	0	6
ನೃಪತುಂಗ ವಿಜಯ	1	8	0
ಕನ್ನಡ ಶ್ರೀಮದ್ಭಾಗವತ ಪಕನಸ್ಕಂಧ	1	0	0
ಭ್ರಾಂತಿವಿಲಾಸ	0	9	0
ಸೀತಾವನವಾಸ	0	4	0
ಪರಿಭಕ್ತಿಸಾ ...	0	0	4
೧ ಕಾಂಡ ಅಮರ	0	0	6
ಬಾಲರಾಮಾಯಣ ಮೂಲ	0	0	4
ಅಭಿಮನ್ಯು ಕಾಳಗ	0	1	0
ಬಭ್ರುವಾಹನ ಕಾಳಗ	0	2	0
ಗೋಪಿಕಾಗೀತೆ	0	0	6

50 ರೂಪಾಯಿಗಳಿಗೆ ಕಡಿಮೆ ಇಲ್ಲದ ಕೊಂಡುಕೊಳ್ಳತಕ್ಕವರಿಗೆ ನೂರ ೫) ರೂಪಾಯಿಯಂತೆ ಕಮಿಷನ್ ಕೊಡಲ್ಪಡುವುದು

NOTICE.

VIDYASARA SANGRAHA.

A TREATISE ON THE PRINCIPLES OF

HINDU MEDICINE

Price, including Postage Rs 5- 0 - 0

ವೈದ್ಯಸಾರ ಸಂಗ್ರಹ.

ಇದು, ಚರಕ, ಸುಶ್ರುತ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹರೂಪವಾಗಿರುತದೆ. ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಬೆಳ ರೂಪ, ಒಂದಕ್ಕೆ ರೂ, 5—0— 0

BANGALORE CITY MUNICIPALITY
ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ

ನೋಟೀಸ್.

ತಾರೀಖು ೧೩ನೇ ಮೇ ೧೮೯೬

ಸನ್ ೧೮೯೬ನೇ ಇಸವಿ ಮೇ ೨೩ ನೇ ತಾರೀಖು ಮಂಗಳವಾರದ ದಿನ ೭ಘಂಟೆ ೪ ಸಂಟಿಗೆ ಬೆಂಗಳೂರು ಸಿಟಿ ಮ್ಯೂನಿಸಿಪಲ್ ಕಮಿಷನರಗಳು, ಕೋಟೆಯೊಳಗಿರುವ ತಮ್ಮ ಆಫೀಸಿನಲ್ಲಿ ಮೀಟಿಂಗ್ ಸೇರುವಾಗ ಇದರಡಿ ವಿಳಸಲ್ಪಡುವ ಕೆಲಸಗಳು ನಡೆಸಲ್ಪಡುವವು.—

೧ ಸನ್ ೧೮೯೬ನೇ ಇಸವಿ ಏಪ್ರಿಲ್ ತಿಂಗಳ ನಗದು ಜಮಾಖರ್ಚು ಲೆಕ್ಕ, ಸರಾಫಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆಮಾಡುವ ಮೆಡಿಕಲ್ ಆಫಿಸರಲೆಕ್ಕ, ತಗಾದೆ ಸನದು, ಮತ್ತು ಟಿಕಿ ಪಟ್ಟಿ ಹಾಕುವಂಥಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಶ್ರೀನಿವಾಸ ಮಂದಿರದ ಲೈಬ್ರರಿಗೆ ಹೋಗಿದ್ದವರನ್ನು ಕುರಿತ ಯಾದಿ, ಸಿಟಿ ಮ್ಯೂನಿಸಿಪಲ್ ಇಂಗ್ಲಿಷ್ ಮತ್ತು ಕನ್ನಡ ಸ್ಕೂಲುಗಳ ಲೆಕ್ಕಗಳು, ಸೂಲಗಿತ್ತಿಯರು ಚಿಕಿತ್ಸೆ ಮಾಡಿದವರ ಲೆಕ್ಕ, ದೀಪಗಳನ್ನು ಕುರಿತ ರಿಪೋರ್ಟಿನ ಸಂಗ್ರಹ, ಪ್ರಸವಾಸ್ಪತ್ರೆ ಲೆಕ್ಕ, ದಾನ್ಯದಾ ಲೆಕ್ಕ

೨ ಮ್ಯೂನಿಸಿಪಲ್ ಕಮ್ಮಿಷನರ ಮ॥ ಆರ್ ವೆಂಕಟಸ್ವಾಮಿ ನಾಯುಡುರವರು ಬೋರ್ಡಿನಲ್ಲಿ ತಮ್ಮ ಮ್ಯೂನಿಸಿಪಲ್ ಕಮ್ಮಿಷನರ ಕೆಲಸಕ್ಕೆ ರಾಜೀನಾಮೆ ಕಳುಹಿಸಿ, ೧೮೯೬ನೇ ಇಸವಿ ಏಪ್ರಿಲ್ ತಿಂಗಳ ೧೬ನೇ ತಾರೀಖಿನಲ್ಲಿ ಬರೆದ ಲೆಟರ

೩ ಮ॥ ಎ ಜಿ ಚಂಗಿರವೇಲು ಮೊದಲಿಯಾರ್ರವರು, ಕೋಟೆಯೊಳಗೆ A ಗುರುತುಳ್ಳ ಬೀದಿಯಲ್ಲಿರುವ ತಮ್ಮ ಮನೆ ನಂ ಎದುರಿಗೆ ಇರುವ ಭೂಮಿಯು ೨೦ ಅಡಿಗಳ ಉದ್ದವೂ, ೭ ಅಡಿಗಳ ಅಗಲವೂ ಇರುವ ಒಂದು ಚಾವಡಿ ಜಮೀನನ್ನು ಕೇಳಿ ೧೮೯೬ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಬರೆದುಕೊಂಡ ಅರ್ಜಿ.

೪ ಮ್ಯೂನಿಸಿಪಲ್ ಮರಮ್ಮತ ಇಲಾಖಾ ಸಬ್ ಓವರ್ಸಿಯರುಗಳು ಪ್ರತಿ ಒಬ್ಬರಿಗೂ ಒಂದೊಂದು ಕುದುರೆಯನ್ನು ಇಟ್ಟುಕೊಂಡು ಕೆಲಸಕ್ಕೆ ಆಗುವ ಖರ್ಚಿನ ಬಾಬಿನ ಭತ್ಯವನ್ನು ಬಳ್ಳಿಯ ಅಲೋಪನೆಗೆ ತರಬೇಕೆಂದು ಮ್ಯೂನಿಸಿಪಲ್ ಎಕ್ಸಿಕ್ಯುಟಿವ್ ಇಂಜಿನಿಯರವರು ೧೮೯೬ನೇ ಇಸವಿ ಅಕ್ಟೋಬರ್ ೧೧ನೇ ತಾರೀಖಿನಲ್ಲಿ ಬರೆದ ೧೫೬೯ನೇ ನಂಬರ ಯಾದಿ

೫ ಇದರಡಿ ತಿಳಿಸಲ್ಪಡುವ ದರಖಾಸ್ತುಗಳ ಫೈಸಲಾತಿ —

೧ ೧೮೯೬—೯೭ನೇ ಇಸವಿಯಲ್ಲಿ ಬೆಂಗಳೂರು ಸಿಟಿಯಲ್ಲಿ ದೀಪ ಹಾಕುವದನ್ನು ಕುರಿತದ್ದು

೨ ೧೮೯೬—೯೭ನೇ ಇಸವಿಯೊಳಗೆ ತರ್ಕಾರಿ, ಮೀನು ಮತ್ತು ಸಣ್ಣಸಣ್ಣ ಮಾರ್ಕೆಟುಗಳಲ್ಲಿ ತೆರಿಗೆ ವಸೂಲ್ಮಾಡುವುದು

೩ ೧೮೯೬—೯೭ನೇ ಇಸವಿಯೊಳಗೆ ಕಸಾಯಿ ದೊಡ್ಡಿಯಲ್ಲಿ ತೆರಿಗೆ ವಸೂಲ್ಮಾಡುವುದು

೪ ೧೮೯೬—೯೭ನೇ ಇಸವಿಯಲ್ಲಿ ತೆರಿಗಿನ ಭಾಗನ್ನು ನೂತಿಕೊಳ್ಳುವುದು

೫ ೧೮೯೬—೯೭ನೇ ಇಸವಿಯಲ್ಲಿ ಕೋಟೆಯ ಮಿಣ್ಣಿಯಮೇಲೆ ಬೀಳುವ ಸ್ಲಿವ ಬಣ್ಣದ ಗಾಡಿಗಳಿಂದ ತೆರಿಗೆ ವಸೂಲ್ಮಾಡುವುದು

೬ ಟಿ ವೆಂಕಟರಾಯರವರು ಮ್ಯೂನಿಸಿಪಲ್ ಸ್ಕೂಲಿನಲ್ಲಿಟ್ಟುಕೊಂಡಿಗೆ ಕೆಲಸ ಮಾಡಿದ ಬಗ್ಗೆ ತನಗೆ ಸಂಬಳ ಬಾಕಿ ಬರಬೇಕೆಂದು ತಗಾದೆ ಮಾಡುವ ವಿಷಯದಲ್ಲಿ ೧೮೯೬ನೇ ಇಸವಿ ಏಪ್ರಿಲ್ ೮ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಮಾಡಿದ ೧೨೪೯—೧ ೨೦೪೯—೫೦ ನೇ ನಂಬರ ಪ್ರೊಸೀಡಿಂಗ್ಸ

T P LEONARD,
President
Municipal Comm
Bangalore City

ಈ ಕಂಪನಿಯು ಸನ್ ೧೮೯೧ನೇದರಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳಸತಕ್ಕ ಉತ್ಪತ್ತಿಯು.

ಅತ್ಯಾಶ್ಚರ್ಯಕರವಾದ ಖನಿಜದಿಂದ ತಯಾರಿಸಿದ ಈ ಉತ್ಪತ್ತಿಯು ಲೋಕಪ್ರಖ್ಯಾತದ ಅನೇಕ ನೆಲ್ಲಿಕಾಯಿ ಸಂಡಗಳ ಪ್ರತಿಗಳನ್ನು ರೊಟ್ಟಿ ತುಪ್ಪದೊಳಗೆ ಮಾಗಿಸಿ, ಒಳ್ಳೆ ಪೆಟ್ಟಿನ ತಯಾರಿಯು ಸಕ್ಕರೆ ಇವು ಮಿಶ್ರ ಮಾಡಿರುತ್ತೇವೆ. ಈ ಉತ್ಪತ್ತಿಯು ಮಹೌಷಧಿಯಾದ್ದು, ಒಳ್ಳೆ ರುಚಿಯುಳ್ಳದ್ದಾದ್ದರಿಂದ ಇದರ ಸೇವನೆಯಿಂದ ಕಫ, ವಾತ ಪಿತ್ತ ಈ ತ್ರಿದೋಷಗಳಿಂದಾಗತಕ್ಕ ಮೂವತ್ತು ಬಗೆಯ ವ್ಯಾಧಿಗಳು ಹೋಗುತ್ತದೆ. ೪೦ ವರ್ಷಗಳ ವಯಸ್ಸಿನಲ್ಲಿ ಮುದುಕರ ಶರೀರದಲ್ಲಿಯೂ ತರುಣರಂತ ಶಕ್ತಿ ಪ್ರಜ್ವಲಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಪ್ರಬಲವಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಇದಲ್ಲದೆ ಹೀಗೆಯೇ ಅಧಿಕ ಹಿಂದೆ ಹರಿದುಹೋಗುವ ಧಾತು ನಿಲ್ಲುತ್ತದೆ. ಸ್ವಭಾವ ಯಾಗುವಲ್ಲಿ ವೀರ್ಯವು ಬೆಳೆದು ಸ್ತ್ರೀ ಸಂಗದ ಸುಖಾರಿಸುತ್ತದೆ. ಪರಿಪೂರ್ಣ ಬಲ ಮತ್ತು ಪುರುಷತ್ವ ಸಂಬಂಧಿಕ ವೇಗಗಳ ಕಸರ ಇಲ್ಲದಂತಾಗಿ ಧಾತು ವೃದ್ಧಿಯಾಗುತ್ತದೆ. ಮೂರು ಹೊತ್ತಿಂದಲೂ ಅನ್ನ ಪಚನವಾಗಿ ಒಳ್ಳೆ ಹಸಿವೆಯಾಗುತ್ತದೆ. ಹೋಗುವದರೊಂದಿಗೆ ತೆಡ ಕೂಡಲೇ ಸ್ಪಷ್ಟ ನೌಕರ್ಯಾಗುತ್ತದೆ. ಜ್ವರ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಬೋಸ ಚೀನೆ ಇವುಗಳಿಗೆ ೧೧ ದಿವಸದಿಂದ ೨೦ ದಿವಸಗಳ ವರೆಗೆ ಸೇವಿಸಬೇಕು. ಒಂದು ಡಬ್ಬಿಯಿಂದ ಗುಣಪ್ರಕಾಶವಾಗುತ್ತದೆ. ಮತ್ತು ಹುಳಿದದ್ದಲ್ಲಿ ೮೦ ದಿನಗಳ ವೇಳೆಗಾಗಿ ಬಂದರೆ ೧೧ ದಿನಗಳವರೆಗೆ ಸಾಲಿಕೆಗೆ ೧ ಡಬ್ಬಿಗೆ ೧ ೯—೦ ರೂ||ಒಂದೊಂದಕ್ಕೆ ೩ ಡಬ್ಬಿಗಳು ತಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಗುವು. ಈ ಉತ್ಪತ್ತಿಯಿಂದ ರೋಗರು ಸತೇಜರಾಗುತ್ತಾರೆ. ಕರಿನ ಹಾಗೂ ಜಾಣತಿ ಬಿಕಲ್ ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಂಬಳ ಜನರಲ್ಲಿ ಬಹಳ ದಬ್ಬಿಗಳು ಖರ್ಚಾಗುತ್ತವೆ. ಈ ಔಷಧವು ಈ ಕಂಪೆನಿಗೆ ಹೊರತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ಧೈರ್ಯಕರದಿಂದ ವೈದ್ಯರಿಗೆ ಸಹಾಯವಾಗಿಕೊಳ್ಳಲ್ಪಡುತ್ತದೆ. ಬರೆದು ಒಂದು ಕೂಡಲೆ ಈ ಕಂಪನಿಯು ಬೇಕಾದವರಿಗೆ ಈ ದಬ್ಬಿಗಳು ಕಳುಹಿಸಿಕೊಟ್ಟಿರುತ್ತದೆ. ಅಂಚೆಯ ಹಾಗೂ ಪ್ಯಾಕ್ಕಿ ಪೆಯಿಬಲ್ ಪಡ್ಡ ಬೇರೆ ಕೊಡಬೇಕು. (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದಾಖಲ್ಲ ಡಬ್ಬಾಕಾಡಲ್ಲಿ ಎಲ್ಲಾ ಖಜೂರ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಡಬ್ಬಾ ಖರ್ಚು ಕಡಿಮೆ ಬೀಳುವದು.)

ಮೇಲ್ಕಂಡ ಸಂ—ಪಿ ಎಚ್ ಎ. ಬ್ರದರ್ಸ್ ಮತ್ತು ಕಂಪೆನಿ,

ಸೆಕೆಂಡ್ ಇಂಗ್ಲಿಷ್ ಡಿಸ್ಟ್ರಿಕ್ಟ್ ಆಫೀಸ್, ಡಿಸ್ಪೆನ್ಸರಿ ಬೆಳಗಾಂವ

ಪೋಸ್ಟ್—ಬೆಳಗಾಂವ. Post BELGAUM.

BANGALORE —Printed and Published at the KARNATAKA PRESS, No. 40, HOSPITAL ROAD, CITY,—1896

THE

Karnataka Prakasika.

ಚಂದಾದರರಿಗೆ — ಸ್ಥಳದವರಿಗೆ		ಪರಸ್ಥಳದವರಿಗೆ, ಪೋಸ್ಟೇಜ್ ಸಹ	
ಸಂ. 1 ಕ್ಕೆ	3 1 0	ಸಂ. 1 ಕ್ಕೆ	1 0 0
6 ತಿಂಗಳಿಗೆ,	2 0 0	6 ತಿಂಗಳಿಗೆ	2 8 0
3 ತಿಂಗಳಿಗೆ,	1 1 0	3 ತಿಂಗಳಿಗೆ	1 8 0

ಕರ್ನಾಟಕ ಪ್ರಕಾಶಿಕಾ.

Published Every Monday Morning

ಪ್ರಕಟನೆಯ ರಿವಾಜು { ಮೊದಲನೆಯದಫೆ ಪಂಕ್ತಿ ಒಂದಕ್ಕೆ 0 2 0
ಎರಡನೆಯ ದಫೆ ಪಂಕ್ತಿ ಒಂದಕ್ಕೆ 0 1 0

[ಕ್ಲ್ರಷ್ಟ ಷರಾ—ಎರಡನೆಯ ದಫೆಗಿಂತ ಜಾಸ್ತಿಯಾಗಿ ಎಷ್ಟು ದಫೆಯಾದರೂ ಪಂಕ್ತಿ ಒಂದಕ್ಕೆ ೧ ಆಣೆ ಯಂತೆಯೇ ಲೆಕ್ಕ ಮಾಡಲ್ಪಡುವದು.]

ಪ್ರಕಾಶಮವಿವಿಧಪ್ರಸ್ತಾವ್ಯಪಗತಮಾರ್ಗ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಶುಭಹಿತೇರೋಭಿತಾ ॥ ಪ್ರಗಾಂಕಹಿತಮಾಸರನಿಹಿತಪಯುಪ್ರಾ. ಸಜ್ಜನಸ್ಸಿದ್ಧಿ ಕಾಸಾರಲಯೇಷ್ಠಿತಾ ವಿತತಿವಮಾನಸಂಸಂಪದಂ ॥

Vol. XXIII. BANGALORE:—MONDAY, MAY 25, 1896. No. 21.

Select Telegrams.

London 19th May.—The *Times* in a special article strongly protesting against charging the Indian Exchequer with the regular pay of Indian regiments employed in Africa says that the question is not a party one but one of justice to India, and must be decided by the nation. If Parliament [illegible] a practice which [illegible] I doubt not the Government will yield and that decision now will be given in a way more to [illegible] the loyalty of India than any action of Parliament since the Mutiny of 1857.

London 20th May.—In the House of Commons last night, Lord George Hamilton brought forward his resolution regarding the charge for the Suakin Expedition. It provides that if it shall become necessary to replace the Indian troops and vessels engaged at Suakin by other troops and vessels that Britain shall bear the cost thereof. Mr Morley gave notice of an amendment that it is inexpedient to charge India with any portion of the expenses. Mr Maclean gave notice of a similar amendment.

The Czar and Czarina have arrived at Moscow where immense preparations on the most sumptuous scale have been made for the coronation ceremony.

Moscow 21st May.—The special mission which has been sent by the French Government to attend the coronation of Czar has arrived here and has been received with unusual distinction, including a guard of honor, which is only accorded to Royal personages.

THE

Karnataka Prakasika.

MONDAY, MAY 25 1896.

HOW INDIA IS TREATED.

An incident lately happened in the House of Commons that does not speak well for those who brought it about. It shows how little some of the members of that august assembly care for India. If the interests of this land stand in the way of those of England they must be brushed aside. England must be benefited, however much India may suffer. It is well known that on board the P and O steamers lascars are employed in larger numbers than British sailors. This is not pleasing to the Trades Unionists of England, and they requested a member of their class to try to put a stop to the Indians being employed. So he made a complaint that these men did the work and received the wages that Europeans ought to perform and receive, and he hoped to carry the House along with him. This member—Mr John Burns—a radical, and representing a radical borough told the members that the lascars were all but useless, that they could not perform the work assigned them so well as Europeans, and that they were only taken on because they were cheaper. This was the charge brought against the lascars, and it was one that could not be sustained for a moment. The President of the Board of Trade told the member for Battersea that as the lascars were subjects of the Queen Empress they had as much right to be employed as anybody else. This was a point that never entered the head of Mr John Burns. His vision did not extend further than the British Isles. His sympathies could not extend to other lands. It was too weak to reach India. The lascars must not be employed on board the P and O vessels if English sailors would do the work though they are only subjects of the same sovereign, members of the same empire. Mr Burns and others of his way of thinking were plainly made to understand that the lascars had as much right to employment in any part of the world as anybody else, and it seems marvellous that they did not know this before. Then the Chairman of the company was able to prove to the House that the lascars were not employed because they were cheaper, but because they were more useful. They cost as much in wages as British sailors, but in the warm latitudes they could perform duties the others could not perform. This was why they were employed in such large numbers. He said that if not a single lascar was employed, the money paid to the sailors would not be increased. This must have completely unsettled the mind of Mr John Burns. It must have been a completely new light to him, and it is to be hoped that in future he will not say such foolish things as he did when speaking on a late occasion. But a lesson may be learnt from this. The people of this land should not trust to any set of men in the House of Commons, rather to the House itself. Mr Burns professes to be a friend of the people, but evidently only to the people of England. He leaves out the rest of the world, and is satisfied if he can please the working men of his own land. But there are many members who care as little for India as Mr John Burns. It is with them England first, England always. If they can serve India after England has had all she desires, well and good. But if not, then this land must suffer, not the other. It is too sacred to sustain loss, the people are too good to be put to any inconvenience. As we have said the people of this land should be careful about trusting to any particular political party in Parliament. They should make use of any party that is willing to help, from which they can derive any benefit. This is the right method to follow and not for the people to put their faith on any man or any set of men. Such men as Mr John Burns are not calculated to benefit India though they may profess the broadest form of Liberalism. They will act selfishly, and in the interest of England however much the people of this land may be injured thereby. But something more is required. There must be real [illegible] in this land. It is true that great improvement has been made of late years. The enlarged Councils are far different institutions from their predecessors. More business is transacted and in a better manner. The wants of the people are better represented than they were, and useful reforms are brought about. But more is required, the Councils should be still further enlarged, they should be so changed that they would represent the people of this land and represent them fully. Till this has been done they must not rest satisfied, and when it is accomplished there will be no more need to trouble the House of Commons to take up Indian matters.

News and Notes.

A [illegible] is being tried by the Azamgurh Magistrate for attempting to exact *dalali* from a pleader.

Pandit Bisambhar Nath, North West Provinces, is gazetted Additional Member of the Imperial Legislative Council.

Sir Dinshaw Petit, Bart., has offered the Municipality of Igatpuri Rs 10,000 towards the water-supply scheme of that town.

The Government scheme for the assessment [illegible] throughout British India has met with the approval of the Secretary of State.

The [illegible] who was a candidate for election as Municipal Commissioner, Serampur, has been defeated by a narrow majority.

Mr Muir, the collector of Dharwar, has given a donation of thousand rupees towards the Female Training College, in that station.

The enquiry into the charges of bribery brought against Mr N Sawminatha Iyer, originally fixed for the 20th instant at Coca[illegible], has been postponed to the 25th idem.

A meeting of the Moplas I hear, writes a correspondent, has been convened at Tellicherry for taking steps to edit a journal that will contain matters chiefly regarding their social customs. Money they have enough. I wish them every success.

The Bombay Presidency Association deserves the gratitude of the Indian people for having promptly wired to the Secretary of State its protest on their behalf, against the proposed saddling of Indian finances with the cost of the Indian Contingent to Suakin.

At nine o'clock on Sunday morning in the house of a nautch girl in Narrainappa Naic Street, Black Town, a full grown cobra was discovered coiled at the bottom of a cradle occupied by a child of two weeks. An alarm was raised and the nautch-girl being the first on the scene very pluckily removed the child before the reptile was disturbed. It was however, subsequently despatched with a stick and was interred later on with considerable ceremony which included the orthodox sprinkling of milk.

The *Champion* has some excellent remarks on the decision of Her Majesty's Government to send an Indian contingent to Suakin. "Whether the Indian army is in excess of our present requirements or not," says our contemporary, "If it is, then the sooner the strength is reduced and the tax payer relieved of a large portion of his present intolerable burdens the better. If it is not then it is outrageous to allow a single soldier to go beyond the confines of the country to fight England's battles in which India is in no way interested."

As had been previously announced, a conference of Pandits called together by Lal Krishnadas Balmukundadas met on the evening of the 20th instant at Pachayappa's Hall under the presidency of His Holiness Sri [illegible]nandan Acharya Maharaj. The proceedings of the evening consisted mainly in the scholarly discussion of Vedanta Philosophy and other allied subjects in which many pandits took part. These discussions were prolonged till late in the evening when the proceedings were brought to a close with the distribution, among those who took part in the discussion of prizes in the shape of cash, and shawls, and with the presentation of an address in Sanskrit to the president by Lal Govindadas. The address was presented enclosed in a silver casket and accompanied with shawls and other valuable presents.

There is rather an important mistake, says the *Englishman* in Sir Michael Hicks Beach's reply to the question regarding the expenses of the Indian contingent. The ordinary expenditure on the troops would he said, fall upon India in accordance with precedent. There is no precedent for Indian troops being employed to assist Egypt in reconquering a province which was first of all driven into revolt by Egyptian tyranny, and then abandoned to the Dervishes through Egyptian ineptitude. We now know very nearly the worst. Precedent is to be dragged in by the heels to justify another imposition on India, but it is to be elaborately ignored when the proposal is to import some of our finest troops into the Soudan, not for service in the field, but to rot in idleness in a garrison town. To complete the injustice of the arrangement it is only necessary for the Government to absolve Egypt from bearing any share of the cost whatever.

The *Champion* quotes the views held by the late Mr Henry Fawcett and Lord Salisbury in regard to a similar expedition and the employment of Indian troops thereon. Mr Fawcett vigorously opposed even the *apportionment* of the cost of the Abyssinian war. Mr Fawcett could not see *why* there should be any *apportionment* at all when the *entire* charges of that war should have been borne by England alone. In his speech in the Commons on 28th November 1867, he challenged the Ministry on this so called principal and apportionment and remarked as follows:—"Heavy taxation was infinitely preferable to this country incurring the reproach of having cast the slightest injustice on the unrepresented millions in our dependencies." And Lord Salisbury (then Viscount Cranbourne) expressed himself as follows:—"Having regard to the future, I do not like India to be looked upon as an English barrack in the Oriental seas from which we may draw any number of troops *without paying for them*. It is bad for England, because it is always bad for us not to have that check upon the temptation to engage in little wars which can only be controlled by the necessity of paying for them."

The *Hindu* has received the following telegraphic communication from Hyderabad—Hitherto the Nizam's Government did not allow a European to acquire land in the Hyderabad dominion on the ground that Europeans are not subject to the jurisdiction of this Court. The *Deccan Post* of the 15th May, publishes a letter from Mr Plowden, Resident addressed to the Nizam's Government, in which he on behalf of the Government of India insists upon the Nizam's Government giving the same rights and privileges to Europeans as are enjoyed by the natives, though the Nizam's Government have no right to try Europeans. The recent Inam case in Aurangabad over which two European Missionaries have become terrors to the country, shows in what a position the Nizam's Government will be if this order is not cancelled. The great Sir Salar Jung never allowed land to Europeans, and it is hoped that the present order will not have a retrospective effect and thereby cancel the orders of Sir Salar Jung. The able Judicial Secretary of Hyderabad has written a strong minute against Mr Plowden's letter, and it is said that Sirdar Abdul Huck has gone to England to upset this order.

Local and Provincial.

THE RESIDENT.—Will return to Bangalore on the 15th of next month.

A PURCHASE.—The Mysore Government has purchased the Assistant Surgeon's quarters from the owners of the St. Martha's Hospital for Rs 9000.

THE BANGALORE RIFLE VOLUNTEERS.—We are told that Mr W. Mackworth Young, the British Resident in Mysore, has accepted the post of Colonel of this corps. Mr Young takes great interest in the Volunteer movement.

THE BIRTHDAY PARADE.—Took place on Wednesday last, the 20th, and there was a good number of troops out on the Parade Ground. They marched past, and then went home. A salute was fired at twelve o'clock.

THE WEATHER.—We have had a change in the weather, and for the better. It is now decidedly cooler than it was, and if we can get a few more showers of rain the hot season will be over. There were a nice showers in the Pettah on Wednesday and Saturday night, but very little in the Civil and Military Station.

MORE PROBATIONERS.—We learn that five more Revenue Probationers will be appointed shortly. We do not yet know exactly who all these lucky candidates are. We shall write something more about this appointment after we come to know the names of the candidates, etc.—M.H.

A PROTEST.—We hear that the Advocates and the Municipal Commissioners of Mysore will appeal to Her Highness the Maharani-Regent, protesting against the treatment they received at the hands of the authorities concerned during the late festivities in the Palace.—M. H.

For some time past there have been disputes between the Besters or Fishermen and Vakkaligars of Malvalli. The matter was referred to the authorities and was finally decided by Government in favour of the Besters. Without giving wide publicity the Besters conducted their procession last year with the aid of the Police and Magistracy. This roused the indignation of the Vakkaligars who were determined to oppose the procession on any subsequent occasion. This year the Besters had again to carry their procession, and anticipating tremendous opposition from the other side sought the aid of the Police. Accordingly the Deputy Commissioner of Mysore, the Sub-Division Officer of French Rocks and the Police Superintendent went to the spot on the 14th instant with a small force of Reserve Police. It would appear that on the morning of that day the Amildar of the place went on horseback to the Vakkaligars' street with the Reserve Police Inspector to post Constables. When the Amildar was passing, it would appear, a stone dropped on his body, and when he turned round four men appeared with a Latchet saying they would murder him. One of them gave a blow, but the Amildar escaping it fell on the horse. The Amildar was afterwards dragged down and seriously beaten. The Police Inspector who tried to relieve the Amildar from his difficulties was also severely hurt. Then the Police Superintendent went to their rescue and was similarly dealt with. By that time the mob had collected in large numbers and by their determined attitude the lives of the three officers, especially that of the Amildar, were in imminent danger. Then the Police Inspector shot three of the mob dead under the orders of the Superintendent and dispersed the crowd. The three officers then managed to get into the Besters' Street and were safe. On receipt of information some additional force was sent from Mysore and Bangalore and the Inspector General of Police also went. The procession was carried out the next day and order was restored. There is another version of the occurrence. It would appear the Vakkaligars were celebrating a festival on the morning of the 14th instant, and some of them were taking their meals when the Amildar and the Inspector went and disturbed them, they opposed the disturbance and the result was as narrated above. We hope to have our say on this matter in a future issue.—M. H.

The Mysore Gazette.

Bangalore, Thursday, May 21, 1896

NOTIFICATIONS BY THE GOVERNMENT OF MYSORE

GENERAL AND REVENUE.

No 19536—J. 1129 dated 15th May 1896.

Mr D A. Ballard, Assistant Superintendent of Police, Kadur District, handed over, and Mr G. Dunning assumed charge of the Kadur District Police on the afternoon of the 30th April 1896.

No 12571—Mis 1827, dated, Camp Mysore, 16th May 1896

Mr S. K. Hanumanta Rao, Sub Assistant Surgeon, Shimoga, is temporarily transferred from special duty, Mysore, to do duty in the Civil Hospital at Chikmagalur during the absence of Mr C. A. Nanjappa on leave or until further orders.

No 12514—Mis 1813, dated Mysore, 18th May 1896

Mr V N Narasimmiyengar delivered over and Mr T. T. Leonard assumed charge of the office of President of the Municipal Board, Bangalore City, on the forenoon of the 8th May 1896.

No 9934—R 3424 dated, Camp Mysore, 11th May 1896

Under Article 188 of the Mysore Service Regulations, Mr B. Kuppusami Naidu, 2nd General Assistant Commissioner, Bangalore District, is granted privilege leave of absence for a month and a half from such date as he may avail himself of the same.

No 9973—Ft F 125 95 dated, 15th May 1896

Under Article 188 of the Mysore Service Regulations, Mr C Appaiya, Assistant Conservator of Forests and head quarter Assistant to the Conservator of Forests in Mysore, is granted privilege leave of absence for one month from the 13th May 1896, or from such other date as he may avail himself of the same.

No 10094—Ft 715, dated, 19th May 1896

Under Article 171 of the Mysore Service Regulations, Mr E R S Iinney, Comptroller to the Government of Mysore, is granted casual leave of absence for three days, with effect from the 21st May 1896, or such other date as he may avail himself of the same.

Extracts.

HER HIGHNESS THE LATE CHOTA MAHARANI SAHEB OF VIZIANAGRAM.

It is with regret we have to record the death, on (15th inst) Friday night, at 10 o'clock, at Benares, of Her Highness the Chota Maharani Saheb of Vizianagram. The late Maharani was seized with pneumonia on the 13th instant and a telegram was received at Admiralty House at four o'clock on Friday afternoon announcing her dangerous illness. His Highness the Maharajah of Vizianagram immediately drove over to the Bishop of Mylapore and gave Rs. 1,000 to be distributed among the poor, requesting, at the same time, that prayers might be said in the Church for Her Highness' recovery.

Her Highness went to Benares early in January last accompanied by the Dowager Maharani and Her Highness the Maharani of Rewa, the immediate object of the visit being the celebration of the marriage of His Highness the Maharaja's cousin and intended returning to Madras in a few days when she fell ill as stated. The late Maharani was attended in her illness by the Civil and Military Surgeons of Benares besides the Maharajah of Vizianagram's own physician, but to no purpose. Her Highness was shortly expected to return, when it was His Highness the Maharajah's intention to meet Her Highness at Manmad and to take her on a visit of pleasure to Bombay, but it has been otherwise willed. The intelligence of her demise has been received with every manifestation of profound grief not only in Vizianagram, but in Masulipatam, Chicacole, Madras and elsewhere. The intelligence was a great shock to His Highness but consoled by the sympathies of a wide circle of friends, His Highness has borne his loss with commendable fortitude. Since Friday His Highness has received telegrams of condolence from all parts of the Presidency and Calcutta where the sad news became known at an early hour.

Her Highness the late Maharani belonged to the Jaipur house in Rajputana and was at the time of her lamented death about 41 years of age. Her Highness had endeared herself to all who came in contact with her by her amiable and gracious disposition. Her Highness has left no issue surviving. It only remains to add that our most sincere sympathies are with His Highness the Maharaja of Vizianagram in his great bereavement.—*Standard*

Bangalore City Municipality

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸ್.

ತಾರೀಖ್ ೧೪ನೇ ಮೇ ೧೮೯೬

ಸಿಟಿ ಮ್ಯುನಿಸಿ ಪಾಲಿಟಿಗೆ, ಸಾಮಾನುಗಳು, ಕೂಲಿಮುಟ್ಟುಗಳು ವಗೈರೆ ಸರಬರಾಯಿ ಮಾಡುವ ಇಷ್ಟವುಳ್ಳವರು ಕೋಟೆಯಲ್ಲಿ ಇರುವ ಮ್ಯುನಿಸಿಪಲ್ ಆಫೀಸ್‌ನಲ್ಲಿ ತಮ್ಮ ತಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಇಡತಕ್ಕದ್ದು. ಅದೇ ಕೆಲಸಕ್ಕಾಗಿ ಅಲ್ಲಿ ಒಂದು ಬುಕ್ಕು ಇಡಲ್ಪಟ್ಟಿದೆ. ಆಫೀಸ ಕಾಲ ಬೆಳಗ್ಗೆ ೧೧ ಘಂಟೆಯು ಮೊದಲು ಸಾಯಂಕಾಲ ೫ ಘಂಟೆಯುವರೆಗೆ.

T T LEONARD,
Vice President,
City Municipal Commission

ಕರ್ಣಾಟಕ ಪ್ರಕಾಶಿಕಾ.

೧೮೯೬ ನೇ ಇಸವಿ ಮೇ ೨೫ನೇ ಸೋಮವಾರ

ಮಳವಳ್ಳಿಯಲ್ಲಿ ನಡೆದ ಪ್ರಾಣಹಾನಿಕರವಾದ ಕಲಹ.

ಈ ತಿಂಗಳ ೧೪ ನೇ ತಾರೀಖಿನಲ್ಲಿ ಮೈಸೂರು ಡಿಸ್ಟ್ರಿಕ್ಟು ಮಳವಳ್ಳಿ ತಾಲ್ಲೂಕು ಕಸಬೆಯಲ್ಲಿ ನಡೆದ ಪ್ರಾಣಹಾನಿ ಕರವಾದ ಕಲಹದ ಪೂರ್ವ ವೃತ್ತಾಂತ ಕುರಿತು ೧೬ ನೇ ತಾರೀಖ್ ಶನಿವಾರದದಿನ ಸಾಯಂಕಾಲ ನಮಗೆ ವರ್ತಮಾನ ಒಂದಿದ್ದಾಗ್ಯೂ, ಸದರೀ ಹೊಡೆದಾಟದ ಸ್ವರೂಪ ಮತ್ತು ಅದಕ್ಕುಂಟಾದ ಕಾರಣವು ವಿಚಾರಪೂರ್ವಕ ಯಥಾವಸ್ಥಿತವಾಗಿ ತಿಳಿದುಕೊಳ್ಳುವದಕ್ಕೆ ಮುಂಚೆ ಅದು ಪ್ರಕಟಿಸುವುದುಚಿತವಲ್ಲವೆಂದು ಯೋಚಿಸಿ ಕಳೆದವಾರದಲ್ಲಿ ಅದರಪ್ರಸ್ತಾಪವನ್ನು ಬಿಡಬೇಕಾದವರಾದೆವು. ಅದರಿಂದೀಚೆಗೆ ಸದರೀ ಕಲಹವಂ ಕುರಿತು ನಮಗೆ ತಿಳಿಯಬಂದ ವರ್ತಮಾನವನ್ನು ಇದರಡಿ ಪ್ರಕಟಿಸುತ್ತೇವೆ ಹ್ಯಾಗಂದರೆ:—

ಮಳವಳ್ಳಿ ಜನರಲ್ಲಿ, ಹದಿನೆಂಟುಪಣ, ಒಂಭತ್ತುಪಣ ವೆಂಬದಾಗಿ ಅನಾದಿಯಾಗಿ ಎರಡು ಪಣಕಟ್ಟು ಯೇರ್ಪಟ್ಟು, ಒಕ್ಕಲಿಗರು ಹದಿನೆಂಟುಪಣಕ್ಕೆ ಸೇರಿದವರಾಗಿಯೂ ಬೆಸ್ತರು ಒಂಭತ್ತುಪಣಕ್ಕೆ ಸೇರಿದವರಾಗಿಯೂ ಇರುತ್ತಾರೆ ಈಗ್ಗೆ ಆರು ತಿಂಗಳ ಹಿಂದೆ ಒಂಭತ್ತುಪಣಕ್ಕೆ ಸೇರಿದ ಬೆಸ್ತರು ಒಂದು ವಿವಾಹ ಸಂದರ್ಭದಲ್ಲಿ ಒಕ್ಕಲಿಗರ ಬೀದಿಯಲ್ಲಿ ತಾವು ಮೆರವಣಿಗೆಮಾಡಿಕೊಂಡು ಹೋಗುವದಕ್ಕೆ ಅಪ್ಪಣೆ ಕೊಡಬೇಕೆಂದು ತಾಲ್ಲೂಕು ಮ್ಯಾಜಿಸ್ಟ್ರೇಟರನ್ನು ಕೇಳಲು ಅವರು ಫ್ರೆಂಚ್‌ರಾಕ್ಸ ಸಬ್‌ಡಿವಿಜನ್ ಆಫೀಸರಿಗೆ ರಿಪೋರ್ಟ್ ಮಾಡಿದರು. ಸಬ್‌ಡಿವಿಜನ್ ಆಫೀಸರು, ಮೆರವಣಿಗೆಗೆ ಹುಕುಂ ಕೊಡಬಹುದೆಂದು ಮಾಡಿದ ಶಿಫಾರಸ್ಸನ್ನನುಸರಿಸಿ ಮೈಸೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಬೆಸ್ತರ ಜಾತಿಯವರಿಗೆ ಲೈಸೆನ್ಸ್ ಕೊಟ್ಟುಬಿಟ್ಟರು. ಅನಾದಿ ಸಂಪ್ರದಾಯಕ್ಕೆ ವಿರುದ್ಧವಾದ ನೂತನ ಪದ್ಧತಿಗೆ ಅವಕಾಶ ಉಂಟುಮಾಡಿದ್ದರಿಂದ ಕಲಹಗಳೇನಾದರುಂಟಾಗಬಹುದೆಂದು ತಮಗೇನೆ ತೋರಿ ಸಬ್‌ಡಿವಿಜನ್ ಆಫೀಸರು ಬಲವಾದಪೋಲೀಸ್ ಶಿಬ್ಬಂದಿಯೊಡನೆ ಅಲ್ಲಿಗೆ ಹೋಗಿದ್ದು ಕಲಹಗಳಿಗೆ ಅವಕಾಶವಿಲ್ಲವಂತೆ ಬಂದೋಬಸ್ತು ಮಾಡಿಬಂದರು. ಈಚೆಗೆ ಸುಮಾರ್ ಎರಡು ವಾರಗಳ ಹಿಂದೆ, ಮರಳಿ ಬೆಸ್ತರ ಜಾತಿಗೆ ಸೇರಿದವನೊಬ್ಬನು ಒಕ್ಕಲಿಗರ ಬೀದಿಯಲ್ಲಿ ಮೆರವಣಿಗೆ ಮಾಡಿಕೊಂಡು ಹೋಗುವದಕ್ಕೆ ಅಪ್ಪಣೆ ಕೊಡಬೇಕೆಂದು ತಾಲ್ಲೂಕು ಮ್ಯಾಜಿಸ್ಟ್ರೇಟರಿಗೆ ಬರೆದುಕೊಳ್ಳಲು, ಹಿಂದೆ ಸಬ್ ಡಿವಿಜನ್ ಆಫೀಸರೂ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರೂ ಉಂಟುಮಾಡಿದ್ದ ಪದ್ಧತಿಯನ್ನನುಸರಿಸಿ, ಲೈಸೆನ್ಸ್ ಕೊಡಬಹುದೆಂದು ತಾಲ್ಲೂಕು ಮ್ಯಾಜಿಸ್ಟ್ರೇಟರು ಶಿಫಾರಸ್ ಮಾಡಿದರು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಸಬ್‌ಡಿವಿಜನ್ ಆಫೀಸರ ಸಂಗಡ ಆಲೋಚಿಸಿ ಲೈಸೆನ್ಸ್ ಕೊಟ್ಟರು. ಹಿಂದೆ ಒಂದು ತಡವೆ ವಾಡಿಕೆಯುಂಟಾಗಿರುವದರಿಂದ ಈತಡವೆ ಕಲಹಗಳಿಗೆ ಸುತರಾಂ ಅವಕಾಶವಿರಲಾರದೆಂದು ಸಬ್‌ಡಿವಿಜನ್ ಆಫೀಸರಿಗೆ ತೋರಿದಾಗ್ಯೂ ಪೋಲೀಸ್ ಸೂಪರಿಂಟೆಂಡೆಂಟರನ್ನೂ ಕೆಲವು ಪೋಲೀಸ್ ಸೇನೆಯನ್ನೂ ಅಲ್ಲಿಗೆ ಕಳುಹಿಸಿಕೊಟ್ಟರು. ಇವರೆಲ್ಲರು ೧೩ನೇ ತಾರೀಖಿನಲ್ಲಿ ಮಳವಳ್ಳಿಗೆ ಹೋಗಿ ಸೇರಿದರು. ಈ ತಿಂಗಳ ೧೪ನೇ ತಾರೀಖಿನಲ್ಲಿ ತಾಲ್ಲೂಕು ಅಮಲ್ದಾರರು ಪೋಲೀಸ್ ಸೂಪರಿಂಟೆಂಡೆಂಟರನ್ನು ಕರೆದುಕೊಂಡು ಹೋಗಿ, ಬೆಸ್ತರ ಮೆರವಣಿಗೆ ಹೋಗುವ ಬೀದಿಗಳಲ್ಲಿ ಯಾವ ಯಾವ ಪ್ರದೇಶಗಳೊಳು ಕಲಹಗಳುಂಟಾಗಬಹುದೆಂದು ತಮಗೆ ತೋಚಿತೊ ಆ ಸ್ಥಳಗಳನ್ನೆಲ್ಲ ಅವರಿಗೆ ತೋರಿಸಿ ಕನ್ನಡದಲ್ಲಿ ಮಾತನಾಡುತ್ತಿರುವಲ್ಲಿ ಆಮಾತುಗಳು ಒಕ್ಕಲಿಗರ ಕಿವಿಗೆಬಿದ್ದು ಕೂಡಲೆ ಅವರೆಲ್ಲರು ಬಲವಾಗಿ ಗುಂಪು ಕೂಡಿ ಮೊದಲು ಅಮಲ್ದಾರರನ್ನು ಕುದುರೆಯಮೇಲಿಂದ ಸೆಳೆದು ಕೆಳಗೆ ಹಾಕಿ ಚೆನ್ನಾಗಿ ಮರ್ದಿಸಿ ತರುವಾಯ ಪೋಲೀಸ್ ಇನ್ಸ್‌ಪೆಕ್ಟರನ್ನು ಚೆನ್ನಾಗಿ ಹೊಡೆದರು. ಇದಾದ ಕೆಲವು ನಿಮಿಷಗಳೊಳಗಾಗಿ ಐನೂರುಮಂದಿ ಒಕ್ಕಲಿಗರು ದೊಣ್ಣೆ ವಗೈರೆಯನ್ನು ಹಿಡಿದು ಬಂದು ಬಲವಾಗಿ ಗುಂಪು ಸೇರಿಬಿಡಲು, ಅಮಲ್ದಾರರನ್ನು ಬಿಡಿಸುವದಕ್ಕೆ ತಮಗೆ ಸಾಧ್ಯವಲ್ಲವೆಂದು ಪೋಲೀಸಿನವರಿಗೆ ಕಂಡುಬರಲು, ಪೋಲೀಸ್ ಸೂಪರಿಂಟೆಂಡೆಂಟರವರು ಕಲಹಿಗಳನ್ನು ಗೋಲಿಯಿಂದ ಹೊಡೆಯುವಂತೆ ತಮ್ಮ ಜನರಿಗೆ ಹುಕುಂ ಕೊಟ್ಟು ಅವರು ಅದೇಪ್ರಕಾರ ಮಾಡಿದ್ದರಲ್ಲಿ ಮೂವರಿಗೆ ಗೋಲಿ ತಗಲಿ ಸತ್ತು ಬಿದ್ದುಬಿಟ್ಟರು, ಆರೇಳು ಜನರಿಗೆ ಗೋಲಿಗಳು ತಗಲಿ ಬಲವಾದ ಘಾಯಗಳಾದವು. ಅದರಮೇಲೆ ಒಕ್ಕಲಿಗರಿಗೆ ಮತ್ತು ರೇಗಿ, ಇನ್ನು ಅಲ್ಲಿ ಇರಬಾರದೆಂದು ಯೋಚಿಸಿ ಸತ್ತವರ ಮುರ್ದೆಗಳನ್ನೆಲ್ಲ ಮೈಸೂರಿಗೆ ಸಾಗಿಸಿಕೊಂಡು ಹೋಗಿ ಶ್ರೀಮನ್ಮಹಾರಾಣೀ ರೀಜಂಟರವರ ಮುಂದೆ ಹಾಕಬೇಕೆಂದು ಯೋಚಿಸಿ ಅದಕ್ಕೆ ತಕ್ಕ ಸನ್ನಾಹಗಳಂ ಮಾಡುತಿರುವಲ್ಲಿ ಈ ಸಂಗತಿ ಪೋಲೀಸ್ ಸೂಪರಿಂಟೆಂಡೆಂಟರಿಗೆ ತಿಳಿಯಬಂದು, ಸದರೀ ಜನರು ಅರಮನೆಯೊಳಕ್ಕೆ ಬರದಂತೆ ಬಂದೋಬಸ್ತು ಮಾಡಿಸಬೇಕೆಂದು ಮಹಾರಾಣೀಯವರ ಪ್ರೈವೇಟ ಸೆಕ್ರೆಟರಿಯವರಾದ ಕರ್ನಲ್ ಕ್ಯಾಂಬೆಲ್ ಸಾಹೆಬರವರಿಗೆ ತಂತಿ ವರ್ತಮಾನ ಕಳುಹಿಸಿ ಅದೇರೀತಿ ಅರಮನೆಯಲ್ಲಿ ತಕ್ಕ ಏರ್ಪಾಡುಗಳು ಮಾಡಲ್ಪಟ್ಟವೆಂದು ಕೇಳುತ್ತೇವೆ. ಘಾಯ ತಗಲಿದವರಲ್ಲಿ ಒಬ್ಬನು ಈಚೆಗೆ ಮೃತಪಟ್ಟಂತೆ ವರ್ತಮಾನ ಬಂದಿದೆ. ಹದಿನೈದನೇ ತಾರೀಖಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲವರಿಗೆ ಈ ವರ್ತಮಾನವು ಬಂದು ಅವರು ಕೆಲವು ಪೋಲೀಸ್ ಸೇನೆಯೊಡನೆ ಕೂಡಲೆ ಅಲ್ಲಿಗೆ ಹೊರಟುಹೋದರು. ಈ ವರ್ತಮಾನವು ಈಗ ನೀಲಗಿರಿಯಲ್ಲಿರುವ ಬ್ರಿಟಿಷ್ ರೆಸಿಡೆಂಟರವರಿಗೂ, ಈ ಸಂಸ್ಥಾನದ ದಿವಾನರವರಿಗೂ ಕೂಡಲೆ ತಂತಿ ಮೂಲಕ ತಿಳಿಸಲ್ಪಟ್ಟಿತೆಂತ ಕೇಳುತ್ತೇವೆ. ತಾಲ್ಲೂಕು ಮೊದಲು ಡಿಸ್ಟ್ರಿಕ್ಟಿನ ವರೆಗೆ ಅಧಿಕಾರಿಗಳು, ಪಣಕಟ್ಟು ಪದ್ಧತಿಗೆ ವಿರುದ್ಧವಾದ ಕಾರ್ಯಗಳಂ ಮಾಡುವದಕ್ಕೆ ಅವಕಾಶ ಕೊಟ್ಟರೆ ಅನರ್ಥಗಳಿಗೆ ಕಾರಣವುಂಟಾಗುವದೆಂದು ಯೋಚಿಸದೆ ಲೈಸೆನ್ಸ್ ಕೊಟ್ಟದ್ದರಿಂದಲೇ ಇಷ್ಟು ಪ್ರಾಣಹಾನಿಗಳುಂಟಾಗುವದಕ್ಕೆ ಆಕರವಾಯಿತೆಂದು ಸ್ಪಷ್ಟವಾಗಿ ಕಾಣುತಿದೆ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವು ಮುಂದೆ ತಿಳಿಸುವೆವು

Occasional Notes.

ನೈಮಿತ್ತಿಕ ವಿಷಯನ್ಯಾಸ.

ವಾಯುವ್ಯದೇಶಕ್ಕೆ ಸೇರಿದ ಪಂಡಿತ ವಿಶ್ವಂಬರನಾಥ ಎಂಬವರು ವೈಸ್‌ರಾಯ್ ಯವರ ನ್ಯಾಯವಿಧಾಯಕ ಸಭೆಯಲ್ಲಿ ಜಾಸ್ತೀ ಇಸಂ ತರೀಖ್ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಧಾರ್ವಾಡದ ಕಲೆಕ್ಟರಾದ ಮಿ॥ ಮೂರ್ ಎಂಬವರು ಅಲ್ಲಿರುವ ಫೀಮೇಲ್ ಟ್ರೆಯಿನಿಂಗ್ ಕಾಲೇಜಿಗೆ, ಅಂದರೆ ಹೆಂಗುಸರನ್ನು ಉಪಾಧ್ಯಾಯಿನೀ ಕೆಲಸಕ್ಕೆ ತಯಾರುಮಾಡುವ ಕಾಲೇಜಿಗೆ ೧೦೦ ರೂಪಾಯಿಗಳು ಸಹಾಯ ದ್ರವ್ಯ ಕೊಟ್ಟರೆಂದು ಕೇಳಿ ಸಂತೋಷಿಸುತ್ತೇವೆ.

ಅಜಂಘರ್‌ನಲ್ಲಿ ಒಬ್ಬಾತನು ಒಬ್ಬ ಕಕ್ಷಿಗಾರನಿಗೂ ಲಾಯರಿಗೂ ಮಧ್ಯಸ್ಥ ಮಾಡಿ, ಅದಕ್ಕಾಗಿ ತನಗೆ ದಲ್ಲಾಳಿ ಕೊಡಬೇಕೆಂದು ಕೇಳಿದ ಅಪರಾಧದಬಗ್ಗೆ ಆಮನುಷ್ಯನನ್ನು ಅಲ್ಲಿನಮ್ಯಾಜಿಸ್ಟ್ರೇಟರು ಕ್ರಿಮಿನಲ್ ಚಾರ್ಜಮಾಡಿ ವಿಚಾರಿಸುತಲಿರುವಂತೆ ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತಿದೆ.

ಮುಂಬೈಯಲ್ಲಿ ಪ್ರಸಿದ್ಧ ಸಾಹುಕಾರರಾಗಿರುವ ಸರ್ದಿನ್‌ಷಾ ಮಾಣಿಕ್ಯಜಿ ಪೆಟಿಟಿ ಎಂಬ ಘನ ದೊಡ್ಡಮನುಷ್ಯರು ಯುಗಟ ಪುರಿ ಎಂಬ ಷಹರಿಗೆ ಜಲವತಿಯಂ ಕಲ್ಪಿಸತಕ್ಕ ಬಗ್ಗೆ ನಡೆಯುತಲಿರುವ ಪ್ರಯತ್ನಕ್ಕಾಗಿ ಅದರ ಮ್ಯೂನಿಸಿಪಾಲಿಟಿಯವರ ವಶಕ್ಕೆ ೧೦,೦೦೦ ರೂಪಾಯಿಗಳು ಕೊಡುವದಾಗಿ ತಿಳಿಸಿರುತ್ತಾರೆಂದು ಅರಿತು ಸದರೀ ದೊಡ್ಡಮನುಷ್ಯರ ಔದಾರ್ಯಕ್ಕಾಗಿ ಬಹಳ ಸಂತೋಷಿಸುತ್ತೇವೆ.

ಸಿವಿಲ್ ಮತ್ತು ಮಿಲಿಟರಿ ಇಲಾಖೆಗಳಲ್ಲಿ ನೌಕರಿ ಮಾಡಿ ಉಚಿತ ಕಾಲಗಳಲ್ಲಿ ನಿವೃತ್ತರಾಗುವ ಸರ್ಕಾರ್ ಉದ್ಯೋಗಸ್ಥರಿಗೆ ಕೊಡಲ್ಪಡುವ ಪೆನ್ಶನ್‌ಗಳನ್ನು ನಿಲ್ಲಿಸಿಬಿಟ್ಟರೆ ಸರ್ಕಾರದ ಖರ್ಚು ಮಿತ ಪಡುವದೆಂದು ಕರಾಚಿ ಕ್ರಾನಿಕಲ್ ಎಂಬ ಪತ್ರಿಕೆ ಅಭಿಪ್ರಾಯ ಪಡುತಿದೆ. ಇದಕ್ಕಿಂತಲೂ ಭಾರೀ ಸಂಬಳ ಪಡೆಯುವ ಅಧಿಕಾರಿಗಳ ತಲಬ್‌ಗಳನ್ನು ಕಮ್ಮಿ ಮಾಡುವದು ಉಚಿತವಲ್ಲವೆ ?

ಕಲ್ಕತ್ತೆಗೆ ಸೇರಿದ ಸಿರಾಂಪುರದ ಮ್ಯೂನಿಸಿಪಾಲಿಟಿಯ ಮೆಂಬರ್‌ಗಳ ಚುನಾವಣೆಯಲ್ಲಿ ಘೋಬಿಯುವನೊಬ್ಬನು ತಾನು ಮೆಂಬರನಾಗುವದಕ್ಕೆ ವೋಟುಗಳಂ ಸಂಪಾದಿಸಿಕೊಳ್ಳುವ ಬಹು ಪ್ರಯತ್ನ ಮಾಡಿದನು. ಪರಂತು ಆತನಿಗೆ ಪ್ರತ್ಯರ್ಥಿಯಾಗಿ ಬಂದವನಿಗೆ ಸ್ವಲ್ಪ ಬಲ ಹೆಚ್ಚು ಅವನಿಗೆ ವೋಟುಗಳು ಜಾಸ್ತಿಯಾಗಿ ಹೋದುದರಿಂದ ಘೋಬಿಗೆ ತಪ್ಪಿಹೋಯಿತೆಂದು ಕಲ್ಕತ್ತೆಯಿಂದ ತಂತಿವೃತ್ತಾಂತದ ಮೂಲಕ ತಿಳಿಯಬರುತದೆ.

ಇಂಡ್ಯಾ ದೇಶದಿಂದ ಈಜಿಪ್ಟ ದೇಶದಲ್ಲಿ ನಡೆಯುವ ಯುದ್ಧಕ್ಕೆ ಕಳುಹಿಸಲ್ಪಡುವ ಸೈನ್ಯದ ಖರ್ಚುಗಳನ್ನು ಇಂಡ್ಯಾ ದೇಶದ ಹುಟ್ಟುವಳಿಯಿಂದ ಕೊಡಿಸತಕ್ಕದ್ದೋ ಅಥವಾ ಇಂಗ್ಲಂಡ್ ಸರ್ಕಾರದವರು ಭರಿಸತಕ್ಕದ್ದೋ ಎಂಬ ಅಂಶವು ಈಚೆಗೆ ಮಹಾರಾಜ್ಞಿಯವರ ಪಾರ್ಲಿಯಮೆಂಟ ಸಮಾಜದಲ್ಲಿ ವಿಚಾರಕ್ಕೆ ವಿಷಯವಾಗಿ, ಇಂಡ್ಯಾ ದೇಶದಿಂದ ಕೊಡಿಸಕೂಡದೆಂದು ಇಬ್ಬರು ಮೆಂಬರುಗಳು ಆಕ್ಷೇಪಿಸಿರುತ್ತಾರೆ. ಇದು ಪ್ರಬಲ ವಿಷಯವಾದುದರಿಂದ ಇದರ ಪರ್ಯವಸಾನವಂ ಆತುರದೊಡನೆ ನಿರೀಕ್ಷಿಸುವೆವು.

ಬಿಹಾರ್ ಷಹರಿಗೆ ಸೇರಿದ ಗ್ರಾಮಾಂತರಗಳಲ್ಲಿ ವರ್ಷಾಭಾವದಿಂದ ನೀರಿನ ಕಷ್ಟ ಅಧಿಕವಾಗಲು ಅಲ್ಲಿನ ಜನರು, ಗ್ರಾಮಗಳಲ್ಲಿ ಅಂಗಡಿಇಟ್ಟುಕೊಂಡು ವ್ಯಾಪಾರ ಮಾಡುವದರ ಮೂಲಕ ತನ್ನಿಂದ ಸಂಪಾದಿಸುವ ಲಾಭದಲ್ಲಿ ವರ್ತಕರು ಪ್ರಜೆಗಳ ಉಪಯೋಗಾರ್ಥ ಬಾವಿಗಳು ತೆಗಿಸಬೇಕು, ಹಾಗೆ ಅವರು ಮಾಡದೆ ಹೋದರೆ ತಾವೆಲ್ಲರು ಒಗ್ಗಟ್ಟಾಗಿ ಅವರವರಿಗೆ ಬೇಕಾದ ಸಾಮಾನುಗಳನ್ನೆಲ್ಲ ಪರಸ್ಥಳಗಳಿಂದ ತರಿಸಿ ಕೊಳ್ಳುತ್ತೇವೆಂದು ವರ್ತಕರಿಗೆ ಭೀತಿಯನ್ನುಂಟುಮಾಡಿರುತ್ತಾರೆಂದು ಒಂದಾನೊಂದು ಪತ್ರಿಕೆ ತಿಳಿಸುತದೆ.

ಕಳ್ಳಿಕೋಟೆ ಪ್ರಾಂತದಲ್ಲಿರುವ ಮಾಪ್ಲೆಗಳೆಂಬ ಒಬ್ಬ ಜಾತಿ ಜನರು ಆಗಾಗ್ಗೆ ಗುಂಪುಗೂಡಿ ದರೋಡೆಗಳು, ಖೂನಿಗಳು ಮೊದಲಾದ ಕ್ರೂರಕೃತ್ಯಗಳು ನಡೆಸುತಲಿರುವ ಅಂಶವು ಪ್ರಸಿದ್ಧವಾಗಿದೆಯಷ್ಟೆ. ಸದರೀ ಜನರು ಈಚೆಗೆ ತೆಲಚ್ಚೇರಿಯಲ್ಲಿ ಒಂದು ಸಮಾಜಸೇರಿ, ಒಂದು ವೃತ್ತಾಂತಪತ್ರಿಕೆಯಂ ಪ್ರಕಟಿಸಲು ಪ್ರಾರಂಭಿಸಬೇಕೆಂತಲೂ, ಅದರಲ್ಲಿ ಪ್ರಾಧಾನ್ಯೇನ ತಮ್ಮ ಜಾತಿ ಮತ ಸಂಬಂಧವಾದ ವಿಷಯಗಳೇ ಅಡಗಿರತಕ್ಕದ್ದೆಂತಲೂ, ಯೋಚಿಸಿರುವಂತೆಯೂ, ಒಬ್ಬ ವೃತ್ತಾಂತ ಲೇಖಕರು ಮದರಾಸ್ ಸ್ಟ್ಯಾಂಡರ್ಡ ಪತ್ರಿಕೆಗೆ ಬರೆದಿರುತ್ತಾರೆ.

ಆಚೆ ಆದಿತ್ಯವಾರದದಿನ, ಬೆಳಗ್ಗೆ ಒಂಭತ್ತು ಘಂಟೆಗೆ ಮದರಾಸಿನಲ್ಲಿ ಒಬ್ಬ ವೇಶ್ಯೆಯ ಮನೆಯೊಳು ಸುಮಾರು ಹದಿನೈದು ದಿನಗಳ ಹಿಂದೆ ಹುಟ್ಟಿದ ಒಂದು ಎಳೇಮಗುವನ್ನು ತೊಟ್ಟಿಲಿನಲ್ಲಿ ಮಲಗಿಸಿದ್ದರು. ಅದರ ಕೆಳಗಡೆ ಒಂದು ದೊಡ್ಡ ನಾಗರಹಾವು ಸುತ್ತಿಕೊಂಡು ಮಲಗಿದ್ದದಂ ಮನೆಯವರು ನೋಡಿ ಕೂಗಿದರು. ಕೂಡಲೆ ಆ ಮನೆಯ ನಾಯಕಸಾನಿಯು ಓಡಿಬಂದು ಅತಿ ಧೈರ್ಯ ಸಾಹಸಗಳೊಡನೆ ತೊಟ್ಟಿಲಿನಿಂದ ಮಗುವನ್ನು ಎತ್ತಿಕೊಂಡು ಹೋದಳು. ತರುವಾಯ ಅಲ್ಲಿದ್ದವರು ಸದರೀ ನಾಗರಹಾವನ್ನು ಹೊಡೆದು ಕೊಂದುಹಾಕಿ ಹೂಳಬಿಟ್ಟರೆಂದು ಮದರಾಸ್ ಪತ್ರಿಕೆಯೊಂದರಲ್ಲಿ ಪ್ರಕಟಿಸಲ್ಪಟ್ಟಿದೆ.

ಆಫ್ರಿಕಾಖಂಡಕ್ಕೆ ಸೇರಿದ ಸೂಡಾನ್ ಎಂಬ ದೇಶದವರಿಗೂ ಬ್ರಿಟಿಷ್ ಸರ್ಕಾರಕ್ಕೂ ಈಗ ನಡೆಯುತಲಿರುವ ಯುದ್ಧಕ್ಕೆ ಇಂಡ್ಯಾದೇಶದಿಂದ ಕಳುಹಿಸಲ್ಪಡುವ ಸಹಾಯ ಸೈನ್ಯದ ಖರ್ಚುಗಳನ್ನೆಲ್ಲ ಇಂಡ್ಯಾ ರಾಜ್ಯದ ಹುಟ್ಟುವಳಿಯ ಮೇಲೆ ಹೊರಿಸುವದು ಬಹಳ ಅಕ್ರಮವಾದ ಕಾರ್ಯವೆಂದು ಆಕ್ಷೇಪಿಸಿ ಮುಂಬೈ ಪ್ರೆಸಿಡೆನ್ಸಿ ಅಸೋಸಿಯೇಷನ್ ಸಂಘದವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ ವೈಸ್‌ರಾಯ್ ಸಾಹೇಬರವರಿಗೂ ಒಂದು ಅರ್ಜಿಯನ್ನು ತಯಾರ್ಮಾಡುತಲಿದಾರೆಂದು ಮುಂಬೈ ಪತ್ರಿಕೆಯೊಂದರ ಮೂಲಕ ತಿಳಿಯಬರುತಿದೆ. ಈ ಸಂದರ್ಭದೊಳು ಇತರ ಪ್ರೆಸಿಡೆನ್ಸಿಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಸಂಘಗಳಿಂದಲೂ ಮೇಲೆ ತಿಳಿಸಲ್ಪಟ್ಟಿರುವ ರೀತಿಯಲ್ಲಿ ಅರ್ಜಿಗಳು ಕಳುಹಿಸಲ್ಪಟ್ಟರೆ ಒಂದಕ್ಕೊಂದು ಪೋಷಕವಾಗಿರುವದು

ಮುಂಬೈ ಪ್ರೆಸಿಡೆನ್ಸಿಯಲ್ಲಿ ಅಂದರೆ ಮುಂಬೈ ಕಸಬೆಯಲ್ಲಿ ಏಳು, ಅಹಮದಾಬಾದಿನಲ್ಲಿ ಐದು, ಈ ರೀತಿ ಹನ್ನೆರಡು ಅರಳೆ ಯಂತ್ರಗಳು ನೂತನವಾಗಿ ಸ್ಥಾಪಿಸಲ್ಪಟ್ಟವೆಂತಲೂ, ಇದು ಮೊದಲು ಮುಂದೆ ಎರಡು ಸಂವತ್ಸರಗಳೊಳಗಾಗಿ ಇನ್ನು ಒಂದು ಡಜನ್ ಯಂತ್ರದ ಕಾರ್ಖಾನೆಗಳು ಸ್ಥಾಪಿಸಲ್ಪಡುವ ನಿರೀಕ್ಷಣೆಯುಂಟಾಗಿರುವಂತೆಯೂ, ಈಗ ಆ ಪ್ರಾಂತದಲ್ಲಿ ಆಗುವ ಅರಳೆಗಿಂತಲೂ ಉತ್ತಮವಾದ ಅರಳೆ ಫಸಲ್ ಇಡುವದಕ್ಕೆ ಆವಶ್ಯಕವಾದ ಏರ್ಪಾಡುಗಳು ನಡೆಸಲ್ಪಡುತಿರುವಂತೆಯೂ ಪುನೆ ಮರಾಟಾ ಪತ್ರಿಕೆ ತಿಳಿಸುವದು ಮಾತ್ರವಲ್ಲದೆ, ದಖ್ಖನ್ ಪ್ರಾಂತದಲ್ಲಿ ಸ್ವದೇಶದ ತಯಾರೀ ಬಟ್ಟೆಗಳಂ ಮಾತ್ರ ಮಾರುವದಕ್ಕೆ ಅಂಗಡಿಗಳಿಡಲ್ಪಟ್ಟಿರುವಂತೆ ಸಹ ತಿಳಿಸುತಿದೆ.

ಈಚೆಗೆ ದೆಹಲಿಯಲ್ಲಿ ಮಿಷನರಿಗಳು ಒಬ್ಬ ಹುಡುಗನನ್ನು ಅವನ ತಂದೆ ತಾಯಿಗಳು ಮನೆಯೊಳಲ್ಲದ ಕಾಲದಲ್ಲಿ ಕರೆದು ಕೊಂಡು ಹೋಗಿ ಕ್ರಿಶ್ಚಿಯನ್ ಮತಕ್ಕೆ ಸೇರಿಸಿಕೊಂಡ ಸಂಗತಿ ತಂದೆ ತಾಯಿಗಳು ಬಂದಮೇಲೆ ಅವರಿಗೆ ತಿಳಿಯಬಂದು ಅವರು ಮಿಷನರಿಗಳಮೇಲೆ ಫಿರ್ಯಾದುಮಾಡಿ ಅಲ್ಲಿನ ಡಿಸ್ಟ್ರಿಕ್ಟ ಜಡ್ಜಿಯವರ ಕೋರ್ಟಿನಲ್ಲಿ ನಡೆದ ವಿಚಾರಣೆಯಲ್ಲಿ ಮಿಷನರಿಗಳು ಅಕ್ರಮ ನಡೆಸಿದ್ದಾಗಿ ಏರ್ಪಟ್ಟದರಿಂದ ಸದರೀ ಹುಡುಗನನ್ನು ಅವನ ತಾಯಿ ತಂದೆಗಳ ವಶಕ್ಕೆ ಒಪ್ಪಿಸಿ ಬಿಡತಕ್ಕದ್ದೆಂದು ತೀರ್ಮಾನವಾಯಿತು. ಪರಂತು ಆ ಹುಡುಗನು ದೆಹಲಿ ಷಹರಿನಲ್ಲೂ ಆದರ ಆಸುಪಾಸ ಪ್ರದೇಶಗಳಲ್ಲೂ ಎಲ್ಲಿಯೂ ಸಿಕ್ಕದೆ ಇರುವದರಿಂದ ಅವನು ಅವಿತುಕೊಂಡಿರುವ ಸ್ಥಳವು ಮಿಷನರಿಗಳಿಗೆ ತಿಳಿದಿರಬೇಕೆಂದು ಅಲ್ಲಿನ ಜನಗಳು ಅಭಿಪ್ರಾಯ ಪಟ್ಟಿರುತ್ತಾರೆ.

ಈಜಿಪ್ಟ ರಾಜ್ಯಕ್ಕೆ ಯುದ್ಧನೌಕರಿಯ ಬಗ್ಗೆ ಇಂಡ್ಯಾ ದೇಶದಿಂದ ಸೈನ್ಯಗಳಂ ಕಳುಹಿಸುವ ವಿಷಯದಲ್ಲಿ ಚಾಂಪಿಯನ್ ಎಂಬ ಪತ್ರಿಕೆ ತಿಳಿಸುವ ಅಭಿಪ್ರಾಯವೇನೆಂದರೆ, ಇಂಡ್ಯಾ ದೇಶದ ಸೈನ್ಯವು ಆವಶ್ಯಕವಾಗಿರಬೇಕಾದುದಕ್ಕಿಂತಲು ಅಧಿಕವಾಗಿರುವ ಪಕ್ಷದಲ್ಲಿ ಕೂಡಲೆ ಅದನ್ನು ಕಮ್ಮಿ ಮಾಡಿ, ಕುಂದಾಯದಾರರಿಗೆ ಕೇವಲ ಭಾರವಾಗಿರುವ ಖರ್ಚುಗಳನ್ನು ಎಷ್ಟು ಜಾಗ್ರತೆಯಲ್ಲಿ ಕಮ್ಮಿ ಮಾಡಿ ಜನಗಳಮೇಲೆ ಹೊರಿಸಿರುವ ಭಾರವನ್ನು ತಪ್ಪಿಸಿದರೆ ಅಷ್ಟು ಒಳ್ಳೆಯದು, ಅಧಿಕವಾಗಿಲ್ಲದ ಪಕ್ಷದಲ್ಲಿ ಇಂಡ್ಯಾ ರಾಜ್ಯಕ್ಕೆ ಯಾವ ಭಾಗದಲ್ಲೂ ಸಂಬಂಧವೂ ಪ್ರಯೋಜನವೂ ಇಲ್ಲದೆ ಕೇವಲ ಇಂಗ್ಲಂಡ್ ದೇಶದವರು ಸ್ವಪ್ರಯೋಜನಾರ್ಥ ಮಾಡುವ ಯುದ್ಧಕ್ಕಾಗಿ ಇಂಡಿಯಾ ದೇಶದ ಸರಹದ್ದಿನಿಂದಾಚೆಗೆ ಒಂದು ಸೋಲ್ಜರನ್ನಾದರು ಕಳುಹಿಸುವದು ಅಭಾಯಕರವಾದುದು, ಎಂಬುದು.

ಗುಜರಾತಿ ಮಂಡಲಿಯ ಗುರುಗಳಾದ ಶ್ರೀ ದೇವಕೀನಂದನ ಆಚಾರ್ಯಜಿ ಮಹರಾಜ್ ಯವರು ಈಗ ಉತ್ತರದೇಶದಿಂದ ಮದರಾಸಿಗೆ ದಯಮಾಡಿರುತ್ತಾರೆಯಾಗಿ ಸದರೀ ಷಹರ್ ನಿವಾಸಿಗಳಾದ ಗುಜರಾತಿ ಮಂಡಲಿಗೆ ಸೇರಿದವರು, ವಿಶೇಷತಃ ಮದರಾಸಿನಲ್ಲಿ ಪ್ರಸಿದ್ಧ ಸಾಹುಕಾರರಾಗಿರುವ ಮೆ|| ಲಾಲ್ ಕೃಷ್ಣದಾಸ್ ಬಾಲಮುಕುಂದದಾಸ್ ಯವರು ಗುರುಗಳ ಆರಾಧನೆಯಂ ನಡೆಸುತಲಿದಾರೆ. ಸದರೀ ಗುರುಗಳವರು ಸಂಸ್ಕೃತದಲ್ಲಿ ಸ್ವಯಂ ಪಂಡಿತರಾದುದರಿಂದ, ಮದರಾಸಿನಲ್ಲಿರತಕ್ಕ ಪಂಡಿತರನ್ನೆಲ್ಲ ಒಂದುದಿನ ಸಭೆ ಸೇರಿಸಿ, ಶಾಸ್ತ್ರಾರ್ಥ ವಿಚಾರ ಮಾಡಿಸಬೇಕೆಂದು ಅಪೇಕ್ಷಿಸಲು ಗುರುಗಳ ಆಜ್ಞಾನುಸಾರ ಸಾಹುಕಾರ್ ಕೃಷ್ಣದಾಸ್ ಬಾಲಮುಕುಂದದಾಸ್ ಯವರು ಅಲ್ಲಿನ ಪಂಡಿತರನ್ನೆಲ್ಲ ಕರೆಯಿಸಿ, ಈ ತಿಂಗಳ ೨೦ನೇ ತಾರೀಖಿನ ಸಾಯಂಕಾಲ ಪಚ್ಚಯಪ್ಪ ಮುದಲಿಯಾರ್ರವರ ಪಾಠಶಾಲೆಯ ಕಟ್ಟಡದ ಮಧ್ಯಹಾಲಿನಲ್ಲಿ ಸಭೆ ಸೇರಿಸಿದರು. ಮೇಲೆ ತಿಳಿಸಿದ ಗುರುಗಳವರೇ ಸಭಾಧ್ಯಕ್ಷತೆಯಂ ಕೈಗೊಂಡರು. ಕೂಡಲೆ ವೇದಾಂತ ಶಾಸ್ತ್ರ ವಿಚಾರಕ್ಕೆ ಪ್ರಾರಂಭವಾಗಿ ಬಹಳಹೊತ್ತು ನಡೆದಮೇಲೆ, ಆ ಕಾಲದಲ್ಲಿ ಸೇರಿದ್ದ ಪಂಡಿತರೆಲ್ಲರಿಗೂ ನಗದೂ, ಶಾಲುಜೋಡಿಗಳೂ ಬಹುಮಾನ ಮಾಡಿದರು. ಮೆ ಕೃಷ್ಣದಾಸ ಬಾಲಮುಕುಂದದಾಸ್ ಯವರು ಸಂಸ್ಕೃತ ಭಾಷೆಯಲ್ಲಿ ಒಂದು ವಿಜ್ಞಾಪನ ಪತ್ರಿಕೆಯಂ ಬರೆಯಿಸಿ ಅದನ್ನು ಒಂದು ಬೆಳ್ಳಿಯ ಸಂಪುಟದಲ್ಲಿಟ್ಟು ಶಾಲುಜೋಡಿ ಮೊದಲಾದವುಗಳೊಡನೆ ಆಚಾರ್ಯರವರಿಗೆ ಒಪ್ಪಿಸಿದರು. ತರುವಾಯ ಸಭೆ ಬರಖಾಸ್ತಾಯಿತು, ಎಂದು ವಗೈರೆ ಮದರಾಸ್ ಪತ್ರಿಕೆಯೊಂದರ ಮೂಲಕ ತಿಳಿಯಬರುತಿದೆ.

ಮದರಾಸ್ ಹಿಂದೂ ಪತ್ರಿಕೆಗೆ ಹೈದರಾಬಾದಿನ ವರದಿ ಕೆಂಡಂತೆ ತಂತಿ ವರ್ತಮಾನವು ಬಂದು, ಈ ತಿಂಗಳ ೧೧ನೇ ತಾರೀಖಿನ ಸದರೀ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ. ಹೈದರಾಬಾದ್ ಕೋರ್ಟುಗಳ ಅಧಿಕಾರಕ್ಕೆ ಯೂರೋಪಿಯನ್ ಜನರು ಒಳಗಾಗುವದಿಲ್ಲವೆಂಬ ಕಾರಣದ ಮೇಲೆ ಸದರೀ ದೇಶದೊಳಗಾಗಿ ಒಬ್ಬ ಯೂರೋಪಿಯನಾದರು ಜಮೀನ್ದಾರಿ ಪಡೆಯುವದಕ್ಕೆ ನಿಜಾಂ ಸರ್ಕಾರದವರು ಅವಕಾಶ ಕೊಡಲಿಲ್ಲವು. ನಿಜಾಂ ಸರ್ಕಾರದವರು ಯೂರೋಪಿಯನ್‌ರನ್ನ ದರ್ಯಾಫ್ತು ಮಾಡುವದಕ್ಕೆ ಅವರಿಗೆ ಅಧಿಕಾರವಿಲ್ಲದದ್ದಾಗ್ಯೂ ಸ್ವದೇಶೀಯರು ಯಾವಯಾವ ಹಕ್ಕುಗಳಂ ಅನುಭವಿಸುತ್ತಾರೆಯೋ ಅಂತ ಹಕ್ಕುಗಳನ್ನೆಲ್ಲ ಯೂರೋಪಿಯನ್‌ರಿಗೂ ಆ ದೇಶದಲ್ಲುಂಟುಮಾಡಬೇಕೆಂದು ಅಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಮೆ|| ಪ್ಲೌಡನ್ ಯವರು ಇಂಡ್ಯಾ ಗವರ್ನ್‌ಮೆಂಟಿನವರು ತರಫಿನಲ್ಲಿ ನಿಜಾಂ ಸರ್ಕಾರಕ್ಕೆ ಕೇವಲ ಮುಷ್ಕರವಾಗಿ ಬರೆದ ಲೇಖನವು ದಖ್ಖನ್ ಪೋಸ್ಟ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ. ಈ ಹುಕುಂ ರದ್ದಾಗದಿದ್ದರೆ, ಬೇರಂಗ್ ಬಾದಿನಲ್ಲಿ ಒಂದು ಇನಾಂ ಮೊಕದ್ದಮೆಯೊಳು ಮಿಷನರಿಗಳು ಆ ದೇಶಕ್ಕೇನೆ ಹ್ಯಾಗೆ ಭಯಂಕರರಾದರೊ ತದ್ವತ್ ನಿಜಾಂ ಸರ್ಕಾರದ ಸ್ಥಿತಿಯೂ ಆಗುವದು. ಗತಿಸಿದ ಸರ್ ಸಾಲಾರ್ ಜಂಗರವರು ಯಾವ ಕಾಲದಲ್ಲೂ ಯೂರೋಪಿಯನ್‌ರು ಜಮೀನ್ ಪಡೆಯುವದಕ್ಕೆ ಅವಕಾಶ ಕೊಡಲಿಲ್ಲವು. ಮತ್ತು ಈಗಿನ ಹುಕುಮಿನಿಂದ ಸರ್ ಸಾಲಾರ್ ಜಂಗರವರು ಕೊಟ್ಟದ್ದ ಹುಕುಂ ರದ್ದು ಮಾಡಲ್ಪಡಲಾರದೆಂದು ಕೋರುತ್ತೇವೆ. ಮೆ|| ಪ್ಲೌಡನ್ ಯವರು ಬರೆದ ಲೆಟರಿನಮೇಲೆ ಕೇವಲ ಸುಪ್ರಸಿದ್ಧರಾದ ಸಂಸ್ಥಾನದ ಜಾಯಿಂಟ್ ಸೆಕ್ರೆಟರಿಯವರು ಒಂದು ಮಿನಿಟ್ಸ್ ಬರೆದಿರುತ್ತಾರೆ, ಮತ್ತು ಈಗ ರೆಸಿಡೆಂಟರವರು ಕೊಟ್ಟಿರುವ ಹುಕುಮನ್ನು ರದ್ದು ಪಡಿಸಿಕೊಂಡು ಬರುವದಕ್ಕಾಗಿ ಸರ್ದಾರ್ ಅಬ್ದುಲ್ ಹಕ್ಕೆಂಬವರು ಇಂಗ್ಲಂಡಿಗೆ ಹೋಗಿರುವಂತೆ ವರ್ತಮಾನ ಕೇಳುತ್ತೇನೆ, ಎಂಬುದು.

LOCAL AND PROVINCIAL NEWS.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೆ|| ಮೆಕ್‌ವರ್ತ್ ಯಂಗ್ ಸಾಹೆಬರವರು ಬರುವ ತಿಂಗಳ ೧೫ನೇ ತಾರೀಖ್ ಸುಮಾರಿಗೆ ಇಲ್ಲಿಗೆ ವಾಪಸ್ ಬರುವರೆಂದು ಕೇಳುತ್ತೇವೆ.

ಈ ದೇಶದೊಳು ಗ್ರಾಮ ಪೋಲೀಸ್ ಯೇರ್ಪಾಡು ಮಾಡಬೇಕೆಂದು ಗವರ್ನ್‌ಮೆಂಟಿನವರ ಆಲೋಚನೆಯಲ್ಲಿರುವಂತೆ ಪ್ರಸ್ತಾಪಿಸಲ್ಪಡುತಿದೆ. ಇದು ಆವಶ್ಯಕವಾದ ಕಾರ್ಯವೆ.

ಈ ಸಂಸ್ಥಾನದಲ್ಲಿ ಇನ್ನು ಐದುಮಂದಿ ರೆವಿನ್ಯೂ ಪ್ರೊಬೇಷನರ್‌ಗಳು ಮೊಕರರ್ಮಾಡಲ್ಪಡುವರೆಂದು ತಿಳಿಯಬರುವದಾಗಿ ಮೈಸೂರು ಹೆರಲ್ಡ್ ಪತ್ರಿಕೆ ಪ್ರಕಟಿಸುತಿದೆ. ಇದಕ್ಕುಂಟಾದ ಕಾರಣವು ಆಶ್ರಿತರಕ್ಷಣೆ ವಿನಾ ಬೇರೆ ಯಾವದೂ ನಮ್ಮ ಬುದ್ಧಿಗೆ ಗೋಚರವಾಗಲಿಲ್ಲವು.

ಕಳೆದ ಬುಧವಾರದ ದಿನ ಮಹಾರಾಜ್ಞಿಯವರ ವರ್ಷ ವರ್ಧಂತಿಯಾದುದರಿಂದ ಅದರ ಗೌರವಾರ್ಥ ಮಾಮೂಲಿ ಪ್ರಕಾರ ಆದಿನ ಬೆಳಗ್ಗೆ ಇಲ್ಲಿನ ಮಿಲಿಟರಿ ಸ್ಟೇಷನ್ನಲ್ಲಿರುವ ವಿಶಿಷ್ಟ ಸೈನ್ಯವು ಕವಾಯತ್ ಮೈದಾನ್ನಲ್ಲಿ ಸೇರಿಸಲ್ಪಟ್ಟು ಸೈನಿಕ ವಿನ್ಯಾಸಗಳು ನಡೆಸಲ್ಪಟ್ಟವು. ಮಧ್ಯಾಹ್ನ ೧೨ ಘಂಟೆಗೆ ಸೆಲ್ಯೂಟ್ ಆಯಿತು.

ಕಳೆದ ಬುಧ ಮತ್ತು ಶನಿವಾರಗಳಲ್ಲಿ ಮಿಂಚು ಗುಡುಗುಗಳೊಡನೆ ಮೋಡ ಮುಸುಕಿ ಸ್ವಲ್ಪ ವರ್ಷಬಿದ್ದುದರಿಂದ ಭೂಮಿಯಲ್ಲಿ ತನುಹುಟ್ಟಿ ಸೆಖೆಯೂ ಬಹಳಮಟ್ಟಿಗೆ ಕಡಮೆಯಾಯಿತು. ಇನ್ನು ವರ್ಷ ಸೂಚನೆಗಳು ಕಾಣಬರುತಲಿವೆ. ಪರಸ್ಥಳಗಳಲ್ಲೂ ಅಲ್ಲಿಯಲ್ಲಿ ವರ್ಷ ಬೀಳುತಲಿರುವಂತೆ ತಿಳಿಯಬರುತಲಿದೆ. ರೋಗಾದ್ಯುಪದ್ರವಗಳು ವಿಶೇಷವಾಗಿ ಯಾವದೂ ಕಾಣಿಸಲಿಲ್ಲವು ಜನಾರೋಗ್ಯವು ಸಾಮಾನ್ಯವಾಗಿದೆ. ಆಹಾರ ಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇವಿಧವಾಗಿವೆ.

ಈಚೆಗೆ ಅರಮನೆಯಲ್ಲಿ ನಡೆದ ವಿವಾಹೋಪನಯನ ಶುಭ ಸಂದರ್ಭಗಳಲ್ಲಿ, ಅದಕ್ಕಾಗಿ ನಿಯಮಿತರಾಗಿದ್ದ ಅಧಿಕಾರಿಗಳು ತಮ್ಮ ವಿಷಯದಲ್ಲಿ ವ್ಯಕ್ತಪಡಿಸಿದ ಉದಾಸೀನ ಭಾವವಂ ನಮೂದಿಸಿ ಮೈಸೂರು ಷಹರ್ ಮ್ಯೂನಿಸಿಪಲ್ ಕಮಿಷನರ್‌ಗಳೂ, ಅಡ್ವೊಕೇಟುಗಳೂ ಸೇರಿ ಶ್ರೀಮನ್ಮಹಾರಾಣೀ ರೀಜಂಟರವರಿಗೆ ಅರ್ಜಿ ಬರೆದು ಕೊಳ್ಳಬೇಕೆಂದು ಯೋಚಿಸುತಲಿರುವದಾಗಿ ಮೈಸೂರ್ ಹೆರಲ್ಡ್ ಪತ್ರಿಕೆ ತಿಳಿಸುತಿದೆ. ಈ ಕಾಲದಲ್ಲಿ ಅರ್ಜಿದಾರರಿಗೆ ಯಾವವಿಧ ಪ್ರಯೋಜನವಾದರು ಉಂಟಾಗುವದೆಂದು ನಾವೆಣಿಸಲಾರೆವು.

ಮೈಸೂರಲ್ಲಿ ಸ್ಥಾಪಿಸಲ್ಪಟ್ಟು ನಡೆದು ಬರುವ ನಿಖಿಲರೋಗಹಾರಿ ಧರ್ಮಾರ್ಥ ಕರ್ನಾಟ ವೈದ್ಯಶಾಲೆಯಲ್ಲಿ ಕಳೆದ ಏಪ್ರಿಲ್ ತಿಂಗಳಲ್ಲಿ ೨,೭೦ ಮಂದಿ ರೋಗಿಗಳು ಔಷಧಸೇವನೆಮಾಡಿ ರೋಗ ನಿವೃತ್ತಿಯಂ ಪಡೆದಿರುವಂತೆಯೂ, ದೀರ್ಘಕಾಲಿಕವಾದ ರೋಗಗಳಿಂದ ಪೀಡಿತರಾದವರು ಯಾರು ಬಂದಾಗ್ಯೂ ಔಷದ ಕೊಟ್ಟು ಗುಣಮಾಡುವಂತೆಯೂ, ಪರಂತು ರಕ್ತವೃದ್ಧಿ ಮತ್ತು ಧಾತು ಪುಷ್ಟಿಗೆ ಔಷಧ ಬೇಕಾದವರು ಅದ್ರಗಳ ಖರ್ಚುಗಳಂ ಕೊಟ್ಟು ಮಾಡಿಸಿ ತೆಗೆದು ಕೊಂಡು ಹೋಗಬಹುದೆಂತಲೂ ಸದರೀ ವೈದ್ಯಶಾಲಾ ಸ್ಥಾಪಕರು ತಿಳಿಸುತ್ತಾರೆ.

ಸೋಮವಾರ ಮೈಸೂರ್ ಅರಮನೆಯಲ್ಲಿ ನಡೆದ ವಿವಾಹ ಮಹೋತ್ಸವಕ್ಕೆ ಸಂಬಂಧಪಟ್ಟ ವಸಂತೋತ್ಸವವು, ಬೀಗರ ಮೆರವಣಿಗೆಯೂ ನಡೆದವು. ವಸಂತೋತ್ಸವಕ್ಕೆ ಅಧಿಕಾರಿಗಳೆಲ್ಲರು ಅರಮನೆಗೆ ಹೋಗಿ ವಸಂತವನ್ನು ಹೊಯಿಸಿಕೊಂಡು ಬಂದರು. ಬೀಗರ ಮೆರವಣಿಗೆಯಲ್ಲಿ ಕತ್ತೆಗಳೇ ಸೈನ್ಯವಾಗಿತ್ತು. ಬೇಸರಕತ್ತೆಗಳನ್ನು ಗಾಡಿಗಳಿಗೆ ಕಟ್ಟಿ ಬೀಗರನ್ನೂ ಅವರ ಕಡೆಯವರನ್ನೂ ವಾಹನಗಳಲ್ಲಿ ಕೂಡಿಸಿದ್ದರು. ಎರಡು ಭೂತಗಳನ್ನು ಮಾಡಿ ಅದರ ಮೇಲೆ ಬೀಗ, ಬೀಗಿತ್ತಿ, ಎಂದು ಬರೆದು ಆನೆಗಳ ಮೇಲೆ ನಿಲ್ಲಿಸಿ ಬೀಗರ ಜೊತೆಯಲ್ಲಿ ಮೆರವಣಿಗೆ ಮಾಡಿದರು. ಸೂಳೆಯರೆಲ್ಲರು ಈ ಮೆರವಣಿಗೆಯನ್ನು ಅಲಂಕರಿಸಿದ್ದರು.

ಕಳೆದ ೧೧ನೇ ತಾರೀಖು ಭಾನುವಾರದ ದಿನ ನಂಜನಗೂಡು ತಾಲ್ಲೂಕಿಗೆ ಸೇರಿದ ಹುಲ್ಲಹಳ್ಳಿ ಗ್ರಾಮದಲ್ಲಿ ವೀರಶೈವ ಶಿವಭಕ್ತರು ಪತ್ತಿಯನ್ನು ವಿಭೂತಿ ಮೆರವಣಿಗೆ ಮಾಡಿದರೆಂದು ಅಲ್ಲಿನ ಗೌಡರೇ ಮುಂತಾದ ಜನರು ಅವರನ್ನು ಅಡ್ಡಿ ಮಾಡುವದಕ್ಕೆ ಹೋದರು ಈ ಎರಡು ಗುಂಪಿನವರಿಗೂ ಜಗಳ ಹತ್ತಿ, ಹೊಡೆದಾಟವು ಜೋರಾಗುತ್ತಾ ಬಂತು ಈ ಜಗಳದಲ್ಲಿ ಮೇಲ್ಕಂಡ ಮೆರವಣಿಗೆಯವರಿಗೆ ಹೊಲೆಯರು ಮುಂತಾದವರೇ ಎದುರು ಕಕ್ಷಿಗಾರರಾಗಿದ್ದರು. ಅರ್ಧಮೆರವಣಿಗೆ ಆಗುವಷ್ಟರಲ್ಲಿ ಕಲ್ಲುಗಳೂ ದೊಣ್ಣೆಗಳೂ ಬಹುಜೋರಾಗಿ ಬೀಳುವದಕ್ಕಾರಂಭವಾಯಿತು. ಈ ಕಾಲದಲ್ಲಿ ಪೋಲೀಸಿನವರೂ ಇನ್ಸ್‌ಪೆಕ್ಟರೂ ಹಾಜರಾಗಿದ್ದರು ದೊಂಬಿಯುದ್ಧವನ್ನು ನಿಲ್ಲಿಸಲು ಅವರಿಂದ ಆಗದೆ ಕೋಲಾಹಲವನ್ನು ನೋಡಿ ಕೊನೆಗೆ ಪೋಲೀಸಿನವರು ಒಬ್ಬಿಬ್ಬರು ಹೊಲೆಯರನ್ನು ಬಂದೋಬಸ್ತಿನಿಂದ ಹೊಡೆದು ಸುಮ್ಮನೆ ಇರುತ್ತಾರೆ ಹೊಡೆಯುವ ಕೈದಿಯಲ್ಲಿ ಆಯುಧಗಳೇನೂ ಇರಲಿಲ್ಲವೆಂಬುದಾಗಿ ಸಮಾಧಾನಿಸ ಸಾಕ್ಷಿದಾರರು ಹೇಳಿದಿರುತ್ತಾರೆ.

THE MYSORE GAZETTE.
ಮೈಸೂರು ಗೆಜೆಟು.

ಗುರುವಾರ, ತಾ|| ೨೧ ನೇ ಮೇ ೧೮೯೬.

ಮೈಸೂರ್ ಗವರ್ನಮೆಂಟಿನವರಿಂದ ಹೊರಹೊರಟ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ಬೆಂಗಳೂರು, ತಾ|| ೧೪ನೇ ಮೇ ೧೮೯೬

ನಂ|| ೧೨೫೪೨೪—ಡಾ. ೧೪೨೯—ಮೆ|| ಜೆ ಡನ್ನಿಂಗ್‌ಯವರು, ಕಡೂರು ಡಿಸ್ಟ್ರಿಕ್ಟು ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ|| ಡಿ ಎ ಬ್ಲಾರ್ಡ್ ಯವರಿಂದ ೧೮೯೬ನೇ ಏಪ್ರಿಲ್ ೩೦ನೇ ಮಧ್ಯಾಹ್ನ ಕಡೂರು ಡಿಸ್ಟ್ರಿಕ್ಟ್ ಪೋಲೀಸ ಚಾರ್ಜನ್ನು ವಹಿಸಿರುತ್ತಾರೆ.

ಮೊಕಾಂ ಮೈಸೂರು, ತಾ|| ೧೬ನೇ ಮೇ ೧೮೯೬

ನಂ|| ೧೨೫೬೨೪ ಮಿ. ೧೮೨೩—ಶಿವಮೊಗ್ಗಾ ಸಬ ಅಸಿಸ್ಟೆಂಟ್ ಸರ್ಜನರಾದ ಮೆ|| ಎಸ್. ಕೆ. ಹನುಮಂತರಾಯರು, ಮೆ|| ಸಿ. ಎ. ನಂಜಪ್ಪನವರು ರಜಾಮೇಲಿರುವ ಕಾಲದಲ್ಲಿಯೂ ಮತ್ತೊಂದು ಹುಕುಂ ಕೊಡುವ ಪರ್ಯಂತ, ಮೈಸೂರ ಸ್ಪೆಷಲ ಡ್ಯೂಟಿಯಿಂದ ಬೆಂಗಳೂರು ಸಿವಿಲ್ ಹಾಸ್ಪಿಟಲ್‌ನಲ್ಲಿ ಕೆಲಸ ಮಾಡುವುದಕ್ಕೆ ಸಂಗಾಮಿಯಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

ಬೆಂಗಳೂರು, ತಾರೀಖು ೧೮ನೇ ಮೇ ೧೮೯೬.

ನಂ|| ೧೨೫೩೦—ಮಿಸ ೧೮೬೭—ಮೆ|| ಪಿ. ಎನ್ ನರಸಿಂಹಯ್ಯಂಗಾರರು ಬೆಂಗಳೂರು ಮ್ಯೂನಿಸಿಪಲ್ ಬೋರ್ಡಿನ ಚಾರ್ಜನ್ನು ೧೮೯೬ ನೇ ಇಸವಿ ಮೇ ೮ ನೇ ತಾರೀಖಿನ ಪೂರ್ವಾಹ್ನದಲ್ಲಿ ಮೆ|| ಟಿ ಟಿ ಲಿಯನಾರ್ಡ್ ಸಾಹೇಬರವರಿಗೊಪ್ಪಿಸಿರುತ್ತಾರೆ.

ಮೊಕಾಂ ಮೈಸೂರು, ತಾರೀಖು ೧೧ನೇ ಮೇ ೧೮೯೬.

ನಂ|| ೯೯೫೪ ಬಿ ೩೮೦೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟ್ ೨ನೇ ಜನರಲ್ ಅಸಿಸ್ಟೆಂಟ್ ಕಮಿಷನರ್ ಮೆ|| ಟಿ. ಕುಪ್ಪುಸ್ವಾಮಿ ನಾಯುಡರವರಿಗೆ, ಅವರುಪಯೋಗಿಸಿಕೊಳ್ಳುವ ತಾರೀಖ ಲಾಗಾಯಿತು ಒಂದೂವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಬೆಂಗಳೂರು, ತಾ|| ೧೪ನೇ ಮೇ ೧೮೯೬.

ನಂ|| ೯೯೬೩—ಫಾ ಫೈ. ೧೦೩-೯೫ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರ್ ಮತ್ತು ಮೈಸೂರು ಫಾರೆಸ್ಟುಗಳ ಕನ್ಸರ್ವೇಟರ್ ಯವರಿಗೆ ಪರ್ಸನಲ್ ಅಸಿಸ್ಟೆಂಟರಾದ ಮೆ|| ಸಿ. ಅಪ್ಪಯ್ಯನವರಿಗೆ, ೧೮೯೬ನೇ ಮೇಸಿ ೧೫ನೇ ಮಧ್ಯಾಹ್ನ ಲಾಗಾಯಿತು ಯಾ ಅವರುಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾ|| ೧೮ನೇ ಮೇ ೧೮೯೬.

ನಂ|| ೧೮೯೪—ಎಸ್. ಎಲ್. ೩೧—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ನೇ ಆರ್ಟಿಕಲ್ ಅನುಸರಿಸಿ ಮೈಸೂರು ಗವರ್ನಮೆಂಟ್ ಕಂಟ್ರೋಲರ್ ಮೆ|| ಇ. ಆರ್ ಸುಬ್ರಹ್ಮಣ್ಯಯವರಿಗೆ, ೧೮೯೬ನೇ ಇಸವಿ ಮೇ ೨೧ನೇ ತಾರೀಖ್ ಮೊದಲು ಅಥವಾ ಅವರದನ್ನುಪಯೋಗಿಸಿಕೊಳ್ಳಬಹುದಾದ ಬೇರೆಯೊಂದು ತಾರೀಖ್ ಮೊದಲು, ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಈ ದೇಶದಲ್ಲಿ ಒಬ್ಬ ಅರಸರು ತಮ್ಮ ಮಕ್ಕಳಿಗಾಗಿ ಒಂದು ತೊಟ್ಲನ್ನು ವಿಲಾಯಿತಿಯಲ್ಲಿ ತಯಾರು ಮಾಡಿಸಿರುವರು, ಇದನ್ನು ತೂಗುವಾಗ ನಾನಾವಿಧವಾದ ರಾಗಗಳನ್ನು ಹಾಡುತಿರುವದು.

ಬರೋಡ ಗಾಯಕವಾಡ ಮಹಾರಾಜರವರು ಸವಾರಿ ಹೊರಟಿದ್ದಾಗ ದಾರಿಯಲ್ಲಿ ಒಬ್ಬ ಸವಾರನು ಕುದುರೆಯಿಂದ ಬಿದ್ದು ಕಣ್ಣು ಗುಡ್ಡೆ ಕಳಚುವಂತೆ ಇದ್ದದನ್ನು ಕಂಡು ಕೆಳಗೆ ಇಳಿದು ಅವನಿಗೆ ಉಪಚರಿಸುವದಕ್ಕೆ ಹೋಗಲು ಗುಡ್ಡೆಗಳು ಎರಡೂ ಕೆಳಗೆ ಬಿದ್ದಿದ್ದವು. ಕಡೆಗೆ ಇದು ಕಣ್ಣು ಕಟ್ಟಿಂದು ಗೊತ್ತಾಗಿ ಮಾಡಿದವನಿಗೆ ೨೦೦ ರೂಪಾಯಿ ಇನಾಂ ಕೊಟ್ಟರು.

ಬಿದರೂರಲ್ಲಿ ೫ ವರುಷ ವಯಸ್ಸಿನ ಹೆಣ್ಣು ಮಗುವು ಬೀದಿಯಲ್ಲಿ ಆಡುತ್ತಿದ್ದಾಗ್ಗೆ ಅದರ ಮೇಲೆ ಗಾಡಿ ಹಾದು ಸತ್ತುಹೋಯಿತು. ಅದರ ತಂದೆಯನ್ನು ಹಿಡಿದು ಮಗುವನ್ನು ಬೀದಿಯಲ್ಲಿ ಬಿಡಬಾರದಾಗಿತ್ತೆಂದು ಛಾರ್ಜಮಾಡಿ ಅವನಿಗೆ ೫ ತಿಂಗಳ ಸಜಾ ವಿಧಿಸಿದರಂತೆ. ಇದು ಯಾವ ನ್ಯಾಯವೋ ಗೊತ್ತಾಗುವದಿಲ್ಲವಲ್ಲಾ.

ಉದಯಪುರದ ಮಹಾರಾಜರು ತಮ್ಮ ರಾಜ್ಯದಲ್ಲಿ ರೈಲಿನ ಮೂರನೇ ತರಗತಿ ಗಾಡಿಗಳಲ್ಲಿ ಪ್ರಯಾಣ ಮಾಡತಕ್ಕ ಪ್ರಜೆಗಳ ಉಪಯೋಗಾರ್ಥವಾಗಿ ಪ್ರತಿಗಾಡಿಯಲ್ಲೂ ಒಂದೊಂದು ಕಕ್ಕಸನ್ನು ಕಟ್ಟಬೇಕೆಂದು ಅಪ್ಪಣೆ ಮಾಡಿರುತ್ತಾರೆ. ಹಿಂದುಸ್ಥಾನದ ಇನ್ಯಾವ ರೈಲಿನಲ್ಲೂ ಜನರು ದೇಹಬಾಧೆಯನ್ನು ನಿವೃತ್ತಿ ಮಾಡಿಕೊಳ್ಳುವದಕ್ಕೆ ಅನುಕೂಲ ಮಾಡಿಕೊಟ್ಟಿಲ್ಲ. ರೈಲಿನಲ್ಲಿ ಪ್ರಯಾಣಸ್ಥರಿಗೆ ವಸತಿ ಕಲ್ಪಿಸಿಕೊಡಬೇಕೆಂದು ಅಪ್ಪಣೆ ಮಾಡಿರುವದು ಇತರರೆಲ್ಲರಿಗೂ ಕಂಪನಿಯವರಿಗೆಲ್ಲ ಮೇಲುಪಂಕ್ತಿಯಾಗಿರುತ್ತೆ.

ಒಂದಾನೊಂದು ಮದ್ದಿನ ಮನೆಯ ಒಳಿಯಲ್ಲಿ ಕೆಲವರು ಕುಳಿತುಕೊಂಡಿರುವಲ್ಲಿ ಆ ಮನೆಯ ಮೇಲೆ ಒಂದು ಮಿಂಚು ಹುಳುವು ಕೂತುಕೊಂಡಿದನ್ನು ನೋಡಿ ಮದ್ದಿಗೆ ಬೆಂಕಿ ಬಿದ್ದಿತೆಂದು ಎಲ್ಲರೂ ಹೆದರಿ ಓಡಿಹೋದರು. ಅದರ ಮೇಲೆ ಮಾತ್ರ ಏನೂ ಇಲ್ಲವು, ಆಗ ಮಿಂಚು ಹುಳಕ್ಕೆ ಬರೀ ಒಳಕೇ ಹೊರತು ಸುಡುವ ಶಕ್ತಿ ಇಲ್ಲವೆಂದು ವ್ಯಕ್ತಪಟ್ಟಿತು. ಇದರಂತೆ ಉಪದೇಶಕರಾಗಿರುವರಿಗೆ ವಿರಾಗ ಬೋಧಿಸುವ ತ್ರಾಣವೇ ಹೊರತು ಆತ್ಮಜ್ಞಾನವಿಲ್ಲವೆಂದು ಒಂದಾನೊಂದು ಪತ್ರಿಕೆಯಲ್ಲಿ ಹೇಳಲ್ಪಟ್ಟಿದೆ.

ವಿಲಾಯತಿಗೆ ಸೇರಿದ ಪ್ರೆಸ್ಟನ್ ಎಂಬ ಪಟ್ಟಣದಲ್ಲಿ ೧೬ ವರುಷದ ಒಬ್ಬ ಉಪಾಧ್ಯಾಯನು ತನ್ನ ಕೈಕೆಳಗೆ ಓದುತ್ತಿದ್ದ ಹುಡುಗರನ್ನು ಕರೆದು ಅವರು ಏನೋ ತಪ್ಪು ಮಾಡಿದರೆಂದು ಹೇಳಿ ನೀವು ಬೆತ್ತದ ಏಟು ತಿನ್ನುತ್ತೀರೋ ಅಥವಾ ನಿಮ್ಮ ಬಾಯಿಯಿಂದ ೪ ಹಲ್ಲುಗಳನ್ನು ಕೀಳಿಸಿಕೊಳ್ಳುತ್ತೀರೋ ಎಂದು ಪ್ರಶ್ನೆ ಮಾಡಿದನು. ಹುಡುಗರು ಏಟು ತಿನ್ನಲಾರದೆ ಹಲ್ಲು ಕೀಳಿಸಿಕೊಳ್ಳುತ್ತೇವೆಂದು ಹೇಳಿದರು. ಅದೇ ಪ್ರಕಾರ ಉಪಾಧ್ಯಾಯನು ಆ ಬಾಯಿಯಿಂದ ಮೂರು ಮೂರು ಹಲ್ಲುಗಳನ್ನು ಕಿತ್ತುಹಾಕಿಬಿಟ್ಟನು. ಹೀಗೆಯೇ ಇವನು ಇನ್ನು ಕೆಲವು ಹುಡುಗರಿಗೆ ಇದೇ ಶಿಕ್ಷೆಯನ್ನು ಮಾಡುತ್ತಿದ್ದನೆಂಬುವದು ಊರವರಿಗೆಲ್ಲಾ ತಿಳಿದಿತ್ತು. ಆದರೆ ಯಾರೂ ಇವನನ್ನು ಕೋರ್ಟಿಗೆ ಎಳೆಯಲಿಲ್ಲ. ಕಡೆಗೆ ಈ ಹುಡುಗರಲ್ಲಿ ಒಬ್ಬ ಹುಡುಗನ ತಂದೆಯು ಇವನ ಮೇಲೆ ಫಿರ್ಯಾದು ಮಾಡಿ ೫೦ ರೂಪಾಯಿ ಜುಲ್ಮಾನೆ ಹಾಕಿಸಿದರು. ಇಂಥಾ ಉಪಾಧ್ಯಾಯರು ಈ ಕಾಲದಲ್ಲೂ ಇರುವರೇ !

EXTRACT.

ಅಪಘಾನಿಸ್ಥಾನ್ ಹತ್ತಿರ ಕಾಫಿರಿಸ್ಥಾನವೆಂಬ ಒಂದು ಗುಡ್ಡದ ಪ್ರಾಂತವಿದೆ. ಅದನ್ನು ಕಾಬೂಲ್ ಅಮೀರನು ಸ್ವಾಧೀನಪಡಿಸಿಕೊಂಡನು. ಈ ಕಾಫಿರ್ ಜನರ ರೀತಿ ನೀತಿಗಳನ್ನು ನೋಡಿದರೆ ಬಹಳ ಹಿಂದೂ ಜನಗಳ ಹೋಲುತ್ತದೆ. ಈ ದೇಶವನ್ನು ನೂರಾರು ವರ್ಷದಿಂದ ಬಹಳ ದಿವಸದಿಂದ ಇವರು ಯಾರ ಆಳಿಕೆಯಲ್ಲೂ ಇಲ್ಲದಿತ್ತು. ಆದರೆ ಅಫಘಾನ ಜನರು ಹಿಂದುಸ್ಥಾನದ ರಾಜ್ಯ ಛತ್ರದ ಆಶ್ರಯದಲ್ಲಿ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದರು. ಆದರೆ ಈ ಎಲ್ಲ ಜನರ ಸ್ವಾತಂತ್ರ್ಯವನ್ನು ಮುಸಲ್ಮಾನ ರಾಜನು ನೂತನವಾಗಿ ಹರಣ ಮಾಡಿರುವನು. ಕಾಫಿರ ಜನರು ನೋಡಿ ನೋಡುತ್ತ ಇದು ಆಗಿಹೋಗಿರುತ್ತದೆ. ಅವರಿಗೆ ಯುದ್ಧದ ಕಲೆಯು ಸುತರಾಂ ಗೊತ್ತಿಲ್ಲವು. ಶಸ್ತ್ರಾಸ್ತ್ರಗಳಂತೂ ಅವರಿಗೆ ಗೊತ್ತೇ ಇಲ್ಲವು. ಇಂಥ ಸ್ಥಿತಿಯಲ್ಲಿ ಅಫಘಾನ ರಾಜನು ಪಾಶ್ಚಾತ್ಯರ ಕ್ರಮದಂತೆ ತಯಾರಾದ ಸೈನ್ಯದಿಂದ ಸಿಪಾಯಿಗಳಿಂದ ಕಾಫಿರ ಜನರ ಸ್ವಾತಂತ್ರ್ಯವನ್ನು ಹರಣಮಾಡಿ ಅವರ ದೇಶವನ್ನು ನುಂಗಿದ್ದು ದೊಡ್ಡ ಆಶ್ಚರ್ಯವಲ್ಲ. ಆದರೆ ಕಾಲಧರ್ಮದಿಂದ ಇಂಗ್ಲೀಷರು ಅವರ ಸಹಾಯಕರಾಗಿ ದೊರಕಿರುವರು, ಮತ್ತು ಅವರು ತಮ್ಮ ಕೈಯಿಂದ ಕಾಫರ ಜನರ ಪ್ರಾಣ ಹತ್ತುವದು ಕೂಡ ಅದಷ್ಟು ಪ್ರಯತ್ನ ಮಾಡಲಾರಂಭಿಸಿದಾರೆ. ಹಿಂದುಸ್ಥಾನದ್ದು ರಕ್ಷಕರ ಪ್ರತ್ಯಕ್ಷದಲ್ಲಿ ಈ ದೇಶವು ಅಫಘಾನಸ್ಥಾನದ ಅಮೀರನಿಗೆ ಹೀಗೆ ನುಂಗುವದಕ್ಕೆ ಬಂತು ಎಂಬುವ ಇತಿಹಾಸವು ಸ್ವಲ್ಪ ಚಮತ್ಕಾರವಾಗಿದೆ. ಕಾಫರಿ ಜನರು ಮುಸಲ್ಮಾನರಾಗಿರದೆ ಇದ್ದದರಿಂದ ಅವರ ಮೇಲೆ ಅಮೀರನ ದೃಷ್ಟಿ ಇತ್ತು. ಆದರೆ ಅವರು ಜಾತ್ಯಾ ಶೂರರಾಗಿದ್ದೂ ಮತ್ತು ಹಿಂದುಸ್ಥಾನ ಸರ್ಕಾರದ ಆಶ್ರಯದಲ್ಲಿರುತಲೂ ಇರುವದರಿಂದ ಇಷ್ಟು ದಿವಸ ಅಮೀರ್ ಸಾಹೇಬರವರ ಕೈ ಸಾಗಲಿಲ್ಲ. ಆದರೆ ಸರ್ ಮಾರ್ಟಿಮರ್ ಡ್ಯುರಂಡ್ ಮತ್ತು ಅಫಘಾನಸ್ಥಾನದ ಅಮೀರ ಸಾಹೇಬರಿಗೂ ೧೮೯೩ ರಲ್ಲಿ ಒಪ್ಪಂದವಾದದರಲ್ಲಿ ಇಂಗ್ಲೀಷ್ ಸರ್ಕಾರದವರು ಅಮೀರನ ಕಡೆಯಿಂದ ಚಿತ್ರಾಳವನ್ನು ತೆಗದುಕೊಂಡು ಬದಲು ಕಾಫರ ಜನರನ್ನು ತಮ್ಮ ಜನ್ಮ ಶತ್ರುಗಳಾದ ಮುಸಲ್ಮಾನರ ಕೈಯಲ್ಲಿ ಕೊಟ್ಟರು. ಈ ಉಭಯ ರಾಜರೂ ಕೂಡಿ ಅನ್ಯರಾಜ್ಯದ ಮತ್ತು ಸ್ವಾತಂತ್ರ್ಯದ ಭಂಗವನ್ನು ಮಾಡಿಕೊಳ್ಳುವದು ರಾಜನೀತಿ ಲಕ್ಷಣವಲ್ಲ. ಕಾಫರ್ ಜನರು ಮುಸಲ್ಮಾನರಾಗಿರದೆ ಇದ್ದದರಿಂದ ಮತ್ತು ಮುಸಲ್ಮಾನ ಧರ್ಮವನ್ನು ಸ್ವೀಕಾರ ಮಾಡುವ ಮನಸ್ಸು ಅವರಿಗೆ ಇರದೆ ಇದ್ದದರಿಂದ ಅವರನ್ನು ಅಮೀರನ ಶಿಪಾಯಿ ಜನರು ಪಶುಗಳಂತೆ ನಡೆಸುತಲಿದ್ದಾರೆಂಬ ವರ್ತಮಾನವಿದೆ. ಅನೇಕಜನ ಹುಡುಗರನ್ನೂ, ಹೆಂಗುಸರನ್ನೂ ತನ್ನ ರಾಜಧಾನಿಯಲ್ಲಿ ತಂದು ಇಟ್ಟಿದಾನೆ. ಇನ್ನು ಸ್ವಲ್ಪ ದಿವಸಗಳಲ್ಲಿಯೇ ಕಾಬೂಲಿನಲ್ಲಿ ಗುಲಾಮರ ವ್ಯಾಪಾರ ಪ್ರಾರಂಭವಾಗುವದೆಂದು ಅನೇಕರು ತರ್ಕಿಸುತ್ತಾರೆ. ಈ ವರ್ತಮಾನಗಳನ್ನು ಕೇಳಿದವರ ಮೈ ಕೂದಲು ನೆಟ್ಟಗಾಗದೆ ಇರಲಿಕ್ಕಿಲ್ಲ. ವಿಲಾಯತಿಯಲ್ಲಿ ತನ್ನ ಕೃತ್ಯದ ವಿಷಯವಾಗಿ ವಿಶೇಷ ಗಡಬಿಡಿಯು ನಡೆದದ್ದು ಕೇಳಿ ಅಮೀರ ಸಾಹೇಬರವರು ಮಿಸ್ ಹ್ಯಾಮಿಲ್ಟನ್ ಎಂಬ ಸ್ತ್ರೀಯಳ ಮೂಲಕ ಒಂದು ಉಲ್ಟಾದ ಲೇಖನವನ್ನು ಪ್ರಸಿದ್ಧ ಮಾಡಿದಾರೆ. ಹ್ಯಾಮಿಲ್ಟನ್ ಎಂಬುವಳ ಸಹಿ ಇದ್ದ ಲೆಟರ್ ಟೈಮ್ಸಿನಲ್ಲಿ ಯಾವ ಪತ್ರವು ಪ್ರಸಿದ್ಧವಾಗಿರುವದೋ ಅದರಲ್ಲಿ ನನಗೆ ಎಲ್ಲ ವೃತ್ತಾಂತವನ್ನು ಅಮೀರ್ ಸಾಹೇಬರು ಹೇಳಿದರೆಂದು ಬರೆದಿದಾಳೆ. ಆದರೆ ಇದು ಸುಳ್ಳೆಂದು ಅನೇಕರ ಮತವಿದೆ. ಅಮೀರ ಸಾಹೇಬರು ಮತ್ತು ಅವರ ಕೈ ಕೆಳಗಿನ ಕೆಲವರು ಕಾಫರ ಸ್ಥಾನಗಳನ್ನು ತೆಗದುಕೊಳ್ಳುವದಕ್ಕೆ ಕಾರಣವೇನೆಂದರೆ, ಸ್ವಂತ ರಾಜ್ಯದ ರಕ್ಷಣೆಯೇ ಕಾರಣವು. ಕಾಫರ ಜನರನ್ನು ನಾವು ಚೆಟ್ಟರೀತಿಯಿಂದ ನಡಿಸಿಕೊಳ್ಳುತ್ತೇವೆ, ಮತ್ತು ಬಲವಂತದಿಂದ ಮುಸಲ್ಮಾನರಾಗುವಂತೆ ಹೇಳುತ್ತೇವೆಂಬ ಮೊದಲಾದ ಮಾತು ಸುಳ್ಳಾಗಿರುತವೆಂದು ವಿಲಾಯತಿಯವರಿಗೆ ಖಂಡಿತವಾಗಿ ಹೇಳಿದ್ದಾರೆ. ಕಾಫರ ಜನರು ಜಾತ್ಯಾ ಕ್ರೂರರಾಗಿರುವದರಿಂದ ಅವರ ಸ್ವಸ್ಥತೆ ತಯಾರು ಬೇಕಾಗಿದೆ. ಕಾಫರಸ್ಥಾನವನ್ನು ಎಂದೂ ಅಮೀರನ ವಶಪಡಿಸಲಿಕ್ಕಿಲ್ಲವೆಂದು ಇಂಗ್ಲೀಷ ಸರ್ಕಾರದ ವಚನವಿತ್ತು, ಅದರ ಚಿತ್ರಾಳವನ್ನು ಹಿಂದುಸ್ಥಾನ ಸರ್ಕಾರದವರು ಸ್ವಾಧೀನ ಮಾಡಿಕೊಂಡದ್ದರಿಂದ ಅವರು ಅದನ್ನು ಮರೆಯಬೇಕಾಯಿತು. ಆದರೆ ಇಂಗ್ಲೀಷ ಸರ್ಕಾರದವರು ಈ ವಚನ ಭಂಗ ಮಾಡಿದ ಮಹಾ ಪಾತಕದಲ್ಲಿ ಸಿಕ್ಕದೆ ಎಂದಿಗೂ ಹೊರಗಾಗಲಾರರು, ಅಂದದರಿಂದ ನಮ್ಮ ಸರ್ಕಾರದವರು ಆ ಬಡವರನ್ನು ಏನು ಮಾಡುತ್ತಾರೂ ನೋಡಬೇಕು.—ಸ. ವೃ

ADVERTISEMENTS.

NOTICE.

VIDYASARA SANGRAHA.

A TREATISE ON THE PRINCIPLES OF

HINDU MEDICINE.

Price, including Postage Rs 5—0—0

ವೈದ್ಯಸಾರ ಸಂಗ್ರಹ.

ಇದು, ಚರಕ, ವಾಗ್ಭಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ವೈದ್ಯಗ್ರಂಥಗಳ ಸಂಗ್ರಹರೂಪವಾಗಿರುತ್ತದೆ.

ಇದರ ಕ್ರಯ—ಪುಸ್ತಕದ ಮತ್ತು ಅಂಚೆ ಹಾಸಲು ದರ್ಜಲ್ ಪ್ರತಿ, ಒಂದಕ್ಕೆ ರೂ, 5—0—0

BANGALORE CITY MUNICIPALITY
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸ್.

ತಾರೀಖ್ ೧೧ನೇ ಮೇ ೧೮೯೬.

ಮ್ಯುನಿಸಿಪಲ್ ರೆಗ್ಯುಲೇಷನ್‌ಗಳ ೨೦ನೇ ಸೆಕ್ಷನ್ ಅನುಸರಿಸಿ, ೧೮೯೬ ನೇ ಇಸವಿ ಮೇ ೨೬ ನೇ ತಾರೀಖ್ ಮಂಗಳವಾರದ ದಿನ ಸೇರುವ ಸಾಮಾನ್ಯ ಸಭೆಯಲ್ಲಿ ಇದರಡಿ ತಿಳಿಸಲ್ಪಡುವ ವಿಷಯಗಳು ಚರ್ಚೆಯ ಬಗ್ಗೆ ಬೋರ್ಡಿನ ಮುಂದೆ ಇಡಲ್ಪಡುವವು :—

೧. ಮಾರ್ಕೆಟ್ ಸೂಪರ್‌ಡೆಂಟ್ ಮತ್ತು ಬಾಡಿಗೆ ಗಾಡಿಗಳ ಇನ್ಸ್‌ಪೆಕ್ಟರು ೧೮೯೬ನೇ ಇಸವಿ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ [illegible] ಕೆಲಸ ನೋಡಿದ ಬಗ್ಗೆ [illegible] ತಮಗೆ ಸಲ್ಲಬೇಕೆಂದು ೧೮೯೬ನೇ ಇಸವಿ ಏಪ್ರಿಲ್ [illegible] ರೂಪಾಯಿ [illegible]

೨. [illegible] ನೇ ಡಿವಿಜನ್ನಿನಲ್ಲಿ ಜಾಸ್ತೀ ಕೆಲಸ ಮಾಡಿದ ಬಗ್ಗೆ ಕಳುಹಿಸಿದ ೪೩—೧೨—೮ ರೂಪಾಯಿಗಳ ಬಿಲ್

೩. [illegible] ಮ್ಯುನಿಸಿಪಾಲಿಟಿಯವರು ತೆಗೆದುಕೊಂಡು [illegible] ವಿಷಯದಲ್ಲಿ I ನೇ ನಂಬರ್ [illegible] ಕಮಿಷನರವರು ೧೮೯೬ನೇ ಇಸವಿ [illegible] ಮಾಡಿದ ರಿಪೋರ್ಟ್.

೪. [illegible] ೧೮೯೬ನೇ ಇಸವಿ [illegible] ಮತ್ತು [illegible] III ನೇ ನಂ [illegible] ಅನುಸರಿಸಿ, ನೇಮಕಮಾಡಲ್ಪಟ್ಟ ಸಬ್ ಕಮಿಟಿಯವರು ೧೮೯೬ನೇ ಇಸವಿ [illegible] ಮಾಡಿದ ಪ್ರೊಸೀಡಿಂಗ್ಸ್

೫. [illegible] ರಸ್ತೆಯಲ್ಲಿರುವ ತನ್ನ ಮನೆಯ [illegible] ಬಗ್ಗೆ ೧೮೯೬ನೇ ಇಸವಿ ಏಪ್ರಿಲ್ [illegible] ತಾರೀಖಿನಲ್ಲಿ ಬರಕೊಂಡ ಅರ್ಜಿ.

೬. [illegible] ಲೆಕ್ಕಗಳು ತಯಾರಿಸುವದಕ್ಕೂ, [illegible] ಬೋರ್ಡ್ ಆಫೀಸು ಈ ತಿಂಗಳ ೧೧ನೇ [illegible]

T. T. LEONARD,
President
City Municipal Commn.

ಈ ಕಂಪನಿ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಕೃಷ್ಟ ಔಷಧಿಯು.

ಅತ್ಯುತ್ಕೃಷ್ಟತರವಾದ ಔಷಧಿಗಳಿಂದ ತಯಾರಿಸಿದ ಈ ಉತ್ಕೃಷ್ಟಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಬೀಜಗಳ ಪುಡಿಗಳನ್ನು ಕೊಟ್ಟು, ತುಪ್ಪದೊಳಗೆ ಹಾಕಿಸಿ, ಒಳ್ಳೇ ಜೇನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಬಿದ್ದ ಮಾಡಿರುತ್ತೇವೆ. ಈ ಉತ್ಕೃಷ್ಟಗಳು ಮಹಾ ಔಷಧಿಗಳಾದ್ದು, ಒಳ್ಳೇ ರುಚಿಯುಳ್ಳವಾಗಿ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಜಡಿಯ ವ್ಯಾಧಿಗಳು ಹೋಗುತ್ತವೆ. ೬೦ ವರ್ಷಗಳ ವಯಸ್ಸುಳ್ಳ ಮುದುಕರ ಆಯುಷ್ಯವನ್ನು ಕಾಮವಿಕಾರವಾದರೂ ತರುಣರಂತೆ ಪ್ರಾಪ್ತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಮಲವಿಸರ್ಜನೆಯ ಮುಂಚೆ ಅಥವಾ ಹಿಂದೆ ಸೋರಿಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಲ್ಲಿ ವೀರ್ಯವು ಬೀಳದು ಮೈ ಬಣ್ಣವು ಸುಧಾರಿಸುತ್ತದೆ. ಪರಮಾ ಹಾಗೂ ಉಷ್ಣಸಂಬಂಧಿಕ ರೋಗಗಳ ಕಸರು ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತೂಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವವೊಂದೆ ಸಲ ಕೊಡಲೇ ಸ್ವಚ್ಛ ಶೌಚವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಯೋಗ್ಯ ರೀತಿ ಇದ್ದಲ್ಲಿ ೧೧ ದಿವಸಗಳ ವರೆಗೆ ಸಲಾಮ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆದಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳ ವರೆಗೆ ಸಾಲತಕ್ಕ ೧ ಡಬ್ಬಿಗೆ ೧—೮—೦ ರೂ|| ಒಂದೇ ಸಾರಿಗೆ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಕೃಷ್ಟಿಯಿಂದ ಹೆಂಗಸರು ಸತೇಜರಾಗುತ್ತಾರೆ. ಶರಗಿನ ರೋಗವೂ ಮೊದಲಾದ ರೋಗಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿತಾಗಿ ಬೇಡೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ ಜನರಲ್ಲಿ ಒಳಳ ಡಬ್ಬಿಗಳು ಖರ್ಚಾಗುತ್ತವೆ. ಈ ಔಷಧವು ಈ ಕಂಪೆನಿಯ ಹೊರತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯರು ಇದನ್ನು ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಖರ್ಚು ವ್ಯಾಲ್ಯು ಪೆಯಬಲ್ ಬೆಚ್ಚ ಬೇರೆ ಕೊಡಬೇಕು. (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಜೂರ ಹಾಕಿ ರವಾನಿಸುವವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು)

ಮೇನೇಜರ್—ಪಿ ಎಸ್ ಎ. ಬ್ರದರ್ಸ್ ಮತ್ತು ಕಂಪೆನಿ,

ಸೆಕೆಂಡ್ ಇಂಗ್ಲಿಷ್ ಬ್ರಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವಿ.

ಪೋಸ್ಟ್—ಬೆಳಗಾಂವಿ. Post BELGAUM.

BANGALORE.—Printed and Published at the KARNATAKA PRESS, No. 40, HOSPITAL ROAD, CITY.—1896

THE

Karnataka Prakasika.

ಚಂದಾದರಗಳು.—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸೇರಿ.

ಸಾಲ 1 ಕ್ಕೆ	.. 3 0 0	ಸಾಲ 1 ಕ್ಕೆ	. 4 0 0
6 ತಿಂಗಳಿಗೆ	2 0 0	6 ತಿಂಗಳಿಗೆ	2 8 0
3 ತಿಂಗಳಿಗೆ	... 1 1 0	3 ತಿಂಗಳಿಗೆ	.. 1 8 0

ಕರ್ಣಾಟಕ ಪ್ರಕಾಶಿಕಾ.

Published Every Monday Morning.

ಪ್ರಕಟನೆಯ ರೇಟು. { ಮೊದಲನೆಯ ದಫಾ ಪಙ್ಕ್ತಿ ಒಂದಕ್ಕೆ 0 2 0 / ಎರಡನೆಯ ದಫಾ ಪಙ್ಕ್ತಿ ಒಂದಕ್ಕೆ 0 1 0

[ಜ್ಞಾಪನ.- ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಹಾಯಿಸಿದರೂ ಪಙ್ಕ್ತಿ ಒಂದಕ್ಕೆ ೧ ಆಣೆ ಯಂತೆಯೇ ಲೆಕ್ಕ ಮಾಡಲ್ಪಡುವದು.]

ಪ್ರಕಾಮವಿವಿಧಪ್ರವೃತ್ತ್ಯುಪಗತಪಾರ್ಥ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸುಪತ್ರಿಕೋಚಿತಾ ॥ ವ್ಯಗಾಂಕಹಿತವಾಸರನಿಹಿತಮುದ್ರಣಾ ಸಜ್ಜನಸ್ತ್ಯಪಿ ಬುಧಸುಪಠಿತಾ ದಿಶತಿವಾನಸಂಸಂಮುದಂ ॥

Vol. XXIII. BANGALORE:—MONDAY, JUNE 1, 1896. No. 22.

Select Telegrams

London, 23rd May.—After sitting all night, the Commons have passed the Agricultural Rating Bill through the Committee stage.

Five members, including Messrs. Dillon, Tanner and Lloyd George, have been suspended for a week for refusing to quit the House for a division as a protest against imposing the closure.

London 24th May.—Li Hung Chang, who has been interviewed at Moscow, said that his only mission, apart from the coronation of the Czar, was to study European systems, with a view to introducing reforms into China. The Chinese Government, he said, had no treaty with Russia, but was entirely in accord with her in every respect, and desired a similar excellent relation with France. It was difficult, he said, to ascertain the relations with Great Britain until he had visited London.

London, 26th May.—Insurrection among the Dungans in North West China has been renewed, and the rebels have captured the town of Kinyakwen.

Paris 26th May.—The *Gaulois* publishes an account of an interview that has taken place at St. Petersburg between the Czar and M. Faurone, in which His Majesty declared that he would support France in the Egyptian question to the end.

St. Petersburg, 26th May.—The coronation of the Czar was completed this forenoon here. It was a splendid pageant and the ceremony was most impressive. Bright sunshine prevailed throughout.

London, 28th May.—St. Louis, in Missouri has been fearfully devastated by a cyclone in which it is estimated that thirteen hundred people were killed.

THE

Karnataka Prakasika.

MONDAY, JUNE 1, 1896.

THE ADMINISTRATION OF TRAVANCORE.

IV

We shall conclude this series of articles by giving one on the state of education in the Province of Travancore. Progress was made during the year. At the close of the year under report the total number of schools was 2,816, and the total number of scholars 1,31,294. There was thus an increase in the number of schools of 158, and of 12,218 in the number of scholars. The increments were 5·6 per cent in the number of schools, and 9·3 per cent in the number of pupils. The department is to be congratulated on such a result. The increase in the number of scholars was largely due *to the opening of new schools.* The improved system of inspection and control during the year tended to keep up existing schools, and also allowed the operation of more effective methods of registration. During the period under review schools increased from 2,658 to 2,816 and the pupils from 1,19,016 to 1,31,294. These results will bear comparison with any other part of India. During the year Government schools increased by 45, private aided schools decreased by 72, while private unaided schools increased by 165. The attendance in Government schools increased by 4,437; in aided schools it fell back by 3,790, while in private unaided schools the number increased by 11,501. The decrease in the number of aided schools is partially due to a few schools having been taken over by Government, but chiefly to a considerable number having had their grant withdrawn owing to insufficiency or other causes. The share undertaken by Government in late years in the education of the children of the State has increased considerably not only in the shape of accession under purely Government institutions, but also under aided institutions. Local conditions are such that primary education in order that it may be sufficiently wide spread and thoroughly efficient must depend more or less on direct Government management, at least for sometime to come. A table given shows as that of the entire population, 5·1 per cent were under instruction at the end of the year, being thus markedly in advance of the previous year, when it stood at 4·65 per cent. The table also shows that of the population of school going age, 33·1 per cent of the males and 9·8 per cent of the females were at school, the corresponding figures for 1893-94 were 30·62 and 8·27 respectively. Both results indicate that the proportion of the population which in Travancore, is under instruction, continues to be maintained considerably above that in the adjoining parts of British India. This is very satisfactory. Out of the school going population between 5 and 14 years of age, 33·1 per cent of the males and 9·8 of the females were under instruction. The corresponding figures for the four years preceding were in the case of males 20·6, 29·06, 30·62 and 33·1 per cent, and in the case of females 7·2, 8·18, 8·27 and 9·8 per cent. The number of girls under instruction at the end of the year was 28,933 which shows an increase of 4,460. From a table given it will be seen that not only has the number of girls under instruction been increasing of late years, but there has also been an advance in the relative proporation to the number of boys under instruction. We are told that all classes of the community have contributed to the increase in the number of pupils. Brahmins, Malayali Sudras, and Mahomedans formed the larger proportions of the total number than in the year before. There was a notable increase in the number of Mahomedans under instruction. The net cost to Government was Rs 2,91,687-6-7, which was more than the year before by Rs 55,496-8-4 and gives a rate of Rs 3-3-3 per pupil. We are told that the question of revising the conditions of aid given to educational institutions received the attention of Government during the year. The want of a system prescribing definitely the conditions upon which aid is to be given, the basis upon which the amount should be fixed, the curriculum of studies to be followed, and the general regulations for the management of aided schools, had been much felt. So, the draft of a comprehensive measure was published previous to the *beginning of the year under review,* and criticism and suggestions were invited from those engaged or interested in educational work. The code, after being modified, was sent forth in December 1894, under the title of "Travancore Educational Rules." The number of Arts Colleges at the end of the year was three. Of these one is under Government management and is a First Grade College, affiliated to the University of Madras and preparing students *for the B. A. degree. This is the* Maharajah's College at Trivandrum. The other two are private institutions and are Second Grade Colleges. There is also a Law College which appears to be doing good work. It has turned out a number of men to practise in the law, and the numbers attending are on the increase. The educational department of Travancore compares well with that in any other part of the country, and all concerned are to be congratulated on this fact.

News and Notes.

Some high prices were paid for fine old French snuff boxes, at Christie's on May 6—*£1,800 for one, £1,100 for another, and £600* for a third.

His Highness the Rajah of Parlakimedi has been pleased to give Rupees 12,000 to one Mr. Lakshminarayana Patnaik to proceed to England and study for the Civil Service Examination.

A Proclamation by the Governor-General in Council declares that the Thalweg of the Mekong river shall be the boundary between the possessions or spheres of influence of Great Britain and France respectively.

The *Indian Mirror* announces that Mr. W. S. Caine, M. P., who is to come here in November will be chosen as President of the next Congress. He has left the question to be decided by the native members.

In consequence of Government declining to accord their sanction to hold a raffle in aid of the orphanages, for which an application had been made by Bishop Meyer, a gigantic Fancy Bazaar, lasting for three days, is to be held.

Rain fell generally on Sunday in Lower Burma, Assam, Central and North Bengal and South of the Peninsula, while local showers are reported from Upper Burma and one or two stations in Upper India. Cuddapah reports two inches which is the heaviest fall.

A number of packages sent by the Indian Government *to the Secretary of State* for Foreign Affairs for presentation to the Queen from the Ameer of Afghanistan arrived at Plymouth lately from Bombay. It is understood that the value of these presents is about £120,000.

The Deputy Magistrate of Agra has just sentenced one Amin to two months' imprisonment on the charge of chopping off the nose of his brother's wife and her paramour. The man finding the two in one bed, first tied them with rope and then without difficulty disfigured both.

At the village of Telode in Dhulia a dacoity was committed the other night. The dacoits entered the house occupied by a *mali* and the latter seized one of the robbers, but another of the gang promptly rescued his comrade by chopping off the poor *mali's* arms. The *mali* is reported to be in a dying condition.

The *Indian Mirror* learns that an article on the life and teachings of Sri Ramkrishna Paramhansa will soon appear in the pages of the *Nineteenth Century* from the pen of Professor Max Muller. A similar article is shortly expected from Mr. C. H. Tawney in the pages of the *Asiatic Quarterly Review.*

The biggest plough on earth is now in the possession of a Californian farmer. It takes *fifty horses or seventy five oxen to draw it* along while four men are required at the handles. Horses, fortunately, are cheap in that part of the world, and consequently some little saving is effected.

The Czar has issued a manifesto on the occasion of his coronation, in which he remits all arrears of taxation, and reduces the land tax by a half for ten years. He also grants amnesties to all minor offenders and remits and reduces others sentences. *With regard* to political exiles, His Majesty authorises the Minister of the Interior to extend further remissions where deserved.

Society in St. Petersburg is considerably agitated over a Court regulation recently issued by the Tsaritsa prohibiting her ladies and *female* servants from using tobacco in or about the Palace. Those who have lived in Russia will understand and appreciate the importance of such a prohibition *to* women who are rarely without a cigarette between their lips.

The Sultan of Turkey seems to be a greater fool than he is taken to be. For some days the Turkish newspapers were forbidden to make any mention of the death of the Shah. They were then authorised to announce the fact without stating the cause, the object being to prevent the Mahomedan population from hearing of the assassination, which put the Sultan in a state of extreme terror.

Colonel Holdich and Lieutenant MacMahon have completed the demarcation of the Perso-Baluchistan and Indo Afghan frontier. This, says the *Times*, concludes the demarcation work, which has been in progress for two years. The North-West frontier from the Pamirs to the Persian Gulf is now marked out except a short section from the Khyber to the Kunar valley, which, however, is laid down in the Durand treaty with the Ameer.

A disastrous fire occurred on the (24th) noon at Jagannaykapore part of Cocanada. About three thousand houses were reduced to ashes. Six deaths have been noticed up till now. In one house the mother-in-law, wife and son were found dead, the husband himself lingering in the hospital. Domesticated animals and birds died in numbers. Many Eurasians and Native females are rendered completely destitute. The estimated loss of property is about a lakh.

It is reported that Mr. George Curzon will shortly attend at Windsor for the purpose of introducing to the Queen Sirdar Jar Mahomet Khan, the Agent of the Ameer of Afghanistan in Bombay, who is the bearer of gifts to the Queen which are valued at 13 lakhs of rupees, or £130,000. The gifts are in acknowledgment of the hospitality shown to the Shahzada during his visit. The gifts are stated to exceed in value anything of the kind that has ever reached the Crown.

Electricity has invaded the Royal residence at Windsor. Electric bells, lifts, telephones, etc., have been introduced, and now her Majesty can hold communication with members of the Royal Family in the vicinity

and will ere long be able to confer with her Ministers at their offices in Whitehall This will be a great convenience to all parties, but surely the prestige of royalty will suffer Fancy Lord Salisbury "ringing up" the Queen by telephone!

THE Government of India in reviewing the Madras Irrigation Report for 1894 95 note that 830 lakhs have been spent on irrigation in the Southern Presidency, but this has been considerably increased during the past year, as the Periyar project was completed The interest earned was 7 61 per cent on the Major Works and 19 45 on the Minor Works The value of the crops irrigated during the year was 669 lakhs, showing the enormous benefit which the country derived from its canals

A WRITER in the *Saturday Review* deals with the personal character of the President of the Transvaal republic a man of honesty, courage and piety, of rugged strength and within a smaller circle showing many of the qualities which distinguished Oliver Cromwell Among the stories told of his power of will and physical endurance is this that he himself amputated the thumb of his left hand which had been injured by a gun explosion, or 1 another that he prised out an aching tooth with his pocket knife These last facts, Mr Herbert Spencer we are afraid, would put down to the man's deficient nervous development

The Champion says —Now, we say that India having not the ghost of an interest in Egyptian affairs, she is simply rendering loyal assistance to England by lending her troops But says wealthy England, "No, you must render this assistance at your own cost. You are good for that and I must save my own pocket" A more barefaced and more mean request she could not make, knowing well the iniquity in principle of such a request, and, secondly, the far from prosperous condition of the Indian finances This iniquity should be *exposed at all hazard and for the very honour* of England she should be shamed into bearing the cost herself or dividing it with the Egyptians.

The *Mysore Herald* highly extols a certain lady, named Gnana Sundari who is on a visit to Mysore and who seems to be a great Sanskrit scholar and poet The lady belongs to the Devadasi class, but is of a spotless character She seems to have taken the Mysore Darbar by storm and Her Highness the Maharani-Regent has been consulting the Pundits of the place, whether the lady deserved the title of *Kavy Ratnam* She is the author of 24 works in Sanskrit, some of them be *ing tracts consisting of from 8 to 100 stanzas* A few of them are works containing about a thousand stanzas Such a lady, to whatever class she may belong, is an honour to her country and her race —*H.*

An interesting incident in the reign of Queen Victoria occurs this year, in the fact that, if she survives, hers will become the longest reign of any Sovereign within the British Islands Hitherto the longest reign has been that of George III, who ascended the throne on October 25th, 1760, and reigned till January 29th, 1820 He thus occupied the throne for 59 years 96 days Queen Victoria began to reign on June 20th, 1837, *In her case 59 years 96 days will expire on* September 24th, 1896 At that date her reign will, if she be still with us, equal that of George III, and after that hers will be the actual longest reign in England Already she is the longest actively reigning sovereign, as for several years before his death George III, was under a Regency We are indebted to a home paper for these interesting details

COMMENTING upon the paragraph in the *Globe* in reference to the allegations made by the *Bangalore* regarding Mr Justice Burkitt, the latter journal writes "The *Globe* has come back to the charge, and urges upon the Government either to prosecute us or to direct an open and exhaustive enquiry into the allegations which we have made regarding Mr Justice Burkitt We shall be satisfied with either course, for as the result of an enquiry we believe that our allegations will be completely proved We are prepared to give the Government the names of our informants who were in Court when the occurrence took place, and their statements will fully bear out our view of the matter We unflinchingly stand by what we have already urged *If it is scurrility and disloyalty to state the truth* and to expose highhandedness, we are certainly guilty of both"

Local and Provincial.

THE DEWAN —Will return from Ootacamund in a few days

THE SCHOOLS.—That were closed for the midsummer vacation will re open in a few days

THE RESIDENT —Will return to Bangalore from the Hills about the middle of this month

MR. H. J BHABHA —This gentleman, Inspector General of Education, who has gone to England, is expected to return on the 17th instant.

POLICE—M Cini, Superintendent of Police, having proceeded to Messrs Mc Fullerton, Assistant Superintendent of Police, Madras, has been appointed to take his place

THE Bangalore Cantonment Municipal Commission have offered Messrs Arbuthnot & Co, the right of laying down a tramway in this station, provided that if the profits of the tramway exceed 15 per cent the Company pay the Municipality a certain percentage of the profits

SANCTION —The Government of Mysore requested the Government of India with reference to the period of service of Col Campbell Walker The Government of India has limited the period of the Colonel's service for three years or whether should his health prevent him from rendering further service

THE WEATHER —This has most decidedly changed for the better of late The mornings are cool and pleasant, and so are the nights. The days are somewhat warm The place is looking very well The grass is green, and the trees have been washed clean, and look very nice Upon the whole there is not much to complain of

A FIRE.—The other day, while the passenger train was nearing the Kengeri Semaphor Signal post, some sparks of the engine fell on the thatched huts of the chucklers of Kengeri and completely burnt them, about ten in number It is said that this is the third time these huts caught fire from the sparks of the Railway Engine —D P.

EDUCATION —From the beginning of the new official year, classes for Taluk Mastries, Tank Inspector, and Sub Overseers' test, will be opened in the Mysore Industrial School This is doubtless a step in the right direction Candidates preparing for these examinations from here and from the moffussil had to attend the technical branch of the Narayanaswami Mudaliar High School, Candidates from Mysore need no more come here to prepare for the said examinations.

WIDOW RE MARRIAGE —The fact that *lectures delivered on Social Reform have* not been in vain, has been realized by a widow re marriage having been performed at Gavipurum, in the City, the other day The parties to the wedding were Naidus The bride and the bridegroom were aged 13 and 25 respectively, There was a large gathering present. The ceremonies were gone through as mentioned in the Shastras The Brahmins who performed the sacred ceremonies on the occasion deserve much *credit for the bold step they* undertook in performing a ceremony, which is considered non Shastraic by the anti reformers Many guests partook of dinner on the occasion as a proof of their approval of widow remarriage. We wish the married couple a long life of unalloyed happiness and prosperity

ಕರ್ನಾಟಕ ಪ್ರಕಾಶಿಕಾ.

೧೮೯೬ ನೇ ಇಸವಿ ಜೂನ್ ತಾ|| ೧ನೇ ಸೋಮವಾರ

ವಿವಾಹ ಪರಿತ್ಯಾಗ ಪ್ರಯತ್ನೋದ್ದೇಶಗಳು.

ಇಂಗ್ಲಿಷಿನವರಲ್ಲಿರುವ ಸುಗುಣಾಂಶಗಳಂ ಕಂಡು ಹಿಡಿದು ಅವಂ ಪರಿಗ್ರಹಿಸಲಿಕ್ಕೆ ಇಂಡ್ಯಾದೇಶೀಯರು ಉಚಿತಪ್ರಯತ್ನವಂ ಮಾಡದಿದ್ದರೂ ಆಕ್ಷೇಪಣೀಯಗಳಾದ ಪ್ರತ್ಯುತ ಅನರ್ಥಕಾರಿಗಳಾದ ದುರ್ಗುಣಗಳಂ ಆದರಾತಿಶಯದೊಡನೆ ಸ್ವೀಕರಿಸಿ ಸಂತೋಷಿಸುವುದು ಕೇವಲ ವಿಷಾದಿಸಬೇಕಾದ ಅಂಶವಾಗಿರುತಿದೆ. ಹಿಂದೂಗಳಲ್ಲಿ ವಿವಾಹವೆಂಬದು ತದಾಶ್ರಮೋಚಿತ ಧರ್ಮರಕ್ಷಣಾರ್ಥ ಶಾಸ್ತ್ರೀಯವಾಗಿಯೂ ಮಂತ್ರಪೂತವಾಗಿಯೂ ಮಾಡಿಕೆ ಇಲ್ಲಲ್ಪಡುವಂತ ಪ್ರತಿಷ್ಠಾಪೂರ್ವಕವಾದ ಸಂಬಂಧ ರೂಪವಾಗಿರುತದೆ. ಇಂತ ವಿವಾಹದಿಂದ ಭರ್ತೃ ಭಾರ್ಯೆಯರಿಗುಂಟಾಗುವಂತ ಗೋತ್ರ ಸೂತ್ರ ಆಶೌಚ ಪಿಂಡೋದಕಾದಿ ಸಂಬಂಧವು ಶರೀರ ವಿಯೋಗಾನಂತರ ಕೂಡ ನಿವೃತ್ತಿಯಾಗದೆ ಅನುಸರಿಸಿ ಬರತಕ್ಕದ್ದಾಗಿರುತದೆ. ಏವಂವಿಧವಾದ ಸಂಬಂಧ ಬಂದಲ್ಲಿ ಭಾರ್ಯೆಯು ಪತಿಯ ಅರ್ಧಾಂಗಿಯೆಂತಲೂ, ಸಹಚಾರಿಣಿಯೆಂತಲೂ, ಕುಟುಂಬಿನಿಯೆಂತಲೂ ವ್ಯವಹರಿಸಲ್ಪಡಲಿಕ್ಕೆ ಕಾರಣವಾಯಿತು. ಇದಲ್ಲದೆ ಅಪುತ್ರವಂತರಾದ ಭರ್ತೃ ಭಾರ್ಯೆಯರ ಸಂಸ್ಕಾರವು ಸಹ ಅವರೊಳೊಬ್ಬರಿಂದಲೇ ನಡೆಸಲ್ಪಡುವ ವಾಡಿಕೆ ನೆಲೆಗೊಂಡಿರುತದೆ. ಇಂತ ಚಿರ ನಿರೂಢವಾದ ಸಂಬಂಧವು ಈಗ ನಮ್ಮ ಜನಗಳಲ್ಲಿ ಇಚ್ಛಾಮಾತ್ರದಿಂ ನಿವೃತ್ತಿಸಲ್ಪಡಲಿಕ್ಕೆ ಪ್ರಾರಂಭವಾಗಿರುವದಂ ಕೇಳಿ ಬಹಳ ಆಶ್ಚರ್ಯಪಡಬೇಕಾಗಿದೆ. ವಿವಾಹಕ್ಕೆ ಆಮುಷ್ಮಿಕ ಧರ್ಮೋದ್ದೇಶವಲ್ಲದೆ ಕೇವಲ ಐಹಿಕ ಭೋಗಾನುಭವವೇ ಮುಖ್ಯೋದ್ದೇಶವೆಂದು ಭಾವಿಸಲ್ಪಡುವ ಪಕ್ಷಕ್ಕೆ ಕ್ರಯಲಬ್ಧೆಯಾದ ಕುಲಟೆಗೂ, ಪಾಣಿಗ್ರಹೀತೆಯಾದ ಸಾಧ್ವಿಗೂ ತಾರತಮ್ಯ ಬಹಳ ವಿಲ್ಲದೆ ಹೋಗುತದೆ. ಹಿಂದೂಗಳು ತತ್ವಜ್ಞಾನಾನುಗುಣವಾಗಿಯೂ, ಆಳುವಂತ ರಾಜರ ಇಚ್ಛಾನುವರ್ತಿಗಳಾಗಿಯೂ ನಡೆಯತಕ್ಕವರೆಂಬದಕ್ಕೆ ಸ್ವಲ್ಪಮಾತ್ರವೂ ಸಂದೇಹವಿಲ್ಲವು. ಮುಸಲ್ಮಾನರ ಪ್ರಭುತ್ವದೆಶೆಯಲ್ಲಿ ಸದರೀ ಜನರು ಅವರಿಂದನುಷ್ಠಿತವಾದ ಕೆಲವು ಆಚಾರಗಳನ್ನೂ, ವಸ್ತ್ರಧಾರಣಕ್ರಮವನ್ನೂ, ಆಭರಣಗಳನ್ನೂ, ಆಹಾರಗಳನ್ನೂ ಸ್ವೀಕರಿಸಿ ತಮ್ಮೊಳು ಅವಂ ವ್ಯವಹಾರವೊಳು ತರಲಾರಂಭಿಸಿದರು. ಅದೇರೀತಿ ಇಂಗ್ಲಿಷಿನವರ ಆಳ್ವಿಕೆಯು ಈ ದೇಶದಲ್ಲಿ ನೆಲೆಗೊಂಡು ದೀರ್ಘಕಾಲವಾದುದರಿಂದ ಅನೇಕ ವಿನಿಮಯಗಳಿಗೆ ನಮ್ಮವರೊಳಗಾಗಿ ಪ್ರತಿ ದಿನದಲ್ಲಿಯೂ ವಿಜಾತೀಯಾಭಿರುಚಿ ವರ್ತನಗಳುಳ್ಳವರಾಗುತ ಬರುತಲಿದಾರೆ. ಮುಸಲ್ಮಾನರಲ್ಲಿ ನೆಲೆಗೊಂಡಿದ್ದ ಘೋಷಾ ಪದ್ಧತಿಯನ್ನು ನಮ್ಮವರು ಕೆಲವುಕಾಲ ಅನುಷ್ಠಿಸುತ ಬಂದರು. ಇಂಗ್ಲಿಷಿನವರ ಸ್ತ್ರೀ ಸ್ವಾತಂತ್ರ್ಯವನ್ನೂ, ಅವರ ವರ್ತನವನ್ನೂ ನೋಡಿದನ್ನು ಹೊಗಸರ ೨ ತದನುಗುಣವಾಗಿ ಪ್ರವರ್ತಿಸಬೇಕೆಂಬ ಕುತೂಹಲ ವುಳ್ಳವರಾಗಿದಾರೆ. ವಿವಾಹವೆಂಬದು ಇಂಗ್ಲಿಷಿನವರಲ್ಲಿ ಒಂದು ಬಗೆಯಾದ ಸಿವಿಲ್ ಕಂಟ್ರಾಕ್ಟ ರೂಪವಾಗಿ ಭಾವಿಸಲ್ಪಟ್ಟಿರುವದರಿಂದ ಸದರೀ ಕಂಟ್ರಾಕ್ಟ ರದ್ದಾದ ಕೂಡಲೆ ವಿವಾಹ ಸಂಬಂಧವೆಂಬದು ಕೂಡ ನಿವೃತ್ತಿಯಾಗಿ ಹೋಗುತಿದೆ. ಸದರೀ ಕಂಟ್ರಾಕ್ಟ ರದ್ದಾಗುವಣವೂ ಮರಳಿ ಏರ್ಪಡುವಣವೂ ಕೇವಲ ದಂಪತಿಗಳ ಇಚ್ಛಾಮಾತ್ರದಿಂ ಕುದರತಕ್ಕವಾಗಿರುತಿವೆ. ಇಂತ ವಿವಾಹ ಸಂಬಂಧ ಪರಿತ್ಯಾಗ ಪದ್ಧತಿಯು ಈಗ ನಮ್ಮವರಲ್ಲಿಯೂ ತಲೆದೋರಲಾರಂಭಿಸಿದೆ. ಈ ವಿವಾಹ ಸಂಬಂಧ ನಿವೃತ್ತ್ಯುಪಾಯವು ಯಾವ ಕಾಲದಲ್ಲಿ ಯಾವ ಪುಣ್ಯಾತ್ಮನಿಂದುಂಟುಮಾಡಲ್ಪಟ್ಟಿತೋ ತಿಳಿಯಲಿಲ್ಲವು. ಪರಂತು ಸದರೀ ಆಚಾರವೂ ಅನುಕೂಲ್ಯವೂ ವಿಶೇಷವಾಗಿ ನುಳ್ಳಂತ ಇಂಗ್ಲಿಷಿನವರ ವಿವಾಹ ಸ್ವರೂಪವನ್ನೂ ಅದರ ಪರಿಣಾಮವನ್ನೂ ವಿಚಿತ್ರಮಾಡುತ ಮೊಕದ್ದಮೆಗಳು ಆಗಿಂದಾಗ್ಗೆ ನ್ಯಾಯಸ್ಥಾನಗಳಿಗೆ ತರಲ್ಪಡುತಲಿರುವದನ್ನು ನೋಡಿದರೆ ಯೆಂತವರಿಗೂ ಆಶ್ಚರ್ಯ ವುಂಟಾಗದೆ ಹೋಗಲಾರದು. ಹ್ಯಾಗಂದರೆ—ಒಂದೇದಿನವಲ್ಲಿ ಸೂರ್ಯೋದಯಾನಂತರ ವಿವಾಹದ ಕರಾರಿಗೆ ಭರ್ತೃ ಭಾರ್ಯೆಯಾಗುವವರು ಪರಸ್ಪರ ಬದ್ಧರಾಗುವಂತೆ ಒಡಂಬಡಿಕೆ ಮಾಡಿಕೊಂಡು ರುಜು ಮಾಡುವಣ; ಹತ್ತು ಘಂಟೆಯ ಸಮಯದಲ್ಲಿ "ಬಿಟ್ಟಾತಲಿ" ಅಂದರೆ ನೀರ್ಣಯ ಪೂರ್ವಕವಾದ ವಧೂ ಪರಿಗ್ರಹಣ ಮಾಡುವಣ; ಮಧ್ಯಾಹ್ನದಲ್ಲಿ ವಿವಾಹವಂ ಜರಿಗಿಸುವಣ; ಯೆರಡು ಘಂಟೆಯ ತರುವಾಯ "ಹನಿಮೂನ್" ಅಂದರೆ ನೂತನ ವಧೂವರರು ಒಂದು ಸಂಕೇತಸ್ಥಾನದಲ್ಲಿ ಇಚ್ಛಾ ವಿಲಾಸದೊಡನೆ ವಿಹರಿಸುವಣ; ತರುವಾಯ ೪ ಘಂಟೆಯೊಳಗಾಗಿಯೇ "ಜಲಸಿ" ಅಂದರೆ ಭಾರ್ಯೆ ತನ್ನ ಪತಿಯಲ್ಲಾಗಲಿ, ಅಥವಾ ಪತಿಯು ತನ್ನ ಪತ್ನಿಯಲ್ಲಾಗಲಿ, ದುಷ್ಪ್ರವರ್ತನಕ್ಕಾಗಿ ಅನುಮಾನಗೊಂಡು ಯೊರಗೆ ಬಹಳ ಅಂತರಂಗರಾಗಿರುವಂತೆ ನಟಿಸುತ ಪರಸ್ಪರ ದೋಷೋದ್ಘಾಟನಕ್ಕಾಗಿ ಸಂಚು ನೋಡುತಲಿರುವಣ; ಸಾಯಂಕಾಲ ೫ ಘಂಟೆ ಸಮಯದಲ್ಲಿ "ಡಿಸೊಲ್ಯೂಷನ್ ಆಫ್ ಮ್ಯಾರಿಯೇಜ್" ಅಂದರೆ ವಿವಾಹ ಬಂಧ ವಿಮುಕ್ತಿಮಾಡಿಕೊಳ್ಳುವಣ; ಅಥವಾ ಜ್ಯುಡಿಷಿಯಲ್ ಸೆಪರೇಷನ್ ಅಂದರೆ ಕೋರ್ಟಿನ ಮೂಲಕ ಭರ್ತೃ ಭಾರ್ಯಾ ಸಂಬಂಧವಂ ನಿವೃತ್ತಿಸಿಕೊಳ್ಳುವಣ; ರಾತ್ರಿ ೭ ಘಂಟೆಯೊಳಗಾಗಿ ಡೈವೋರ್ಸ್ ಅಂದರೆ ದಾಂಪತ್ಯವಂ ಪರಿತ್ಯಜಿಸುವಣ; ತರುವಾಯ ಪರಿತ್ಯಜಿಸಲ್ಪಟ್ಟಂತ ಭರ್ತೃ ಭಾರ್ಯೆಯರಲ್ಲಿ ಭಾರ್ಯೆಯು ಅನ್ಯ ಪತಿಯಂ ಹುಡುಕಿಕೊಂಡು ಓಡಿಹೋಗುವಣ; ಗಂಡನು ಮತ್ತೊಬ್ಬಳಂ ಹುಡುಕುತ ಆಕೆಯೊಡನೆ ಕರಾರ್ ಷರತಿಗಳನ್ನು ಕುರಿತು ವಿಚಾರಮಾಡಿ ಮಾರನೆಯ ದಿನ ಸೂರ್ಯೋದಯಕ್ಕೆ ಮುಂಚಿತವಾಗಿ ವಿವಾಹ ಸನ್ನಾಹಗಳಂ ಮಾಡಿಕೊಳ್ಳುವಣ; ಏವಮಾದಿ ವಿಚಿತ್ರಗಳಾದ ಪ್ರಮೇಯಗಳು ನಮ್ಮ ಕೇಳ್ವಿಕೆಯಲ್ಲಿ ಬರುತಲಿರುತಿವೆ. ಇಂಗ್ಲಿಷಿನವರಲ್ಲಿ ವಿವಾಹವು ಯೆಷ್ಟರ ಸುಲಭವಾಗಿ ನೆರವೇರುತಿದೆಯೋ ಅಷ್ಟರ ತೀವ್ರದಲ್ಲಿಯೇ ಅದು ನಿವೃತ್ತಿಸಲ್ಪಡುತಿದ. ಅವರ ಸಂಬಂಧವು ಕ್ಷಣಿಕವಾಗಿಯೂ, ಸಾಧಾರಣವಾದುದಾಗಿಯೂ ಇರುವದರಿಂದ ಅವರವರ ಪರಸ್ಪರಾಭಿಮಾನವು ಅಂತರವಾದುದಾಗಿಯೂ, ನಿರೂಢವಾದುದಾಗಿಯೂ ಇರುವದಿಲ್ಲವು. ಇಂತಾ ಪದ್ಧತಿಯು ಶ್ರೇಷ್ಠವಾದುದೆಂದು ಈಗ ನಮ್ಮವರಲ್ಲಿ ಅನೇಕರು ವಾದಿಸಿ ಹಿಂದೂ ವೈವಾಹಿಕ ಶಾಸ್ತ್ರವನ್ನು ಕಂಟ್ರಾಕ್ಟಿಗೊಳಪಡಿಸಿ ಇಚ್ಛಾಮಾತ್ರದಿಂ ನಿವೃತ್ತಿಯಾಗುವಂತೆ ಮಾಡುವುದು ಒಳ್ಳೆಯದೆಂತಲೂ, ಆಗ ಸಂಘ ಸಂಸ್ಕರಣವು ತೃಪ್ತಿಕರವಾಗಿ ಜರಿಗಿ ಅನೇಕ ಪ್ರಯೋಜನಗಳು ಕೈಗೂಡಬಹುದೆಂತಲೂ ವಾದಿಸುತ್ತಾರೆ. ಇಂತ ಸ್ವಾತಂತ್ರ್ಯವೂ ಕ್ರಮವೂ ಇಲ್ಲದಿರುವಂತೆ ಹಿಂದು ವಿವಾಹ ಪದ್ಧತಿಯಲ್ಲಿ ಅನೇಕ ಪ್ರವಾದಗಳು ನಡೆಯುತ ಬರುತಲಿವೆ. ಮೇಲೆ ಕಂಡ ಅನುಕೂಲ್ಯವನ್ನು ಕೂಡ ಕಲ್ಪಿಸಿದೊಡೆ ಪತಿ ನಿಯಮವನ್ನಾಗಲಿ, ಭಾರ್ಯಾ ನಿಯಮವನ್ನಾಗಲಿ ನಾವಾಗಿಯೇ ಹೋಗಲಾಡಿಸಿ ಬಿಡುವವರಾಗುತ್ತೇವೆ. ತರುವಾಯ ಲಭಿಸುವ ಪ್ರಯೋಜನಕ್ಕಾಗಿ ಎಲ್ಲರೂ ದುಃಖಿಸಬೇಕಾಗಿರುವುದು. ಆದಕಾರಣ ಸ್ವಧರ್ಮವೇ ಮಾನಾಗಲು ಶ್ರೇಯಸ್ಕರವಾದುದೆಂದು ದೃಢವಾಗಿ ಹೇಳುವೆವು. ಈಚೆಗೊಂದು ಮೊಕದ್ದಮೆಯು ನ್ಯಾಯಸ್ಥಾನದಲ್ಲಿ ವಿಮರ್ಶೆಯ ಬಗ್ಗೆ ಬಂದಿರುವಂತೆ ಕೇಳುತ್ತೇವೇನೆಂದರೆ—ಒಬ್ಬ ಕ್ಷತ್ರಿಯ ಹೆಂಗುಸು ತನ್ನ ಪೂರ್ವ ಪತಿಯ ಮರಣಾನಂತರ ಪುತ್ರಕಾಂಕ್ಷಿಣೀಯಾಗಿ ಮತ್ತೊಬ್ಬನು ವಿವಾಹ ಮಾಡಿಕೊಂಡು ಅವನ ಮೂಲಕ ಒಬ್ಬ ಪುತ್ರನಂ ಪಡೆದಳು. ತರುವಾಯ ಭರ್ತೃ ಭಾರ್ಯೆಯರಲ್ಲಿ ವೈಮನಸ್ಯವು ತಲೆದೋರಲು ಗಂಡನು, ತನ್ನ ಭಾರ್ಯೆಯನ್ನು ಬಿಟ್ಟು ಕಾಪಾಡುವದಿಲ್ಲವೆಂದು ನಿರಾಕರಿಸಿಬಿಟ್ಟನು. ಸದರೀ ಸ್ತ್ರೀ ತನಿಗೂ ತನ್ನ ಮಗುವಿಗೂ ಜೀವನಾಂಶ ಕೊಡಿಸಬೇಕೆಂದು ಇಲ್ಲಿನ ಒಂದು ಕೋರ್ಟಿನಲ್ಲಿ ದಾವಾ ದಾಖಲ್ಮಾಡಿದಳು. ವಿಚಾರಣೆಯ ಕಾಲದಲ್ಲಿ ಸದರೀ ಹೆಂಗುಸು ತನ್ನನ್ನು ಪ್ರತಿವಾದಿಯು ಯಥಾಶಾಸ್ತ್ರೀಯವಾಗಿ ಮರಳಿ ವಿವಾಹ ಮಾಡಿಕೊಂಡನೆಂತಲೂ, ವಿವಾಹ ಕಾಲದಲ್ಲಿ ಹಾಜರಿದ್ದು ಅದಂ ಜರಿಗಿಸಿದ ಪುರೋಹಿತರು ಮುಂತಾದವರು ಅರಿತಿರುವರೆಂತಲೂ ವಾದಿಸಿ ತನ್ನ ತರಫ್

ಸಾಕ್ಷಿಗಳ ಮೂಲಕ ರುಜುವಾತ್ ಮಾಡಿದಳು. ಪ್ರತಿವಾದಿಯಾದ ಗಂಡನು ವಾದಿಯನ್ನು ತಾನು ಅದಕ್ಕೆ ಪೂರ್ವ ಯೆಂದಿಗೂ ಕಂಡದ್ದಿಲ್ಲವೆಂತಲೂ, ಆ ಮಗುವು ತನ್ನದಲ್ಲವೆಂತಲೂ ಪ್ರತಿವಾದ ಮಾಡಿದನು. ಡಿಫೆನ್ಸ್ ಸಾಕ್ಷಿಗಳಲ್ಲೊಬ್ಬನು ಸದರೀ ಸ್ತ್ರೀ ಪುರುಷರೀರ್ವರೂ ಭರ್ತೃ ಭಾರ್ಯೆಯರಂತೆ ಏಕೀಭವಿಸಿ ಕೆಲವು ಕಾಲದ ಮೊದಲು ಸಂಸಾರ ಮಾಡುತಲಿದ್ದಂತೆ ಸಾಕ್ಷಿ ಹೇಳಿದನು. ಇಂತ ಅತಿವಾದಗಳೂ ಅವ್ಯವಸ್ಥೆಗಳೂ ಪ್ರಬಲಿಸಿರುವ ಈಕಾಲದಲ್ಲಿ ಬಹಿರಂಗವಾಗಿ ನಡೆಯುವ ಪರಿಣಯಗಳನ್ನು ಇಷ್ಟ ಬಂದಾಗ ನಿವೃತ್ತಿಸಿಕೊಳ್ಳುವ ಸ್ವಾತಂತ್ರ್ಯವನ್ನನುಭವಿಸಲಿಚ್ಛೆಯುಳ್ಳ ಸಂಘ ಸಂಸ್ಕರಣ ಪ್ರವರ್ತಕರು ಮುಂದೆ ಯಾವವಿಧವಾದ ಪ್ರಯೋಜನವಂ ನಿರೀಕ್ಷಿಸಿ ತದರ್ಥ ವಾದಿಸುತಲಿದಾರೆಯೋ ತಿಳಿಯಲಿಲ್ಲವು.

ಮಲವಳ್ಳಿಪ್ರಾಂತದ ಕಲಹವಂ ಕುರಿತು.

ಈ ಸಂಸ್ಥಾನಕ್ಕೆ ಸೇರಿದ ಮಲವಳ್ಳಿಯೆಂಬ ಪ್ರದೇಶವು ಒಂದು ತಾಲ್ಲೂಕ್ ಹೆಡ್‌ಕ್ವಾರ್ಟರಾಗಿಯೂ, ರಾಜಕೀಯ ಪ್ರಾಶಸ್ತ್ಯವುಳ್ಳದ್ದಾಗಿಯೂ, ಏತದ್ದೇಶ ಚರಿತ್ರೆಯಲ್ಲಿ ವಿಶೇಷತಃ ಪ್ರಖ್ಯಾತವಾದ ಸ್ಥಳವಾಗಿಯೂ ಇರುತಲಿತ್ತು. ಬ್ರಿಟಿಷ ಗವರ್ನಮೆಂಟಿನವರು ಈ ರಾಜ್ಯವನ್ನು ದುಂಗಾವಿಯಾಗಿ ಸ್ವಾಧೀನ ಪಡಿಸಿಕೊಂಡು ಇಲ್ಲಿನ ಆಡಳಿತವನ್ನೆಲ್ಲ ಏಕಬಂದಿಗೆ ತರಲಿಚ್ಛಿಸಿದ್ದುವೋಪಲು ಇದುವರೆಗೂ ಇತರ ಪ್ರದೇಶಗಳಂತೆ ಸದರೀ ಮಲವಳ್ಳಿಯು ಸಹ ಅಪ್ರಕಟವಾಗಿ ಸಾಮಾನ್ಯ ಸ್ಥಿತಿಯೊಳಿರುತಲಿತ್ತು. ಸಾಒಸ್ ಮಹಾರಾಜಾ ಶ್ರೀಮನ್ ಚಾಮರಾಜ ವೊಡೆಯರವರ ಪ್ರಭುತ್ವವು ನಿರ್ದುಷ್ಟವಾದುದಾಗಿಯೂ, ನಿರಾಕ್ಷೇಪಣೀಯವಾದುದಾಗಿಯೂ, ಸರ್ವಜನ ಸಮ್ಮತವಾದುದಾಗಿಯೂ, ಸುಖಸಮಾಧಾನ ನೆಲೆಯದ್ದಾಗಿಯೂ ಇರುತಲಿದ್ದುದರಿಂದ ಅದರ ಆಳ್ವಿಕೆಯು ಅಪ್ರಾಶಸ್ತ್ಯಕರವಾದ ವಿಷಯಗಳು ಪ್ರಾಪ್ತವಾಗದಂತೆ ತೃಪ್ತಿಕರವಾಗಿಯೇ ಇರುತಲಿತ್ತು. ಇಂತ ಪ್ರಭುತ್ವ ಪ್ರಯೋಜನವಂ ಚಿರಕಾಲ ಅವರಮೂಲಕ ಅನುಭವಿಸಿ ಆನಂದಿಸುವಂತ ಭಾಗ್ಯವು ಈ ದೇಶೀಯರಿಗೆ ಲಭ್ಯವಿಲ್ಲದೆ ಹೋದುದರಿಂದ ಪ್ರಾಣಾವಸಾನ ಸಮಯದಲ್ಲಿ ಸದರೀ ನಿರ್ಭಾಗ್ಯರ ಸಂಸರ್ಗ ಸಹ ಮಹಾರಾಜರವರಿಗೆ ಬೇಡವೆಂದು ತೋರಿತ್ತು. ಈಗ ಶ್ರೀಮನ್ ಮಹಾರಾಣೀ ರೀಜಂಟರವರ ಪ್ರಭುತ್ವದಲ್ಲಿಯೂ, ಶ್ರೀಮನ್ ಮಹಾರಾಜರವರ ಅವ್ಯವಹಾರ ದಶೆಯಲ್ಲಿಯೂ, ಇಷ್ಟಕಾಲವಾಗಿ ಅತಿಪ್ರಯಾಸದಿಂದಾರ್ಜಿಸಿದಂತ ಪ್ರಾಶಸ್ತ್ಯವು ಕ್ಷಣಮಾತ್ರದಲ್ಲಿ ನಷ್ಟವಾಗಿ ಸ್ಥಿರವಾದ ಅಪಪ್ರಥೆಯುಂಟಾಗುವಂತ ವಿಷಯವೊಂದು ಈ ಸಂಸ್ಥಾನಕ್ಕೆ ಸೇರಿದ ಕೆಲವರು ತಾಬೇದಾರಿ ಅಧಿಕಾರಿಗಳ ಅವಿಮರ್ಶಕತೆಯಿಂದಲೂ, ದೂರದೃಷ್ಟಿ ವಿಹೀನತೆಯಿಂದಲೂ ಅಜಾಗರೂಕತೆಯಿಂದಲೂ, ಕೇವಲ ಮಾನಹಾನಿಕರವಾದ ಮತ್ತು ಪ್ರಾಣಹಾನಿಕರವಾದ ಕಲಹವೊಂದು ಮಲವಳ್ಳಿಯಲ್ಲಿ ಪ್ರಾಪ್ತವಾದುದನ್ನು ತಪಸೀಲಾಗಿ ಗತವಾರದ ಪತ್ರಿಕೆಯಲ್ಲಿ ನಾವು ಪ್ರಕಟಿಸಿದ್ದೆವಷ್ಟೆ. ನಿರ್ದುಷ್ಟವಾದ ಈ ಸಂಸ್ಥಾನದ ಕೀರ್ತಿ ಪ್ರತಿಷ್ಠೆಗೆ ಮಾಲಿನ್ಯವನ್ನುಂಟುಮಾಡಿದಂತ ಇಂತಾ ವಿಷಯವು ಹಿಂದೆ ಬ್ರಿಟಿಷ್ ಗವರ್ನಮೆಂಟಿನವರ ಪ್ರಭುತ್ವದಲ್ಲಾಗಲಿ ಮಹಾರಾಜರವರ ಆಧಿಪತ್ಯದಲ್ಲಾಗಲಿ ಪ್ರಾಪ್ತವಾಗಲಿಲ್ಲವು. ರಾಜಕೀಯವಾದ ಪುರೋವೃದ್ಧಿಯಿಂದಲೂ, ವಿಲಕ್ಷಣವಾದ ಪ್ರಭುತ್ವ ಕ್ರಮದಿಂದಲೂ, ಪ್ರಜೆಗಳ ವಿದ್ಯಾ ವೈಲಕ್ಷಣ್ಯಾದ್ಯನ್ಯಾದಿ ಸುಗುಣಗಳಿಂದಲೂ, ವಿಶೇಷ ಪ್ರಾಶಸ್ತ್ಯವಂ ಪಡೆದು ಸಕಲಾಂತವಲ್ಲೂ ಅಸದೃಶವಾದ ಮತ್ತು ನಿದರ್ಶನರೂಪವಾದ ಈ ನೇಟಿವ್ ರಾಜ್ಯದಲ್ಲಿ ಈ ಕಾಲದೊಳು ಇಂತಹ ಅವ್ಯವಸ್ಥೆಯು ಪ್ರಾಪ್ತವಾದುದಂ ಕೇಳಿದರೆ ನೇಟಿವ್ ಸಂಸ್ಥಾನಗಳ ಹಿತಚಿಂತಕರಿಗೆಲ್ಲ ಬಹಳ ಖೇದವುಂಟಾಗದೆ ಹೋಗಲಾರದು. ಪ್ರಜೆಗಳಿಗೆ ಅನ್ಯಥಾ ಜ್ಞಾನ ವುಂಟಾಗಿ ಅವರ ಅಪ್ರೀತಿಯು ವೃದ್ಧಿಗೊಳ್ಳುವಂತೆ ವಿಷಯಸ್ವರೂಪವಂ ಉತ್ಪ್ರೇಕ್ಷಿಸಿ ಬರೆಯುವ ಸಂಕಲ್ಪವು ನಮಗೆಂದಿಗೂ ಇಲ್ಲವಾದಕಾರಣ ಪ್ರಸಕ್ತ ವಿಷಯವು ಕುರಿತು, ನಮ್ಮ ಕೇಳ್ವಿಕೆಗೆ ಬಂದಿರುವ ಮಟ್ಟಿಗೆ ನಿಜವಾಗಿರುವ ಪಕ್ಷಕ್ಕೆ ಸದರೀ ಅನಾಹುತವು ಅಧಿಕಾರಿಗಳ ಅಚಾತುರ್ಯದಿಂದಲೇ ನಡೆದಂತೆ ನಿರ್ವಿವಾದವಾಗಿ ಹೇಳಬಹುದಾಗಿರುತಿದೆ ಈ ಅಂಶವು ಮುಂದೆ ನಿಷ್ಪಕ್ಷಪಾತವಾದ ವಿಚಾರಣೆಯು ಒಂದುವೇಳೆ ನಡೆಸಲ್ಪಟ್ಟು ನ್ಯಾಯ್ಯವಾದ ದಂಡನೆಗೆ ಗುರಿಯಾಗಬೇಕಾದವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸುವ ಅಭಿಪ್ರಾಯವು ಉನ್ನತಾಧಿಕಾರಿಗಳಿಗೆ ನಿಜವಾಗಿರುವ ಪಕ್ಷಕ್ಕೆ ಆಗ ಅನೇಕ ಅಂತರಂಗವಿಷಯಗಳು ಪ್ರಕಟವಾಗದೆ ಹೋಗಲಾರವು. ಇಂತಾ ನಿರ್ಭಾಗ್ಯಕಲಹಕ್ಕೆ ನಿಮಿತ್ತಕವಾದ ಇತರ ವಿಷಯಗಳನ್ನು ಕುರಿತು ಪರ್ಯಾಲೋಚಿಸುವಲ್ಲಿ ಇವರಡಿ ತಿಳಿಸಲ್ಪಡುವ ಐದಾರು ವಿಷಯಗಳು ಸ್ಥಿರಪಡುತವೆ. (೧) ಮಲವಳ್ಳಿಯಲ್ಲಿರುವ ಜೆಸ್ತರಿಗೂ, ಇತರ ಪ್ರಜೆಗಳಿಗೂ ದೀರ್ಘಕಾಲಿಕವಾದ ಪ್ರಬಲದ್ವೇಷವು ನೆಲೆಗೊಂಡು ಅಂತಃ ಕುಮುಲುತಲಿದ್ದಂತೆ ವ್ಯಕ್ತವಾಗುತಿದೆ. (೨) ಜೆಸ್ತರು ವಿವಾಹಾದಿ ವಿಶೇಷ ಸಂದರ್ಭಗಳಲ್ಲಿ ಮೆರವಣಿಗೆ ಹೊರಟು ಕೆಲವು ರಾಜಬೀದಿಗಳಲ್ಲಿ ಹೋಗಗೊಡಿಸದೆ ಷಹರ್ ನಿವಾಸಿಗಳು ಅಡ್ಡಿಪಡಿಸುತಲಿದ್ದರೆಂಬದು ಸಹ ಸ್ಪಷ್ಟವಾಗುತಿದೆ. (೩) ಇವಕ್ಕೆ ಪೂರ್ವ ತಕರಾರ್ ಮಾಡುತಲಿದ್ದಂತವರ ಬೀದಿಯಲ್ಲಿ ಮೆರವಣಿಗೆ ಹೊರಡುವದಕ್ಕೆ ಲೈಸೆನ್ಸ್ ಕೊಡಿಸಬೇಕೆಂದು ಜೆಸ್ತರು ಖಾಯಿಷ್ ಮಾಡಿದಾಗಲೆಲ್ಲ ಲೈಸೆನ್ಸ್ ಕೊಡದೆ ನಿರಾಕರಿಸಲ್ಪಡುತಲಿದ್ದಂತೆ ವಿಪರ್ಯಡುತಿದೆ. (೪) ಇದರ ಯಾವದಂಶವು ಅನುಪೂರ್ವಿಯಾಗಿ ಮೊದಲೇ ತಾಲ್ಲೂಕು ಅಧಿಕಾರಿಗಳಿಗೆ ತಿಳಿದಿತ್ತೆಂಬದು ಕೂಡ ಸ್ಥಿರಪಡುತದೆ. (೫) ಮೇ ೪ನೇ ತಾರೀಖ್ ಮೊದಲು ಇಂತ ಕಲಹ ಒಂದು ತಪ್ಪದೆ ನಡೆಯುವದೆಂದು ಅವರು ನಿರೀಕ್ಷಿಸದೇ ಇರಲಿಲ್ಲವು. (೬) ಆಗಿನ ವಿದ್ಯಮಾನವೂ ಷಹರಿನ ಸ್ಥಿತಿಯೂ ಪ್ರಜೆಗಳ ಮನೋಭಾವವೂ ಪ್ರತಿಕೂಲವಾದವಾಗಿಯೂ, ಸಾಧಾಯವಾಗಿಯೂ ಇದ್ದವೆಂಬದಂ ಸದರೀ ಅಧಿಕಾರಿಗಳು ಮುಂಚಿತವಾಗಿ ಅರಿತಿದ್ದರು. (೭) ಜೆಸ್ತರು ಮಾಮೂಲಿಗೆ ವಿರುದ್ಧವಾಗಿ ಅತಿಕ್ರಮಿಸಿ ಇತರ ಜನರ ರಸ್ತೆಯಲ್ಲಿ ಹೋಗಿ ಕಲಹಿಸುವ ಪ್ರಯತ್ನವುಳ್ಳವರಾಗಿದ್ದಂತವು ಅನೇಕ ದೃಶ್ಯಗಳಾದ ಲಾಂಛನಗಳಿಂದಲೂ ಚೇಷ್ಟೆಗಳಿಂದಲೂ ವ್ಯಕ್ತವಾಗಿತ್ತು. ಹೀಗಿದ್ದಾಗ್ಯೂ ಸ್ಥಳಾಧಿಕಾರಿಗಳು ತಲೆಕೆಳಗೆ ವರ್ತಿಸಿ, ಮನಸ್ವೀ ಆಡಳಿತ ಜರಿಗಿಸಿದ್ದರಿಂದಲೇ ಇಂತ ಪ್ರಾಣಹಾನಿಗೂ ಕಲಹಕ್ಕೂ ಅವಕಾಶವುಂಟಾಯಿತು. ಮತ್ತು ಜೆಸ್ತರ ಪ್ರಸ್ತಾಬಂದಿಗೂ ಅವರು ಇಷ್ಟುಕಾಲವಿಲ್ಲದೆ ಈಗ ಧೈರ್ಯದೊಡನೆ ಅತಿಕ್ರಮಪ್ರವೇಶ ಮಾಡಿ ನೆಮ್ಮದಿಗ ಭಂಗವನ್ನುಂಟುಮಾಡಲಿಕ್ಕೂ, ಸ್ಥಳಾಧಿಕಾರಿಗಳ ಬಲಾಸೆಯೂ ಪ್ರೋದ್ಬಲವೂ ಅಧಿಕವಾಗಿದ್ದಂತೆ ನಿರ್ಣಯಿಸುವದಾಗಿ ಅಲ್ಲಿನ ಆವಳಿತವಂ ಕುರಿತು ನಮಗೆ ವೃತ್ತಾಂತ ಬಂದಿರುತಿದೆ. ಒಕ್ಕಲಿಗರ ಬೀದಿಯಲ್ಲಿ ಜೆಸ್ತರು ಮೆರವಣಿಗೆಮಾಡಿಕೊಂಡು ಹೋಗುವಣವು ಮಾಮೂಲಿಗೆ ವಿರುದ್ಧವಾಗಿದ್ದರೂ ಆ ಅಂಶ ಚೆನ್ನಾಗಿ ತಿಳಿದಿದ್ದರೂ ಲೈಸೆನ್ಸ್ ಮಾತ್ರ ಯಾವ ಉದ್ದೇಶದಿಂದಲೋ ನಿರಾಕ್ಷೇಪಣೀಯವಾಗಿ ಕೊಡಲ್ಪಟ್ಟಿಂತೆಯೂ, ಮುಂದೆ ಪ್ರಾಪ್ತವಾಗುವ ಕಲಹ ನಿರೋಧಕ್ಕೆ ಅಂಗಭೂತಗಳಾದ ಆವಶ್ಯಕ ಏರ್ಪಾಡುಗಳು ಪೂರ್ವಭಾವಿಯಾಗಿ ನಡೆಸಲ್ಪಟ್ಟಿಂತೆಯೂ ತಿಳಿಯಬರುತಿದೆ. ಇಂತಾ ಲೈಸೆನ್ಸ್ ಕೊಡಲ್ಪಡುವ ವಿಷಯದಲ್ಲಿ ಗವರ್ನಮೆಂಟಿನವರು ಒಂದು ಒಪ್ಪಟ್ಟ ಹುಕುಂ ಕೊಟ್ಟಿರುವಂತೆ ನಮ್ಮ ಜ್ಞಾಪಕದೊಳಿದೆ. ಅದು ತಾಲ್ಲೂಕ್ ಅಧಿಕಾರಿಗಳಿಗೂ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೂ ಸಬ್‌ಡಿವಿಜನ್ ಆಫಿಸರರಿಗೂ ತಿಳಿದಿರಬಹುದೆಂದು ನಂಬುತ್ತೇವೆ. ಸದರೀ ಲೈಸೆನ್ಸನ್ನು ಇಷ್ಟ ಜನ ಉಪೇಕ್ಷಿಸಲಿಕ್ಕೆ ನುಂಟಾದ ಕಾರಣವು ನಮ್ಮ ಬುದ್ಧಿಸ್ಥವಾಗಲಿಲ್ಲವು. ಒಂದುವೇಳೆ ಡೆಪ್ಯುಟಿ ಕಮಿಷನರಿಗೂ ಸಬ್‌ಡಿವಿಜನ್ ಆಫಿಸರಿಗೂ ಲೈಸೆನ್ಸ್ ಕೊಡಬೇಕಾಗಿರುವ ಪ್ರಮೇಯವಾಗಲಿ, ಆವಶ್ಯಕತೆ ಯಾಗಲಿ ಮುಂದಾಗಿ ತಿಳಿಯದಿರಬಹುದಾದರೂ ಸ್ಥಳ ಅಮಲ್ ನಡೆಸುವ ಮತ್ತು ತಾಲ್ಲೂಕಿಗೆ ಜವಾಬ್ದಾರರಾದ ಅಮಲ್ದಾರರು ಮೇಲ್ಪಟ್ಟ ಹುಕುಮನ್ನು ಉಲ್ಲಂಘಿಸಿ ಲೈಸೆನ್ಸ್ ಕೊಟ್ಟ ಇಷ್ಟರ ಗದ್ದಲಕ್ಕೂ, ನಷ್ಟಕ್ಕೂ, ಅಪಕೀರ್ತಿಗೂ ಅವಕಾಶವನ್ನುಂಟುಮಾಡಿದ್ದರ ಪ್ರಯೋಜನವನ್ನು ತಾವು ಅನುಭವಿಸಿದ್ದಲ್ಲದೆ ಅನ್ಯರಿಗೂ ವುಂಟುಮಾಡಿದಂತೆ ಕಾಣುತಿದೆ. ಈ ಆಕ್ಷೇಪಣೆಯಿಂದ ಅವರೆಂದಿಗೂ ತಪ್ಪಿಸಿಕೊಳ್ಳಲಾರರು ಜೆಸ್ತರ ಮೆರವಣಿಗೆಯು ಮೇ ೪ನೇ ತಾರೀಖಿನ ದಿನ ನಡೆಯಬೇಕಾಗಿರುವದೂ ಪ್ರತ್ಯರ್ಥಿಗಳ ಪ್ರಾತಿಕೂಲ್ಯವೂ ಪ್ರತಿಬಟನವೂ ದಾರುಣವಾಗಿರುವದೂ, ಅಧಿಕಾರಿಗಳಿಗೆ ತಿಳಿಯದೆ ಹೋಗಲಿಲ್ಲವು ಆದರೂ ಅಮಲ್ದಾರರು ತಮ್ಮ ಪೋಲೀಸ್ ಶಿಬ್ಬಂದಿ ಸಾಲದೆಂದು ಭಾವಿಸಿ ರಿಜರ್ವ್ ಪೋಲೀಸು ಜವಾನರಿಗ ಖಾಯಿಷ್ ಮಾಡಿ ಪೋಲೀಸು ಸೂಪರಿಂಟೆಂಡೆಂಟರೂ ರಿಜರ್ವ್ ಪೋಲೀಸ್ ಇನಸ್ಪೆಕ್ಟರೂ ತಕ್ಕ ಸೈನ್ಯದೊಡನೆ ಕುಮ್ಮಕ್ ಬಗ್ಗೆ ಬರುವತನಕ ಮೆರವಣಿಗೆ ಹೊರಡಲಿಕ್ಕೆ ಅವಕಾಶ ಕೊಡಲ್ಪಡಲಿಲ್ಲವು. ಇದರಿಂದ ತಮ್ಮ ಕೃತ್ಯದ ಅದರ ಪರಿಣಾಮವನ್ನೂ, ಅನರ್ಥವನ್ನೂ ಅಧಿಕಾರಿಗಳು ಅರಿತು ದೃಢಸಂಕಲ್ಪವುಳ್ಳವರಾಗಿ ಕಲಹಕ್ಕೆ ಅಭಿಮುಖರಾದಂತೆ ಭಾವಿಸಬೇಕಾಗಿದೆ. ಇದು ಕೇವಲ ಒಂದು ಮುಹೂರ್ತದಲ್ಲಿ ಆತುರದಿಂ ಒಬ್ಬರಿಬ್ಬರಿಂದ ಆಲೋಚಿಸಿ ಮಾಡಲ್ಪಟ್ಟ ಪ್ರಯತ್ನವಾಗಿ ಕಾಣಿಸಲಿಲ್ಲವು. ಪರಂತು ದೀರ್ಘಾಲೋಚಿತವಾದ ಬಹುಜನ ಪ್ರಯತ್ನವೆಂದೂಹಿಸಬೇಕಾಗಿರುತದೆ. ಇಂತ ಪರ್ಯವಸಾನವು ಮುಂದರಿತಿದ್ದರೂ ಅಧಿಕಾರಿಗಳ ಪ್ರಯತ್ನವಂ ನೋಡಿದರೆ ಯಾವದೊ ಪ್ರಬಲ ಪ್ರತಿಬಂಧಕಕ್ಕೊಳಗಾಗಿ ವರ್ತಿಸಿದಂತೆ ಸ್ಪಷ್ಟವಾಗುತಿದೆ. ತಾದೃಶ ಪ್ರತಿಬಂಧಸ್ವರೂಪ ವೆಂತಿರುವುದೋ ಅದನ್ನೀ ಪತ್ರಿಕೆಯನ್ನೋದುವವರೇ ಪರಿಭಾವಿಸಿ ತಿಳಿದುಕೊಳ್ಳಬಹುದು. ಸ್ವಲ್ಪ ಮುಂದಾಲೋಚನೆ ಮಾಡಿ ಲೈಸೆನ್ಸನ್ನು ವಾಪಸ್ ತೆಗದುಕೊಂಡು ಮಾಮೂಲ್ ಮಾರ್ಗದಲ್ಲಿ ಹೋಗುವಂತೆ ಜೆಸ್ತರಿಗೆ ತಿಳಿಸಲ್ಪಟ್ಟದ್ದರೆ ಯಾವ ಗದ್ದಲಕ್ಕೂ ಅವಕಾಶ ವಿದ್ದಿರಲಾರದು. ಇದಕ್ಕೆ ಪ್ರತಿಯಾಗಿ ಅಮಲ್ದಾರರು ಜೆಸ್ತರ ಮೆರವಣಿಗೆಯಲ್ಲಿ ಪ್ರಮುಖರಾಗಿ ನಿಂತು ಅದಂ ವಿಭವದೊಡನೆ ಜರಗಿಸಿದ ಕೀರ್ತಿ ಪ್ರತಿಷ್ಠೆಯನ್ನಾಶಿಸಿ ಹೊರಟದ್ದರಿಂದಲೇ ಅದರ ಫಲವನ್ನು ನಿರ್ದಾಕ್ಷಿಣ್ಯವಾಗಿ ಅನುಭವಿಸಬೇಕಾಯಿತು. ಪೋಲೀಸಿನವರು ಯಾರ ಹುಕುಮಿನ ಮೇರೆಯೋ ಗೋಲಿಯನ್ನು ಪಯೋಗಿಸಲೆತ್ನಿಸಲು, ನಾಲ್ವರು, ಹತರಾದರು ಆರ್ವರಿಗೆ ಘೋರಾ ಜಖಮುಗಳಾದವು ಇವರಲ್ಲಿ ೭೫ ವರುಷಗಳ ಮುದುಕನೊಬ್ಬನೂ, ೧೦ ವರುಷಗಳ ಬಾಲಕನೊಬ್ಬನೂ, ಪ್ರಾಣವಂ ಕಳದುಕೊಂಡರು ಇಬ್ಬರು ಕಲಹದಲ್ಲಿ ಯೆಷ್ಟುಮಟ್ಟಿಗ ಪ್ರವರ್ತಿಸಿ ದೌಂದಳಿ ಜರಿಗಿಸಿರಬಹುದೊ ಅದು ಬಹಳ ಆಶ್ಚರ್ಯಪಡಬೇಕಾದ ಅಂಶವಾಗಿದೆ. ಮೊದಲಿನಿಂದಲೂ ಇದರ ಆತಳತ್ತಗಳೆಲ್ಲವು ಅವಿವೇಕ ಪ್ರೇರಿತ ವಾಗಿವೆ ಪ್ರಜೆಗಳ ಮನೋಭಾವವು ಯೆಷ್ಟರಮಟ್ಟಿಗಿತ್ತೆಂಬ ಅಂಶವು ಮದರಾಸ್ ಮೆಯಿಲ್ ಪತ್ರಿಕಾ ಲೇಖನದಿಂದ ವ್ಯಕ್ತವಾಗದೆ ಹೋಗುವದಿಲ್ಲವು, ಏನೆಂದರೆ, ಪ್ರಸಕ್ತ ಕಲಹಕ್ಕೆ ಪ್ರಮುಖನಾಗಿದ್ದವನೊಬ್ಬನು ತನ್ನ ನೆಂಟರಿಗೆ ತಿಳಿಸಿದನೇನೆಂದರೆ.—ಪೋಲೀಸಿನವರು ಬಾದಾಮಿಯಿಂದ ಹೊಡೆದು ಕೊಂದಂತ ಕಲಹಿಗಳ ಮೂರರ ಶವವನ್ನು ಮೈಸೂರಿಗೆ ಅಗತ್ಯ ತಂದರೆ ಅವಂ ಮಹಾರಾಣೀ ರೀಜಂಟರವರ ಮುಂದಿರಿಸಿ ಆಕೆಯವರ ಆಜ್ಞಾಪರಿಪಾಲಕರಾದ ಅಧಿಕಾರಿಗಳ ಕೈಗಾರಿಕೆಯಿಂದು ತೋರಿಸಿ ತಮಗೆ ನ್ಯಾಯವಂ ಪೂರ್ವದೇಶೀಯ ಕ್ರಮದಲ್ಲುಂಟುಮಾಡಿ ರಕ್ಷಿಸಬೇಕೆಂದು ಪ್ರಾರ್ಥಿಸಬಹುದಾಗಿರುತಿದೆ ಪರಂತು ಶವಪರೀಕ್ಷೆ ನಡೆದು ಇಬ್ಬರು ಗೋಲಿ ಪೆಟ್ಟಿನಿಂದಲೂ, ಒಬ್ಬನು ದೊಣ್ಣೆ ಪೆಟ್ಟಿನಿಂದಲೂ, ಮೃತಪಟ್ಟಂತೆ ನಿಶ್ಚೈಸಲ್ಪಟ್ಟರು, ಎಂಬದು. ಇನ್ನು ಈಚೆಗೆ ಬಂದ ವರ್ತಮಾನಗಳಿಂದ ಅಮಲ್ದಾರರು ಮೃತಪಟ್ಟಂತೆಂತಲೂ, ವಾಲಂಟಿಯರ್ ಫೌಜಿನವರು ಹುಕುಂಕೊಟ್ಟಕೂಡಲೆ ತೆರಳುವದಕ್ಕೆ ಸನ್ನದ್ಧರಾಗಿರಬೇಕೆಂದು ಆಜ್ಞಾಪಿಸಲ್ಪಟ್ಟಿದಾರೆಂತಲೂ, ಇಂಪೀರಿಯಲ್ ಸರ್ವಿಸ್ ಸೇನೆಗೆ ಸೇರಿದ ಯೆರಡುಕಂಪೆನಿ ಸವಾರರೂ ೧೦೦ ಜನ ಬಾರಿಕಿಪಾಯಿಗಳೂ, ಮಲವಳ್ಳಿಗೆ ಕಳುಹಿಸಲ್ಪಟ್ಟಿರುವಂತೆ ಒಳದೇಶದ ಡೆಯಿಲೀಪೋಸ್ಟ್ ಪತ್ರಿಕೆ ತಿಳಿಸುತಿದೆ. ಮುಂದೆ ಈ ವಿಚಾರವು ಹ್ಯಾಗೆ ಹ್ಯಾಗೆ ಪರಿಣಮಿಸುವದಾಗಿದೆಯೋ ಅದು ಸದ್ಯಃ ಊಹಿಸಲಸಾಧ್ಯವಾಗಿರುತಿದೆ.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕುಪ್ರಾಂತವೃತ್ತಾಂತಗಳು.

ಈಸಂಸ್ಥಾನದ ದಿವಾನರಾದ ಮೆ॥ ಕೆ ಶೇಷಾದ್ರಿ ಅಯ್ಯರವರು ನೀಲಗಿರಿಯಿಂದ ಇನ್ನು ಕೆಲವು ದಿನಗಳೊಳಗಾಗಿ ಇಲ್ಲಿಗೆ ದಯಮಾಡುವರೆಂದು ಕೇಳುತ್ತೇವೆ.

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮೆ॥ ಬಾಬಾ ಸಾಹೇಬರವರು ಈ ತಿಂಗಳ ೧೭ನೇ ತಾರೀಖಿಗೆ ಇಂಗ್ಲಾಂಡಿನಿಂದ ಇಲ್ಲಿಗೆ ವಾಪಸ್ ದಯಮಾಡಿ ತಮ್ಮ ಕೆಲಸದ ಚಾರ್ಜನ್ನು ಕೈಗೊಳ್ಳುವರು.

ಸರ್ಕಾರದವರು ಮೆ॥ ಗಳಾದ ಶ್ರೀನಿವಾಸರಾಯರು, ಕೃಷ್ಣಸ್ವಾಮಿರಾಯರು, ಸುಬ್ಬರಾಜೇ ಅರಸಿನವರು ಮುಂತಾದ ಕೆಲವುಮಂದಿ ಯೌವನಸ್ಥರನ್ನು ರೆವಿನ್ಯೂ ಪ್ರೊಬೇಷನರ್‌ಗಳಾಗಿ ಮೊಕರರ್ ಮಾಡುತ್ತಾರೆಂದು ತಿಳಿಯಬರುತಿದೆ

ಲಂಡನ್ ಮಿಷನ್ ಹೈಸ್ಕೂಲ್ ಪ್ರಿನ್ಸಿಪಾಲರವರಾದ ರೆವರೆಂಡ್ ವಾಲ್ಟನ್ ಸಾಹೇಬರವರು ಯೆರಡು ವರ್ಷಗಳ ರಜಾ ಪಡೆದು ಇಂಗ್ಲಾಂಡಿಗೆ ಹೋಗುವರೆಂತಲೂ, ಅವರ ಗೈರುಹಾಜರಿಕಾಲದಲ್ಲಿ ಸದರೀ ಸ್ಕೂಲ್ ಹೆಡ್‌ಮಾಸ್ಟರಾದ ಮೆ॥ ಕೆ. ರಾಮಚಂದ್ರ ರಾಯರವರು ಪ್ರಿನ್ಸಿಪಾಲ್ ಕೆಲಸವನ್ನು ನೋಡುವರೆಂತಲೂ ಕೇಳುತ್ತೇವೆ.

ಚಾಮುಂಡಿ ಬೆಟ್ಟದ ಮೇಲೆ ದೇವಸ್ಥಾನದ ಹಿಂದಿರುವ ಶೀನೀರಿನ ಕಟ್ಟೆಯನ್ನು ದುರಸ್ತು ಮಾಡಿಸುವದು; ಸರ್ಕಾರಿ ಬಂಗಲೆಯಲ್ಲಿ ಒಂದು ಭಾವಿಯನ್ನು ತೋಡಿಸುವದು; ಊರಲ್ಲಿರುವ ಭಾವಿಯನ್ನು ಇನ್ನೂ ಆಳವಾಗಿ ತೆಗಸುವದು—ಈ ಮೂರು ಕೆಲಸಗಳಿಗೂ ಸರ್ಕಾರದವರು ೧,೦೪೧ ರೂಪಾಯಿಗಳನ್ನು ಸಾಂಗ್ಷನ್ ಮಾಡಿರುವರು.

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಎಲ್ಲಾ ಮುಸಾಫರ್ ಖಾನೆಗಳಲ್ಲೂ ಹಿಂದುಗಳು ಅಡಿಗೆ ಸ್ನಾನಗಳಿಗೆ ಉಪಯೋಗಿಸುವಂತ ಪಾತ್ರೆ ಪದಾರ್ಥಗಳನ್ನು ಇಟ್ಟಿರಬೇಕೆಂದು ಸರ್ಕಾರದವರು ಆಲೋಚಿಸಿ ಅದಕ್ಕಾಗಿ ಪ್ರತಿ ಮುಸಾಫರ್‌ಖಾನೆಗೆ ೩೫ ರೂಪಾಯಿನ ಪಾತ್ರೆಗಳನ್ನು ಆಯಾ ತಾಲ್ಲೂಕ್ ಅಮಲ್ದಾರರು ಕೊಂಡಿಡುವಂತೆ ಅಪ್ಪಣೆ ಕೊಟ್ಟು ಹಣ ಸಾಂಗ್ಷನ್ ಮಾಡಿದಾರೆ.

ಮೈಸೂರಲ್ಲಿ ಆರ್ಟ್ ವೇರ್ ಎಂಬ ಚಿತ್ರಕೆಲಸ ಮಾಡುವ ಕಾರ್ಖಾನೆಯಲ್ಲಿ ಮೂವರು ಕೌನ್ಸಿಲ್ ಮೆಂಬರ್‌ಗಳಿಗೂ ಮೂರು ರಾಜ ದಂಡವನ್ನು ಬೆಳ್ಳಿಯಲ್ಲಿ ಮಾಡಿಸುತಿದಾರೆಂದು ತಿಳಿಸಿದ್ದೆವಷ್ಟೆ ಈ ದಂಡಗಳು ತಯಾರಾಗಿರುತಿವೆ ಇವುಗಳಿಗೆ ಬಹು ಅಲಂಕಾರವಾಗಿ ಚಿತ್ರಕೆಲಸ ಮಾಡಿದಾರೆ. ಮರದ ದೊಣ್ಣೆಗಳಮೇಲೆ ಬೆಳ್ಳಿಯ ತಗಡುಗಳನ್ನು ಹಾಕಿರುವರು, ನೋಡಿದವರೆಲ್ಲ ಆಶ್ಚರ್ಯಪಡುವಂತೆ ಬಹು ಸುಂದರವಾಗಿರುತಿವೆ, ಪ್ರತಿ ಒಂದು ದಂಡಕ್ಕೂ ೩೦೫ ರೂಪಾಯಿಗೆ ಕಡಮೆ ಇಲ್ಲದೆ ಖರ್ಚಾಗಿದೆ ಯೆಂದು ತಿಳಿಯಲಾದೆವು.

ಲೇಟ್ ಕೃಷ್ಣರಾಜ ಒಡೆಯರವರ ಸ್ವಂತ ಸಾಲಗಳನ್ನು ತೀರಿಸುವದಕ್ಕಾಗಿ ಇಂಡಿಯಾ ಗವರ್ನಮೆಂಟಿನವರ ಅಪ್ಪಣೆ ಪ್ರಕಾರ ಮೈಸೂರು ಸರ್ಕಾರದವರು ಒಂದು ಸ್ಪೆಷಲ್ ಕೋರ್ಟನ್ನು ಏರ್ಪಡಿಸಿರುವದೂ ಈ ಕೋರ್ಟಿನ ಕೆಲಸಗಳು ಮುಂದಣ ತಿಂಗಳಲ್ಲಿ ಪ್ರಾರಂಭವಾಗುವದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಲೇಡಿ ಸಾಹುಕಾರ್ ಬ್ರಿಜಲಾಲ್ ದಾಸ್‌ರವರು ಲೇಟ್ ಕೃಷ್ಣರಾಜ ಒಡೆಯರವರಿಗೆ ೫ಲಕ್ಷ ರೂಪಾಯಿ ಸಾ

ಕೊಟ್ಟಿದ್ದರಂತೆ. ಈ ವಿಷಯವನ್ನು ಅವರು ತಮ್ಮ ಉಯಿಲಿನಲ್ಲಿ (ಮರಣ ಶಾಸನದಲ್ಲಿ) ನಮೂದಿಸಿದಾರೆಂತಲೂ, ಈ ಮರಣಶಾಸನವು ಮದರಾಸ್ ಹೈಕೋರ್ಟಿನ ರೆಕಾರ್ಡು ರೂಮಿನಲ್ಲಿ ಇದೆ ಎಂತಲೂ ಅದನ್ನು ಹುಡುಕಿ ತೆಗೆದುಕೊಳ್ಳುವದಕ್ಕೆ ಅಪ್ಪಣೆ ಯಾಗಬೇಕೆಂತಲೂ, ಮಾ॥ ದೇಶಿಕಾಚಾರ್ಯರೆಂಬವರು ಹೈಕೋರ್ಟಿನ ಜಡ್ಜಿಯವರಿಗೆ ಅರ್ಜಿ ಮಾಡಿಕೊಂಡರು ಜಡ್ಜಿಯವರು ಅವರ ಅರ್ಜಿಯಲ್ಲಿ ಕಂಡಂತೆ ಅಪ್ಪಣೆ ಕೊಟ್ಟಿದಾರೆಂದು ಕೇಳುತ್ತೇವೆ.

ಮೈಸೂರಲ್ಲಿ ಸ್ಥಾಪಿಸಲ್ಪಟ್ಟಿರುವ ಆರ್ಯಮತ ಪ್ರವರ್ಧಿನಿ: ಸಭೆಯ ಅನಾಥಾಲಯ.

ಕ್ರಿಸ್ತಮತದವರು ತಮ್ಮ ಮತದ ಅಭಿವೃದ್ಧಿಗಾಗಿ ಮತ್ತು ಮತಸ್ಥರ ಸೌಕರ್ಯಕ್ಕಾಗಿ ಅಲ್ಲಲ್ಲಿ ಅನಾಥಾಲಯಗಳನ್ನು ಏರ್ಪಡಿಸಿಕೊಂಡಿರುವದನ್ನು ನೋಡಿ, ನಮ್ಮಲ್ಲಿ ಇಂಥಾ ದ್ದೊಂದಿಲ್ಲದಿದ್ದರೆ ಮತವು ಬಹುವೇಗ ಶಿಥಿಲವಾಗುವದಲ್ಲದೆಯೆಂದೆಣಿಸಿ, ಆರ್ಯಸಮಾಜದವರು ಅಲ್ಲಲ್ಲಿ ಕೆಲವು ಅನಾಥಾಲಯಗಳನ್ನು ಏರ್ಪಡಿಸಿರುವದಾಗಿ ಎಲ್ಲರಿಗೂ ತಿಳಿದಿದೆ, ಹೀಗೆಯೇ ನಮ್ಮ ದಕ್ಷಿಣದೇಶದಲ್ಲಿ ಮದರಾಸು ಕೋರಿನಲ್ಲಿ ಕೆಲವಿವೆಯೆಂದು ಕೇಳಿದ್ದೇವೆ. ಆದರೆ ನಮ್ಮ ಮೈಸೂರು ಸೀಮೆಯಲ್ಲಿ ಇದುವರೆಗೂ ಇಂಥಾ ಅನಾಥಾಲಯದ ಆವಶ್ಯಕವೇ ಇಲ್ಲವೆಂಬಂತೆ ನಮ್ಮವರಿಗೆ ತೋರದಿರುವದಕ್ಕೆ ಕಾರಣ ಚನ್ನಾಗಿ ಗೊತ್ತಾಗುವದಿಲ್ಲ ಈಗ ಮೇಲ್ಕಂಡ ಸಭೆಯವರು ಆರ್ಯಮತವನ್ನು ಬಹಿರಂಗವಾಗಿ ಪ್ರಸಂಗಿಸುತ್ತಾ ಅನಾಥರಿಗೆ ತಕ್ಕಂತೆ ಅನುಕೂಲ ಸಹಿಸದೆ ಸುಮ್ಮನೆ ಪ್ರಸಂಗಿಸುವದೇ ಸಾಲದೆಂದೆಣಿಸಿ ೫–೬ ತಿಂಗಳಿಂದಲೂ ಉದ್ಯೋಗಿಸುತ್ತಿದ್ದರು. ಹೀಗಿರುವಲ್ಲಿ ಪರಮೇಶ್ವರ ಭಟ್ಟನೆಂಬ ಕೊಡಗು ಹವ್ಯಕಬ್ರಾಹ್ಮಣನು ತನ್ನ ಹೆಂಡತಿ, ಇಬ್ಬರು ಗಂಡುಮಕ್ಕಳನ್ನು ಮುಂಡಾಲಪ್ಪನವರ ಸ್ಕೂಲಿನಲ್ಲಿ ಸೇರಿಸಿ ಅವರನ್ನು ಭಿಕ್ಷಮಾಡಿ ಸಾಕುತ್ತಿರಲಾಗಿ, ಆ ನಾಲ್ವರಿಗೂ ಸಿಡುಬಿನ್ದ ತಾಯಿ ತಂದೆಗಳಿಬ್ಬರೂ ಎರಡು ದಿವಸಗಳಲ್ಲಿ ಕಾಲವಾದರು, ಮಕ್ಕಳು ರೋಗಿಷ್ಟರು ಮತ್ತು ಅನಾಥರೂ, ಆಗ ಶ್ರೀರಾಮ ಪೇಟೆಯ ಚಂದ್ರಮೌಳೀಶ್ವರಸ್ವಾಮಿ ಭಕ್ತನಾದ ಗೊಲ್ಲರ ನರಸಿಮ್ಮಣ್ಣ, ಮನ್ನಿಕೋಟೆಯ ವೆ॥ ಕೃಷ್ಣಶಾಸ್ತ್ರಿಗಳು ಮೊದಲಾದ ಕೆಲವರು ದಯಾಳುಗಳು ತಾವು ಬಡವರೇ ಆದರೂ ಕೆಲವರು ಸೇರಿ ಪ್ರಕೃತ ಉತ್ತರ ಕ್ರಿಯೆಗಳನ್ನು ಮಾಡಿಸಿ ಮಕ್ಕಳನ್ನು ಕಾಪಾಡುತ್ತಿದ್ದರು. ಈ ಸಮಾಚಾರವನ್ನು ಕೇಳಿದ ಮಾ॥ ಎಂ. ವೆಂಕಟಕೃಷ್ಣಯ್ಯನವರು ಮತ್ತು ಎ. ವಿ ಸರಸ್ವತಿಯವರು ಸಭೆಯ ಕಾರ್ಯದರ್ಶಿಯ ಮುಖಾಂತರ ವಿಚಾರಣೆ ತೆಗದುಕೊಳ್ಳುತ್ತಿದ್ದು, ಈಗ ಒಂದು ತಿಂಗಳೊಳಗೆ ಇವರನ್ನೇ ಮೊದಲನೆಯವರನ್ನಾಗಿಟ್ಟುಕೊಂಡು ಅನಾಥಾಲಯವನ್ನು ಸ್ಥಾಪಿಸಿದರು. ಬಂದ ಎಲ್ಲಾ ಅನಾಥರಿಗೂ ತಮ್ಮ ನಿರಂಜನ ಮಠದಲ್ಲಿ ಸ್ಥಳವನ್ನು ಕೊಡುವದಕ್ಕಾಗಿ ಸರಸ್ವತಿ ಸ್ವಾಮಿಯವರು ಪ್ರತಿಜ್ಞೆ ಮಾಡಿರುವರು. ಅವರ ಅಶನ ವಸನಗಳಿಗಾಗಿ ಚಂದಾವೊಬಲಗನ್ನೂ ಮನೆ ಮನೆಯಲ್ಲಿ ಅಕ್ಕಿಯನ್ನೂ ವಸೂಲುಮಾಡಿ ಇವರನ್ನು ರಕ್ಷಿಸುವದಕ್ಕೆ ಸಭೆಯವರು ಮುಂದಾಳುಗಳಾಗಿರುವರು. ಉದಾರ ಹೃದಯರಾಗಳಾದ ಮಾ॥ ಎಂ. ವೆಂಕಟಕೃಷ್ಣಯ್ಯನವರು ಮಾ॥ ಹೆಚ್ ಕೃಷ್ಣರಾಯರು ಅಡ್ವೋಕೇಟ್, ಮಾ॥ ನರಸಿಂಗರಾಯರು ಅಡ್ವೋಕೇಟ್ ಡಿ. ಚಂದ್ರಶೇಖರಯ್ಯ ಬಿ. ಏ ಬಿ. ಯಲ್. ಮಾ॥ ಮಹದೇವಶಾಸ್ತ್ರಿಗಳು ಬಿ. ಏ ಎಫ್ ಟಿ ಯಸ್. ಇವರು ಮೇಲ್ವಿಚಾರಣೆ ಮಾಡಿಕೊಂಡು ಇದನ್ನು ಕ್ರಮವಾಗಿ ಜರುಗುವಂತೆ ಮಾಡುವದಕ್ಕೆ ದತ್ತಚಿತ್ತರಾಗಿಯೂ ವಾಗ್ದಾನಮಾಡಿರುವರಾಗಿಯೂ ಇದ್ದಾರೆ.

ಎಲ್ಲರೂ ಗಮನಿಸಿ ಓದಬೇಕಾದ ವಿಷಯ–ಕೊಡಗುನಾಡಿಯತ್ತು ನಾಡಿನ ಪರಮೇಶ್ವರ ಭಟ್ಟರ ೧೦–೧೨ ವರುಷಗಳಿಬ್ಬರು ಗಂಡುಮಕ್ಕಳು ಅನಾಥರಾಗಿ ನಮ್ಮ ಅನಾಥಾಲಯಕ್ಕೆ ಬಂದು ಸೇರಿದ್ದಾರೆ. ಇವರಲ್ಲಿ ೨೦ ರೂಪಾಯಿಗಳ ಆಸ್ತಿ ಇದ್ದ ಇವರನ್ನು ನಾವು ಒಂದು ತಿಂಗಳಿಂದ ಸಂರಕ್ಷಿಸುತಲಿದೇವೆ. ಇವರ ವಾರಸ್ದಾರರು ಯಾರಾದರೂ ಇದ್ದರೆ ಅವರನ್ನ ಕರೆದುಕೊಂಡು ಹೋಗಬಹುದು. ಹಾಗಿಲ್ಲವಾದರೆ ರೂಲ್ಸ್ ಮೇರೆ ಅವರಿಗೆ ವಯಸ್ಸು ಬರುವವರಿಗೆ ಸಭೆಯವರು ಅವರನ್ನ ರಕ್ಷಿಸಿ ಮುಂದೆ ಕ್ರಮಪಡಿಸಿ ನಡೆಸುವರು

ಆವಶ್ಯಕವಾದ ವಿಷಯ.

ಈಗ ಸದ್ಯಕ್ಕೆ ಚಾತುರ್ವರ್ಣದಲ್ಲಿ ಅನನ್ಯಗತಿಕರಾದ ಮಕ್ಕಳು ಯಾವ ಊರಿನಿಂದಲಾದರೂ, ಸ್ಥಳದ ಅಮಲ್ದಾರರು ಮೊದಲಾದ ಮುಖ್ಯಾಧಿಕಾರಿಗಳಿಂದಲಾದರೂ ಅಥವಾ ಇತರ ದೊಡ್ಡ ಮನುಷ್ಯರಿಂದಲಾದರೂ, ಮಕ್ಕಳು ನಿಯತವಾಗಿ ಅನಾಥಾಲಯದ ನಿಯಮಗಳಿಗೆ ಬದ್ಧವಾಗಿರುವರೆಂಬದಕ್ಕೆ ಸರ್ಟಿಫಿಕೇಟಿನೊಡನೆ ಬಂದರೆ ಸ್ಕೂಲು ಫೀಜನ್ನೂ ಫ್ರೀ ಮಾಡಿಸಿ ಅಶನ, ವಸನಗಳನ್ನೂ ಪುಸ್ತಕಗಳನ್ನೂ ಸ್ಥಳವನ್ನೂ ಮತ್ತು ಆರೋಗ್ಯವಾಗಿರುವದಕ್ಕೆ ತಕ್ಕ ಎಲ್ಲಾ ಏರ್ಪಾಡುಗಳನ್ನು ಮಾಡಿ, ವೇದ, ಸಂಸ್ಕೃತ ವಿದ್ಯೆಯನ್ನೂ ದೇಶಭಾಷೆ ರಾಜಭಾಷೆಗಳನ್ನೂ ಯಥಾಯೋಗ್ಯವಾಗ ಕಲಿಸುತ್ತೇವೆ ಆದದರಿಂದ ಮಹನೀಯರಾದ ಆರ್ಯಗೋತ್ರೋತ್ಪನ್ನರು ಯಥಾಶಕ್ತಿ, ಮನ ಧನಗಳಿಂದ ಈ ಅನಾಥಾಲಯವನ್ನ ಸನಾಥವಯವನ್ನಾಗಿ ಮಾಡುವದಕ್ಕೆ ಅವಕಾಶವಾದಾಗಲೆಲ್ಲಾ ಪ್ರಯತ್ನಿಸಬೇಕೆಂದು ಪ್ರಾರ್ಥಿಸುತ್ತೇವೆ.

ಎ ವಿ ಸರಸ್ವತಿ, ಅನಾಥಾಲಯದ
ಕಾರ್ಯದರ್ಶಿ ನಿರಂಜನಮಠ,
ವಿ. ನರಸಿಮ್ಹಶಾಸ್ತ್ರಿ.
ಆರ್ಯಮತ ಪ್ರವರ್ಧಿನೀ ಸಭಾ ಕಾರ್ಯದರ್ಶಿ.
ಮುನಿಮಲ್ಲಪ್ಪನವರ ಸ್ಕೂಲ.

SUMMARY OF NEWS.

ವೃತ್ತಾಂತ ಸಂಗ್ರಹವು.

ಹಗಲಿಗಿಂತಲು ರಾತ್ರಿ ವೇಳೆಯಲ್ಲಿ ಮಕ್ಕಳೂ, ಸಸ್ಯಾದಿಗಳೂ, ದೃಗಗಳೂ ಹೆಚ್ಚಾಗಿ ಬೆಳೆಯುತಲಿವೆ.

ಗ್ಯಾಜೇನಾ ಎಂಬ ದೇಶದಲ್ಲಿ ರಷ್ಯಾ ಝಾರರ ಅರಮನೆಗೆ ೭೦೦ ಕೋಣೆಗಳುಂಟು.

ಗ್ರೇಟಬ್ರಿಟನ್ ದೇಶದಲ್ಲಿ ಒಟ್ಟಿಗೆ ೩೦ಸಾವಿರ ಜನ ಡಾಕ್ಟರ್‌ಗಳು ವೈದ್ಯಕ್ರಿಯೆಯಿಂದ ಉದರಭರಣ ಮಾಡುತ್ತಾರೆ. ಈ ಜನರಲ್ಲಿ ಫಕ್ತ ದಂತವೈದ್ಯರೆ ೫,೦೦೦ ಜನಗಳಿದಾರಂತೆ

ಶ್ರೀ ನಗರದಲ್ಲಿ ಕಳೆದ ತಿಂಗಳ ೧೧ನೇ ತಾರೀಖಿನ ರಾತ್ರಿ ಬೆಂಕಿ ಬಿದ್ದು ಪೇಟೆಯೇ ಸುಟ್ಟು ಬೂದಿಯಾಯಿತು, ಲುಕ್ಸಾನ್ ಎಷ್ಟೆಂಬುದು ಹೇಳುವದಕ್ಕಾಗುವದಿಲ್ಲವು.

ಮಲಗಿಕೊಳ್ಳುವಾಗ ತಲೆದಿಂಬುಗಳನ್ನು ಕಾಲುಕಡೆಗೆ ಇಟ್ಟುಕೊಂಡು ಮಲಗಿದರೆ ನಿದ್ರೆ ಬೇಗನೇ ಬರುತದಂತೆ ಅನುಭವ ನೋಡಬೇಕು

ಈ ಜಗತ್ತಿನೊಳಗಿನ ರಾಷ್ಟ್ರಗಳಲ್ಲಿ ಜರ್ಮನೀ ರಾಜ್ಯದ ಸೈನ್ಯದ ಖರ್ಚು ಅತಿಶಯವಾದದ್ದು. ಅದಕ್ಕಾಗಿ ಪ್ರತಿ ವರ್ಷ ೧೭೦ರಿಂದ ೨೦ ಕೋಟಿ ಪೌಂಡುಗಳ ವರೆಗೆ ಖರ್ಚಾಗುತಿದೆ.

ಒಂದು ಇಲಿಗೆ ೬ ವರ್ಷಗಳು, ಒಬ್ಬ ಗಂಡನಿಗೆ ಇಬ್ಬರು ಹೆಂಡರು, ಒಂದು ಎಲುವಿಗೆ ೨ ನಾಯಿಗಳು, ಒಂದು ಪ್ರಶ್ನೆಗೆ ಇಬ್ಬರು ಪಂಡಿತರು ಕೂಡಿದ್ದವರೆ ಐಕಮತ್ಯವು ಎಂದಿಗೂ ಆಗುವದಿಲ್ಲವು

ಸಿಲೋನ್ (ಲಂಕಾ) ದ್ವೀಪದಲ್ಲಿ ಅಗಸರು ಯಾವಯಾರ ಮನೆಯಲ್ಲಿ ಬಟ್ಟೆ ಒಗೆಯುತ್ತಾರೋ ಅಂತವರ ಹೆಸರುಗಳನ್ನೆಲ್ಲ ಒಂದು ಪಟ್ಟಿಗೆ ರಾಜ ನಾಕಿಸಿಟ್ಟು ಕೊಳ್ಳಬೇಕೆಂತಲೂ ಯಾವ ಅಗಸನ ಹತ್ತಿರ ಇಂಥಾ ಪಟ್ಟಿ ಇರುವದಿಲ್ಲವೋ ಅವನನ್ನು ಶಿಕ್ಷೆಗೆ ಗುರಿಮಾಡುತ್ತೇವೆಂತಲೂ ಅಲ್ಲಿನ ಸರ್ಕಾರದವರು ಒಂದು ಹುಕುಮನ್ನು ಕೊಟ್ಟು ಜಾರಿಯಲ್ಲಿ ತಂದಿದಾರೆ.

ಈಚೆಗೆ ನಡೆದ ಚಿತ್ರಾಳದ ಯುದ್ಧದಲ್ಲಿ ಜಯಪುರದ ಮಹಾರಾಜರು ಇಂಗ್ಲಿಷರವರ ಸೈನ್ಯಕ್ಕೆ ಸಾಮಗ್ರಿಗಳನ್ನು ಹೊತ್ತುಕೊಂಡು ಹೋಗಿ ಕೊಡುವದಕ್ಕಾಗಿ ಕೆಲವು ಗಾಡಿಗಳನ್ನೂ ಕುದುರೆಗಳನ್ನೂ ಕೊಟ್ಟು ಸಹಾಯ ಮಾಡಿದ್ದರು, ಇದಕ್ಕಾಗಿ ಇಂಡಿಯಾ ಗವರ್ನಮೆಂಟಿನವರು ಮಹಾರಾಜರವರ ಸಹಾಯವನ್ನು ಬಹಳವಾಗಿ ಮೆಚ್ಚಿಕೊಂಡರು, ಈಗ ಆ ಮಹಾರಾಜರು ಮೊದಲಿದ್ದ ಗಾಡಿ ಕುದುರೆಗಳನ್ನು ಇನ್ನೂ ೧೦೦–೨೦೦ಕ್ಕೆ ಹೆಚ್ಚಿಸಿರುತ್ತಾರೆ.

ದಕ್ಷಿಣ ಮಲಬಾರಿಗೆ ಸೇರಿದ ಜಾಘಾಟ್ ಎಂಬ ಊರಿನಲ್ಲಿ ತಿಯಾರ್ ಜಾತಿಯವನೊಬ್ಬನು ಪಲ್ಲ ತೆಂಗಿನಕಾಯಿ ಮುಂತಾದ ಸಾಮಾನುಗಳನ್ನು ಪೇಟೆಯಲ್ಲಿ ಕೊಂಡುಕೊಂಡು ಮನೆಗೆ ತೆಗದುಕೊಂಡು ಹೋಗಿ ಕೊಟ್ಟು ಆಹಾರಪದಾರ್ಥವನ್ನು ಮಾಡಿ ಎಂದು ಹೇಳಿ ತಾನು ಸ್ನಾನಮಾಡುವದಕ್ಕೆ ಹೋದನು ಅವನು ಸ್ನಾನ ತೀರಿಸಿಕೊಂಡು ಅಡಿಗೆ ಮನೆಯೊಳಕ್ಕೆ ಹೋಗುವಷ್ಟರೊಳಗಾಗಿ ಮನೆಯವರಲ್ಲಾ (೯ ಮಂದಿ) ಸತ್ತು ಬಿದ್ದಿದ್ದರು. ಅವನು ಘಾಬರಿಪಟ್ಟು ನೆರೆಹೊರೆಯವರಿಗೆ ತಿಳಿಸಿದನು ಸರ್ಕಾರದವರು ಹೋಗಿ ಶವಗಳನ್ನು ಕೊಯಿದು ನೋಡಿದಾಗ ಅವರ ಹೊಟ್ಟೆಯಲ್ಲೆಲ್ಲಾ ವಿಷವಿತ್ತು. ಅವರು ಅಡಿಗೆ ಮಾಡುತ್ತಿದ್ದಾಗ ಒಂದು ಹಲ್ಲಿಯು ಅದರೊಳಕ್ಕೆ ಬಿದ್ದಹಾಗೂ ಅವರೆಲ್ಲ ಅದನ್ನು ತಿಂದಿದ್ದರಿಂದ ಪ್ರಾಣಬಿಟ್ಟರೆಂತಲೂ ತಿಳಿದುಬಂತು.

ADVERTISEMENTS

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖ್ ೧೯ನೇ ಮೇ ೧೮೯೬

ಸಿಟಿ ಮ್ಯುನಿಸಿ ಪಾಲಿಟಿಗೆ, ಸಾಮಾನುಗಳು, ಕೂರಮುಟ್ಟುಗಳು ವಗೈರೆ ಸರಬರಾಯಿ ಮಾಡುವ ಇಷ್ಟವುಳ್ಳವರು ಕೋಟೆಯಲ್ಲಿ ಇರುವ ಮ್ಯುನಿಸಿಪಲ್ ಆಫೀಸ್‌ನಲ್ಲಿ ತಮ್ಮ ತಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಇಡತಕ್ಕದ್ದು. ಅದೇ ಕೆಲಸಕ್ಕಾಗಿ ಅಲ್ಲಿ ಒಂದು ಬುಕ್ಕು ಇಡಲ್ಪಟ್ಟಿದೆ. ಆಫೀಸು ಕಾಲ ಬೆಳಿಗ್ಗೆ ೧೧ ಘಂಟೆಯು ಮೊದಲು ಸಾಯಂಕಾಲ ೪½ ಘಂಟೆಯವರೆಗೆ.

T. T. LEONARD,
President,
City Municipal Commission

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ತಾ॥ ೨೩ ಮೇ ೧೮೯೬.

ಸನ್ ೧೮೯೬ನೇ ಇಸಿವಿ ಜೂನ್ ತಿಂಗಳ ೨ನೇ ತಾರೀಖ್ ಮಂಗಳವಾರ ಮ್ಯುನಿಸಿಪಲ್ ಇಲಾಖಾ ಸ್ಟೋರಿನ ಹಳೇ ಸಾಮಾನ್ ವಗೈರೆ ಮ್ಯುನಿಸಿಪಲ್ ಆಫೀಸಬಳ ಪ್ರಾತಃಕಾಲ ೮ ಘಂಟೆಗೆ ಶುರು ಮಾಡಿ ಹರಾಜ್ ಮಾಡಲ್ಪಡುತ್ತೆ. ನಗದು ಮೊಬಲಗು ದಾವತೀ ಮಾಡತಕ್ಕದ್ದು.

T. T. LEONARD,
President,
City Municipal Commn.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ ಆಫೀಸಿನಿಂದ.

ಇಷ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

1896ನೇ ಇಸಿವಿ ಜೂಲೈ 7ನೇ ತಾರೀಖ್‌ಲಾಗಾಯಿತು 1898 ನೇ ಇಸಿವಿ ಜೂಲೈ 6 ರವರೆಗೆ ಎರಡು ವರುಷಗಳ ಮಟ್ಟಿಗೆ ಸಿಟಿ ಮಜಕೂರ್‌ನಲ್ಲಿ ಮ್ಯುನಿಸಿಪಲ್ ಲಾಂದ್ರಗಳಿಗೆ ದೀಪ ಹತ್ತಿಸತಕ್ಕಬಗ್ಗೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1896 ನೇ ಇಸಿವಿ ಜೂನ್ 15 ನೇ ತಾರೀಖ್ ಸೋಮವಾರದ ವ್ಯೊಳಗಾಗಿ ಕೊಡಬಹುದು.

ದರಖಾಸ್ತು ಲಕೋಟೆಗಳ ಮೇಲೆ ಭಾಗದಲ್ಲಿ "ಬೆಂಗಳೂರು ಸಿಟಿಯಲ್ಲಿ ದೀಪ ಹತ್ತಿಸತಕ್ಕಬಗ್ಗೆ ಟೆಂಡರ್" ಯೆಂದು ಬರೆದು ಸಿಟಿ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರವರಿಗೆ ಅರ್ಪಿಸಿ ಮಾಡಲ್ಪಡತಕ್ಕದ್ದು. ಮತ್ತು ದರಖಾಸ್ತುಗಳ ಸಂಗಡ ನಗದಾಗಲಿ, ಅಥವಾ ಕರೆನ್ಸೀ ನೋಟುಗಳಲಿ, 250 ರೂಪಾಯಿ ಹಾಜರಾಗ್ಮಾಡತಕ್ಕದ್ದು (ಟೆಂಡರ್ ಮಂಜೂರಾಗದೆ ಇರುವ ಪಕ್ಷಕ್ಕೆ ಮೊಬಲಗು ವಾಪಸು ಮಾಡಲ್ಪಡುತ್ತೆ, ಮತ್ತು ದರಖಾಸ್ತುಗಳಲ್ಲಿ ಮಾಹೇಯಾನಾ ಪ್ರತಿ ಒಂದು ಲ್ಯಾಂಪಗೂ ತೆಗಲುವ ರೇಟನ್ನು ನಮೂದಿಸತಕ್ಕದ್ದು) ಈಗ ಸುಮಾರು 850 ಲಾಂದ್ರಗಳು ಇರುತವೆ, ಇನ್ನು ಮುಂದೆ 1000 ಲಾಂದ್ರಗಳ ವರೆಗೂ ಜಾಸ್ತೀ ಆಗಬಹುದು.

ಪ್ರತಿ ದಿನದಲ್ಲಿಯೂ ಸಾಯಂಕಾಲ 6 ಘಂಟೇ ಲಾಗಾಯಿತು ಬೆಳಗಿನಝಾಮದ 4 ಘಂಟೇ ವರೆಗೂ ದೀಪಗಳು ಉರಿಯುತಲಿರತಕ್ಕದ್ದು. ಬತ್ತಿಯು ಅಗಲ 1 ಇಂಚ್ ಇರತಕ್ಕದ್ದು. ಮತ್ತು ಕೆರೋಸೀನ್ ಆಯಿಲ್ ಎಣ್ಣೆ 125 ಡಿಗ್ರಿಗಳ ಪ್ರಕಾರ ವುಳ್ಳದ್ದನ್ನ ಉಪಯೋಗಿಸತಕ್ಕದ್ದು. 18 ಮೋಂಬತ್ತಿ ಬೆಳಕಿಗೆ ಸಮನಾದ ಬೆಳಕು ಕೊಡತಕ್ಕ ಬರ್ನರ್ ಇಡತಕ್ಕದ್ದು.

ಕಂಟ್ರಾಕ್ಟಿಗೆ ಸಂಬಂಧಪಟ್ಟ ಕಡಮೆ ಷರತ್ತುಗಳನ್ನು ಮ್ಯುನಿಸಿಪಲ್ ಆಫೀಸಿನಲ್ಲಿ ಬರಹಮೂಲಕವಾಗಿ ಯಾಗಲಿ ರೂಬರೂ ಹಾಜರಾಗಿ ಯಾಗಲಿ ತಿಳದುಕೊಳ್ಳಬಹುದು.

ತಾ॥26ನೇ ಮೇ,
1896 ನೇ ಇಸಿವಿ.

T. T. LEONARD,
President,
City Muni. Commission.

ಸದರ್ನ್ ಮರಾಟಾ ರೆಯಿಲ್‌ವೆ.

(ಮೈಸೂರು ಸ್ಟೇಟ ರೆಯಿಲ್‌ವೆ)

ನೋಟೀಸ್.

"ಕೆಸ್ಟ್ರಾ ಸ್ಪೆಷಲ್ ಗೂಡ್ಸ್ ಟ್ರೇನ್" ಎಂಬ ಹೆಚ್ಚಿಗೆ ರೈಲ್ವೆ ಗಾಡಿಗಳು ಈ ಕೆಳಗೆ ವಿವರಿಸಿರುವ ಮೇರೆ—ತುಮಕೂರು ಬೆಂಗಳೂರು ಮಧ್ಯೆ ಸಂಚರಿಸುವವಾಗಿ ಅವುಗಳ ಮೂಲಕ ಪ್ರಯಾಣೀಕರನ್ನು ಸಹ ಒಯ್ಯಲ್ಪಡುವದು.

		ಘಂಟೆ	ನಿಮಿಷ
ಬೆಂಗಳೂರು ಬಿಡುವದು ಹಗಲು	..	7	30
ತುಮಕೂರು ಸೇರುವದು ಹಗಲು		10	37
ತುಮಕೂರು ಬಿಡುವದು ಹಗಲು	..	4	0
ಬೆಂಗಳೂರಿಗೆ ಸೇರುವದು ರಾತ್ರಿ	..	7	54

ತಾ॥ 25ನೇ ಮೇ
1896 ನೇ ಇಸಿವಿ.
ಬೆಂಗಳೂರು ಸಿಟಿ

ಟಿ. ಜೆ. ಮೆಕೆಲ್ಲಿಯರ್.
ಡಿಸ್ಟ್ರಿಕ್ಟ್ ಟ್ರಾಫಿಕ್
ಸೂಪರಿಂಟೆಂಡೆಂಟ್.

NOTICE

VAIDYASARA SANGRAHA.

A TREATISE ON THE PRINCIPLES OF

HINDU MEDICINE.

Price, including Postage Rs 5—0—0

ವೈದ್ಯಸಾರ ಸಂಗ್ರಹ.

ಇದು, ಚರಕ, ವಾಗ್ಭಟ, ಸುಶ್ರುತ, ಶಾರ್ಙ್ಗಧರಾದ್ಯನೇಕ
ಪೂರ್ವಗ್ರಂಥಗಳ ಸಂಗ್ರಹರೂಪವಾಗಿರುವದು
ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಖರ್ಚು
ಟಪಾಲ್ ಪ್ರತಿ, ಒಂದಕ್ಕೆ ರೂ, 5—0 –0

ಈ ಕಂಪೆನಿಯು ಸನ್ ೧೮೯೩ನೇಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತತ್ತಿಯು.

ಅತ್ಯಾಕರ್ಷಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ತತ್ತಿಗಳು ರೋಗನಾಶಕವಾದ ಅನೇಕ ವನಸ್ಪತಿಗಳ ನಿಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಪಾಕಿಸಿ, ಒಳ್ಳೇ ಹೆಚ್ಚಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ತತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವಿವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಕಾಮವಿಕಾರವಾದರೂ ತರೆಯಾದ ಗಂಡಸರಂತೆ ಪ್ರಜ್ವಲಿತವಾಗುತ್ತದೆ ಜನನೇಂದ್ರಿಯದಲ್ಲ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಾದ ಮುಂಚೆ ಅಥವಾ ಹಿಂಚೆ ಸುರಿದುಹೋಗುವ ಧಾತು ನಿಲ್ಲುತ್ತದೆ ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಪರಮ ಹಾಗೂ ಉಷ್ಣಸಂಬಂಧಿಕ ಬೇನೆಗಳ ಹೆಸರಿಲ್ಲದಂತಾಗಿ ಧಾತು ಪ್ರಶಸ್ತವಾಗುತ್ತದೆ. ಮೂರು ಹೊತ್ತುಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಸೌಚಕ್ಕಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ನಡೆಯುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳಬಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳ ವರೆಗೆ ನಡೆಯತಕ್ಕ ೧ ಡಬ್ಬಿಗೆ ೧–೮–೦ ರೂ॥ ಒಂದೇಸಾರ್ತಿಗೆ ೪ ಡಬ್ಬಿಗಳು ತಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಎಂಥಾ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪನಿಯ ಹೊರ್ತು ಬೇರೆ ಕಡೆಯಲ್ಲಿ ಸಿಗುವದಿಲ್ಲ ಯಾವತ್ತು ದೇಶಗಳಲ್ಲಿಯು ವೈದ್ಯಶಾಸ್ತ್ರಿಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ಪ್ಯಾಕಿಂಗ್ ಬೆಲೆ ಬೇರೆ ಕೊಡಬೇಕು. (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಲ್ಲಿ ಎಲ್ಲಾ ಬಜಾರದ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಳಾಸ—ಪಿ. ಎಲ್. ಎ. ಬ್ರದರ್ಸ್ ಮತ್ತು ಕಂಪೆನಿ,

ಸಕೆಂಡ್ ಇಂಗ್ಲಿಷ್ ಅಸಿಸ್ಟೆಂಟ್ ಆಫೀಸ್, ಡಿಸ್ಟ್ರಿಕ್ಟ ಬೆಳಗಾಂವಿ

ಪೋಸ್ಟ್—ಬೆಳಗಾಂವ. Post BELGAUM.

ಈ ಇಂಡ್ಯ ದೇಶದೊಳು ಬ್ರಿಟಿಷಿನವರ ಆಧಿಪತ್ಯಕ್ಕೆ ಪ್ರಧಾನ ನಗರವಾಗಿರುವ ಕಲ್ಕತ್ತೆಯೊಳು ಹಗಲಲ್ಲಿ ಅಥವಾ ಸಾಯಂಕಾಲವಾದ ಕೂಡಲೆ ಕಳವು ನಡೆಯದದಿನವೇ ಇಲ್ಲವೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

ಮುಂಬೈ ಆಧಿಪತ್ಯಕ್ಕೆ ಸೇರಿದ ಅಹಮದಾಬಾದ್ ಎಂಬ ಪಟ್ಟಣದಲ್ಲಿ ಒಬ್ಬಾತನು ತನ್ನ ಹೆಂಡತಿಯು ತನ್ನ ತಮ್ಮನೊಡನೆ ಸ್ನೇಹವಂ ಬೆಳಸಿ ವ್ಯಭಿಚಾರ ಮಾಡುತಲಿದ್ದದನ್ನು ತಿಳಿದು ಒಂದು ದಿನ ಆ ಅಯೋಗ್ಯನಾದ ತಮ್ಮನು ನಿದ್ರೆ ಮಾಡುತಲಿರುವಾಗ ಅವನನ್ನು ಕೊಂದು ಹಾಕಿದನು. ಅಲ್ಲಿನ ಸೆಷನ್ ಜಡ್ಜಿಯವರು ಅವನಿಗೆ ಆಜನ್ಮ ದ್ವೀಪಾಂತರ ವಾಸಮಾಡುವ ದಂಡನೆಯಂ ವಿಧಿಸಿದರಂತೆ

ಬಂಗಾಳಾ ಆಧಿಪತ್ಯದ ಪಶ್ಚಿಮೋತ್ತರ ಪ್ರಾಂತಕ್ಕೆ ಸೇರಿದ ಜಮಾಲಪುರದ ಜಮೀನ್ದಾರರ ಮನೆಗೆ ಈಗ್ಗೆ ಕೆಲವು ದಿನಗಳ ಹಿಂದೆ ದರೋಡೆ ಕಳ್ಳರು ಇಳೇಬಿದ್ದು ಲೂಟೀ ಮಾಡಲು ಯತ್ನಿಸಿದರು. ಮನೆಯಲ್ಲಿ ಹೆಂಗಸರು ಇರುವ ಭಾಗದ ಹೊರಗಿನ ಗೋಡೆಯಲ್ಲಿ ಒಂದು ದೊಡ್ಡ ರಂಧ್ರವನ್ನು ಮಾಡಿದರು. ಕಳ್ಳರಲ್ಲಿ ಒಬ್ಬನು ಒಳಗೆ ಏನಾದರೂ ತಡೆ ಇದೆಯೋ ಎಂದು ನೋಡುವ ನಿಮಿತ್ತ ತನ್ನ ಕೈಯನ್ನು ಒಳಗೆ ಚಾಚಿದನು. ಕೂಡಲೆ ಒಳಗೆ ಇದ್ದ ಹೆಂಗಸರಲ್ಲಿ ಒಬ್ಬಳು ಅನನ್ಯ ಸಾಧಾರಣವಾದ ಮತ್ತು ಅತಿಶ್ಲಾಘ್ಯವಾದ ಧೈರ್ಯದೊಡನೆ ಒಂದು ಕುಡುಗೋಲಿನಿಂದ ಒಳಗಿದ್ದ ಕೈಯನ್ನು ಕಡಿದುಬಿಟ್ಟಳು. ಈ ಅನಿರೀಕ್ಷಿತವಾದ ಭಂಗವನ್ನು ನೋಡಿ ಕಳ್ಳರೆಲ್ಲರು ಪರಾರಿಯಾದರು. ಮಾರನೆಯದಿನ ಬೆಳಿಗ್ಗೆ ಕತ್ತರಿಸಲ್ಪಟ್ಟ ಕೈಯನ್ನು ಪೊಲೀಸಿನವರ ವಶಮಾಡಿದರು.

ಪ್ರಾಯಶಃ ಹಿಂದೂ ಜನರು ಈ ಕಾಲದಲ್ಲಿ ವ್ಯಾಪಾರಾರ್ಥವಾಗಿ ಮತ್ತು ಇತರ ಕಾರ್ಯೋದ್ದೇಶದಿಂದ ನಮ್ಮ ಕರ್ಮ ಭೂಮಿಯಾದ ಭರತಖಂಡವನ್ನು ಬಿಟ್ಟು ಅನ್ಯದೇಶಗಳಿಗೂ ದ್ವೀಪಾಂತರಗಳಿಗೂ ಹೋಗಿ ವಾಸವಾಗಿರುವದು ಸಾಮಾನ್ಯವಾಗಿ ಎಲ್ಲರಿಗೂ ತಿಳಿಯದ ವಿಷಯವಲ್ಲವೆಂದು ತೋರುತಿದೆ. ಮದರಾಸ್ ಪ್ರಾಂತದಿಂದ ಹಿಂದೂ ವರ್ತಕರು ಪೆನ್ನಾಂಗ್, ಸಿಂಗಪುರ ಮೊದಲಾದ ಬ್ರಹ್ಮ ದೇಶ ಅಂದರೆ, ಬರ್ಮಾ ದೇಶದ ದಕ್ಷಿಣ ಭಾಗದಲ್ಲಿನ ಪ್ರದೇಶಗಳಲ್ಲಿ ಸೇರಿರುತ್ತಾರೆ. ಜಗತ್ಪ್ರಸಿದ್ಧರಾದ ನಾಟುಕೋಟ ಶೆಟ್ಟಿಗಳು ಆ ಪ್ರಾಂತಗಳಲ್ಲಿನ ಅಕ್ಕಿ ವ್ಯಾಪಾರವನ್ನು ಸಂಪೂರ್ಣವಾಗಿ ತಮ್ಮ ವಶಪಡಿಸಿಕೊಂಡಿರುತ್ತಾರೆ. ಇಂಗ್ಲಿಷ್ ನವರೇ ಮೊದಲಾದ ಯೂರೋಪ್ ಖಂಡದವರು ವಿದೇಶಗಳಲ್ಲಿಯೂ ವಿಜನರ ಮಧ್ಯೆಯೂ ವಾಸಮಾಡಬೇಕಾದ ಸಂದರ್ಭದಲ್ಲಿ ತಮ್ಮ ಇತರ ಆಚಾರ ವಿಹಾರಗಳಲ್ಲಿ ಯಾವದನ್ನು ಬಿಟ್ಟರೂ ಕ್ರಿಕೆಟ, ಕುದುರೆ ಜೂಜು ಮೊದಲಾದ ಸ್ವದೇಶೀಯ ವಿಲಕ್ಷಣ ವ್ಯಾಯಾಮಗಳಂ ಹ್ಯಾಗೆ ಬಿಡುವದಿಲ್ಲವೊ ಹಾಗೆಯೇ ಹಿಂದೂ ಜನರು ಎಲ್ಲಿ ಹೋದರೂ ಯಾವದೇಶದಲ್ಲಿ ವಾಸಮಾಡುತ್ತಿದ್ದರೂ ಒಂದು ಗುಡಿಯನ್ನು ಕಟ್ಟದೆ ಬಿಡುವದಿಲ್ಲವು. ಇವರು ಮಾಂಸಾಹಾರಿಗಳಲ್ಲವಾದಕಾರಣ, ವಿಶೇಷತಃ ಗೋಮಾಂಸ ಭಕ್ಷಕರಲ್ಲದೆ ಇರುವ ಕಾರಣ ಪ್ರಾಣಿರಕ್ಷಣೈಕ ದೃಷ್ಟಿಯುಳ್ಳವರು ಇಂತ ಹಿಂದೂ ಮತಾವಲಂಬಿಗಳಾದವರು ಆಫ್ಘಾನಿಸ್ಥಾನ್, ಪಾರಸೀಕ, ಮಧ್ಯ ಆಸ್ಯಾದೇಶ, ಚೀನ, ಸ್ಯಾಮ, ಜಾಪಾನ, ಮತ್ತು ಸಕೃತ ಪೆಸಫಿಕ, ಅಂದರೆ ಶಾಂತಸಾಗರದ ಭೂಭಾಗಗಳಲ್ಲಿಯೂ ವಾಸವಾಗಿರುತ್ತಾರೆ ಈ ರೀತಿಯಾದ ಅನ್ಯದೇಶವಾಸದಿಂದ ಇವರು ಹಿಂದೂತ್ವವನ್ನು ಬಿಟ್ಟರೆಂದಾಗಲೀ ಸ್ವಲ್ಪವಾದರೂ ಅದರಲ್ಲಿ ಭಕ್ತಿವಿಶ್ವಾಸಗಳನ್ನು ಕಳಕೊಂಡರೆಂದಾಗಲೀ ಹೇಳಲಾಗದು.

ಈ ಬೆಗೆ ಕೆಲವು ಕಾಲದಿಂದ ಹೈದರಾಬಾದ್ ನಿಜಾಮರವರು ಯೂರೋಪ್ ಖಂಡದ ದೇಶಗಳನ್ನು ನೋಡುವ ನಿಮಿತ್ತ ಹೊರಡುವರೆಂಬ ವಾರ್ತಾ ವಿಷಯಕವಾಗಿ ಜನರು ಬಹು ವಿಧವಾಗಿ ಆಡಿಕೊಳ್ಳುತ್ತಾರೆ. ಬಹುಕಾಲದಿಂದ ಈ ವಿಧವಾದ ಯಾತ್ರೆಯನ್ನು ಉದ್ದೇಶಿಸಿರುವದೇನೋ ನಿಜವೆ, ಆದರೆ ಇದುವರೆಗೂ ಹೊರಡದೆ ಇರುವದಕ್ಕೆ ಅನೇಕ ಪ್ರಬಲ ಕಾರಣಗಳೂ ಅನುಪಪತ್ತಿಗಳೂ ಇರುವಂತೆ ತಿಳಿಯ ಬರುತಿದೆ. ನಿಜಾಮರವರ ದೃಷ್ಟ್ಯಾ ತಾವು ಕಾಬೂಲ ಅಮೀರರವರಾದ ಅಬ್ದುಲ್‌ರಹಿಮಾನ್ ಖಾನರವರಿಗಿಂತಲೂ ಶ್ರೇಷ್ಠರಾದ ಸರದಾರ ನಸರುಲ್ಲಾಖಾನರವರಿಗಿಂತ ಉತ್ತಮ ಪದವಿಯಂ ಅಲಂಕರಿಸುವರೆಂದು ಭಾವಿಸಿರುತ್ತಾರೆ. ಹೀಗಿರುವಲ್ಲಿ ನಿಜಾಮರವರು ಇಂಗ್ಲಾಂಡಿಗೆ ಹೋದಲ್ಲಿ ಅಲ್ಲಿನ ಅಧಿಕಾರಿಗಳು ಈಗ ಕೆಲವು ತಿಂಗಳ ಹಿಂದೆ ಸರದಾರ ನಸರುಲ್ಲಾಖಾನರವರನ್ನು ಬರಮಾಡಿಕೊಂಡ ರೀತಿಯಲ್ಲಿ ಇವರನ್ನು ಬರಮಾಡಿಕೊಂಡು ಮೆಲ್ಲಿ ಅವರಿಗೆ ಸಮವಾಗಿ ಯೆಣಿಸುವರೋ ಯೆಂಬಶಂಕೆ ನಿಜಾಮರಿಗೆ ಉಂಟಾಗಿ ಅಲ್ಲಿಗೆ ಹೋಗುವದಕ್ಕೆ ಅಂಜುತ್ತಾರೆಂದು ಒಂದು ಕಾಲದಲ್ಲಿ ಪ್ರವಾದ ಉಂಟಾಗಿತ್ತು. ಆದರೆ ಈಗ ತಿಳಿಸಲ್ಪಡುವಂತೆ ಹಾಗೆ ಇವರು ಸ್ವರಾಜ್ಯದಲ್ಲಿಯೇ ಇರುವದು ಯುಕ್ತವೆಂಬ ಸಲಹೆ ಕೊಡಲ್ಪಡುವದಕ್ಕೆ ನಿಜವಾದ ಕಾರಣವ್ಯಾವದೆಂದರೆ, ತಮ್ಮ ಸಾಮಂತ ರಾಜ ಭಕ್ತಿಯು ಅಷ್ಟು ಅಚಲಿತವಾದದ್ದಲ್ಲವೆಂತಲೂ ನಿಜಾಮರವರು ರಾಜ್ಯವಂ ಬಿಟ್ಟು ಚಿರಕಾಲದವರೆಗೂ ಹೊರಗೆ ದೇಶಾಂತರದಲ್ಲಿದ್ದರೆ ಈ ಸಾಮಂತರ ಕೈಕೆಳಗೆ ಕಸ್ವಾಧೀನಗಳಾದ ಮತ್ತು ಅಸಂಖ್ಯಾಕವಾದ ಪರಿಜನ ಯೋಧರು ಇರುವದರಿಂದ ರಾಜ್ಯಕ್ಕೆ ಕಷ್ಟಗಳು ಸಂಭವಿಸುವವೆಂಬದು. ಬರುವರ್ಷ ಫ್ರಾನ್ಸ ದೇಶದ ಪ್ರಧಾನ ನಗರವಾದ ಪ್ಯಾರಿಸ್ ಪಟ್ಟಣದಲ್ಲಿ ನಡೆಯುವದಾಗಿರುವ ಸರ್ವವಸ್ತು ಪ್ರದರ್ಶನೋತ್ಸವಕ್ಕೆ ಖಂಡಿತವಾಗಿ ಹೋಗಬೇಕೆಂದು ನಿಜಾಮರವರು ಉದ್ದೇಶಿಸಿರುವದರಿಂದ ಹಾಗೆಯೇ ಇಂಗ್ಲಾಂಡ್ ದೇಶಕ್ಕೂ ಅವಶ್ಯವಾಗಿ ಹೋಗುವದು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕು ಜಿಲ್ಲಾ ವೃತ್ತಾಂತಗಳು.

ಈ ಸಂಸ್ಥಾನದ ದಿವಾನರಾದ ಸರ್ ಕೆ. ಶೇಷಾದ್ರಿ ಅಯ್ಯರವರು ಕಳೆದ ಶನಿವಾರದ ದಿನ ಮೈಸೂರು ಮಾರ್ಗವಾಗಿ ಈ ಪುರಿಗೆ ಬಂದರು.

ಈ ಬೆಗೆ ಒಂದು ವಾರದ ಮೊದಲು ವರ್ಷ ಸೂಚನೆಗಳು ಸುತರಾಂ ಇಲ್ಲವು. ಬಿಸಿಲು ಚನ್ನಾಗಿ ಕಾಯುತಲಿದೆ. ಜೀನಿಸಿಗಳ ಧಾರಣೆಗಳು ಒಂದೇ ವಿಧವಾಗಿದೆ ಜನಾರೋಗ್ಯವು ಸಾಮಾನ್ಯವಾಗಿದೆ.

ಈ ಸಂಸ್ಥಾನದಲ್ಲಿ ಅಸಿಸ್ಟೆಂಟ ಎಕ್ಸೈಸ್ ಕಮೀಷನರಾಗಿದ್ದ ಮಿ ಮೆಕಿಂಜಿ ಸಾಹೇಬರು ಯೋರೋಪಾದ ಮದರಾಸಿನಲ್ಲಿ ಮರಣವನ್ನು ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಶವವನ್ನು ಬೆಂಗಳೂರಿಗೆ ತಂದು ದಫನ್ ಮಾಡಿದರು. ೧೮೭೪ ನೇ ಇಸವಿಯಿಂದ ಇವರು ಈ ಸಂಸ್ಥಾನದ ಶೇಂದಿ ಇಲಾಖೆಯಲ್ಲಿ ಇದ್ದುಕೊಂಡು ಸರ್ಕಾರದ ಹುಟ್ಟುವಳಿಯನ್ನು ಬಹಳವಾಗಿ ವೃದ್ಧಿ ಪಡಿಸಿದರು. ಅವರಿಗೆ ೪೦ ವರುಷ ವಯಸ್ಸಾಗಿತ್ತು.

ಮೈಸೂರು ಅರಮನೆಯಲ್ಲಿ ಮಹಾರಾಜರವರ ಉಪನಯನವೂ ರಾಜ ಕನ್ನಿಕೆಯ ವಿವಾಹವೂ ನಡೆದ ಪ್ರಯುಕ್ತ ಮಹಾರಾಣಿಯವರು ಸಂಸ್ಥಾನದ ದೊಡ್ಡ ಮನುಷ್ಯರಿಗೂ ಅಧಿಕಾರಿಗಳಿಗೂ ಮರ್ಯಾದೆಗಳನ್ನು ಕೊಟ್ಟದ್ದು ಸರಿಯಷ್ಟೆ ಅರಮನೆಯ ನೌಕರರ ಪೈಕಿ ಮಾಹೆ ೫೦ ರೂಪಾಯಿಗಿಂತ ಕಡಮೆ ಸಂಬಳಗಾರರಿಗೆಲ್ಲ ಒಂದು ತಿಂಗಳಿನ ಸಂಬಳವನ್ನು ಇನಾಮಾಗಿ ಕೊಡಿಸಿದರು. ಇದರಿಂದ ಬಡವರಾದ ನೌಕರರ ಸಂತೋಷವನ್ನು ಅಭಿವ್ಯಕ್ತವೆಂದು ಹೇಳಲು ಅಸಾಧ್ಯವಾಗಿದೆ.

ಈ ಊರು ಚಾಮರಾಜ ಪೇಟೆಯ ಮೂರನೆ ಬೀದಿಯಲ್ಲಿರುವ ಚೀಫ್ ಕೋರ್ಟ್ ಸ್ಟಾಂಪುವೆಂಡರು ಬ್ರಹ್ಮಶ್ರೀ ಪದ್ಮಪಲ್ಲಿ ನಂಜುಂಡ ಶಾಸ್ತ್ರಿಗಳು ಮತ್ತು ಇವರಣ್ಣಂದಿರಾದ ಮೆಹರಾಜ ಕಾಲೇಜ್ ಸಂಸ್ಕೃತ ಪಂಡಿತರಾದ ಪದ್ಮಪಲ್ಲಿ ವಿಶ್ವೇಶ್ವರ ಶಾಸ್ತ್ರಿಗಳು ಸಹ ಹಾವು ಕಚ್ಚಿದಂಥಾವರಿಗೆ, ಮಂತ್ರ ಹಾಕಿ ಬಹಳ ಜಾಗ್ರತೆಯಾಗಿ ಗುಣಮಾಡುತ್ತಾರೆ. ಇದೇ ನಮ್ಮ ಅನುಭವಕ್ಕೆ ಸ್ಪಷ್ಟವಾಗಿ ತಿಳಿದು ಬಂದಿರು ವದ್ದರಿಂದಲೂ, ಈ ಪ್ರಾಂತ ವೆಸ್ಟರನ್ ಎಕ್ಸ್‌ಟೆನ್ಷನ್ ಯೆಂಬ ಚಾಮರಾಜ ಪೇಟೆಯಲ್ಲಿ ಹಾವುಗಳ ಕಾಟ ಬಹಳವಾಗಿರುವದರಿಂದಲೂ, ಜನಗಳಿಗೆ ತಿಳಿಯದೆ ಬಹಳವಾಗಿ ಹಿಂಸೆ ಪಡುತ್ತಾ ಇರುವದ್ದರಿಂದಲೂ ಈಗ ನಾನು ತಿಳಿಸುವದೇನೆಂದರೆ.

ಎಂಥಾ ಜಾತಿ ಹಾವುಗಳಿಂದ ಕಚ್ಚಲ್ಪಟ್ಟಂತೆ ಇರಾಗಲಿ ಮತ್ತು ಕಚ್ಚಿದ ನಂತರ ಮೈಮೇಲೆ ಸ್ಮೃತಿ ತಪ್ಪಿ ಹಲ್ಲುಗಳು ಕಚ್ಚಿಕೊಂಡು ಬಿಷದ ಪಸೈದೆ ಹೊಟ್ಟೆಯೊಳಕ್ಕೆ ಹೋಗದೆ ಇರುವ ಸಂದರ್ಭಗಳಲ್ಲಿಯೂ, ಸಹ ಇವರುಗಳನ್ನು ಕರೆದುಕೊಂಡು ಬಂದರೆ ಮಂತ್ರಹಾಕಿ ಬಹಳ ಜಾಗ್ರತೆಯಾಗಿ ಗುಣ ಮಾಡುತ್ತಾರೆ ಇದು ಆರ್ತರಾದಂಥಾವರಿಗೆ ಉಪಯೋಗವಾಗಲೆಂಬ ಉದ್ದೇಶದಿಂದ ಮಾತತಕ್ಕ ಪ್ರಯೋಗವೆ ಹೊರತು ಅರ್ಥಾಪೇಕ್ಷೆಯಿಂದ ಮಾಡತಕ್ಕವರಲ್ಲ

ಮೋಚಗಾನಹಳ್ಳಿ ಪಂಡಿತ ರಾಮಶಾಸ್ತ್ರಿ.

THE MYSORE GAZETTE.
ಮೈಸೂರು ಗೆಜೆಟ.

ಗುರುವಾರ, ತಾ|| ೪ ನೇ ಜೂನ್ ೧೮೯೬.

ಮೈಸೂರ್ ಗವರ್ನಮೆಂಟಿನವರಿಂದ ಕೊಡಲ್ಪಟ್ಟ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ಬೆಂಗಳೂರು, ತಾ|| ೨೯ನೇ ಮೇ ೧೮೯೬.

ನಂ|| ೧೦೪೩೭—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟ್ ಫರಸ್ಟ್ ಅಸಿಸ್ಟೆಂಟ ಕನಸರ್ವೇಟರಾದ ಮೆ|| ವೈ. ಸೀತಾರಾಮಯ್ಯನವರಿಗೆ ೧೮೯೬ನೇ ಇಸವಿ ಜೂನ್ ೧ನೇ ತಾರೀಖ್ ಮೊದಲು ಅಥವಾ ಅವರದನ್ನು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಎರಡು ತಿಂಗಳು ಹದಿನಾರು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ತಾ|| ೨೯ನೇ ಮೇ ೧೮೯೬.

ನಂ|| ೧೦೪೧೪—ಹೊಸಕೋಟೆ ತಾಲ್ಲೂಕು ಅಮಲ್‌ದಾರಿಟ ಬಾಬಾ ಸಾಹೇಬರಿಗೆ ೧೮೯೬ನೇ ಇಸವಿ ಏಪ್ರಿಲ್ ೨೯ನೇ ಮಿತಿಯ ೩೯ನೇ ಗವರ್ನಮೆಂಟ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ಪ್ರಿವಿಲೇಜ್ ರಜಾ ಇದರಿಂದ ಮತ್ತೊಂದು ತಿಂಗಳಿಗೆ ಜಾಸ್ತೀ ಮಾಡಲ್ಪಟ್ಟಿದೆ.

ತಾ|| ೩೦ ಮೇ ೧೮೯೬.

ನಂ|| ೧೦೪೮೦—ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್‌ದಾರ್ ಡಿ ಸುಬ್ಬರಾಯರು, ಹರ್ದೂ ಅಲ್ಲೇ ಇರುವರು ಶಾಮಿಲೇ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಮಳವಳ್ಳಿ ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಚಾರ್ಜ್ ತೆಗೆದುಕೊಂಡು ಕೆಲಸ ನೋಡುವಂತೆ ನಿಯಮಿಸಲ್ಪಟ್ಟಿರುತ್ತಾರೆ

ರೆವಿನ್ಯೂ ಪ್ರಾಬೇಷನರ್ ವೆಂಕಟರಾಯರು, ಡಿ ಸುಬ್ಬರಾಯರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಶ್ರೀರಂಗಪಟ್ಟಣದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನಿಯಮಿಸಲ್ಪಟ್ಟಿರುತ್ತಾರೆ.

ತಾರೀಖು ೨ನೇ ಜೂನ್ ೧೮೯೬.

ನಂ|| ೧೦೪೯೩—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಎಕಸೈಜ್ ಅಸಿಸ್ಟೆಂಟ ಕಮಿಷನರ್ ಮೆ|| ನಾರಣಪ್ಪಂಗಾರರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲುಗೊಂಡು ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ

ಟಿ ಷಮ್ಯೂಲಿಗೆ ಸೇರಿದ ಪ್ರೊಬೇಷನರ್ ಅಸಿಸ್ಟೆಂಟ ಕಮಿಷನರ್ ಮೆ|| ಎ ಆರ್ ತ್ಯಾಗರಾಜ ಅಯ್ಯರವರು, ಮೆ|| ನಾರಣಪ್ಪಂಗಾರ್ರವರು ರಜಾಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಡಿಸ್ಟ್ರಿಕ್ಟ ಎಕಸೈಜ್ ಕಲೆಕ್ಟರ್ ವಿಷಯವಾಗಿ ಕೆಲಸಕ್ಕೆ ವರ್ಗ ಮಾಡಲ್ಪಟ್ಟಿರುತ್ತಾರೆ

ತಾರೀಖ್ ೨ನೇ ಜೂನ್ ೧೮೯೬.

ನಂ|| ೧೦೫೦೭—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಗವರ್ನಮೆಂಟ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಮೆ|| ಟಿ ರಾಮಸ್ವಾಮಯ್ಯಂಗಾರ್ರವರಿಗೆ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ನಂ|| ೧೦೫೦೯—ಟಿ ಷಮ್ಯೂಲ್ ನಾಲ್ಕನೇ ಕ್ಲಾಸ್ ಅಸಿಸ್ಟೆಂಟ ಕಮಿಷನರ್ ಮೆ|| ಕೆ. ಆರ್ ಶ್ರೀನಿವಾಸಯ್ಯಂಗಾರ್ರವರು ಸದರಿ ತರಗತಿಯಲ್ಲಿ ಒಂದು ವರ್ಷದಕಾಲ ಟಿಷ್ಪತ ಹುದ್ದೆ ಮಾಡಿರುತ್ತಾರೆಯಾಗಿ, ೧೮೯೫ನೇ ಇಸವಿ ನವಂಬರ್ ಗವರ್ನಮೆಂಟಿನ ೪೦೬—೧೦ನೇ ನಂಬರ್ ಗವರ್ನಮೆಂಟ ಪ್ರೊಸೀಡಿಂಗ್ಸ್ ಅನುಸರಿಸಿ, ೧೮೯೫ ನೇ ಇಸವಿ ನವಂಬರ್ ೧೮ನೇ ತಾರೀಖ್ ಮೊದಲು ಮೂರನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ

SUMMARY OF NEWS.
ವೃತ್ತಾಂತ ಸಂಗ್ರಹವು.

ಪಟ್ಟಾಭಿಷೇಕವು ಈಗ ನಡೆಯುವದರಿಂದ ಇನ್ನು ಮುಂದೆ ಇದರ ಆಚರಣೆಯು ನಡೆಯುವದಿಲ್ಲವೆಂದೂ ತಿಳಿಯಬರುತ್ತದೆ.

ಮಹೀಶೂರು ಸಂಸ್ಥಾನದ ರಾಜರು ಶ್ರೀ ಲಕ್ಷ್ಮೀನಾರಾಯಣ ಎಂಬುವರು ವಿಲಾಯಿತಿಗೆ ಹೋಗಿ ಸಿವಿಲ್ ಸರ್ವೀಸ್ ಪರೀಕ್ಷೆಗೆ ಓದಿಕೊಂಡು ಬರುವದಕ್ಕೆ ಅವರಿಗೆ ೧,೫೦೦೦ ರೂ ಸಹಾಯ ಕೊಡಿಸಿರುತ್ತಾರೆ.

ಹಿಮವತ್ಪರ್ವತದಲ್ಲಿ ಕಾಂಚನಗಂಗಾ ಎಂಬ ಪರ್ವತಶಿಖರವು ಡಾರ್ಜಿಲಿಂಗ್ ಪಟ್ಟಣದ ಪ್ರಜೆಗಳಿಗೆ ದಿನವೂ ಕಾಣುತ್ತಿದೆ. ಎಂತಲೂ ಇದರಿಂದ ಆ ಪ್ರಾಂತದಲ್ಲಿ ಕ್ಷಾಮ ಬರುತ್ತದೆಂದು ಜನರು ಹೆದರಿಕೊಂಡಿದ್ದಾರೆಂತಲೂ ವರ್ತಮಾನ ಬಂದಿದೆ.

ಬೌದ್ಧಧರ್ಮ ಸ್ಥಾಪಕನಾದ ಗೌತಮ ಬುದ್ಧನ ಜಯಂತ್ಯುತ್ಸವವನ್ನು ಕಳೆದ ತಿಂಗಳ ೨೬ನೇ ತಾರೀಖಿನಲ್ಲಿ ಕಲ್ಕತ್ತೆಯಲ್ಲಿ ನಡೆಸಿದರು. ಮಹಾಜನರು ಸೇರಿದ್ದರು. ಬುದ್ಧನ ಜಯಂತಿಯು ಈ ವರ್ಷ ಪ್ರಾರಂಭವಾಗಿರುತ್ತದೆ.

ವಿಜಯನಗರದ ಮಹಾರಾಜರು ತಮ್ಮ ಪಟ್ಟಣದ ಉತ್ತರ ಕ್ರಿಯಾದಿಗಳನ್ನು ಜರುಗಿಸಿ ಪಟ್ಟಣದಲ್ಲಿ ನಡೆಸಿದರು. ಸುಮಾರು ಒಂದು ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡಿದ್ದರು. ಆ ಊರಿನ ಬಡ ಜನರಿಗೆ ವಸ್ತ್ರಗಳನ್ನು ಹಂಚಿ ಊಟಗಳನ್ನು ಕೊಡಿಸಿದರು.

ನವಲಗುಂದದಲ್ಲಿ ಸಿಡಿಲು ಬಡಿದು ಕೆಲವು ದಿನಗಳ ಹಿಂದೆ ತಮ್ಮ ತೋಟದಲ್ಲಿ ಇರುವತ್ತು ಜನ ಮನೆ ಬಳಿಯ ಮರದ ನೆರಳಿನಲ್ಲಿ ಉತ್ತರವಾಗಿ ನಿಂತಿರಲು ಈ ಮರವು ಸಿಡಿಲಿನ ಹೊಡೆತದಿಂದ ಸುಟ್ಟು ಹೋಯಿತು. ಈ ಪೂರ್ವದಲ್ಲಿ ಇಂತಹ ಪ್ರಸಂಗವು ಇದನ್ನು ಬಿಟ್ಟು ಸಂಭವಿಸಿದ್ದಿಲ್ಲ.

ಒಂಗೋಲು ಪ್ರಾಂತದಲ್ಲಿ ರೈಲುಗಾಡಿಗಳು ಹೋಗುವ ಸ್ಟೇಷನಿನ ಬಳಿ ಒಬ್ಬ ಪ್ರಯಾಣಸ್ಥರಿಗೆ ಒಬ್ಬ ಹುಡುಗನು ಸಿಕ್ಕಿ ಪ್ರಾಣ ಸಂಕಟಪಡುತ್ತಿದ್ದನು. ಒಬ್ಬ ಸ್ತ್ರೀಯು ಅವನನ್ನು ಕಾಪಾಡಿ ಧೈರ್ಯವಾಗಿ ಹಿಡಿದುಕೊಂಡು ಬಂದಿರುವಳು. ಈ ಧೈರ್ಯ ಕ್ಕಾಗಿ ತಿಂಗಳಿಗೆ ಬಹುಮಾನವು ಸಿಗುತ್ತಲಿದೆಯಂತೆ.

ಈ ವ್ಯಸನದಲ್ಲಿಲ್ಲ ಅತಿ ದೊಡ್ಡ ಪುಸ್ತಕ ಭಂಡಾರವು ಪ್ಯಾರಿಸ್‌ನಲ್ಲಿದೆ, ಇದರಲ್ಲಿ ಸುಮಾರು ೨೦,೦೦,೦೦೦ ಪುಸ್ತಕಗಳಿವೆ. ಲಂಡನ್ನಲ್ಲಿರುವ ಸರ್ವಜನ ಪ್ರದರ್ಶನಾಲಯದಲ್ಲಿರುವವು ಎರಡನೆಯದಾಗಿಯೂ, ರಷ್ಯಾ ರಾಜಧಾನಿಯಾದ ಸೆಂಟ್ ಪಿಟರ್ಸ್‌ಬರ್ಗ್‌ನಲ್ಲಿರುವದು ಮೂರನೆಯದಾಗಿಯೂ ಇದೆ. ಇವುಗಳಲ್ಲಿ ಮೊದಲನೆಯದರಲ್ಲಿ ೧,೬೦,೦೦೦ ಪುಸ್ತಕಗಳೂ, ಎರಡನೆಯದರಲ್ಲಿ ೧೦,೦೦,೦೦೦ ಪುಸ್ತಕಗಳೂ ಇವೆಯಂತೆ.

ಸಂಯುಕ್ತ ಸಂಸ್ಥಾನಗಳ ಪೂರ್ವದಿಕ್ಕಿನಲ್ಲಿರುವ ಸೆಂಟ್ ಲೂಯಿ ಎಂಬ ಪಟ್ಟಣದಲ್ಲಿ ಹೋದವಾರ ಸೈಕ್ಲೋನ್ ಎಂಬ ಸುಂಟರಗಾಳಿಯು ಪ್ರಸ್ತವಾಗಿ ಅನೇಕ ಮನೆಗಳು ನೆಲಸಮವಾದವು. ಸುಮಾರು ೩೦೦ ಜನರು ಸತ್ತುಹೋದರು. ಸುಮಾರು ಪ್ರಜೆಗಳು ಮನೆ ಇಲ್ಲದೆ ಅಲೆಯುತ್ತಾರೆ. ೩೦೦ ಜನಗಳಿಗೆ ಪೆಟ್ಟು ತಗಲಿರಬಹುದು. ಕೋಟ್ಯಂತರ ದ್ರವ್ಯ ನಷ್ಟವಾಗಿರುವದಾಗಿ ವರ್ತಮಾನ ಬಂದಿದೆ.

ಗದೆಯಲ್ಲಿ ಬ್ರಾಹ್ಮಣರಲ್ಲಿ ಗಂಡ ಹೆಂಡರು ಒಂದು ಮನೆಯಲ್ಲಿ ವಾಸವಾಗಿದ್ದರು. ಇವರ್‍ಬ್ಬರೂ ಚಿಕ್ಕ ವಯಸ್ಸಿನವರು. ಒಬ್ಬರನ್ನೊಬ್ಬರು ಬಹಳವಾಗಿ ಪ್ರೀತಿ ಮಾಡುತ್ತಿದ್ದರು. ಗಂಡನಿಗೆ ಆಕಸ್ಮಾತ್ತಾಗಿ ಒಂದು ಕೆಟ್ಟ ರೋಗ ಹುಟ್ಟಿ ಅವನು ಅದರಲ್ಲೇ ಸತ್ತು ಹೋದನು. ಅವನ ಹೆಂಡತಿಯು ಗಂಡನ ಶವವನ್ನು ಬಿಗಿಸಿಕೊಂಡು ಬಾವಿಗೆ ಬಿದ್ದು ಸತ್ತುಹೋದಳು. ಅನಂತರ ಶಾನಭೋಗರು ಬಂದು ಅವಳನ್ನು ಹೊರಕ್ಕೆ ತೆಗೆಸಿದರು.

ಇತ್ತೀಚಿಗೆ ಕಲ್ಕತ್ತೆಯಲ್ಲಿ ಗ್ರೀಕ್ ಜಾರ್ಜ್ ಎಂಬುವನೊಬ್ಬ ಸ್ಯಾಂಡೋ ಅಂಥಾ ಪಹಿಲ್ವಾನನು ಬಂದಿರುತ್ತಾನೆ. ಅವನಿಗೆ ಅನೇಕ ಉಕ್ಕಿನ ಸಲಾಕಿಗಳನ್ನು ಬಗ್ಗಿಸುವುದೂ ಕಬ್ಬಿಣದ ಸರಪಳಿಗಳನ್ನು ಕಿತ್ತು ಹಾಕುವುದೂ ಇತ್ಯಾದಿಗಳು ಸುಲಭವಾಗಿವೆ. ಅವನು ತನ್ನ ತಲೆಯಮೇಲೆ ೧೫ ಪೌಂಡ್ ಭಾರವುಳ್ಳ ಸುತ್ತಿಗೆಯಿಂದ ೨೦೦ ಪೌಂಡ್ ಭಾರವುಳ್ಳ ಕಲ್ಲನ್ನು ಒಡೆಸಿಕೊಳ್ಳುತ್ತಾನಂತೆ, ಮತ್ತು ಅವನು ಎರಡು ಭುಜಗಳಮೇಲೆ (ನಮಗೆ ನೆನ್ನಿಗೆ ಏನೂ ಆಗಲಿಲ್ಲದೆ) ಮಲಗಿಕೊಂಡು ತನ್ನ ಎದೆಯಮೇಲೆ ಒಂದು ಕುದುರೆಯನ್ನು ನಿಲ್ಲಿಸಿಕೊಳ್ಳುತ್ತಾನಂತೆ. ಇದಲ್ಲದೆ ಇನ್ನೂ ಎಷ್ಟೋ ಚಮತ್ಕಾರಗಳನ್ನು ಮಾಡಿ ತೋರಿಸುತ್ತಾನಂತೆ.

EXTRACT
ಕಲಿಯುಗದ ರಾಮಸೇತುವೆ

ದಾರಿಗೆ ಅಡ್ಡಲಾಗಿ, ಹಳ್ಳ ಕೊಳ್ಳ, ಕಾಲುವೆ, ನದಿಗಳಿದ್ದರೆ ಅವುಗಳನ್ನು ದಾಟುವದಕ್ಕೆ ಮನುಷ್ಯರು ನಾನಾವಿಧ ರೂಪಾಯಗಳನ್ನು ಮಾಡಿ, ಕಟ್ಟಿಗೆ, ಗಾರೆ, ಕಲ್ಲು, ಕಬ್ಬಿಣ, ಮರ ಮುಂತಾದವುಗಳಿಂದ ಅನೇಕ ದಿನಗಳು ಶ್ರಮಪಟ್ಟು ಒಂದು ಸೇತುವೆಯನ್ನು ಕಟ್ಟುವರು. ವೃಕ್ಷಗಳ ಕಾಡುಗಳು ಬಹಳ ಅಡವಿಗಳಲ್ಲಿ ಒಂದು ವಿಧವಾದ ಕೋತಿಗಳು, ತಮಗೆ ಇಷ್ಟಬಂದಾಗ ತಮ್ಮ ಬಾಲವನ್ನು ಒಂದು ಮರದ ಕೊಂಬೆಗೆ ಸುತ್ತಿ, ಒಂದರ ಬಾಲವನ್ನು ಇನ್ನೊಂದು ಹಿಡಿದುಕೊಂಡು, ಹೀಗೆ ಒಂದು ಸರಪಳಿಯಂತೆ ತೂಗಾಡುತ್ತ, ಹೊಳೆಯ ಆಚೆ ದಡದ ಮರದ ಕೊಂಬೆಯನ್ನು ಹಿಡಿಯುವ ತನಕ ತೂಗಾಡುವವು. ಆಮೇಲೆ ಆ ಕೋತಿಗಳ ಸರಪಳಿಯ ಮೇಲಿಂದ ಉಳಿದ ಕೋತಿಗಳು ಆಚೆ ದಡಕ್ಕೆ ದಾಟುವವು.

ಅವು ಸೇತುವೆಯನ್ನು ಕಟ್ಟತಕ್ಕ ವಿವರ.

ಗುಂಪಿನಲ್ಲೆಲ್ಲಾ ಬಲವಾದ ಒಂದು ಕೋತಿಯು ದಡದ ಮೇಲಿರುವ ಒಂದು ಉನ್ನತವಾದ ಮರದ ಕೊಂಬೆಯನ್ನು ತನ್ನ ಎರಡು ಕೈಗಳಿಂದಲೂ ಕಾಲುಗಳಿಂದಲೂ ಪಟ್ಟಾಗಿ ಹಿಡಿದು ಕೊಂಡು ತೂಗುಬೀಳುವದು. ಅದರ ಸೊಂಟವನ್ನು ಮತ್ತೊಂದು ಮಂಗನು ತನ್ನ ಕೈಗಳಿಂದ ತಬ್ಬಿಕೊಂಡು ತಾನು ತೂಗುಬೀಳುವದು. ಮೊದಲಿನ ಕಪಿಯು ಸೊಂಟವನ್ನು ಎರಡನೇ ಕಪಿಯು, ತಬ್ಬಿ ಕೊಂಡಿರುವಂತೆಯೇ ಎರಡನೇ ಕಪಿಯ ಸೊಂಟವನ್ನು ಮತ್ತೊಂದು ಕಪಿಯು ತಬ್ಬಿಕೊಂಡು ತೂಗುಬೀಳುವದು. ಈ ರೀತಿಯಾಗಿ ಅನೇಕ ಮಂಗಗಳು ಒಂದಕ್ಕೊಂದು ಆಧಾರವಾಗಿ ಸರಪಣಿಯಂತೆ ತೂಗಾಡುತ್ತ, ಆಚೆ ದಡದ ಮೇಲಿರುವ ಮತ್ತೊಂದು ಮರದ ಕೊಂಬೆಯನ್ನು ಎಟುಕಿಸಿಕೊಳ್ಳುವದಕ್ಕೆ ಸಾಕಾದಷ್ಟು ಉದ್ದವಾದ ಮೇಲೆ ಕೆಳಗಿನ ಕಪಿಯು ತನ್ನ ಮೇಲಿರುವ ಕಪಿಯ ಅಪ್ಪಣೆ ಕಾದು ಕೈಬಿಟ್ಟು ಬಿಟ್ಟು ತೂಗಾಡಿ ತನ್ನ ಶಕ್ತಿಯಿಂದ ಆಚೆ ದಡದ ಮರದ ಕೊಂಬೆಯನ್ನು ಹಿಡಿದುಕೊಳ್ಳುವದು. ಈ ರೀತಿ ಉನ್ನತವಾದ ಒಂದು ತೂಗು ಸೇತುವೆಯಾಗುವದು. ಆಗ ಗುಂಪಿನಲ್ಲಿರುವ ಕಪಿಗಳೆಲ್ಲಾ ಒಂದರ ಹಿಂದೆ ಒಂದು ಈ ಸೇತುವೆಯ ಮೇಲೆ ದಾಟಿ ಹೋಗುವವು. ಆಮೇಲೆ ಕೊನೆಯ ಕಪಿಯು ಕೈಬಿಟ್ಟು ಸರಪಣಿಯು ಆಚೆ ದಡಕ್ಕೆ ಬಂದು ಸೇರುವದು.

ಎಷ್ಟೋ ದಿನಗಳ ಶ್ರಮದಿಂದ ಮನುಷ್ಯರು ಕಟ್ಟುವ ಸೇತುವೆಗಳನ್ನು ಕಪಿಗಳು ಕ್ಷಣಮಾತ್ರದಲ್ಲಿ ತಮ್ಮ ಶರೀರಗಳಿಂದಲೇ ಕಟ್ಟುವವು.

ಈ ಕಪಿಗಳನ್ನು ನಮ್ಮ ಪುರಾಣಗಳಲ್ಲಿ ಹೇಳಿರುವ ವಾನರರಿಗೆ ಹೋಲಿಸಬಹುದಾಗಿದೆ.—ಸುರಭಿ

ನೋಟೀಸ್.

ಬೆಂಗಳೂರು ಕರ್ನಾಟಕ ಪ್ರೆಸ್ಸಿನಲ್ಲಿ ವಿಕರಿಗೆ ಹಾಜರಿರತಕ್ಕ ಗ್ರಂಥಗಳು.

ಇದರ ಕೆಳಗಿನ ಪಟ್ಟಿಯಲ್ಲಿ ಕಾಣಿಸಲ್ಪಟ್ಟಿರುವ ಗ್ರಂಥಗಳಿಗೆ ಇದುವರೆಗೆ ನಿಷ್ಕರ್ಷೆಯಾಗಿದ್ದ ಕ್ರಯಗಳನ್ನು ಸ್ವಲ್ಪ ಇಳಿಸಿ ನಾಲ್ಕನೆಯ ಒಂದು ಭಾಗಕ್ಕೆ ಇಳಿಸಿರುವದರಿಂದ ಈ ಪಟ್ಟಿಯಲ್ಲಿ ಕಂಡ ಕ್ರಯದಲ್ಲಿ ತಪಾಲ ಹಾಸಲ್ ಸೇರಿರುವದಿಲ್ಲ. ಅದು ಆಯಾ ಗ್ರಂಥಗಳ ತೂಕಕ್ಕೆ ತಕ್ಕಂತೆ ಸೇರಿಸಲ್ಪಡುವದು.

ಶಿವಗೀತೆ (ಸಟೀಕು)	0	8	0
ಶಿವಾನಂದಲಹರಿ ಟೀಕೂ	1	1	0
ಚಾಣಿಕ್ಯನ ಸುಭಾಷಿತ ಟೀಕೂ	0	2	0
ಬಾಲರಾಮಾಯಣ ಟೀಕೂ	0	1	6
ಕಾಲಾಮೃತ ಟೀಕೂ	0	8	0
ವಿಷ್ಣು ಸಹಸ್ರನಾಮ	0	1	6
ಸೂರ್ಯ ಸಹಸ್ರನಾಮ	0	1	3
ಕೃಷ್ಣ ಕರ್ಣಾಮೃತ ಮೂಲ	0	1	0
ಶ್ರೀಕಂಠ ಅಮರ ಮೂಲ	0	1	6
ಪಂಚತಂತ್ರ ಟೀಕೂ	0	3	0
ಹನುಮದ್ವಿಲಾಸ	0	1	0
ಕಲ್ಕಿಯ ಪುರಾಣ	0	1	6
ಸುಭದ್ರಾ ಪರಿಣಯ	0	1	0
ಸುಭಾಷಿತ ಚರಿತ್ರೆ	0	1	0
ಕಾಳೀಯ ಮರ್ದನ	0	1	0
ಬಾಲಗ್ರಹ ಚಿಕಿತ್ಸೆ	0	1	0
ಭೇತಾಳ ಪಂಚವಿಂಶತಿ	0	1	0
ಮನುಷ್ಯ ದರ್ಪಣ, ಇಂಗ್ಲಿಷ್ ಕನ್ನಡ	0	8	0
ಅರೇಬಿಯನ್ ನೈಟ್ಸ್ ಕಥೆ 37 ರಾತ್ರಿಯವರೆಗೆ	0	8	0
ವೈರಾಗ್ಯ ವಚನ ಕಥೆ	0	0	6
ವೃಷಭೇಂದ್ರ ವಿಜಯ	1	8	0
ಕನ್ನಡ ಶ್ರೀಮದ್ಭಾಗವತ ದಶಮಸ್ಕಂದ	1	0	0
ಛಾಂದೋಗ್ಯ	0	9	0
ಸೀತಾವನವಾಸ	0	1	0
ಹರಿಭಕ್ತಿಸಾರ	0	0	4
ಗಂಗಾ ಅವತರಣ	0	0	6
ಬಾಲರಾಮಾಯಣ, ಮೂಲ	0	0	4
ಅಭಿಮನ್ಯು ಕಾಳಗ	0	1	0
ಬಭ್ರುವಾಹನ ಕಾಳಗ	0	2	0
ಗುರುಪಿತಾಗೀತೆ	0	0	6

50 ರೂಪಾಯಿಗಳಿಗೆ ಅಧಿಕ ಇಲ್ಲದೆ ಕೊಂಡುಕೊಳ್ಳುವ ಕ್ಕವರಿಗೆ ಸೇಕಡಾ ೬। ರೂಪಾಯಿನಂತೆ ಕಮಿಷನ್ ಕೊಡಲ್ಪಡುವುದು.

ADVERTISEMENTS.

ನೋಟೀಸ್.

ಬೆಂಗಳೂರು ಕಂಟೋನ್ಮೆಂಟ್ ಸಾಹುಕಾರ ಪೇಟೆಗೆ ಸೇರಿದ ಕಟ್ಟೆಗುಡ್ಡ ಯ್ಯಾನ ಬೀದಿಯಲ್ಲಿರುವ ದೇವಾಂಗದ ವಿಠಲದಾಸನ ಸಂಜೀವಯ್ಯ, ನನ್ನ ಬಲಾತ್ಕಾರದಿಂದ ನಾಗವ್ವನು ನನ್ನ ಇದರಿಂದ ನಮಗೆ ಜನಗಳೂ ತಿಳಿಯತಕ್ಕದ್ದೇನೆಂದರೆ ನನ್ನ ಸ್ವಂತವಾದ ಮ್ಯೂನಿಸಿಪಲ್ ೬ನೇ ಗಲ್ಲಿ ೧೧ನೇ ನಂಬರು ಮನೆಯನ್ನು ಬಾಡಿಗೆ, ಭೋಗ್ಯ, ಆಧಾರ, ಕ್ರಯ ವಗೈರೆ ನನ್ನ ಅನುಮತಿ ವಿನಾ ಮತ್ತೆ ಯಾರೇ ಆಗಲಿ ಮಾಡಲು ಯಾರಿಗೂ ಸ್ವಾತಂತ್ರ್ಯವಿರುವದಿಲ್ಲವು.

ತಾ|| ೬ನೇ ಜೂನ್, ೧೮೯೬ } ವಿಠಲದಾಸ ಸಂಜೀವಯ್ಯನ ರುಜು ನನ್ನ ಬಲಾತ್ಕಾರ ನಾಗಮ್ಮನ ಸ್ವಂತ ರುಜುವಿಗೆ ಸಂಜೀವಯ್ಯನ ಬರಹ

Bangalore City Municipality
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ
ನೋಟೀಸ್

ಈ ಕೆಳಗೆ ನಮೂದಿಸುವ ರಸ್ತೆಗಳು ಶಾವಾಗಾರಿ ನಿಮಿತ್ತದಿಂದ ಮತ್ತೊಂದು ನೋಟೀಸ್ ಕೊಡುವವರೆಗೆ ಗಾಡಿ ಹೋಗುವದಕ್ಕೆ ಅವಕಾಶವಿಲ್ಲದೆ ಬಂದು ಮಾಡಲ್ಪಡುತ್ತವೆ. ಆದುದರಿಂದ ಗಾಡಿ ವಾಹನಸ್ಥರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಗಾಡಿಗಳನ್ನು ರಸ್ತೆಯ ಮಧ್ಯದಲ್ಲಿ ಹೊಡೆಯತಕ್ಕದ್ದು. ಕಾವಲಿಗೆ ಇದ್ದುಕೊಂಡು ರಸ್ತೆಗಳ ಕೆಲಸ ನೆರವೇರಿಸುವ ಜನಗಳ ಜವಾಬು ಬಗ್ಗೆ ಕೆಂಪು ಬಾವುಟಗಳನ್ನು ಮತ್ತು ರಾತ್ರಿಯಲ್ಲಿ ಕೆಂಪು ಲಾಂದ್ರಗಳನ್ನು ಇಡುವ ಏರ್ಪಾಡು ಮಾಡಲ್ಪಡುವದು.

(1)	ಅವೆನ್ಯೂ ರೋಡ್	1 ಫರ್ಲಾಂಗ
(2)	ಮಾಮೂಲ್‌ಪೇಟ್ ರೋಡ್	4 "
(3)	ತುಮಕೂರು ರೋಡ್	1 "
(4)	ಅಕ್ಕಿಪೇಟೆ ಕ್ರಾಸ್ ರೋಡ್	2 "
(5)	ಚಿಕ್ಕಪೇಟೆ ಕ್ರಾಸ್ ರೋಡ್	5 "
(6)	ಸಾಹುಕಾರ ಛತ್ರದ ರೋಡ್	

ತಾ|| 1ನೇ ಜೂನ್, 1896ನೇ ಇಸವಿ } T. P. LEONARD, President, City Municipal Commission.

ಸದರ್ನ್ ಮರಾಠಾ ರೈಲ್ವೆ.
(ಮೈಸೂರು ಸ್ಟೇಟ್ ರೈಲ್ವೆ)
ನೋಟೀಸ್.

"ಎಕ್ಸ್ಪ್ರೆಸ್ ಸ್ಪೆಷಲ್ ಗುಡ್ಸ್ ಟ್ರೈನ್" ಎಂಬ ಹೆಸರಿಗೆ ರೈಲ್ವೆ ಗಾಡಿಗಳು ಈ ಕೆಳಗೆ ವಿವರಿಸಿರುವ ಮೇರೆ, ತುಮಕೂರು ಬೆಂಗಳೂರು ಮಧ್ಯೆ ಸಂಚರಿಸುವವಾಗಿ ಅವುಗಳ ಮೂಲಕ ಪ್ರಯಾಣಿಕರನ್ನು ಸಹ ಒಯ್ಯಲ್ಪಡುವದು.

	ಘಂಟೆ	ನಿಮಿಷ
ಬೆಂಗಳೂರು ಬಿಡುವುದು ಏವಿ	7	30
ತುಮಕೂರು ಸೇರುವದು ಏವಿ	10	37
ತುಮಕೂರು ಬಿಡುವದು ಏವಿ	4	0
ಬೆಂಗಳೂರಿಗೆ ಸೇರುವುದು ರಾತ್ರಿ	7	54

ತಾ|| 25ನೇ ಮೇ 1896ನೇ ಇಸವಿ ಬೆಂಗಳೂರು ಸಿಟಿ } ಟಿ. ಜೆ. ಮೆಕ್ ಲ್ಲೋಡ್, ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟ್.

Bangalore City Municipality
ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನ್
ನೋಟೀಸ್.

ಸನ್ ೧೮೯೬—೯೭ ನೇ ಇಸವಿಯಲ್ಲಿ ಸಿಟಿ ಮ್ಯುನಿಸಿಪಲ್ ಕೋಡಿಗಳಿಗೆ ಬೇಕಾದ ಗ್ರಾವೆಲ್ ಗಳ ಸರಬರಾಯಿ ಬಗ್ಗೆ ೧೮೯೬ ನೇ ಜೂನ್ ನೇ ತಾರೀಖು ಮಧ್ಯಾಹ್ನದವರೆಗೆ ಇದರ ಟೆಂಡರ್ ಮಾಡುವವರು ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ಬರವಣಿಗೆಕೊಳ್ಳುವರು.

ಇದರ ಷರತ್ತು, ಇತರ ಕಾಗದಗಳು ಮೊದಲಾದವುಗಳನ್ನು, ಆದಿತ್ಯವಾರಗಳು ವಿನಾ ಉಳಿದ ದಿನಗಳಲ್ಲಿ, ಹಗಲು ೧೧ ಗಂಟೆಯ ಮೇಲೆ ಕಛೇರಿ ಯಲ್ಲಿ ನೋಡಬಹುದು.

} T. P. LEONARD, President, City Municipal Commn.

ಸ್ವಪ್ನಸಾರ ಸಂಗ್ರಹ.

ಇದರ ಕ್ರಯ—ಒಂದು ಪ್ರತಿಗೆ ರೂ. 5 - 0

ಈ ಕಂಪೆನಿಯು ಸನ್ ೧೮೯೭ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ವಜ್ರಾಂಗ ಬಿಜೋರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳಸತಕ್ಕ ಉತ್ಪತ್ತಿಯು.

ಅತ್ಯುತ್ತಮವಾದ ದ್ರವ್ಯಗಳಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣದವರ ಅನೇಕ ವರ್ಷಗಳ ಅನುಭವದಿಂದ ಪುರುಷರಿಗೂ ಸ್ತ್ರೀಯರಿಗೂ ಬಹಳ ಹಿತಕರವಾಗಿರುತ್ತವೆ. ಈ ಉತ್ಪತ್ತಿಗಳು ವಾತ, ಪಿತ್ತ, ಕಫ ದೋಷಗಳಿಂದ ಉಂಟಾಗತಕ್ಕ ಯಾವತ್ತು ರೋಗಗಳನ್ನು ವಾಸಿಮಾಡುತ್ತವೆ. ಬಲಹೀನತೆ, ಮೈ ನೋವು, ಹಸಿವಿಲ್ಲದಿರುವಿಕೆ, ಅಜೀರ್ಣ ಮೊದಲಾದವುಗಳನ್ನು ಹೋಗಲಾಡಿಸುತ್ತವೆ. ಇದನ್ನು ಸೇವಿಸುವವರಿಗೆ ಬಲವೂ, ಪುಷ್ಟಿಯೂ, ಕಾಂತಿಯೂ ಉಂಟಾಗುತ್ತದೆ. ಈ ಔಷಧವು ೧೫ ದಿನಗಳವರೆಗೆ ಸಾಕಾಗುವ ಒಂದು ಡಬ್ಬಿಯ ಕ್ರಯ ರೂ|| ೧—೦—೦, ಅಂಚೆ ಹಾಸಲ್ ಪ್ರತ್ಯೇಕ. ಈ ಉತ್ಪತ್ತಿಯಿಂದ ನೂರಾರು ಜನರು ಸಹಜಾರೋಗ್ಯ ಹೊಂದಿರುತ್ತಾರೆ. ಕಂಪೆನಿಯಿಂದ ಬೇರೆ ಸ್ಥಳಗಳಲ್ಲಿ ಏಜೆಂಟರು ಇರುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯರು ಇದನ್ನು ಉಪಯೋಗಿಸುತ್ತಾರೆ. ಔಷಧವನ್ನು ಕೊಂಡುಕೊಳ್ಳತಕ್ಕವರು ಈ ಕಂಪೆನಿಗೆ ನೇರವಾಗಿ ಬರೆಯತಕ್ಕದ್ದು. (ಬೇರೆ ಕೆಲವು ಜನರು ಇದೇ ಹೆಸರಿನಿಂದ ಕೆಟ್ಟ ಔಷಧಗಳನ್ನು ಮಾರುತ್ತಾರೆ, ಎಚ್ಚರಿಕೆ.)

ಮೇಸ್ತ್ರೀಯಾದ—ಪಿ ಎಲ್ ಎ. ಬ್ರದರ್ಸ್ ಮತ್ತು ಕಂಪೆನಿ,

ಸಹೋದ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವಿ.

ಪೋಸ್ಟ್—ಬೆಳಗಾಂವಿ. Post BELGAUM.

BANGALORE—Printed and Published at the KARNATAKA PRESS, No. 40, HOSPITAL ROAD, CITY,—1896

THE

Karnataka Prakasika.

ಪ್ರಕಟನೆಯ ದಿವಟಿ { ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ 0 2 0 / ಎರಡನೆಯ ದಕ್ಕೆ ಪಙ್ಕ್ತಿ ಒಂದಕ್ಕೆ 0 1 0 }

ಕರ್ಣಾಟಕ ಪ್ರಕಾಶಿಕಾ.

Published Every Monday Morning.

ಚಂದಾದರರಿಗೆ.—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸಹ

ವರ್ಷ 1ಕ್ಕೆ	3 0 0	ವರ್ಷ 1ಕ್ಕೆ	4 0 0
6 ತಿಂಗಳಿಗೆ	2 0 0	6 ತಿಂಗಳಿಗೆ	2 8 0
3 ತಿಂಗಳಿಗೆ	1 1 0	3 ತಿಂಗಳಿಗೆ	1 8 0

VOL. XXIII BANGALORE:—MONDAY, JUNE 15, 1896. No. 24.

Select Telegrams

London 9th June.—News from Crete through Greek sources states that the Turks are still pillaging and burning. There is great excitement at Athens over the Cretan question. Mr Curzon, replying to several questions in the House of Commons last night, said that the Government had been pressing the Porte to remedy the state of unrest in Crete and Sir D. ... had been instructed ... to intervene ... between the Turks and the insurgents.

New York 10th June.—Mr Kinley's ... a ... that he is a determined upholder of a gold standard.

London 11th June.—*Punch* has an excellent cartoon in this week's number in which India represents ... sending to John Bull — "I find ... for Suakim but why not ..." To which Bull replies — "I really don't see why you should."

Pretoria 10th June.—The Reform leaders have been released on payment of a fine of twenty five thousand pounds each, and to undertake to abstain from politics in future, under pain of banishment.

London, 11th June.—Col Rhodes has refused to undertake to abstain from Transvaal politics, and has therefore been banished.

New York, 12th June.—Several democratic State conventions have declared in favour of a gold standard, and there is a strong feeling among American business men in the same direction.

THE

Karnataka Prakasika.

MONDAY, JUNE 15 1896.

RIOTS IN INDIA.

FOR a long time past there have been fight between the Mohammedans and Hindus in different parts of the country. At one time there may be a riot at Agra, at another at Lahore, then one in Bombay, another in Vellore. Wherever the two sections of the community reside there may be a disturbance. The worst of the kind was at Bombay a few years ago when a number of men was killed and a larger number wounded. At Agra there was also a serious disturbance, and there the followers of the Profet of Mecca reside in large numbers. That the riots referred to are due to religious causes there cannot be a doubt. It is generally at one of the great feasts that the rows take place. More especially is this the case when a Hindu and Mohamedan feast happen at the same time. For instance, when the Dassarah and Mohurram come together we may be certain there will be riots unless great precautions is taken. In fact, when these two feasts happen at the same time the authorities have to be on the alert, and the whole police of the country have to be in readiness to quell any rising that may show itself. Not only the police, but the military also have often to be employed to put down the riots caused by the clashing of the two feasts. Why, it may be asked, should this antagonism prevail? Why should the country be kept in a continual ferment on account of what may happen at some place or other? More than one cause may be assigned for the evil as it now presents itself. The Mohammedans were the former rulers of the country. They oppressed the people, in some parts they interfered with their religion. If the Emperors were fanatical they would not allow the Hindu rites to be performed in certain places, and some of them made forcible converts to Mohamedanism. The bad feeling then generated has come down to the present time, and while the Mohamedans try to give trouble the Hindus are determined to resist. They know the former have no special rights, they are under the same authority, they are governed in the same way. So, when they show themselves troublesome there may be a fight between the two. Then again, the Mussalmans knowing that the Hindus were once their subjects ... to treat them as though they were now under their authority, and thus the latter are naturally exasperated, trouble being the result. It may be some time before this feeling of antagonism, engendered in years gone by, will give way to something better. It may grow less in magnitude, but it may not entirely disappear till the far future has put in an appearance. There is another matter that has seriously aggravated the wrong feeling between the two sections of the community. We refer to the cow killing at the Mohamedan festivals. The slaughtering is often done in public, and this is very offensive to the Hindus, and contrary to their religion. It offends their prejudices, and they resent it very much. The cow killing at feasts, added to the feeling of which we have been speaking, is quite enough to cause the rows so common of late. If the Mohammedans were content to kill the cows they require in sacrifice in private, the matter would not be so bad. The Hindus might not hear about what took place, and, at least they could not see anything, therefore could not feel so much as they do now. The Government have passed stringent orders on the subject of cow killing, but still it is to be feared it is practised to a considerable extent by the Mussulmans, and hence the riots that take place. The laws will have to be made still stricter than they are before the Hindus will cease to feel aggrieved at what is done. Can nothing be done to mitigate the evil? Are the two sections of the community to go on for ever coming in contact with each other, coming to blows on the occasion of their feasts. No doubt in time such a state of things will cease to exist. Education will clear away the angularities that now exist, will make away with the barriers that now prevent one section from being as good friends with the other as it ought to be. But this will take time. The Mohamedans are not advancing so rapidly as the Hindus. They have not taken advantage of the means of education placed within their reach as have their fellow subjects, but yet they seem to imagine that their privileges are greater, that they are a superior race. This they believe on the ground that they once ruled the country, that they held the Hindus in subjection, that they, and they alone had to be obeyed. This feeling will have to be given up, and a better one must take its place. The leaders of the two communities should try their best to produce peace, they should lay themselves out to do this, and should not cease till they have accomplished their object. They must put before their more ignorant brethren that they will do themselves no good by quarrelling and fighting, that trouble will be the result, and that they should try to live on better terms than they have done in the past.

News and Notes

IT is stated that Ootacamund has been selected as the place of exile for the five expatriated Chitral Chiefs.

WITH reference to the suggestion to found a Ladies Park in Madras it is interesting to learn that a similar proposal is on foot in Calcutta.

THE Lt.-Governor of the North-West Provinces invested the young Nawab of Rampur with full powers of government on the 1st instant. The Council of State is now dissolved.

The *Malabar Spectator* is glad to hear that H. H. the Maharajah of Cochin has an eye on Mr U Achuthan Nair, Acting Sub-Judge of Mangalore as the next Dewan of the Cochin State.

A FRENCH gentleman with a turn for figures has calculated that if all the tobacco smoked annually in France, were to be rolled into a cord two inches thick, it would encircle the globe thirty times.

A FAMINE is reported to be now raging in Kuangsi, China, and the people are compelled to eat the leaves and bark of trees while some have been reduced to such straits as to sell their children to obtain food.

IT is likely that the Government of India will take up the question of railway extension on the North West Frontier as the result of the news that the Russians are building branch lines towards the Afghan border.

THE monsoon has apparently set in at Calcutta. All the conditions are present skies lowering ..., moisture laden southerly or south westerly winds and showers at intervals with a decided fall in the temperature.

THE rulers of the States of Bhopal Gwalior, Dewas Karwar, Gunah ..., Sandila, Orchha, Dholapur, Datia, Khaniadhana and Indore have ceded to the British Government full jurisdiction without their respective States.

THE numbers on relief works in the N W P., ... 128,000 in ... gratuitous ... relieved. About 60,000 are also employed on village works in Banda, Hamirpur and Jalaun, about ... are on relief works in Central India, and 1,200 in Rajputana.

WHILE the case against the Sub-Judge of Ellore for bribery and corruption continues to drag its slow length along, we see it stated in a Lucknow paper that Syed Mehdi, the Subordinate Judge of Bahraich has been suspended under the orders of the Local Government on charges of bribery and corruption. The Syed is an officer of ten years' standing.

THE Amir held a review of the troops at Kabul on 30th May. After the review His Highness warned those present that they must be prepared at all times for emergencies and for active service in the field. Referring to the friendship existing between this country and India he stated that he should always endeavour to prove himself the faithful ally of the Indian Government.

THE Sash's jewels are absolutely the most valuable in the world. There is one sword scabbard which is covered with diamonds, not a single stone being smaller than the nail of the little finger. A huge and splendidly brilliant emerald is almost the gem of the collection on it are engraved the names of many royalties who have possessed it at one time or another during its history.

WE are not surprised to learn from Calcutta that the Mohammadans are dissatisfied with the order passed by Justices O Kinealy and Banerjee declining to set aside the injunction of the Magistrate of Serampore restraining the slaughter of kine in a certain locality at Serampore during the Bakrid. In view of the disturbed feeling among the Hindus the injunction was quite called for.

ON the morning of the 10th instant, at 10-30 o'clock, while tram car No 3, driven by driver McGuinness was running from the Power Station at Egmore to the Beach a native lad aged about 12 years ran across the line near the Googoly bazaar with the result that the boy was knocked down and run over. The car was at once brought to a stand still, but it was too late as on examination the boy was found dead.

IT is rumoured that information has been received through private and authentic sources that the appointment of a successor to Sir Dennis Fitzpatrick's as Lieutenant-Governor of the Punjab is likely to be a surprise. There are three candidates for the post, Mr Mackworth Young, now Resident of Mysore, Sir Frederick Fryer at present on leave in England, and Mr Chichele Plowden, Resident of Hyderabad. Owing to powerful influence at home the last named is likely to be appointed.

The following letter from the Government of India, Military Department, dated, Simla, the 2nd June, to the President Bombay Presidency Association has been sent to us for publication —

Sir —I am directed to acknowledge the receipt of your telegram, dated 15th May 1896, and to inform you that the representations made in regard to the cost of the Indian troops despatched to Suakin being borne by Indian revenues will receive due consideration from the Government of India.—I am, &c

J A MILEY

Depy Secy to the Govt. of India

THE Second Social Conference of the G...very district was held in the Conference pandal on the 10th instant at 7 a.m. with Mr. D Seshagiri Row, High Court Vakil in the chair. The Conference resolved to request Government to legislate against performances of marriages of girls under 8. The Hon'ble Mr Jambulingam

Moodaliar and the Zemindar of Polavaram supported the proposition besides the mover and the seconder and several speakers. Six resolutions were passed relating to early marriages, sale of girls, marriage expenses, female education, and amalgamation of sub sects.

Before Mr J. M. Maskell at the Town Police Court, the other day, a Guzeratti named TuljaRam Hukichand Gongar was charged with having, on the 13th October last, committed theft in a Railway Train between Vellore and Madras, of Bank Notes to the value of Rs 1,770, the property of one Chinnappa a passenger. Mr M. O Alasingara Charry, Attorney-at Law, appeared for the complainant, and Messrs. Roddy Branson and T. Malindava Row, appeared for the accused. The complainant was travelling to Madras from Bangalore and had with him notes amounted to Rs. 1,770 and Rs 830 in cash which were placed in a bag and that again in a carpet bag which was locked. The latter was placed under his head as a pillow. On arrival at Katpadi, three Sowcars entered the compartment and the complainant to all appearance was the accused. On arrival at his destination, he examined his bag and found that it was cut open and the money abstracted which he at once reported to the Police. The matter was placed in the hands of Inspector Jay Singh of the Railway Police who traced the accused as the man who cashed the notes after their loss. Mr. Branson informed the Court that the question of jurisdiction would in all probability be put forward after evidence was taken.

THE queerest newspaper in the world is the "Pekin Gazette" This piece of Celestial journalism is undoubtedly unique. It is the oldest in the world, and it has actually the smallest circulation. It usually reaches the respectable total of one copy per day. When the staff feels tired once in a while, that copy is not issued or prepared. The "Gazette" is the organ of the Imperial Court, and it is now an interesting stager eight hundred years old. Every day of its appearance it is set up on a big board outside the Purple City where the Emperor dwells. It generally contains sixteen pages. The sheets are seven inches long and three wide. It contains essentially exclusive news, but no frivolous Court gossip. It doesn't suffer from the tyranny of the advertisement manager; in fact, it never printed an advertisement in all its life. The Emperor is the editor, and he dictates most of the articles. He is assisted in his editorial labours by his mother. Most of the matter consists of official acts and reports. No Chinese journalist dare comment on anything that appears in this amiable production of royalty. Some times after the paper is printed, the Imperial editor makes marginal notes with a red pencil. These, too, are sacred from common or garden journalistic comment.

Local and Provincial.

THE PUBLIC HEALTH.—Is not good just now. There have been a few cases of cholera in the Civil and Military Station.

THE DEWAN.—Will return to Mysore in a short time in order to be present at the celebration of the Maharajah's birthday.

WINNING IN LOTTERY.—We are glad to hear that two brothers, clerks in the Dewan's Office won a prize worth Rs 14,000 in the Calcutta Derby Race Lottery.—M.H.

SORE EYES.—We are sorry to say these are very prevalent just now. The cause is, we believe, the little flies that are now so numerous. These pests will continue for sometime to come.

THE Government of Mysore have advanced the sum of Rs. 1,500 to Mr C G Brown, Potographer, Bangalore, for preparing presentation Khedda albums.

PRINCE MARTHANDA VARMA OF TRAVANCORE.—Left for madras the other day en route to Travancore. Mr. Madhava Row, Mr. Krishna Iyer, and several others were present at the Railway platform to see the Prince off.

AN ACCIDENT.—We are sorry Mr Ananda thirtha Rau, Executive Engineer of Kolar, had a severe fall from his dog-cart and got one of his leg-bones fractured. We wish that this gentleman will be all right soon.

CLAIMANTS OF BRIJ LAL DAS' ESTATE.—There are some seven or eight persons each claiming for himself the whole estate of late Brij Lal Das. The Special Court which has been constituted to hear this case will begin to hold its sittings from to-day.

A RUMOUR.—Is strongly current to the effect that the respectable gentlemen of the Station who did not receive invitations to the royal wedding at the capital, are contemplating to submit a memorial to the Maharani Regent pointing out the omission of the person or persons concerned in the affair.

THE WEATHER.—We have had a few good showers of rain lately, and the atmosphere is much pleasanter than it was sometime ago. It looks as if there was more to come down soon. The trees are looking their best, and the grass is springing up. There has been a decided change for the better.

The Mysore Gazette.

Bangalore Thursday, 11th June 1896

NOTIFICATIONS BY THE GOVERNMENT OF MYSORE

GENERAL AND REVENUE

No 13225—J 1519, dated 8th June 1896

Mr C B Seshagiri Rao, Registrar of the Special Court, constituted under Regulation No I of 1896 is, in addition to his present duties, appointed to be additional Subordinate Judge, Bangalore, as a temporary measure with effect from the 2nd April 1896, and is invested with jurisdiction over the districts comprised in the Nandydroog Division.

No 13321—J 1520, dated, 10th June 1896

Under the provisions of Section 357 of the Code of Criminal Procedure Mr. V. R. Tyagaraja Iyer, M A, 3rd Class Magistrate and Probationary Assistant Commissioner, is directed to take down the evidence of witnesses in cases tried by him with his own hand in the English language.

No 10569—R 4164, dated, 4th June 1896

The one and half months' privilege leave of absence granted to C Tirunarayanaiengar, Deputy Amildar of the Closepet sub-taluk, in Government Notification No 9603—R. F 105-95, dated 25th April 1896, is hereby extended by one month and one day.

No 10606—R 4181, dated, 6th June 1896

Under Article 172 of the Mysore Service Regulations, C Krishna Rao, Amildar of the Channagiri taluk, is granted casual leave of absence for fifteen days from such date as he may avail himself of the same.

H. Balakrishna Rao, Revenue Head Munshi, Shimoga District office, is appointed to act as Amildar and 3rd class Magistrate of the Channagiri taluk during the absence of C Krishna Rao on leave or until further orders.

No 10612—R 4187, dated, 6th June 1896.

In cancelment of para 2 of Notification No 9575—R 3696, dated 25th April 1896, B Subba Rao of the Deputy Commissioner's office, Mysore, is appointed to act as Amildar and 3rd class Magistrate of the Tirumakudlu Narsipur taluk, during the absence of Amildar G Hanumanta Rao on leave, or until further orders.

No. 10671—R 4216, dated, 10th June 1896

Under Article 188 of the Mysore Service Regulations, A Viraraghavalu Naidu Amildar of the Arsikere taluk, is granted privilege leave of absence for fifteen days with effect from such date as he may avail himself of the same.

S. Venkataramanaiya, Deputy Amildar of Alur, is appointed to act as Amildar and 3rd class Magistrate of the Arsikere taluk during the absence of A Viraraghavalu Naidu on leave, or until further orders.

S Krishnappa, Judicial Head Munshi of the District office, is appointed to act as Amildar and 3rd class Magistrate of the Alur sub-taluk during the absence of S Venkataramanaiya on other duty, or until further orders.

ಕರ್ನಾಟಕ ಪ್ರಕಾಶಿಕಾ.

೧೮೯೬ನೇ ಇಸವಿ ಜೂನ್ ತಾ|| ೧೫ನೇ ಸೋಮವಾರ

ರೆಯಿಲ್ ಮಾರ್ಗದ ಅನುಕೂಲ್ಯ ಪ್ರತಿಕೂಲ್ಯಗಳು.

ಸುಮಾರು ನಾಲ್ವತ್ತು ವರ್ಷಗಳ ಹಿಂದೆ, ಈ ಇಂಡ್ಯಾ ದೇಶದೊಳು ಜನರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಬೇಕಾಗಿದ್ದರೆ ಮಧ್ಯಮಾರ್ಗದೊಳು ಅಲ್ಲಿಯಲ್ಲಿ ತಂಗಬೇಕಾದವರಾಗಿ ತನ್ಮೂಲಕ ನಾನಾವಿಧ ಕಷ್ಟಗಳನ್ನನುಭವಿಸುತಲಿದ್ದರು, ತತ್ರಾಪಿ ಕಾಶಿ ಮೊದಲಾದ ಪುಣ್ಯಕ್ಷೇತ್ರಗಳಿಗೆ ಯಾತ್ರಾರ್ಥಗಳಾಗಿ ಹೋಗುವಂತವರಿಗೆ ನಾಲ್ಕಾರು ತಿಂಗಳ ಕಾಲ ಹಿಡಿಯುತ, ಮಾರ್ಗದಲ್ಲಿ ಬಹುವಿಧ ಕಷ್ಟಗಳನ್ನನುಭವಿಸುತಲಿದ್ದರು: ಒಂದು ದೇಶದ ಪದಾರ್ಥಗಳು ಮತ್ತೊಂದು ದೇಶಕ್ಕೆ ಪ್ರಯಾಸ ಪೂರ್ವಕವಾಗಿಯೇ ಹೋಗುತಲಿತ್ತು. ಇಂಡ್ಯಾ ದೇಶದೊಳು ರೆಯಿಲ್ ಮಾರ್ಗ ಕಲ್ಪನಕ್ಕೆ ಪ್ರಾರಂಭವಾಗಿ ಅದು ವೃದ್ಧಿಯನ್ನೈದುತ ಬಂದನಾಗೆಲ್ಲ ಮೇಲ್ಕಂಡ ಪ್ರತಿಕೂಲ್ಯಗಳೆಲ್ಲವು ಕ್ರಮಕ್ರಮವಾಗಿ ನಿವೃತ್ತಿಯನ್ನೈದಿದವು ಮಾತ್ರವಲ್ಲದೆ ಇನ್ನು ಬಹುವಿಧ ಅನುಕೂಲ್ಯಗಳೂ ಸೌಲಭ್ಯಗಳೂ ಉಂಟಾದವೆಂಬುದರಲ್ಲಿ ಸಂದೇಹವು ಇಲ್ಲವು. ವ್ಯಾಪಾರವಾದರೋ, ಬಹುಮುಖವಾಗಿ ವೃದ್ಧಿಯಾಗಿಯೂ ಅನುಕೂಲವಾಗಿಯೂ ಇದೆ. ರೆಯಿಲ್ ಮಾರ್ಗಗಳ ಕಾಮಗಾರಿಗಳಲ್ಲಿ ಲಕ್ಷಾಂತರ ಪ್ರಜೆಗಳು ಕೂಲಿ ಮೂಲಕ ಜೀವಿಸುತಲಿದಾರೆ. ಕಾಲ ವರ್ಷಾಭಾವದಿಂದ ಒಂದು ದೇಶದೊಳು ದುರ್ಭಿಕ್ಷ ಪ್ರಾಪ್ತವಾದರೆ ಕೂಡಲೆ ಸುಭಿಕ್ಷವಾದ ದೇಶಗಳಿಂದ ಧಾನ್ಯಗಳು ಅಲ್ಲಿಗೆ ರವಾನಿಸಲ್ಪಡುವದರ ಮೂಲಕ ಅಲ್ಲಿನವರ ದುರ್ದಶೆಯು ಯಥೋಚಿತ ಉಪಶಮಿಸುತಿದೆ. ಒಂದು ಕಾರ್ಯಾರ್ಥ ಜರೂರಿಯಾಗಿ ದೂರದೇಶ ಹೋಗಬೇಕಾದ ಸಂದರ್ಭಗಳಲ್ಲಿ ರೆಯಿಲ್ ಮಾರ್ಗದಷ್ಟು ಪ್ರಯೋಜನಕಾರಿಯಾದುದು ಯಾವದೂ ಇಲ್ಲವೆಂದು ಹೇಳಬೇಕಾಗಿದೆ. ಇದರ ಸೌಲಭ್ಯ ಭಾಗವು ಹೀಗಿರುತಿದೆಯಷ್ಟೆ, ಇದರಲ್ಲಿ ಪ್ರಜೆಗಳಿಗೆ ಉಂಟಾಗುವ ಕಷ್ಟ ನಷ್ಟಗಳಾದರೋ ಅಪರಿಮಿತವಾಗಿರುತಿವೆ. ರೆಯಿಲ್ ಮಾರ್ಗದಲ್ಲಿ ಕಳುಹಿಸಲ್ಪಡುವ ಜವಳಿ, ಹಣ್ಣು, ಬೆಲ್ಲ, ಸಕ್ಕರೆ ಮೊದಲಾದ ಕೆಲವು ಪದಾರ್ಥಗಳು ಅನೇಕ ಸಂದರ್ಭಗಳೊಳು ಚೋರಿಯಾಗಿ ಆಬಗ್ಗ ಮಾಲೀಕರು ರೆಯಿಲ್ ಇಲಾಖಾ ಅಧಿಕಾರಿಗಳಲ್ಲಿ ಮಾಡುವ ಫಿರ್ಯಾದಿಗಳಿಗೆ ಅವರು ಕೊಡುವ ಜವಾಬ ಮತ್ತು ಇತರ ವರ್ತನಗಳಿಂದ ನಷ್ಟ ಹೊಂದಿದವರು ಭಗ್ನ ಮನಸ್ಕರಾಗಿ ಅವರೊಡನೆ ಹೋರಾಡುವದಕ್ಕಿಂತಲೂ ತಮಗೆ ಉಂಟಾದ ನಷ್ಟವನ್ನಾದರು ಸಹಿಸಿಕೊಳ್ಳುವದುಚಿತವೆಂದು ಭಾವಿಸಿ ಸುಮ್ಮನಾಗುತ್ತಾರೆ. ಪ್ರಯಾಣಸ್ಥರ ಗಾಡಿಯೊಳು ಒಂದು ಕಂಪಾರ್ಟ್‌ಮೆಂಟಿನಲ್ಲಿ ಒಂದು ಪಕ್ಕಕ್ಕೆ ಐವರಂತೆಯೇ ಕುಳತುಕೊಳ್ಳಬೇಕೇ ಹೊರತು ಜಾಸ್ತೀ ಜನಗಳನ್ನು ಕುಳ್ಳಿರಿಸಬಾರದೆಂದು ರೆಯಿಲ್ವೆ ರೂಲ್ಸ್ ಇದ್ದಾಗ್ಯೂ, ಮಧ್ಯಮಾರ್ಗ ಸ್ಟೇಷನ್‌ಗಳಲ್ಲಿ ಗಾಡಿಹತ್ತುವಜನರ ಸಂಖ್ಯೆಯು ಅಧಿಕವಾಗಿದ್ದರೆ ಬೇರೆ ಗಾಡಿಗಳನ್ನು ಸೇರಿಸುವದಕ್ಕೆ ಬದಲಾಗಿ ಮನಸ್ವೀ ಜನಗಳನ್ನು ಹತ್ತಿಸಿ ಮೊದಲು ಗಾಡಿಯಲ್ಲಿ ಕುಳತಿದ್ದವರಿಗೆ ವ್ಯರ್ಥವಾದ ಸಂಕಟಗಳನ್ನುಂಟುಮಾಡುತ್ತಾರೆ. ಯುರೋಪಿಯನ್ ಎಂಬ ಚಟ್ಟೀಗಾರರು ಬಂದುಬಿಟ್ಟರೆ, ಅವನೊಬ್ಬನಾಗಿದ್ದರೂ ಅವನಿಗೋಸ್ಕರ ಅದುವರೆಗೇನೇ ಗಾಡಿಯಲ್ಲಿ ಕುಳತಿರುವ ನೇಟಿವರುಗಳನ್ನು ಇಳಿಸಿ ಅವನನ್ನು ಕೂಡಿಸಿ ಬೀಗಹಾಕಿ ಅದರೊಳು ಇನ್ನ್ಯಾರೂ ಪ್ರವೇಶಿಸುವದಕ್ಕೆ ಅವಕಾಶವಿಲ್ಲದಂತೆ ಮಾಡುತ್ತಾರೆ. ಅವರ ಸಾಮಾನುಗಳು ಎಷ್ಟಿದ್ದಾಗ್ಯೂ ಅದಕ್ಕೆ ತೂಕ ಮಗ್ಗುರೆ ವಿಚಾರವೇ ಉಂಟಾಗುವದಿಲ್ಲವು. ಅವರಲ್ಲಿ ಹದಿನಾರು ವರ್ಷದವರು ಅರ್ಧ ಟಿಕ್ಕೆಟ ಪಡೆದು ಗಾಡಿಯಲ್ಲಿ ಕುಳತು ಹೋದಾಗ್ಯೂ ಕೇಳುವವರೇ ಇಲ್ಲವು. ಹನ್ನೆರಡು ವರ್ಷಗಳ ವಯಸ್ಸಿಗೆ ಒಳಪಟ್ಟ ನೇಟಿವ್ ಮಕ್ಕಳು ಅರ್ಧಟಿಕ್ಕೆಟ ತೆಗದುಕೊಂಡಿದ್ದರೆ ಇಳಿಯುವ ಸ್ಟೇಷನ್ನಲ್ಲಿ ಅವರಿಂದ ಅವಿಚಾರವಾಗಿ ಜುಲುಂ ಮೂಲಕ ಪೂರಾ ಟಿಕ್ಕೆಟು ರುಸುಂ ವಸೂಲ್ಮಾಡಲ್ಪಡುತಿದೆ. ಇಂತ ಅಕ್ರಮಗಳಿಗೆಲ್ಲ ಟಿಕ್ಕೆಟ ಕಲೆಕ್ಟರುಗಳೂ ಸ್ಟೇಷನ್ ಮ್ಯಾಸ್ಟರುಗಳೂ ಚಟ್ಟೀಗಾರರಾಗಿರುವದೇ ಮುಖ್ಯಕಾರಣವೆಂದು ಧಾರಾಳವಾಗಿ ಹೇಳುವೆವು. ಈ ಜನರ ಪ್ರಾಬಲ್ಯಕ್ಕೆ ಹೆದರಿ ನೇಟಿವ್ ಸ್ಟೇಷನ್ ಮ್ಯಾಸ್ಟರುಗಳೂ ಟಿಕ್ಕೆಟ ಕಲೆಕ್ಟರುಗಳೂ ಅವರಂತೆಯೇ ವರ್ತಿಸಲು ಪ್ರಾರಂಭಿಸಿರುತ್ತಾರೆ. ಮೈಲುಗಾಡಿಗಳು ಮಧ್ಯ ಸ್ಟೇಷನ್‌ಗಳಲ್ಲಿ ಮೂರುನಾಲ್ಕು ನಿಮಿಷಗಳ ಕಾಲವೇ ನಿಲ್ಲುತವೆ. ಗಾಡಿ ನಿಂತ ಕೂಡಲೆ ಮೂತ್ರ ವಿಸರ್ಜನೆಗೆ ಹೋಗಬೇಕಾದವರು ಎಷ್ಟು ಕೂಗಿದಾಗ್ಯೂ ಪೋರ್ಟರುಗಳು ಬಂದು ಬಾಗಿಲು ತೆರೆಯುವದಿಲ್ಲವು. ಪ್ರಯಾಣಸ್ಥರ ಕೂಗಾಟದಲ್ಲೇ ಮೂರುನಾಲ್ಕು ನಿಮಿಷಗಳು ಕಳೆದುಹೋಗಿ ಗಾಡಿ ಹೊರಟುಬಿಡುತವೆ. ಉತ್ತರ ದೇಶದ ಗಾಡಿಗಳೊಳು ಪ್ರತಿಯೊಂದರಲ್ಲೂ ಮೂತ್ರವಿಸರ್ಜನೆಗೆ ಒಂದು ಕಡೆ ಮರೆ ಮಾಡಲ್ಪಟ್ಟಿದೆ. ಮದರಾಸ್, ದಕ್ಷಿಣ ಇಂಡಿಯಾ, ಮತ್ತು ದಕ್ಷಿಣ ಮಹಾರಾಷ್ಟ್ರ ರೆಯಿಲ್ವೇಗಳಲ್ಲಿ ಇಂತ ವಸತಿಯು ಕಲ್ಪಿಸಲ್ಪಟ್ಟಿರುವದಿಲ್ಲವು. ಈ ವಿಷಯದಲ್ಲಿ ಪ್ರಜೆಗಳು ವೃತ್ತಾಂತ ಪತ್ರಿಕೆಗಳ ಮೂಲಕವಾಗಿಯೂ, ಅರ್ಜಿಗಳ ಮೂಲಕವಾಗಿಯೂ ಆಗಿಂದಾಗ್ಗ ಮಾಡುವ ಫಿರ್ಯಾದಿಗಳಿಗೆ ರೆಯಿಲ್ವೆ ಅಧಿಕಾರಿಗಳು ಉತ್ತರಂ ಅವಮಾನ ಕೊಡುವದೇ ಇಲ್ಲವು. ಕಂಚಿ, ಶ್ರೀರಂಗ, ತಿರುಪತಿ, ತಿರುವಣ್ಣಾಮಲೆ. ಚಿದಂಬರ ಮೊದಲಾದ ದೊಡ್ಡ ಸ್ಥಳಗಳಲ್ಲಿ ನಡೆಯುವ ಉತ್ಸವಗಳಿಗೆ ಹೋಗುವ ಪ್ರಯಾಣಸ್ಥರ ಸಂಖ್ಯೆಗೆ ತಕ್ಕಂತೆ ಗಾಡಿಗಳನ್ನು ಪೂರ್ವಭಾವಿಯಾಗಿ ಸಿದ್ಧಪಡಿಸದೆ, ಮರಗಳು, ಸೌದೆ, ಇಟಿಗೆ, ಸುಣ್ಣ ಮೊದಲಾದವುಗಳಂ ಸಾಗಿಸುವದಕ್ಕಾಗಿ ಮಾಡಲ್ಪಟ್ಟಿರುವ ದುರ್ಗಂಧ ಪೂರಿತವಾದ ಗೂಡ್ಸಿನ ಗಾಡಿಗಳಲ್ಲಿ ಜನಗಳನ್ನು ಒಬ್ಬರಮೇಲೊಬ್ಬರಂ ಕುಳ್ಳಿರಿಸಿ ಕುರಿಗಳಮಂದೆಯಂತೆ ಸಾಗಿಸಿಕೊಂಡು ಹೋಗುವದರಿಂದ ಪ್ರಯಾಣಸ್ಥರು ಬಹುವಿದಸಂಕಟಗಳನ್ನನುಭವಿಸಬೇಕಾದವರಾಗುತ್ತಾರೆ. ಇದೂ ಅಲ್ಲದೆ, ಕೆಲವು ಸ್ಟೇಷನ್‌ಗಳಲ್ಲಿ ಸ್ಟೇಷನ್‌ಮಾಸ್ಟರುಗಳೂ ಇತರ ತಾಬೇದಾರೀ ನೌಕರರೂ ತಮ್ಮ ಕಡೆ ಜನರು ಯಾರಾದರಿರುವ ಪಕ್ಷದಲ್ಲಿ ಅವರಿಗೆ ವಸತಿಯನ್ನುಂಟು ಮಾಡುವದಕ್ಕಾಗಿ ಯಾವದೊ ಒಂದು ಕಾರಣವಂ ಹೇಳಿ ಗಾಡಿಯಲ್ಲಿದ್ದವರನ್ನಿಳಿಸಿ, ಅವರ ಸ್ಥಾನಗಳಲ್ಲಿ ತಮ್ಮ ಕಡೆ ಜನರಂ ಕೂಡಿಸಿ, ಇಳದವರನ್ನು ಬೇರೆ ಗಾಡಿಗಳಿಗೆ ಹೋಗುವಂತೆ ಬಲಾತ್ಕರಿಸುತ್ತಾರೆ. ಗಾಡಿಯಲ್ಲಿ ಕುಳಿತವರು ಸ್ವಲ್ಪ ತಿಳುವಳಿಕೆಯುಳ್ಳವರಾಗಿರುವ ಪಕ್ಷದಲ್ಲಿ ಅವರಿಗೂ ಸ್ಟೇಷನ್ ಜನರಿಗೂ ಗುದ್ದಾಟಕ್ಕೆ ಪ್ರಾರಂಭವಾಗಿ ಕದಾಚಿತ್ ಪೋಲೀಸ್ ನವರ ಪ್ರವೇಶಕ್ಕೆ ಅವಕಾಶ ಉಂಟಾಗುವದೂ ಉಂಟು. ಹೆಂಗುಸರಿಂಗಾಗಿ ನಿಷ್ಕೃಷ್ಟವಾಗಿರುವ ಗಾಡಿಗಳಲ್ಲಿ ಪ್ರಯಾಣ ಮಾಡುವಂತವರಿಗೆ ಆಗಿಂದಾಗ್ಗ ಪ್ರಾಪ್ತವಾಗುವ ಸಂಕಟಗಳಿಗೆ, ಈಚೆಗೆ ಸುಮಾರು ಒಂದು ವರ್ಷದ ಹಿಂದೆ ದಕ್ಷಿಣ ಇಂಡಿಯಾ ರೆಯಿಲ್ ಮಾರ್ಗದಲ್ಲಿ ನಡೆದ ಒಂದೆರಡು ಮೊಕದ್ದಮೆಗಳೇ ಸಂಪೂರ್ಣ ನಿದರ್ಶನಗಳಾಗಿರುತವೆ, ಇತ್ಯಾದಿ ಕಾರಣಗಳಿಂದ ರೆಯಿಲ್‌ಮಾರ್ಗ ಸಂಚಾರದ ಮೂಲಕ ಉಂಟಾಗುವ ಸುಖಕ್ಕಿಂತಲೂ ಕಷ್ಟವು ಅಧಿಕವೆಂತಲೇ ಹೇಳಬಹುದು, ಪರಂತು ರೆಯಿಲ್ ಅಧಿಕಾರಿಗಳು ಮೇಲೆ ತಿಳಿಸಲ್ಪಟ್ಟ ವಿಷಯಗಳಿಗೆ ಅಕ್ಕರೆಯಿಂದ ಅವಧಾನ ಕೊಡುವರಾದರೆ ಅನ್ಯಗಳಲ್ಲಿ ಪ್ರಾಯಶಃ ಎಲ್ಲವು ಪರಿಹಾರವಾಗಿ ರೈಯಿಲ್ವೆ ಪ್ರಯಾಣಸ್ಥರ ಸೌಖ್ಯವೂ ಕಂಪೆನಿಯ ಲಾಭವೂ ವೃದ್ಧಿಯನ್ನೈದುವದರಲ್ಲಿ ಸಂದೇಹವಿರಲಾರದು, ಮತ್ತು ಈ ಕಾರ್ಯವು ಅವರಿಗೆ ಅವಶ್ಯ ಕರ್ತವ್ಯವೆಂದು ಹೇಳುವೆವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

ಚಿತ್ರಾಳ ರಾಜ್ಯದಿಂದ ಅನ್ಯದೇಶಗಳಿಗೆ ಕಳುಹಿಸಲ್ಪಡತಕ್ಕದ್ದೆಂದು ನಿರ್ಣಯವಾದ ಅಲ್ಲಿನ ಪ್ರಮುಖ ರೈತರ ವಾಸಕ್ಕೆ ಉದಕಮಂಡಲವು [illegible]ನಾಯಿಸಲ್ಪಟ್ಟಿರುವಂತೆ ಹೇಳಿಕೊಳ್ಳುತ್ತಾರೆ.

ವಾಯುವ್ಯ ದೇಶದೊಳು ಕ್ಷಾಮ ಪೀಡಿತಗಳಾದ ಪ್ರದೇಶಗಳಲ್ಲಿ ಒಟ್ಟು ೩,೨೯,೦೦೦ ಮಂದಿ ದುರ್ಭಿಕ್ಷ ನಿವಾರಕ ಕಾಮಗಾರಿಗಳಲ್ಲಿ ಕೂಲಿ ಮಾಡುವದರ ಮೂಲಕ ಜೀವಿಸುತಲಿದಾರೆ.

ಈ ತಿಂಗಳ ಗುರ್ರೇತಾರೀಖಿನಲ್ಲಿ ವಾಯುವ್ಯ ದೇಶದ ಲೆಪ್ಟಿನೆಂಟ ಗವರ್ನರವರ ಮೂಲಕ ರಾಂಪುರದ ನವಾಬರವರು ಸಂಪೂರ್ಣಾಧಿಕಾರ ಕೊಡಲ್ಪಟ್ಟು, ಇದುವರೆಗೆ ಇದ್ದ ಸಂಸ್ಥಾನದ ಕೌನ್ಸಿಲ್ ವಜಾ ಮಾಡಲ್ಪಟ್ಟಿತು.

ಚೀನಾದೇಶದ ಒಂದು ಭಾಗದಲ್ಲಿ ದುರ್ಭಿಕ್ಷ ತಲೆದೋರಿ, ಅಲ್ಲಿನ ಪ್ರಜೆಗಳು ಗಿಡಗಳ ಎಲೆಗಳನ್ನೂ ಪಟ್ಟೆಗಳನ್ನೂ ತಿಂದು ಜೀವಿಸಬೇಕಾದವರಾಗಿರುತ್ತಾರೆ. ಕೆಲವರು ಆಹಾರಾರ್ಥ ತಮ್ಮ ಮಕ್ಕಳನ್ನು ಮಾರಿ ಜೀವಿಸುತಲಿದಾರೆ.

ಫ್ರಾನ್ಸ್ ದೇಶದೊಳು ಪ್ರತಿಸಂವತ್ಸರದಲ್ಲೂ ಹೊಗೆ ಸುತ್ತಿಗಾಗಿ ಉಪಯೋಗಿಸಲ್ಪಡುವ ಹೊಗೇ ಸೊಪ್ಪನ್ನು ಎರಡಂಗುಲದಷ್ಟು ಸುರುಳಾಗಿ ಸುತ್ತಿದರೆ ಈ ಭೂಗೋಳಕ್ಕೆ ಮೂವತ್ತು ಸುತ್ತು ಬರುವದೆಂದು ಫ್ರೆಂಚ್ ದೇಶದ ದೊಡ್ಡ ಮನುಷ್ಯನೊಬ್ಬಾತನು ಲೆಕ್ಕಮಾಡಿರುತ್ತಾನೆ.

ಮಂಗಳೂರಲ್ಲಿ ಸಬ್ ಜಡ್ಜಿ ಕೆಲಸವನ್ನು ಬದಲೀ ನೋಡುತಲಿರುವ ಮೆ|| ಅಚ್ಯುತನಾಯರವರನ್ನು ಮುಂದೆ ತಮ್ಮ ಸಂಸ್ಥಾನದ ದಿವಾನರನ್ನಾಗಿ ಮಾಡಿಕೊಳ್ಳಬೇಕೆಂದು ಕೊಚ್ಚಿ ಮಹಾರಾಜರವರು ಉದ್ದೇಶಿಸಿರುವದಾಗಿ ಮಲಬಾರ್ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ.

ಈ ತಿಂಗಳ ೩ನೇ ತಾರೀಖಿನ ಬೆಳಗ್ಗೆ ಘನವಂತರಾದ ವಿಜಯನಗರದ ಮಹಾರಾಜರವರು ತಮ್ಮ ಮಾತುಶ್ರೀಯವರಾದ ವೃದ್ಧ ಮಹಾರಾಣಿಯವರು, ತಮ್ಮ ಸೋದರಿಯವರಾದ ರೇವಾ ಮಹಾರಾಣೀಯವರೊಡನೆ ಮುಂಬೈಯಿಂದ ಪ್ರೈವೆಟ್ ಟ್ರೈನಿನಲ್ಲಿ ಮದರಾಸಿಗೆ ಬಂದು ಸೇರಿದರು.

ಪಶ್ಚಿಮ ಸಮುದ್ರತೀರದಲ್ಲಿನ ಕರಾಚಿ ಎಂಬ ಜನಭರಿತವಾದ ಪಟ್ಟಣದಿಂದ ಕಲ್ಕತ್ತೆಗೆ ನೆಟ್ಟಗೆ ಹಾಕಲ್ಪಡುವ ರೈಲ್ ರಸ್ತೆಯ ಕಾಮಗಾರಿಯು ತ್ವರಿತದಲ್ಲಿ ಪೂರ್ತಿಯನ್ನೈದುವದಾಗಿರುವದರಿಂದ ಲಾಹೋರು, ಲಕ್ನೋ ಮತ್ತು ಅಲಹಾಬಾದ್ ಮಾರ್ಗವಾಗಿ ಬಹುದೂರ ಸಂಚರಿಸಿಕೊಂಡು ಕಲ್ಕತ್ತೆ ಸೇರಬೇಕಾದ ಶ್ರಮವು ನಿವೃತ್ತಿಯಾಗುವುದು.

ಬಂಗಾಳೆ ದೇಶಕ್ಕೆ ಸೇರಿದ ಕಾಜಿಂಬಜಾರ್ ಎಂಬ ಷಹರ್‌ನಿವಾಸಿಯಾದ ಮಹಾರಾಣೀ ಸುವರ್ಣಮಯಿ ಎಂಬಾಕೆಯು, ಬರಹಾಂಪುರಕ್ಕೆ ಜಲವಸತಿಯನ್ನುಂಟುಮಾಡುವ ಕಾರ್ಯಕ್ಕೆ ಹಿಡಿಯಬಹುದೆಂದು ಅಂದಾಜ್ ಮಾಡಲ್ಪಟ್ಟಿರುವ ಒಂದು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ ಖರ್ಚನ್ನು ಪೂರಾ ತಾನು ವಹಿಸುವದಾಗಿ ವಾಗ್ದಾನ ಮಾಡಿರುವಂತೆ ಕೇಳಿ ಆಕೆಯವರ ಔದಾರ್ಯಕ್ಕಾಗಿ ಬಹಳ ಸಂತೋಷಿಸುತ್ತೇವೆ

ಯಲ್ಲೋರ್ ಸಬ್ ಜಡ್ಜಿಯವರಾದ ಮೆಸ್ಟರ್ ಸ್ವಾಮಿನಾಥ ಅಯ್ಯರವರ ಮೇಲೆ ತರಲ್ಪಟ್ಟ ಲಂಚದ ಮೊಕದ್ದಮೆಯ ವಿಚಾರಣೆಯು ಪೂರ್ತಿಯನ್ನೈದಿ, ಇದಕ್ಕಾಗಿ ಗವರ್ನಮೆಂಟಿನವರಿಂದ ಗೊತ್ತುಮಾಡಲ್ಪಟ್ಟು ಅಲ್ಲಿಗೆ ಹೋಗಿದ್ದ ಸ್ಪೆಷಲ್ ಕಮ್ಮಿಷನರವರೂ ಉಭಯಪಕ್ಷಿಯವರ ತರಫೆ ಲಾಯರುಗಳೂ ಮದರಾಸಿಗೆ ವಾಪಸ್ ಬಂದು ಸೇರಿದರು, ಕಮ್ಮಿಷನರವರ ರಿಪೋರ್ಟ್ ಗವರ್ನಮೆಂಟಿಗೆ ಕಳುಹಿಸಲ್ಪಟ್ಟಮೇಲೆ ಇದರ ಫಲಿತಾಂಶವು ತಿಳಿಯಬರಬೇಕು.

ಇಂಗ್ಲಾಂಡಿಗೆ ಹೋಗಿ ಬ್ಯಾರಿಸ್ಟರ್ ಪರೀಕ್ಷೆಯಂ ಕೊಟ್ಟು ಬಂದ ಮೆ|| ಸಿ. ರಾಮಚಂದ್ರನಾಯುಡರೆಂಬವರಿಗೆ ಈಚೆಗೆ ಕೆಲವು ತಿಂಗಳ ಹಿಂದೆ ಬುದ್ಧಿಭ್ರಂಶ ವುಂಟಾಗಿ ನಿರ್ಬಂಧದಲ್ಲಿಡಲ್ಪಟ್ಟಿದ್ದರಷ್ಟೆ. ತನ್ಮೂಲಕ ಅವರಿಗೆ ಯಾವದೋ ಒಂದುಬಗೆ ರೋಗ ಪ್ರಾಪ್ತವಾಗಿ ಬಿದಿರು ಗಡೆಯಂ ಹೊಂದಿದ ಕೂಡಲೇ ಕೆಳಗೆ ಬಿದ್ದು ಪ್ರಾಣ ಬಿಟ್ಟರಂತೆ. ಈ ವರ್ತಮಾನವನ್ನು ಕೇಳಿದ ಕೂಡಲೆ ಅವರ ತಾಯಿಯವರು ಪುತ್ರಶೋಕವಂ ತಡೆಯಲಾರದೆ ಮೃತಪಟ್ಟರೆಂದು ಮದರಾಸ್ ವತ್ರಿಕೆಯೊಂದು ತಿಳಿಸುತಿದೆ.

ಈ ತಿಂಗಳ ೪ನೇ ತಾರೀಖಿನ ಬೆಳಗ್ಗೆ, ಮದರಾಸ್ ಗುಜ್ಜಿಲಿಯಬಳಿ ಟ್ರಾಂವೆ ಗಾಡಿ ಓಡುತ್ತಿರುವಲ್ಲಿ ಸುಮಾರು ಹನ್ನೆರಡು ವರ್ಷಗಳ ವಯಸ್ಸುಳ್ಳ ಒಬ್ಬ ಹುಡುಗನು ಸದರೀ ರಸ್ತೆಯಲ್ಲಿ ಅಡ್ಡವಾಗಿ ಓಡಲು ಗಾಡಿ ತಗಲಿ ಕೆಳಗೆ ಬಿದ್ದು ಅವನ ಮೇಲೆ ಗಾಡಿ ಹೊರಟು ಹೋಯಿತು. ಗಾಡಿಯು ಕೂಡಲೆ ನಿಲ್ಲಿಸಲ್ಪಟ್ಟಿತು, ವರಂತು ಬಿದ್ದ ಹುಡುಗನನ್ನು ಈಚೆಗೆ ಯೆತ್ತಿಕೊಂಡು ಬಂದು ನೋಡಲಾಗಿ ಪ್ರಾಣ ಹೋಗಿತ್ತು, ಎಂದು ವಗೈರೆ ಮದರಾಸ್ ಪತ್ರಿಕೆ ಯೊಂದರ ಮೂಲಕ ತಿಳಿಯಲಾದೆವು.

ಗೋದಾವರಿ ಡಿಸ್ಟ್ರಿಕ್ಟಿನಲ್ಲಿ ಏರ್ಪಟ್ಟಿರುವ ಸಮಯಾಚಾರ ಪರಿಷ್ಕರಣ ಸಂಘದವರು ಈ ತಿಂಗಳ ೧೦ ನೇ ತಾರೀಖಿನ ಪ್ರಾತಃಕಾಲ ೭ ಘಂಟೆಗೆ, ಇದೇ ಕಾರ್ಯಾರ್ಥ ಹಾಕಲ್ಪಟ್ಟಿದ್ದ ಚಪ್ಪರದಲ್ಲಿ ಎರಡನೆಯ ತಡವೆ ಸಭೆ ಸೇರಿದರು. ಈ ಸಭೆಯಲ್ಲಿ ಹೈಕೋರ್ಟ್ ವಕೀಲರಾದ ವೆ|| ಡಿ. ಶೇಷಗಿರಿ ರಾಯರವರು ಅಗ್ರಾಸನವಂ ವಹಿಸಿದ್ದರು, ಇದರಲ್ಲಿ ಆರು ವಿಷಯಗಳಂ ಕುರಿತು ನಿರ್ಣಯಗಳಂ ಮಾಡಿದರು. ಅವು ಯಾವವೆಂದರೆ.—ಬಾಲ್ಯವಿವಾಹ, ಅಂದರೆ ಹೆಣ್ಣು ಮಕ್ಕಳಿಗೆ ಎಂಟು ವರ್ಷಗಳ ವಯಸ್ಸು ಪೂರ್ತಿಯಾಗುವದಕ್ಕೆ ಮುಂಚೆ ಮಾಡುವ ವಿವಾಹ, ಕನ್ಯಾವಿಕ್ರಯ, ವಿವಾಹಸಂಬಂಧವಾದ ವ್ಯಯ, ಸ್ತ್ರೀ ವಿದ್ಯಾಭ್ಯಾಸ,—ಇವೇ ಮೊದಲಾದವುಗಳಲ್ಲಿರುವ ಬಹುವಿಧ ಸಂಗತಿಗಳು, ಇವುಗಳನ್ನೆಲ್ಲಾ ತಪ್ಪಿಸಬೇಕಾದ್ದಲ್ಲದೆ, ಬಾಲ್ಯವಿವಾಹ ನಿರೋಧಕವಾಗಿ ಒಂದು ಕಾನೂನನ್ನು ರಚಿಯಿಸಬೇಕೆಂದು ಗವರ್ನಮೆಂಟಿನವರನ್ನು ಪ್ರಾರ್ಥಿಸಬೇಕಾದ್ದು.

LOCAL AND PROVINCIAL NEWS.

ಒಳದೇಶವಮತ್ತು ತಾಲ್ಲೂಕುಗಳ ವೃತ್ತಾಂತಗಳು

ಮಳವಳ್ಳಿಯಲ್ಲಿ ನಡೆದ ಪ್ರಾಣಹಾನಿಕರವಾದ ಕಲಹದ ಮೊಕದ್ದಮೆಯು ಮೈಸೂರಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಂದ ದರ್ಯಾಪ್ತು ಮಾಡಲ್ಪಡುವದೆಂದು ತಿಳಿಯಬರುತಿದೆ

ಕೋಲಾರ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರಾದ ಮೆ|| ಸಿ. ಮಾದಯ್ಯನವರು ತಮ್ಮ ರಜಾವನ್ನು ಪೂರ್ತಿ ಮಾಡಿಕೊಂಡು ಬಂದು ಕಳೆದವಾರದಲ್ಲಿ ದಿಸ್ಟ್ರಿಕ್ಟ ಚಾರ್ಜಂ ವಹಿಸಿದರೆಂದು ತಿಳಿಯಬರುತಿದೆ.

ಕೋಲಾರ ಡಿವಿಜನ್ ಮ್ಯಾಜಿಸ್ಟ್ರೇಟ ಇಂಜನಿಯರಾದ ಮೆ|| ಅನಂತತೀರ್ಥ ರಾಯರವರು ಗಾಡಿಯಿಂದ ಬಿದ್ದು ಒಂದು ಕಾಲಿನ ಯೆಲುಬ್ಬು ಮುರಿದು ಹೋಗಿ ಈಗ ಕಾಹಿಲೆ ಯಾಗಿರುತ್ತಾರೆಂದು ಕೇಳುತ್ತೇವೆ

ಸೇಟ ದಾಮೋದರದಾಸರವರ ಮಕ್ಕಳಾದ ಬ್ರಿಜಲಾಲ್‌ದಾಸ ಯವರಿಗೆ ಮೈಸೂರು ಸಂಸ್ಥಾನದಿಂದ ಸಲ್ಲಬೇಕಾಗಿದ್ದ ೫ ಲಕ್ಷ ಚಿಲ್ಲರೆ ರೂಪಾಯಿಗಳಂ ಪಡೆಯುವದಕ್ಕೆ ನ್ಯಾಯವಾದ ಬಾಧ್ಯಸ್ಥರಂ ನಿಷ್ಕರ್ಷಿಸುವದಕ್ಕಾಗಿ ಏರ್ಪಡಿಸಲ್ಪಟ್ಟ ಸ್ಪೆಷಲ್ ಕೋರ್ಟಿನಲ್ಲಿ ಈದಿನ ವಿಚಾರಣೆಗೆ ಪ್ರಾರಂಭವಾಗುವುದು.

ಕಳೆದ ಶುಕ್ರವಾರದಮೊದಲು ಪ್ರತಿದಿನಸಾಯಂಕಾಲದಮೇಲೆ ಮೋಡವುಬ್ಬಿ ಭೂಮಿನನೆಯುವಷ್ಟರಮಟ್ಟಿಗೆ ವರ್ಷಬಿತ್ತು. ಯಾವಾಗ್ಯೂ ಮೋಡವಾಡುತಲಿದೆ. ವರಂತು ಬಲವಾದ ವರ್ಷವು ಇದುವರೆಗೆಬೀಳಲಿಲ್ಲವು. ಮಿಲಿಟರಿ ಸ್ಟೇಷನ್ನಲ್ಲಿ ವಾಂತಿಭೇದಿರೋಗ ಕಾಣಿಸಿರುವಂತೆಕೇಳುತ್ತೇವೆ. ಇತರವಿಷಯಗಳಲ್ಲಿ ಅಧಿಕಾಂಶವೇನೂಯಿಲ್ಲವು

ಈವೂರಿಂದ ಇಷ್ಟನ ಮಿಲಿಟರಿ ಸ್ಟೇಷನವರೆಗೆ ಟ್ರಾಂವೆ ಎಂಬ ಕಬ್ಬಿಣದರಸ್ತೆ ಹಾಕುವ ವಿಷಯದಲ್ಲಿ, ಮೆಸ್ಸರ್ಸ್ ಅರ್ಬತ್‌ನಾಟ್ ಕಂಪನಿಯವರ ಏಜಂಟರು, ಸ್ಟೇಷನ್ ಮ್ಯುನಿಸಿಪಾಲಿಟಿಯವರು ಹೇಳುವ ಷರತ್ತುಗಳನ್ನು ವಿಲಾಯತಿಯಲ್ಲಿರುವ ತಮ್ಮ ಕಡೆ ಮುಖ್ಯಾಧಿಕಾರಿಗಳಿಗೆ ತಿಳಿಸಿ ಅವರ ಜವಾಬು ನಿರೀಕ್ಷಿಸುತ ಲಿದಾರೆಂದು ತಿಳಿಯಬರುತಿದೆ.

ತಿರುವಾಂಕೂರ್ ಸಂಸ್ಥಾನದ ಯುವರಾಜರವರಾದ ಪ್ರಿನ್ಸ್‌ಮಾರ್ತಾಂಡ ವರ್ಮರವರು ಕಳೆದ ವಾರದಲ್ಲಿ ಮದರಾಸ್ ಮಾರ್ಗವಾಗಿ ಸ್ವದೇಶಕ್ಕೆ ಪ್ರಯಾಣ ಮಾಡಿದರು. ಆಕಾಲದಲ್ಲಿ ಈ ಸಂಸ್ಥಾನಕ್ಕೆ ಸೇರಿದ ಅಧಿಕಾರಿಗಳು ಕೆಲವರು ರೆಯಿಲ್ವೆ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಹಾಜರಿದ್ದು ಅರಸರವರನ್ನು ಉಚಿತ ಮರ್ಯಾದೆಯೊಡನೆ ಪ್ರಯಾಣಮಾಡಿಸಿದರು.

ತಿರುವಾಂಕೂರ್ ಸಂಸ್ಥಾನದ ಯುವರಾಜರವರಾದ ಘನತೆಯಂ ಪಡೆದ ಪ್ರಿನ್ಸ್ ಮಾರ್ತಾಂಡ ವರ್ಮರವರು ಆಚೆ ಆದಿತ್ಯವಾರದದಿನ ಮೈಸೂರಿಂದ ಈವೂರಿಗೆ ಬಂದು ಮಂಗಳವಾರದದಿನ ತಮ್ಮ ಪ್ರೈವೇಟ ಸೆಕ್ರೆಟರಿಯವರೊಡನೆ ಕೂಡಿ ಇಲ್ಲಿನ ವೆಸ್ಲೀಯನ್ ಟ್ರೈನಿಂಗ್ ಸ್ಕೂಲಿಗೆ ಹೋಗಿ ಅಲ್ಲಿನ ಏರ್ಪಾಡುಗಳನ್ನೆಲ್ಲ ನೋಡಿ ಸಂತುಷ್ಟಮನಸ್ಕರಾಗಿ ವಾಪಸ್ ಹೊರಟು ಹೋದರು.

ಈಚೆಗೆ ಅರಮನೆಯೊಳು ನಡೆದ ಶುಭಗಳ ಬಗ್ಗೆ ಇಷ್ಟನ ಮಿಲಿಟರಿ ಸ್ಟೇಷನ್ ನಿವಾಸಿಗಳಾದ ದೊಡ್ಡ ಮನುಷ್ಯರನೇಕರಿಗೆ ಲಗ್ನಪತ್ರಿಕೆಗಳು ಕಳುಹಿಸಲ್ಪಡಲಿಲ್ಲವೆಂತಲೂ, ಆದಕ್ಕಾಗಿ ಅವರೆಲ್ಲರು ಶ್ರೀಮನ್ಮಹಾರಾಣೀ ರೀಜಂಟರವರಿಗೆ ಅರ್ಜಿ ಬರೆದು ಕೊಳ್ಳಬೇಕೆಂದು ಯೋಚಿಸುತಲಿರುವಂತೆ ಪ್ರಬಲ ಪ್ರವಾದ ಹುಟ್ಟಿರುವದಾಗಿಯೂ ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ

ಮೈಸೂರಲ್ಲಿ ಸ್ಥಾಪಿತವಾಗಿರುವ ಸಿವಿಲ್‌ರೋಗ ಹಾರಿ ಧರ್ಮಾರ್ಥಕರ್ನಾಟಕ ವೈದ್ಯಶಾಲೆಯೊಳು, ಕಳೆದ ಮೇತಿಂಗಳಲ್ಲಿ ೩೪೦೮ ಮಂದಿ ನಾನಾವಿಧ ರೋಗಪೀಡಿತರಾದವರು ಔಷಧ ಸೇವನೆಮಾಡಿ ರೋಗನಿವೃತ್ತಿಯಂಪಡೆದರೆಂದು ಸದರೀ ವೈದ್ಯಶಾಲಾ ಪ್ರತಿಷ್ಠಾಪಕರು ತಿಳಿಸಿರುತ್ತಾರೆ. ಈವೂರಲ್ಲೂ ಸರ್ಕಾರದ ಸಹಾಯವಂ ಪಡೆಯುತಲಿರುವ ನೇಟಿವ್ ವೈದ್ಯಶಾಲೆಗಳು ಒಂದೆರಡಿರುವಂತೆ ಮಾತ್ರ ತಿಳಿಯಬರುತಿದೆಯೇ ಹೊರತು ಸದರೀ ಶಾಲೆಗಳ ಮೂಲಕ ಪ್ರಜೆಗಳಿಗೆ ಯಾವ ಬಾಗದಲ್ಲೂ ಒಂದು ಪ್ರಯೋಜನ ವುಂಟಾಗುವಂತೆ ತೋರಲಿಲ್ಲವು.

ಈ ಊರು ಸುಂಕದ ಉಸ್ತಡಗಳಲ್ಲಿ ಕೆಲವು ಜವಾನರು ಸಳ್ಳಿ ರೈತರುಗಳನ್ನು ಗೋಳಾಡಿಸಿ ಗಾಡಿಗೆ ಇಷ್ಟೆಂದು ಖಾಮೂಲಾಗಿ ವಸೂಲು ಮಾಡುತ್ತಿದ್ದರೆಂದು ನಮ್ಮ ಪತ್ರಿಕೆಯಲ್ಲಿ ಈಗ್ಯೆ ಕೆಲವು ಕಾಲದ ಕೆಳಗೆ ತಿಳಿಯಪಡಿಸಿದ್ದೆವಷ್ಟೆ ಸದರೀ ವಾಳ್ಯಗಾರರ ಹೊಡತವು ಮೆ|| ಲನ್ನೆರ್ಡ್ ಸಾಹೇಬರಿಗೆ ತಿಳಿದು ಅವರಿಗೆ ನಿವೃತ್ತಿಸುಖವಂ ಕೊಟ್ಟು ಜನಗಳಿಗೆ ಕ್ಷೇಮವಂ ಉಂಟುಮಾಡಿದರು. ಈ ಸುಂಕದ ಅಧಿಕಾರಿಗಳಲ್ಲಿ ಇನ್ನು ಕೆಲವರು ಮೋಸವೆಯ್ಯುತ್ತಿರುವಂತೆ ಮೋಯುತ್ತಿರುವರು. ಇವರಿಗೂ ತಕ್ಕ ಶಿಕ್ಷೆ ಮಾಡಿದಲ್ಲಿ ಬಹಳ ಕ್ಷೇಮವಾದೀತು.—ವ್ಯ. ಬೊ.

ತಾಲೂಕು ಬಡನೌಕರರಿಗೆ ಸಂಬಳಜಾಸ್ತಿ ಮಾಡಬೇಕೆಂದು ಮೈಸೂರು ಗವರ್ನಮೆಂಟಿನವರು ಆಗಾಗ್ಯೆ ಪ್ರೊಸೀಡಿಂಗ್ಸನ್ನು ಮಾಡುತ್ತಿದ್ದಾರೆ ಯೇ ಹೊರ್ತು ಇದುವರೆಗೂ ಜಾರೀಲಿ ತರಲಿಲ್ಲವು ಸಂಸ್ಥಾನದ ಯೆಲ್ಲಾ ತಾಲ್ಲೂಕಿನ ಚಿಲ್ಲರೆ ನೌಕರರಿಗೆ ಸಂಬಳ ಜಾಸ್ತಿ ಮಾಡಿದ ಹೊರ್ತು ಕೆಲಸಗಳು ತೃಪ್ತಿಕರವಾಗಿ ನಡೆಯುವದಿಲ್ಲವು ಇದನ್ನು ಬಿಟ್ಟು ಅಸಿಷ್ಟೆಂಟ ಕಮೀಷನರಗಳು ಯೆಷ್ಟುಮಂದಿಗಳನ್ನು ಹೆಚ್ಚಿಸಿದಾಗ್ಯೂ ಅಷ್ಟು ಈಬಡನೌಕರರಿಗೆ ಹಿಂಸೆಗೆ ಕಾರಣವೇಹೊರ್ತು ಈ ಅಸಿಷ್ಟೆಂಟುಗಳಿಂದ ಉಪಯೋಗವಿಲ್ಲವು.

ನಗರಕಾಲದಿಂದ ಮೊದಲಾಗುವ ಹೆಸರುಳ್ಳ ಒಬ್ಬ ಅಸಿಸ್ಟೆಂಟ ಕಮ್ಮಿಷನರು ತಾನು ಸರ್ಕ್ಯೂಟ ಹೋದಕಡೆ ಒಬ್ಬ ಪಟೇಲನ ಹೆಂಡತಿಯಲ್ಲಿ ಅಕ್ರಮ ಸ್ತ್ರೀ ಸಂಗವು ಮಾಡಲು ಪ್ರಯತ್ನಿಸಿ ಆಕೆಯ ಪಾದತಾಡನದಿಂದಲೂ, ಆಕೆಯ ಗಂಡನಾದ ಭಾವ ವಗೈರೆಯರುಗಳ ಪಾದರಕ್ಷಾ ಪ್ರಯೋಗದಿಂದಲೂ ಮಾರ್ಜಿತರಾಗಿ ಸ್ವಲ್ಪಯೊತ್ತಿನಮೇಲೆ ಚೇತರಿಸಿಕೊಂಡು ಹೇಳದೆ ಕೇಳದೆ ಹೆಡಕ್ವಾರ್ಟರಿಗೆ ಸವಾರಿ ನಡೆದರು. ಪ್ರಜೆಗಳಿಗೆ ತಂದೆ ತಾಯಿಗಳಾಗಿರುವ ಈಅಧಿಕಾರಿಗಳು ಇಂತಾ ದುರ್ವ್ಯಾಪಾರವನ್ನು ನಿಲ್ಲಿಸುವದಕ್ಕೆ ಬದಲಾಗಿ ತಾವೇ ಈರೀತಿ ಮಾಡಿದಲ್ಲಿ ಯೇನೂ ತಿಳಿಯದ ಮೂಢರ ಪಾಡೇನು"—ವ್ಯ. ಬೋ.

ಕಳೆದ ಬುಧವಾರದ ದಿನ ಮಧ್ಯಾಹ್ನ ಚಿಕ್ಕ ಬಾಣಾವಾರದ ಆಚೆ ಒಂದು ಮೈಲ್ ಫಾಸಲೆಯಲ್ಲಿರುವ ಸೋಲದೇನ ಹಳ್ಳಿಯ ಬಳಿ ಕಟ್ಟಲ್ಪಟ್ಟಿರುವ ವಾಟರ್‌ಸಪ್ಲೈ ಸಂಬಂಧವಾದ ಎಂಜಿನ್ ಮೂಲಕ ಗುಪ್ಪೆಮೇಲೆ ನೀರು ಹತ್ತಿಸಿ ಈಚೆಗೆ ತರಲು ಪ್ರಯತ್ನ ಪಡುತಿರುವಲ್ಲಿ ನೀರು ಮೇಲಕ್ಕೆ ಹತ್ತಲಾರದೆ ಹಿಂದಕ್ಕೆ ಗುದ್ದಿ ಎಂಜಿನ್ ಒಡೆದು ಅದರಲ್ಲಿ ಕೆಲಸ ಮಾಡುತಲಿರುವವರಿಗೆ ಬಲವಾದ ಘಾಯಗಳಾಗಿ, ಅಲ್ಲಿನ ಆಸಿಪತ್ರೆಗೆ ಇಲಾಜ್‌ಬಗ್ಗೆ ಕಳುಹಿಸಲ್ಪಟ್ಟಿರುವಂತೆಯೂ, ಅದರ ಸಮೀಪದಲ್ಲಿ ಕೂಲೀಯವರು ಕಟ್ಟಿಕೊಂಡಿರುವ ಗುಡುಸಲುಗಳಿಗೆ ನೀರು ನುಗ್ಗಿ ಅವೆಲ್ಲವು ಕುಸಿಬಿದ್ದು ನಷ್ಟವಾದಂತೆಯೂ ತಿಳಿಯಬರುತಿದೆ.

ಸ್ಕೂಲ್ ಇನ್ಸ್‌ಪೆಕ್ಟರುಗಳಲ್ಲಿ ಕೆಲವರು ಸ್ಕೂಲ್ ಮ್ಯಾಸ್ಟರುಗಳಿಂದ ವರುಷಕ್ಕೆ ಒಂದು ತಿಂಗಳ ಸಂಬಳ ಬಹುಮಾನ ಪಡೆಯುತ್ತಿರುವರು, ಬಹುಮಾನ ಕೊಡದ ಸ್ಕೂಲ್ ಮ್ಯಾಸ್ಟರಿಗೆ ದಿಗರು ಸ್ಥಳಕ್ಕೆ ವರ್ಗಕ್ಕೋ ಸಂಬಳ ಕಮಿರಾವಿಗೋ ಮೇಲಕ್ಕೆ ಸಿಫಾರ್ಸು ಮಾಡುವರು. ತಿಂಗಳಿಗೆ ೫—೬ ರೂಪಾಯಿ ಬರುವಸ್ಕೂಲ್ ಮ್ಯಾಸ್ಟರುಗಳ ಪ್ರಾಣಕ್ಕೆ ಒಬ್ಬ ಹೆಂಡತಿ ೧—೨ ಮಕ್ಕಳು ಜೀರಮಿರುವರು ಇಂಥಾ ಬಡ ಸ್ಕೂಲ್ ಮ್ಯಾಸ್ಟರುಗಳು ಒಂದು ತಿಂಗಳ ಸಂಬಳ ಇನ್ಸ್‌ಪೆಕ್ಟರ ಬಾಯಿಗೆ ಹಾಕಿದರೆ ಇವರು ಜೀವನ ಮಾಡುವದು ಹ್ಯಾಗೋ ಏತಕ್ಕೆ ಷ್ಟ ಇನ್ಸ್‌ಪೆಕ್ಟರ ಜನರಲ್‌ರವರು ಆಲೋಚಿಸಿ ಇಂಥಾ ಸಂದರ್ಭಗಳಿಗೆ ಮಾರ್ಗ ಕೊಡದೆ ತಕ್ಕ ಬಂದೋಬಸ್ತು ಮಾಡಿದಲ್ಲಿ ಬಹಳ ಪುಣ್ಯ ಬಂದೀತು.—ವ್ಯ. ಬೊ.

ಶ್ರೀರಂಗ ಪಟ್ಟಣದಲ್ಲಿರುವ ಇಂಗ್ಲಿಷ್ ಗೋರಿಯಲ್ಲಿ ಕಳೆದ ಶುಕ್ರವಾರ ಮಧ್ಯಾಹ್ನದಲ್ಲಿ ಬಹುಗಾತ್ರವೂ ಹನ್ನೆರಡು ಅಡಿ ಉದ್ದವೂ ಆಗಿದ್ದ ಒಂದು ದೊಡ್ಡ ದಾಸರಹಾವು ಒಂದು ಮರದ ಕೆಳಗೆ ಎಲೆಗಳ ಮಧ್ಯೆ ಮಲಗಿರಲು ಮರದ ಮೇಲೆ ಓಡಾಡುತ್ತಿದ್ದ ಕಪಿಗಳಲ್ಲಿ ಒಂದು ಕಪಿ ಅದರ ಮೇಲೆ ಬೀಳಲು ತತ್‌ಕ್ಷಣವೇ ಆ ಹಾವು ತನ್ನ ಉದ್ದವಾದ ಮೈಯಿಂದ ಆ ಕೋತಿಯನ್ನು ಸುತ್ತಿಕೊಂಡು ಕೊಲ್ಲುತ್ತಿರುವಾಗ ಆಕಪಿಯು ಘಟ್ಟಿಯಾಗಿ ಕಿರಚುತ್ತಿರುವದನ್ನು ಇತರ ಕಪಿಗಳು ಕೇಳಿ ಎಲ್ಲಾ ಕೆಳಗೆ ಧುಮುಕಿ ಆ ಹಾವಿನ ಮೇಲೆ ಬಿದ್ದು ಕಡಿಯುವದಕ್ಕೆ ಪ್ರಾರಂಭಿಸಿದವು ಸ್ವಲ್ಪ ಹೊತ್ತಿನಲ್ಲಿ ಆಭಯಂಕರವಾದ ಹಾವು ಸತ್ತಿತು. ಮತ್ತು ಅದು ಸುತ್ತಿಕೊಂಡಿದ್ದ ಕಪಿಯು ಸಹ ಮೃತಪಟ್ಟಿತು. ಆಗ ಅಲ್ಲಿ ನಿಂತು ಈ ಯುದ್ಧವನ್ನು ನೋಡುತ್ತಿದ್ದವರು ಆಹಾವನ್ನೂ ಕಪಿಯನ್ನೂ ಕೂಡಾ ಕಚೇರಿಗೆ ತಂದು ತೋರಿಸಿ ಇನಾಮನ್ನು ಪಡೆದರು.

THE MYSORE GAZETTE.

ಮೈಸೂರು ಗೆಜೆಟ.

ಗುರುವಾರ, ತಾ|| ೧೧ ನೇ ಜೂನ್ ೧೮೯೬.

ಮೈಸೂರ ಗವರ್ನಮೆಂಟಿನವರಿಂದ ಹೊರಟಿರುವ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೯ನೇ ಜೂನ್ ೧೮೯೬.

ನಂ|| [illegible]—೧೮೯೬ನೇ ಇಸವಿ ೧ನೇ ನಂಬರ್ ರಗ್ಯುಲೇಷನ್ ಅನುಸರಿಸಿ ಯೇರ್ಪಡಿಸಲ್ಪಟ್ಟ ಸ್ಪೆಷಲ್ ಕೋರ್ಟ ರಿಜಿಸ್ಟ್ರಾರಾದ ಮೆ|| ಸಿ. ಬಿ. ಶೇಷಗಿರಿ ರಾಯರವರು, ಈಗಿನ ಅವರ ಕೆಲಸಗಳೊಂದಿಗೆ, ೧೮೯೬ನೇ ಇಸವಿ ಏಪ್ರಿಲ್ ೧ನೇ ತಾರೀಖ ಮೊದಲು, ಬೆಂಗಳೂರು ಸಿವಿಲ್ ಬೆಂಗಳೂರು ಅಡಿಷನಲ್ ಸಬಾರ್ಡಿನೇಟ ಜಡ್ಜಿಯಾಗಿ ಗೊತ್ತುಮಾಡಲ್ಪಟ್ಟು, ನಂದಿದುರ್ಗ ಡಿವಿಜನ್ನಲ್ಲಿ ಅಡಗಿರುವ ಡಿಸ್ಟ್ರಿಕ್ಟುಗಳಮೇಲ ಅಧಿಕಾರ ಸಹವನ್ನು ಉಂಟುಮಾಡಲ್ಪಟ್ಟಿರುತ್ತಾರೆ.

ತಾ|| ೧೦ ನೇ ಜೂನ್ ೧೮೯೬

ನಂ|| [illegible]—ಜಿ. [illegible]—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ [illegible]ನೇ ಸೆಕ್ಷನಿನ ನಿಯಮಗಳನ್ನನುಸರಿಸಿ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ ಮತ್ತು ಪ್ರೊಬೇಷನರ್ ಅಸಿಸ್ಟೆಂಟ ಕಮ್ಮಿಷನರಾದ ಮೆ|| ವಿ ಆರ್. ತ್ಯಾಗರಾಜ ಅಯ್ಯರ್, ಎಂ ಎ. ಯವರು, ತಾವು ವಿಚಾರಣೆ ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂರ ಇಂಗ್ಲಿಷ್ ಭಾಷೆಯಲ್ಲಿ ತೆಗೆದುಕೊಳ್ಳಲು ಹುಕುಂ ಮಾಡಲ್ಪಟ್ಟಿರುತ್ತಾರೆ.

ತಾ|| ೮ ನೇ ಜೂನ್ ೧೮೯೬

ನಂ|| [illegible]—ಆರ್. [illegible]—ಕ್ಲಾಸಿಫೈಡ್ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಬಿ ತಿರುಮಲಯ್ಯಂಗಾರ್ರವರಿಗೆ ೧೮೯೬ನೇ ಇಸವಿ ಏಪ್ರಿಲ್ ೧ನೇ ತಾರೀಖಿನ [illegible]—ಆರ್, ಎಫ್. ೧೮೯೫—೯೬ನೇ ನಂಬರ್ ಗವರ್ನಮೆಂಟ

ಆಸ್ಪತ್ರೆಯಾನೆಯದು ರಜೋಲಕ್ ಕೊಡಲ್ಪಟ್ಟು ಬಂದೂವರೆ ತಿಂಗಳ ಪ್ರಿವಿಲೇಜ್ ರಜಾ ತರುವಾಯ ಒಂದು ತಿಂಗಳು ಒಂದು ದಿನ ಜಾಸ್ತೀ ಮಾಡಲ್ಪಟ್ಟಿದೆ.

ತಾರೀಖು ೩೦ನೇ ಜೂನ್ ೧೮೯೬

ನಂ|| ೧೫೩೬—೪೮ ೩೧೮೦—ಮೈಸೂರು ಸರ್ವಿಸ ರೆಗ್ಯುಲೇಷನ ೧೩೦ನೇ ಆರ್ಟಿಕಲ್ ಅನುಸರಿಸಿ, ಚೆನ್ನಗಿರಿ ತಾಲ್ಲೂಕು ಅಮಲ್ದಾರ್ ಸಿ. ಕೃಷ್ಣರಾಯರಿಗೆ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೧೪ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದೆ

ಕವರ್ನ್ಮೆಂಟ್ ಡಿಸ್ಟ್ರಿಕ್ಟ್ ಆಫೀಸ ರವಿನ್ಯೂ ಹೆಡ್‌ಮುನಿಷಿ ಎಸ್ ಬಾಲಕೃಷ್ಣರಾಯರು, ಸಿ ಕೃಷ್ಣರಾಯರು, ರಜಾ ಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ಚೆನ್ನಗಿರಿ ತಾಲ್ಲೂಕು ಅಮಲ್ದಾರರ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖ್ ೩ನೇ ಜೂನ್ ೧೮೯೬

ನಂ|| ೧೬೬೨—೪೮ ೩೧೮೭—೧೮೯೬ನೇ ಇಸವಿ ಏಪ್ರಿಲ್ ೨೫ನೇ ಮುಕರ್ರಂ ನಂಬರ್ ೪೬೪೫-೪೨, ೩೮೯೬ ನೇ ನಂಬರ್ ಗವರ್ಮೆಂಟ್ ಆಸ್ಪತ್ರೆಯಾನೆಯದು ೩ನೇ ಪ್ಯಾರಾವನ್ನು ರದ್ದುಪಡಿಸಿ, ಮೈಸೂರು ಡೆಪ್ಯುಟಿ ಕಮಿಷನರ ಆಫೀಸಿನೊಳು ಕೆಲಸದಲ್ಲಿರುವ ಡಿ. ಸುಬ್ಬರಾಯರು, ಅಮಲ್ದಾರ್ ಜೆ. ಹನುಮಂತರಾಯರು ರಜಾಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತಿರುಮಕೂಡ್ಲು ನರಸೀಪುರ ತಾಲ್ಲೂಕು ಅಮಲ್ದಾರ್ ರ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ

ತಾರೀಖು ೧೦ನೇ ಜೂನ್ ೧೮೯೬

ನಂ|| ೧೬೬೫—೪೮ ೩೨೦೬—ಮೈಸೂರ್ ಸರ್ವಿಸ ರೆಗ್ಯುಲೇಷನಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ಅರ್ಸೀಕೆರೆ ತಾಲ್ಲೂಕು ಅಮಲ್ದಾರ್ ಎ ವೀರಭದ್ರಪ್ಪನವರಿಗೆ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ

ಆಲೂರು ಡೆಪ್ಯುಟಿ ಅಮಲ್ದಾರ್ ಎಸ್ ವೆಂಕಟರಮಣಯ್ಯನವರು, ವೀರಭದ್ರಪ್ಪನವರು ರಜಾಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಅರ್ಸೀಕೆರೆ ತಾಲ್ಲೂಕು ಅಮಲ್ದಾರರ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ

ಡಿಸ್ಟ್ರಿಕ್ಟ್ ಆಫೀಸ ಜುಡಿಷಲ್ ಹೆಡ್‌ಮುನಿಷಿ ಎಸ್ ಕೃಷ್ಣಪ್ಪನವರು, ಎಸ್ ವೆಂಕಟರಮಣಯ್ಯನವರು ಬೇರೇ ಕೆಲಸ ನೋಡುತಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಆಲೂರು ಸಬ್‌ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ರ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ

SUMMARY OF NEWS.

ವೃತ್ತಾಂತ ಸಂಗ್ರಹವು

ಅಮೆರಿಕ ಬಿರುಬಿಸಿನ ಬಾಳುವವರು, ಕೆಲವು ೨೫೦ ವರ್ಷಗಳು ಬದುಕಿರುವೆಂದು ತಿಳಿಯಬಂದಿದೆ

ಪಂಜಾಬ್ ಸರ್ಕಾರದವರು ತಮ್ಮ ಇಲಾಖೆಯಲ್ಲಿ ೩,೬೦೦ ಮೈಲಿ ರೈಲ್ವೆ ಮಾರ್ಗ ಕಟ್ಟುವ ವಿಚಾರ ಮಾಡಿ ಇಂಡಿಯಾ ಸರ್ಕಾರದವರ ಮಂಜೂರಿಯನ್ನು ಬೇಡಿದ್ದಾರೆ

ಕಲ್ಕತ್ತೆಯ ಬಜ್ಬ ಮಾರ್ವಾಡಿಯು ಅಲ್ಲಿನ ಒಂದು ಬ್ಯಾಂಕಿನಿಂದ ೪೧ ಸಾವಿರ ರೂಪಾಯಿ ಮೋಸದಿಂದ ಎತ್ತಿ ಹಾಕಿ ಯಲ್ಲಿಯೋ ಪಲಾಯನವಾದನಂತೆ

ಇಂಗ್ಲೆಂಡಿನಲ್ಲಿ ಸೆಂಟ್‌ಲೂಯಿ ಎಂಬವರಲ್ಲಿ ಭಯಂಕರವಾದ ಬಿರುಗಾಳಿ ಬಂದು ೫೦೦ ಜನರು ಸತ್ತರು, ೬೦೦ ಜನರಿಗೆ ದೊಡ್ಡ ಘಾಯಗಳಾದವು.

ಬಿಡೋದೇ ಕಡೆಗೆ ಆರಿಯನ್ ಎಂಬ ಹೆಸರಿನ ಕಂಪನಿ ಇವ್ವ ಆ ಕಂಪೆನಿಯವರು ಮಾಪಿನ ಬೀಜದಿಂದ ಕಾಗದ ಮಾಡ ಲಿಕ್ಕೆ ಬರುತಿರುವೆಂದು ಶೋಧ ಮಾಡಿದಾರೆ

ಲಂಡನ್ ಪಟ್ಟಣದ ನಿವಾಸಿಗಳು ಒಂದು ವರ್ಷಕ್ಕೆ ೧೨,೦೦,೦೦೦ ಕುರಿಗಳನ್ನೂ, ೩,೦೦,೦೦೦ ದನಗಳನ್ನೂ, ೫,೦೦,೦೦೦ ಕರುಗಳನ್ನೂ, ೭,೦೦,೦೦೦ ಹಂದಿಗಳನ್ನೂ ತಿನ್ನುವರಂತೆ

ರಷ್ಯಾ ಹೊಸ ಝಾರರವರು ಇದುವರೆಗೆ ಸಿಂಹಾಸನಾರೋಹಣವನ್ನು ಮಾಡಲಿಲ್ಲವು, ಆ ಪ್ರಾಚಾರವು ಕಳೆದ ತಿಂಗಳ ೨೫ನೇ ತಾರೀಖಿನಿಂದ ೨೬ನೇ ತಾರೀಖಿನ ವರೆಗೆ ಬಹು ದೊಡ್ಡ ಸಮಾರಂಭದೊಡನೆ ನೆರವೇರಿತಂತೆ

ಬುದ್ಧಿವಾರಿಕೆಗೆ ಸಮುದ್ರೋದಕವು ಉಪಯೋಗಿಸುತದಂತಲೂ ಅದಕ್ಕೆ ಸ್ವಲ್ಪ ಮೊದಲಿನ ಹಣ್ಣಿನಿಂದ ಆದ ಲವಣವನ್ನ ಸೇರಿಸಿದರೆ ಹಾಗಾಗುತ್ತೆಂತಲೂ ಒಂದಾನೊಂದು ಪತ್ರಿಕೆಯು ತಿಳಿಸುತ್ತದೆ

ಕಲ್ಕತ್ತೆಯಲ್ಲಿ ಭಂಗಿಗೆ ಸುಂಕವನ್ನ ಹೆಚ್ಚು ಮಾಡಿದ್ದರಿಂದ ಜನರು ಆ ವ್ಯಾಪಾರವನ್ನ ಬಿಟ್ಟು ಬಿಟ್ಟಿರೆಂತಲೂ, ಸಿದ್ಧಪತ್ರಿಕೆಯು ಅಭ್ಯಾಸವುಳ್ಳವರೆಲ್ಲರೂ ತಲ್ಲಣಿಸುತ್ತಿರುವರೆಂತಲೂ ಒಂದಾನೊಂದು ಪತ್ರಿಕೆಯು ತಿಳಿಸುತ್ತದೆ

ಇಂಡಿಯಾ ಸರ್ಕಾರಕ್ಕೆ ಪ್ರತಿವರ್ಷ ಜಿ ಐ ಪಿ ಎಂಬ ರೈಲ್ವೆ ಕಂಪೆನಿಯಿಂದ ೬೧,೯೩,೦೦೦ ರೂಪಾಯಿ ನಷ್ಟವಾಗುತದೆಂತಲೂ, ಈಸ್ಟಿಂಡಿಯಾ ರೈಲ್ವೆ ಕಂಪೆನಿಯಿಂದ ೯೩,೫೭,೦೦೦ ರೂಪಾಯಿ ಆದಾಯವಾಗುತದೆಂತಲೂ ಗೊತ್ತಾಗಿದೆ

ಗ್ರೀಸ ದೇಶದ ಒಂದು ಗಣಿಯಲ್ಲಿ ಕೆಲಸ ಮಾಡಲಿಕ್ಕೆ ಫ್ರೆಂಚ್ ಸರ್ಕಾರದವರು ೨,೦೦೦ ಜನ ಹೆಂಗಸರನ್ನು ಇಟ್ಟುಕೊಂಡಿದ್ದರು ಅವರು ಒಗ್ಗಟ್ಟಾಗಿ ತಾರೀಖ್ ೨ನೇ ಏಪ್ರಿಲ್ ದಿವಸ ಕೆಲಸ ಬಿಟ್ಟರು ಆ ಹೆಂಗಸರ ಹಾನಿ ಮಾಡುವದಕ್ಕೆ ದಂಡು ತರಿಸಲ್ಪಟ್ಟಿತು ಕಡೆಗೆ ಉಭಯ ಪಕ್ಷದಲ್ಲಿ ದೊಡ್ಡ ಬಡಿದಾಟವಾಗಿ ಸೈನ್ಯದೊಳಗಿನ ೫ ಜನರು ಕಾಲವಾದರು, ಮತ್ತು ಕೆಲವರು ಘಾಯವಾದರು

ಯಾವತ್ತು ರೈಲ್ವೆ ಕಂಪೆನಿಗಳಿಗೆ ಸನ್ ೧೮೯೪—೯೫ನೇ ವರ್ಷದಲ್ಲಿ ಆದ ಆದಾಯದ ರಿಪೋರ್ಟ್ ಪ್ರಸಿದ್ಧವಾಗಿರುತಿವೆ ಅದರಿಂದ ಖರ್ಚು ಕಳೆದು ಜಾತಾ ಉಳಿದ ಹುಟ್ಟುವಳಿಯು ೧೫,೧೧,೭೫,೦೦೦ ರೂಪಾಯಿಯಲ್ಲಿ ಕಂಪೆನಿಗಳಿಗೆ ಕೊಡಲಿ ಆಯಿತೆಂದು ತಿಳಿಯಬರುತಿದೆ ಇಷ್ಟು ಹಣವು ನಮ್ಮ ದೇಶದಿಂದ ಇಂಗ್ಲೆಂಡಿಗೆ ಹೋಯಿತು, ಅಂದರೆ ನಾವು ೨೮ ಕೋಟಿ ಪ್ರಜೆಗಳು ತಲೆಗೆ ಅರ್ಧ ರೂಪಾಯಿಯಂತೆ ರೈಲ್ವೆ ಕಂಪೆನಿಯವರ ಕೈಯೊಳಗೆ ಇಟ್ಟಂತೆ ಆಯಿತು

EXTRACT

ಕಂಬೇವಿನ ಕಡ್ಡಿ (೪) ಎಲೆ ಸಹಿತ, ಅದವಾ ಅದಾಮನ ಅರ್ಧತೊಲೆ, ಮೆಣಸು ಕಾಲು ಈ ಪ್ರಕಾರ ತುಸು ಜಜ್ಜಿ ಕಟ್ಟಾ ಸೇರು ನೀರು ಹಾಕಿ, ಅಷ್ಟಮಾಂಶ ಕಷಾಯ ಮಾಡಿ ಆರಿಸಿ ಕೊಡುವಾಗ ಅಡಿಕೆ ಹೋಳಷ್ಟು ಬೆಲ್ಲದ ಚೂರು ಹಾಕಿ ಕೊಡಬೇಕು ಎಷ್ಟು ಕೊಡುವವನಾದಲೇ ಆತನ ಜ್ವರ ವೇಗಗಳು ಹತ್ತು ವಾಳಿಗೆ ನಿಲ್ಲುತವೆ ನಿಲ್ಲಿದ್ದರೆ ಮತ್ತೊಮ್ಮೆ ಕಷಾಯ ಕೊಡಬೇಕು ಅದರಿಂದ ರೋಗವು ನಿಶ್ಚಯವಾಗಿ ಹಿಮ್ಮೆಟ್ಟುತವೆ ಜನ್ಮೆ ಉಬಾಲ್ ಜಾಲಾವಗಳು ನಿಂತ ಬಳಿಕ ರೋಗಿಯು ಹೊಟ್ಟೆಯೊಳಗೆ ಉಗ್ರವಾದ ಸಂಕಟ ಹುಟ್ಟುತದೆ ಅದು ಸಹ ಪಟಿಕೆಯಂತೆ ದುಸ್ಸಹವಾಗಿರುವುದು ಈ ಸಂಕಟಕ್ಕೆ ಉಪಾಯ ಪ್ಯಾಗ ರಸ— ಅಕ್ಕಿ ಕಟ್ಟಾ ಸುವಡು ೫ ರೂಪಾಯಿ ತೂಕ ತೆಗದುಕೊಂಡು ಲೋಧ್ರ ಚಕ್ಕೆಯನ್ನು ೭ ೮ ಗುಂಜಿಯಷ್ಟು ಸವಿಯುವವರೆಗೆ ತೆದ್ದು ಚೀನಿ ಸಕ್ಕರೆ ಹಾಕಿ ರೋಗಿಗೆ ಕುಡಿಸಬೇಕು ದಿನದೊಳಗೆ ಎರಡು ಮೂರು ಸಾರಿ ಈ ಔಷಧವನ್ನು ಕುಡಿಸಲಿಕ್ಕೆ ಅಡ್ಡಿ ಇಲ್ಲ ಇದರಿಂದ ಸಂಕಟವು ನಿಶ್ಚಯವಾಗಿ ನಿಲ್ಲುತದೆ, ವಾಂತಿಯು ಶೇಷವಿದ್ದರೆ ಅದು ಸಹ ಹೋಗುತವೆಂದು ಹೇಳುತ್ತಾರೆ

ಧಾರ್ವಾಡದಲ್ಲಿರುವ ಚಿಟಗುಪ್ಪಿ ಬ್ರಾಹ್ಮಣರಾಯರ ಮಕ್ಕಳು ರಾಮರಾಯರು ಇಂಗ್ಲೆಂಡಿಗೆ ಹೋಗಿ ವಿದ್ಯಾಭ್ಯಾಸಮಾಡಿ ಬ್ಯಾರಿಸ್ಟರ್ ಪರೀಕ್ಷೆ ಕೊಟ್ಟು ಬಂದಿರುವರಷ್ಟೆ, ಅವರು ವಿಲಾಯತಿಯಿಂದ ಬಂದು ಆರು ವರ್ಷವಾಯಿತು, ಆಗಿನಿಂದ ಇವರ ಸಂಗಡ ಪಙ್ತಿ ವ್ಯವಹಾರವು ಬಹಿರಂಗವಾಗಿ ನಡೆಯುವದಿಲ್ಲ ರಾಮರಾಯರು ಮೂರು ನಾಲ್ಕು ವರ್ಷ ಲಂಡನಿನಲ್ಲಿ ನಿಂತು ಗೋಮಾಂಸ ಭಕ್ಷಕರಾದ ಆ ವಿಂಧ್ಯ ಜನರ ಕೈಯಿಂದ ಅನ್ನ ಪಾನಗಳನ್ನು ತೆಗದುಕೊಂಡದ್ದರಿಂದ ಧರ್ಮಶಾಸ್ತ್ರಾನುಸಾರವಾಗಿ ಜಾತಿಭ್ರಷ್ಟರಾದರೆಂಬದಕ್ಕೆ ಸಂದೇಹವಿಲ್ಲ ಹೀಗೆ ವಿಲಾಯತಿಗೆ ಹೋಗಿ ಬಂದವರು ಬಹುಜನರು ಅವರ ಕುಲದವರಿಂದ ಜಾತಿಭ್ರಷ್ಟರೆಂತಲೇ ಎಣಿಸಲ್ಪಟ್ಟು, ಬಹಿಷ್ಕೃತರಾಗಿದಾರೆ ಅದರಂತೆ ರಾಮರಾಯರವರೂ ತಿಲೋದಕೆಯಲ್ಲಿ ಬಹಿಷ್ಕೃತರಂತೆಯೇ ವರ್ತಿಸುತಲಿದ್ದಾರೆ, ಆದರೆ ಈಗ ಅವರನ್ನು ಶುದ್ಧ ಮಾಡುವದಕ್ಕೆ ಇಲ್ಲಿನ ಗ್ರಾಮಸ್ಥರು ಪ ಮುಖ್ಯರಾದ ವೈಷ್ಣವರು ಸಹಿತವಾಗಿ ಶ್ರೀ ಉತ್ತರಾದಿಮಠದ ಸ್ವಾಮಿಗಳವರಿಗೆ ವಿಜ್ಞಾಪನಾಪತ್ರವನ್ನು ಕಳುಹಿಸತಕ್ಕವರಿದ್ದಾರೆ ಸ್ವಾಮಿಗಳವರು ಯಾಗ ನಿರ್ಣಯ ಮಾಡುತ್ತಾರೊ ನೋಡಬೇಕಾಗಿದೆ

ಈ ಪ್ರದೇಶದ ಮುಸಲ್ಮಾನರಲ್ಲಿ ಸಾಕಲ್ಯ ಜಾತಿಗಳೆಂತಲೂ, ಸ್ವತಂತ್ರ ಜಾತಿಗಳೆಂತಲೂ ಎರಡು ಮುಖ್ಯ ವರ್ಗಗಳನ್ನು ಮಾಡಬಹುದು ಮೊದಲನೇ ವರ್ಗದಲ್ಲಿ ಸೈಯದ್ ಸೇಕ್, ಮೊಗಲ್, ಪಠಾಣ ಎಂಬ ನಾಲ್ಕು ಪಂಗಡಗಳ ಹೊರತು ಸಾಧಾರಣ ಜಾತಿಗಳೂ ಸೌದಾಗರರು ಅತ್ತಾರರು, ಮಣಿಯಾರರು, ಕಾಗದಿಗಳು, ಕಲಾಯಿಗಾರರು, ನಾಲಬಂದರು, ಪಿಂಜಾರರು, ಪಕೀರರು, ತಾಂಬಾಳತರು, ಸೂರವಾನರು, ಎಂಬ ಹತ್ತು ವಿಶೇಷ ಜಾತಿಗಳೂ ಬರುತವೆ ಈ ಜಾತಿಗಳಲ್ಲಿ ಪರಸ್ಪರ ಶರೀರ ಸಂಬಂಧವಾಗಿರುತಿದೆ ಇವರ ಸ್ವರೂಪ, ಉಡಿಗೆ, ನಡಾವಳಿಗಳಲ್ಲಿ ಬಹಳ ಅಭ್ಯಂತರವಿರುವದಿಲ್ಲ ಸ್ವತಂತ್ರ ಜಾತಿಗಳು ಮೂವತ್ತಕ್ಕಿಂತ ಹೆಚ್ಚಿರುತಿವೆ, ಅವರಲ್ಲಿ ಒಂದು ಜಾತಿಯವರು ಬೇರೆ ಯಾವ ಜಾತಿಯವರ ಸಂಗಡಲೂ ಸಾಕಲ್ಯ ಜಾತಿಗಳ ಸಂಗಡಲೂ ಶರೀರಸಂಬಂಧ ಮಾಡುವದಿಲ್ಲ, ಅವರವರ ಪದ್ಧತಿಗಳು ಬೇರೆ ಬೇರೆ ಇರುತಿವೆ ಈ ಜಾತಿಗಳನ್ನು ಕೆಳಗೆ ವಿವರಿಸಿದ್ದೇವೆ

ಮೇಲೆ ನಮೂದಿಸಿದ ಜಾತಿಗಳಲ್ಲಿ ಮೇಮನ್ ಜಾತಿಯವರು ಕಚ್ಚೀ ಭಾಷೆಯನ್ನಾಡುವರು, ಬೋರೀ ಜಾತಿಯವರು ಗುಜರಾತೀ ಭಾಷೆಯನ್ನಾಡುವರು ಮಿಕ್ಕ ಯಾವತ್ತು ಜಾತಿಗಳ ಜನರು ಹಿಂದುಸ್ತಾನೀ ಭಾಷೆಯನ್ನಾಡುತ್ತಾರೆ ಇವರ ಕಡಮೆ ಜಾತಿಗಳ ಮಾತಿನಲ್ಲಿ ಮರಾಠಿ, ಕನ್ನಡ ಶಬ್ದಗಳು ಸೇರುತವೆ, ಹಳ್ಳಿಗಳಲ್ಲಿನ ಮುಸಲ್ಮಾನರು ಅಚ್ಚ ಕನ್ನಡಿಗರ ಇರುತ್ತಾರೆಂದು ಹೇಳಬಹುದು—ಲೋಕಬಂಧು

ದಂಗೆ ಉತ್ಪನ್ನಿಸುವವರಿಗೆ ಅಧಿಕಾರಸ್ಥರೇ ಕಾರಣರು,

ಇಂತ ಹೀನಸ್ಥಿತಿಯಲ್ಲಿ ನಮ್ಮ ಹಿಂದುಸ್ಥಾನದೊಳಗೆ ಮೇಲೆ ಮೇಲೆ ದಂಗೆಗಳು ಏಳಲಾರಂಭಿಸುವದೊಂದು ದೇಶಕ್ಕೆ ಮಹಾ ಅನಿಷ್ಟ ಕಾರಕವಾದದ್ದೆಂದು ತಿಳಿಯಬೇಕು ಹಿಂದುಸ್ಥಾನದಲ್ಲಿ ಇತರ ದೇಶಗಳಂತೆ ಒಂದೇ ಜಾತಿಯು ಇರದೆ ಅನೇಕ ಜಾತಿಗಳಿದ್ದು ಪ್ರತ್ಯೇಕರಲ್ಲಿ ಧರ್ಮದ ಪೂರ್ಣ ಅಭಿಮಾನವಿರುತಿದೆ ಆದರಿಂದ ಧರ್ಮ ಸಂಬಂಧದಲ್ಲಿ ಏನಾದರೂ ಸ್ವಲ್ಪ ಪೆಟ್ಟು ಕಡಮೆ ಆಯಿತೆಂದರೆ, ಕೂಡಲೆ ತಂಟೆಗಳು ಉತ್ಪನ್ನಿಸಿ ದಂಗೆಗಳಾಗುವದಕ್ಕೆ ಪ್ರಾರಂಭವಾಗಿ ದೇಶಕ್ಕೆ ದೊಡ್ಡ ನಷ್ಟವಾಗುತಿವೆ ಇಂತ ದಂಗೆಗಳು ಏಳುವದಕ್ಕೆ ಮುಖ್ಯ ಕಾರಣವೇನೆಂದರೆ ಸರ್ಕಾರೀ ಅಧಿಕಾರಸ್ಥರ ದುರಭಿಮಾನವು, ದುರ್ಲಕ್ಷ್ಯವು, ಅವಿಚಾರವು, ಅವರ ಸಾಮರ್ಥ್ಯತನ, ಪಕ್ಷಪಾತ, ಇವೇ ಮೊದಲಾದವುಗಳು ಮುಖ್ಯಕಾರಣಗಳಾಗುತಿವೆ ಈಗ ಕೆಲವು ದಿನಗಳ ಹಿಂದೆ ಮುಂಬ್ಯೆ ಇಲಾಖೆಯಲ್ಲಿ ಹಿಂದೂ ಮುಸಲ್ಮಾನರಿಗೆ ಅನೇಕ ಸ್ಥಳಗಳಲ್ಲಿ ದಂಗೆಗಳಾಗಿ ಬಹಳ ಜನರು ದಸ್ತಕ್ಕೆ ಒಳಗಾದರು ಈಗ ಅದೇ ಮೈಸೂರು ಇಲಾಖೆಯಲ್ಲಿ ನಡೆದವೆ, ಇದಕ್ಕೆ ಸರ್ಕಾರದವರು ಸಾರಾಸಾರ ವಿಚಾರ ಮಾಡಿ ದುರಾಗ್ರಹಿಗಳಾದ ಉದ್ಯೋಗಸ್ಥರನ್ನು ತೆಗದುಹಾಕಿದಲ್ಲಿ ಸರ್ಕಾರದವರಿಗೂ ಪ್ರಜೆಗಳಿಗೂ ಸೌಖ್ಯ ಉಂಟಾಗುವದು, ಸಂದೇಹವಿಲ್ಲ

ADVERTISEMENTS

Bangalore City Municipality

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನ.

ನೋಟಿಸ್.

ಸನ್ ೧೮೯೬—೯೭ ನೇ ಇಸವಿಯಲ್ಲಿ ಸಿಟಿ ಮ್ಯುನಿಸಿಪಲ್ ರೋಡುಗಳಿಗೆ ಬೇಕಾದ ಗ್ರಾವಲ್‌ಗಳ ಸರಬರಾಯಿ ಬಗ್ಗೆ, ೧೮೯೬ ನೇ ಇಸವಿ ಜೂನ್ ೨೫ನೇ ತಾರೀಖ್ ಮಧ್ಯಾಹ್ನದವರೆಗೆ ಇದರ ಗುತ್ತಿಗೆ ಮಾಡಬೇಕೆನ್ನುವವರು ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ಬರಮಾಡಿಕೊಳ್ಳುವರು. ಅಂದಾಜುಗಳು, ಇತರ ಕಂಡೀಷನ್‌ಗಳು ವಗೈರೆಗಳನ್ನು, ಆದಿತ್ಯವಾರಗಳು ವಿನಾ ಉಳಿದ ದಿನಗಳಲ್ಲಿ, ಹಗಲು ೧೧ ಘಂಟೆಯ ಮೇಲೆ ೫ ಘಂಟೆ ಒಳಗಾಗಿ ಎಗ್ಸಿಕ್ಯುಟಿವ್ ಇಂಜನಿಯರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

೨ ೬—೯೬	T T LIONARD, President, City Municipal Commn

ನೋಟಿಸ್.

ಬೆಂಗಳೂರು ಹುರುಡುವ ಪೇಟೆಯಲ್ಲಿರುವ ಜನಾರ್ದನ ರಂಗಯ್ಯನು ಸರ್ವರಿಗೂ ತಿಳಿಯಪಡಿಸುವದೇನೆಂದರೆ :—

ನನ್ನ ಮಗನಾದ ೧೩ವರ್ಷ ವಯಸ್ಸುಳ್ಳ ಜನಾರ್ದನಯ್ಯನೆಂಬವನು ಈಗ್ಗೆ ಸುಮಾರು ೨ ತಿಂಗಳ ಲಾಗಾಯತು ಮನೆಯಲ್ಲಿಲ್ಲದೆ ನನ್ನ ಮಾತುಕೇಳದೆ ಸಿಕ್ಕಿದ ಸ್ಥಳಗಳಿಗೆ ಹೋಗಿ ಸ್ವಲ್ಪ ಜನಗಳಲ್ಲಿ ಸೇರಿಕೊಂಡು ಅವಿವೇಕಸ್ಥಿತಿಯಲ್ಲಿರುವದರಿಂದ ಇವನು ಯಾರಲ್ಲಿಯೇ ಆಗಲಿ, ಸಾಲ ವಗೈರೆ ಮಾಡಿ ದಸ್ತೈವಜು ಬರದುಕೊಟ್ಟು ಮೊಬಲಗು ತೆಗದುಕೊಂಡಲ್ಲಿ ಅಂತಾ ಸಾಲ ಮುಂತಾದ್ದಕ್ಕೆ ನಾನು ಜವಾಬ್ದಾರನಲ್ಲವು ನನ್ನ ಸ್ವಯಾರ್ಜಿತವಾದ ಸ್ವತ್ತಿನಲ್ಲಿ ನನ್ನ ಮಗನಾದ ಜನಾರ್ದನಯ್ಯನಿಗೆ ಯಾವವಿಧ ಹಕ್ಕೂ ಇರುವದಿಲ್ಲವು

೧೪—೬—೯೬ ಜನಾರ್ದನ ರಂಗೈಯನ ರುಜು.

ಸದರ್ನ್ ಮರಾಟಾ ರೈಲ್ವೆ.

(ಮೈಸೂರು ಸ್ಟೇಟ್ ರೈಲ್ವೆ)

ನೋಟೀಸ್

“ಎಕಸ್ಪ್ರೆಸ್ ಸ್ಪೆಷಲ್ ಗೂಡ್ಸ್ ಟ್ರೈನ್” ಎಂಬ ಹೆಚ್ಚಿಗೆ ರೈಲ್ವೆ ಗಾಡಿಗಳು ಈ ಕೆಳಗೆ ವಿವರಿಸಿರುವ ಮೇರೆ, ತುಮಕೂರು ಬೆಂಗಳೂರು ಮಧ್ಯೆ ಸಂಚರಿಸುವವಾಗಿ ಅವುಗಳ ಮೂಲಕ ಪ್ರಯಾಣೀಕರನ್ನು ಸಹ ಒಯ್ಯಲ್ಪಡುವದು

	ಘಂಟೆ	ನಿಮಿಷ
ಬೆಂಗಳೂರು ಬಿಡುವದ ಪಿಎಂ	7	30
ತುಮಕೂರು ಸೇರುವದು ಪಿಎಂ	10	37
ತುಮಕೂರು ಬಿಡುವದು ಏಎಂ	4	0
ಬೆಂಗಳೂರಿಗೆ ಸೇರುವದು ರಾತ್ರಿ	7	54

ತಾ|| 25ನೇ ಮೇ 1896 ನೇ ಇಸವಿ ಬೆಂಗಳೂರು ಸಿಟಿ. ಟಿ. ಜೆ ಮೆಕ್ಲಯರ್. ಡಿಸ್ಟ್ರಿಕ್ಟ ಟ್ರಾಫಿಕ್ ಸೂಪರಿಂಟೆಂಡೆಂಟ್

NOTICE

VAIDYASARA SANGRAHA.

A TREATISE ON THE PRINCIPLES OF HINDU MEDICINE

Price, including Postage Rs 5—0—0

ವೈದ್ಯಸಾರ ಸಂಗ್ರಹ.

ಇದು, ಚರಕ, ಬಾಹಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪುಸ್ತಗ್ರಂಥಗಳ ಸಂಗ್ರಹರೂಪವಾಗಿರುತಿದೆ

ಇದರ ಕ್ರಯ — ಪೋಸ್ಟೇಜು ಮತ್ತು ಅಂಚೇ ಹಾಸಲ್ ಸಹ, ಒಂದಕ್ಕೆ ರೂ, 5—0—0

ಈ ಕಂಪನಿಯು ಸನ್ ೧೮೯೩ನೇದರಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ವಜ್ರಾಂಗ ಬಜೋರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತಮ ತ್ಯಾಯು.

ಅತ್ಯುತ್ಕೃಷ್ಟವಾದ ಬಿಲ್ಲಾಗಳಿಂದ ತಯಾರಿಸಿದ ಈ ಉತ್ತಮತ್ತಿಗಳ ಕೋಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಬೆಟ್ಟದ ಅರಗಳಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ತಮತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವಿವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಶರೀರವೂ ತರುಣರಂತೆ ಸಂಪೂರ್ಣ ಪ್ರಜ್ವಲಿತವಾಗುತ್ತದೆ ಜನನೇಂದ್ರಿಯದಲ್ಲಿ ಏನು ಕುಂದಿದ್ದರೂ ಹೋಗಿ ಬಲ ಉಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಿಯು ಮುಂಬೆ ಅಥವಾ ಹಿಂಬೆ ಇರದುಹೋಗುವ ಧಾತು ನಿಲ್ಲುತ್ತದೆ ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ ಪರಮಾ ಹಾಗೂ ಉಷ್ಣಸಂಬಂಧಿ ಬೇನೆಗಳ ಕಸರ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ ಮೂರು ಹೊತ್ತುಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಶೌಚಕ್ಕಾಗುತ್ತದೆ ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ನಡೆಯುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ ಮತ್ತು ಹಳೆಬಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು ೧೧ ದಿವಸಗಳ ವರೆಗೆ ಸಾಲತಕ್ಕ ೧ ಡಬ್ಬಿಗೆ ೧ ೮—೦ ರೂ|| ಒಂದೇಸಾರ್ತಿಕ್ಕೆ ೪ ಡಬ್ಬಿಗಳು ತಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತಮತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ ಶರಗಿನ ಹಾಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ ಎಲ್ಲರನ್ನೂ ಸರಿಯಾಗಿ ಬೇರೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ ಯಾವತ್ತು ದೇಶಗಳಲ್ಲಿಯು ವೈದ್ಯಶಾಸ್ತ್ರಜ್ಞರಿಗೆ ಕಳುಹಿಸಲ್ಪಡುತ್ತದೆ ಬರೆದು ಬಂದ ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು ಅಂಚೆಯ ಹಾಗೂ ವ್ಯಾಲ್ಯೂ ಪೇಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಔಷಧಗಳ ಹಾಕಿ ರವಾನಿಸುವವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು)

ಮೇಲ್ವಿಳಾಸ—ಪಿ ಎಲ್ ಎ. ಬ್ರದರ್ಸ್ ಮತ್ತು ಕಂಪನಿ,

ಸರೆಂಡ್ ಇಂಗ್ಲಿಷ್ ಬ್ರಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ್—ಬೆಳಗಾಂವ. Post BELGAUM.

BANGALORE —Printed and Published at the KARNATAKA PRESS, No. 40, HOSPITAL ROAD, CITY,—1896

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning.

ಪ್ರಕಟನೆಯ ದರವು { ಮೊದಲನೆಯದರಲ್ಲಿ ಪಂಕ್ತಿ ಒಂದಕ್ಕೆ 0 2 0 / ಎರಡನೆಯ ಪಂಕ್ತಿ ಒಂದಕ್ಕೆ 0 1 0

ಸಾಲಿ 1 ಕ್ಕೆ . 3 0 0	ಸಾಲಿ 1 ಕ್ಕೆ . . 4 0 0
6 ತಿಂಗಳಿಗೆ, 2 0 0	6 ತಿಂಗಳಿಗೆ . . . 2 8 0
3 ತಿಂಗಳಿಗೆ, . 1 4 0	3 ತಿಂಗಳಿಗೆ . . 1 8 0

[illegible]

Vol. XXIII. BANGALORE:—MONDAY, JUNE 22, 1896. No. 25.

Select Telegrams

Berlin 11th June—Li Hung Chang had an audience with the Emperor to-day. He received the highest honours.

German manufacturers are arranging fetes in Li Hung Chang's honour when he visits different factories.

Berlin, 15th June—Li Hung Chang, in handing his credentials to the Emperor William, said that the relations of China with Germany were more cordial and friendly than with any other European Power. His Excellency thanked Germany for her powerful assistance in last year's negotiations for the retrocession of the Liao Tung Peninsula. The Emperor William, replying, said that he earnestly hoped for a still further development of the friendship between Germany and China for the welfare of both countries, and he desired Li Hung Chang to convey to the Emperor his thanks for sending the mission.

New York, 15th June—Delegates from the New England States, New York, Pennsylvania, Maryland, Minnesota, New Jersey, Washington, Tennessee, Illinois and Wisconsin, at the St Louis Republican Convention, have passed a resolution in favour of maintaining a gold standard, and opposing the free coinage of silver except by an international agreement for bimetallism.

THE

Karnataka Prakasika.

MONDAY, JUNE 22 1896

THE CESS TAX, C. AND M STATION

The rate payers of the Civil and Military Station are in a state of agitation on account of the scavengering cess that has been imposed upon the place. They are of opinion that taxes in abundance had already been put upon them. No more were required. But in spite of their remonstrances the cess has been imposed, and they have to pay it. The occupiers of houses, whether owners or tenants, have to pay this cess, and not the owners alone. If the amount is not forthcoming the Municipality has a clever way of making people pay up. When a refusal is made the person so refusing is not allowed to have his premises scavengered. He is then served with a notice to appear before a magistrate to answer the charge of having his premises in an insanitary condition. He is then fined, and dismissed with a warning. This appears to many little short of tyranny, and tyranny of the worst stamp. The rate payers hold, and we think rightly, that as they pay assessment they should not be asked to pay anything more. This should cover the expense incurred in scavengering. The assessment is heavy in the Civil and Military Station, and the people ask why they should be called upon to pay another impost in addition to this. They see no reason why they should be doubly charged, and few will blame them for this. They believe they are imposed upon by the Municipality, and they resent it. In the next place they look upon the cess tax as illegal. In the time of Mr Sandford a similar tax was imposed. The rate payers memorialised the Government of India, and it was declared that the impost was illegal, it could not be enforced, and all the money collected must be returned. This was about twelve years ago. During these twelve years nothing was said about the tax. Now it has been revived, and the people are expressing their indignation. It seems clear that if the cess tax was illegal twelve years ago it must be illegal now. The same laws were in force then as now, the people had the same rights then as they have now, consequently it is hard to see why a tax that could not be collected in 1884 can be collected in 1896. This is what the people say, and we cannot help thinking they are right. There is another reason why they should not pay the tax. We are given to understand that the measure has not obtained the sanction of the Government of India, that it has been enforced while in the form of a draft, and this is illegal. Should the Government disallow the tax, all the money paid will have to be refunded. Why did not the Municipal authorities first obtain this sanction, then insist on the tax being paid. This would have been the right course to pursue, but Municipalities rarely follow the right course, but just the opposite. As the Government of India on a former occasion declared the impost to be illegal, it might do the same again, and in that case the Municipal authorities of the Civil and Military Station would look rather foolish. Then again, the Municipality seems inclined to introduce certain changes with regard to the scavengering of the houses of the native community, and this is sure to cause great dissatisfaction. There ought to be a great demonstration made against the hateful tax. The people ought to meet in their thousands, and speak out plainly; they should show the authorities the illegality of their acts, and tell them plainly that the measures they have set their hearts on must not be carried out. In this way they may gain a victory.

PALACE HONOURS

It is well known that there was a good deal of dissatisfaction expressed at the way invitations were sent out and Khillats distributed at the late festivities in Mysore. That "somebody blundered" there can be no doubt. Matters were not well managed; whether this was of set purpose or through carelessness we cannot say. We simply state a fact. It is a pity there was anything to complain of, as such unpleasantness mars the pleasure to be derived from such functions as came off in the capital a short time ago. Such mistakes cause heartburnings and bad feeling, and it should be the duty of those in authority to avoid all this. The Municipal Commissioners of the cities of Mysore and Bangalore feel specially grieved that they were not invited to the ceremonies that came off at the capital last month. They give their services without reward, they serve the public, and in this way they serve the State, hence they are of opinion that they ought to be recognised on public occasions. But they were not recognised when the marriage and Upanayanam celebrations came off. This was a great pity, as the neglect may make them be less careful of their duties than they have been in the past. From what we can learn it seems that Khillats had a good deal to do with this. These could not be given to all, so comparatively few were invited. We would recommend that the Khillats should be given up entirely, and then any number of men might be asked to the different ceremonies connected with the State. The distribution of these gifts is an old fashioned custom, and might well be dispensed with. Then again, there should be a table of precedence, it should be laid down who were eligible to appear at the State functions and who were not. This would prevent the bad feeling we have lately heard so much of, and the question would be settled once and for ever. It is to be hoped that something of the kind will be done, so that there will not be any unpleasantness in the future such as we have had to refer to.

News and Notes.

His Highness the Maharaja of Kuch Behar is reported to be shortly going to England for 18 months.

Prince Farrukh Mirza, a son of the late King of Oudh, has died in Calcutta from cholera. He leaves a widow and four children. He was thirty years of age.

Mr Tiruvarur Muttuswami Aiyar Swaminatha Aiyar to act as District and Sessions Judge, of Trichinopoly with effect from the 13th July 1896 and until relieved by Mr Miller.

Provision will be made in the Time Table of the South Indian Railway Company, which comes into force on the 1st proximo, for the stoppage of trains to enable native passengers to obtain refreshments.

Queen Victoria withholds the light of her countenance from the female bicyclist. When the wheel woman passes the royal carriage on the road, the Queen turns her head, and pays no attention to her salute.

The Magistrate of Gonda has committed Syed Iqbal Ali Subordinate Judge, who has been charged before him with bribery and corruption, to the Sessions. The trial will take place in Fyzabad next month.

The Railway construction programme for the next three years is now being finally considered. It is understood that the Government of India will provide some 28 crores for the purpose of railway extension.

The other day when the Sessions Judge, Lucknow, had sentenced a thief with several previous convictions to transportation for life, the accused took a book from the pleader's table and threw it on the Judge. The prisoner was immediately removed from the dock.

If Parliament consents to impose the expenditure of the Indian contingent to Suakin on us, says the *Indian Spectator*, it will go to show, what has often in recent times been asserted, that Parliament has ceased to represent the best and worthiest section of the British public.

The Malabar Marriage Bill received the assent of His Excellency the Viceroy and Governor-General in Council on the 27th May and is promulgated for general information in the current number of the *Fort St George Gazette* as Madras Act IV of 1896. The measure is only a step, but it is a great step. And we are glad that it has become law.

The Amir held a review of the troops at Kabul on 30th May. After the review his Highness warned those present that they must be prepared at all times for emergencies and for active service in the field. Referring to the friendship existing between this country and India, he stated that he should always endeavour to prove himself the faithful ally of the Indian Government.

In the course of an article on the employment of Indian troops in the service of England outside the boundaries of India, the *Morning Post* writes:—India has a right to appeal to England for generous treatment in this matter, and we believe and trust that she will get it. The loyalty of India is a matter of serious moment to the Empire, and there is nothing more calculated to cause ill feeling among the natives of this country than an unreasonable increase in the burden of taxation.

The Syndicate of the Calcutta University have ruled that candidates for the several examinations who have deposited the usual fee but have been unable to present themselves for examination, will be admitted to one subsequent examination on payment of the half fee. Heretofore there has been no definite rule on the subject, but the practice has been to admit such candidates without payment of any fees, and in some cases to refund them. *The Madras University may very well follow* the example set by Calcutta in this matter instead of exacting another fee as it is most rigorously doing.

Here is a list of the various occasions on which the British Government borrowed troops from India: China expedition (1859-60), New Zealand expedition (1860 and 1861), Abyssinian expedition (1867), Perak expedition (1875), Strengthening Malta (1878), the Afghan war (1878), Egypt (1882) and the Soudan expedition (1885). The London *Star* which gives this list, remarks:—"The loan of troops would, to begin with, have been impossible if we had not imposed upon India an army far larger than she needs, and more costly than she can afford. But not only has our Government compelled the people of India to maintain an excessively large army, it has also compelled them to bear the expenses of troops removed from India for British operations." Our contemporary correctly characterises all pretences of "moral influence," in the face of this, to be hypocrisy which Indian people cannot fail to see.

Local and Provincial.

The British Resident.—Returned to Bangalore on Thursday morning from Ootacamund, where he had spent two months.

To Mysore.—The Dewan and all the Councillors, besides other officials, have left for Mysore to be present at the birthday festivities.

The Summer Races.—Came off on the race course on Tuesday, Thursday and Saturday last when the sport was very good, and the attendance also.

The Season.—May be said to have set in. We have had races, a polo tournament and theatricals. The amusements will last till August.

THE MAHARAJAH AND MAHARANI REGENT—Are expected to arrive in Bangalore before long, and will remain here for some weeks. They will be here soon after the birthday festivities are over.

THE WEATHER—We have had some good showers of rain lately, and the atmosphere is very cool, the only draw back being that the wind at times is very high During the night it is quite cold. Visitors coming from Madras and other places are quite delighted with the change.

The Mysore Gazette.

Bangalore, Thursday, 18th June 1896

NOTIFICATIONS BY THE GOVERNMENT OF MYSORE

GENERAL AND REVENUE

No 13137—Mis F 13 9, dated 13th June 96

Under Article 172 of the Mysore Service Regulations, Mr A R Vaidyanatha Sastri, M A, M B, and C M, Assistant Surgeon Mysore, is granted casual leave of absence for ten days with effect from such date as he may avail himself of the same

No 13151 J 1637, dated 13th June 1896

Under Section 12 of the Code of Criminal Procedure J Srinivasa Rao, Amildar of Gormbidnur taluk, is appointed a Magistrate of the 2nd Class

No. 13195—Mis 2006, dated 15th June 1896

Mr. S V. Ramaswamiengar, M B, C M, Assistant Surgeon and Chief Assistant to the Senior Surgeon, is appointed to act as Civil Surgeon, Chikmagalur, last grade, during the absence of Dr A S Fernandes on leave

2 Mr. O L Lakshmanasami, Assistant Surgeon, Hassan, is appointed to act as Chief Assistant to the Senior Surgeon, Bangalore, during the absence of Mr S V Ramaswamiengar on other duty.

3 Mr S K Hanumanta Rao, Sub Assistant Surgeon, is transferred from Chikmagalur to Hassan to be in medical charge of the district

No 10710—R 4225, dated, 9th June 1896

Under Article 172 of the Mysore Service Regulations, T Venkataramaiya, Deputy Amildar of the Hosdurga sub taluk, Chitaldrug district, is granted casual leave of absence for fifteen days with effect from such date as he may avail himself of the same

The Amildar of Holalkere taluk will, in addition to his own duties, be in charge of the Hosdurga sub taluk during the absence of T. *Venkataramaiya* on leave or until further orders

No 10732—R 4232, dated, 10th June 1896

The leave on private affairs granted to S. *Srinivasa Rao, Amildar of the Sidlaghatta* taluk, in Government Notification Nos 9441—R F, 96 95 and Camp No 218, dated 16th April and 3rd May 1896, respectively, is hereby extended by two months

Kannaiya Sastri, Taluk Sheristadar, will continue to act as Amildar and 3rd Class Magistrate of the Sidlaghatta taluk during the absence of S Srinivasa Rao on leave or until further orders

No 10735—R 4236, dated, 10th June 1896

Mr G Raghunatha Rao officiating Deputy Commissioner, delivered over, and Mr A Ranyaswamaiengar, Deputy Commissioner, assumed, charge of the Shimoga district on the forenoon of the 1st, and of the District Treasury on the forenoon of the 2nd, instant

No 10738—R 4236, dated, 11th June 1896

The privilege leave of absence for one month granted to H. R Srinivasa Rao, Amildar *of the Gundlupet taluk, in Notification No. 22058—G. 5719, dated 31st May 1895* was extended by one month.

PUBLIC WORKS

No 355—2725, dated, 11th June 1896

The undermentioned Upper Subordinates of the Mysore Public Works Department are reduced to the Lower Subordinate Establishment with effect from 1st June 1896 —

(1) K. Lakshman Rao, Overseer, 2nd Grade, to Sub Overseer, 1st Grade, on Rs 70

(2) M A Tirunarayanachar, Overseer, 3rd Grade, to Sub-Overseer, 1st Grade, on Rs 60

No 373—2773, dated 12th June 1896

Mr. N. Rama Rao, L C E, is reduced from Assistant Engineer, 3rd Grade, to Sub-Assistant Engineer, 1st Grade, with effect from 1st June 1896

Extracts.

THE NEW DIWAN OF BARODA

After much confusion and delay, Diwan Bahadur Srinivasa Raghava Ayengar has been appointed to the influential and responsible post of the Diwan of Baroda, with the consent of the Indian Government We congratulate the Diwan Bahadur upon his good luck, but we do not know whether we should congratulate the Maharaja and his subjects upon the choice. The Diwan Bahadur's recent book upon forty years of progress in Madras shows that he is more of a bureaucrat than of a good administrator We can only hope that the Diwan Bahadur will give no cause for disappointment and that the Maharaja *will not* have to repent of his choice The Baroda Diwanship had actually gone a begging, but the Maharaja at last found his man in the *benighted presidency* of Madras, which is described by the *Pioneer* as the "favoured hunting ground for native princes in search of good and able officials" We earnestly hope that the new Diwan will turn out to be a good and able official The Maharaja had asked our eminent countryman, Mr Justice Ranade, to accept the post, but for reasons best known to himself he refused the honor The Maharaja is not therefore certainly to blame for the present choice The Government proposed before lending the services of Diwan Bahadur Srinivasa Raghava Ayengar that he should not be sent away without showing reasons This was, of course clearly an infringement upon the Gaekwar's rights, and we are very glad that his Highness has refused to be led into giving up his rights *We think that an unnecessary slur is cast upon Bombay* Madras has got the honor. Happy Madras! but can we say Happy Baroda?—*The Mahratta*

ATTEMPTED CONVERSION OF A HINDU GIRL

Considerable alarm has been caused in the *Hindu community by an order passed by Mr Justice Sale The case was one of attempted* conversion of a minor Hindu Girl On the 30th ultimo, a Brahmin made an application in the High Court for a writ of Habeas Corpus upon his father in law, and mother-in-law, both of whom are converts to Christianity, to produce in Court their minor daughter, who, it was alleged, was about to be converted by them to Christianity The statement of the applicant was that he was married to the girl, according to Hindu rites, some four years back, after her father had become a convert. *The girl was then living with her mother in* their family house Shortly after the marriage, the mother followed the path of her husband and embraced Christianity. The girl remained behind with her relatives The applicant stated that the girl has now been decoyed by her parents, who are trying, against her will, to convert her to Christianity. The Court granted a Rule prohibiting the intended conversion The Rule came on for hearing on the 8th instant The Court was crowded by partisans of both sides. Mr Justice Sale, after hearing both sides, delivered a lengthy judgment in which he held that the custody of the parents was not illegal It was put forward on behalf of the father that as he was an outcaste at the time when his daughter was married, and that as his consent was not taken, the marriage was illegal The Judge was probably inclined to this view "Even assuming" said his Lordship, "that the husband has authority, the Court, before putting the section in motion to give him possession of his child wife, would have to be satisfied that the exercise of such power was for the welfare of the child" The girl was restored to her parents, who it is thought, will soon convert her to Christianity The "alleged husband" (the term was deliberately used by the Court being doubtful of the le*gality of the marriage*) will, I hear, shortly appeal against the decision of Mr Justice Sale The judgment has caused no little excitement among the Hindus "It will," says the *Amrita Bazar Patrika,* "give a terrible fright to the Hindu community" "If the validity of her marriage," it says, "be established,—and, there is every probability of this being done,—her Christian parents will find it impossible to marry her to a Christian as that will constitute the offence of bigamy; and at the same time, her Hindu husband will be lost to her" Taking whatever view of the case, it is apparent that neither the law nor usage has been clearly interpreted. - *Standard*

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ತಾ|| ೨೦ನೇ ಜೂನ್ ೧೮೯೬

ಮ್ಯುನಿಸಿಪಲ್ ರೆಗ್ಯುಲೇಷನ್‌ಗಳ ೨೧ನೇ ಸೆಕ್ಷನ್ ಅನುಸರಿಸಿ, ೧೮೯೬ನೇ ಇಸವಿ ಜೂನ್ ೩೦ನೇ ತಾರೀಖ್ ಮಂಗಳವಾರ ಸೇರುವ ಆರ್ಡಿನರಿ ಮೀಟಿಂಗಿನಲ್ಲಿ ವಿಚಾರದ ಬಗ್ಗೆ ಇದರಡಿ ತಿಳಿಸಲ್ಪಡುವ ವಿಷಯಗಳು ಬೋರ್ಡಿನ ಮುಂದೆ ಇಡಲ್ಪಡುವವು :—

A. ೧ನೇ ನಂಬರ್ ಮಿಲ್ಲರ್ಸ್ ಕೆರೆಯ ಪಾರಿಶುದ್ಧ್ಯತೆ ಮತ್ತು ಅಕುಟಿಯನ್ನು ನಿರೋಧಿಸಬೇಕಾದ ವಿಷಯದಲ್ಲಿ ಮಾಡಬೇಕಾದ ಕೆಲವು ಕಾಮಗಾರಿಗಳ ಬಗ್ಗೆ ತಯಾರ್ಮಾಡಲ್ಪಟ್ಟ ಒಟ್ಟು ೧೫೬೦ ರೂಪಾಯಿಗಳ ಯೆರಡು ಅಂದಾಜನ್ನು ಒಂದು ಮುಖ್ಯ ವಿಷಯವಾಗಿ ಪ್ರೊವಿನ್ಷಿಯಲ್ ಫಂಡಿನಿಂದ ಕೊಡತಕ್ಕದ್ದೆಂದು ಮಂಜೂರ್ಮಾಡಿ ೧೮೯೬ನೇ ಇಸವಿ ಜೂನ್ ೧೬ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಮಾಡಿದ ೧೩೪೮೬—ಎಂ ೩೮—೯೪ನೇ ನಂಬರ್ ಪ್ರೊಸೀಡಿಂಗ್ಸ್

B. ೧೮೯೧ನೇ ಇಸವಿ ಡಿಸೆಂಬರ್ ೩ನೇ ತಾರೀಖ ಶ್ರೀ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುವ ಚುನಾವಣೆ ಸಂಬಂಧವಾದ ನಿಬಂಧನೆಗಳನ್ನನುಸರಿಸಿ, ಇಪ್ಪತ್ತೆರಡು ಜನ ಕಮಿಷನರ್‌ಗಳಿಗೆ ಅವಕಾಶವಿರುವಂತೆ ಬೆಂಗಳೂರು ಸಿಟಿಯನ್ನು ಎಂಟು ಡಿವಿಜನ್‌ಗಳಾಗಿ ಭಾಗಿಸುವ ತನಕ ಕಮಿಷನರ್‌ಗಳ ಚುನಾವಣೆ ಕೆಲಸಗಳನ್ನು ನಿಲ್ಲಿಸಿ ಇಡತಕ್ಕದ್ದೆಂದು ಸೂಚಿಸಿ ಮ್ಯುನಿಸಿಪಲ್ ಕಮಿಷನರ್ ಮೆ|| ಬಿ. ವೆಂಕಟರಾಮಯ್ಯನವರು ೯೬ನೇ ಇಸವಿ ಜೂನ್ ೨ನೇ ತಾರೀಖಿನಲ್ಲಿ ಬರೆದ ಲೆಟರ್

F F LEONARD,
President,
City Municipal Commn.

ಕರ್ಣಾಟಕ ಪ್ರಕಾಶಿಕಾ.

೧೮೯೬ನೇ ಇಸವಿ ಜೂನ್ ತಾ|| ೨೨ನೇ ಸೋಮವಾರ.

ಮತ ವಿಷಯದಲ್ಲಿ ಕ್ರಿಶ್ಚಿಯನ್ ಜಡ್ಜಿಗಳ ನ್ಯಾಯ ನಿರ್ಣಯ

ಸುಮಾರು ನಾಲ್ಕು ವರ್ಷಗಳ ಹಿಂದೆ ಕಲ್ಕತ್ತೆಯಲ್ಲಿ ಒಬ್ಬ ಬ್ರಾಹ್ಮಣನು ಅಪ್ರಬುದ್ಧೆಯಾದ ಒಬ್ಬ ಹುಡುಗಿಯನ್ನು ಹಿಂದೂ ಶಾಸ್ತ್ರ ಸಂಪ್ರದಾಯಾನುಸಾರವಾಗಿ ವಿವಾಹ ಮಾಡಿಕೊಂಡನು. ಆ ಕಾಲದಲ್ಲಿ ಸದರೀ ಹುಡುಗಿಯ ತಂದೆಯು ಕ್ರಿಸ್ಟಿಯನ್ ಮತಕ್ಕೆ ಸೇರಿಹೋಗಿದ್ದನು, ಪರಂತು ಅವನ ಹೆಂಡತಿಯೂ ಮಗಳೂ ಕುಲದಲ್ಲೇ ಇರುತಲಿದ್ದರು. ವಿವಾಹವಾದ ಕೆಲವು ದಿನಗಳಮೇಲೆ ಅವನ ಹೆಂಡತಿ ಸಹ ಕ್ರಿಸ್ಟಿಯನ್ ಮತಕ್ಕೆ ಸೇರಿಹೋದಾಗ್ಯೂ, ಮಗಳು ಬಂಧುಜನಗಳಲ್ಲಿ ಸೇರಿಕೊಂಡಿದ್ದಳು. ಈಚೆಗೆ ಸದರೀ ಹುಡುಗಿಯ ತಾಯಿ ತಂದೆಗಳು ಅವಳನ್ನು ದುರ್ಬೋಧನೆಮಾಡಿ ಕರೆದುಕೊಂಡು ಹೋಗಿ ಕ್ರಿಸ್ಟಿಯನ್ ಮತಕ್ಕೆ ಸೇರಿಸಿಕೊಳ್ಳುವದಕ್ಕೆ ಪ್ರಯತ್ನಪಡುತಲಿರುವದರಿಂದ ಅವಳನ್ನು ಕೋರ್ಟಿಗೆ ಹಾಜರ್ಮಾಡುವಂತೆ ಹುಕುಂ ಕೊಡಬೇಕೆಂದು ಸದರೀ ಹುಡುಗಿಯ ಗಂಡನು ಕಳೆದ ಮೇ ತಿಂಗಳ ೩೦ನೇ ತಾರೀಖಿನೊಳು ಕಲ್ಕತ್ತಾ ಹೈಕೋರ್ಟಿಗೆ ಅರ್ಜಿ ಕೊಡಲು ಸದರೀ ಹುಡುಗಿಯನ್ನು ಕ್ರಿಶ್ಚಿಯನ್ ಮತಕ್ಕೆ ಸೇರಿಸಿಕೊಳ್ಳಕೂಡದೆಂದು ಮೊದಲು ನಿಬಂಧನೆ ಮಾಡಿದರು. ಸದರೀ ನಿಬಂಧನೆಯು ಈ ತಿಂಗಳ ೮ನೇ ತಾರೀಖಿನಲ್ಲಿ ವಿಚಾರಕ್ಕೆ ಬಂದು ಉಭಯಪಕ್ಷಗಳೂ ಸೇರಿದವರು ಬಹುಮಂದಿ ಕೋರ್ಟಿನಲ್ಲಿ ಗುಂಪು ಕೂಡಿದ್ದರು. ಮಿ|| ಜಸ್ಟಿಸ್ ಸೇಲ್ ಎಂಬ ನ್ಯಾಯಾಧಿಪತಿಯವರು ಉಭಯ ಪಕ್ಷದವರ ವಾದಗಳಂ ಕೇಳಿದಮೇಲೆ ಸದರೀ ಹುಡುಗಿಯು ತಾಯಿ ತಂದೆಗಳ ಪೋಷಣೆಯಲ್ಲಿರುವುದು ನ್ಯಾಯವಿರುದ್ಧವಾದುದಲ್ಲವೆಂದು ಅಭಿಪ್ರಾಯಪಟ್ಟರು. ತಾನು ಕ್ರಿಶ್ಚಿಯನ್ ಮತಕ್ಕೆ ಸೇರಿಹೋದಮೇಲೆ ತನ್ನ ಅನುಮತಿಯಂ ಪಡೆಯದೆ ವಿವಾಹ ನಡೆದಿರುವದರಿಂದ ಅದು ನ್ಯಾಯಸಮ್ಮತವಾದುದಲ್ಲವೆಂದು ಹುಡುಗಿಯ ತಂದೆಯಾದವನು ವಾದಿಸಿದನು. ಸ್ವಾಯತಃ ಜಡ್ಜಿಯವರು ಅದೇರೀತಿ ಅಭಿಪ್ರಾಯಪಟ್ಟಂತೆ ಕಾಣುತಿದೆ. ಸದರೀ ಹುಡುಗಿಯನ್ನು ತಂದೆ ತಾಯಿಗಳ ವಶಕ್ಕೆ ಕೊಟ್ಟುಬಿಟ್ಟರು. ಶೀಘ್ರದಲ್ಲೇ ಅವಳನ್ನು ಕ್ರಿಶ್ಚಿಯನ್ ಮತಕ್ಕೆ ಸೇರಿಸಿಕೊಳ್ಳುವರೆಂದು ಕಾಣುತಿದೆ. ಗಂಡನಾದವನು ಸದರೀ ಫೈಸಲಿನಮೇಲೆ ಅಪೀಲ್ಮಾಡುವ ಪ್ರಯತ್ನದಲ್ಲಿದಾನೆ. ಕೇವಲ ಅಸಂಗತವಾದ ಈ ತೀರ್ಮಾನದ ಮೂಲಕ ಹಿಂದೂಜನರಲ್ಲಿ ಬಹಳ ಅಸಮಾಧಾನವುಂಟಾಗಿದೆ, ಎಂದು ಕಲ್ಕತ್ತೆ ಪತ್ರಿಕೆಯೊಂದು ತಿಳಿಸುತಿದೆ. ಯುಕ್ತಾಯುಕ್ತ ವಿಚಾರಶೂನ್ಯರಾಗಿ, ಯಾವವಿಧದಿಂದಲಾದರು ಅನ್ಯ ಮತಾವಲಂಬಿಗಳಾದವರನ್ನು ಸ್ವಮತಕ್ಕೆ ಸೇರಿಸಿಕೊಳ್ಳುವ ಬದ್ಧಸಂಕಲ್ಪದೊಡನೆ ಈ ದೇಶಕ್ಕೆ ಬರುವ ಮಿಷನರಿಗಳಿಗೂ ಹಿಂದೂ ಜನರಿಗೂ ಉಂಟಾಗುವ ಮತ ಸಂಬಂಧವಾದ ವ್ಯವಹಾರಗಳಂ ವಿಚಾರಿಸುವದಕ್ಕೆ ಕ್ರಿಶ್ಚಿಯನ್ ಮತಾವಲಂಬಿಗಳಾದವರೇ ನ್ಯಾಯಾಧಿಪತಿಗಳಾಗಿ ಯೇರ್ಪಟ್ಟಮೇಲೆ ಹಿಂದೂಗಳಿಗೆ ಲಭಿಸಬಹುದಾದ ನ್ಯಾಯವು ಇದಕ್ಕಿಂತಲು ಅನ್ಯಥಾ ಇರಲಾರದು, ಅವರು ಹಾಗೆ ನಿರೀಕ್ಷಿಸುವದು ಕೇವಲ ಭ್ರಾಂತಿಜನ್ಯವಾದ ನಂಬಿಕೆ ಎಂಬುವದಕ್ಕೆ ಅಸಂಖ್ಯಾತಗಳಾದ ನಿದರ್ಶನಗಳು ನಮ್ಮ ಜ್ಞಾಪಕದಲ್ಲಿಲ್ಲದೆ ಹೋಗಲಿಲ್ಲವು. ಆದಾಗ್ಯೂ ಈ ಮೊಕದ್ದಮೆಯು ಅಪೀಲಾಗುವದಾಗಿರುವದರಿಂದ ಅಪೀಲ್ ಕೋರ್ಟಿನ ತೀರ್ಮಾನವಂ ಕೇವಲ ಆತುರದೊಡನೆ ನಿರೀಕ್ಷಿಸುತಲಿರುವೆವು.

Occasional Notes.

ನೈಮಿತ್ತಿಕ ವಿಷಯನ್ಯಾಸ.

ಅಯೋಧ್ಯೆಯ ಗತಿಸಿದ ಅರಸರ ಮಕ್ಕಳಾದ ಪ್ರಿನ್ಸ್ ಫರಕ್ ಮಿರ್ಜಾ ಎಂಬವರು ಈಚೆಗೆ ಕಲ್ಕತ್ತೆಯಲ್ಲಿ ವಾಂತಿ ಭೇದಿ ರೋಗದ ಮೂಲಕ ಮೃತಪಟ್ಟರೆಂದು ತಿಳಿಯಬರುತ್ತಿದೆ

ಕಚ್ ಬಿಹಾರ್ ಸಂಸ್ಥಾನದ ಮಹಾರಾಜರವರು ಐದಾರು ತಿಂಗಳಕಾಲ ಇಂಗ್ಲಾಂಡಿನಲ್ಲಿ ವಾಸ ಮಾಡಬೇಕೆಂದು ಯೋಚಿಸಿ ಅದಕ್ಕೆ ಶೀಘ್ರದಲ್ಲಿ ಪ್ರಯಾಣ ಮಾಡುವದಕ್ಕೆ ಸನ್ನಾಹಗಳು ನಡೆಯುತಲಿರುವಂತೆ ಪ್ರಸ್ತಾಪಿಸಲ್ಪಡುತಿದೆ.

ಜೇಪಾನ್ ದ್ವೀಪದ ಉತ್ತರ ಭಾಗದಲ್ಲಿ ಪ್ರಬಲ ಭೂಕಂಪವುಂಟಾಗಿ, ಒಂದು ಪಟ್ಟಣವೂ ತನ್ನ ವಾಸಿಗಳಾದ ಒಂದು ಸಾವಿರ ಪ್ರಜೆಗಳೂ ನಿರ್ನಾಮವಾಗಿ ಹೋದಂತೆ ಈ ತಿಂಗಳ ೧೮ನೇ ತಾರೀಖಿನಲ್ಲಿ ಬಂದ ತಂತಿವರ್ತಮಾನದ ಮೂಲಕ ತಿಳಿಯಬರುತಿದೆ.

ವಾಯುವ್ಯದೇಶದೊಳು ಈಚೆಗೆ ವರ್ಷಾಕಾಲಕ್ಕೆ ಪ್ರಾರಂಭವಾದುದರಿಂದಲೂ ವಾಂತಿ ಭೇದಿ ರೋಗ ತಲೆದೋರಿದ್ದರಿಂದಲೂ ಕ್ಷಾಮನಿವಾರಕ ಕಾಮಗಾರಿಗಳಲ್ಲಿ ಕೆಲಸಮಾಡುವದರ ಮೂಲಕ ಜೀವಿಸುತಲಿದ್ದ ಜನರಸಂಖ್ಯೆಯು ಈಚೆಗೆ ಕಡಿಮೆಯಾಯಿತೆಂದು ತಿಳಿಯಬರುತಿದೆ.

ವಾಯುವ್ಯದೇಶದ ಸರಹದ್ದು ಪ್ರಾಂತಕ್ಕೆ ಮೇಲ್ಗಡೆ ರಷಿಯಾ ಸರ್ಕಾರದವರು ತಮ್ಮ ರೆಯಿಲ್ ಮಾರ್ಗಗಳನ್ನು ಬಡಾಯಿಸುತ ಬರುವದರಿಂದ ಅದೇ ಮಾರ್ಗದಲ್ಲಿ ತಮ್ಮ ರೆಯಿಲ್ ರಸ್ತೆಗಳನ್ನು ಬಡಾಯಿಸುವದರಲ್ಲಿ ಇಂಡ್ಯಾ ಗವರ್ನಮೆಂಟಿನವರಿಗೆ ಸದ್ಯಃ ಅಭಿಪ್ರಾಯವಿಲ್ಲವು.

ಇಂಡ್ಯಾ ದೇಶದಲ್ಲಿ ರೆಯಿಲ್ ಮಾರ್ಗಗಳನ್ನು ಬಡಾಯಿಸುವ ಕಾರ್ಯಕ್ಕಾಗಿ, ಇಂಡ್ಯಾ ಗವರ್ನಮೆಂಟಿನವರು ಮುಂದಿನ ಮೂರು ವರ್ಷಗಳಲ್ಲಿ ಇಪ್ಪತ್ತೆಂಟು ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ನಿಷ್ಕರ್ಷಿಸಿರುವಂತೆ ಪ್ರಸ್ತಾಪಿಸಲ್ಪಡುತಿದೆ.

ನೇಪಾಲ ಸಂಸ್ಥಾನದವರು ಇನ್ನು ಸರಂಜಾಮುಗಳನ್ನು ಶೇಖರ ಮಾಡುತಲೂ, ತಿಬೆಟ್ ರಾಜ್ಯದ ಸರಹದ್ದು ಪ್ರಾಂತದಲ್ಲಿ ಕದಿಗೂ ಕೋಟೆಗಳಂ ಕಟ್ಟಿಸುತಲಿರುವಂತೆಯೂ ಹೇಳಿಕೊಳ್ಳುತ್ತಾರೆ. ಇದಕ್ಕೆ ಉಂಟಾದ ಕಾರಣಗಳು ಮಾತ್ರ ಹೊರಪಡಲಿಲ್ಲವು.

ಅಯೋಧ್ಯೆಗೆ ಸೇರಿದ ಗೋಂಡಾ ಎಂಬ ಡಿಸ್ಟ್ರಿಕ್ಟಿನ ಸಬಾರ್ಡಿನೇಟ್ ಜಡ್ಜಿಯವರಾದ ಸೈಯದ್ ಇಕಬಾ ಅಲ್ಲಿ ಎಂಬವರು ಲಂಚ ತೆಗೆದುಕೊಂಡ

ಕ್ಕಾಗಿ ದೋಷಾರೋಪಣೆ ಮಾಡಲ್ಪಟ್ಟು ಸದರೀ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಪ್ರಥಮ ವಿಚಾರಣೆಯಂ ಮಾಡಿ ಸೆಷನ್ ಜಡ್ಜಿಯವರನ್ನು ಸಿರ್ಣಯವಿಚಾರಣೆಯ ಬಗ್ಗೆ ಕಮಿಟ್ ಮಾಡಿದರು.

ರಂಗೂನ್ನಲ್ಲಿ ಒಬ್ಬ ಮನುಷ್ಯನು ಲೈಸೆನ್ಸ್ ಇಲ್ಲದೆ ಪಿಸ್ತೂಲ್ ಎಂಬ ಸಣ್ಣ ತುಪಾಕಿ ಇಟ್ಟುಕೊಂಡಿದ್ದ ಬಗ್ಗೆ ಆರು ತಿಂಗಳ ಕಠಿಣ ಸಜಾ ಮತ್ತು ನೂರು ರೂಪಾಯಿಗಳ ಜುಲ್ಮಾನೆ ವಿಧಿಸಲ್ಪಟ್ಟನು. ಈ ಮೊಕದ್ದಮೆಯಲ್ಲಿ ಅಪರಾಧಿಯು ನೇಟಿವ್ ಆದುದರಿಂದ ಕಾನೂನು ಇಷ್ಟರಮಟ್ಟಿಗೆ ಕ್ಷಿಯಾ ಅವನ ವಿಷಯದಲ್ಲಿ ಇಷ್ಟು ಕಠಿಣವಾಗಿ ಉಪಯೋಗಿಸಲ್ಪಟ್ಟಿತೆಂದು ಬಾರಾಶವಾಗಿ ಹೇಳಬಹುದು.

ಯಲ್ಲಾಪುರ ಸಬ್‌ಜಡ್ಜಿಯವರಾದ ಮಿ॥ ಎನ್. ಸ್ವಾಮಿನಾಥಯ್ಯರವರ ಮೇಲೆ ತರಲ್ಪಟ್ಟ ರುಷವತ್ತು ಮೊಕದ್ದಮೆಯ ವಿಚಾರಣೆ ಪೂರ್ತಿಯಾಯಿತಷ್ಟೆ. ಅದರ ಫಲಿತಾಂಶದ ನಿರೀಕ್ಷಣೆಯ ಮೇಲೆ ಅವರು ನಿರ್ದೋಷಿ ಮಾಡಲ್ಪಟ್ಟಂತೆ ಈ ಬೇಗ ತಿಳಿಯಬರುತ್ತದೆ. ಇದರಿಂದ ಈ ಅಧಿಕಾರಿಯ ಮೇಲೆ ತರಲ್ಪಟ್ಟಿರುವ ಮೊಕದ್ದಮೆಯು ಪ್ರಾಯಶಃ ರದ್ದಾಗಿರುವ ಹಾಗೆ ತೋರುತ್ತದೆ.

ಮದರಾಸ್ ಹೈಕೋರ್ಟ್ ಜಡ್ಜಿಯಾಗಿದ್ದು ಗತಿಸಿದ ಸರ್ ಮುತ್ತುಸ್ವಾಮಿ ಅಯ್ಯರವರ ಪುತ್ರರಾದ ಮಿ॥ ಸ್ವಾಮಿನಾಥ ಅಯ್ಯರವರು ಬರುವ ಜುಲೈ ೧೩ನೇ ತಾರೀಖ್ ಮೊದಲು ಬಿ ದಿಯೊಬ್ಬರಿಂದ ಬಿಡುಗಡೆಯಾಗುವ ತನಕ ತಿರುಚನಾಪಲ್ಲಿ ಡಿಸ್ಟ್ರಿಕ್ಟ್ ಜಡ್ಜಿಯಾಗಿ ಬದಲೀ ನೋಡುವ ಬಗ್ಗೆ ಮೊಕರರು ಮಾಡಲ್ಪಟ್ಟಂತೆ ಕಳೆದ ವಾರದ ಮದರಾಸ್ ಗವರ್ನಮೆಂಟ್ ಗೆಜೆಟ್ ಮೂಲಕ ತಿಳಿಯಬರುತ್ತದೆ.

ಜಯಪುರ ಸಂಸ್ಥಾನದವರು, ರಾಜಪುತಾನಾ ಮಾಲ್ವಾ ರೈಲ್ವೆ ಮಾರ್ಗದಲ್ಲಿ ಒಂದು ಠಾಣೆಯಂತೆ, ಜಯಪುರದಿಂದ ಚಂದ್ರ ಎಂಬ ಪ್ರದೇಶದವರೆಗೆ ಸಣ್ಣ ರೈಲ್ವೆ ಮಾರ್ಗವನ್ನು ಮಾಡಿಸುವರೆಂತಲೂ, ಜೋಧಪುರ ಸಂಸ್ಥಾನದವರು ಮಾರ್ವಾಡ ಪಟ್ಟಣದಿಂದ ಕರಾಚಿ ಎಂಬ ಪಟ್ಟಣದವರೆಗೂ ರೈಲ್ವೆಮಾರ್ಗ ಸಂಬಂಧ ಕೂಡುವಂತೆ 'ಮರಕೋಟೆ'ಯೆಂಬ ಪ್ರದೇಶಕ್ಕೆ ರೈಲ್ವೆ ಮಾರ್ಗವು ಕಟ್ಟಿಸುವರೆಂತಲೂ ಉತ್ತರ ದೇಶದ ಪತ್ರಿಕೆಗಳ ಮೂಲಕ ತಿಳಿಯಬರುತ್ತದೆ.

ಇಂಡ್ಯ ದೇಶದ ಕಾರ್ಖಾನೆಗಳಲ್ಲಿ ತಯಾರು ಮಾಡಲ್ಪಡುವ ಕಾಗದಗಳು ಎಲ್ಲ ವಿಷಯದಲ್ಲೂ ವಿಲಾಯಿತಿಯಿಂದ ತರಿಸಲ್ಪಡುವ ಕಾಗದಗಳಿಗೆ ಸಮಾನವಾಗಿರುವದರಿಂದ, ಅನ್ಯದೇಶಗಳಿಂದ ತರಿಸುವ ಪದ್ಧತಿಯಂ ನಿಲ್ಲಿಸಿ ಇಂಡ್ಯಾದೇಶದ ಕಾರ್ಖಾನೆ ಕಾಗದಗಳನ್ನೇ ಇವರೆಲ್ಲರೂ ಕೊಂಡುಕೊಳ್ಳುವದರ ಮೂಲಕ ಸದರೀ ಕಾರ್ಖಾನೆದಾರರಿಗೆ ಪ್ರೋತ್ಸಾಹವನ್ನುಂಟುಮಾಡಬೇಕಾದದ್ದೆಂದು ಕಲ್ಕತ್ತೆ ಪತ್ರಿಕೆಯೊಂದು ಹೇಳುವುದು ಬಹಳ ಉಚಿತವಾಗಿದೆ.

ಈಜಿಪ್ಟ್ ದೇಶದ ಯುದ್ಧ ನೌಕರಿಯ ಬಗ್ಗೆ ಇಂಡ್ಯಾ ರಾಜ್ಯದಿಂದ ಸಹಾಯ ಸೇನೆಯಂ ಕಳುಹಿಸುವದರ ಮೂಲಕ ಉಂಟಾಗುವ ಖರ್ಚುಗಳನ್ನು ಇಂಡ್ಯ ದೇಶದ ವುಟ್ಟುವಳಿಯ ಮೇಲೆ ಹೇರಿಸುವದಕ್ಕೆ ಪಾರ್ಲಿಮೆಂಟ್ ಸಭೆಯವರು ಒಪ್ಪುವ ಪಕ್ಷದಲ್ಲಿ ಈ ಬಗ್ಗೆ ಆಗುವದಾಗ್ಯೂ ತಿಳಿಸಲ್ಪಡುವಂತೆ, ಇಂಗ್ಲಿಷ್ ಜನರಲ್ಲಿ ಯೋಗ್ಯರಾಗಿಯೂ, ಅರ್ಹರಾಗಿಯೂ ಇರುವ ಜನರು ಸದರೀ ಸಭೆಯಲ್ಲಿ ಯಾರೂ ಇಲ್ಲವೆಂದು ವ್ಯಕ್ತವಾಗುವುದೆಂದು ಇಂಡಿಯನ್ ಸ್ಪೆಕ್ಟೇಟರ್ ಎಂಬ ಪತ್ರಿಕೆ ಅಭಿಪ್ರಾಯ ಪಡುತ್ತದೆ.

ಆಫ್ರಿಕಾದೇಶದ ದಕ್ಷಿಣ ಭಾಗದಲ್ಲಿರುವ ಬ್ರಿಟಿಷ್ ಸರ್ಕಾರದವರ ಆಧಿಪತ್ಯಕ್ಕೆ ಒಳಪಟ್ಟ ಕೇಪ್ ಟೌನ್ ಎಂಬ ಪಟ್ಟಣದಿಂದ ಲಂಡನ್ ಪಟ್ಟಣಕ್ಕಾಗಿ ಹೋಗುತಲಿದ್ದ ಡ್ರಮಾಂಡ್ ಕ್ಯಾಸಲ್ ಸ್ಟೀಮರು ಈ ತಿಂಗಳ ೧೭ನೇ ತಾರೀಖಿನ ರಾತ್ರಿ ಸಮುದ್ರದಲ್ಲಿ ಒಂದು ಬಂಡೆ ತಗಲಿ ಮೂರು ನಿಮಿಷಗಳೊಳಗಾಗಿ ಮುಣಗಿ ಹೋಯಿತು. ಅದರೊಳಗಿದ್ದ ಇನ್ನೂರ ನಾಲ್ವತ್ತೇಳು ಮಂದಿಯ ಪೈಕಿ ಮೂವರುವಿನಾ ಮಿಕ್ಕವರೆಲ್ಲರು ಮುಣಗಿಹೋದರೆಂದು ಈ ತಿಂಗಳ ೧೮ನೇ ತಾರೀಖ್‌ನಲ್ಲಿ ಬಂದ ತಂತಿವರ್ತಮಾನದ ಮೂಲಕ ತಿಳಿಯಲಾದೆವು.

ಈಚೆಗೆ ಕೆಲವು ದಿನಗಳ ಹಿಂದೆ ಲಕ್ನೋ ಡಿಸ್ಟ್ರಿಕ್ಟ್ ಸೆಷನ್ ಜಡ್ಜಿಯವರು, ಹಿಂದೆ ಅನೇಕ ಸಲ ಶಿಕ್ಷೆ ಹೊಂದಿದ್ದ ಹಳೇ ಕಳ್ಳನೊಬ್ಬನು ಕಳವು ಮಾಡಿದ ತಪ್ಪಿತದ ಬಗ್ಗೆ ವಿಚಾರಣೆಗಾಗಿ ತಮ್ಮ ಮುಂದೆ ತರಲ್ಪಡಲು ಅವನಿಗೆ ಮರಣಾಂತ ದ್ವೀಪಾಂತರ ವಾಸ ಮಾಡುವ ದಂಡನೆಯಂ ವಿಧಿಸಿದರು. ಸದರೀ ಕಳ್ಳನು ಕೂಡಲೆ ಲಾಯರುಗಳ ಮೇಜಿನ ಮೇಲಿದ್ದ ಒಂದು ಬುಕ್ಕನ್ನು ತೆಗೆದುಕೊಂಡು ಜಡ್ಜಿಯವರ ಮೇಲೆ ಎಸೆಯಲು ಪೋಲೀಸಿನವರು ಬಂದು ಸದರೀ ದುಷ್ಟನನ್ನು ಸೆಳೆಕೊಂಡು ಹೋದನು.

ಕಳೆದ ಮೇ ತಿಂಗಳ ೩೦ನೇ ತಾರೀಖಿನಲ್ಲಿ, ಕಾಬೂಲ್ ಅಮೀರರವರು ತಮ್ಮ ಸೈನ್ಯಗಳನ್ನೆಲ್ಲ ಒಂದು ಕಡೆ ಸೇರಿಸಿ, ಪೆರೇಡ್ ಮಾಡಿದ ತರುವಾಯ, ಹಾಜರಿದ್ದ ಸೈನಿಕರನ್ನುದ್ದೇಶಿಸಿ, ಜರೂರಿಯಾದ ಕೆಲಸಗಳಿಗೂ ಯುದ್ಧನೌಕರಿಗೂ ಅವರು ಯಾವಾಗ್ಯೂ ಸನ್ನದ್ಧರಾಗಿರಬೇಕೆಂದು ಅವರನ್ನೆಚ್ಚರಿಸಿದ್ದು ಮಾತ್ರವಲ್ಲದೆ, ತಮ್ಮ ದೇಶಕ್ಕೂ ಇಂಡ್ಯಾ ರಾಜ್ಯಕ್ಕೂ ಉಂಟಾಗಿರುವ ಮೈತ್ರಿಯನ್ನು ನಮೂದಿಸಿ, ಇಂಡ್ಯ ಗವರ್ನಮೆಂಟಿನವರಿಗೆ ತಾವು ಯಾವಾಗ್ಯೂ ಪ್ರಾಮಾಣಿಕರಾದ ಸಹಾಯಕರೆಂದು ನಿರೂಪಿಸುವದಕ್ಕೆ ಪ್ರಯತ್ನಪಡಬೇಕೆಂದು ಹೇಳಿದರು.

ಮರುಮಾಳ ದೇಶೀಯರ ವಿವಾಹ ವಿಷಯದಲ್ಲಿ ಒಂದು ನೂತನಕ್ರಮವು ಕಲ್ಪಿಸಿ ಈಚೆಗೆ ಮಾಡಲ್ಪಟ್ಟ ಮಸವಿದಾ ಕಾನೂನು ಕಳೆದ ಮೇ ತಿಂಗಳ ೩೦ನೇ ತಾರೀಖಿನಲ್ಲಿ ಇಂಡ್ಯ ರಾಜ್ಯದ ವೈಸರಾಯ್ ವ ಗವರ್ನರ್ ಜನರಲವರ ಮಂಜೂರಾತಿಯಂ ಪಡೆದು ಯೆಲ್ಲರಿಗೂ ತಿಳಿಯತಕ್ಕ ಬಗ್ಗೆ ೧೮೯೬ನೇ ಇಸವಿ ೪ನೇ ನಂಬರ್ ಮದರಾಸ್ ಆಕ್ಟೆಂಬ ಅಭಿಧಾನದೊಡನೆ ಗವರ್ನಮೆಂಟ್ ಗೆಜೆಟಿನಲ್ಲಿ ಪ್ರಸಿದ್ಧ ಮಾಡಲ್ಪಟ್ಟಿದೆ. ಬಹುಕಾಲದ ಮೊದಲು ಮರುಮಾಳ ದೇಶದೊಳು ವಾಡಿಕೆಯಲ್ಲಿರುವ ಕೆಲವು ಸಂಪ್ರದಾಯಗಳಿಗೆ ಮೇಲೆ ಹೇಳಿದ ಹೊಸಕಾನೂನು ಒಂದು ನಿರ್ಬಂಧರೂಪವಾಗಿರುವದರಿಂದ ಸಾಮಾನ್ಯವಾಗಿ ಆ ದೇಶೀಯರಿಗೆ ಅದು ಅನಭಿಮತವಾಗಿರುವದರಲ್ಲಿ ಸಂಶಯವಿಲ್ಲವು.

LOCAL AND PROVINCIAL NEWS
ಒಳದೇಶದ ಮತ್ತು ತಾಲ್ಲೂಕಿನ ವೃತ್ತಾಂತಗಳು

ನಿನ್ನೆಯ ದಿನ ಘನನಂತರಾದ ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದೂರವರ ವರ್ಷ ವರ್ಧಂತಿ ಮಹೋತ್ಸವವಾದುದರಿಂದ ಅದಕ್ಕಾಗಿ ಈ ಸಂಸ್ಥಾನದ ದಿವಾನರವರು, ಕೌನ್ಸಿಲ್ ಮೆಂಬರ್‌ಗಳು ಮೊದಲಾದ ದೊಡ್ಡ ಅಧಿಕಾರಿಗಳು ಮೈಸೂರಿಗೆ ಹೋಗಿರುತ್ತಾರೆ.

ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲವರಾದ ಮಿ॥ ಎಚ್ ಜೆ ಭಾಭಾಯವರು ಮೂರು ತಿಂಗಳ ರಜಾ ಮೇಲೆ ಇಂಗ್ಲೆಂಡಿಗೆ ಹೋಗಿದ್ದರಷ್ಟೆ. ಸದರೀ ಯವರು ಕಳೆದವಾರದಲ್ಲಿ ವಾಪಸ್ ಬಂದು ತಮ್ಮ ಅಧಿಕಾರವನು ಮರಳಿ ವಹಿಸಿಕೊಂಡರು.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮ್ಯಾಕ್‌ವರ್ತ್‌ಯಂಗ್ ಸಾಹೇಬರವರು ಬೇಸಿಗೆಯ ಬಗ್ಗೆ ಕೆಲವು ದಿನಗಳ ಮೊದಲು ನೀಲಗಿರಿಯಲ್ಲಿ ವಾಸಮಾಡುತಲಿದ್ದರಷ್ಟೆ. ಸದರೀ ಅಧಿಕಾರಿಯು ಕಳೆದ ಬೃಹಸ್ಪತಿವಾರದ ದಿನ ಬೆಳಗ್ಗೆ ಇಲ್ಲಿಗೆ ವಾಪಸ್ ಬಂದು ಸೇರಿದರು. ಆ ಬಗ್ಗೆ ಮಾಮೂಲ್ ಮರ್ಯಾದೆಗಳೆಲ್ಲವೂ ನಡೆದವು.

ಹವಾ—ಈಚೆಗೆ ಒಂದು ವಾರದ ಮೊದಲು ಯಾವಾಗ್ಯೂ ಮೋಡವಾಗಿಯೂ ಮಧ್ಯೆ ಮಧ್ಯೆ ಕೇವಲ ಅಲ್ಪವಾಗಿ ಹನಿಗಳು ಬೀಳುತಲೂ ಇರುವುದು ಮಾತ್ರವಲ್ಲದೆ ಬಲವಾಗಿ ಗಾಳಿ ಬೀಸುತಲಿದೆ. ಇದರ ದೆಸೆಯಿಂದ ಕೆರೆ ಕುಂಟೆಗಳಲ್ಲಿರುವ ಅಲ್ಪ ಸ್ವಲ್ಪ ನೀರು ಸಹ ಬತ್ತಿಹೋಗಿಯೂ ಹೋಗುತಲೂ ಇದೆ ಮತ್ತು ಜನಗಳಿಗೆ ಏತನ್ಮೂಲಕ ಆರೋಗ್ಯ ಕಡಮೆಯಾಯಿತು. ಸಿಟಿಯಲ್ಲೂ ಮಿಂಟರಿ ಸ್ಟೇಷನ್ನಲ್ಲೂ ಅಲ್ಲಲ್ಲಿ ವಾಂತಿ ಭೇದಿ ರೋಗ ಕಲಿತೋರಿದೆಯೆಂದು ತಿಳಿಯಬರುತ್ತದೆ. ಆಹಾರ ಪದಾರ್ಥಗಳ ಧಾರಣೆಗಳು ಪಟ್ಟಾಗಿ ಹಿಂದೇ ವಿಧವಾಗಿವೆ. ತಾತ್ಕಾಲಿಕ ಕಾಲಸ್ಥಿತಿಯು ಸುತರಾಂ ಪ್ರೋತ್ಸಾಹಕರವಾಗಿಲ್ಲವೆಂದು ಹೇಳಬೇಕಾಗಿದೆ. ದೈವಾಜ್ಞೆಯು ಮುಂದೆ ಹ್ಯಾಗಿರುವುದೊ ತಿಳಿಯದು.

ಬ್ರಿಜಲಾಲ್‌ದಾಸ್ ಯವರ ಮೊಕದ್ದಮೆಯ ವಿಚಾರಣೆಯ ಬಗ್ಗೆ ಯೋಜಿತರಾದ ಸ್ಪೆಷಲ್ ಜಡ್ಜಿಗಳು ಕಳೆದ ವಾರದಲ್ಲಿ ಕೋರ್ಟ್ ಮಾಡಿ ಸದರೀ ಮೊಕದ್ದಮೆಯ ವಿಚಾರಣೆಗೆ ಪ್ರಾರಂಭಿಸಿದರು. ಬ್ರಿಜಲಾಲ್‌ದಾಸರವರಿಗೆ ಸಲ್ಲತಕ್ಕೆಂದು ವ್ಯವಸ್ಥೆಯಾದ ೫೬೨,೦೦೦ ಚಿಲ್ಲರೆ ರೂಪಾಯಿಗಳಂ ಪಡೆಯುವದಕ್ಕೆ ಬಾಧ್ಯಸ್ಥರೆಂದು ಬಂದವರೆಲ್ಲರೂ ಹಾಜರಾದರು. ಅವರವರ ಕಡೆ ಲಾಯರುಗಳು ಸಹ ಹಾಜರಾಗಿ ತಮ್ಮ ತಮ್ಮ ಕಕ್ಷಿಗಾರರ ಬಾಧ್ಯತೆಯಂ ಕುರಿತು ವಾದಿಸಿದರು. ಈ ಮೊಕದ್ದಮೆಯ ಸಾಕ್ಷಿಗಳು ಮದರಾಸಿನಲ್ಲಿರುವ ಅವರು ಇಲ್ಲಿಗೆ ಬರುವದಕ್ಕೆ ನಿರಾಕರಿಸಿದ್ದರಿಂದ, ಮೊಕದ್ದಮೆಯನ್ನು ನಡೆಸುವದಕ್ಕೆ ಅವಕಾಶವಿಲ್ಲದೆ, ಮುಂದಿನ ತಿಂಗಳ ೧೫ನೇ ತಾರೀಖಿಗೆ ಅಡ್ಜರ್ನ್ ಮಾಡಿ, ಸ್ಮಾಲ್ ಕಾಸ್ ಕೋರ್ಟ್ ರಿಜಿಸ್ಟ್ರಾರವರಾದ ಮಿ॥ ಸಿ. ಬಿ. ಶೇಷಗಿರಿ ರಾಯರವರು ಮದರಾಸಿಗೆ ಹೋಗಿ ಕಮಿಷನರ್ ಮೂಲಕ ಅಲ್ಲಿನ ಸಾಕ್ಷಿಗಳ ವಿಚಾರಣೆಯಂ ಮಾಡಿಕೊಂಡು ಬರತಕ್ಕದ್ದೆಂದು ಹುಕುಂ ಮಾಡಿದರು. ಅಲ್ಲಿನ ಸಾಕ್ಷಿಗಳ ವಿಚಾರಣೆ ಆಗಿ ಬಂದ ಮೇಲೆ ಇಲ್ಲಿರತಕ್ಕ ಸಾಕ್ಷಿಗಳ ವಿಚಾರಣೆ ಪೂರ್ತಿಯಾದಮೇಲೆ, ದಾವಾದಾರರ ತರಫ್ ಲಾಯರುಗಳ ವಾದವು ನಡೆದು, ತರುವಾಯ ಜಡ್ಜಿಗಳು ತಮ್ಮ ಅಭಿಪ್ರಾಯದಲ್ಲಿ, ಬ್ರಿಜಲಾಲ್ ದಾಸರವರಿಗೆ ಸೇರಬೇಕಾಗಿದ್ದ ಮೊಬಲಗನ್ನು ಪಡೆಯಲು ಯಾರು ಬಾಧ್ಯಸ್ಥರೆಂದು ತೀರ್ಮಾನಿಸುವರೊ ಆ ಅಂಶ ಮುಂದೆ ತಿಳಿಯಬೇಕಾದ್ದಾಗಿದೆ.

THE MYSORE GAZETTE
ಮೈಸೂರು ಗೆಜೆಟ್.

ಗುರುವಾರ, ತಾ॥ ೧೮ ನೇ ಜೂನ್ ೧೮೯೬.
ಮೈಸೂರ್ ಗವರ್ನಮೆಂಟಿನವರಿಂದ ಕೊಡಲ್ಪಟ್ಟ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ ೧೩ನೇ ಜೂನ್ ೧೮೯೬.

ನಂ॥ ೧೯೬೮-ಮಿ ಪ್ರೈ ೧೯-೫೨—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್‌ಗಳ ೧೬೨ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಅಸಿಸ್ಟೆಂಟ್ ಸರ್ಜನ್ ಮಿ॥ ಪಿ ಆರ್ ವೈದ್ಯನಾಥಸ್ವಾಮಿ ಎಂ ಏ, ಬಿ ಏ, ಎಸ್ ಎಂ, ಯವರಿಗೆ, ಅವರು ಪಡೆದುಕೊಳ್ಳುವ ಡ್ಯೂಟಿ ಅಲೋಯನ್ಸ್ ಸಹಿತ ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ॥ ೧೯೭೪-ಜ ೧೯೭೬ — ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೦ನೇ ಸೆಕ್ಷನ್ ಅನುಸರಿಸಿ ಗೌರಿಬಿದನೂರು ತಾಲ್ಲೂಕು ಅಮಲ್ದಾರ್ ಜೆ ಶ್ರೀನಿವಾಸರಾಯರು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರು ಮಾಡಲ್ಪಟ್ಟಿರುತ್ತಾರೆ.

ತಾ॥ ೧೫ನೇ ಜೂನ್ ೧೮೯೬.

ನಂ॥ ೧೯೮೦ ಮಿ ೨೦೦—ಅಸಿಸ್ಟೆಂಟ್ ಸರ್ಜನ್ ವ ಸೀನಿಯರ್ ಸರ್ಜನ್ ಯವರಿಗೆ ಚೀಫ್ ಅಸಿಸ್ಟೆಂಟ್ ಆದ ಮಿ ಎಸ್ ವಿ ರಾಮಸ್ವಾಮಯ್ಯಂಗಾರ್ ಎಂ ಬಿ ಸಿ ಎಂ ಯವರು ಡಾಕ್ಟರ್ ಎ ಎಸ್ ಫರ್ನಾಂಡಿಸ್ ಯವರು ರಜಾಮೇಲಿರುವ ಕಾಲದಲ್ಲಿ ಚಿಕ್ಕಮಗಳೂರು ಕಸೇ ಗ್ರೇಡಿನ ಸಿವಿಲ್ ಸರ್ಜನ್ ರಾಗಿ ಆಕ್ಟಿಂಗ್ ವರ್ಕ್ ಮೊಕರರು ಮಾಡಲ್ಪಟ್ಟಿರುತ್ತಾರೆ.

೨ ಹಾಸನದ ಅಸಿಸ್ಟೆಂಟ್ ಸರ್ಜನ್ ಮಿ ಜೆ ಎಲ್ ಲಕ್ಷ್ಮಣಸ್ವಾಮಿಯವರು ಸದರೀ ಮಿ॥ ಎಸ್. ವಿ ರಾಮಸ್ವಾಮಯ್ಯಂಗಾರ್ರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಮಂಗಳೂರು ಹಿಂದಿನ ಸರ್ಜನ್‌ರವರಿಗೆ ಚೀಫ್ ಅಸಿಸ್ಟೆಂಟಾಗಿ ಆಕ್ಟಿಂಗ್ ವರ್ಕ್ ಮೊಕರರು ಮಾಡಲ್ಪಟ್ಟಿರುತ್ತಾರೆ.

೩ ಸೆ' ಅಸಿಸ್ಟೆಂಟ್ ಸರ್ಜನ್ ಮಿ॥ ಎಸ್. ಕೆ ಪದ್ಮನಾಭರಾಯರು ಚಿಕ್ಕಮಗಳೂರಿಂದ ಹಾಸನಕ್ಕೆ ಡೆಪ್ಯುಟೇಷನ್ ಮೇಲೆ ನಡೆಸುವ ಬಗ್ಗೆ ನೇಮಿಸಲ್ಪಟ್ಟಿರುತ್ತಾರೆ.

ತಾ॥ ೯ನೇ ಜೂನ್ ೧೮೯೬.

ನಂ॥ ೧೮೬೦-ರೆ ೩೦೫—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೬೨ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗದ ಡಿಸ್ಟ್ರಿಕ್ಟ್ ಹೊಸದುರ್ಗ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಟಿ ವೆಂಕಟರಾಮಯ್ಯನವರಿಗೆ, ಅವರು ಪಡೆದುಕೊಳ್ಳುವ ತಲಬ್ ಸಹಿತ ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹೊಳಲ್ಕೆರೆ ತಾಲ್ಲೂಕು ಅಮಲ್ದಾರರು ತಮ್ಮ ಕೆಲಸಗಳೊಂದಿಗೆ ಸದರೀ ಟಿ ವೆಂಕಟರಾಮಯ್ಯನವರ ರಜಾ ಮೇಲಿರುವ ಕಾಲದಲ್ಲಿ ಮಾ ಮತ್ತೊಂದು ಕೆಲಸ ಕೆಲಸವನ್ನು ಪರಿಯಾಲೋಚಿಸತಕ್ಕದ್ದು. ತಾ॥ ೧೧ ನೇ ಜೂನ್ ೧೮೯೬,

ನಂ॥ ೧೦೭೬೦-ರೆ, ೬೦೭೨—ಸಿದ್ದಘಟ್ಟ ತಾಲ್ಲೂಕು ಅಮಲ್ದಾರ್ ಎಸ್. ಶ್ರೀನಿವಾಸರಾಯರಿಗೆ, ೧೮೯೬ನೇ ಏಪ್ರಿಲ್ ೧೬ ಮತ್ತು ಮೇ ೩ನೇ ಪರ್ಯಂತರ ಕಾಲಕ್ಕೆ ಪ್ರೈ ೯೬–೯೭ ವ ಕ್ಯಾಂಪ್ ೩೦ನೇ ನಂ ರೂಲುಗಳ ಗವರ್ನಮೆಂಟ್ ಇಸ್ತಿಹಾರ್ನಾಮೆಗಳಲ್ಲಿ ಕೊಡಲ್ಪಟ್ಟಿದ್ದ ಸ್ವಂತ ಕೆಲಸಗಳಮೇಲಿನ ರಜಾ ಇನ್ನೂ ಎರಡು ತಿಂಗಳವರೆಗೂ ಜಾಸ್ತಿಮಾಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ ಕನ್ನಯ್ಯ ಶಾಸ್ತ್ರಿಯವರು, ಸದರೀ ಎಸ್ ಶ್ರೀನಿವಾಸರಾಯರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರ್ಯಂತ ಸಿದ್ಧಘಟ್ಟ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ವರ್ಕ್ ಇರತಕ್ಕದ್ದು.

ನಂ॥ ೧೦೭೬೯-ರೆ ೬೦೭೪—ಡೆಪ್ಯುಟಿ ಕಮಿಷನರ್ ಮಿ॥ ವಿ. ರಂಗಸ್ವಾಮಿ ಅಯ್ಯಂಗಾರ್ರು, ಆಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್ ಮಿ॥ ಜೆ. ರಘುನಾಥರಾಯರಿಂದ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಚಾರ್ಜನ್ನು ಹಾಲೇ ಮಜಕೂರು ೩ನೇ ಮಧ್ಯಾಹ್ನದ ಪೂರ್ವಾಹ್ಣದಲ್ಲಿಯೂ, ಮತ್ತು ಡಿಸ್ಟ್ರಿಕ್ಟ್ ಟ್ರೆಷರಿ ಚಾರ್ಜನ್ನು ೨ನೇ ಮಧ್ಯಾಹ್ನದ ಪೂರ್ವಾಹ್ಣದಲ್ಲೂ ವಹಿಸಿರುತ್ತಾರೆ.

ತಾ॥ ೧೬ನೇ ಜೂನ್ ೧೮೯೬.

ನಂ॥ ೧೧೭೬೮-ರೆ ೬೦೭೮—ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ ಎಸ್ ಆರ್ ಶ್ರೀನಿವಾಸರಾಯರಿಗೆ, ೧೮೯೬ ಮೇ ೩ನೇ ಮಧ್ಯಾಹ್ನ ೨೦೮೯—ಜಿ ೫೭೬೮ ನೇ ನಂಬರು ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾ ಇನ್ನೂ ಒಂದು ತಿಂಗಳ ವರೆಗೂ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಪಬ್ಲಿಕ್‌ವರ್ಕ್ಸ್ ಇಲಾಖಾ

ತಾ॥ ೧೧ ನೇ ಜೂನ್ ೧೮೯೬.

ನಂ॥ ೩೪೫೪—೨೬೩೫—ಇದರಡಿ ಕಂಡ ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆಯ ಮೇಲ್ಪಟ್ಟ ಸಬಾರ್ಡಿನೇಟ್‌ಗಳು ೧೮೯೬ನೇ ಜೂನ್ ೧ನೇ ಮೊದಲ್ಗೊಂಡು ಆಗಬೇಕಾಗಿರುವ ಕೀಳ್ಪಟ್ಟ ಸಬಾರ್ಡಿನೇಟ್ ಸಿಬ್ಬಂದಿಗೆ ಕಂಫರ್ಮ್ ಮಾಡಲ್ಪಟ್ಟಿರುತ್ತಾರೆ —

(೧) ಎರಡನೇ ಗ್ರೇಡ್ ಓವರ್ಸಿಯರ್ ಕೆ ಲಕ್ಷ್ಮಣರಾಯರು ೭೦ ರೂಪಾಯಿಗಳ ತಲಬಿನ ೧ನೇ ಗ್ರೇಡ್ ಸಬ್ ಓವರ್ಸಿಯರಿಗೆ,

(೨) ಮೂರನೇ ಗ್ರೇಡ್ ಓವರ್ಸಿಯರ್ ಎಂ ಎ ವೆಂಕಟನಾರಣಾಚಾರ್ರು ೬೦ ರೂಪಾಯಿಗಳ ತಲಬಿನ ೨ನೇ ಗ್ರೇಡ್ ಸಬ್ ಓವರ್ಸಿಯರಿಗೆ.

ತಾ॥ ೧೨ನೇ ಜೂನ್ ೧೮೯೬.

ನಂ॥ ೩೫೩೪—೨೬೩೩—ಮಿ॥ ಎನ್ ರಾಮರಾವ್, ಎಲ್ ಸಿ ಈ, ಯವರು ೧೮೯೬ನೇ ಜೂನ್ ೧ನೇ ಮಧ್ಯಾಹ್ನ ಮೊದಲ್ಗೊಂಡು ೩ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರಿಂದ ೨ನೇ ಗ್ರೇಡಿನ ಅಸಿಸ್ಟೆಂಟ್ ಇಂಜನಿಯರಿಗೆ ಕಂಫರ್ಮ್ ಮಾಡಲ್ಪಟ್ಟಿರುತ್ತಾರೆ.

ತಾ॥ ೧ನೇ ಜೂನ್ ೧೮೯೬.

ನಂ॥ ೩೬೩೭—೨೬೩೫—ಚಿತ್ರದುರ್ಗ ಡಿವಿಜನ್ ಆಫಿಸಿಯೇಟಿಂಗ್ ಎಗ್ಜಿಕ್ಯುಟಿವ್ ಇಂಜನಿಯರ್ ಮಿ॥ ಕೆ ಕೃಷ್ಣರಾಯರಿಗೆ, ೧೮೯೬ನೇ ಜೂನ್ ೩ನೇ ಮೊದಲ್ಗೊಂಡು ಆಗಬೇಕಾಗಿದ್ದ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

SUMMARY OF NEWS.
ವೃತ್ತಾಂತ ಸಂಗ್ರಹ.

ಬಿರಡ್ವನ್ನಲ್ಲಿ ೯ ವರ್ಷಗಳ ವರೆಗೂ ಒಂದು ಕುಟುಂಬ ಏಕತ್ರ ಇದೆ, ಸಭ್ಯರಿಕ್ಕೆ ೩೦೦ ಜನರಿದ್ದರಂತೆ.

ಪಟ್ನ ಸಂಸ್ಥಾನದ ಮಹಾರಾಜರು ಖಾಯಿಲೆ ಬಿದ್ದಿದ್ದರಂತಲೂ ಅವರು ಬದುಕುವದು ಬಹಳ ಕಷ್ಟವೆಂತಲೂ ಕೇಳುತ್ತೇವೆ.

ರಾಜಮಹೇಂದ್ರ ಡಿಸ್ಟ್ರಿಕ್ಟಿನ ನರಸಾಪುರದಿಂದ ನಾಂದೇಡ ಬಳಿಯಲ್ಲಿ ಹನ್ನೆರಡು ಜನ ಕಳ್ಳರು ಕತ್ತಿ ತುಪಾಕಿಗಳೊಡನೆ ಬಂದು ಯೆರಡು ಭಕರಿಗಳನ್ನು ಸುಲಿದು, ಹೆಂಗಸನ್ನು ನಿರ್ದಯದಿಂದ ಕಡಿದು ೧೦೦೦ ರೂಪಾಯಿ ಬೆಲೆಯ ಒಡವೆಗಳನ್ನು ದೋಚಿ ಕೊಂಡು ಹೋದರು.

ಕಲ್ಕತ್ತೆಯ ಕಾಲೀಘಾಟ್ ಭಾಗದಲ್ಲಿ ಪ್ರೌಢ ಗುಡಿಯಲ್ಲಿ ಪ್ರೌಢ ಸನ್ಯಾಸಿಗೂ ಪ್ರೌಢ ಬ್ರಾಹ್ಮಣನಿಗೂ ಗಲಾಟೆ ಸಂಭವಿಸಿ ಜಗಳವಾಗಿ ಕಡೆಯಲ್ಲಿ ಸನ್ಯಾಸಿಯು ಬ್ರಾಹ್ಮಣನನ್ನು ಚೂರಿಯಿಂದ ಇರಿದು ಕೊಂದನು.

ಹಿಂದುಸ್ಥಾನದಲ್ಲಿ ಹುಡುಗಿಯರೂ ಅಪರಾಧಗಳನ್ನು ಮಾಡುವದು ಅಪರೂಪವಲ್ಲ, ಇಂತವರಿಗೆ ಸಜಾ ವಿಧಿಸಿದರೆ ಅವರನ್ನು ಪ್ರತ್ಯೇಕವಾದ ಒಂದು ಕಟ್ಟಡದಲ್ಲಿಟ್ಟು ಅವರಿಗೆ ವಿದ್ಯೆ ಕಸಬುಗಳನ್ನು ಕಲಿಸಬೇಕೆಂದು ಪಂಜಾಬ್ ಸರ್ಕಾರದವರು ತೀರ್ಮಾನಿಸಿರುತ್ತಾರೆ.

ತಿನ್ನವೆಲ್ಲಿ ಡಿಸ್ಟ್ರಿಕ್ಟ್ ಅಂಬಾಸಮುದ್ರಂ ತಾಲ್ಲೂಕಿಗೆ ಸೇರಿದ ಕಡಯಂ ಎಂಬ ಗ್ರಾಮದಲ್ಲಿ ಕೆಲವು ಸಣ್ಣ ಬೆಟ್ಟಗಳಿವೆ, ಬೆಟ್ಟಗಳ ಹತ್ತಿರ ಇರುವ ಹೈದಾನದಲ್ಲಿ ಕೆಲವು ಕಡೆ ಭೂಮಿಯಿಂದ ಹೊಗೆ ಹೊರಡುತ್ತಿದೆ. ಈ ಕೌತುಕ ಇದೇನು ವಿನ್ನಪವೆಂತಲೋ ಎಂದು ಪ್ರಜಾ ನಷ್ಟವೆಂದಾದರೂ ಬಂದೀತೆಂದು ಭಯದಿಂದ ಜನರು ನೋಡಿ ಹೆದರುತ್ತಿದ್ದಾರಂತೆ.

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ನ್ಯೂಹ್ಯಾಂಪ್‌ಷೈರ್ ಪಟ್ಟಣದಲ್ಲಿ ಡೇವಿಸ್ ಎಂಬೊಬ್ಬ ಹೆಂಗಸಿಗೆ ತಲೇ ಕೂದಲು ಆರು ಅಡಿ ಎಂಟು ಅಂಗುಲ ಉದ್ದವಾಗಿರುವುದಲ್ಲದೆ, ಅವಳು ಮಾತ್ರ ಐದು ಅಡಿ ಒಂಬತ್ತು ಅಂಗುಲ ಎತ್ತರವಿದ್ದಾಳೆ. ಇವಳ ತಲೆ ಬುಲ್ಲಿ ಬೆಳೆದಿರುವಷ್ಟು ಉದ್ದವಾದ ಕೂದಲು ಪ್ರಪಂಚದಲ್ಲಿ ಮತ್ತ್ಯಾರಿಗೂ ಬೆಳೆದಿಲ್ಲವೆಂದು ಹೇಳುತ್ತಾರೆ.

ಕಲ್ಕತ್ತ ಪಟ್ಟಣದ ಹುಗ್ಗೀ ಎಂಬ [illegible] ನಗರದಲ್ಲಿ ಇಪ್ಪತ್ತು ಜನ ದರೋಡೆಕೋರರು ರಾತ್ರಿ, ಕತ್ತಿಗಳೊಡನೆ ಪ್ರೊಟ್ಟು ಅಸ್ತಿವಂತನ ಮನೆಯನ್ನು, ಅವನನ್ನು ಕೊಂದು, ಅವನ ಮನೆ ಸುಲಿದುಕೊಂಡು ಹೋದರು. ನೆರೆಹೊರೆಯವರು ಬಹು ಜನರು ಸೇರಿದಾಗ್ಯೂ ಆಕಳ್ಳರನ್ನು ಅಡ್ಡಗಟ್ಟುವ ಧೈರ್ಯವು ಯಾರಿಗೂ ಆಗಲಿಲ್ಲ. ಪೋಲೀಸರು ವಾಡಿಕೆಯಂತೆ ಹಿಂದಿನಿಂದ ಬಂದರು.

ಉತ್ತರ ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನದಲ್ಲಿ ಪ್ರೊಫೆಸರ್ ಲ್ಯಾಂಗ್ಲಿ ಎಂಬ ಜ್ಯೋತಿಷಜ್ಞರು ಅಂತರಿಕ್ಷದಲ್ಲಿ ಸಂಚರಿಸುವಂಥಾ ಯಂತ್ರಭೇದವನ್ನು ಕಂಡು ಹಿಡಿಯಬೇಕೆಂದು ಬಹು ಕಾಲದಿಂದ ಪ್ರಯತ್ನ ಮಾಡುತಿದ್ದನು. ಈಗ ಒಂದು ಯಂತ್ರವನ್ನು ತಯಾರು ಮಾಡಿರುವನು. ಈ ಯಂತ್ರದ ಸಹಾಯದಿಂದ [illegible] ಗಜ ಎತ್ತರದಲ್ಲಿ ಅಂತರಿಕ್ಷದಲ್ಲಿ ಅರ್ಧ ಮೈಲು [illegible] ಹೋಗಿ ಬರಬಹುದಾಗಿದೆಯಂತೆ. ಇದು ನಿಜವಾಗಿರುವ ಪಕ್ಷಕ್ಕೆ ಬಹು ಆಶ್ಚರ್ಯವೇ ಸರಿ.

ಒಬ್ಬ ಬ್ರಾಹ್ಮಣ ಯೌವನಸ್ಥನು [illegible] ಹೋಗಿ ಅಲ್ಲಿನ [illegible] ಸಂಗಡ [illegible] ಸೇರಿ ಕೊಳ್ಳಬೇಕೆಂದು ಮೈ ಮೇಲಿನ ಜನಿವಾರ ತೆಗೆದುಹಾಕಿ [illegible] ಮಾಡಿಸಿದರು. ಸೇನೆ ಜಡ್ಜಿಯವರು [illegible] ಎ ವರುಷ ಶಿಕ್ಷೆ ವಿಧಿಸಿದರು. ಈಚೆಗೆ ಇವನ ಮೇಲೆ [illegible] ಬಂದ ತರುವಾಯ ತಾನು ಕ್ರಿಸ್ತನು [illegible] ದನ್ನು ಮತುಳು ಮಾಡಿ ಜಡ್ಜಿಸ್ಥಾನದಲ್ಲಿ ಕೂತು [illegible]

ಆ ವರೆಗೆ ಡಿಸ್ಟ್ರಿಕ್ಟ್ ಮುನಸಫ್ ಕೆಲಸವನ್ನು ಮಾಡಿ [illegible] ಮೊಕದ್ದಮೆಗಳನ್ನು ಹಿಡಿದು ತೀರ್ಮಾನ ಹೇಳಿರುತ್ತಾನಂತೆ.

ಪ್ಯಾರಿಸ ಷಹರಿನಲ್ಲಿ [illegible] ಕಲೆಯು [illegible] ತೆಂದು ಚೆನ್ನರಿಕ್ಕೆ ಮಂತೆ ಹೇಳುವ ಮಾತಿನಮೇಲಿಂದ ಅಡ್ಡಿ ಇಲ್ಲ. ಒಂದು ದಿವಸ ಪ್ರೆಸ್ಸಿಕಲ್ ಮೇಲೆ ಕುಳಿತ ಹೋಗುವ ಸಂಜೆಯ [illegible] ನಡೆಯುವ ಸಲುವಾಗಿ ಒಂದು ವಿಸ್ತೀರ್ಣವಾದ ಸ್ಥಲವನ್ನು ನೇಮಿಸಿದರು. ಪರಂತು ಪ್ರೇಕ್ಷಕರಿಗೆ ಇದನ್ನು ನೋಡುವದರಲ್ಲಿ ಒಂದು ಮನೆಯು ಪ್ರತಿಬಂಧಕವಾಗುವದೆಂದು ಕಂಡುಬಂದದರಿಂದ, ಆ ಮನೆಯನ್ನು ಸ್ವಲ್ಪ ಅಂತರದಮೇಲೆ ಹಿಮ್ಮೆಟ್ಟಿಸುವದಕ್ಕೆ [illegible] ರೂಪಾಯಿ ಕೊಡುವೆವೆಂದು ಪ್ರಸಿದ್ಧ ಮಾಡಿದ ಕೂಡಲೇ ಒಬ್ಬ ಶಿಲ್ಪಕಲಾ ನಿಪುಣನು ಬಂದು ಕಟ್ಟಡದ ಕಂಭಗಳ ಮೇಲೆ ಆ ಮನೆಯನ್ನು ಕಳಚಿಸಿದ [illegible] ಗೆ ಕಬ್ಬಿಣದ ರೋಲರಿಗಳನ್ನು ಹಾಕಿ ಹಿಂದಕ್ಕೆ ಮನೆಯನ್ನು ಜರುಗಿಸಿಬಿಟ್ಟನು. ನಮ್ಮ ದೇಶಕ್ಕೆ ಇಂಥ ವಿದ್ಯಾ ನೈಪುಣ್ಯರ ಯಾವಾಗ್ಯೆ ಬಂದಾರು.

ಕಳೆದ ವಾರದಲ್ಲಿ ಇಲ್ಲಿಯ ಧಾರವಾಡ ಎಂಕಾಸನಿ ಎಂಬ ವಾತ್ಸ್ಯದವಳು [illegible] ಕಾಲಿಗೆ ಹೋಗಿ [illegible] ರಿಗೆ ಮಾವಿನ ಹಣ್ಣು [illegible] ಕೊಟ್ಟ ಸುದ್ದಿಯನ್ನು ನಾವು ಆಗ್ಯೆ ತಿಳಿಸಿದ್ದೆವಷ್ಟೆ. ಅದರಂತೆ ಅವಳು ಈ ವಾರದಲ್ಲಿ [illegible] ಉತ್ತರ [illegible] ಸಿದ್ದವಾಗಿ [illegible] [illegible] ಕೊಟ್ಟನು [illegible] ದಕ್ಕಟ್ಟವರೆಂದು [illegible] ಸ್ವೀಕರಿಸಿ [illegible] ಸ್ಕ್ವೇಕೊರ್ಟ [illegible] ಸ್ಕೂಲ [illegible] ಪ್ರಕಾರ [illegible] ದವಾಗಿದ್ದ [illegible] ಬಹದೂರ ಈಟವೇ? [illegible]

BANGALORE CITY MUNICIPALTY.

ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿ.

ತಾರೀಖ್ ೨೦ನೇ ಜೂನ್ ೧೮೯೬

ಸನ್ ೧೮೯೬ನೇ ಇಸವಿ ಜೂನ್ ೩೦ ನೇ ತಾರೀಖ್ ಮಂಗಳವಾರದ ದಿನ ಬೆಳಿಗ್ಗೆ ೭|| ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮ್ಮಿಷನರ್‌ಗಳು, ಕೋಟೆಯೊಳಗಿರುವ ತಮ್ಮ ಆಫೀಸಿನಲ್ಲಿ ಮೀಟಿಂಗ್ ಸೇರುವಾಗ ಇದರಡಿ ತಿಳಿಸಲ್ಪಡುವ ಕೆಲಸಗಳು ನಡೆಸಲ್ಪಡುವವು :—

೧ ಸನ್ ೧೮೯೬ನೇ ಇಸವಿ ಮೇ ತಿಂಗಳ ನಗದು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆಮಾಡುವ ಮೆಡಿಕಲ್ ಆಫೀಸರಲೆಕ್ಕ, ತಗಾದೆ, ವಸೂಲಿ, ಮತ್ತು ಬಾಕಿ ಪಟ್ಟಿ ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಕ್ಷೀನಿವಾಸ ಮಂದಿರದ ಲೈಬ್ರೆರಿಗೆ ಹೋಗಿದ್ದವರನ್ನು ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲಿಷ್ ಮತ್ತು ಕನ್ನಡ ಸ್ಕೂಲ್‌ಗಳ ಲೆಕ್ಕಗಳು, ಸೂಲಗಿತ್ತಿಯರು [illegible] ಮಾಡಿದವರ ಲೆಕ್ಕ, ದೀಪಗಳನ್ನು ಕುರಿತ ರಿಪೋರ್ಟಿನ ಸಂಗ್ರಹ, ಪ್ರಸವಾಸ್ಪತ್ರೆ ಲೆಕ್ಕ, ದಳವಾಯಿ ಲೆಕ್ಕ

೨. ಕಲಾಸಿ ಪಾಳ್ಯದಲ್ಲಿರುವ ಒಂದು ಖಾಲೀ ಜಮೀನನ್ನು ಮನೆ ಕಟ್ಟಿಕೊಳ್ಳುವದಕ್ಕಾಗಿ ಅದರ ಕ್ರಯ ತಗದು ಕೊಂಡು ಮಂಜೂರು ಮಾಡಬೇಕೆಂದು ಮ್ಯುನಿಸಿಪಲ್ ಕಮ್ಮಿಷನರ್ ಮೆ|| [illegible] ದರಖಾಸ್ತ ಮಾಡಿ ಸನ್ ೧೮೯೬ನೇ ಇಸವಿ ಮೇ ೨೦ನೇ ತಾರೀಖಿನಲ್ಲಿ ಬರೆದ ರಿಪೋರ್ಟ್ ಸ. ೧೮೯೬ನೇ ಇಸವಿ ಏಪ್ರಿಲ್ ೨೮ನೇ ಮಾರ್ಚಿನಲ್ಲಿ ಬೋರ್ಡಿನವರು ಮಾಡಿದ ೩೯ನೇ ನಂಬರ ರೆಜೊಲ್ಯೂಷನನ್ನು ನೋಡತಕ್ಕದ್ದು

೩. ಬೆಂಗಳೂರಲ್ಲಿರುವ ಧರ್ಮಶಾಲೆಗಳ ಛತ್ರದಲ್ಲಿ ೧೮ [illegible] ರೂಪಾಯಿಗಳಿಗೆ ವಿಸ್ತರದ ಖರ್ಚು ಮಾಡಿ ಜಾಸ್ತಿಯಾಗಿ ಕಟ್ಟಡವ ಕಟ್ಟಬೇಕೆಂಬ ಕೆಲಸವನ್ನು ಮಂಜೂರ್ ಮಾಡಿ, ಅದರೊಳು ಮೂರರಲ್ಲೊಂದುಭಾಗ ಹೊಬಲಿಗನ್ನು ಮ್ಯುನಿಸಿಪಾಲಿಟಿಯಿಂದಲೂ, ಮೂರರಲ್ಲೆರಡು ಭಾಗ ಜನರಲ್ ಲೋಕಲ್ ಫಂಡಿನಿಂದಲೂ ಕೊಡತಕ್ಕದ್ದೆಂದು ಹುಕುಂ ಕೊಟ್ಟು, ೧೮೯೬ನೇ ಇಸವಿ ಮೇ ೨೫ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಮಾಡಿದ [illegible] ಎಲ್ ಎಫ್ [illegible] ನಂಬರ ಪ್ರೊಸೀಡಿಂಗ್ಸ್

೪ ೩ನೇ ನಂಬರ ಬಿಯರ್ ಟಾವರ್ನ್ ಎಂಬ ಸಾರಾಯಿ ಅಂಗಡಿಯನ್ನು ಕೊಂಡುಕೊಂಡ ಸುಬ್ಬಮ್ಮನಾಯುಡು ಎಂಬುವನು, ಮ್ಯುನಿಸಿಪಲ್ ರೆಗ್ಯುಲೇಷನಿನ ೬೨ನೇ ಸೆಕ್ಷನ್ ಅನುಸರಿಸಿ, ರಿಜಿಸ್ಟ್ರೇಷನ್ ರುಸುಂ ಕೊಡುವದಕ್ಕೆ ಗುಂಡಿದಾಗು ವಬ್ಬಿಲವೆಂದು ತಿಳಿಸಿ ಹೆಡ್ ಸೂಪರ್‌ವೈಜರವರು ಬರೆದ ರಿಪೋರ್ಟನ್ನು ಕಳುಹಿಸಿ, ೧೮೯೬ನೇ ಇಸವಿ ಏಪ್ರಿಲ್ ೨೫ನೇ ತಾರೀಖಿನಲ್ಲಿ ಡೆಪ್ಯುಟಿ ಕಮ್ಮಿಷನರವರು ಬರೆದ ಎ ೩೩೦ನೇ ನಂಬರ ಪಾಕೆಟ್

೫ ಸರ್ವೆ ಕೋಲಿಗಳಲ್ಲಿ ಈಗ ಉಪಯೋಗಿಸಲ್ಪಡುವ ಮೊದಲ್ಬಿದ ಕಲ್ಲುಗಳಿಗೆ ಬದಲು ನಿಷ್ಪ್ರಪ್ಪವಾದ ಪ್ರಮಾಣವಿಲ್ಲ ಹೊಸದ ಗುಂಡುಗಳನ್ನು ಉಪಯೋಗಿಸಬೇಕಾದ ವಿಷಯದಲ್ಲಿ ಸರ್ವೆ ಕೋಲಿ ಪ್ರೆಸಿಡೆಂಟ ಷರತ್ತುಗಳಿಗೆ ಅನ್ನು ಕೆಲವು ಅಂಶಗಳನ್ನು ಸೇರಿಸಬೇಕೆಂದು ಸೂಚಿಸಿ ೧೮೯೬ನೇ ಇಸವಿ ಜೂನ್ ೧೨ನೇ ತಾರೀಖಿನಲ್ಲಿ ಪ್ರೆಸಿಡೆಂಟರವರು ಮಾಡಿದ ಮಿನಿಟಿಸ

೬ ಮನೆಗಳು ಕಟ್ಟಿಕೊಳ್ಳತಕ್ಕ ಒಗ್ಗ ಲೈಸೆನ್ಸು ಸಿಗಾಗಿ ಅರ್ಜಿ ಬರೆದುಕೊಳ್ಳುವಂತವರ ಮನೆಗಳ ನಕ್ಷೆಗಳು ಮೊದಲಾದವು ತಯಾರ್ಮಾಡುವದಕ್ಕೆ ಲಾಯಾಖಿ ವೃತ್ತ ನನ್ನವರುಗಳು ಮತ್ತು ಡ್ರಾಪ್ಟ್‌ಮೆನ್‌ಗಳಿಗೆ ಲೈಸೆನ್ಸ ಕೊಡಬಹುದೆಂದು ಸೂಚಿಸಿ ೧೮೯೬ನೇ ಇಸವಿ ಜೂನ್ ಗುರ್ರೆ ತಾರೀಖಿನಲ್ಲಿ ಪ್ರೆಸಿಡೆಂಟರವರು ಬರೆದ ಯಾದಿ.

೭. ಮಹಾರಾಜರ ಅರಮನೆಯಂತ್ರದ ಕಾರ್ಖಾನೆಗೆ ಪ್ಲಾನು ಭಾಗದೊಳು ಸ್ಥಾನಕ್ಕಾಗಿ ಆ [illegible] ರುವ ಜಮೀನಿನಲ್ಲಿ ಬಗರ ಹುಕುಂ ಆಗಿದ ವಿಷಯದಲ್ಲಿ ಕಾಪಲಿಗಾರನಿಗೆ ಕೊಡುವದಕ್ಕಾಗಿ ೬೧—೮—೩ ರೂಪಾಯಿಗೆಳಿಗೆ ಎಗ್ಜಿಕ್ಯುಟಿವ ಇಂಜನಿಯರವರು ಕಳುಹಿಸಿದ ಬಿಲ್ಲು ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು

೮. ಮೆ|| ರಾಘವೇಂದ್ರಾಚಾರ್ಯರು ಗಾಡೀ ಮನೆಯನ್ನು ಕಟ್ಟಿಸುವದಕ್ಕಾಗಿ ಕೋಟೆಯಲ್ಲಿ ಜಮೀನುಬೇಕ್ಕೆ ೧೮೯೬ನೇ ಇಸವಿ ಜೂನ್ ೧ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ

೯. ಸೆನೋಟುರಿಯಂನ ಮ್ಯುನಿಸಿಪಾಲಿಗೆ ಹೋಗುವ ರಸ್ತೆಯಲ್ಲಿ ಸಂಗಂಗಿ ಕೆರೆಗೆ ಉತ್ತರ ಭಾಗದಲ್ಲಿರುವ ಒಂದು ತುಂಡು ಜಮೀನನ್ನು ಕ್ರಿಕೆಟ್ ಕ್ಲಬ್ಬಿನ ಉಪಯೋಗಾರ್ಥ ಕೊಡಿಸಬೇಕೆಂದು ಮೆಸ್ಸರ್ಸ್ ಎಸ್ ನ ರಾಘವೇಂದ್ರ ವಗ್ಯೆರೇರು ೧೮೯೬ನೇ ಇಸವಿ ಜೂನ್ ೮ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

೧೦ ಮ್ಯುನಿಸಿಪಲ್ ಆಫೀಸ ಫ್ಲ್ಯಾಗ ಮರವನ್ನು ರಿಪೇರಿ ಮಾಡುವದಕ್ಕೆ ಬಾಯಾಬಿಗ್ಗೆ ವೆಂದು ತಿಳಿಸಿ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮ್ಮಿಷನರವರು ಕೊಟ್ಟ ಸರ್ಟಿಫಿಕೇಟ್

೧೧ ಹಿಂದೆ ಮ್ಯುನಿಸಿಪಾಲಿಟಿಯ ಮರವತ್ತ [illegible] ರಾಮಸ್ವಾಮಿ ನಾಯುಡರವರು ಒಂದಿನ ತನ್ನ ಕೆಲಸವನ್ನು ತನಗೆ ಕೊಡಬೇಕೆಂದು ಸ್ವಾಧೀನ ಬರೆದುಕೊಂಡ ಅರ್ಜಿ, ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು

೧೨ ೧೮೯೬—೯೭ನೇ ಇಸವಿಯಲ್ಲಿ ಸಿಟಿ ಕಟುಕಾಗರವನ್ನು ಸುಗಿಸುವದಕ್ಕಾಗಿ ಕೊಡಲ್ಪಟ್ಟ ಕಂಟ್ರಾಕ್ಟನ್ನು ಕಾಯಂ ಮಾಡುವಿಕೆ ಅಥವಾ ಬೇರೆವಿಧ ವ್ಯವಸ್ಥೆ ಮಾಡುವಿಕೆ

೧೩. ಸನ್ ೧೮೯೬ನೇ ಇಸವಿ ಜನವರಿ ೨೦ನೇ ತಾರೀಖಿನಲ್ಲಿ ನಡೆದ ಮಾರ್ಕೆಟ್ ಷೋ ಬಗ್ಗೆ ಹಿಡಿದ ಖರ್ಚುಗಳನ್ನು ತೋರಿಸುವ ಲೆಕ್ಕದ ತಖ್ತೆ.

೧೪ ಲಾಯಖಿ ವೃತ್ತ ಮುಸಲ್ಮಾನರ ಜಾತಿ ಸೂಲಗಿತ್ತಿಯನ್ನು ನೇಮಕರ್ಮಾಡಬೇಕೆಂದು ಮುಸಲ್ಮಾನರ ಜನರು ಬರೆದುಕೊಂಡ ಮಹಜರ್.

೧೫ ಸಿಟಿ ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲಿನ ನಿಬ್ಬರು ಅಸಿಸ್ಟೆಂಟ್ ಮಾಸ್ಟರಿಗಳ ತಲಬಗಳು ಕೊಟ್ಟಿದ್ದರಲ್ಲಿ ಉಳಿದ ಹೊಬಲಿಗೆ ಭರ್ತಿಯಾಗಿ ೧೮೯೧ನೇ ಇಸವಿ ಜೂನ್ ಗುರ್ರೆ ತಾರೀಖ್ ಮೊದಲು ೯೬ನೇ ಇಸವಿ ಮೇ ೩೧ನೇ ತಾರೀಖ್ ವರಗೆ ಜಾಸ್ತಿಯಾಗಿ ಕೊಡಬೇಕಾದ ೪೮ ರೂಪಾಯಿಗಳ ವಿಷಯದಲ್ಲಿ ೯೬ನೇ ಇಸವಿ ಜೂನ್ ೧೩ನೇ ತಾರೀಖಿನೊಳು ಪ್ರೆಸಿಡೆಂಟರವರು ಬರೆದ ಯಾದಿ

ನಿಲ್ಲಿಸಲ್ಪಟ್ಟ ವಿಷಯ.

ಅಯ್ಯಾ —ಇದರಡಿ ಬರೆಯಲ್ಪಡುವ ವಿಷಯಕ್ಕೆ ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಅವಕಾಶವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ ಗತವಾರದ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದ ಮೈಸೂರು ಗೆಜೆಟಿನ ಸಾರಾಂಶವನ್ನು ಅವಲೋಕಿಸಿದರೆ ಹಳೆ ಸಂತೋಷಪಡಿದೆ ಸದರೀ ನೇಮಕಗಳು ಪೂರ್ತಿಯಾದಂತೆ ಕಾಣಿಸಲಿಲ್ಲವು. ಅದಕ್ಕೆ ಸಂಬಂಧಿಸಿದಂತೆ ಹೊರಗಾಗಬೇಕಾಗಿರುವವು ಇನ್ನೂ ಬಾಕೀ ಇರುವಂತೆ ತೋರುತ್ತದೆ ಖಾಲಿಯಾಗಿರುವ ಕೆಲಸಗಳಿಗೆ ತಕ್ಕ ಜನಗಳು ಭರ್ತಿಯಾದ ಅಂಶ ವ್ಯಕ್ತವಾಯಿತೆ ಹೊರತು ಯಾರ ದೆಸೆಯಿಂದ ಖಾಲೀ ಮಾಡಿತೆಂಬ ಅಂಶ ಮಾತ್ರ ಗೆಜೆಟಿನಿಂದ ಸ್ಪಷ್ಟವಾಗಲಿಲ್ಲವು ಕ್ಷಣಿಕವಾದ ಕಾಲಗತಿಯಂತೆ ಸೆಕ್ರೆಟರಿ ಇಲಾಖೆಯು ಅವಶ್ಯಕತೆಯನ್ನನುಸರಿಸಿ, ಪರಿಸವೆ ಬದಲಾಯಿಸುತಲಿರುವಂತೆ ಕಾಣುತಿವೆ ಶ್ರೀಮನ್ಮಹಾರಾಜರವರು ಸ್ವತಃ ರಾಜ್ಯಭಾರವನ್ನು ವಹಿಸುವ ಕಾಲದೊಳಗಾಗಿ ಇನ್ನೆಷ್ಟು ಜನ ಸೆಕ್ರೆಟರಿಗಳು ಹೆಸರುಗಳೊಡನೆ ಬದಲಾಯಿಸಬೇಕೋ ತಿಳಿಯಲಿಲ್ಲವು ಸ್ವರ್ಗಸ್ಥ ಮಹಾರಾಜರವರ ನಿರ್ಯಾಣಕಾಲದವರೆಗಿದ್ದ ಚೀಫ್ ಸೆಕ್ರೆಟರಿ ಅಧಿಕಾರವು ಕೂಡಲೇ ಮುಕ್ತಾಯವಾದರೂ ಆ ಬದಿಕಾರವು ಮಾತ್ರ ಮನಸ್ಸಾದಲ್ಲಿ ಸಜೀವವಾಗಿಯೂ, ಮಿಕ್ಕ ಕಾಲದಲ್ಲಿ ನಿರ್ಜೀವವಾದುದಾಗಿಯೂ ಇತ್ತು ಅದಕ್ಕೆ ಬದಲಾಗಿ ರೆವಿನ್ಯೂ ಮತ್ತು ಜನರಲ್ ಇಲಾಖೆಗೆ ಪ್ರತ್ಯೇಕ ಇಬ್ಬರು ಆಫೀಸರಿಗಳು ಮೊಕರರಾದರು ಅವರಲ್ಲೊಬ್ಬರು ಬಹು ದಿನಗಳಕಾಲ ಸದಾ ಪೂರ್ಣವಾಗಿ ಆ ಅಧಿಕಾರದಲ್ಲಿರಲಿಲ್ಲವು ಅವರಿಗೆ ಸ್ಥಾನಾಂತರ ಪ್ರಾಪ್ತವಾದ ಕೂಡಲೆ ಅವರೊಡನೆ ಆ ಅಧಿಕಾರವು ತಪ್ಪಿ ಅದು ಹೋಗಿ ಒಬ್ಬರನ್ನೇ ಆಶ್ರಯಿಸಿತು ಜನರಲ್ ಸೆಕ್ರೆಟರಿಯೊಬ್ಬರು ಅವಶ್ಯಕವಾದ ಕಾಲದಲ್ಲಿ ಲೆಜಿಸ್ಲೇಟಿವ್ ಸೆಕ್ರೆಟರಿ ಕೆಲಸವು ಖಾಲಿಯಾದ ಕಾರಣ, ಅದಕ್ಕೆ ತಕ್ಷಣದಲ್ಲಿ ಅರ್ಹರು ಬೇರೊಬ್ಬರು ಸಿಗದೆ ಹೋಗಲು ಆ ಅಧಿಕಾರವೇ ವಜಾ ಮಾಡಲ್ಪಟ್ಟಿತು ಸೆಕ್ರೆಟರಿಗಳು ಇಬ್ಬರು ವರ್ಗದಂತೆ ಅವರಿಗೆ ಇಬ್ಬರು ಅಂಡರ್ ಸೆಕ್ರೆಟರಿಗಳೂ, ಅವರಿಗೆ ಇಬ್ಬರು ಅಸಿಸ್ಟೆಂಟ್ ಸೆಕ್ರೆಟರಿಗಳೂ, ಅವರಿಗೆ ಇಬ್ಬರು ಅಸಿಸ್ಟೆಂಟುಗಳೂ, ಅವರ ಸಹಾಯಾರ್ಥ ಇಬ್ಬರು ಮ್ಯಾನೇಜರ್ಗಳೂ ಬೇಕಾದವು ಇವರುಗಳ ಆವಶ್ಯಕತೆ ಈಗ ಇಲ್ಲದೆ ಹೋದಂತೆ ಭಾವಿಸಲಾಗಿದೆ ಹ್ಯಾಗೆಂದರೆ—ಚೀಫ್ ಸೆಕ್ರೆಟರಿಯಾಗಿದ್ದವರ ವಿಷಯವು ದಾಖಲಾದುದರಿಂದಲೂ ಇನ್ನೂ ವ್ಯವಸ್ಥೆಯಾಗದಿರುವದರಿಂದ ಚೀಫ್ ಸೆಕ್ರೆಟರಿಯ ಅಧಿಕಾರಗಳನ್ನು ಚಲಾಯಿಸುವದಕ್ಕೆ ರೆವಿನ್ಯೂ ಮತ್ತು ಜನರಲ್ ಸೆಕ್ರೆಟರಿಯವರಿಗೆ ಸ್ವಾತಂತ್ರ್ಯ ಕೊಡಲ್ಪಟ್ಟಿರುತ್ತದೆ ಅದಕ್ಕೆ ಕಿಂಚಿತ್ತು ವೃತ್ತಿ ಇಲ್ಲ ಬಿಡುವುದು ಮಾತಿಲ್ಲ ಈ ಅಧಿಕಾರವು ಅನೀತಿಯಾಗಿ ಏರ್ಪಟ್ಟಿದೆ. ಅಂಡರ್ ಸೆಕ್ರೆಟರಿಗಳಲ್ಲಿ ಒಬ್ಬರು ಡೆಪ್ಯುಟಿ ಕಮೀಷನರಾಗಿ ಕಾಯಂ ಮಾಡಲ್ಪಟ್ಟದರಿಂದ ಅವರ ಕೆಲಸವೇ ಅನಾವಶ್ಯಕವಾಗಿ ಪರಿಣಮಿಸಿತು ಒಬ್ಬ ಅಂಡರ್ ಸೆಕ್ರೆಟರಿ ಬದಲಾಯಿಸಿದ್ದರಿಂದ ಅವರ ಅಸಿಸ್ಟೆಂಟುಗಳೆಲ್ಲರೂ ಕ್ರಮವಾಗಿ ಬದಲಾಯಿಸಬೇಕಾಯಿತು ಅವರಿಗೆಲ್ಲ ಅಂಡರ್ ಸೆಕ್ರೆಟರಿಗಳಾಗಿಯೂ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿಯೂ ಇದ್ದರೆ ಮುಂದೆ ಪ್ರಮೋಷನಿಗೆ ಅವಕಾಶವಿಲ್ಲವಾದ ಕಾರಣ ಡೆಪ್ಯುಟಿ ಕಮಿಷ್ನರಿಗೆ ಅಡ್ವೈಸರೊಡನೆ ತಹಶೀಲ್ದಾರದ ಆವಶ್ಯಕತೆ ಅಧಿಕವಾಯಿತು ಪ್ರಮೋಷನ್ ಹೊಂದಿದವರು ಅಸಿಸ್ಟೆಂಟ್ ಅಂಡರ್ ಸೆಕ್ರೆಟರಿಗಳಾಗಿ ಏರ್ಪಟ್ಟರು ಏತೇನ ರಿವ್ಯೂ ಸೆಕ್ರೆಟರಿ ಕಾರ್ಯದರ್ಶಿತ್ವದ ದಿನಗಳಲ್ಲಿ ಒಬ್ಬ ಚೀಫ್ ಸೆಕ್ರೆಟರಿಯೂ ಒಬ್ಬರು ಅಂಡರ್ ಸೆಕ್ರೆಟರಿಗಳೂ, ಇಬ್ಬರು ಅಸಿಸ್ಟೆಂಟ್ ಸೆಕ್ರೆಟರಿಗಳೂ ಏರ್ಪಾಡಾದಂತೆ ಸ್ಪಷ್ಟವಾಗುತ್ತದೆ ಬಹು ಕಾಲದ ಹಿಂದೆ ಮಾಳ್ಕೊಂಯಿದ್ದ ಜಾಯಿಂಟ್ ಸೆಕ್ರೆಟರಿ ಕೆಲಸವು ಇಜಾಫೆ ಜರೂರಿಯಿಂದ ಮರಳಿ ಅವಶ್ಯಕವಾಗಿ ತೋರಬಂತು ಈಗ ಸದರೀ ಅಧಿಕಾರ ಬೇಡವೆಂಬ ಭಾವವು ಕೌನ್ಸಿಲಿನಲ್ಲಿ ತಲೆದೋರಿರುವಂತೆ ಕೇಳುತ್ತೇನೆ, ಇನ್ನೂ ಕೆಲವು ಬದಲಾವಣೆಗಳು ನಿರೀಕ್ಷಿಸಲ್ಪಟ್ಟಿವೆ ಸ್ವರ್ಗಸ್ಥ ಮಹಾರಾಜರವರ ಕಾಲದಲ್ಲಿ ಅಧಿಕಾರಿಗಳ ಬದಲಾವಣೆಗಳು ಸ್ವಲ್ಪ ಸವಕಾಶದಿಂದ ನಡೆಯುತಲಿದ್ದರೂ ಈಗ ರೀಜೆಂಟರವರ ಕಾರಕರ್ದಿಯಲ್ಲಿ ಕ್ಷಣಕ್ಷಣಕೆ ಬದಲಾವಣೆಗಳನ್ನು ನೋಡಬಹುದಾಗಿದೆ ಇತರ ವಿಷಯಗಳ ವ್ಯವಸ್ಥೆ ಹ್ಯಾಗೆ ಬದಲಾದರು ಬಾಧಕವಿಲ್ಲವು ಕೆಲಸಗಳ ವಿಲೇವಾರಿ ವರ್ಗಾವರ್ಗಿ ಮುಂತಾದ ಬಾಬುಗಳಲ್ಲಿ ಕೌನ್ಸಿಲರ್ಗಳೆಲ್ಲರು ಏಕಕರ್ತೃತ್ವವನ್ನು ತೋರ್ಪಡಿಸುತ ಅಸಾಧಾರಣವಾದ ಚಟವಟಿಕೆಯನ್ನು ಪ್ರಕಟಿಸುತಲಿರುವದರಿಂದ ಕೌನ್ಸಿಲರ್ಗಳ ಮೆಹನತ್ತಾಗಲಿ, ರೀಜೆಂಟರವರ ಪ್ರಭುತ್ವವಾಗಲಿ ಸಾಧಾರಣವಾದುವೆಂದು ಭಾವಿಸಲಾಗದು ಇದೊಂದೆ ಪೂರ್ವೋಕ್ತ ಕಾರಣಗಳಿಗೆ ಲಕ್ಷಣವಾಗಿ ಕಾಣಬರುತಿದೆ

ತಮ್ಮ ವಿಧೇಯನಾದ,

ಗಾಣಗಾಪುರಿ

ಅಯ್ಯಾ —ಈಗ ಬರುತ ಬರುತ ವರ್ಷವರ್ಷವೂ ಈ ನಿವೃತ್ತಿ ಮಾಡಲ್ಪಡುವಂತವರು ಬಲಾತ್ಕಾರದಿಂದಾಗಲಿ, ಬಲಾತ್ಕಾರಕ್ಕೆ ಸಹ ಗಲಿ ಸುತರಾಂ ಗೊತ್ತಾಗುವದಿಲ್ಲವು ಪೂರ್ವಕಾಲದಲ್ಲಿ ಪೆನ್ಷನ್ ಮೇಲೆ ನಿವೃತ್ತಿ ಮಾಡಲಿಕ್ಕೆ ಕಾರಣವು ಪ್ರಕಟನಾಗಿರಬೇಕು ವಯೋವೃದ್ಧಯುಕ್ತವಾದ ಅಸಮರ್ಥತೆಯಿಂದ ಇಂದ್ರಿಯ ಶಿಥಿಲವಾಗಿ, ಬುದ್ಧಿ ಶಕ್ತಿಯೂ ಇಲ್ಲದೆ ಹೋಗಿ ಸರ್ಕಾರ್ ಕೆಲಸಕ್ಕೆ ಕುಂದಕ ಘಟಿಸುವ ಸಂದರ್ಭದಲ್ಲಿ ನಿವೃತ್ತಿ ಮಾಡಬೇಕಾದದ್ದು ಉಚಿತವೆಂದೆಣಿಸಲ್ಪಟ್ಟಿತ್ತು. ಅಲ್ಲಿಯೂ ನಿವೃತ್ತಿಯಾಗುವವರ ಕುಟುಂಬಕ್ಕೆ ಬಂದು ಸಹಾಯ ಮಾಡುವ ಉದ್ದೇಶದೊಡನೆ ಅವರ ವಾರಸುದಾರರಿಗೆ ಕೆಲಸ ಕೊಡುವ ವಾಡಿಕೆ ಏರ್ಪಟ್ಟಿತ್ತು ಕ್ರಮೇಣ ಕೆಲಸದಿಂದ ನಿವೃತ್ತಿಯಾಗಬೇಕಾದ ವಯಃಪರಿಮಾಣವು ೫೫ ವರುಷಗಳಿಗೆ ಗೊತ್ತು ಮಾಡಲ್ಪಟ್ಟು ಅದರಮೇಲೆ ಗವರ್ನಮೆಂಟಿನವರಿಗೆ ಇಷ್ಟಬಂದ ಕಾಲದ ತನಕ ನೌಕರಿಯಲ್ಲಿಟ್ಟುಕೊಂಡಿರಬಹುದೆಂಬ ನಿಯಮವು ಘಟಿಸಿತು ಅದರಮೇಲೆ ವಾರಸಿದಾರರಿಗೆ ಪರಿಗಣನೆಯಿಲ್ಲದೆ ಹೋಯಿತು ಈಗ "ರಿಟೈರ್ ಮೆಂಟ್" ಅಂದರೆ ಕೆಲಸವನ್ನು ಬಿಡಲಿಕ್ಕೆ ಕಾಲ ದೇಹ ಪ್ರಕೃತಿ ಸ್ಥಿತಿಗತಿಗಳೊಂದೂ ಅವಶ್ಯಕವಿಲ್ಲವಾಗಿದೆ ರಿಟೈರಾಗುತ್ತಿರುವುದು ವಸೀಲೆಯನ್ನನುಸರಿಸಿದ್ದಾಗಿರುತ್ತದೆ ಕೆಲಸದಿಂದ ನಿವೃತ್ತರಾಗತಕ್ಕವರಿಗೆ ಬದಲಾಗಿ ಮೊಕರರಾಗತಕ್ಕವರು ಪ್ರಬಲರಾಗಿಯೂ ವಿಶೇಷ ವಸೀಲೆಯುಳ್ಳವರಾಗಿಯೂ ಇದ್ದರೆ ಮೊದಲಿನವರ ಸಾಲೀಯನಿಯಮ ನಿಯಮಿತ ಕಾಲಕ್ಕಿಂತ ಮೊದಲೇ ವಿಶೇಷತಃ ಪರಿಗಣಿಸಿಯಾಗಿ ಅವರಿಗೆ ಯಾವವಿಧ ರಿಯಾಯಿತಿಯೂ ತೋರಿಸಲ್ಪಡುವದಿಲ್ಲವು ನಿವೃತ್ತರಾಗಬೇಕಾದವರು ಆಶ್ರಿತರಾಗಿದ್ದರೆ ಆತ್ಮವಾತ್ಸಲ್ಯಕ್ಕೆ ಅನುಸಾರವಾಗಿ ಅವರ ವಯಸ್ಸು ಅಧಿಕಾರಿಗಳ ದೃಷ್ಟಿಯ ತಗ್ಗುತ ಬಹಳ ಸಮರ್ಥತೆ ಅವರಲ್ಲಿ ಕಂಡುಬರುವದು ಸ್ವಾಭಾವಿಕವಾಗಿರುತ್ತೆ ಏತೇನ ಕೆಲಸವು ಬಿಡಬೇಕಾದ ಸಂದರ್ಭದಲ್ಲಿ ಮುಂದೆ ಬರತಕ್ಕವರ ಬಲಾಬಲವನ್ನು ಚೆನ್ನಾಗಿ ಆಲೋಚಿಸಬೇಕಾಗಿರುತ್ತದೆ ಒಂದುವೇಳೆ ಒಂದು ಕೆಲಸದಲ್ಲಿರುವವರಿಗೆ ಸರ್ವಿಸ್ ಪೂರೈಸದೆ ಇದ್ದು ಅವನ್ನೇ ಮತ್ತೊಬ್ಬರಿಗೆ ವಿಲೇ ಮಾಡಬೇಕಾಗಿರುವ ಸಂದರ್ಭದಲ್ಲಿ ಅಪ್ತರಾಗಿದ್ದರೆ ಬೇರೆ ಕೆಲಸ ಕೊಡಲ್ಪಡುವ್ಪದು, ಅನಾಶ್ರಿತರಾದರೆ ಕಂಪನಿ ಮಾಗಲಿ, ತಪ್ಪಿರಾಗಲಿ ಮಾಡಲ್ಪಡದಿದ್ದರೆ ಆ ಕೆಲಸ ಖಾಲಿಯಾಗುವದಿಲ್ಲವು ಹೀಗೆಯೇ ಅನೇಕ ಸಂದರ್ಭಗಳಲ್ಲಿ ನಡೆಯುತ್ತಿದೆ ಏತೇನ ಇಲ್ಲಿ ನನ್ನ ಎರವನಿಗೆಯು ಮುಖ್ಯೋದ್ದೇಶವೇನೆಂದರೆ, ಈ ಸಂಸ್ಥಾನದಲ್ಲಿ ತಕ್ಕಾಲದೊಳು ಅಧಿಕಾರವು ಪ್ರಾಪ್ತವಾಗಲಿ, ತನ್ನಿವೃತ್ತಿ ಯಾಗಲಿ, ಅವರವರ ಉಪಯುಕ್ತಾನುಪಯುಕ್ತತೆಯಾಗಲಿ, ಪ್ರಯೋಜನಾ ಪ್ರಯೋಜನಗಳಾಗಲಿ, ಕೇವಲ ಉನ್ನತಾಧಿಕಾರಿಗಳ ಅಭಿಮಾನಕ್ಕೆ ವಿಷಯವಾಗುವ ರಾಣಿ ತತ್ತ್ವದಿಂದಲೇ ಅಡಿಸಬೇಕಾದವಾಗಿವೆಯೇ ಹೊರತು ವಿದ್ಯೆಯಾಗಲಿ, ವಂಶ ಗೌರವವಾಗಲಿ, ಅನುಭವವಾಗಲಿ, ಹಿಂದಿನ ನೌಕರಿಯಾಗಲಿ, ಇತರ ಯೋಗ್ಯತೆಗಳಾಗಲಿ ಒಂದೂ ಕಾರ್ಯಕಾರಿಗಳಾಗುವದಿಲ್ಲವು ಈ ಅಧಿಕಾರಿಗಳ ಅಭಿಮಾನವೇ ಎಮಗೆ ಭಗವತ್ಕಟಾಕ್ಷಕ್ಕಿಂತಲೂ ಪ್ರಬಲ ತರವಾದುದಾಗಿರುತ್ತದೆ, ಹ್ಯಾಗೆಂದರೆ —ಇವರು ಪ್ರಿಯರು, ಅವನು ಅಪ್ರಿಯನು, ಇವರು ಕರ್ತವ್ಯಪರರು, ಅವನು ಕರ್ತವ್ಯ ನಾಶಕನು, ಇವರು ಸದಾ ಅಸಂತೃಪ್ತರು ಅವನು ಎಷ್ಟು ಸಂತೃಪ್ತನು, ಇವರು ಅತಿ ಪ್ರಯಾಸಸಾಧ್ಯರು ಅವನು ಸುಲಭಸಾಧ್ಯನು ಇವರು ಸದಾ ಸ್ತುತ್ಯರು ಆತನು ಸಕೃತ್ ಸ್ತುತಿಯಿಂದಲೇ ಪ್ರಸನ್ನನಾಗುವವನು ಆದುದರಿಂದ ಈಗಿನ ಅಧಿಕಾರಿಗಳೇ ಪರಮದೇವತೆಯ ಶ್ರೇಷ್ಠರು ದಕಾರಣ ಇಂತವರ ಅಭಿಮಾನವನ್ನು ಹ್ಯಾಗೆ ಸಂಪಾದಿಸಬೇಕು ? ಅದು ತ್ರಯೋದಶಾಕ್ಷರೀ ಮಂತ್ರದ ಪ್ರಯೋಜನಕ್ಕಿಲ್ಲವು ತೀರ್ಥಯಾತ್ರೆಯು ಅದಕ್ಕೆ ಅನುಕೂಲವಲ್ಲ, ಧರ್ಮಕಾರ್ಯಗಳು ನಿರರ್ಥಕವು, ಅವರ ಮಾಡಬೇಕಾದವೇನು ? ಅದು ಹ್ಯಾಗೆ ಲಭ್ಯವು ? ಅಧಿಕಾರಿಗಳ ನಾಮ ಸಂಕೀರ್ತನ ನರ್ತನಾಭಿನಯಗಳೇ ಅದಕ್ಕೆ ಉಪಾಯ ಮಾರ್ಗಗಳಾಗಿ ಏರ್ಪಟ್ಟವೆ ? ಇದರಿಂದ ಇದೀಜನ್ಮದಲ್ಲಿ ಫಲವು ಲಭಿಸದಿದ್ದರೂ ಅಭಿಸಲಪಡದು ಅವರು ಅಭಿಸದಿದ್ದರೂ ಸರಿಪಡಿಸು ಮಗನನ್ನು ಸಂಕೀರ್ತನೆಯಿಂದ ಐಹಿಕ ಫಲವು ಸಿದ್ಧವಾದರೂ ಆಮುಷ್ಮಿಕಫಲವೇನೋ ನಿಯತವು ಜನ್ಮಾಂತರಕ್ಕಿಂತಲೂ ಐಹಿಕ ಫಲಾನುಭವವೇ ಶ್ರೇಷ್ಠವಾದ ಕಾರಣ ಈ ಅಧಿಕಾರಿಗಳು ಪ್ರತ್ಯಕ್ಷವಾಧಿಕ್ಯರೆಂದು ತಿಳಿಯಬೇಕಾಗಿದೆ.

ದೇವಾಲಯಕ್ಕೆ ಹೋಗಿ ದೇವತಾ ಸಾನ್ನಿಧ್ಯದಲ್ಲಿ ನಿಲ್ಲುವಾಗ ಯಾವವಿಧ ಪೀಡೆಯೂ ನಮಗೆ ಘಟಿಸುವದಿಲ್ಲವು ಈ ಅಧಿಕಾರಿಗಳ ಆರಾಧನೆಗೆ ಹೊರಡಬೇಕಾದರೆ ಪ್ರಭಾತ ಕಾಲದಲ್ಲಿ ಎದ್ದು ಪರಿಶುದ್ಧವಾದ ವೇಷ ನಾಲ್ಕೈದು ಮಂಗಳ ದ್ರವ್ಯದೊಡನೆ ಅವರ ಮಂದಿರ ದ್ವಾರದಲ್ಲಿ ನಿಂತು ಬದ್ಧಾಂಜಲಿ ಪುಟನಾಗಿ ಪ್ರಥಮತಃ ಸುಪ್ರಭಾತವು ಪರಿನಾಮ ಸಂಕೀರ್ತನೆಯನ್ನು ಮಾಡಬೇಕು ಇಲ್ಲದಿದ್ದರೆ ಅಲ್ಲಿನ ದ್ವಾರಪಾಲಕರ ಮೃಗತ್ವ, ಮತ್ತು ಅಧಿಕಾರಿಗಳ ದಿವ್ಯಭವನಕ್ಕೆ ತೆರಳಬೇಕಾದವರಿಗೆ ಕೆಲವು ದಸೆ ಬಹಳ ಅನರ್ಥ ಕರವಾಗಿವೆ ಹ್ಯಾಗೆಂದರೆ, ಅವರ ಉಪವನ ಪ್ರವೇಶ ಮಾತ್ರದಿಂದಲೇ ಹೋಗುವವರಿಗೆ ಕಾಲ್ಬಳಿವು ಕಡಮೆಯಾಗುತಿದೆ ಮಂದಿರದ್ವಾರ ಸಂದರ್ಶನ ಮಾತ್ರದಿಂದಲೇ ಗಾತ್ರಕಂಪವು ತಗ್ಗುತಿದೆ ಜಯವಿಜಯ ಪ್ರಾಯರಾದ ದ್ವಾರಪಾಲಕರ ತಿರಸ್ಕಾರರೂಪವಾದ ಧ್ವನಿಯಿಂದ ದೇಹದಲ್ಲಿ ಕಂಪವುಂಟಾಗುತಿದೆ ಅಧಿಕಾರಿಗಳ ಸಂದರ್ಶನದಿಂದ ಜೀವತ್ವ ಹತನಾಗುತಿದೆ ಅವರ ಕಟಾಕ್ಷವೀಕ್ಷಣ ವಿಸ್ಮೃತರಾದರೆ ಪರಂಪರಾ ರೂಪವಾದ ಮರಣವು ನಿಶ್ಚಯವು ಹೀಗೆ ದೇವಸ್ಥೆಯು ಅಲ್ಲಿಗೆ ಪ್ರಾಪ್ತವಾಗುವದರಿಂದ ಇವರೇ ಪೂಜ್ಯರಾಗಿಯೂ ಪೂಜ್ಯರಾಗಿಯೂ ಏರ್ಪಟ್ಟದರಿಂದ ಇಷ್ಟಾರ್ಥ ಅವರಪ್ರಸಾದವೆಂಬುದು ಮಾತ್ರ ಸುಲಭವಾಗಿ ಲಭಿಸತಕ್ಕದ್ದಲ್ಲ ವಾದುದರಿಂದ ಅದಿಲ್ಲದವರು ಸರ್ಕಾರ್ ಉದ್ಯೋಗವನ್ನಾಶಿಸಿ ಪ್ರಯೋಜನವಿಲ್ಲವು ಪ್ರಸ್ತುತ ಇಂತಹ ಸ್ಥಿತಿಯು ಸರ್ವತ್ರ ತಲೆದೋರಲಿಕ್ಕೆ ಉಪಕ್ರಮವಾಗಿದೆ, ಹ್ಯಾಗೆಂದರೆ, ಅಧಿಕಾರವೆಂಬುದು ಪ್ರಾಪ್ತವಾದ ಕೂಡಲೇ ಅಹಂಕಾರದಿಂದ ಅಂಧತ್ವವೂ, ಧನದಿಂದ ಧರ್ಮವೂ(ಅಮರ್ಯಾದ) ಕೋಪದಿಂದ ಕಾತರವೂ (ಉರಿದ ಪಿತ್ತ) ರೋಗದಿಂದ ಬಾಗ ರಹಿತ್ಯವೂ, ಸ್ವತ ಏವ ಘಟಿಸುತ್ತ ಎಲ್ಲವನ್ನೂ ನೋಡಿ ಅನುಭವಿಸುತಲಿರೋಣ ವೇದೋಕ್ತವೆನಿಸಿಕೊಂಡ ಮಾರ್ಗದಿಂದಲೇ ವಾಸಿಷ್ಠಾನ್ವಯ ಬ್ರಾಹ್ಮಣರೂ, ವಕೀಲರೂ ಉಂಟಾಗುವದರಿಂದ ಧ್ವನಿಸಿ ಇರಿಸುತ್ತಾರೆ ಇಂತಹ ಅಧಿಕಾರವುಳ್ಳ ದೊಡ್ಡವರನ್ನಾಶ್ರಯಿಸಿ ಅವರ ಅಭಿಮಾನವನ್ನು ಸಂಪಾದಿಸುವ ತನಕ ಸರ್ಕಾರ್ ಉದ್ಯೋಗವನ್ನಾಶಿಸುವದು ಬುದ್ಧಿದೋಷವೆಂದು ಭಾವಿಸಬೇಕು ಎಂದು ಸಾಗರದಿಂದ ಕಂಗೆಟ್ಟು ಎಳೆ ಹೋಗುವವರು ಪ್ರಯತ್ನಪಟ್ಟಾಗ್ಯೂ ಕೆಲಸಾದರೂ ಉದ್ಯೋಗವನ್ನು ಹೊಂದಿ ದಾಸ್ಯಸಂಕಟವನ್ನು ಸಹಿಸಿಕೊಂಡು ಸಂತೃಪ್ತಿಯನ್ನು ಹೊಂದಬಹುದು ಕರುಣಾಕರನಿಂದ ಮತ್ತು ಸ್ವಾರ್ಥಪರರಾದ ಅಧಿಕಾರಿಗಳ ತಲೆ ಪಾಗಿಲಿಂ ಕಾದು "ಉದರನಿಮಿತ್ತಂ ಬಹುಕೃತವೇಷಂ" ಎಂಬುದಾಗಿ ಕೇವಲ ಉದರ ಹೊಟ್ಟೆಗಾಗಿ ನಾನಾವೇಷಗಳಿಂ ತಮ್ಮ ಅಂತಃಕರಣ ವಿರುದ್ಧಗಳಾದ ನಾನಾಪೇಯ ಕೃತ್ಯಗಳಿಂ ಅವರ ಪ್ರೀತ್ಯರ್ಥ ಮಾಡಿ ಧನವನ್ನಾರ್ಜಿಸಬೇಕೆಂಬ ಅಭಿಲಾಷೆಯಿಂ ದಣಿಯುವದಕ್ಕಿಂತಲೂ ಉತ್ತಮವಾದ ದೇಶದ ಜನ್ಮವಂ ಉಚಿತ ವೃತ್ತಿಯಿಂದ ಸಾರ್ಥ ಕವಡಿಸಬೇಕಾದುದೇ ಇದರ ಮುಖ್ಯಕರ್ತವ್ಯವಾಗಿರುತ್ತದೆ ದಯಾಳುವಾದ ಸರ್ವಜ್ಞನಿಗೂ ಅಕ್ರಮಕರ ಕರುಣೆಕರನಾದ ಚಕ್ರವರ್ತಿಯಂ ಕೊಂಡಾಡುವದು ಉಚಿತವೆಂದು ಸ್ವಾನುಭವಪೂರ್ವಕ ಪರಿಹಸ್ಯಗಳನ್ನೆಲ್ಲ ತಮ್ಮ ಪತ್ರಿಕೆ ಮೂಲಕ ತಿಳಿಸುವೆ,

೪–೭–೯೬	ತಮ್ಮ ವಿಧೇಯನಾದ,
ಬೃಂದಾವನ	ಅಧಿಕಾರ ಮದಾಗ್ನಿದಗ್ಧನು.

SUMMARY OF NEWS.
ವೃತ್ತಾಂತ ಸಂಗ್ರಹವು.

ರಷ್ಯಾ ಚಕ್ರವರ್ತಿಗಳ ಪಟ್ಟಾಭಿಷೇಕ ಕಾಲದಲ್ಲಿ ಅವರು ಪ್ರಜೆಗಳಿಗೆ ಮಾಡಿಸಿದ ಔತಣದಲ್ಲಿ ೩೧೮೨ ಮಂದಿ ಸತ್ತು ಹೋದರೆಂತಲೂ ೪,೦೦೦ ಜನರಿಗೆ ಘಾಯಗಳಾದವೆಂತಲೂ ಸರ್ಕಾರದವರೇ ಗೊತ್ತು ಮಾಡಿದ್ದಾರೆ.

ಲಂಕಾ(ಸಿಲೋನ್) ದ್ವೀಪದಲ್ಲಿ ಕೆಲವರು ನೇಟಿವ್ ಜನರು ಸೇರಿ ಮೆ॥ ಫ್ಲೆಮಿಂಗ್ ಎಂಬ ಒಬ್ಬ ಯೂರೋಪಿಯನನ್ನು ಹಿಡಿದು ಮರಕ್ಕೆ ಕಟ್ಟಿ ಬಹಳ ಹೊಡೆದು ಬಿಟ್ಟರು ಇವರನ್ನು ಬಿಟ್ಟು ಆಸ್ಪತ್ರೆಯಲ್ಲಿ ಹಾಕಿದರು. ಆದರೆ ಇವರು ಬದುಕಲಿಲ್ಲ

ಗ್ವಾಲಿಯರ್ ಸಂಸ್ಥಾನಕ್ಕೆ ಸೇರಿದ ಮಾಂಡಲ ಎಂಬ ಪಟ್ಟಣದಲ್ಲಿ ೧೦ ವರುಷ ವಯಸ್ಸಿನ ಒಬ್ಬ ಹಿಂದೂ ಹುಡುಗಿಯು ಒಬ್ಬಳಾಗಿ ಜೆಸ್ಟ್ ಎಂಬ ತಾ॥ನ ದಿನ ಮಗುವನ್ನು ಹೆತ್ತಳು ಆ ಮಗು ಹುಟ್ಟಿದ ಕೂಡಲೆ ತಾಯಿಯನ್ನು ನೋಡಿ ನಕ್ಕು ಪ್ರಾಣಬಿಟ್ಟಿತು

ರ್ಯಾವೆನ್ಸ್ಬರ್ಗ್ನಲ್ಲಿ ಹಾಕಿ ನಡೆಯುತ್ತಿರುವ ಕ್ರಿಸ್ಟೋಯನ್ಸ್ ಲಿಲ್ಲಿ ರಾಣಿ ಪಿರಮಿಡ್ನಲ್ಲಿ ಬೇರೆ ಕಂಪೆನಿಯವರಿಗೆ ಮಂಜೂರು ಮಾಡಿದ ಪ್ರಮುಖ ಮಾಡುತ್ತಿದ್ದಾರೆ ಈ ಕೈಸ್ಟೋ ಇದುವರೆಗೆ ಹಾಕಿರುವ ಮೂಲಧನವು ೭೫೦ ಲಕ್ಷ ರೂಪಾಯಿಗಳೆಂದು ತಿಳಿದು ಬಂದಿದೆ

ಕಲ್ಕತ್ತೆಯಲ್ಲಿ ಒಬ್ಬ ಹಿಂದೂ ಸನ್ಯಾಸಿಯು ಕುರುಡರಿಗೆ ಕಣ್ಣು ಬರುವಂತೆಯೂ ಹೆಳವರಿಗೆ ಕಾಲು ಬರುವಂತೆಯೂ ಆ ಹಿಂದೂ ವಾಸಿಯಾಗುವಂತೆ ಮಂತ್ರ ಮಾಡುತ್ತಿದ್ದಾನೆಂತಲೂ ಆತನು ಅವನಿಗೆ ಬಂಗಾಳಿಕರ ಆಗಿ ಪ್ರಸಿದ್ಧಿಯಾಗಿ ಬಂದಿದೆ.

ಇಂಡಿಯಾ ಗೌರ್ನ್ಮೆಂಟಿನವರು ರಾಂಪುರದ ನವಾಬರಿಗೆ ಸಂಪೂರ್ಣ ಅಧಿಕಾರಂಗಳನ್ನು ಕೊಟ್ಟಿದ್ದಾರೆ. ನವಾಬರು ತಮ್ಮ ಕೈಕೆಳಗೆ ಒಬ್ಬ ದಿವಾನ್‌ರನ್ನ ನೇಮಿಸಿಕೊಳ್ಳಬೇಕೆಂದು ಗೊತ್ತು ಮಾಡಿ ಈಗ ಮೊರಾದಾಬಾದಿನಲ್ಲಿ ಸೆಷನ್ ಜಡ್ಜಿಗಳಾಗಿರುವ ಮೌಲ್ವಿ ಮಹಮುದ್ ಇಷ್ಮಿಕ್ ಖಾನ್ ಎಂಬ ದೊಡ್ಡ ಮನುಷ್ಯರನ್ನು ಈ ಕೆಲಸ ಒಪ್ಪಿಕೊಳ್ಳುತ್ತೀರಾ ಎಂದು ಪ್ರಶ್ನೆ ಮಾಡಿರುತ್ತಾರೆ

ತಾಡಪತ್ರಿಯಲ್ಲಿ ಮೂವರು ಮಹಮದೀಯರು ಸಬ್ ಜಡ್ಜಿಯಾದ ಮ|| ಕೃಷ್ಣಮೂರ್ತಿರಾಯರ ಮೇಲೆ ಲಂಚ ತಿಂದರೆಂದು ಸರ್ಕಾರಕ್ಕೆ ಅರ್ಜಿ ಬರೆದುಕೊಂಡರು. ಸರ್ಕಾರದವರು ವಿಚಾರಣೆ ಮಾಡಿದಾಗ ಅವರು ಲಂಚ ತಿಂದದ್ದು ಸುಳ್ಳಾಯಿತು. ಆದ್ದರಿಂದ ಜಾಟಿ ಮೊಕದ್ದಮೆಗೆ ಕಾರಣರಾದ ಮೂರು ಮಂದಿ ಮಹಮದೀಯರನ್ನೂ ಹಿಡಿದು ವಿಚಾರಣೆ ಮಾಡಿ ಅವರಿಗೆ ಪೂರಾ ಶಿಕ್ಷೆ ಕೊಟ್ಟಿದ್ದಾರೆ.

ಕಲ್ಲಿಕೋಟೆಯ ಹತ್ತಿರ ಒಂದು ಹಳ್ಳಿಯಲ್ಲಿ ೬೫ ವರುಷ ವಯಸ್ಸಿನ ಒಬ್ಬ ಮುದುಕನಿಗೂ ೩೦ ವಯಸ್ಸಿನ ಅಣ್ಣನ ಮಗನಿಗೂ ಸ್ವಲ್ಪ ಅಕ್ಕಿಯ ವಿಷಯವಾಗಿ ಜಗಳವಾಯಿತು. ಆಗ ಯೌವನಸ್ಥನು ಮುದುಕನ ಮೇಲೆ ಬಿದ್ದು ಹೊಡೆದನು. ಮುದುಕನು ತನ್ನ ಕೋಪವನ್ನು ಮನಸ್ಸಿನಲ್ಲೇ ಇಟ್ಟುಕೊಂಡಿದ್ದು ಅವನು ಮಲಗಿ ನಿದ್ರೆ ಮಾಡುತ್ತಿದ್ದಾಗ ಅವನ ಕೊಠಡಿಯೊಳಕ್ಕೆ ಹೋಗಿ ಚೂರಿಯಿಂದ ಅವನ ಕತ್ತು ಕತ್ತರಿಸಿ ಕೊಂದು ಹಾಕಿದನು. ಅನಂತರ ಅವನು ಹೋಗಿ ಪೋಲೀಸಿನವರಿಗೆ ನಡೆದ ಸಂಗತಿಯನ್ನೂ ಅದಕ್ಕೆ ತಾನು ಮಾಡಿದ ಕೃತ್ಯವನ್ನೂ ಹೇಳಿಯುತ್ತು ಕೊಟ್ಟಿರುತ್ತಾನೆ

ಕುಂಬಕೋಣದಲ್ಲಿ ಬಿ. ಎ. ಪರೀಕ್ಷೆ ಕೊಟ್ಟಿರುವ ಒಬ್ಬ ಹಿಂದೂ ಯೌವನಸ್ಥನು ತನ್ನ ಅತ್ತೆ ಮಾವಂದಿರನ್ನು ಹಿಂಸೆ ಪಡಿಸುತ್ತಲೂ ಅವರಿಂದ ಆಗಾಗ್ಗೆ ಹಣವನ್ನೂ ಆಭರಣಗಳನ್ನೂ ಮತ್ತೊಲ್ಲಾಡಿ ಕೊಳ್ಳುತ್ತಲೂ ಬಂದಿದ್ದಾನೆ. ಇವನ ಮಾವನು ಇದುವರಿಗೆ ಅಳಿಯನಿಗೆ ನಗದಾಗಿ ೧,೫೦೦ ರೂಪಾಯಿ ಕೊಟ್ಟದ್ದಲ್ಲದೆ ಟ್ರೈಸಿಕಲ್ ಎಂಬ ಮೂರು ಚಕ್ರದ ಗಾಡಿಯೊಂದು, ಒಂದು ಜೊತೆ ಕಿವಿಗೆ ಹಾಕಿಕೊಳ್ಳುವ ಹತ್ತಿಕಡಕು, ಒಂದು ಚಿನ್ನದ ಗಡಿಯಾರ ಮತ್ತು ಅದಕ್ಕೆ ತಕ್ಕ ಚಿನ್ನದ ಸರಪಣಿ ಮುಂತಾದ ಒಡವೆಗಳನ್ನು ಕೊಟ್ಟಿರುತ್ತಾನೆ. ಇಷ್ಟೇ ಅಲ್ಲ, ತನ್ನ ಮಗಳಿಗೂ ಪೂರಾ ಒಡವೆ ಕೊಟ್ಟಿರುವನು. ಇಷ್ಟೆಲ್ಲಾ ಕೊಟ್ಟಿದ್ದಾಗ್ಯೂ ಅಳಿಯ ಮಾವನನ್ನು ಹಿಂಸೆ ಪಡಿಸುವದು ತಪ್ಪಲಿಲ್ಲವಂತೆ

EXTRACT

ಯಜ್ಞೋಪವೀತದ ನ್ಯಾಯವು.

ಲಖನೌವಿನ ಒಕ್ಕಲಿಗರು ಒಂದು ನ್ಯಾಯವನ್ನು ಹಬ್ಬಿಸಿರುವರು. ಹಾಸನಗಂಜಿನಲ್ಲಿನ ಒಬ್ಬ ಒಕ್ಕಲಿಗನು ಜನಿವಾರವನ್ನು ಹಾಕಿದ್ದೇ ಈ ನ್ಯಾಯದ ಮೂಲಕಾರಣವಾಗಿರುವುದು. ಅವನು ಜನಿವಾರ ಹಾಕಿದ್ದನ್ನು ಸಾರಾಯಿ ಮಾಲೀಖಾನದಲ್ಲಿನ ಮುಂಶಿಯ ಬ್ರಾಹ್ಮಣರು ನೋಡಿದರು. ಅವರು ಆಗಲೇ ಅವನನ್ನು ಹಿಡಿದು ಅವನ ಜನಿವಾರವನ್ನು ಹರಿದರು. ಮತ್ತು ನಿನಗೆ ಜನಿವಾರ ಹಾಕುವ ಅಧಿಕಾರ ವಿಲ್ಲದ್ದರಿಂದ ನೀನು ಇನ್ನುಮುಂದೆ ಜನಿವಾರ ಹಾಕಿದಲ್ಲಿ ನಮ್ಮ ಕೆಲಸಕ್ಕೆ ಉಪಯೋಗ ಬೀಳಲಾರಿ ಎಂದು ತಾಕೀದ್ ಸಹ ಮಾಡಿದರು. ಇದು ಲಖನೌದೊಳಗಿನ ಒಕ್ಕಲಿಗರಿಗೆ ತಿಳದ ಮೂಲಕ ಅವರು ಪ್ರಬಲ ತಂಟೆ ನಡೆಸಿರುವರು, ಮತ್ತು ನಮಗೆ ಜನಿವಾರ ಹಾಕುವ ಅಧಿಕಾರ ವಿರುತಿದೆಂದು ಅನೇಕ ಗ್ರಂಥಾಧಾರಗಳನ್ನೂ ಕೆಲವು ಶಾಸ್ತ್ರೀ ಪುರಾಣಿಕರ ಪುರಾವೆಗಳನ್ನೂ ಉತ್ಪನ್ನಮಾಡಿ ಅವರು ಈ ವಿಷಯವಾಗಿ ಫೌಜದಾರಿಯಲ್ಲಿ ಖಟ್ಲೆ ಮಾಡಿರುತ್ತಾರೆ. ಒಂದೊಂದೆ ಚಮತ್ಕಾರಗಳು ನಡೆಯಲಾರಂಭಿಸಿವೆ—ರ ರು.

ವೀರಶೈವ ಲಿಂಗಾಯತರು ಮುಸಲ್ಮಾನೀಯರು ಆಗುವದು ಹ್ಯಾಗೆ.

ಸೋಮವಾರದ ಬಾಗಲಕೋಟೆಯ ಚಂದ್ರಿಕಾಪತ್ರದಲ್ಲಿ ಅಲ್ಲಿನ ಗುರುಪಾದಪ್ಪ ಹಿತ್ತಲಮನೆ ಎಂಬುವವನು ಲಿಂಗಾಯತರು ಅಗತ್ಯವಾಗಿ ಮೊಹರಂನಲ್ಲಿ ಸಕ್ಕರೆ ಕಾಯಿ ಖಾರೀಕ್ ಮುಂತಾದ್ದನ್ನು ಅಲ್ಲಾದೇವರಿಗೆ ಅತ್ಯವಶ್ಯವಾಗಿ ಕೊಡಬೇಕೆಂದೂ, ಈವೀರಶೈವ ಲಿಂಗಾಯತರೇ ಮುಸಲ್ಮಾನರೆಂಬುದು ಪುರಾಣ ಪ್ರಸಿದ್ಧವಷೆ ಎಂತಲೂ, ಜಾಹಿರಾತುಗಳಿಂದ ಬಾಗಲಕೋಟೆ ತುಂಬ ಹಂಚಿ ವೀರಶೈವ ಲಿಂಗಾಯತರು ಮುಸಲ್ಮಾನರೆಂಬುವುದು ಸಿದ್ಧ ಮಾಡಿಕೊಡುವದು ತನಗೆ ಒಪ್ಪಿದೆಯೆಂತಲೂ, ಸಂಶಯವಿದ್ದರೆ ತಾನು ಸಿದ್ಧವಾಗಿರುತ್ತೇನೆಂತಲೂ, ಅನ್ನುತ್ತಾನೆಂದು ಬರೆದಿರುವರು. ಮೈಸೂರಲ್ಲಿ ಹೊರಡುವ ಮೈಸೂರ್ ಸ್ಟಾರ್ ಪತ್ರಿಕಾಕರ್ತರು ಲಿಂಗಾಯತರ ದೆಸೆಯಿಂದ ಸರ್ವದಾ ವಿವಾದ ನಡೆಸಿರುವರು. ಇತ್ತಕಡೆಗೆ ಸದರೀಪತ್ರಿಕರ್ತರು ಅಗತ್ಯ ಲಕ್ಷ್ಯ ಕೊಡಬೇಕು. ಗುರುಪಾದಪ್ಪನು ಲಿಂಗಾಯತನಿದ್ದು ತನ್ನ ಧರ್ಮವು ತನಗ್ಯಾಕೆ ಬೇಸರವಾಗಿದೆಯೋ ತಿಳಿಯದು. ಹ್ಯಾಗೇ ಇರಲಿ, ವೀರಶೈವ ಮತಾಭಿಮಾನಿಗಳು ಈ ಪ್ರಸಂಗದಲ್ಲಿ ನಿಸ್ಪೃಹರಾಗದೆ ಸ್ವಮತಾಭಿಮಾನ ಹಿಡಿದು ಯೋಗ್ಯವಿಚಾರ ಮಾಡುವುದು ಲೇಸು ಎಂಬಾತೆ ತೋರುತಿದೆ—ರಸಿಕರಂಜನಿ.

ಬಡ್ಡಿಯನ್ನು ಹೆಚ್ಚಿಸುವ ಪ್ರಯತ್ನ

ದಯಾಳುಗಳಾದ ಬ್ರಿಟಿಷ್ ಸರ್ಕಾರದವರಿಗೆ ಎಷ್ಟು ತರದಿಂದ ದುಡ್ಡು ಗಳಿಸಿಕೊಂಡರು ಮನದಣಿಯುವದಿಲ್ಲವು. ಇವರು ಕೇವಲ ರಾಜಕಾರ್ಯ ಪ್ರವರ್ತಕರು ಮಾತ್ರವೇ ಅಲ್ಲವು ರಾಜಮುಖವನ್ನು ವಹಿಸಿಕೊಂಡ ವ್ಯಾಪಾರ ರಾಜರುಗಳೆಂದೇ ತಿಳಿಯಬೇಕು. ಇವರು, ರಾಜ್ಯಭಾರ ಕ್ರಮದಲ್ಲಿ ಬಂದರ್ಪದೊಳು ನ್ಯೂನತೆ ಪ್ರಮಾದಾಗ್ಯೂ ಅನೇಕ ತರದ ವ್ಯಾಪಾರ ಉದ್ಯಮಗಳಲ್ಲಿ ಯಾವ ಭಾಗದಲ್ಲೂ ತಮ್ಮ ಕೈಚಾಚಿ ದುಡ್ಡು ಸೆಳೆಯುವ ಪ್ರಯತ್ನದಲ್ಲಿ ಇವರನ್ನು ಮೀರಿದವರು ಯಾರೂ ಇಲ್ಲವು. ಇವರ ಉತ್ಪನ್ನದ ಬಾಬುಗಳು ಅನೇಕ ವಿರುತವೆ. ಅವುಗಳನ್ನು ಎಣಿಸುತ ಕುಳಿತರೆ ಈ ಪತ್ರಿಕೆಯಲ್ಲಿ ಸುತರಾಂ ಅವಕಾಶ ಸಾಲದು. ಇಷ್ಟ್ಯಾಕೆ, ಶಾಲೆಯ ವಿದ್ಯಾರ್ಥಿಗಳ ಪುಸ್ತಕಗಳನ್ನು ತಾವೇ ಅಚ್ಚುಹಾಕಿ ಮಾರುವದಿಲ್ಲವೆ? ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಲೆಕ್ಕವಿಡುವರಿಗೆ ಸರ್ಕಾರದವರು ನೂರಕ್ಕೆ ಸೇಕಡ ಮೂರು ವರೆ ರೂಪಾಯಿಗಳ ಬಡ್ಡಿ ಕೊಡುತ್ತಾರೆ. ತಾವಾದರೋ, ನಮ್ಮ ರೈತರು ಬಡವರು, ಅವರಿಗೆ ನಾವು ಸಾಲ ಕೊಟ್ಟು ರಕ್ಷಿಸುತ್ತೇವೆ ಎಂದು ಹೊರೆಯುವೇರೆ ಕೈಹೆಳದು ಕೊಡುವ ತಕಾವಿ ರಣವಿಗೆ ಸಾಲೀಯಾನಾ ಸೇಕಡ ಐದು ರೂಪಾಯಿಗಳ ಬಡ್ಡಿ ಬಡಿದು ತೆಗದು ಕೊಳ್ಳುವರು. ತಾವು ಕೊಡುವ ಬಡ್ಡಿಯ ದರವನ್ನು ದಿನಕ್ಕೊಂದು ವಿಧವಾಗಿ ಇಳಿಸುತಲೂ, ತಮಗೆ ಬರುವ ಬಡ್ಡಿಯನ್ನು ಹೆಚ್ಚಿಸುತಲೂ ನಡೆಸುತಲಿದಾರೆ ನಮ್ಮ ದೇಶದ ಮುಖ್ಯ ಮಕಾಶಿಗಳು ಯಾರತೂ ತಿಳಿಯದೆ ಪ್ರತಿ ವರ್ಷದಲ್ಲೂ ಸಾವಿರಕಟ್ಟಲೆ ತಕಾವಿಗಳನ್ನು ತೆಗೆಯುತ್ತಲೇ ತೆಗೆಯುತ್ತಾರೆ. ಇದೇ ಹದವನ್ನು ಸಾಧಿಸಿ ನಮ್ಮ ಸರ್ಕಾರದವರು ತಮ್ಮ ಸರ್ ೧೮೯೬ನೇ ಏಪ್ರಿಲ್ ೨೧ನೇ ತಾರೀಖಿನ ೧೫೫೫ನೇ ನಂಬರ್ ಹುಕುಂನಲ್ಲಿ ಈ ಬಡ್ಡಿ ದರವನ್ನು ಯೇನು ಕಾರಣದಿಂದಲೊ ಐದರಿಂದ ಆರಕ್ಕೆ ಯೇರಿಸಬೇಕೆಂಬ ಕುಯುಕ್ತಿಯನ್ನು ತೆಗದು ಒಂದು ಜಾಹಿರಾತನ್ನು ಪ್ರಕಟಿಸಿರುತ್ತಾರೆ. ಇದನ್ನು ಎಬಡೆ ತಂಕರರು ಯೆಷ್ಟರಮಟ್ಟಿಗೆ ಲಕ್ಷ್ಯದಲ್ಲಿ ತಂದಿರುವರೊ ತಿಳಿಯದು. ತಕಾವಿ ಹಣವನ್ನು ತೆಗದುಕೊಂಡನಂತರ ಭೂಮಿಯನ್ನು ಸುಧಾರಣೆ ಮಾಡುವದಕ್ಕೆ ಸಾಧಾರಣವಾಗಿ ಯೆರಡು ವರ್ಷಗಳು ಹತ್ತುತವೆ ಈ ಮುದ್ದತಿನಲ್ಲಿ ಯಾವದಷ್ಕೆ ಭೂಮಿಯಿಂದ ಆದಾಯವಿಲ್ಲವ್ಯೊ ಆನಷ್ಕೆ ಬಡ್ಡಿಯನ್ನು ತೆರೆಯುವ ಅನುಕೂಲವಿಲ್ಲದ ಕಾರಣ ಈ ಮುದ್ದತಿನಂತ ಬಡ್ಡಿ ಆಕರ್ಷಣೆ ಮಾಡಿದಾಗ್ಯೂ ಮೊದಲಿದ್ದಂತೆ ನಿರಬಡ್ಡಿ ಹಣವನ್ನು ಕಾಯಂ ಇಡಬೇಕೆಂದು ಸರ್ಕಾರಕ್ಕೆ ನಮ್ಮ ಸೂಚನೆ ಅದೆ —ರಸಿಕರಂಜನಿ.

ಉತ್ತರ ಹಿಂದೂಸ್ಥಾನದೊಳಗಣ ಮಧ್ಯ ಪ್ರಾಂತಕ್ಕೆ ಸೇರಿದ ಸಾಗರ ಜಿಲ್ಲೆಯಲ್ಲಿಯೂ, ಬುಂದೇಲಖಂಡ, ಮಾಳವ ಪ್ರಾಂತಗಳಲ್ಲಿಯೂ ಭಯಂಕರವಾದ ಕ್ಷಾಮವು ಪ್ರಾಪ್ತವಾಗಿರುತಿದೆ. ಕ್ಷಾಮಪೀಡಿತರಾದ ಜನಗಳಿಗೆ ಬ್ರಿಟಿಷ ಸರಕಾರದವರು ಅನ್ನ ಸಾಮಗ್ರಿಯನ್ನೊದಗಿಸಿ ಕೊಡುತಲಿರುವದು ಸ್ತುತ್ಯವೆ, ಆದರೆ ಅದು ಎಷ್ಟು ಅಲ್ಪವಿರುತದೆಂಬ ಅನುಭವವು ನಮ್ಮ ದೇಶದೊಳಗೆ ಬರಬಿದ್ದ ಕಾಲಕ್ಕೆ ಬಂದಿದ್ದು ಇದೇಪ್ರಕಾರ ಅಲ್ಲಿಯೂ ನಡದಿದೆಯೆಂದು ಹೇಳಲಿಕ್ಕೆ ಅಡ್ಡಿ ಇಲ್ಲ ಜನರು ಮೊದಲು ಕಾಳು ತುಟ್ಟಿಯಾಗಲಿಕ್ಕೆ ಹತ್ತಿದಂತೆ, ತಮ್ಮ ಹತ್ತರ ಇದ್ದ ಎಲ್ಲ ಒಡವೆಗಳನ್ನು ಮಾರಿ ಹೊಟ್ಟೆ ಹೊರಕೊಂಡರು. ಯಾವಾಗ್ಯೆ ಜನರು ಬರಿಗಯ್ಯವರಾಗಿ ಅನ್ನ ಅನ್ನ ವೆಂದು ಮ್ಲಾನಸ್ವರದಿಂದ ರಿಕ್ತಟಗಳನ್ನು ಹಾಕಿದನೊ ಅಗ ಸರ್ಕಾರೀ ಉದ್ಯೋಗಸ್ಥರು ಎಚ್ಚತ್ತು ಒಂದು ಮರ್ಗಿ ಬಿಲಿದ ಕೆಲಸಗಳನ್ನು ಪ್ರಾರಂಭಿಸಿದರು. ಅನ್ನಹೀನವಾದ ಜನರಿಗೆ ಅನ್ನ ಹಾಕಿ ಅವರಿಂದ ಯಾವದಾದರೊಂದು ಕೆಲಸ ಮಾಡಿಸಿಕೊಳ್ಳುವದು ಹಿತವು ಆದರೆ ಈ ಸದುದ್ದೇಶವು ದುರುಪಯೋಗ ಹೊಂದಿ ಅನರ್ಥಕ್ಕೆ ಕಾರಣೀಭೂತವಾಗುತದೆ. ಸಾಂಪ್ರತಕ್ಕೆ ಒಂದೆ ಸಾಗರದ ಜಿಲ್ಲೆಯೊಳಗೆ ಒಂದುವರೆ ಲಕ್ಷ ಜನರು ರಿಲೀಫ್ ಕಾಮಗಾರೀ ಮೇಲಿರುತ್ತಾರೆ ಈ ಕೆಲಸ ಮಾಡತಕ್ಕವರಿಗಲ್ಲದೆ, ಇನ್ನ್ಯಾರಿಗೂ ಸರ್ಕಾರದ ಸಹಾಯ ದೊರೆಯುವದಿಲ್ಲ. ಇದರಿಂದ ಧಷ್ಟಪುಷ್ಟರಿಗೆ ಮಾರ್ಗವಾಗಿ ಮುದುಕ ತಮುಕರಿಗೆ ನಿತ್ಯ ರಾಯಪ್ಪನಾಯಕರ ಫಲಾಹಾರ ಮಾಡಬೇಕಾಗುತಿದೆ ಇಂತಾ ಜನರ ಸಲುವಾಗಿ ಧರ್ಮಾರ್ಥ ಅನ್ನ ಸತ್ರವನ್ನು ಆವಶ್ಯವಾಗಿ ಹುಟ್ಟಿದರು ಸರ್ಕಾರದವರ ಕರ್ತವ್ಯವಾಗಿದ್ದರೂ ಹಾಗೆ ಒಂದೂ ಇಲ್ಲದ ಸುದ್ದಿ ಕೇಳಿ, ಯೆಂತಾ ಕಲ್ಲೆದೆಯವನಿಗೆ ಸಹ ಅಶ್ರುಪಾತದಿಂದ ಪೀಡಿತರಾಗಿರುವ ಮುದುಕರ ದೆಸೆಯಿಂದ ಅಂತಃಕರಣ ಕರಗದೆ ಹೋಗದು ಒಬ್ಬ ಮುದುಕಿಯು ತನ್ನ ಸ್ವಂತ ಕೂಸನ್ನು ಕೊಂದು ಹೊಟ್ಟೆಗೆ ಭಕ್ಷಿಸಿಕೊಂಡ ದುಃಖಕರವಾದ ಸುದ್ದಿಯು ಕೇಳಿಯುದು, ಕಂಬನಿಗಳನ್ನುದುರಿಸಿ ಇಂತ ದುರ್ಧರಪ್ರಸಂಗವು ಪಳೆಯ ಜನ್ಮಕ್ಕೂ ಶತ್ರುಗಳಿಗೆ ಸಹ ಬರಬೇಡವೆಂದು ಅನಂತಾನಂತಕೋಟಿ ಬ್ರಹ್ಮಾಂಡನಾಯಕನಿಗೆ ಬರಗೊಡ್ಡಿ ಬೇಡಿಕೊಳ್ಳಲಿಲ್ಲ ಜೀವನಕ್ಕೆ ಮಾರ್ಗವಿದ್ದರೆ ಯಾರೊಬ್ಬರೂ ನೆಮ್ಮದಿಯಿಂದ ಬಾಳುವೆ ಮಾಡಬಹುದು ಆದರೆ ಅದಕ್ಕೆ ಅಭಾವವಾದನಂತರ ಚಿತ್ತ ಚಂಚಲವಾಗಿ, ಪಾಪ ಪುಣ್ಯವನ್ನು ಕಿಂಚಿತ್ತಾದರೂ ಧ್ಯಾನಕ್ಕೆ ತಾರದೆ ಅನನ್ವಿತವಾದ ಕೃತ್ಯವನ್ನಾಚರಿಸುವದು ರೂಢಿಗನುಸರಿಸಿದ್ದೆ. ಈಗ ೩ ವರ್ಷಗಳ ಕೆಳಗೆ ಕರ್ನೂಲ ಪ್ರಾಂತದಲ್ಲಿ ಬರ ಬಿದ್ದಾಗ್ಯೆ ಅಲ್ಲಿನ ಅನ್ನಾನ್ನಗತಿಕರಾದ ಜನರು ಕರ್ನೂಲಪೇಟೆ ಲೂಟಿ ಮಾಡಿದ ಸಂಗತಿಯು ನಮ್ಮ ವಾಚಕರಿಗೆ ಗೊತ್ತಿರುವದಷ್ಟೆ. ಇದೇಪ್ರಕಾರ ಸಾಗರದ ಅನ್ನವಿಲ್ಲದವರು ಪೇಟೆಯೊಳಗೆ ಮಾರುತಲಿದ್ದ ಅಕ್ಕಿ ಜೋಳದ ಪುಟ್ಟಿಗಳನ್ನು ಬಲಾತ್ಕಾರದಿಂದ ಹೊತ್ತುಕೊಂಡು ಹೋದದ್ದು ಬಂದಾಯು, ಇಲ್ಲವು ದಗೆ ಮಾಡುವ ದುಷ್ಟಬುದ್ಧಿಯಿಂದಲ್ಲ ಮೂಲಕಾರಣವು ಹೊಟ್ಟೆ ಎಂಬುವದು ಸರ್ಕಾರದವರಿಗೆ ಸಹ ತಿಳಿದಾಗಿದೆ ಇಂತಾಪ್ರಸಂಗದಲ್ಲಿ ಪೋಲೀಸಿನವರು ಸಾಕ್ಷರರ ಮೇಲೆ ಮೇಲೆಯುವದು ಚಿತ್ತಂಬ ಗಾಧೆಯಂತೆ, ಸಿಕ್ಕಿದವರನ್ನು ಹಿಡಿದು ಯಾತನೆಗೆ ಗುರಿ ಮಾಡುವದು ನ್ಯಾಯವಾದದ್ದೆಂದು ಭಾವಿಸುವರು? ಈ ಪ್ರಕಾರ ಅಲ್ಲಿ ಈಗ ನಾಲ್ಕಾರು ತಿಂಗಳುಗಳಿಂದ ಕ್ಷಾಮಪೀಡಿತ ಎನಿಸು ಅಗಣಿತ ಜನರನ್ನು ಆಹುತಿಯಾಗಿ ತೆಗೆದುಕೊಳ್ಳುತ್ತಿರುವವನ್ನು ಬಿಡುವ ಮಾಡಬೇಕೆಂದು ಮೋಕ್ಷಿಗಾಜನು ಹ್ಯಪ ಹೀನವಾಗಿ ವಿಪ್ರಲಭಾಗಿ ಸೃಷ್ಟಿಗೆರೆದರೂ, ಅವನ್ನು ಪ್ರಯೋಗ ಮಾಡಿಕೊಳ್ಳಲಿಕ್ಕೆ ಅವಶ್ಯವಾಗಿರುವ ಧನಗಳೇ ಇಲ್ಲದ್ದರಿಂದ ದೇವರು ಕೊಟ್ಟಿರುವ ದೈವವು ಕಟ್ಟಿಕೊಂಡು ಹೋಯಿತೆಂಬುದೆ ಅವರ ಪಾಡಾಗಿದೆ ಸಂಘಟಿತಯನುಸರಿಸಿ ರಾಜನು ಕಾಲದ ಮಾನೆಂದು ಒಂದು ನುಡಿಯವೆ ಈ ನುಡಿಯನ್ನು ಧ್ಯಾನಕ್ಕೆ ತಂದು ಬರತೇಯಾದ ಕ್ಷಾಮಪೀಡಿತ ಜನರ ರಕ್ಷಣಾರ್ಥ ನಮ್ಮ ಕೈಲಾದಮಟ್ಟಿಗೆ ಅಗತ್ಯ ಸಹಾಯ ಮಾಡಬೇಕೆಂದು ಅತ್ಯಾಗ್ರಹಪೂರ್ವಕವಾಗಿ ಸೂಚಿಸುತ್ತೇವೆ ಹಣ ಕಳುಹಿಸತಕ್ಕವರು ನಾಗಪುರ ಲೋಕ ಸಭೆಯ ಸೆಕ್ರೆಟರಿಯವರಿಗೆ ಮುಟ್ಟಿಸಬೇಕು ಅಂದರೆ ನ್ಯಾಯವಾಗಿ ಸದ್ವಿನಿಯೋಗವಾಗುವದು —ರಾಜಹಂಸ

ನೋಟೀಸ್.

ಬೆಂಗಳೂರು ಕರ್ನಾಟಕ ಪ್ರೆಸ್ಸಿನಲ್ಲಿ ಬಿಕರಿಗೆ ಹಾಜರಿರತಕ್ಕ ಗ್ರಂಥಗಳು.

ಇದರ ಕೆಳಗಿನ ಪಟ್ಟಿಯಲ್ಲಿ ಕಾಣಿಸಲ್ಪಟ್ಟಿರುವ ಗ್ರಂಥಗಳಿಗೆ ಇದುವರೆಗೆ ನಿಷ್ಕೃಷ್ಟವಾಗಿದ್ದ ಕ್ರಯಗಳನ್ನು ಸೇಕಡ ನಾಲ್ವತ್ತು ರೂಪಾಯಿಗಳಿಗೆ ಮೇಲ್ಪಟ್ಟು ಕಡಮೆ ಮಾಡಿರುತ್ತೇವೆಯಾಗಿ ಬೇಕಾದವರು ಆಯಾ ಗ್ರಂಥಗಳ ಕ್ರಯವನ್ನು ಕಳುಹಿಸಿ ತರಿಸಿಕೊಳ್ಳಬಹುದು. ಈ ಪಟ್ಟಿಯಲ್ಲಿ ಕಂಡ ಕ್ರಯದಲ್ಲಿ ತಪಾಲ್ ಹಾಸಲ್ ಸೇರಿರುವದಿಲ್ಲವು, ಅದು ಆಯಾ ಗ್ರಂಥಗಳ ತೂಕಕ್ಕೆ ತಕ್ಕಂತೆ ಸೇರಿಸಲ್ಪಡುವುದು.

ಭಗವದ್ಗೀತೆ	(ಸಟೀಕಾ)	0	8	0
ಆನಂದಲಹರಿ	ಡಿಟ್ಟೊ	0	4	0
ಚಾಣಿಕ್ಯನ ಸುಭಾಷಿತ	ಡಿಟ್ಟೊ	0	2	0
ಬಾಲರಾಮಾಯಣ	ಡಿಟ್ಟೊ	0	1	6
ಕಾಲಾಮೃತ	ಡಿಟ್ಟೊ	0	8	0
ವಿಷ್ಣು ಸಹಸ್ರನಾಮ		0	1	6
ಸೂರ್ಯ ಸಹಸ್ರನಾಮ		0	1	8
ಕೃಷ್ಣ ಕರ್ಣಾಮೃತ ಮೂಲ		0	1	0
ತ್ರಿಕಾಂಡ ಭವದ ಮೂಲ		0	1	6
ಪಂಢರಿ ಪಾ ಬಾಲಲೀಲೆ		0	3	0
ಹನುಮದ್ವಿಲಾಸ		0	4	0
ರೇವಾ ಪರಿಣಯ		0	1	6
ಸುಭದ್ರಾಪರಿಣಯ		0	1	0
ಸುಧನ್ವ ಚರಿತ್ರೆ		0	1	0
ಕಾಳೀಯ ಮರ್ದನ		0	1	0
ಬಾಲಗ್ರಹ ಚಿಕಿತ್ಸೆ		0	1	0
ಬೇತಾಳ ಪಂಚವಿಂಶತಿ		0	1	0
ಮಹಮ್ಮದ್ ಲಾ ಇಂಗ್ಲಿಷ್ ಕನ್ನಡ		0	8	0
ಅರೇಬಿಯನ್‌ನೈಟ್ಸ್ ಕಥೆ 37 ರಾತ್ರಿವರಿಗೆ		0	8	0
ಮೈರಾವಣನ ಕಥೆ		0	0	6
ವೃಷಭೇಂದ್ರವಿಜಯ		1	8	0
ಕನ್ನಡ ಪ್ರಮಾಣ್ಯಗಣಿತ ಪಠಪುಸ್ತಕಂ		1	0	0
ಭ್ರಾಂತಿವಿಲಾಸ		0	9	0
ಸೀತಾವನವಾಸ		0	4	0
ಶಿವಭಕ್ತಿಸಾರ		0	0	4
ಗಾಂಡ ಅವರೆ		0	0	6
ಬಾಲರಾಮಾಯಣ ಮೂಲ		0	0	4
ಅಭಿಮನ್ಯು ಕಾಳಗ		0	1	0
ಬಬ್ರುವಾಹನ ಕಾಳಗ		0	2	0
ಗೋಪಿಕಾಗೀತೆ		0	0	6

೫೦ ರೂಪಾಯಿಗೆ ಕಡಿಮೆ ಇಲ್ಲದೆ ತೆಗೆದುಕೊಳ್ಳತಕ್ಕವರಿಗೆ ಸೇಕಡ ೬| ರೂಪಾಯಿಯಂತೆ ಕಮಿಷನ್ ಕೊಡಲಾಗುವುದು

ಈ ಕಂಪನಿಯು ಸರ್ ೧೮೮೩ನೇ ಸಾಲಿನಲ್ಲಿ ಸ್ಥಾಪಿತವಾಯಿತು

ಜನಸ್ಮದ ಲಾಭವು.

ವಜ್ರಾಂಗ ಖಜೋರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತತ್ತಿಯು.

ಅತ್ಯುತ್ಕೃಷ್ಟಕರವಾದ ಬಳ್ಳಿಗಳಿಂದ ತೆಗೆದಿರುವ ಈ ಉತ್ತತ್ತಿಗಳು ಕೊಂಕಣ ಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಹಾಕಿಸಿ, ಒಳ್ಳೇ ಜೇನು ಹೆಚ್ಚಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ತತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವುಗಳಾಗಿವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ನಾಲ್ವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಶರೀರವಿಕಾರವಾದರೂ ಹರೆಯದ ಗಂಡಸರಂತೆ ಪ್ರಜ್ವಲಿತವಾಗುತ್ತದೆ ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಿಯು ಮುಂಬೆ ಚಿಕ್ಕವಾಗಿ ಹಿಂದೆ ಹರಿದುಹೋಗುವ ಧಾತು ನಿಲ್ಲುತ್ತದೆ ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ದೇಹ ಬಣ್ಣವು ಸುಧಾರಿಸುತ್ತದೆ ಪರಮ ಹಾಗೂ ಉಷ್ಣಸಂಬಂಧಿಕ ಬೇನೆಗಳಿಕಸಲ್ಪ ಇಲ್ಲದಂತಾಗಿ ಗಾತ್ರ ಪುಷ್ಟವಾಗುತ್ತದೆ ಮೂರು ಹೊತ್ತುಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದರಿಂದ ತಟ ಕೂಡಲೇ ಸ್ವಚ್ಛ ಶೌಚವಾಗುತ್ತದೆ ಕ್ಷಯ, ಉಬ್ಬಸ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ ಹೊಸ ರೋಗಿ ಇದ್ದಲ್ಲಿ ೧೧ ದಿವಸಗಳ ಮೇಲೆ ನಾಲ್ಕನೆ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ ಮತ್ತು ಹಳಬರಲ್ಲಿ ೪೦ ದಿವಸಗಳ ಮೇಲೆ ಗುಣ ಬರುವುದು ೧೧ ದಿವಸಗಳವರೆಗೆ ಸಾಲುವಷ್ಟು ೧ ಡಬ್ಬಿಗೆ ೧ ೪-೦ ರೂ|| ಒಂದೇ ಸಾರಿ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತತ್ತಿಯಿಂದ ಹೆಂಗಸರು ನಿರೋಗಿಗಳಾಗುತ್ತಾರೆ. ಕರಗಿದ ಹಾಗೂ ಬಹಳಂತೆ ಬೇನೆಗಳು ವಾಸಿಯಾಗುತ್ತವೆ. ಎಲ್ಲರಿಗೂ ಸರಿಯಾಗಿ ದೇಹ ಇಲ್ಲದವರನ್ನು ಗಿಡದಂತೆ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪನಿಯ ಹೊರತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯೂ ವೈದ್ಯಶಾಸ್ತ್ರಜ್ಞರಿಂದ ಸರಿಯಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು ಅಂಚೆಯ ಹಾಗೂ ವ್ಯಾಲ್ಯು ಪೇಯಬಲ್ ಪಟ್ಟಿ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದಲ್ಲಿ ಎಲ್ಲಾ ಖರ್ಚಿನ ಸಹಿತ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು)

ಮೋಲ್ವಿ ಳಾಸ—ಪಿ ಎಚ್ ಎ ಬ್ರದರ್ಸ್ ಮತ್ತು ಕಂಪೆನಿ,

ಸರ್ಕಾರ್ ಇಂಗ್ಲಿಷ್ ಬಜ್ಯಾರಬ್ ಆಫೀಸ್, ಡಿಸ್ಟ್ರಿಕ್ಟ ಬೆಳಗಾಂವ.

ಪೋಸ್ಟ—ಬೆಳಗಾಂವ, Post BELGAUM.

BANGALORE.—Printed and Published at the KARNATAKA PRESS, No 10, HOSPITAL ROAD, CITY,—1896.

THE

Karnataka Prakasika.

ಪ್ರತಿಸಂಚಿಕೆಯ ಬೆಲೆ { ಮೊದಲನೆಯದಕ್ಕೆ ಪತ್ರಿಕೆ ಒಂದಕ್ಕೆ 0 2 0
ಎರಡನೆಯ ದರ್ಜೆ ಪತ್ರಿಕೆ ಒಂದಕ್ಕೆ 0 1 0

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದಾರರಿಗೆ—ಸ್ಥಳದವರಿಗೆ | ಗ್ರಾಮಾಂತರದವರಿಗೆ ಪೋಸ್ಟೇಜ್ ಸಹ
ಸಂ 1 ಕ್ಕೆ . 3 0 0 | ಸಂ 1 ಕ್ಕೆ . 4 0 0
6 ತಿಂಗಳಿಗೆ . 2 0 0 | 6 ತಿಂಗಳಿಗೆ . 2 8 0
3 ತಿಂಗಳಿಗೆ .. 1 4 0 | 3 ತಿಂಗಳಿಗೆ .. 1 6 0

Vol. XXIII. BANGALORE:—MONDAY, JULY 20, 1896. No. 29.

THE

Karnataka Prakasika.

MONDAY JULY 20 1896

THE MUNICIPALITY, C AND M STATION

A NUMBER of the inhabitants of the Civil and Military Station assembled in St Andrew's School on Saturday the 9th of this month to discuss the question whether it was advisable to establish a rate-payers' Association. The meeting was fairly well attended, and there was a good deal of enthusiasm displayed on the occasion. After some debating it was agreed that an Association should be brought into existence, and a sub committee was formed to draw up the rules. It is to be hoped that no obstacle will present itself to prevent the object of the rate-payers from being accomplished. Such an institution is much needed and the remarkable it was not formed long ago. But it must be acknowledged that the people of the Station are very apathetic as regards matters that touch them closely. It is very difficult to get them to come together and discuss subjects of a public nature however important they may be. This state of things is such as might have been expected. Matters are in miserable condition. Of local self Government there is not the "shadow of a shade." The Municipality is a mere sham—worse than a sham. The members—with a few *exceptions—are mere dummies. They agree* with the President on every occasion, and they vote just as he desires them. They have no independence, they have no wish to do good to the place. It is to be feared that some of them are afraid to speak out their minds. The President of the Municipality holds a number of other offices, and they imagine he may do them injury if they vote against him. Such men are not fit to be made Commissioners. They only care for their own interests, not those of the public, consequently they are quite out of place as members of the Board. Then there are others who become Commissioners because it gives them importance in the eyes of their neighbours. They like to be seen abroad with a Municipal peon following them, and they can assume a lofty air in the presence of their neighbours and friends. As regards doing good they do not view the matter in this light. Thus, *as we have said, most of the Commissioners* on the Board are men who ought not to be there, men who do not represent the people or strive to do them good. In the next place the Government has not treated the Station as it ought to have done. It has helped to reduce the Municipality to a nonentity. The authorities do not like the elective system, why it is difficult to say—at least, at first sight. More than once the Municipality of the Civil and Military Station has been in danger of being abolished. During the regime of Sir Oliver St. John the danger of annihilation was imminent. The Resident wrote to the Government of India to take away the privilege of electing members to the Municipality from the rate payers of the Station. His suggestion was very near being carried out. The danger passed over, the Government, it was believed, was afraid of what might be said at home, and so allowed the Commissioners to be elected to sit on the Board. Then again, a similar crisis occurred during the time Colonel Henderson was Resident, and now we are told that there is some idea of replacing election by nomination. The result has been that good men will not offer themselves as candidates for election. They are aware that however well thought out a measure may be it may not be allowed to pass by the higher authorities. The President may veto it, but should he give his consent the Government of India may set its face stubbornly against it. It is therefore not to be wondered at that men should hesitate to allow themselves to be elected when all their labour may be in vain. Matters are in a much better condition in many other places where local self Government has taken root. It has not flourished into a sturdy plant. In those places men of intelligence come forward as candidates for the office of Commissioners and perform good work. The same might hold good in the Civil and Military Station if the authorities would treat the Municipality better. As the institution now stands the best thing would be to do away with the so-called elective system, and put nomination in its place—either this or a thorough change. If the former, good men would come forward and offer themselves as candidates to perform Municipal duties. It is in the hands of all the Municipality to remain in the condition it is in at present. *It is to* be hoped the rate payers will follow the example of their brethren in the City and form an association to protect their own interests.

News and Notes

BOROTAN proof glass has been invented by a Dresden manufacturer.

THE Paris Senate have passed a Bill making Madagascar a French Colony.

Official returns show that twenty seven th..and perished and twenty five thousand were injured by the tidal wave in Japan on the 15th June.

THE Commission appointed to enquire into the financial relations between England and Ireland has reported that Ireland is over taxed to the extent of 2¾ millions sterling annually.

MISS CORNELIA SORABJI, the first lady *lawyer in India, who appeared to defend some* persons accused of manslaughter, before the Sessions Judge of Poona, had the satisfaction of seeing her clients acquitted.

IT has been decided not to send a further protest to the Secretary of State on the question of the Sankin charges. A telegram has already been sent deploring the decision of the Secretary of State and the India Council.

THE new watch is to have a phonograph cylinder hidden away, and at the hour and each quarter of an hour ... the ... ... the hoard giving you the exact time. You will simply touch a spring hold the watch to your ear, and the little fairy on the inside will whisper the hour.

INFORMATION reaches us that the American followers of Swami Vivekananda are going to start a monthly magazine from 168, Brattle Street Cambridge, Mass U S A in order to keep up the work which the Swami has begun there. It will treat chiefly on *Bhakti* and *Karma Yogis*.

MR Chamberlain, replying to a question by Mr Redmond, in the House of Commons, said that he had received a memorial signed by nine thousand Mussulmans of Ceylon com*plaining of the dismissal of Mr De Meurier* from the Civil Service. The most influential members of the Mussulman community had, he said, abstained from signing the memorial.

LI Hung-Chang has arrived at Brussels. The Japanese Minister at Berlin who has been interviewed, stated that Japan was in nowise disturbed by the splendid reception granted to Li Hung Chang in Germany. He regards it simply as an honour paid to the Envoy of a Great Empire, and as devoid of any political importance. The stated triple alliance of Japan, China, and Russia was, he s..., a fiction.

THE Belgaum correspondent of the *Kesary* writes —Narayan Bava Ghomande, the preacher of the Bharat Dharma Parishad of Bombay, delivered several learned lectures under the presidency of his Holiness Sree Jagatguru Sankaracharya of Sankeshwar on the necessity of establishing the Parishad and its duties. His Holiness as a mark of his appreciation of the learned lecture gave a donation of Rs 1,000 to the Bombay Parishad.

The *Times* in a special article on Indian Affairs, says that the late debate in the House of Commons on the Indian Contingent at Suakim has had a great result in obtaining the recognition by the British Government of the reciprocal obligations of Great Britain and India, which the Indian Government have always urged. Declarations of the party chiefs hold out a promise of fairer treatment for India in future, and India may, therefore, now gratefully accept the tardy instalment of justice granted.

A VERY interesting lecture was delivered on Wednesday evening, by Professor J C Bose at the Institution for the Higher Training of Young Men Calcutta, to a crowded audience on Tesla's other experiments and the Rontgen rays. The lecturer gave several practical demonstrations illustrating the properties of these rays, and among others he demonstrated the possibility of telling true from false diamonds by means of the rays which passed clean through the genuine stones, but the false ones left an opaque shadow.

WE learn that the Agent of His Holiness Sree Sankaracharya of Kumbakonam, has made an application to the Government of Madras, to record his sanction for touring *throughout the Presidency with his large* retinue. Some of his disciples seem to be of opinion that His Holiness should not leave his head quarters at present, as his extreme youth and his literary talents are such as cannot command the respect of the public. We also learn that a petition will be forwarded to Government praying it not to accord its sanction.

"AN important improvement," says the *Pioneer* "is being carried out in the method of defacing stamps on letters when passing through the post offices in India. Hitherto the name of the office and the date, with figures or letters conveying certain meaning to the postal officials, have been used. Now, however, the *hour* at which the letters are taken out of the receiving boxes and dealt *with in the offices is impressed upon the* stamp. Thus we have before us an envelope bearing the mark —"Simla, 4 Jl 96—5 P. M.," and another from Bombay with "5 50 P M," stamped upon it. In this way complaints as to delays can be more readily investigated, and the public can see at a glance exactly when their letters they receive have been posted." We wonder why, when the new system has been introduced in Simla and Bombay, it has not yet found its way to Madras.

Local and Provincial

THE PLANTER'S ENQUIRY COMMISSION — Commenced in Bangalore in the Public Buildings on Monday last. Several witnesses have been examined.

THE PITE LIFE CASE.—The hearing of this case has been adjourned from the 16th of this month to the 28th in consequence of the evidence required not having been taken in Madras.

A BOUNDARY TO BE SETTLED.—Commissioners are to meet next October to settle the boundary line between the Mysore and British territories. The Mysore Commissioners will be Colonels Grant and Campbell Walker.

A COMMITTEE.—Will sit, we learn, some*time in October next, to settle the boundary* dispute between Mysore, the Nilgiri, Wynaad and the Gundalpet frontiers. Cols Grant, and Campbell Walker will represent the Durbar.—D M

THE WEATHER.—We have had a few showers, but a good deal more rain is required. The wind that was so high a short time ago, has somewhat abated, and more rain may now fall. The ryots have not yet ploughed much of their ground, and it is feared that the season will be a backward one.

THE FOREST DEPARTMENT.—We learn that Colonel Campbell Walker, Conservator of Forests in Mysore, has recommended the names of Srinivasa Rao and another Ranger of the same name for promotion as Sub-Assistant Conservators. Both the aforesaid Rangers are the students of the Doora Doon College, and the former has put in over 15 years service in the forest branch. It is to be hoped that the Durbar will accord sanction as they richly deserve it.—D M

A PROSECUTION.—We learn that a charge of criminal intimidation is filed or likely to be filed against Mr A Kristnaswamy Iyengar, Deputy Commissioner of Hassan and Mr A Veeraraghavulu Naidu, Amildar of Arsikere. From the facts of the case placed at our disposal we think that these two officials have attempted to display acts of despotism for which they ought to suffer. It is believed that an eminent counsel for the complainant will be engaged from Madras.—D M

THE *Mysore Standard* is glad that both the young ladies who passed the last Upper Secondary Examination from the Maharani's Girls' School—Gouramma and Janakammah—have now successfully undergone an examination which was held last month in the theory and practice of teaching. These young ladies, we believe, are the first to obtain regular teachers' certificates. The second of the candidates is an unfortunate widow—a relation of Mr. A Narasim Iyengar. It is likely that the Government of Mysore will provide suitable employments for both

The Mysore Gazette.

Bangalore, Thursday, 16th July 1896
NOTIFICATIONS BY THE GOVERNMENT OF MYSORE

GENERAL AND REVENUE

No 770—*J*. 53, *dated* 15*th July* 1896

Under Section 12 of the Code of Criminal Procedure the undermentioned Amildars and Deputy Amildars are invested with the powers of a Magistrate of the third class —

B Krishna Singh, Amildar, Heggaddevankote taluk
C. Venkata Rao, Amildar, Nanjangud taluk
M Ranga Rao, Amildar, Devanhalli taluk.
C Krishnama Naidu, Deputy Amildar, *Gudibanda sub-taluk*
D. Subba Rao, Deputy Amildar, Seringapatam subtaluk
M Ranganatha Rao, Deputy Amildar, Harihar sub taluk
M Krishnaswamaiengar, Deputy Amildar, Srinivaspur sub taluk
Chinnappavu Pillo, Deputy Amildar, Kumsi sub-taluk,

No 808—*Mis* 140, *dated* 15*th July* 1896

Her Highness the Maharani Regent has been pleased to make the following appointments —

1 Mr B Lingaraj Aras to be Durbar Bakshi, with effect from the date on which he assumed charge of that office
2 Mr. M Shama Rao to be Superintendent of the Palace stables

No 203—*R* 56, *dated, 9th July* 1896

A Krishnaswamaiengar, B A, is appointed to act as Deputy Amildar and 3rd class Magistrate, Closepet, during the employment of Tirunarannaiengar as Amildar and 3rd class Magistrate of Yelandur, or until further orders (*To join forthwith*)

No 206—*R* 59, *dated, 9th July* 1896

Under Article 188 of the Mysore Service Regulations, Mr P Venkata Rao, Extra Assistant Commissioner, Tumkur District, is granted privilege leave of absence for two months and twenty five days with effect from 1st July 1896, prior to his retirement which will take effect from the date of the expiry of the leave,

No. 231—*R* 67, *dated 9th July* 1896

Under Article 188 of the Mysore Service Regulations, Mr. B C Krishnaiengar, Sub *Division Officer, Chickballapur, is granted* privilege leave of absence for two months with effect from the 13th July 1896 or such other date as he may avail himself of the same

Mr K S Doraswami Iyer, General Assistant Commissioner, Kolar district, will be in charge of the Chikballapur sub-division during the absence of Mr B C Krishnaiengar on leave or until orders

No 274—*R* 71, *dated*, 10*th July* 1896

The following transfers and postings of *Deputy Amildars* are ordered —

Sira Mouidin Ali, from Srinivaspur to Yedahalli, (to join on being relieved)
M Krishnaswamiengar, B A, to Srinivaspur (to join forthwith)
M Ranganatha Rao, B A to Harihar, (to join on being relieved)
D Subba Rao to Seringapatam
C Krishnama Naidu to Gudibanda, (to join forthwith)
Chinnappavu Pillo to Kumsi, (to join forthwith)

No 284—*R* 81, *dated*, 10*th July* 1896

The *following transfers and postings* of Amildars are sanctioned —

C Shamaiengar, from Hiriyur to Nagamangala,
D Narasinga Rao to the Hiriyur taluk, (to join forthwith)
C Venkata Rao to the Nanjangud taluk, (to join forthwith)
G R Srinivasaiengar, *from Davangere to* Mudgere (to join on being relieved)
Mahadeva Rao, *from* Mulbagal *to* Davangere (*to join on the expiry of his leave*)
Venkatasubbaiya, from Chintamani to Mulbagal (to join on being relieved)
Yello Srinivasa Rao to the Chintamani taluk (to join forthwith)
T Ramachandra Rao, from Heggaddevankote to Sagar (to join on being relieved)
B Krishna Sing to Heggaddevankote, (to join forthwith).
S Krishna Iyer, from Molakalmuru to Kolar (to join forthwith)
V Parthasarathiengar, from Kunigal to Molakalmuru (to join on being relieved)
Vengeri Krishna Rao, from Mudgere to Yedatore (to join on being relieved)
Kantiravachar, from Chiknayakanhalli to Kankanhalli (to join on being relieved)
D Subba Rao to Chiknayakanhalli (to join forthwith)
K R Subba Rao, from Shikarpur to Hunsur (to join on being relieved)
Kundapur Subba Rao, to Shikarpur, (to join forthwith
T Chokkanna, from Devanhalli to Bowringpet (to join forthwith)
R Shama Rao to Kunigal (to join forthwith)
P Sitaramaiya, from Bowringpet to Bangalore, *(to join on being relieved)*
M Ranga Rao to Devanhalli (to join on being relieved)
Hassan Ali Beg, from Malvalli to Seringapatam (to join on the expiry of leave)
Krishna Aras, from Yedatore to Malvalli (to join on being relieved)

No 312—*R* 97 *dated*, 11*th July* 1896

The following transfers and postings of Assistant Commissioners are ordered —

Mr Knight, from Hassan to Bangalore, (to join on being relieved)
Mr K Srinivasa Rao, from Bangalore to Tumkur, (to join on being relieved)
Mr K R Srinivasaiengar, from Mysore to Tumkur, (to join on being relieved)
Mr V Srinivasacharlu, from Tumkur to Mysore, (to join on being relieved)
Mr B Narasimaiengar, from Kolar to Mysore (to be attached to the French Rocks sub div)
Mr K S Chandrasekharam Iyer, from Hassan to Kolar
Mr T Paramasiva Iyer to Hassan
Mr Mir Hamza Hussen to Mysore, (to join on being relieved)
Mr C. Seshadriengar to Hassan, (to join *forthwith*)
Mr C B Seshagiri Rao to Shimoga, (to join on completion of special duty)
Mr Mir Nizamudin Ali Khan to Chitaldrug, (to join on being relieved)

No 327—*R* 108 *dated, 11th July* 1896

Under Article 188 of the Mysore Service Regulations Mr. G. Raghunatha Rao, Sub Division Officer, Sagar, is granted privilege leave for three months with effect from 3rd July 1896, prior to his retirement which will take effect from the date of the expiry of the leave

Extracts.

PHOTOGRAPHING THOUGHT

The Paris correspondent of the *Standard writes under date June 16* —It may be rash to pronounce that anything is beyond the photographer's art But the communication just made to the *Paris Academie de Medecine* by Dr Baraduc is so astonishing that if he had made it before Dr Rontgen had rendered his discovery public, very few people would have been inclined even to inquire into the *matter* Indeed, Dr Baraduc affirms he has succeeded in photographing thought, and he has shown numerous photographs in proof of his assertion His usual method of proceeding is simple enough The person whose thought is to be photographed enters a dark room, places his hand on a photographic plate and thinks intently of the object the image of which he wishes to see produced It is stated by those who have examined Dr Baraduc's photographs that most of them are very cloudy, but that a few are comparatively distinct, representing the features of persons and the outlines of things Dr Baraduc goes further and declares that it is possible to produce a photographic image at a great distance In his communication to the *Academie de Medecine* he relates that Dr Istrate, when he was going to Campana, declared he would appear on a photographic plate of his friend, M Hasden, at Bucharest On the 4th August 1893, M Hasden at Bucharest went to bed with a photographic plate at his feet and another at his head Dr Istrate went to sleep at Campana, at a distance of about three hundred kilometres from Bucharest, but before closing his eyes he willed with all his might that his *image should appear* on the photographic plate of his friend According to Dr Baraduc that marvel was accomplished Journalists who have examined the photograph in question state that it consists of a kind of luminous stop on the photographic plate, in the midst of which can be traced the profile of a man

ಕರ್ನಾಟಕ ಪ್ರಕಾಶಿಕಾ.

೧೮೯೬ನೇ ಇಸವಿ ಜುಲೈ ತಾ|| ೨೦ನೇ ಸೋಮವಾರ

ರಿಜಿಸ್ಟ್ರೇಷನ್ ಇಲಾಖೆಯಲ್ಲಿ ಆಗುವದಾಗಿರುವ ಬದಲಾವಣೆಗಳು.

ಬೆಂಗಳೂರು ಸಿಟಿ ಸಬ್‌ರಿಜಿಸ್ಟ್ರಾರಾಗಿರುವ ಮ|| ಬಿ. ಗಂಗಯ್ಯನವರು ಪೆನ್ಷನ್‌ಮೇಲೆ ಕೆಲಸದಿಂದ ನಿವೃತ್ತಿಯಾಗುವದಕ್ಕೆ ತಕ್ಕಷ್ಟು ನಯನ್ನೂ ನೌಕರಿಯ ಕಾಲವು ಕಳೆದ ಸಂವತ್ಸರದಲ್ಲೇ ಪೂರ್ತಿಯಾಗಿದ್ದಾಗ್ಯೂ ಗವರ್ನಮೆಂಟಿನವರು ದಯಾರ್ದ್ರಭಾವವಾಗಿ ಮರಳಿ ಒಂದು ಸಂವತ್ಸರ ಕಾಲದವರೆಗೆ ಅವರು ನೌಕರಿಯಲ್ಲಿರಬಹುದೆಂದು ಹುಕುಂಮಾಡಿದ್ದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಸದರೀ ಮಾಯಿದೆಯು ಕಳೆದಜೂನ್ ತಿಂಗಳ ಆಖೈರೊಡನೆ ಪೂರ್ತಿಯಾದುದರಿಂದ ಈಗ ಮ|| ಗಂಗಯ್ಯನವರಿಗೆ ಪೆನ್ಷನ್ ಕೊಟ್ಟು ಅವರು ಪಡೆಯುತಲಿದ್ದ ನಾನೂರೈವತ್ತು ರೂಪಾಯಿಗಳ ತಲಬಿಗೆ ಎಪ್ಪತ್ತು ಮತ್ತು ಐವತ್ತರಂತೆ, ಬೆಂಗಳೂರು ಸಿಟಿಗೆ ಒಬ್ಬರು, ತಾಲ್ಲೂಕಿಗೆ ಒಬ್ಬರು, ಈ ಮೇರೆ ಇಬ್ಬರು ಸಬ್ ರಿಜಿಸ್ಟ್ರಾರಗಳನ್ನಿಡಬೇಕೆಂದು ನಿಷ್ಕರ್ಷೆಯಾಗಿರುವುದು ಮಾತ್ರವಲ್ಲದೆ, ಬೆಂಗಳೂರು ಸಿಟಿ ಸಬ್ ರಿಜಿಸ್ಟ್ರಾರ್ ಕೆಲಸಕ್ಕೆ ಮಾಹೆಯಾನಾ ೭೦ ರೂಪಾಯಿಗಳ ತಲಬಿನಮೇಲೆ ಮ|| ಗಂಗಯ್ಯನವರನ್ನೇ ಮೊಕರರ್ಮಾಡತಕ್ಕದ್ದೆಂದು ಸಭ ಯೋಚ್ಯವಾಗಿರುವಂತೆ ಕೇಳುತ್ತೇವೆ ಈ ಏರ್ಪಾಡು ಕೇವಲ ಅನುಚಿತವಾದುದೆಂದು ನಮ್ಮಂತೆ ಅನೇಕರು ಅಭಿಪ್ರಾಯ ಪಡದೆ ಹೋಗಲಾರರು, ಏತಕ್ಕೆಂದರೆ, ಮ|| ಗಂಗಯ್ಯನವರು ಇನ್ನು ನೌಕರಿ ಮಾಡುವದಕ್ಕೆ ಶಕ್ತರಾಗಿರುತ್ತಾರೆಂದು ಗವರ್ನಮೆಂಟಿಗೆ ತೋರುವಪಕ್ಷದಲ್ಲಿ ಅವರಿಗೆ ಇನ್ನು ಒಂದೆರಡು ವರ್ಷಗಳ ಕಾಲ ಮಾಯಿದೆ ಕೊಡುವದಕ್ಕೆ ಗವರ್ನಮೆಂಟಿನವರು ಸ್ವತಂತ್ರರಾಗಿರುತ್ತಾರೆ. ಅದಂ ಬಿಟ್ಟು ಅವರಿಗೆ ಪೆನ್ಷನ್ ಕೊಟ್ಟು ೭೦ ರ ತಲಬಿನಮೇಲೆ ಅವರನ್ನೇ ಅದೇ ಕೆಲಸದಲ್ಲಿಟ್ಟರೆ ಸದರೀ ಇಲಾಖೆಯಲ್ಲಿರುವ ಎರಡು ಮೂರನೆಯ ತರಗತಿ ಸಬ್ ರಿಜಿಸ್ಟ್ರಾರಗಳ ಬಡ್ತಿಗೆ ಅವಕಾಶ ತಪ್ಪಿ, ಅವರೆಲ್ಲರು ಭಗ್ನಮನಸ್ಕರಾಗಿ, ಅವರ ಕರ್ತವ್ಯದಲ್ಲಿ ಅವರಿಗೆಲ್ಲ ಪ್ರೋತ್ಸಾಹ ಭಂಗವೂ, ತನ್ಮೂಲಕ ಅಶ್ರದ್ಧೆಯೂ ಉಂಟಾಗಲಾರದೆ? ಪೆನ್ಷನ್ ಪಡೆದವರನ್ನು ಮರಳಿ ಕೆಲಸದಲ್ಲಿಡುವ ಪದ್ಧತಿಯೆಂದೇರ್ಪಟ್ಟಮೇಲೆ ಅದನ್ನನುಸರಿಸಿ ಇನ್ನು ಅನೇಕರು ಅದೇರೀತಿ ಆಶಿಸಲಾರರೆ? ಅದನ್ನು ಅಕ್ರಮವೆಂದು ಹ್ಯಾಗೆ ಹೇಳಬಹುದು? ಇದೂ ಅಲ್ಲದೆ ಒಂದುಇಲಾಖೆಯಲ್ಲಿ ಖಾಲೀಯಾಗುವ ಕೆಲಸಗಳಿಗೆ, ಯಾವ ಭಾಗದಲ್ಲೂ ಯಾವ ವಿಧದಲ್ಲೂ ಸ್ವಲ್ಪವೂ ಸಂಬಂಧವಿಲ್ಲದ ಬೇರೆ ಇಲಾಖೆಗಳ ಜನಗಳನ್ನು ಚುನಾಯಿಸಿ ಮೊಕರರ್ಮಾಡುತ ಬಂದರೆ ಖಾಲೀಯಾಗುವ ಇಲಾಖೆಗಳಲ್ಲಿ ಅನೇಕ ಸಂವತ್ಸರಗಳ ಕಾಲ ಕ್ರಮಪಟ್ಟು ತೃಪ್ತಿಕರವಾಗಿ ಕೆಲಸ ಮಾಡುತಲಿರುವ ಕೆಳಪಟ್ಟ ನೌಕರರ ಬಡ್ತಿಗೆ ಸುತರಾಂ ಅವಕಾಶ ತಪ್ಪಿಹೋಗುವದಿಲ್ಲವೆ? ಇವನ್ನೆಲ್ಲ ಆಲೋಚಿಸಿದರೆ, ಈ ಸಂಸ್ಥಾನದ ಪ್ರಕೃತ ಆಡಳಿತಕ್ರಮವು ಕೇವಲ ನಿರಂಕುಶವಾದುದೆಂದು ಹೇಳುವದರಲ್ಲಿ ಯಾವ ಬಾಧಕವೂ ಕಂಡು ಬರುವದಿಲ್ಲವು ಶ್ರೀಮನ್ಮಹಾರಾಣೀ ರೀಜಂಟರವರ ರಾಜ್ಯಭಾರ ಕಾಲದಲ್ಲಿ ಪ್ರಜೆಗಳು ನಿರೀಕ್ಷಿಸುತಲಿರುವ ಫಲಪ್ರಾಪ್ತಿಗೆ ಕಾಲವು ಇನ್ನೂ ದೂರವಾಗಿದೆಯೆಂದು ಯೋಚಿಸಬೇಕಾಗಿರುವದಕ್ಕಾಗಿ ಬಹಳ ಚಿಂತಿಸುತ್ತೇವೆ.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ

ಮೇಲಿನ ಪರೀಕ್ಷೆಯ ವಿಷಯದಲ್ಲಿ ನಮಗೆ ತಿಳಿಯಬಂದಿದ್ದ ಪ್ರವಾದರೂಪವಾದ ವೃತ್ತಾಂತವನ್ನು, ಸ್ವಾಭಿಪ್ರಾಯ ಪೂರ್ವಕ ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ. ಅದರಿಂದೀಚೆಗೆ ನಮಗೆ ತಿಳಿಯಬರುವದರಲ್ಲಿ, ಸದರೀವಿಷಯವು ಪ್ರಜಾಸಂಸ್ಥಾನದ ಕೌನ್ಸಿಲ್ ಮುಂದೆ ವಿಚಾರಕ್ಕೆಬಂದು ಅದರ ಮೆಂಬರಗಳು ತಮ್ಮತಮ್ಮ ಅಭಿಪ್ರಾಯಗಳಂ ಲೇಖನ ರೂಪವಾಗಿ ಕೊಟ್ಟು ಅಥವಾ ಕೊಡುವವರಾಗಿರುತ್ತಾರೆಂದು ಕೇಳುತ್ತೇವೆ ಈಗ ಕೌನ್ಸಿಲಿಗೆ ಸೇರಿರುವ ಮೆಂಬರಗಳಲ್ಲಿ ಪ್ರಾಯಶಃ ಯೆಲ್ಲರು ಸ್ವದೇಶಾಭಿಮಾನ ಪ್ರಿಯವರೆಂತಲೂ, ಪ್ರಜಾಭಿಪ್ರಾಯಾನುಸಾರವಾಗಿಯೇ ತಮ್ಮ ಮುಂದೆ ಬರುವ ವಿಷಯಗಳಂ ವ್ಯವಸ್ಥೆ ಮಾಡುವರೆಂತಲೂ ವಿದ್ಯಾವಂತರಾದ ಸ್ವದೇಶಿಯರಿಗುಂಟಾಗಿರುವ ನಂಬಿಕೆಗೆ ಯಾವ ಭಾಗದಲ್ಲೂ ಲೋಪ ವುಂಟಾಗದಿರುವಂತೆ, ಪ್ರಸಕ್ತ ಪರೀಕ್ಷೆಯು ಮೈಸೂರು ದೇಶೀಯರಿಗೆ ಮಾತ್ರ ಉದ್ದಿಷ್ಟವಾಗಿರತಕ್ಕದ್ದೆಂದು ಅಭಿಪ್ರಾಯ ಕೊಡುವುದು ಅವರಿಗೆ ಭೂಷಣವಾಗಿರುವುದು ಮಾತ್ರವಲ್ಲದೆ, ಅವರಲ್ಲಿ ಈಗ ಪ್ರಜೆಗಳಿಗುಂಟಾಗಿರುವ ನಂಬಿಕೆ, ಮತ್ತು ಪ್ರೀತಿಗೌರವಗಳು ವಿಶೇಷತಃ ದೃಢ ಪಡುವದಕ್ಕೆ ಕಾರಣವಾಗಿರುವುದು. ಮತ್ತು ಇಂತ ವಿಷಯಗಳಲ್ಲಿ ಪ್ರಜಾಭಿಪ್ರಾಯಗಳಂ ಗೌರವಿಸಿ ತದನುಸಾರವಾಗಿ ನಡೆಸುವಣವೇ ಗವರ್ನಮೆಂಟಿನವರಿಗೆ ಕರ್ತವ್ಯವಾಗಿರುತದೆ.

Occasional Notes
ನೈಮಿತ್ತಿಕ ವಿಷಯನ್ಯಾಸ

ಈಚೆಗೆ ನಡೆದ ಬಿ ಎಲ್ ಪರೀಕ್ಷೆಯ ಪ್ರಥಮ ಭಾಗಕ್ಕೆ ಹೋಗಿದ್ದ ೫೫೫ ಜನರಿಂದ ಉಮೇದವಾರರಲ್ಲಿ ೧೩ಮಂದಿಯೇ ತೇರ್ಗಡೆಯಾಗಿರುತ್ತಾರೆ

ಈ ಸಂವತ್ಸರದಲ್ಲಿ ಅಫೀಂಹುಟ್ಟುವಳಿಯು ಅಂದಾಜಿಗಿಂತಲು ಹನ್ನೆರಡುವರೆ ಲಕ್ಷ ರೂಪಾಯಿಗಳು ಕಡಮೆ ಯಾಯಿತೆಂದು ಸರ್ಕಾರೀ ರಿಕ್ಕದ ಮೂಲಕ ತಿಳಿಯಬರುತಿದೆ

ಲಂಡನ್ ಪಟ್ಟಣದ ಪ್ರಜಾ ಸಂಖ್ಯೆಯು ಪ್ರತಿ ಸಂವತ್ಸರದಲ್ಲೂ ಎಪ್ಪತ್ತುಸಾವಿರದಂತೆ ವೃದ್ಧಿಯಾಗುತಬರುವದಾಗಿ ವಿಲಾಯತಿ ಪತ್ರಿಕೆಯೊಂದು ತಿಳಿಸುತಿದೆ.

ತಿರುವಾಂಕೂರು ಮಹಾರಾಜರವರ ಜ್ಯೇಷ್ಠಭಾರ್ಯೆಯವರ ತಾಯಿಯವರು ಈ ತಿಂಗಳ ೧೨ನೇ ತಾರೀಖಿನಲ್ಲಿ ಕಾಲಗತಿಯನ್ನೈದಿದ್ದರಿಂದ ಶ್ರೀಮನ್ಮಹಾರಾಜರವರ ರಾಮೇಶ್ವರ ಯಾತ್ರೆಯು ಸದ್ಯಃ ನಿಲ್ಲಿಸಲ್ಪಟ್ಟಿತೆಂದು ತಿಳಿಯಬರುತಿದೆ

ಕೊಲ್ಹಾಪುರದ ಮಹಾರಾಜರವರು, ಕೈಗಾರಿಕೆ ವಿದ್ಯೆಯಂ ಕಲಿತು ಬರುವದಕ್ಕಾಗಿ ಜರ್ಮನ್ ದೇಶಕ್ಕೆ ಹೋಗುವ ತಮ್ಮ ದೇಶದವನೊಬ್ಬನಿಗೆ ಸಾಲೀಯಾನಾ ೮೦೦ ರೂಪಾಯಿಗಳು ವಿದ್ಯಾರ್ಥಿವೇತನ ಕೊಡುವದಾಗಿ ತಿಳಿಸಿರುತ್ತಾರೆ

ಬರುವ ನವಂಬರ್ ತಿಂಗಳ ಆದಿಭಾಗದಲ್ಲಿ ವೈಸ್‌ರಾಯ್ ಸಾಹೆಬರವರು ದೇಶ ಸಂಚಾರ ಮಾಡುವಂತೆ ನಿಷ್ಕರ್ಷೆಯಾಗಿರುವುದು ಮಾತ್ರದಲ್ಲದೆ ಸದರೀ ಸಂದರ್ಭದೊಳು ಬರೋಡೆ ಸಂಸ್ಥಾನಕ್ಕೆ ಹೋಗಬೇಕೆಂದು ವ್ಯವಸ್ಥೆಯಾಗಿದೆ.

ಕಳೆದ ಜೂನ್‌ತಿಂಗಳ ೧೫ನೇ ತಾರೀಖಿನಲ್ಲಿ ಜಪಾನ್ ರಾಜ್ಯದೊಳು ತುಫಾನ್ ಹೊಡೆದು ಸಮುದ್ರ ಉಕ್ಕಿ ಒಂದುಕಡೆ ಪಟ್ಟಣದೊಳು ನೀರು ಪ್ರವೇಶಿಸಿ ೨೭ ಸಾವಿರಮಂದಿ ಮೃತಪಟ್ಟದ್ದುಮಾತ್ರವಲ್ಲದೆ ೨೫ ಸಾವಿರಮಂದಿಗೆ ಘಾಯಗಳಾದವೆಂದು ತಂತಿ ವೃತ್ತಾಂತ ಬಂದಿರುತಿದೆ.

ಹಿಂದೂ ಅರಸರುಗಳಲ್ಲಿ, ಈಗ ಜ್ಞಾಪಕವಿರುವವರೆಗೆ, ಇಂಡ್ಯಾ ರಾಜ್ಯದ ಸರಹದ್ದು ದಾಟಿ ಹೋಗಿ ಯುದ್ಧಮಾಡಿ ಜಯವಂ ಹೊಂದಿ ಬಂದುಅದರ ಜ್ಞಾಪಕಾರ್ಥ ತಮ್ಮ ಸೈನ್ಯಕ್ಕೆ ಬಿರುದುಗಳಂ ಕೊಟ್ಟವರು ಕಾಶ್ಮೀರ ದೇಶದ ಮಹಾರಾಜರವರಾದ ರಣವೀರಸಿಂಗರೊಬ್ಬರೇ ಯೆಂದು ಒಂದಾನೊಂದು ಪತ್ರಿಕಾ ಲೇಖಕರು ತಿಳಿಸುತ್ತಾರೆ.

ಕುಂಭಕೋಣದ ಶ್ರೀಶಂಕರಾಚಾರ್ಯ ಸ್ವಾಮಿಗಳವರು ತಮ್ಮ ಶಿಷ್ಯಾನುಗ್ರಹಾರ್ಥ ದೇಶ ಸಂಚಾರ ಮಾಡಬೇಕೆಂದು ಯೋಚಿಸಿ ಆ ಬಗ್ಗೆ ತಮಗೆ ಅಪ್ಪಣೆ ಕೊಡಬೇಕೆಂದು ಮದರಾಸ್ ಗವರ್ನಮೆಂಟಿಗೆ ಅರ್ಜಿ ಬರೆದು ಕೊಳ್ಳಲು, ಸದರೀ ಮಠದ ಶಿಷ್ಯಮಂಡಲಿಗೆ ಸೇರಿದವರಲ್ಲಿ ಕೆಲವರು, ಶ್ರೀಸ್ವಾಮಿಗಳವರು ಕೇವಲ ಬಾಲ್ಯದಶೆಯಲ್ಲಿರುತ, ಪ್ರಜೆಗಳಿಂದ ಗೌರವಿಸಲ್ಪಡುವದ

ಕ್ಕೆ ರಕ್ಕಪಟ್ಟ ವಿದ್ಯಾವೈದುಷ್ಯವಂ ಇನ್ನು ನಡೆಯದಿರುವದರಿಂದ ಈಗ ಸ್ವಾಮಿಗಳವರು ಪರಸ್ಥಳಗಳಿಗೆ ಹೋಗುವಣವು ಉಚಿತವಲ್ಲವೆಂದು ಅಭಿಪ್ರಾಯಪಟ್ಟು ಗುರುಗಳವರು ಅಪೇಕ್ಷಿಸಿರುವಂತೆ ಅಪ್ಪಣೆ ಕೊಡಕೂಡದೆಂದು ಗವರ್ನ್ಮೆಂಟಿಗೆ ಅರ್ಜಿ ಸಹ ಬರೆಯುವ ಪ್ರಯತ್ನದಲ್ಲಿ ದಾರೆಂದು ಕೇಳುತ್ತೇವೆ

ಪೋಸ್ಟಾಫೀಸಿದ್ವಾರಾ ನಾವು ಪರಸ್ಥಳಗಳಿಗೆ ಕಳುಹಿಸುವ ಲಕೋಟೆಗಳ ಮೇಲೆ ಅವು ಹೊರಡುವ ಸ್ಥಳ ಮತ್ತು ತಾರೀಖುಗಳುಳ್ಳ ಮೊಹರ್ ಹಾಕಲ್ಪಡುತಿದೆಯಷ್ಟೆ. ಈಗ ಹೊಸದಾಗಿ ಮಾಡಿ ಕೆಲವುಪ್ರದೇಶಗಳೊಳು ಜಾರಿಯಲ್ಲಿ ತಂದಿರುವ ಮೊಹರ್‌ಗಳಲ್ಲಿ ಸ್ಥಳ, ತಾರೀಖುಗಳಲ್ಲದೆ ಯೆಷ್ಟು ಘಂಟೆಗೆ ಲಕೋಟೆಗಳು ಪೆಟ್ಟಿಗೆಯಿಂದ ತೆಗೆಯಲ್ಪಡುತಿವೆಯೊ ಅದು ಸಹ ತಿಳಿಯುವಂತೆ ಮೊಹರ್‌ನಲ್ಲಿ ಸೇರಿಸಿರುತ್ತಾರೆ ಇದರಿಂದ ಲಕೋಟೆಗಳು ಗಾವತಿಯಾಗುವದರಲ್ಲಿ ಉಂಟಾಗುವ ಹರಕತ್ತುಗಳಂ ಕುರಿತ ಫಿರ್ಯಾದುಗಳನ್ನು ವಿಚಾರಣೆ ಮಾಡುವದಕ್ಕೆ ಪೋಸ್ಟ್‌ಮಾಸ್ಟರುಗಳಿಗೆ ಸಂಪೂರ್ಣ ಅವಕಾಶ ವುಂಟಾಗುವದು ಮಾತ್ರವಲ್ಲದೆ ಉಚಿತಕಾಲದಲ್ಲಿ ಆಸಾಮಿಗಳಿಗೆ ಲಕೋಟೆಗಳು ತಾವತ್ತು ಯಾಗುವದಕ್ಕೆ ಕಾರಣವಾಗಿರುವದು

ಮದರಾಸ್ ಪ್ರೆಸಿಡೆನ್ಸಿ ರಿಜಿಸ್ಟ್ರಾರ್ ಜನರಲಾಗಿದ್ದ ಮೆ|| ಶ್ರೀನಿವಾಸ ರಾಘವಯ್ಯಂಗಾರ್‌ರವರು ಬಡೋದೆ ಸಂಸ್ಥಾನದ ದಿವಾನರವರಾಗಿ ನೇಮಕ ಮಾಡಲ್ಪಟ್ಟು ಈ ತಿಂಗಳ ೧೧ನೇ ತಾರೀಖಿನಲ್ಲಿ ಮದರಾಸ್‌ನಿಂದ ಬಡೋದೆಗೆ ಪ್ರಯಾಣವಾಡಿ ತಂಪ್ಪು ಈ ಸೋಮವಾರ ನಿಜ್ಯರು ಕಳೆದ ಬುಧವಾರ ದಿನ ಬೆಳಗ್ಗೆ ಬಡೋದೆಯಂ ಸೇರಿದರು. ಶ್ರೀನಿವಾಸ ರಾಘವಯ್ಯಂಗಾರ್‌ರವರ ರೈಲು ಗಾಡಿ ಬರುವ ವೇಳೆ ಸಂಸ್ಥಾನದ ಅಧಿಕಾರಿಗಳನೇಕರು ರೈಲ್ವೇ ಸ್ಟೇಷನ್ನಿನಲ್ಲಿ ಹಾಜರಿದ್ದು ಹೊಸ ದಿವಾನರನ್ನು ಉಚಿತ ಮರ್ಯಾದೆಯಿಂದ ಬರಮಾಡಿಕೊಂಡರು ಅದೇ ದಿನದ ಹಗಲು ೧೧ ಘಂಟೆಗೆ ಮಹಾರಾಜರವರು ಅರಮನೆಯಲ್ಲಿ ದರ್ಬಾರ್ ಮಾಡಿ ಮೆ|| ಶ್ರೀನಿವಾಸ ರಾಘವಯ್ಯಂಗಾರ್‌ರವರನ್ನು ತಮ್ಮ ಸಂಸ್ಥಾನದ ದಿವಾನರನ್ನಾಗಿ ನಿಯಮಿಸಿ ಅವರಿಗೆ ಅನರ್ಘ್ಯವಾದ ಮುತ್ತಿನ ಕಂಠಿ, ಉಂಗುರ, ಮತ್ತು ಶಾಲುಜೋಡಿಯನ್ನು ಕೊಟ್ಟರು ದಿವಾನರವರು ಕೂಡಲೆ ಘೋಡಾ ಮೇಲೆ ಕುಳಿತು ಮುಂದುಗಡೆ ಸವಾರ್ ಸೇನೆಯು, ಹಿಂದುಗಡೆ ಸಂಸ್ಥಾನದ ಉದ್ಯೋಗಸ್ಥರು, ಇತ್ಯಾದಿ ವೈಭವಗಳಿಂದೊಡಗೂಡಿ, ಮೆರವಣಿಗೆ ಮಾಡಿಕೊಂಡು ತಮ್ಮ ವಾಸಸ್ಥಾನಕ್ಕೆ ವಾಪಸ್ ಹೋದರು ತರುವಾಯ ತಮ್ಮ ಮನೆಯಲ್ಲೇ ಒಂದು ದರ್ಬಾರ್ ಮಾಡಿದರು. ಮಾರನೆ ದಿನ ಕಚ್ಚೇರಿಗೆ ಹೋಗಲಾರಂಭಿಸಿದರು, ಎಂಬದಾಗಿ ಬಡೋದೆಯಿಂದ ತಂತಿ ವೃತ್ತಾಂತ ಬಂದಿರುತದೆ.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತಿ ವೃತ್ತಾಂತಗಳು

ಮೈಸೂರಿಂದ ನಂಜನಗೂಡಿಗೆ ೧೦ ಘಂಟೆಗೂ ನಂಜನಗೂಡಿನಿಂದ ಮೈಸೂರಿಗೆ ಮಧ್ಯಾಹ್ನ ೩ ಘಂಟೆಗೂ ಬಿಡುತ್ತಿರುವ ರೈಲನ್ನು ಮುಂದಿನ ತಿಂಗಳಿಂದ ನಿಲ್ಲಿಸಿಬಿಡುವರೆಂತ ಕೇಳುತ್ತೇವೆ. ವಿಶೇಷ ಜನ ಪ್ರಯಾಣ ಮಾಡುವದಿಲ್ಲವೆಂಬುವದೇ ಇದಕ್ಕೆ ಕಾರಣವೆಂದು ತೋರುತ್ತೆ.

ಚಾಮರಾಜ ನಗರದ ತಾಲ್ಲೂಕು ಹೊಂಗನೂರು ದೊಂಬಿ ಕಲಹದ ಮೊಕದ್ದಮೆಯಲ್ಲಿ ಹೋದವಾರ ಮೆ|| ಚಂಗಯ್ಯ ಶೆಟ್ಟರು ಸುಮಾರು ೧೯ ಮಂದಿ ಅಪರಾಧಿಗಳಿಗೆ ೯ ದಿನಗಳ ಲಾಗಾಯಿತು ೩ ತಿಂಗಳವರಿಗೆ ಬೇರೆ ಬೇರೆ ಸಜಾ ಶಿಕ್ಷೆಯನ್ನು ಕೊಟ್ಟರೆಂದು ತಿಳಿಯಲಾದೆವು

ಬೇಲೂರು ತಾಲ್ಲೂಕಿಗೆ ಸೇರಿದ ಹಾರೊರೆ ಗ್ರಾಮದಲ್ಲಿ ಒಂದು ಮನೆಯಲ್ಲಿ ಹೆಂಗಸು ಅನ್ನ ಮಾಡಿದ್ದು ಸರಿಯಾಗಿಲ್ಲವೆಂದು ಅವಳಗಂಡನು ಕೋಪಿಸಿಕೊಂಡು ಅವಳ ಬಲದ ಕೈಯನ್ನು ಉರಿಯುವ ಒಲೆಯೊಳಕ್ಕೆ ಚಾಚಿ ಸುಟ್ಟನೆಂತಲೂ ಕುಡುಗೋಲಿನಿಂದ ಅವಳ ತಲೇ ಕೂದಲನ್ನು ಕತ್ತರಿಸಿದನೆಂತಲೂ ವರ್ತಮಾನ ಕೇಳುತ್ತೇವೆ.

ನಿನ್ನೆಯದಿನ ಬೆಳಗ್ಗೆ ಸುಮಾರು ೧೦ ಘಂಟೆಗೆ ಶ್ರೀ ವ್ಯಾಸರಾಯ ಸ್ವಾಮಿಗಳವರು ತಮ್ಮ ಪರಿಜನರೊಡನೆ ಈ ಪುರಿಗೆ ದಯಮಾಡಿ ಇಲ್ಲಿನ ತುಳಸೀತೋಟದಬಳಿ ಯಿರುವ ಪೂರ್ಣಯ್ಯನವರ ಸತ್ರದಲ್ಲಿ ಇಳದಿರುತ್ತಾರೆ, ಮುಂದೆ ಶ್ರೀ ಸ್ವಾಮಿಗಳವರಿಗೆ ಈ ಪುರದಲ್ಲಿರುವ ಶಿಷ್ಯಮಂಡಲಿಗೆ ಸೇರಿದವರು ಮಾಡುವ ಪಾದಪೂಜೆ ಮೊದಲಾದ ವಿಶೇಷಗಳಂ ಮುಂದೆ ತಿಳಿಸುವೆವು

ಬೃಜಲಾಲ್‌ದಾಸ್ ಯವರ ಐದುಲಕ್ಷ ಚಿಲ್ಲರೆ ರೂಪಾಯಿಗಳ ಮೊಕದ್ದಮೆಯ ವಿಚಾರಣೆಯು ಈ ತಿಂಗಳ ೧೫ನೇ ತಾರೀಖಿಗೆ ಅಡ್ಜರನಾಗಿತ್ತಷ್ಟೆ. ಸಾಕ್ಷಿಗಳ ವಿಚಾರಣೆಯಬಗ್ಗೆ ಮದರಾಸಿಗೆ ಹೋಗಿದ್ದ ಸ್ಪೆಷಲ್‌ಕೋರ್ಟ್ ರಿಜಸ್ಟ್ರಾರ್ ಮೆ|| ಸಿ. ಬಿ ಶೇಷಗಿರಿರಾಯರವರು ಅಲ್ಲಿನ ಕೆಲಸಗಳಂ ತೀರಿಸಿಕೊಂಡು ಇನ್ನು ಬರಲಿಲ್ಲವಾಗಿ ಮೊಕದ್ದಮೆಯು ಈ ತಿಂಗಳ ೨೫ನೇ ತಾರೀಖಿಗೆ ಅಡ್ಜರ್ನ್ ಮಾಡಲ್ಪಟ್ಟಿದೆ

ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮೆ|| ಎ ಕೃಷ್ಣಸ್ವಾಮಯ್ಯಂಗಾರ್ ಮತ್ತು ಅರಸೀಕೆರೆ ಅಮಲ್ದಾರರು ವೀರರಾಘವುಲು ನಾಯುಡರವರು, ಇವರಿಬ್ಬರು ಸೇರಿ ಯಾರಿಗೂ ತಕ್ಸೀರ್ ಕರವಾದ ಭಯವನ್ನುಂಟು ಮಾಡಿದಂತೆಯೂ, ಅದಕ್ಕಾಗಿ ಅವರಿಬ್ಬರ ಮೇಲೂ ಕ್ರಿಮಿನಲ್ ಚಾರ್ಜ್ ತರಲ್ಪಟ್ಟು ಅಥವಾ ತರಲ್ಪಡುವದಾಗಿದೆ ಯೆಂತಲೂ ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ. ಇದರ ನಿಜಸ್ಥಿತಿಯು ಮುಂದೆ ತಿಳಿಯಬೇಕಾದುದಾಗಿದೆ

ಈ ದೇಶದ ಫಾರೆಸ್ಟ್ ಇಲಾಖೆಯಲ್ಲಿ ರೇಂಜರಾಗಿರುವ ಮೆ||ಎಚ್ ಶ್ರೀನಿವಾಸರಾವ್ ಮತ್ತು ಇನ್ನೊಬ್ಬರನ್ನು ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ದೋದೆಗೆ ಬಡ್ತಿ ಮಾಡಬೇಕೆಂದು ಫಾರೆಸ್ಟ್ ಕನ್ಸರ್ವೇಟರವರು ಗವರ್ನಮೆಂಟಿಗೆ ಶಿಫಾರಸ್ ಮಾಡಿ ಅನೇಕ ದಿನಗಳಾದಾಗ್ಯೂ ಅದನ್ನು ಮಂಜೂರ್ ಮಾಡುವ ವಿಷಯದಲ್ಲಿ ಗವರ್ನಮೆಂಟಿನವರು ಬಹಳ ಯೋಚಿಸುತಲಿರುವಂತೆ ಕಾಣುತಿದೆ. ಪ್ರಾಮಾಣಿಕರಾಗಿ ಕ್ರಮಿಸತಕ್ಕವರಿಗೆ ಪ್ರೋತ್ಸಾಹವನ್ನುಂಟುಮಾಡತಕ್ಕವರು ಈ ಕಾಲದಲ್ಲಿ ಕೇವಲ ವಿರಳರಾಗಿರುತ್ತಾರೆ

ಅರಮನೆಯ ಬಿದರ ಪಕ್ಷಿಗಳಾದ ಮೆ|| ಮುದ್ದುರಾಜೇ ಅರಸಿನವರಿಗೂ ಅವರ ಅಧಿಕಾರಕ್ಕೊಳಪಟ್ಟ ಬಿದರ ಚಾಕರನೊಬ್ಬನಿಗೂ ಕೆಲವು ಕಾಲದಿಂದ ವಾಗ್ವಾದ ನಡೆಯುತ್ತಿದ್ದು ಕಳೆದ ಗುರುವಾರ ಮಧ್ಯಾಹ್ನ ಆ ಚಾಕರನು ಪಕ್ಷಿರ ಮೇಲೆ ಬಿದ್ದು ಬಿದಬಿಯ ಹತ್ತಿರ ಜೋಳದಪವಾಡದಿಂದ ಹೊಡೆದುಬಿಟ್ಟನೆಂದು ಕೇಳಿದೆವು. ಅಧಿಕಾರಿಗಳು ಅಲ್ಪ ಸಂಬಳಗಾರರನ್ನು ಎದುರು ಹಾಕಿಕೊಳ್ಳದೆಯೂ ದುಷ್ಟರಾದವರನ್ನು ವಜಾಮಾಡುತ್ತಲೂ ಬಂದರೆ ಇಂತಾದ್ದಕ್ಕೆಲ್ಲಾ ಅವಕಾಶವಿರುವದಿಲ್ಲ — ವೃ. ವ.

ಈ ಊರು ವೆಸ್ಟ್ರನ್ ಯಕ್ಸ್‌ಟೆನ್ಷನ್ ಚಾಮರಾಜಪೇಟೆಯಲ್ಲಿ ಹೊಸದಾಗಿ ಮನೆಗಳು ಕಟ್ಟಿರುವವರಿಗೆಲ್ಲಾ ಮೆ|| ರೆನಾಲ್ಡ್ ಸಾಹೇಬರವರು ಈಗಾಗಲೇ ಕಂದಾಯಗಳನ್ನು ಹಾಕಿದ್ದಾರೆ ಮನೆಕಟ್ಟದೆ ಇರುವವರಿಗೆ ತಗಾದೆ ಮಾಡಿ ಮನೆ ಕಟ್ಟಿಸದೆ ಮನೆಕಟ್ಟಿರುವವರಿಗೆ ಮಾತ್ರ ಇಷ್ಟು ಜಾಗ್ರತೆ ಕಂದಾಯ ಹಾಕಿದ್ದು ಬಹಳ ಅನ್ಯಾಯ ಮೆ|| ರೆನಾಲ್ಡ್ ಸಾಹೇಬರವರು ಈ ಹೊಸ ಪೇಟೆಯವರ ಮೇಲೆ ದಯವಿಟ್ಟು ಇನ್ನು ೩ ವರುಷ ಕಂದಾಯ ಮಾಫಿ ಮಾಡುವದು ಧರ್ಮವಾಗಿದೆ — ವೃ ಬೊ.

ಈಗ್ಗೆ ಕೆಲವು ಸಂವತ್ಸರಗಳ ಮೊದಲು ಮದರಾಸ್ ಹೈಕೋರ್ಟಿನಲ್ಲಿ ವಕೀಲರಾಗಿರುವ ಮೆ|| ವಿ. ರಂಗಾಚಾರ್ಯರ್, ಬಿ. ಎ ಬಿ. ಎಲ್ ಯವರು ಮೈಸೂರು ಸಿಟಿ ಡಿಸ್ಟ್ರಿಕ್ಟ್ ಮುನ್ಸಫರಾಗಿ ನೇಮಕರಾಗ್ಮಲ್ಪಟ್ಟಿರುವಂತೆ ತಿಳಿಯಬರುವದಾಗಿ ಮದರಾಸ್ ಹಿಂದೂ ಪತ್ರಿಕೆ ಪ್ರಕಟಿಸಿರುತದೆ ಈ ದೇಶದೊಳು ಡಿಸ್ಟ್ರಿಕ್ಟ್ ಮುನ್ಸಫರುಗಳಿಗೆ ಪ್ರಾರಂಭದಲ್ಲಿ ತಲಬ್ ೧೫೦ ರೂಪಾಯಿಗಳು. ಮೆ|| ರಂಗಾಚಾರ್ಯರವರು ಈ ದೇಶದಲ್ಲಿ ನೌಕರಿಗೆ ಕರೆಯಿಸಲ್ಪಡುವದಕ್ಕೆ ಇಲ್ಲಿನ ಮುಖ್ಯಾಧಿಕಾರಿಗಳಲ್ಲ ಅವರಿಗೆ ಉಂಟಾಗಿರುವ ವಾಲ್ಲಭ್ಯಬಲವೇ ಕಾರಣವಾಗಿರುವದರಿಂದ ಒಂದುವೇಳೆ ಅವರಿಗೆ ೨೦೦ ರೂಪಾಯಿಗಳ ತಲಬ್ ಕೊಡಬಹುದೆಂದು ಯೋಚಿಸಿದಾಗ್ಯೂ, ಅವರಿಗೆ ಈಗ ಮಾಹೆಯಾನಾ ಇನ್ನೂರು ರೂಪಾಯಿಗಳ ಆಯತಿ ಇಲ್ಲವೆಂಬು ನಾವು ನಂಬುವದಕ್ಕೆ ಸಂಪೂರ್ಣವಕಾಶ ವಿಲ್ಲದೆ ಹೋಗಲಿಲ್ಲವು. ೨೦೦ರೂಪಾಯಿಗಳಿಗೆ ಮೇಲ್ಪಟ್ಟ ಆಮತಿ ಇರುವ ಪಕ್ಷದಲ್ಲಿ ಅದನ್ನು ಬಿಟ್ಟು ಸ್ವತಂತ್ರವಾದ ಜೀವನವಂ ಹೋಗಲಾಡಿಸಿಕೊಂಡು ಇಲ್ಲಿಗೆ ಬರುವರೆಂದು ನಾವು ನಂಬಲಾರೆವು ಇಂತವರು ಮೈಸೂರು ದೇಶದೊಳು ಅನೇಕರು ಶಿಕ್ಷಣದರಲ್ಲಿ ಸುಶಯರ್ಶಿತ್ರ ಇರಲಾರರು, ಪರಂತು ಅಂತವರನ್ನು ಪುರಸ್ಕರಿಸುವದಕ್ಕೆ ಅಧಿಕಾರಿಗಳ ಅಭಾವದಿಂದಲೇ ಅವರೆಲ್ಲರು ಕೇವಲ ಸಾಮಾನ್ಯಸ್ಥಿತಿ ಯೊಳರುವಂತಾದರು

ಹವಾ ವಿಷಯವು ಹಿಂದಿನವಾರದಲ್ಲಿ ತಿಳಿಸಿದ್ದಂತೆಯೇ ಯಮಾಗ್ಯ ಮೋಡವಾದುತಲಿದೆ ಮಧ್ಯೆ ಮಧ್ಯೆ ಒಂದೆರಡುಸಲ ಅಲ್ಪ ಮಳೆ ಬಿತ್ತು ಯಾವಾಗ್ಯ ಬಲವಾಗಿ ಗಾಳಿ ಬೀಸುತಲಿದೆ. ಈ ತಿಂಗಳ ೧೧ ನೇ ತಾರೀಖಿನ ಪ್ರಾರ್ತಿಯಾದ ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ, ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಕೆಲವು ತಾಲ್ಲೂಕುಗಳು ವಿನಾ ಇತರ ಡಿಸ್ಟ್ರಿಕ್ಟುಗಳಲ್ಲಿ ಎಲ್ಲಿಯೂ ಒಳ್ಳೆಯ ವರ್ಷವಿಲ್ಲವೆಂದು ಕಾಣುತಿದೆ ಅನೇಕ ಪ್ರದೇಶಗಳೊಳು ರಾಗಿಯು ಪೈರಾವಾಗಿಯೂ ಆಗುತಲಿಲ್ಲ. ಕಾರ್ತಿಕ ಸಾಗುವಳಿ ವಿಷಯದಲ್ಲಿ ರೈತರು ಬಹಳ ಹೆದರುತಲಿರುವಂತೆ ತಿಯಬರುತಿದೆ. ಈಗ ಕೆರೆಗಳಲ್ಲಿರುವ ನೀರನ್ನು ನಂಬಿ ತರೀ ಸಾಗುವಳಿಗ ಪ್ರಾರಂಭ ಮಾಡುವದು ಅಪಾಯಕರವೆಂಬ ಭೀತಿ ಯುಂಟಾಗಿದೆ ದೈವಾಜ್ಞೆ ಮುಂದೆ ಹ್ಯಾಗಿರುವುದೊ ಹೇಳಲ ಸಾಧ್ಯವು ಆಹಾರ ಪದಾರ್ಥಗಳ ಧಾರಣೆಗಳು ಒಂದೇ ವಿಧವಾಗಿವೆ. ಪಾಸಗ್ಯಪಗಳ ಬಾವಿಗಳಲ್ಲಿ ನೀರಿಲ್ಲದೆ ಬಿಂದಿಗೆಗಳೊಡನೆ ಹೊರಗೆ ಹೊರಡಬೇಕಾದ ಕಾಲವು ಈಗಲೇ ಪ್ರಾಪ್ತವಾಗಿದೆ.

ಈ ಸಿಟಿ ಮ್ಯೂನಿಸಿಪಾಲಿಟಿಗೆ ಗವರ್ನಮೆಂಟಿನ ಪ್ರೆಸಿಡೆಂಟಾಗಿ ನೇಮಕರಾಗಿದ್ದ ಮೆ||ಎ ಟಿ ರೆನಾಲ್ಡ್ ಯವರು ಪ್ರೆಸಿಡೆಂಟರಾಗಿ ನೇಮಕರಾಗ್ಮಲ್ಪಟ್ಟದ್ದು ಮೊದಲು ನಿರ್ಜೀವವಾಗಿದ್ದ ಮ್ಯೂನಿಸಿಪಾಲಿಟಿಗೆ ಸ್ವಲ್ಪ ಪ್ರಾಣ ವುಂಟಾದಂತೆ ಕಾಣುತದೆ ಮೆ ರೆನಾಲ್ಡ್ ಯವರು ಪ್ರಾಯಶಃ ಪ್ರತಿದಿನವೂ ಪೇಟೆಗೆ ಬರುತ ಪ್ರಜೆಗಳ ಅಹವಾಲುಗಳನ್ನು ಸಹನೆಯಿಂದ ಕೇಳಿ ಅವರವರಿಗೆ ಉಚಿತವಾದ ರೀತಿಯಲ್ಲಿ ಜವಾಬುಗಳಂ ಕೊಟ್ಟು, ಬೀದಿಗಳ ಸ್ಥಿತಿಯಂ ಖುದ್ದು ನೋಡಿ ವಾಕೀಫ್ ವಿಷಯದಲ್ಲ ತಕ್ಕ ಯೇರ್ಪಾಡುಗಳಂ ಮಾಡುತ್ತಾರೆ. ತಮ್ಮಲ್ಲಿಗೆ ಬರುವ ಅರ್ಜಿಗಳನ್ನು ಸುನಾವಣಿ ತೆಗದುಕೊಂಡು ಕೂಡಲೇ ವ್ಯವಸ್ಥೆಮಾಡುತ್ತಾರೆ. ಯಾವಸಂದರ್ಭದಲ್ಲೂ ಎಂಟು ದಿನಗಳಿಗೆ ಅಧಿಕವಾಗಿ ಕಾಗದಗಳು ವ್ಯವಸ್ಥೆ ಇಲ್ಲದೆ ಬಿದ್ದಿರುವದಕ್ಕೆ ಅವಕಾಶ ಕೊಡುವದಿಲ್ಲವು ಫಿರ್ಯಾದ್ ಉಳ್ಳವರು ಖುದ್ದು ಹೇಳುವದಕ್ಕೆ ಕಚ್ಚೇರಿಯಲ್ಲಿ ಅವಕಾಶ ಕೊಟ್ಟು ತಮಗೆ ಯುಕ್ತತೆ ತೋರಿದಂತೆ ಪೈಸಲ್ಮಾಡುತ್ತಾರೆ ಮೆ|| ಎ ಶ್ರೀನಿವಾಸಾಚಾರ್ಲು ಯವರು ವೈಸ್‌ಪ್ರೆಸಿಡೆಂಟ ಕೆಲಸವನ್ನು ಬಿಟ್ಟದ್ದು ಮೊದಲು ಸದರೀ ಇಲಾಖೆಗೆ ಪ್ರಾಪ್ತವಾಗುತ ಬಂದ ದುರ್ದಶೆಯನ್ನು ತಪ್ಪಿಸಿ ಅದನ್ನು ಒಂದು ವ್ಯವಸ್ಥಿತದಶೆಗೆ ತರಬೇಕಾದ ವಿಷಯದಲ್ಲಿ ಒಹುವಿಧ ಯೋಜನೆಗಳಂ ಆಲೋಚಿಸುತಲಿದಾರೆಂದು ಅರಿತು ಬಹಳ ಸಂತೋಷಿಸುತ್ತೇವೆ. ಬೋರ್ಡ್ ಮೆಂಬರ್‌ಗಳ ಚುನಾವಣೆ ವಿಷಯದಲ್ಲಿ ಸಹ ಈಗ ಜಾರಿಯಲ್ಲಿರುವದಕ್ಕಿಂತಲೂ ಉಚಿತವಾದ ಯೇರ್ಪಾಡು ಮಾಡಲ್ಪಟ್ಟರೆ ಬಹಳ ಚೆನ್ನಾಗಿರುವುದು.

THE MYSORE GAZETTE.
ಮೈಸೂರು ಗೆಜೆಟ

ಮೈಸೂರ್ ಗವರ್ನಮೆಂಟಿನವರಿಂದ ಹೊರಡಿಸಿದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೯ನೇ ಜುಲೈ ೧೮೯೬

ನಂ|| ೨೦೩—ರ ೫೬— ಎ ಕೃಷ್ಣಸ್ವಾಮಯ್ಯಂಗಾರ್ ಬಿ ಎ, ಯವರು ತಿರುನಾರಣಯ್ಯಂಗಾರ್ ಯವರು ಎಳಂದೂರು ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಕೊಳ್ಳೇಗಾಲ ಡೆಪ್ಯುಟಿ ಅಮಲ್ದಾರ್ ವ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತಾತ್ಕಾಲಿಕ ನೇಮಕರದ ಮಾಡಲ್ಪಟ್ಟಿರುತ್ತಾರೆ (ಕೂಡ್ಲೆ ಹೋಗಿ ಸೇರತಕ್ಕದ್ದು.

ನಂ|| ೨೦೬—ರ ೫೯—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೯೯ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮೆ||ಬಿ, ವೆಂಕಟರಾಯರಿಗೆ, ೧೮೯೬ ನೇ ಇಸವಿ ಜೂಲೈ ೧ನೇ ತಾರೀಖು ಲಾಗಾಯಿತು ಎರಡು ತಿಂಗಳೂ ಮತ್ತು ಇಪ್ಪತ್ತೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ ಸದರೀ ರಜಾ ಪೂರೈಸಿದ ತಾರೀಖು ಲಾಗಾಯಿತು ಅವರು ಕೆಲಸದಿಂದ ಪೆನ್ಷನ್ ಮೇಲೆ ನಿವೃತ್ತರಾಗುವದಕ್ಕೆ ಪೂರ್ವದ ರಜಾವಾಗಿರುತ್ತೆ

ನಂ|| ೨೦೮—ರ ೬೭—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೯೯ನೇ ಆರ್ಟಿಕಲ್ ಅನುಸರಿಸಿ, ಚಿಕ್ಕಬಳ್ಳಾಪುರ ಸಬ್‌ಡಿವಿಷನ್ ಆಫಿಸರ್ ಮೆ|| ಬಿ. ಜಿ ಕೃಷ್ಣಯ್ಯಂಗಾರ್ ಯವರಿಗೆ, ೧೮೯೬ನೇ ಜೂಲೈ ೧೪ನೇ ತಾರೀಖು ಲಾಗಾಯಿತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಎರಡು ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತೆ

ಕೋಲಾರ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನ್ ಮೆ|| ಕೆ ಎಸ ದೊರಸ್ವಾಮಿ ಅಯ್ಯರ್ ಯವರು, ಸದರೀ ಮೆ|| ಬಿ ಜಿ ಕೃಷ್ಣಯ್ಯಂಗಾರ್‌ರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಚಿಕ್ಕಬಳ್ಳಾಪುರದ ಸಬ್‌ಡಿವಿಜನಿನ ಚಾರ್ಜಿನಲ್ಲಿರತಕ್ಕದ್ದು.

ತಾ|| ೧೦ನೇ ಜುಲೈ ೧೮೯೬

ನಂ|| ೨೧೪ ರ ೪೧—ಈ ಕೆಳಗೆ ಕಂಡ ಅಮಲ್ದಾರ್‌ಗಳ ವರ್ಗ ವರ್ಗಿಗಳೂ ಮತ್ತು ನೇಮಕಗಳೂ ಮಂಜೂರ್ಮಾಡಲ್ಪಟ್ಟಿರುವಿವೆ —

ಸಿ ರಾಮಯ್ಯಂಗಾರ್‌ರು ಹಿರಿಯೂರಿಂದ ನಾಗಮಂಗಲಕ್ಕೆ.

ಡಿ ನರಸಿಂಗರಾಯರು ಹಿರಿಯೂರು ತಾಲ್ಲೂಕಿಗೆ (ಕೂಡ್ಲೆ ಹೋಗಿ ಸೇರತಕ್ಕದ್ದು

ಸಿ ವೆಂಕಟರಾಯರು ನಂಜನಗೂಡು ತಾಲ್ಲೂಕಿಗೆ(ಕೂಡ್ಲೆ ಹೋಗಿ ಸೇರತಕ್ಕದ್ದು)

ಜಿ ಆರ್ ಶ್ರೀನಿವಾಸ ಅಯ್ಯಂಗಾರ್‌ರು ದಾವಣಗೆರೆಯಿಂದ ಮೊಳಕಾಲ್ಮೂರಿಗೆ (ಚಾರ್ಜ್ ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು

ಮಹದೇವರಾಯರು ಮುಳಬಾಗಲಿನಿಂದ ದಾವಣಗೆರೆಗೆ (ಅವರ ರಜಾ ಪೂರೈಸಿದ ತರುವಾಯ ಹೋಗಿ ಸೇರತಕ್ಕದ್ದು

ವೆಂಕಟಸುಬ್ಬಯ್ಯನವರು ಚಿಂತಾಮಣಿಯಿಂದ ಮುಳಬಾಗಲಿಗೆ (ಚಾರ್ಜ್ ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು)

ಎಲ್ಲೋ ಶ್ರೀನಿವಾಸರಾಯರು ಚಿಂತಾಮಣಿ ತಾಲ್ಲೂಕಿಗೆ (ಕೂಡ್ಲೆ ಹೋಗಿ ಸೇರತಕ್ಕದ್ದು)

ಟಿ ರಾಮಚಂದ್ರರಾಯರು ಹೆಗ್ಗಡದೇವನ ಕೋಟೆಯಿಂದ ಸಾಗರಕ್ಕೆ (ಚಾರ್ಜ್ ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು)

ಬಿ ಕೃಷ್ಣಸಿಂಗ್ ಯವರು ಹೆಗ್ಗಡದೇವನ ಕೋಟೆಗೆ (ಕೂಡ್ಲೆ ಹೋಗಿ ಸೇರತಕ್ಕದ್ದು)

ಎಸ ಕೃಷ್ಣ ಅಯ್ಯರ್ ಯವರು ಮೊಳಕಾಲ್ಮೂರಿನಿಂದ ಕೋಲಾರಕ್ಕೆ (ಕೂಡ್ಲೆ ಹೋಗಿಸೇರತಕ್ಕದ್ದು)

ವಿ ಪಾರ್ಥಸಾರಥಿ ಅಯ್ಯಂಗಾರ್ ಯವರು ಕುಣಿಗಲಿನಿಂದ ಮೊಳಕಾಲ್ಮೂರಿಗೆ (ಚಾರ್ಜ್ ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು

ಪೇಗೇರಿ ಕೃಷ್ಣರಾಯರು ಮೊಳಕಾಲ್ಮೂರಿನಿಂದ ಎಡತೊರೆಗೆ (ಚಾರ್ಜ್ ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು)

ಕಂಠೀರವಾಚಾರ್‌ರು ಚಿಕ್ಕನಾಯಕನ ಹಳ್ಳಿಯಿಂದ ಕೃಷ್ಣರಾಜಪೇಟೆಗೆ (ಚಾರ್ಜ್ ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು)

ಡಿ ಸುಬ್ಬರಾಯರು ಚಿಕ್ಕನಾಯಕನ ಹಳ್ಳಿಗೆ (ಕೂಡ್ಲೆ ಹೋಗಿ ಸೇರತಕ್ಕದ್ದು)

ಕೆ ಆರ್ ಸುಬ್ಬರಾಯರು ಶಿಕಾರಿಪುರದಿಂದ ಹುಣಸೂರಿಗೆ (ಚಾರ್ಜ್ ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು)

ಕುಂದಾಪುರ ಸುಬ್ಬರಾಯರು ಶಿಕಾರಿಪುರಕ್ಕೆ (ಕೂಡ್ಲೆ ಹೋಗಿ ಸೇರತಕ್ಕದ್ದು)

ಟಿ ಚೊಕ್ಕಣ್ಣನವರು ದೇವನಹಳ್ಳಿಯಿಂದ ಬಾಗೇಪಲ್ಲಿಗೆ (ಕೂಡ್ಲೆ ಹೋಗಿ ಸೇರತಕ್ಕದ್ದು)

ಆರಿ ರಾಮರಾಯರು ಕುಣಿಗಲಿಗೆ (ಕೂಡ್ಲೆ ಹೋಗಿ ಸೇರತಕ್ಕದ್ದು)

ಪಿ ಸೀತಾರಾಮಯ್ಯನವರು ಬೌರಿಂಗ್‌ಪೇಟೆಯಿಂದ ಬೇಲೂರಿಗೆ (ಚಾರ್ಜ್ ಒಪ್ಪಿಸಿದ ತರುವಾಯ ಹೋಗಿಸೇರತಕ್ಕದ್ದು)

ಎಂ, ರಂಗರಾಯರು ದೇವನಹಳ್ಳಿಗೆ (ಚಾರ್ಜ್ ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು)

ಹರ್ರಿ ಅಲ್ಲೀಬೇಗ್ ಯವರು ಮಳವಳ್ಳಿಯಿಂದ ಶ್ರೀರಂಗಪಟ್ಟಣಕ್ಕೆ (ರಜಾ ಪೂರೈಸಿದ ತರುವಾಯ ಹೋಗಿ ಸೇರತಕ್ಕದ್ದು)

ಕೃಷ್ಣೇಗೌಡ ಅಗಸಿನವರು ಸೈದಾಪುರದಿಂದ ಮಳವಳ್ಳಿಗೆ (ಚಾರ್ಜು ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು)

ತಾ|| ೧೧ನೇ ಜೂಲೈ ೧೮೯೬.

ನಂ|| ೨೩೮—ರಿ. ೩೦—ಈ ಕೆಳಗೆ ಕಂಡ ಡೆಪ್ಯುಟಿ ಅಮಲ್‌ದಾರ್ರುಗಳ ವರ್ಗಾವರ್ಗಿ ಮತ್ತು ನೇಮಣೂಕಿಗಳು ಹುಕುಂ ಮಾಡಲ್ಪಟ್ಟಿರುತವೆ ;—

ಸಿಂಗಮೊಹಮ್ಮದ್ ಅಲ್ಲಿಯವರು ಶ್ರೀನಿವಾಸಪುರದಿಂದ ಎಡೆಹಳ್ಳಿಗೆ (ಚಾರ್ಜು ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು)

ಎಂ. ಕೃಷ್ಣಸ್ವಾಮಯ್ಯಂಗಾರ್ ಬಿ. ಎ. ಯವರು ಶ್ರೀನಿವಾಸಪುರಕ್ಕೆ (ಕೂಡ್ಲೆ ಹೋಗಿ ಸೇರತಕ್ಕದ್ದು)

ಎಂ. ರಂಗನಾಥರಾವ್ ಬಿ. ಎ ಯವರು ಹರಿಹರಕ್ಕೆ (ಚಾರ್ಜು ಒಪ್ಪಿಸಿದ ತರುವಾಯ ಹೋಗಿ ಸೇರತಕ್ಕದ್ದು)

ಡಿ. ಸುಬ್ಬರಾಯರು ಶ್ರೀರಂಗಪಟ್ಟಣಕ್ಕೆ

ಸಿ. ಕೃಷ್ಣಮನಾಯುಡುಯವರು ಗುಡಿಬಂಡೆಗೆ (ಕೂಡ್ಲೆ ಹೋಗಿ ಸೇರತಕ್ಕದ್ದು)

ಚೆನ್ನಪ್ಪಾಪಿಳ್ಳೆಯವರು ಕುಣಿಗಲಿಗೆ (ಕೂಡ್ಲೆ ಹೋಗಿ ಸೇರತಕ್ಕದ್ದು)

ನಂ|| ೩೧೨—ರಿ. ೯೭—ಈ ಕೆಳಗೆ ಕಂಡ ಅಸಿಸ್ಟೆಂಟ್ ಕಮಿಷನರ್‌ಗಳ ವರ್ಗಾವರ್ಗಿಗಳೂ ಮತ್ತು ನೇಮಣೂಕಿಗಳೂ ಹುಕುಂ ಮಾಡಲ್ಪಟ್ಟಿರುತವೆ—

ಮ|| ಸ್ಮಿತ್‌ಯವರು ಹಾಸನದಿಂದ ಬೆಂಗಳೂರಿಗೆ (ಚಾರ್ಜು ಒಪ್ಪಿಸಿದನಂತರ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು)

„ ಕೆ. ಶ್ರೀನಿವಾಸರಾಯರು ಬೆಂಗಳೂರಿಂದ ತುಮಕೂರಿಗೆ (ಚಾರ್ಜು ಒಪ್ಪಿಸಿದನಂತರ ಕೆಲಸದಮೇಲೆ ಹೋಗಿ ಸೇರತಕ್ಕದ್ದು)

„ ಕೆ. ಆರ್. ಶ್ರೀನಿವಾಸಯ್ಯಂಗಾರ್ರವರು ಮೈಸೂರಿಂದ ತುಮಕೂರಿಗೆ (ಚಾರ್ಜು ಒಪ್ಪಿಸಿದ ನಂತರ ಕೆಲಸದಮೇಲೆ ಹೋಗಿ ಸೇರತಕ್ಕದ್ದು)

„ ವಿ. ಶ್ರೀನಿವಾಸಾಚಾರ್ಲುಯವರು ತುಮಕೂರಿಂದ ಮೈಸೂರಿಗೆ (ಚಾರ್ಜು ಒಪ್ಪಿಸಿದನಂತರ ಕೆಲಸದಮೇಲೆ ಹೋಗಿ ಸೇರತಕ್ಕದ್ದು)

„ ಬಿ. ನಾರಣಸ್ವಾಮಿಯ್ಯಂಗಾರ್ ಯವರು ಕೋಲಾರದಿಂದ ಮೈಸೂರಿಗೆ (ಫ್ರೆಂಚ್‌ರಾಕ್ಸ್ ಸಬ್ ಡಿವಿಜನಿನಲ್ಲಿ ಕೆಲಸ ನೋಡತಕ್ಕದ್ದು)

„ ಕೆ. ಎಸ್. ಚಂದ್ರಶೇಖರಾ ಅಯ್ಯರ್ ಯವರು ಹಾಸನದಿಂದ ಕೋಲಾರಕ್ಕೆ

„ ಟಿ ಪರಮಶಿವ ಅಯ್ಯರ್ ಯವರು ಹಾಸನಕ್ಕೆ

„ ವಿಾರ್ ಹಂಜಾ ಹುಸೇನ್ ಯವರು ಮೈಸೂರಿಗೆ (ಚಾರ್ಜು ಒಪ್ಪಿಸಿದ ನಂತರ ಕೆಲಸದಮೇಲೆಹೋಗಿ ಸೇರತಕ್ಕದ್ದು)

„ ಸಿ ಶೇಷಾದ್ರಿ ಅಯ್ಯಂಗಾರ್ ಯವರು ಹಾಸನಕ್ಕೆ (ಕೂಡ್ಲೆ ಕೆಲಸದಮೇಲೆ ಹೋಗಿ ಸೇರತಕ್ಕದ್ದು)

„ ಸಿ. ಬಿ. ಶೇಷಗಿರಿರಾಯರು ಶಿವಮೊಗ್ಗಗೆ (ಸಿವಿಲ್ ಕೆಲಸ ಪೂರೈಸಿದನಂತರ ಕೆಲಸದಮೇಲೆ ಹೋಗಿ ಸೇರತಕ್ಕದ್ದು)

„ ವಿಾರ್ ನಿಜಾಮುದ್ದೀನ್ ಅಲ್ಲಿ ಯವರು ಚಿತ್ರದುರ್ಗಕ್ಕೆ (ಚಾರ್ಜು ಒಪ್ಪಿಸಿದನಂತರ ಕೆಲಸದಮೇಲೆ ಹೋಗಿ ಸೇರತಕ್ಕದ್ದು)

ನಂ|| ೩೭೨—ರಿ ೧೮೯—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಸಾಗರದ ಸಬ್ ಡಿವಿಜನ್ ಆಫೀಸರ್ ಮಿಸ್ಟರ್ ಜಿ ರಘುನಾಥ ರಾಯರಿಗೆ, ೧೮೯೬ನೇ ಜೂಲೈ ೩ನೇ ತಾರೀಖು ಮೊದಲುಗೊಂಡು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. ಸದರೀ ರಜಾ ಪೂರೈಸಿದ ತಾರೀಖು ಲಾಗಾಯಿತು ಅವರು ಕೆಲಸದಿಂದ ಪೆನ್ಷನ್ ಮೇಲೆ ನಿವೃತ್ತರಾಗುವದಕ್ಕೆ ಪೂರ್ಣದ ರಜಾವಾಗಿರುತದೆ.

ತಾ|| ೧೫ ನೇ ಜೂಲೈ ೧೮೯೬.

ನಂ|| ೩೭೦—ಜೆ ೫೯—ಕ್ರಿಮಿನಲ್ ಪ್ರೊಸಿಡ್ಯುರ್ ಕೋಡಿನ ೧೦ನೇ ಸೆಕ್ಷನ್ ಅನುಸರಿಸಿ ಇದರಡಿ ತಿಳಿಸಲ್ಪಡುವ ಅಮಲ್‌ದಾರರುಗಳು ಮತ್ತು ಡೆಪ್ಯುಟಿ ಅಮಲ್‌ದಾರರುಗಳು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ಬಿ. ಕೃಷ್ಣಸಿಂಗ್‌ರು, ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್‌ದಾರ್.

ಸಿ. ವೆಂಕಟರಾವ್, ಸಂಪಗೆಗೂಡು ತಾ|| ಅಮಲ್‌ದಾರ್

ಎಂ. ರಂಗರಾವ್, ದೇವನಹಳ್ಳಿ ತಾ|| ಅಮಲ್‌ದಾರ್

ಸಿ. ಕೃಷ್ಣಮನಾಯುಡು, ಗುಡಿಬಂಡೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್

ಡಿ: ಸುಬ್ಬರಾವ್, ಶ್ರೀರಂಗಪಟ್ಟಣ ಸಬ್ ತಾ|| ಡೆಪ್ಯುಟಿ ಅಮಲ್‌ದಾರ್

ಎಂ. ರಂಗನಾಥರಾವ್, ಹರಿಹರ ಸಬ್ ತಾ|| ಡೆಪ್ಯುಟಿ ಅಮಲ್‌ದಾರ್

ಎಂ. ಕೃಷ್ಣಸ್ವಾಮಯ್ಯಂಗಾರ್, ಶ್ರೀನಿವಾಸಪುರ ಸಬ್ ತಾ||ಡೆಪ್ಯುಟಿ ಅಮಲ್‌ದಾರ್

ಚೆನ್ನಪ್ಪಾಪಿಳ್ಳೆ, ಕುಣಿಗಲ್ ಸಬ್‌ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್

ತಾ|| ೧೫ನೇ ಜೂಲೈ ೧೮೯೬.

ನಂ|| ೪೮೪—ಪಿಎಸ್ ೧೪೦—ಘನವಂತರಾದ ಶ್ರೀಮನ್ಮಹಾರಾಣೀ ರೀಜಂಟರವರು ಇದರಡಿ ಬರುವ ನೌಕರರಾತಿಗಳನ್ನು ಮಾಡಿರುತ್ತಾರೆ : —

ಮ|| ಎಚ್ ಲಿಂಗರಾಜ ಅರಸುರವರು ಚಾರ್ಜ್‌ವಹಿಸಿದ ತಾರೀಖ್ ಲಾಗಾಯಿತು ದರಬಾರ್ ಬಕ್ಷಿಯು ಆಗಿರತಕ್ಕದ್ದು.

„ ಕಾಮರಾಜ ಅರಸು ಆರನೆಯ ಕುಮಾರಿ ಲಾಯದ ಸೂಪರಿಂಟೆಂಡೆಂಟಾಗಿರತಕ್ಕದ್ದು.

SUMMARY OF NEWS.

ವೃತ್ತಾಂತ ಸಂಗ್ರಹವು.

ಸೂರಿ ಎಂಬ ಊರಿನಲ್ಲಿ ಒಂದು ಹಸ ಪಿನಿ ಮೂರು ಕಣ್ಣುಗಳೂ ಎರಡು ಮೂಗುಗಳೂ ಪುಳ್ಳ ಹೋರಿಯು ಹುಟ್ಟಿದೆಯಂತೆ.

ಪ್ರತಿ ಒಂದು ಆವರ್ತಿಯು ಸರ್ಕಸ್ಸಿನಿಂದಲೂ ಇಂಡಿಯಾದಲ್ಲಿ ವರ್ಷಂಪ್ರತಿ ಮೂವತ್ತು ಲಕ್ಷ ಪ್ರತಿಗಳು ಬಿಚ್ಚುತ್ತಿರುವರೆಂದು ತಿಳಿಯಬರುತ್ತಿದೆ.

ಸಿಂಧಿಯಾ ಮಹಾರಾಜರವರು ಒಳ್ಳೇ ನ್ಯಾಯತಿಳಿನ್ನು ಬರೆಯುವ ಶಕ್ತರಂತೆ ಇವರಿಗಿಂತಲೂ ಚೆನ್ನಾಗಿ ಯಾರೂ ಬರೆಯಲಾರರಂತೆ.

ನಾಸ್ಕ್ ಪಟ್ಟಣದಲ್ಲಿ ನಡೆದ ಘಟನದಲ್ಲಿ ಬಹುಮಂದಿ ಕೆಂಪಾಜಿನರುಗಳು ನತ್ಯುಪೋದ್ದರಿಂದ ಅನೇಕ ವರ್ತಮಾನ ಪತ್ರಿಕೆಗಳು ನಿಲ್ಲಿಸಲ್ಪಟ್ಟವು

ಸ್ಕಾಟ್‌ಲೆಂಡಿಗೆ ಮುಖ್ಯ ಪಟ್ಟಣವಾದ ಎಡಿಂಬರೋದಲ್ಲಿ ಮ|| ಆಂಡ್ರು ಅಷರ್ ಎಂಬಾತನು ಒಂದು ಟೌನ್‌ಹಾಲನ್ನು ಕಟ್ಟಿಸುತ್ತೇನೆಂತಲೂ ಅದಕ್ಕೆ ತಗಲುವ ೧,೦೦,೦೦೦ ರೂಪಾಯಿಗಳನ್ನು ತನ್ನ ಸ್ವಂತ ಹಣದಿಂದ ಕೊಡುತ್ತೇನೆಂತಲೂ ವಾಗ್ದಾನ ಮಾಡಿರುತ್ತಾನೆ.

ಬಂಗಾಳದಲ್ಲಿ ಬಾಬೂ ಜಗದೀಶಚಂದ್ರ ಬೋಸ್ ಎಂಬಾತನು ಶಾಸ್ತ್ರ ವಿದ್ಯೆಯಲ್ಲಿ ಮಹಾ ಬುದ್ಧಿವಂತನು ಪ್ರಖ್ಯಾತಿಯನ್ನಾದಿದ್ದುದರಿಂದ ಈತನಿಗೆ ಬಂಗಾಳಾ ಸರ್ಕಾರದಿಂದ ಪ್ರತಿ ವರುಷವೂ ೩,೦೦೦ ರೂಪಾಯಿ ಕೊಡಬೇಕೆಂದು ಸರ್ ಅಲೆಗ್ಸಾಂಡರ್ ಮೆಕೆಂಜಿ ಯವರು ಹುಕುಂ ಮಾಡಿದ್ದಾರೆ.

ಹೈದರಾಬಾದಿನಲ್ಲಿ ಲೇಟ್ ಸರ್ ಸಾಲಾರ್ ಜಂಗ್‌ರವರ ಮಗಳು ಅಲ್ಲಿನ ಮಹಮ್ಮದೀಯ ದೊಡ್ಡ ಮನುಷ್ಯರ ಜನಾನಾ ಸ್ತ್ರೀಯರಿಗೂ ಬಾಲಿಕೆಯರಿಗೂ ವಿದ್ಯಾಭ್ಯಾಸ ಮಾಡಿಸುವದಕ್ಕೆ ಅನುಕೂಲವಾಗುವಂತಾ ಒಂದು ಪಾಠಶಾಲೆಯನ್ನು ಸ್ಥಾಪಿಸಿರುತ್ತಾಳೆ ಇದಕ್ಕೆ ತಗಲಿದ ಖರ್ಚನ್ನೆಲ್ಲ ಆಕೆಯೊಬ್ಬಳೇ ಕೊಟ್ಟಿರುತ್ತಾಳೆಂದು ತಿಳಿದು ಬಂದಿದೆ

ಚೀಣದ ಒಂದು ಭಾಗವಾದ ಕ್ವ್ಯಾಂಗ್ಸಿನಲ್ಲಿ ವಾಸಮಾಡುವ ಕೆಲವು ಸಾವಿರ ಮಹಮ್ಮದೀಯರು ಕೆಲವು ತಿಂಗಳಿಂದ ಚೀಣಾ ಸರ್ಕಾರದವರಿಗೆ ಎದುರುಬಿದ್ದು ದಂಗೆಮಾಡುತ್ತಿದ್ದಾರೆ. ಇವರು ಅನೇಕಮಂದಿ ಚೀಣಿಯವರನ್ನು ಇದುವರಿಗೆ ಕೊಂದುಹಾಕಿರುವು, ಅಲ್ಲಿಗೂ ರಾಜಧಾನಿ ಮಾರ ಪೆಕಿಂಗ್ ಪಟ್ಟಣಕ್ಕೂ ಹಾಕಿದ್ದ ತಂತಿಗಳನ್ನು ಕಿತ್ತುಹಾಕಿರುತ್ತಾರೆ. ಆಪ್ರಾಂತದಲ್ಲಿ ತುಂಬಾ ಗಲಾಟೆಯುಂಟಾಗಿದೆ ಎಂಬದಾಗಿ ವರ್ತಮಾನ ಬಂದಿದೆ.

ಕೆಲವು ದಿನಗಳ ಕೆಳಗೆ ಸ್ವಾಮಿ ವಿವೇಕಾನಂದ ಎಂಬ ನಾಮಾಂಕಿತವುಳ್ಳ ಬಂಗಾಳಿ ಸನ್ಯಾಸಿಯು ಹಿಂದು ಧರ್ಮ ಪ್ರೇಮವೆಂಬುದಕ್ಕೆ ಗ್ರಂಥಾಧಾರ ಮೊದಲಾದವುಗಳಿಂದ ಲಂಡನ್ ನಗರ್ ಪಾಡಲಾದ ಕಡೆಗೆ ಬಂದು ಧನವಾದಿ ಹಿಂದು ಜನರನ್ನು ಪಾದ್ರಿಗಳು ಮೋಸಗೊಳಿಸಿ ವ್ಯರ್ಥ ಯೇಸುಕ್ರಿಸ್ತನ ಹಿಂದಿನೊಳಗೆ ಕೂಡಿಸಿಕೊಳ್ಳುತ್ತಾರೆ, ಇದು ನ್ಯಾಯವಲ್ಲ, ಹಿಂದು ಧರ್ಮ ಅಧಿಕವೆಂದು ವ್ಯಾಖ್ಯಾನ ಕೊಡಲಾಗಿ ಆಗ್ಯೆ ನಾಲ್ಕು ಸಾವಿರ ಕೆಂಪು ಮೊಕಯುವರು ಹಿಂದು ಧರ್ಮದ ದೀಕ್ಷಾ ಪಡಕೊಂಡರೆಂದು ವಿಲಾಯತಿ ಪತ್ರಿಕೂಗುತ್ತದೆ.

ADVERTISEMENTS.

NOTICE.

VIDYASARA SANGARAHA.

A TREATISE ON THE PRINCIPLES OF

HINDU MEDICINE

Price, including Postage Rs. 5—0—0

ವೈದ್ಯಸಾರ ಸಂಗ್ರಹ.

ಅದು, ಚರಕ, ಬಾಹಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವ ಗ್ರಂಥಗಳ ಸಂಗ್ರಹವಾಗಿರವರುತಿದೆ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಳಿ ದೇಹೀಲ್ ಪ್ರತಿ, ಒಂದಕ್ಕೆ ರೂ, ೫—೦—0

BANGALORE CITY MUNICIPALITY.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸ್.

ತಾರೀಖ್ ೧೧ನೇ ಜೂಲೈ ೧೮೯೬.

ಸನ್ ೧೮೯೬ನೇ ಇಸವಿ ಜೂಲೈ ೨೧ ನೇ ತಾರೀಖ್ ಮಂಗಳವಾರದ ದಿನ ಬೆಳಿಗ್ಗೆ ೭|| ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮ್ಮಿಷನರ್‌ಗಳು, ಕೋಟೆಯೊಳಿರುವ ತಮ್ಮ ಆಫೀಸಿನಲ್ಲಿ ಮೀಟಿಂಗ್ ಸೇರುವಾಗ ಇದರಡಿ ತಿಳಿಸಲ್ಪಡುವ ಕೆಲಸಗಳು ನಡೆಸಲ್ಪಡುವವು :—

೧. ಸನ್ ೧೮೯೬ನೇ ಇಸವಿ ಜೂನ್ ತಿಂಗಳ ನಗದು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆಮಾಡುವ ಮೆಡಿಕಲ್ ಆಫೀಸರಲೆಕ್ಕ, ತಗಾದೆ, ವಸೂಲಿ, ಮತ್ತು ಬಾಕಿ ಪಟ್ಟಿ, ತೋಪುಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟು, ಶ್ರೀನಿವಾಸ ಮಂಟಪದ ಲೈಬ್ರರಿಗೆ ಹೋಗಿದ್ದವರನ್ನು ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲಿಷು ಮತ್ತು ಕನ್ನಡ ಸ್ಕೂಲುಗಳ ಲೆಕ್ಕಗಳು, ಸೂಲಗಿತ್ತಿಯರು ಚಿಕಿತ್ಸೆ ಮಾಡಿದವರ ಲೆಕ್ಕ, ದನಗಳನ್ನು ಕುರಿತ ದಪ್ತರಿನ ಸಂಗ್ರಹ, ಪ್ರಸವಾಸ್ಪತ್ರಿ ಲೆಕ್ಕ, ದಳವಾಯಿ ಲೆಕ್ಕ

೨. ಮಹಮ್ಮದೀಯ ಬಾಲಿಕಾ ಪಾಠಶಾಲೆಯ ಕಟ್ಟಡಕ್ಕಾಗಿ ಕೊಡಲ್ಪಟ್ಟ ಭೂಮಿಯನ್ನು ವಾಪಸ್ ಪಡೆಯುವ ವಿಷಯದೊಳು ೧೮೯೬ನೇ ಇಸವಿ ಜೂನ್ ೧೧ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಮಾಡಿದ ೨೦೪೮, ೭ ಎಫ್. ಎಲ್. ೧೧೫೯—೯೬ನೇ ನಂಬರ್ ಪ್ರೊಸೀಡಿಂಗ್ಸ್.

೩. ಪಿಂಜಾರಿಗಳು ಕೆಲಸ ಮಾಡುವ ಸ್ಥಳವನ್ನು ಸಿಟಿ ಇಂದ ಹೊಸ ಮಾಡಿಗರ ಪಾಳ್ಯದ ಮುಂದುಗಡೆ ಇರುವ ಸ್ಥಳಕ್ಕೆ ಸಾಗಿಸುವುದುಚಿತವೆಂದು ಪ್ರೆಸಿಡೆಂಟರವರು ಮಾಡಿದ ಮಿನಿಟ್ಸ್

೪. ಚಾಮರಾಜಪೇಟೆಯಲ್ಲಿರುವ ಹುಡುಗರಿಗೆ ದೇಶಭಾಷಾ ಪಾಠಶಾಲೆಯೊಂದನ್ನು ಮ್ಯುನಿಸಿಪಾಲಿಟಿಯವರು ಸ್ಥಾಪಿಸಬೇಕೆಂದು ಸೂಚಿಸಿ ಮೈಸೂರು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲವರು ೧೮೯೬ನೇ ಇಸವಿ ಜೂನ್ ೧೩ನೇ ತಾರೀಖಿನಲ್ಲಿ ಬರೆದ ೨೯೩೦—೪೭೨ ನೇ ನಂಬರ್ ಲೆಟರ್,

೫. ಮುಂದಿನ ದಸರಾ ಸಭೆಗೆ ಜಿಲ್ಲೆನವರ ತರಫ್ ಪ್ರತಿನಿಧಿಗಳ ಚುನಾವಣೆ ಮತ್ತು ಅಲ್ಲಿ ಅರಿಕೆ ಮಾಡಬೇಕಾದ ವಿಷಯಗಳು.

೬. ಬೆಂಗಳೂರು ಸಿಟಿಯಲ್ಲಿ ಎಲೆಕ್ಟ್ರಿಕ್ ಟ್ರಾಂ ಹಾಕುವ ವಿಷಯದಲ್ಲಿ ಮದರಾಸ್ ಗವರ್ನಮೆಂಟಿನವರು ಮಾಡಿದ ಹುಕುಮನ್ನು ಕಳುಹಿಸಿ ಮದರಾಸಿನಲ್ಲಿರುವ ಮೆಸ್ಸರ್ಸ್ ಆರ್ಬಟ್‌ನಟ್ ಕಂಪೆನಿಯವರು ೧೮೯೬ ನೇ ಇಸವಿ ಜೂನ್ ೨೩ನೇ ತಾರೀಖಿನಲ್ಲಿ ಬರೆದ ಲೆಟರ್.

೭. ಲಂಗರ್ ಖಾನೆಯಲ್ಲಿ ಊಟದ ಪದಾರ್ಥಗಳನ್ನು ಪಡೆಯುವ ಜನರ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಪ್ರೆಸಿಡೆಂಟರವರು ಕೊಟ್ಟ ಸಲಹೆ.

೮. ಈಗ ಯೋಚನೆಯಲ್ಲಿರುವ ಜಟ್ಕಾಗಾಡಿ ಹೋಗಿಗೆ ದೇಶಿಗಿರುವ ತಾಲ್ಲೂಕು ಕಚ್ಚೇರಿ ರಸ್ತೆಯಲ್ಲಿ ಹಲಸೂರು ಬಾಗಿಲ ಬಳಿ ಬರುವ ೭೨ನೇ ನಂಬರ್ ಜಮೀನಿಗೆ ಕಂಪನ್ಸೇಷನ್ ಕೊಡಿಸಬೇಕೆಂದು ಬಿ. ತಿಪ್ಪಣ್ಣಶೆಟ್ಟರು ೧೮೯೬ ನೇ ಇಸವಿ ಜೂಲೈ ೭ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

೯. ಕಾಜಿ ಷ್ಯಾಂಟರ್ ಮಹಮ್ಮದ್ ನಸುರುದ್ದೀನ್ ಸಾಹೇಬರವರು, ಮೊದಲು ತಮಗೆ ಕೊಡಲ್ಪಟ್ಟಿದ್ದ ತರುವಾಯ ರೈಲ್ವೆ ಕೆಲಸಕ್ಕಾಗಿ ವಾಪಸ್ ತೆಗೆದುಕೊಳ್ಳಲ್ಪಟ್ಟ ಜಮೀನಿಗೆ ಬದಲು, ಹೊಸ ತಿಗಳರ ಪೇಟೆಯಲ್ಲಿ ಸ್ವಾಮುದ್ದೀನ್ ಸಾಹೇಬರಿಗೆ ಕೊಡಲ್ಪಟ್ಟಿರುವ ಭೂಮಿಗೆ ಸೇರಿದಂತೆ ಖಾಲಿಯಾಗಿಗಳು ಗುರಿಸಲುಗಳು ಹಾಕಿಕೊಂಡಿರುವ 40×20 ಗಜಗಳ ಅಳತೆಯುಳ್ಳ ಜಮೀನನ್ನು ತಮಗೆ ಕೊಡಿಸಬೇಕೆಂದು ೧೮೯೬ನೇ ಇಸವಿ ಜೂನ್ ೪ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

೧೦. ಅಡ್ವೊಕೇಟ್ ಮ||ಎಲ್. ಶ್ರೀನಿವಾಸಯ್ಯಂಗಾರ್ರವರು ಕಾಶೀ ವಿಶ್ವೇಶ್ವರ ದೇವಸ್ಥಾನದ ಎದುರಿನಲ್ಲಿರುವ ತಮ್ಮ ಮನೆಯ ಮುಂದುಗಡೆ ಇರುವ ಜಮೀನಿನಲ್ಲಿ ತಾವು ಕಟ್ಟಿಸಿರುವ ಕಟ್ಟಡದ ವಿಷಯದಲ್ಲಿ ೧೮೯೬ ನೇ ಇಸವಿ ಜೂಲೈ ೩ನೇ ತಾರೀಖಿನೊಳು ಬರೆದುಕೊಂಡ ಅರ್ಜಿ.

೧೧. ಸಿಟಿ ಮ್ಯುನಿಸಿಪಾಲಿಟಿಯ ಕಾಯಂ ಕಾಲೀಜಾಬ್ ನೌಕರರಾದ ಮುನ್ಶಿಯ ಪಸ್ಯರೇರು ತಮಗೆ ತಲಬ್ ಬಡ್ತಿ ಮಾಡಬೇಕೆಂದು ಬರೆದುಕೊಂಡ ಅರ್ಜಿ ಮತ್ತು ಅದರಮೇಲೆ ಮ್ಯುನಿಸಿಪಲ್ ಎಗ್ಜಿಕ್ಯುಟಿವ್ ಇಂಜಿನಿಯರವರು ಮಾಡಿದ ರಿಪೋರ್ಟು.

T. T. Leonard,
President,
City Muni. Commission.

ಈ ಕಂಪೆನಿಯು ಸನ್ ೧೮೯೩ನೇಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳಸತಕ್ಕ ಉತ್ತತ್ತಿಯು.

ಅತ್ಯಾಕರ್ಷಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ತತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಬೀಜಗಳ ಪ್ರಬಗಳನ್ನು ಕೊಟ್ಟು, ತುಪ್ಪದೊಳಗೆ ನೆನಸಿ, ಒಳ್ಳೇ ಜೇನ್ಹಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ತತ್ತಿಗಳು ಮಹಾಔಷಧಗಳಿದ್ದು, ಒಳ್ಳೇ ರುಚಿಯುಳ್ಳವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳುಂಟಾಗತಕ್ಕ ಮೂವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಶರೀರವಾದರೂ ತರುಣರಂತೆ ಪ್ರಜ್ವಲಿತವಾಗುತ್ತದೆ ಪಂಚೇಂದ್ರಿಯದಲ್ಲಿ ಬಲ ವುಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಾಯ ಮುಂಚೆ ಅಥವಾ ಹಿಂಚೆ ಹರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಕೈ ಬಣ್ಣವು ಸುಧಾರಿಸುತ್ತದೆ ಪರಮೂ ರಾಗಾ ಉಷ್ಣಸಂಬಂಧಿಕ ರೋಗಗಳಿರಸರು ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಸೌಚವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ರೋಗ ಇದ್ದಲ್ಲಿ ೧೧ ದಿವಸಗಳ ವರೆಗೆ ನಡೆಯುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆದಿದ್ದಲ್ಲಿ ೩೦ ದಿನಗಳ ಮೇಲೆ ಗುಣ ಬಾಬೀತು. ೧೧ ದಿನಗಳ ವರೆಗೆ ನಡೆಯತಕ್ಕ ೧ ಡಬ್ಬಿಗೆ ೧-೮-೦ ರೂ||ಒಂದೇವ್ಯಕ್ತಿಗೆ ೪ ಡಬ್ಬಿಗಳು ತಕ್ಕುವಷ್ಟಕ್ಕೆವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ರಾಗೂ ಬಾಣಂತಿ ರೋಗಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ರೋಗ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯೂ ವೈದ್ಯಶಾಸ್ತ್ರಿಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯು ಪೇಯಬಲ್ ವಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದಲ್ಲಿ ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಳಾಸ—ಹಿ. ಎಲ್. ಎ. ಬ್ರದರ್ಸ್ ಮತ್ತು ಕಂಪೆನಿ,

ಸಕೆಂಡ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ—ಬೆಳಗಾಂವ. Post Belgaum.

☞ Bangalore.—Printed and Published at the Karnataka Press, No. 40, Hospital Road, City,—1896.

THE

Karnataka Prakasika.

ಪ್ರಕಟನೆಯ ರಿವಾಜ್. { ಮೊದಲನೇಯದಥ ಪಙ್ಕ್ತಿ ಒಂದಕ್ಕೆ 0 2 0 / ಎರಡನೆಯ ದಥ ಪಙ್ಕ್ತಿ ಒಂದಕ್ಕೆ 0 1 0 }
[ಶ್ರೀ ಸರಾ-ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಸತಡನೆ ಪ್ರಕಟಿಸಬೇಕಾದರೂ ಪಙ್ಕ್ತಿ ಒಂದಕ್ಕೆ ೧ ಆಣೆ ಯಂತೆಯೇ ಲೆಕ್ಕ ಮಾಡಲ್ಪಡುವದು.]

ಕರ್ನಾಟಕ ಪ್ರಕಾಶಿಕಾ.

Published Every Monday Morning

ಚಂದಾದಾರರಗಳು.—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸಹ.
ಸಾಲ 1 ಕ್ಕೆ 3 0 0 | ಸಾಲ 1 ಕ್ಕೆ .. 4 0 0
6 ತಿಂಗಳಿಗೆ .2 0 0 | 6 ತಿಂಗಳಿಗೆ ... 2 8 0
3 ತಿಂಗಳಿಗೆ .. 1 4 0 | 3 ತಿಂಗಳಿಗೆ .. 1 8 0

ಪ್ರಕಾಶವು ವಿವಿಧ ಪ್ರವೃತ್ತ್ಯುಪಗ ಮಾರ್ಗ ಕರ್ನಾಟಕ ಪ್ರಕಾಶನಪರಾ ಬಿಧ ಪ್ರಥಿತ ಸಹಿತ ಶೋಭಿತಾ ॥ ಪ್ರಗುಂಕ ಹಿತವಾಸ ಸಹಿತ ವಿಪದ್ರುಣ ಸಜ್ಜನ್ಮ ಪ್ರಕಾಸು ಪರಿತೋಷಿತಾ ದಿಶತು ಮಾನಸಂಮುದಂ ॥

Vol. XXIII. BANGALORE:—MONDAY, JULY 27, 1896. No. 30.

SUN INSURANCE OFFICE

ESTABLISHED—1710

Insurance effected upon almost every description of property at the current rates of premium.

Total sum insured in 1894	£393,600,000
Premium	£ 1,021,811
Reserved Fund	£ 1,125,000

Claims arranged by the Local Agents are paid promptly and liberally

The jurisdiction of Local Tribunals recognised

MADRAS, 1st June 1896. } PARRY, & Co., Agents

Royal Exchange Assurance (Incorporated A D. 1720.)

Funds	£ 4,000,000
Claims paid	£37,000,000.

FIRE

Insurances are granted against Loss or Damage by Fire on all kinds of property at moderate rates.

LIFE.

Every description of Life Assurance effected.

No older office in existence

MADRAS, 1st June 1896. } PARRY, & Co., Agents

Select Telegrams

London 20th July—The Cuban insurgents have defeated a Spanish Column in the Province of P[illegible], killing and wounding fourteen officers and three hundred men, besides capturing the General in command

London 20th July—Trouble has broken out at N[illegible]khar, in the Vilayet of Sivas, in Asiatic Turkey, where three hundred and forty Armenians and sixty Mussulmans have been killed

The *Times'* Hong Kong correspondent states that a missionary charges the Japanese with great atrocities in South Formosa, where sixty villages have been burnt and thousands of inhabitants killed

Li Hung Chang, being interviewed in Paris declares that China desired to hold the balance equal between England and France, and that there was a share for both in the trade of South-West China

London, 20th July—Advices from Crete state that renewed murders of Christians have taken place at Herakleion and the port of Candia, and the presence of warships has been requested by the Consuls

The trial of Dr Jameson opened to-day

Before the Jury was sworn in, Sir T Clarke moved that the indictment be quashed on the ground that it was not stated that the Foreign Enlistment Act was operative where the alleged offences were committed.

Sir R Webster upheld the legality of the indictment, and the case was adjourned until to-morrow

THE

Karnataka Prakasika.

MONDAY, JULY 27 1896

PUBLIC OPINION IN INDIA

THE unjust act of the Home Government in charging this country with a portion of the cost of the troops sent to the Soudan has called forth what public spirit there is in India It is generally thought there is not much of this, and as a general rule this may be true. But on occasions there is more than people imagine, and the present occasion is one in point. The circumstances connected with the case were sufficient to call forth the indignation of the country. India supplied England with troops for a war in which the former has no interest It is all nonsense Lord George Hamilton telling the world that the Soudan is essential to Egypt Egypt would well do without the Soudan, and besides India has very little interest in the land of the Pharoahs The only object of interest is the Suez Canal and this is far more essential to England than to India The former should, therefore, see that no harm comes to it Some go so far as to think that if the Canal were destroyed the loss to India would not be very great while the Cape route was open to the trade of the world Vessels could proceed that way, though they would take a longer time, but with the improvement in seamanship the time would not be very much longer. But however this might be, it is the duty of England to look after the Suez Canal, and see that no injury comes to it. On account of the troops sent to assist in the war in the Soudan, India has been asked to contribute Against this the press of India and England has protested; the people in both lands have declared the exaction to be unjust, to be nothing short of robbery, but still the Home Government has persisted in making India give the ordinary pay of the troops now in the Soudan. We said that the people of the land have protested against the charge imposed upon them, and this they have done through the press and by means of public meetings Meetings have not been held in Southern India, and this is a pity, but in other parts there have been some very successful gatherings. The people present spoke out their minds, they were indignant that the Home Government should take advantage of them, should act so meanly towards them We are glad to find that the Government of India opposed the charge in question, that a strong minute of protest was sent home, and that this document was very favourably received by the people of England. Thus the people of all classes in India, with the rulers at their head, see the injustice of the proceeding, and have lifted up their voices against it. It is to be hoped that this will be a lesson to the Home Government and that in future it will fear to deal unjustly by this land. But the people themselves must not allow their interest to relax They must watch the doings of the rulers very carefully, they must see that no injustice, no wrong is done to the country They must see that only such measures as are calculated to do good should be carried out, the others should be resisted A good public opinion should be formed, and not only formed, but maintained in order that anything wrong may be corrected if not prevented It is for the people themselves to protest strongly when anything detrimental is proposed or carried out We want to see a strong public opinion formed, and we should like to see it formed at once

ASSESSMENT IN THE CITY.

NOTICE has been given in the *Mysore Gazette* and in the Local papers that the houses in the Western and Northern Extensions would be valued in order that they might be assessed We have a suggestion or two to make with regards to these parts of the town. The houses should not be assessed in the same way that they are in the City. There the compounds are small; the houses are close together. This is not the case in the Extensions, more especially in the Northern. The compounds are large, and the houses comparatively few. Consequently they ought to pay a higher rate of assessment. This would be only fair, for, the lighting, roads and conservancy would cost a large sum, and if the owners of houses here, are charged the same as the owners in other parts, the amount collected would not be sufficient to do what was needful, and the other parts of the place would have to contribute. This would be very unfair, for, in these Extensions—especially in the Northern— the owners of houses are well to do men In other parts the people are poor, but they have to contribute their share towards the upkeep of the Municipality, and it would be very hard if they had to assist their wealthier brethern, or make up for their shortcomings We, therefore, recommend that the owners of houses in the two localities should be made to pay according to the quantity of land they hold not according to the size or value of their houses. It would be very sad if the poor were made to pay for the rich, that men who have to depend for their support upon the work they perform during the day, should be called upon to help highly paid officials and prosperous merchants. It is to be hoped that the Municipality will look to this, that the President will see that no injustice is done, that the poor will not be called to assist the rich

News and Notes.

THE Maharaja Scindia left Simla for Gwalior on Friday 17th instant.

THE Rutlam-Ujjain Railway was opened for public traffic on the 15th instant.

IT is probable (says the *Daily News*) that Li Hung Chang will for a short time be the guest of Lord Salisbury at Hatfield.

A "METAL factory" has been established at Amritsar for the manufacture of brass and copper utensils, of superior design and finish

IT is satisfactory to note that within the last few days the Panjab has received a fair amount of rain and prospects in most districts are brightened.

IN the Cape Parliament, on June 30, Sir J Gordon Sprigg said a native war in Cape Colony was possible, as a consequence of the Matabele rebellion.

THE *Pioneer* understands that there is no truth in the report that the rent of Li-Hung-Chang's London residence is to be paid for out of the revenues of India.

WE are glad to note that the system of marking the time on postal seals, to which we referred the other day has been introduced in Madras also

THE Cretan Committee in Athens has sent a circular letter to all parts of the island calling on the people to from a revolutionary provisional government and declare for union with Greece

THERE have been rumours in Rome, which, however lack confirmation, that an Anglo Italian agreement is being concerted to send Indian troops from Suakim through Massowah to occupy Kassala.

THE report that a Brahmo lady who has passed the F A Examination of the Calcutta University is about to become an actress is contradicted. The report has caused much indignation in the Brahmo community

WE understand that Mr W S Caine has taken his passage for India by the steamer reaching Bombay on December 14 He will spend a week in Bombay and then go right on to Calcutta, reaching the town about the 21st

WHAT was until last year known in Madras as "the Handwriting Test for the Matriculates and First in Arts men, is now newly christened into "The Handwriting and Dictation Test for Matriculates and First in Arts men; and the fee of course is raised from two Rupees to three

WHAT had India to do with a "Mission to the Court of Persia" that it should pay £7,000. What, again, justifies the expenditure of £12,500 incurred in connection with "Her Majesty's Establishments in China"? Where is Jeddah and what have we to do with its Consulate that we should be mulcted in the sum of £158?

THE largest Bible in the world is the Buddhist Tripitaka or the Three Baskets, which comprises 325 volumes, and weighs 1,625 pounds. These sacred books are perfectly appalling in their bulk They were originally written in Pali. They have been translated into many languages, such as Chinese, Thibetian, and Mandashu.

ONCE more has the case of the Hindu widow been brought before the public in all its cruelty, At Poona a young widow of prepossessing appearance, it is alleged, poisoned herself to hide her shame as she misconducted herself. Police enquiry is being made into the case, the viscera having been sent to the Chemical Analyser

THE Craven Studentship of the value of £200, for advanced study and research away from Cambridge in the languages, literature, history, archæology, or art of ancient Greece or Rome, or the comparative philology of the Indo-European languages, have been awarded for a second year to R. Carr Bosanquet, B A, scholar of Trinity College

THE Lieutenant Governor received the deputation of the Oudh Talukdars at Lucknow on Thursday, and the question of the judicial future of Oudh came under discussion. Sir Antony MacDonnell, who was supported by Mr Evans and Mr. Holderness, invited the representatives of the Association to open their minds freely to the Government on the subject The general opinion seems to have been in favour of the establishment of a Chief Court for Oudh

ON Saturday evening (June 27) Li Hung Chang visited the Polytechnic Academy at Charlottenburg, where a Roetgen photograph of his head was taken with complete success. The bullet which was fired at him by an assassin at Shimonoseki entered his cheek below

the left eye, but could not be found by the medical men who attended him at the time The same day it was discovered by the help of the Rontgen apparatus It is embedded in a spot involving no danger, so that both his Chinese and his English Surgeons have stated that they do not think an operation necessary

The arrangements, under which the officers in the personal staff of some of our great Princes are selected and appointed, are unquestionably in need of reform. We observe, says the *Indian Mirror*, that His Highness the Maharajah Scindia of Gwalior has, for his Private Secretary, Sir Michael Filose, for Chamberlain to his household, Mr. Baker, for A.-D. C., Major J. Filose, and for his Medical Officer, Dr. Croft. The Maharajah Scindia is not a Europan but a Hindu. A Hindu Rajah can never feel at all at ease in the midst of a personal staff, consisting of individuals, who are all alien to him in manners and customs, and in thought and feeling The Princes, who, unfortunately, find themselves in the position of Maharajah Scindia perpetually surrounded by a whole host of European officers, all *pro eyes* of the highest officials, practically suffer the agony, and even something of the ignominy of a political prisoners Such an arrangement is, indeed, 'a grievance of our Princes, which ought to be remedied —*The Hindu*

Local and Provincial.

DEPARTURE —Mrs Mackworth Young and Miss Young left Bangalore last Wednesday *en route* to England. They will return by the end of the year.

THE SHEPPARD CASE.—An order was delivered in this case last Tuesday when it was dismissed, there being no ground on which to charge the accused.

GENERAL MACLEOD —This officer who was appointed to command the Bangalore District arrived in the Station on Friday last The train that ought to have come in at half past six did not arrive till after twelve o'clock, owing a derailment of the train.

THE WEATHER.—Is anything but pleasent just now. High winds prevail, and no rain worth mentioning comes down. This is very much needed, and unless we get a downpour before long matters will be very serious, A good deal of the land has not been ploughed, and where the seed has sprung up it is withering.

GOING TO ENGLAND —We learn that Mr Devaraja Urs, brother of Dalavoy Devaraja Urs and of Lieutenant-Colonel Desaraja Urs, who recently resigned his appointment of the Treasury Assistant Commissioner, Mysore District, intends going to England to qualify himself for the Bar —M. H.

The Mysore Gazette.

Bangalore, Thursday, 23rd July 1896

NOTIFICATIONS BY THE GOVERNMENT OF MYSORE

GENERAL AND REVENUE

No, 915—J 79 dated 17th July 1896

Mr P A Sivaprakasam Pillo, Munsiff and 2nd Class Magistrate of Hole Narsipur, is invested with power to try cases under the Breach of Contract Act No XIII of 1859

No 1026—J. 88, dated 18th July 1896

The following appointments are ordered —

Mr A. Subramanya Iyer, B A, Probationary Assistant Commissioner, is invested with the powers of the Additional Munsiff of Bangalore until further orders

Mr V. Rangachari, B A, B L, Vakil, High Court, Madras, to be Additional Munsiff, 3rd Class, at Mysore

Mr M A Narayanaiengar, B A, B L, Advocate, Chief Court of Mysore, to be Munsiff, 3rd Class, at Yedahalli

No 1035—*J 93, dated, 18th July 1896.*

The following promotions are ordered with effect from 1st July 1896 —

Mr. T J Vanderlowen is confirmed as Munsiff, 1st Class

Mr B. Srinivasa Rao Munsiff, 2nd Class, to act in the 1st Class, during the employment of Mr S Venkatavaradaiengar on other duty

Mr Basavaradhya is confirmed as Munsiff 2nd Class

Mr P A. Sivaprakasam Pillo, Munsiff, 3rd Class, to act in the 2nd Class, during the employment of Mr S Venkatavaradaiengar on other duty

Mr. L S A. D'Cruz is confirmed as Munsiff, 3rd Class.

No 1157—J 115, dated, 21st July 1896

The Government of Mysore hereby notify for general information that, from and after the 27th day of July 1896 there shall be established two permanent Additional Munsiffs Courts, one at Bangalore and the other at Mysore, and the Additional Munsiffs are hereby empowered to exercise jurisdiction over the taluks which are included within the jurisdiction of the Munsiffs of Bangalore and Mysore, respectively. The Chief Court will, from time to time, distribute the work between the principal and the additional Munsiffs

No 1159—J 117, dated, 21st July 1896.

The following transfers of Munsiffs are ordered .—

Mr T. J Vanderlowen from Bangalore to Mysore

Mr B Srinivasa Rao from Chikmagalur to Bangalore

Mr. T E Jayaram Iyer from Yedahalli to Hunsur

Mr N T, Gopalaiengar to Chikmagalur but to continue to officiate at Seringapatam until relieved by Mr S V[illegible] [illegible]

Mr S S Singri Rao, acting Munsiff of Mysore, to officiate as Munsiff of Chikmagalur during the employment of Mr N. T Gopalaiengar as Munsiff of Seringapatam

No 1162 J 120, dated 21st July 1896

Mr D A Ballard, Assistant Superintendent of Police is transferred, from the Kolar to the Tumkur district (*vice* Mr Philip Fowkes Bowring on other duty)

Mr G Dunning, Superintendent of Police is posted to the Kadur district

No 163—R 174 dated, 14th July 1896

Under Article 183 of the Mysore Service Regulations Y. Narasanna, Amildar of the Nanjangud taluk, is granted privilege leave for two months and twenty one days from 1st July 1896, prior to his retirement which will take effect from the date of the expiry of the leave now sanctioned

No 166—R 177 dated, 14th July 1896

Under Article 188 of the Mysore Service Regulations, C Venkatachalaiya, Amildar of the Seringapatam taluk, is granted privilege leave of absence for three months with effect from the 1st July 1896 after the expiry of which his retirement will take effect

No 535—Ft F 91 95, dated 14th July 1896

The one month's leave on medical certificate granted to Mr B Srinivasa Rao, Assistant Conservator of Forests, Sakrapur Forest sub division, in Notification No 9316—Ft. F 11-95, dated 10th April 1896, and which was extended by two months, under notification No 9476—Ft F 91 95 dated 13th April 1896, is further extended by six weeks

No 512—R F 110 95, dated 15th July 1896

Under Article 172 of the Mysore Service Regulations, B Sankaraiya Amildar of the Arkalgud taluk, is granted casual leave of absence for eight days with effect from the 15th July 1896, or such other date as he may avail himself of the same

The Taluk Sheristadar will, in addition to his own duties, be in charge of the taluk during the absence of the Amildar on leave or until further orders

No, 614—R 244, dated 20th July 1896

In modification of Notification No 312—R 97, dated 11th July 1896, the following postings of Assistant Commissioners are ordered —

Mr K Srinivasa Row to the Bangalore district

Mr. C Seshadriaengar to the Tumkur district.

This cancels the transfer of Mr J W Knight from the Hassan to the Bangalore district

No 621—*R 251, dated, 20th July 1896*

In modification of Notification No 381—R 81, dated 10th July 1896, the following transfers of Amildars are ordered —

C Narasinga Rao from Jagalur to Madgeri (to join forthwith).

Malhadeva Rao, from Mulbagal to Jagalur

2 This cancels the transfer of G. R Srinivasaiengar from Davangere to Madgeri

ಕರ್ಣಾಟಕ ಪ್ರಕಾಶಿಕಾ.

೧೮೯೬ನೇ ಇಸವಿ ಜುಲೈ ತಾ॥ ೨೭ನೇ ಸೋಮವಾರ

"ಪ್ರಬುದ್ಧ ಭಾರತ."

ಈ ತಿಂಗಳ ಮೊದಲನೆಯ ತಾರೀಖ್ ಮೊದಲು ಮದರಾಸಿನಲ್ಲಿ ಪ್ರಕಟಿಸಲ್ಪಡುತಿರುವ ಪ್ರಬುದ್ಧ ಭಾರತವೆಂಬ ಅಂಕಿತದಿಂ, ವೇದಾಂತಾರ್ಥಗಳನ್ನು ಪೌರಾಣಿಕೋಪಾಖ್ಯಾನಗಳೊಡನೆ ಪ್ರಜೆಗಳಿಗೆ ಬೋಧಿಸಿ, ಈ ಮಾನುಷ ಜನ್ಮದಲ್ಲಿ ಅವಶ್ಯ ತಿಳಿಯಬೇಕಾದ ತತ್ವಾರ್ಥಗಳನ್ನವರಿಗೆ ಅರುಹಬೇಕೆಂಬ ಸಂಕಲ್ಪ ಪೂರ್ವಕ ಪ್ರವರ್ತಿಸಿದ ಒಂದು ಹೊಸ ಪತ್ರಿಕೆಯು ಪ್ರಥಮ ಸಂಚಿಕೆಯು ತನ್ಮುಖ್ಯ ಪ್ರವರ್ತಕರಿಂದ ನಮಗೆ ಕಳುಹಲ್ಪಟ್ಟು ಮೂರು ವಾರಗಳಾದರೂ ಮುಖ್ಯ ನಮಗೆ ಪ್ರಾಪ್ತವಾದ ಅನೇಕ ಕಾರ್ಯ ಬಾಹುಳ್ಯದಿಂದ ನಮ್ಮ ದೃಷ್ಟಿಗದು ದೂರವಾಗಿ ಈಕಾಲದೊಳು ನಮ್ಮ ಕರ್ತವ್ಯವು ನೆರವೇರಿಸಲಾರದೆ ಹೋದ ಬಗ್ಗೆ ತತ್ಪತ್ರಿಕಾಧಿಪರ ಕ್ಷಮೆಯು ಪ್ರಾರ್ಥಿಸುವೆವು. ಪ್ರಕೃತ ಮಾಸಪತ್ರಿಕೆಯು ತತ್ಕಾಲದಲ್ಲಿ ಜನರಿಗೆ ಸಹಜವಾಗಿಯೋ ಅಥವಾ ಪರಪ್ರೇರಿತವಾಗಿಯೋ ಅಧ್ಯಾತ್ಮಿಕ ವಿಷಯ ವಿಚಾರದಲ್ಲುಂಟಾಗುತ ಬರುವ ಆಸಕ್ತಿಯಂ ಪೋಷಿಸಿ ಜೀವಾತ್ಮ ಪರಮಾತ್ಮ ತತ್ವಸ್ವರೂಪ ಪರಿಜ್ಞಾನ ಜನ್ಯವಾದ ಆನಂದವನ್ನುಂಟು ಮಾಡಲಿಕ್ಕೆ ಅನುಗುಣವಾದ ಸುಲಭ ಸಾಧನವಾಗಿರುತ್ತದೆ. ಈ ಪತ್ರಿಕೆಗೆ ಪಂಡಿತರಾದ ಅನೇಕಜನ ವಿದ್ಯಾವಂತರು ಲೇಖಕರಾಗಿ ಏರ್ಪಟ್ಟಿರುವವಲ್ಲದೆ ಜಗತ್ಪ್ರಸಿದ್ಧರಾದ ವಿವೇಕಾನಂದ ಸ್ವಾಮಿಗಳವರು ಸಹ ಅಭಿಮಾನಿಸಿರುವರು. ಸದರೀ ಸ್ವಾಮಿಗಳವರೆ ಇದಕ್ಕೆ "ಪ್ರಬುದ್ಧ ಭಾರತ"ವೆಂಬದಾಗಿ ನಾಮಕರಣವಂ ಮಾಡಿರುವಂತೆ ತಿಳಿಯಬರುತ್ತದೆ. ಇದರ [illegible] ಇದುವರಿಗೆ ಇಂಡ್ಯದೇಶೀಯರು ಮೈಮರೆತು ನಿದ್ರಿಸುತಲಿರುವವರಂ ತಟ್ಟಿ ಎಬ್ಬಿಸುವದೆಂಬುದು. ಇದರಿಂದ ಹಿಂದೂ ಸಿದ್ಧಾಂತಕ್ಕೂ ಬೌದ್ಧಸಿದ್ಧಾಂತಕ್ಕೂ ಇರುವ ಪರಸ್ಪರ ಸಂಬಂದವಂ ಸೂಚಿಸುವಂತಾದ್ದಾಗಿರುತ್ತದೆ. ಬೌದ್ಧರು ನಿರೀಶ್ವರ ವಾದಿಗಳೆಂಬದಾಗಿ ನಮ್ಮವರು ಹಳಿದು ದೂರಪಡಿಸಿದರೂ, ಅವರಲ್ಲಿರುವ ಅನರ್ಘ್ಯಗಳಾದ ನೀತಿ ಧರ್ಮ ನ್ಯಾಯಗಳು ಆರ್ಯಧರ್ಮ ಪ್ರೋಕ್ತವಾದವಾಗಿಯೇ ಇವೆ. ಇದಲ್ಲದೆ ಬುದ್ಧ ವಿಷಯಕವಾದ ಅವರ ವಿಚಾರವು ನಮ್ಮ ಶಾರೀರಕ ಮೀಮಾಂಸಾಶಾಸ್ತ್ರಾನುಗುಣವಾಗಿಯೇ ಇರುತ್ತದೆ. ಆದುದರಿಂದ ಅವರು ಕರ್ತನನ್ನಂಗೀಕರಿಸದಿದ್ದರೂ ಕರ್ತನಿಷ್ಟವಾದ ಧರ್ಮಗಳನ್ನು ಪ್ರತಿಪಾದನೆ ಮಾಡುವದರಿಂದ ಅವರು ನಮಗೆ ಬಾಹ್ಯರೆನಿಸಲಾರರೆಂದು ಶ್ರೀವಿವೇಕಾನಂದ ಸ್ವಾಮಿಗಳು ಅಭಿಪ್ರಾಯಗೊಂಡು ಪರಸ್ಪರ ಸಂಬಂಧವಂ ನಿರೂಪಿಸಿರುತ್ತಾರೆ. ಪ್ರಕೃತ ಪತ್ರಿಕಾ ಪ್ರಚಾರಕ್ಕಿರುವ ಮುಖ್ಯೋದ್ದೇಶವನ್ನು ಪತ್ರಿಕಾಧಿಪರು ಪ್ರಥಮ ಪುಟದೊಳು ಸ್ವವಿಷಯಕನ್ಯಾಸದಲ್ಲಿ ಸೂಚಿಸಿರುತ್ತಾರೆಂತೆಂದರೆ.—

ಅನೇಕ ಪಾಶ್ಚಾತ್ಯ ಮತಸಿದ್ಧಾಂತ ಪ್ರತಿಷ್ಠೆಯಂ ಪರೀಕ್ಷಿಸಬೇಕಾಗಿರುತ್ತದೆ ಯಲ್ಲದೆ ಅತಿಗಹನವಾದ ಆತ್ಮಸ್ವರೂಪ ವಿಚಾರವು ಪ್ರತ್ಯಕ್ಷ ಪ್ರಮಾಣ ನಿರೂಪಕನಾದ ಸ್ಟೀಂ ಎಂಜಿನ್ ಮುಂತಾದ ನಾನಾ ಯಂತ್ರಗಳ ಸಾಧನದಿಂದಲೂ, ಅದ್ಭುತ ವ್ಯಾಪಾರಗಳಿಂದಲೂ ವೈಚಿತ್ರ್ಯದಿಂದಲೂ ಕ್ಷಣಕಾಲವಾದರೂ ಜನರ ಹೃದಯದಿಂದುತ್ಪಾದಿತವಾಗಿ ದಿರುವದಿಲ್ಲವು ದೌರ್ಭಾಗ್ಯವಶಾತ್ ಮೇಲೆ ಕಂಡ ನಾನಾಯಂತ್ರಗಳು ಗೂಢವಾಗಿರುವದು ಸ್ಪಷ್ಟಪಡಿಸುವದಕ್ಕೆ ಪ್ರತಿಯಾಗಿ ಅನುಮಾನವು ಮತ್ತಷ್ಟು ವೃದ್ಧಿಗೊಳಿಸದಕ್ಕೆ ಸಾಗಿರುತ್ತವೆ ಈ ಅಂಶವು ಈಚೆಗೆ ಅಭಿವ್ಯಕ್ತವಾದುದರಿಂದ [illegible]ದ ಸಿದ್ಧದಂತೆ ಮತ ವಿಚಾರದಲ್ಲಿಯೂ, ಆತ್ಮವಿಚಾರದಲ್ಲಿಯೂ, ಜನರಿಗೆ ಉಪರ್ಯುಪರಿ ಆತುರವು ವೃದ್ಧಿಯನ್ನೈದುತಬರುತಲಿದೆ ಶಾಸ್ತ್ರವು ಅನೇಕ ನೂತನ ವಿಷಯಗಳಂ ಕಂಡು ಹಿಡಿದು ಪ್ರಜೆಗಳಿಗೆ ತೋರಿಸಿರುತ್ತದೆ. ಪರಂತು ಪರಿಣಾಮವಾದವಾಗಲಿ, ತತ್ಸಾರ್ವ ಸಿದ್ಧಾಂತಗಳಾಗಲಿ ಮೂಲತತ್ವವಂ ನಿಗಡಿಸಿ ಬೋಧಿಸುವಂತವಾಗಿಲ್ಲವು ಕ್ರಿಶ್ಚಿಯನ್ನರುಗಳು ತಮ್ಮಮತವಂ ಜ್ಞಾಪಕಮೊಳು ತರುತಲಿದಾರೆ. ಪರಂತು ಅದು ಹಿಂದು ಸಿದ್ಧಾಂತ್ವೇನ ಈಗ ಹಿಂದೂಗಳಿಂದ ಪರಿಭಾವಿಸಲ್ಪಡುವ ಸ್ಥಿತಿಯೊಳಿಲ್ಲವು ಈಗಲಾದರೋ ಭಗವದ್ವಿಲಾಸವು ಅನ್ಯೋನ್ಯಕರವಾಗಿ ಏರ್ಪಟ್ಟಿರುವದರಿಂದ ಸುಗ್ರಾಹ್ಯಕ ಪರರಾದ ಪಾಶ್ಚಾತ್ಯರ ದೃಷ್ಟಿಯು ಈ ಇಂಡ್ಯಾ ದೇಶದ ಮೇಲೆ ಬೀಳಲಾರಂಭಿಸಿತು. ಅವರೀಗ ನಿರವಧಿಕ ಸುವರ್ಣಪ್ರಭವ ಪ್ರಭುವರಾಗಿರುವ ಕಾರಣ ತಮ್ಮ ಪ್ರಾಪ್ತಿಕರಂತೆ *ರಾಜ್ಯ ಕೋಶಾಪೇಕ್ಷೆ ಯುಳ್ಳವ*ರಾಗಿ ಭರತ ದೇಶೋತ್ಪನ್ನವಾದ ಸುವರ್ಣ ರಚಿತ ನವರತ್ನ ಮುಂತಾದ ಅಮೂಲ್ಯ ಪದಾರ್ಥಗಳನ್ನು ಬಿತಾವಲದಾಗಿಲ್ಲವು. ಪುರಾತನವಾದ ವೇದಶಾಸ್ತ್ರದಲ್ಲಿರುವ ಅಕ್ಷೋಭ್ಯವಾದ ನಿಧಿಯನ್ನು ಸ್ವಾಧೀನ ಪಡಿಸಿಕೊಳ್ಳುವದಕ್ಕಾಗಿಯೇ ಅನ್ಯದೇಶೀಯರೆಲ್ಲರು ಪ್ರವರ್ತಿಸಿದಂತೆ ನಮ್ಮ ಉಪನಿಷದರ್ಥಗಳು ಅನ್ಯ ರಾಜ್ಯಗಳಲ್ಲಿ ಅದ್ಭುತ ವ್ಯಾಪಾರಗಳಂ ಮಾಡುತಲಿರುವಂತೆ ನಮ್ಮ ಕೀರ್ತ್ಯಕೆಗೆ ಪ್ರತಿನಿತ್ಯವೂ ಬರುವದರಿಂದ ಈಗ ನಮ್ಮ ಜಾಗೃತಿಯಾದ ಬರತಖುದಪ್ಪ ಪ್ರಬೋಧವಾದಂತೆ ನುಡಿಯಬೇಕಾಗಿದೆ. ಈಸ್ಥಿತಿಯಲ್ಲಿ ಪ್ರಕೃತ ಪತ್ರಿಕೆಯು ಬಹಳ ಅಪೇಕ್ಷಿತವೆಂದು ನಂಬಿ, ಏತನ್ಮುಖವಾಗಿ ಪತ್ರಿಕಾಧಿಪರು ಪ್ರವರ್ತಿಸಿರುವದಾಗಿ ತಿಳಿಸಿರುತ್ತಾರೆ. ಇದಲ್ಲದೆ ಈಪತ್ರಿಕೆಯು ಹಿಂದೂಮತ ಸಿದ್ಧಾಂತವ ನಿಜ ತಿಳಿಸುವ ಮಾತ್ರವಲ್ಲದೆ ಅನ್ಯಮತಗಳೊಡನೆ ವಿದ್ವೇಷ ತನ್ನನು ಕಲಹವನ್ನು ಸೃಷ್ಟಿಸದೆ ಐಕ್ಯಮತ ಸಮರಸವನ್ನೇ ಸೃಷ್ಟಿಗೊಳಿಸಬೇಕೆಂಬ ಅಭಿಪ್ರಾಯವು ನಮಗೆ ಬಹಳ ಹೃದಯಾಹ್ಲಾದಕರ ವಾಗಿರುತ್ತದೆ ನಿಜವಾಗಿ ಪರ್ಯಾಲೋಚಿಸಿದರೆ ಸಕಲ ಮತಗಳೂ ಸಕಲ ತತ್ವಗಳೂ, ಸಕಲ ಸಿದ್ಧಾಂತಗಳೂ, ಮೂಲತತ್ವವಾದ ಒಂದು ಪದಾರ್ಥವನ್ನೇ ನಾನಾ ಪ್ರಕಾರವಾಗಿ, ಉಪಪಾದನ ಮಾಡುತ ಅದನ್ನು ಹೊಂದುವದಕ್ಕೆ ನಾನಾ ಮಾರ್ಗಗಳಂ ಬೋಧಿಸುತ್ತಿದ್ದಾಗ್ಯೂ ಪರಸ್ಪರ ಪ್ರತ್ಯೇಕವಾದುದೆಂದನ್ನು ಯಾವ ಮತವೂ ತಿಳಿಸುವದಿಲ್ಲವು. ಮುಕ್ತರಾದವರಲ್ಲಿ ಮತ್ತುಗಳು ಅನೇಕವಾಗಿದ್ದರೂ ತದ್ಬದ್ಧವಾದ ಸೂತ್ರವು ಎಲ್ಲವರಲ್ಲಿಯೂ ಪ್ರವೇಶಿಸಿ ಏಕಾಕಾರವಾದ ಮಾಲಾರೂಪವಾಗಿ ನೀಕ್ಷಕರಿಗೆ ತೋರುವುದೋ ಅದೇ ಪ್ರಕಾರವೇ ಮತಗಳೂ ಸಿದ್ಧಾಂತಗಳೂ ಭಾವಿಸಲ್ಪಡಬೇಕಾದವಾಗಿವೆ ಮುಖ್ಯವಾಗಿ ಈ ಪ್ರಯತ್ನ ಕೇವಲಕೊಂಡಾದತೆಗ್ಗದ್ದಾಗಿರುತ್ತದೆ. ಇದಕ್ಕೆ ಎಲ್ಲರೂ ವಿದ್ಯಾದಿಸಹಾಯ ರೂಪೇಣ ಪ್ರೋತ್ಸಾಹ ಮಾಡಿ ಚಿರಕಾಲ ಜೀವಿಸಲಿಕ್ಕೆ ಬೇಕಾದ ಜೀವ ಕಳೆಯು ಕಲ್ಪಿಸಬೇಕೆಂಬದೇ ನಮ್ಮ ಪ್ರಾರ್ಥನೆಯಾಗಿರುತ್ತದೆ, ಈಪತ್ರಿಕಾ ಪ್ರಯೋಜನವನ್ನೆಲ್ಲರೂ ಅನುಭವಿಸುವಂತೆ ಇದರ ಮೌಲ್ಯವು ಸಾಲೀಯಾನಾ ೧॥ ರೂಪಾಯಿಗಳೆಂತಿಡಲ್ಪಟ್ಟಿದೆ. ಇದಕ್ಕಿಂತಲೂ ವಿಶೇಷ ಸೌಲಭ್ಯವಂ ನಾವು ನಿರೀಕ್ಷಿಸುವುದು ನಮಗೆ ಧರ್ಮವೆ? ಪಂಡಿತರಾದವರೆಲ್ಲರು ಸೇರಿ ಅಲ್ಲಿಯಲ್ಲಿ ನಾನಾ ಪ್ರಯತ್ನಗಳನ್ನು ಮಾಡುತ ದೇಶಭಾಷೆಗಳಲ್ಲಿ ಗೂಢ ವಿಷಯಗಳನ್ನೆಲ್ಲ ವಿಚಾರಮಾಡಿ ಪಾಮರರ ಹೃದಯವಂ ಪರಿಪಕ್ವ ಮಾಡುವ ತನಕ ನಮ್ಮ ಹಿಂದೂ ಮತಕ್ಕುಂಟಾಗುತಲಿರುವ ಪ್ರಬಲ ವಿರೋಧಗಳು ನಾಶವನ್ನೈದಲಾರವು ಸ್ವಪ್ರಯೋಜನ ರಹಿತವಾದ ಸಾಮುದಾಯಕ ಪ್ರಜಾಹಿತಂ ಕರಣ ಪ್ರವೃತ್ತಿಯು ನಮ್ಮವರಿಗೆ ಯಾವಾಗ ಸಾರ್ವತ್ರಿಕವಾಗಿ ಪ್ರಬಾಗುವದೋ ಆಗಲೆ ಭಾರತೀಯರು ನಿದ್ರೆಯಿಂದೆಚ್ಚತ್ತರೆಂದು ನುಡಿಯುವೆವಲ್ಲದೆ ತಾಪತ್ಪರ್ಯಂತ ನಿದ್ರಾವಸ್ಥೆ ಕಳೆವರೂ, ತತ್ಸೂಚಕವಾದ ಮುವರವು ಕಳೆದು ಜಾಗರೂಕತೆ ಪ್ರಬಾಗಲಿಲ್ಲವೆಂತಲೆ ಹೇಳುವೆವು. ನಮ್ಮ ವಿಮರ್ಶೆಗೆ ವಿಷಯವಾಗಿರುವ ಪ್ರಥಮ ಸಂಚಿಕೆಯಲ್ಲಿ ಅವಶ್ಯ ಜ್ಞಾತವ್ಯಗಳಾದ ಅನೇಕ ವಿಷಯಗಳು ಸುಲಭ ಶೈಲಿಯಿಂದ ಬರೆಯಲ್ಪಟ್ಟು ಅಪ್ರಬುದ್ಧರಾದ ವಿದ್ಯಾರ್ಥಿಗಳಿಗೂ, ಪ್ರಬೋಧವಾದ ಪ್ರಬುದ್ಧರಿಗೂ ಪರಿಗ್ರಹಾರ್ಹವಾಗ ಯೋಗ್ಯವಾದ ಮಾಸಪತ್ರಿಕೆಗಳ ಗೋಷ್ಠಿಯಲ್ಲಿ ಸೇರಿಸಲ್ಪಡಲಿಕ್ಕೆ ಅರ್ಹವೆನಿಸಿರುವದರಿಂದ ಇದರಶ್ರೇಯೋಭಿವೃದ್ಧಿಯಂ ನಾವು ಅಂತರವಾಗಿ ಕೋರುವಾತವರಾಗಿದವೆ.

ಹೃದಯವ್ಯಥಾಕಾರಿಯಾದ ಸ್ತ್ರೀ ಘಾತುಕವು.

ಸ್ತ್ರೀಸಾಮಾನ್ಯರಲ್ಲಿ ಸುಗುಣಗಳು ಬಹಳ ದುರ್ಲಭಗಳಾಗಿಯೇ ಇರುತಿವೆ. ವಿದ್ಯಾವಂತನಾದ ಪುರುಷನ ಯುಕ್ತಿ ಸಾಮರ್ಥ್ಯಕ್ಕಿಂತಲೂ, ಸ್ತ್ರೀಬುದ್ಧಿಯು ಬಹಳ ತೀವ್ರವಾಗಿಯೂ ಕದಾಚಿತ್ ಬಹಳ ಘಾತುಕವಾದದಾಗಿಯೂ ಇರುತದೆ. ಅವಳು ಯಾವವಿಧ ಸಾಹಸಕ್ಕೂ ಹಿಂಜರಿಯತಕ್ಕವಳಲ್ಲವು. ಅವಳಿಗೆ ವಿದ್ಯೆಯುಂಟು ತಕ್ಕ ಪ್ರಯುಕ್ತವಾದ ಅನುಕೂಲ್ಯವೂ ಕಡಮೆಯಾಗಿರುವಾಗಲೆ ಅತಿ ಸಾಹಸ ಕೃತ್ಯಗಳು ನಿರ್ಭೀತಳಾಗಿ ಮಾಡಿ ಸಾಧಿಸಿಕೊಳ್ಳುತ್ತಾಳೆ. ತದನುಕೂಲ್ಯವೂ ಕೈಗೂಡಿದ ಬಳಿಕ ಅವಳಂ ಹಿಡಿಯುವವರೆಯಿಲ್ಲವು. ಈಚೆಗೆ ಪುತ್ತೂರಲ್ಲಿ ಒಬ್ಬ ಉತ್ತಮಜಾತಿ ಹಿಂದೂ ಸ್ತ್ರೀಯು, ಒಬ್ಬ ಬಡಗಿಯನೊಂದಿಗೆ ವಿವಾಹಮಾಡಿರುವ ಸಮಯದಲ್ಲಿ ಪಾಠಶಾಲೆಗೆ ಹೋಗಿದ್ದು ಬಂದ, ಅವಳ ಮಗನು ಅದಂ ನೋಡಿ ಪ್ರತ್ಯುತ್ತರ ಹೇಳದೆ ಮರಳಿ ಪಾಠಶಾಲೆಗೆ ಹೋಗಿ ನಡೆದ ವೃತ್ತಾಂತವನ್ನು ಸ್ವಲ್ಪವು ಮರೆಮಾಚದೆ ತನ್ನ ಉಪಾಧ್ಯಾಯನಿಗೆ ತಿಳಿಸಿದನು. ಆಗ ಆ ಹುಡುಗನನ್ನು ಜೊತೆ ಮಚ್ಚಿಸಿ ಸಮಾಧಾನಪಡಿಸಿ ಮನೆಗೆ ವಾಪಸ್ ಕಳುಹಿಸಿ ಬಿಟ್ಟನು. ಆಗ ಘಾತುಕಳಾದ ತಾಯಿ ಹೊಂಬ ಕ್ರೂರಾಚಾರ ತನ್ನ ವಿಚಾರದ ಸಾಧನ ಸಮಯ ಬಂದಿತೆಂದು, ಪ್ರತಿವರ್ತಿಸುವ ಅವನ ಕೊರಳಂ ಹಿಡಿದು ಹೊಳೆಬಗ್ಗಿಸಿ, ತಲೆಯನ್ನು ಅಡಿಗೆಮನೆಯಲ್ಲಿದ್ದ ಅಪ್ಪದ ಮಣೆ ಬಚ್ಚಿಟ್ಟಳು. ಅದೇ ದಿನ ರಾತ್ರಿ ಅವಳಗಂಡನು ಮನೆಗೆ ಭೋಜನಕ್ಕೆ ಬರಲು, ತನ್ನ ಪಾತಿವ್ರತ್ಯ ನಿದರ್ಶನವಾದ ಅನ್ಯೋನ್ಯತ ಪತಿಭಕ್ತಿಯಂ ತೋರಿಸಿ, ನಾನಾ ಉಪಚಾರಗಳನ್ನು ಅವನಿಗೆ ಮಾಡಿ, ಊಟಕ್ಕೆಬಡಿಸಿದಳು. ಭೋಜನಕಾಲದಲ್ಲಿ ತನ್ನ ಪುತ್ರನೆಲ್ಲಿಹೋದನೆಂದು ಗಂಡನು ಕೇಳಲಾಗ ಭಾರ್ಯೆಯು ಮಗನು ಮಧ್ಯಾಹ್ನ ಬಂದು ಮರಳಿ ಎಲ್ಲಿಯೋ ಹೋದನು. ಹೋದವನು ಇನ್ನು ಮನೆಗೆ ಬರಲಿಲ್ಲವೆಂದು ಸಮಾಧಾನ ಹೇಳಿ ಯತೆಯಲ್ಲಿ ಅನ್ನವು ಬಡಿಸಿದಳು. ಬಳಿಕ ಆತನ ಎಲೆಯ ಮೇಲೆ ಬಿದ್ದಿರುವ ರಕ್ತಬಿಂದುಗಳು ಪತನವಾದುದಂ ಕಂಡು, ಗಂಡನು ಭಾರ್ಯೆಯಂ ನೋಡಿ ಇದೇನ ರಕ್ತವೆಂದು ಕೇಳಿದನು. ಒಬ್ಬ ದವೇಲೆ ಬೆಕ್ಕು ಇಲಿಯನ್ನು ಹಿಡಿದು ತಿನ್ನುತಲಿರಬೇಕು, ಅದರ ರಕ್ತವೇನಾದರು ಬಿದ್ದಿರಬಹುದು, ಎಂದು ಹೇಳಿ ನಿಚ್ಚಣಿಗೆ ತಂದು ಅಟ್ಟಕ್ಕೆ ಮೇಲೆ ಹತ್ತಿ ನೋಡುವೆನೆಂದು ಗಂಡನನ್ನು ಬಯಸ್ಕರಿಸಿದಳು, ಅವನು ಭೋಜನಾನಂತರ ಅಟ್ಟವನ್ನು ಹತ್ತಿದ ಮೇಲೆ ಪತ್ನಿಯಾಗ ಅಡಿಗೆಮನೆಯ ಬಾಗಿಲು ಸೆಳೆದು ಹೊರಗೆ ಚಿಲುಕ ಹಾಕಿ ಬಿಟ್ಟು ಬೀದಿಯಲ್ಲಿ ಬೀಳ್ದು, ಬಾಯಿ ಬಡಿದುಕೊಂಡು ತನ್ನ ಗಂಡನು ಮಗನನ್ನು ಅನ್ಯಾಯವಾಗಿಕೊಂದುದು ಪೈಶಾಚಿಕ ತರಿದಾನು, ಈ ಅಕ್ರಮವನ್ನು ನೀವೆಲ್ಲರೂ ಬಂದು ನೋಡಿರೆಂದು ಘಟ್ಟಿಯಾಗಿ ಕೂಗಿಕೊಂಡು ಪೋಲೀಸಿನವರನ್ನು ಕರೆದುಕೊಂಡು ಬಂದು ತೋರಿಸಿದಳು. ಪ್ರತ್ಯಕ್ಷ ಪ್ರಮಾಣಕ್ಕೆ ನಿರೂಪಣೆ ಬೇರೇನ ಬೇಕಾಗಿದೆ? ಮರ್ಮವು ಪ್ರತ್ಯಕ್ಷವಾಗಿದೆ. ಗಂಡನಮುಂದೆ ರಕ್ತ ಬಿದ್ದಿದೆ. ಫಿರ್ಯಾದಿಯು ಭಾರ್ಯೆಯಾಗಿ ಹುರ್ಜಿಟ್ಟಳು. ಈಗ ಪೋಲೀಸಿನವರು ಅವಳ ಗಂಡನನ್ನು ದಸ್ತಗಿರಿ ಮಾಡಿ ಟ್ರೈನ್ ನೋಳಿಟ್ಟಿರ್ಪರೆಂದು ಮಕಯಗಿರಿ ಪ್ರಾಂತ್ಯದಿಂದ ವೃತ್ತಾಂತ ಬಂದಿರುದಿದೆ. ಇದರ ಪರ್ಯವಸಾನವು ಮುಂದೆ ಅರಿಯಬೇಕಾಗಿದೆ. ಯಾವ ಪುರುಷನಿಂದಲಾಗಲಿ, ಎಷ್ಟು ಮುಖ ನೆರಿವರೆತಾನೆ ಈ ಸಾಹಸವು ಮಾಡಲು ಶಕ್ಯವಾದೀತು? ಸ್ತ್ರೀಬುದ್ಧಿ ಕೌಟಿಲ್ಯವು ಬಹಳ ಕೊಂಡಾಡ ತಕ್ಕದ್ದೇಸರಿ ಹೆಂಗುಸರಿಗೆ ಸಾಹಸವೂ ಪಾತಕತನವೂ ಸ್ವಭಾವಜನ್ಯವಾಗುವ ಪಕ್ಷಕ್ಕೆ ವಿದ್ಯಾವೈಲಕ್ಷಣ್ಯವು ಇನ್ನೆಷ್ಟರ ಪಾಟವವಂ ಉಂಟುಮಾಡುವದು. ಮೊದಲು ಮೇಲೆ ತಿಳಿಸಿದ ಹೆಂಗಸಿಗೆ ವಿದ್ಯಾಕೌಶಲ್ಯವು ಇಲ್ಲವೆಂದು ಭಾವಿಸಿದರೆ ಅದರ ಲೋಪದಿಂದಲೇ ಮೊಕದ್ದಮೆಯು ಹೊರಗಾಗುವದಕ್ಕೆ ಕಾರಣವಾಯಿತೆಂದು ಹೇಳಬೇಕು. ಅಲ್ಲದೆ ಅವಳು ವಿದ್ಯಾವಂತಳೆಂದು ಹೇಳಿದರೆ ಆ ವಿದ್ಯೆಯು ತನ್ನ ತಪ್ಪನ್ನ ಗಂಡನಮೇಲೆ ಹೊರಿಸುವದಕ್ಕೆ ಸಹಕಾರವಾಗಿರಬಹುದು. ಏವಂ ಚ ಕಲಿತವಿದ್ಯೆಯು ಕಾರ್ಯಕಾರಿಯಾಗದೇ ಹೋಗಲಾರದು.

Occasional Notes.

ನೈಮಿತ್ತಿಕ ವಿಷಯನ್ಯಾಸ.

ಕಳೆದ ಬುಧವಾರದ ದಿನ ಮದರಾಸಿಗೆ ಸೇರಿದ ಪೆರಂಬೂರಿನಲ್ಲಿ ವಾಸವಾಗಿರುವ ಪೋಲೀಸ್ ಜಮೇದಾರರ ದಿವಾನಂದ ನರಸಿಮ್ಮಯ್ಯಂ ತಲು ಯವರ ೪ ವರುಷದ ಕಮಲಾಂಬಾ ಯೆಂಬ ಹೆಣ್ಣು ಮಗುವು ಕೈಯಲ್ಲಿ ದೀಪದ ಕಡ್ಡಿಯನ್ನು ಇಟ್ಟುಕೊಂಡು ಆಡುತ್ತಿರುವಾಗ ಅದು ಹತ್ತಿಕೊಂಡು ಆ ಮಗುವಿನ ಬಟ್ಟೆಗಳನ್ನು ಸುಡಲಾರಂಭಿಸಿತು. ಮಗುವು ಘಾಬರಿ ಬಿದ್ದು ಕರ್ತವ್ಯ ತಿಳಿಯದೇ ಅಳುವದಕ್ಕೆ ಪ್ರಾರಂಭ ಮಾಡಿತು. ಸುತ್ತು ಜನರು ಬರುವದರೊಳಗಾಗಿ ಆ ಮಗುವಿನ ದೇಹವು ಬೆಂದು ಹೋಯಿತು. ಕೊನೆಗೆ ಆಘಾತದಿಂದ ಮಗುವು ಮೃತಿಯನ್ನು ಹೊಂದಿತು. ಮುಖ್ಯವಾಗಿ ಶಿಶುಸಂರಕ್ಷಣೆಯೆಂಬದು ಸಾಮಾನ್ಯವಲ್ಲವು. ಪ್ರಾಯೇಣ ನಮ್ಮ ಜನರು ಹ್ಯಾಗಾದರೂ ಮಕ್ಕಳನ್ನು ಹೆರುವದು ಮಾತ್ರ ತಮ್ಮ ಕರ್ತವ್ಯವೆಂಬದನ್ನು ಅವುಗಳ ರಕ್ಷಣೆ ಮುಂತಾದ ವಿಷಯಗಳು ದೈವಯತ್ನದಿಂದ ನಡೆಯಬೇಕೆಂದು ತಿಳಿದಿರುವಂತೆ ತೋರುತಿದೆ. ಮಾತಾಪಿತೃಗಳು ಕೇವಲ ಜನಕ ಭಾವವನ್ನು ವಹಿಸುವದಲ್ಲದೆ ಹೆಚ್ಚಾದ ಕರ್ತವ್ಯಗಳು ಅನೇಕ ವಿರುವವೆಂದು ತಿಳಿಯಬೇಕು.

ದಾನ ಶಾಸನಗಳ ರಿಜಿಸ್ಟರನ್ನು ಕುರಿತು ತಂಜಾವೂರು ಸಬಾರ್ಡಿನೇಟ ಜಡ್ಜಿಯವರ ಕೋರ್ಟಿನಲ್ಲಿ ಒಬ್ಬನು ತನ್ನ ಸ್ವಾಸ್ತ್ಯವನ್ನು ಮತ್ತೊಬ್ಬನಿಗೆ ದಾನಕೊಟ್ಟಿರುವದಾಗಿ ಪತ್ರ ಬರೆದು ಅದನ್ನು ರಿಜಿಸ್ಟರ್ ಮಾಡಿಕೊಡುವದಕ್ಕೆ ಪ್ರಾಪ್ತಸದರೀ ಸ್ವಾತಿಗಳನ್ನು ತನ್ನ ಸುಫರ್ದಿಗೆ ಒಪ್ಪಿಸಬೇಕೆಂದು, ದಾವಾ ದಾಖಲ್ಮಾಡಿದನು. ಆ ದಸ್ತೈವೇಜು ಅವರಿನಲ್ಲಿ ಬರುವದಕ್ಕೆ ನಂಬಿ, ರಿಜಿಸ್ಟರ್ ಮಾಡಬೇಕಾದುದು ಆವಶ್ಯಕವೆ? ದಾನಕೊಟ್ಟವನು ದಾನಶಾಸನವನ್ನು ಬರೆದ ತರುವಾಯ, ಬುದ್ಧಿ ಬದಲಾಯಿಸಿ ಅದನ್ನು ರಿಜಿಸ್ಟರ್ ಮಾಡಿಸಿ ಕೊಡುವದಿಲ್ಲವೆಂದು ಖಂಡಿತವಾಗಿ ನಿರಾಕರಿಸುವಪಕ್ಷಕ್ಕೆ ಅವನಿಂದ ಬಲಾತ್ಕಾರಪೂರ್ವಕ ರಿಜಿಸ್ಟರ್ ಮಾಡಿಸುವದುಚಿತವೆ? ಎಂಬ ಅನುಮಾನವುಂಟಾಗಿ ಸದರೀಮೊಕದ್ದಮೆಯು ಮದರಾಸ್ ಹೈಕೋರ್ಟಿನವರ ವಿಮರ್ಶೆಯ ಬಗ್ಗೆ ಕಳುಹಿಸಲ್ಪಟ್ಟಿತು. ಇದರ ಮೇಲೆ ಹೈಕೋರ್ಟಿನವರು ಅಭಿಪ್ರಾಯ ಪಟ್ಟದ್ದೇನೆಂದರೆ,—ದಾನಶಾಸನವು ಕ್ರಮವಾಗಿ ರಿಜಿಸ್ಟರಾಗುವತನಕ ಆ ದಾನವು ಪೂರ್ತಿಯಾದಂತೆ ಭಾವಿಸ್ಸುವತಕ್ಕದ್ದಲ್ಲವೆಂದೂ, ಆದು ಆತನ ಸ್ವಬುದ್ಧಿಯಿಂದ ಪರಪ್ರೇರಣೆಯಿಲ್ಲದೆ ಮಾಡಲ್ಪಟ್ಟದ್ದಾಗಿದ್ದರೂ, ಕಾನೂನ್ ಅನುಸರಿಸಿ ತನ್ನ ದಸ್ತವನ್ನು ನಿರ್ದುಷ್ಟಮಾಡಿ ದೃಢಪಡಿಸಬೇಕಾದುದು ಯುಕ್ತವೆಂದು ಆತನಿಗೇ ತೋರಿ ರಿಜಿಸ್ಟರ್ ಮಾಡಿಕೊಟ್ಟರೇನೆ ಹೊರತು ಆತನನ್ನು ರಿಜಿಸ್ಟರ್ ಮಾಡಿ ಕೊಡುವಂತೆ ಬಲಾತ್ಕರಿಸುವ ದಕ್ಕೆ ಅವಕಾಶವಿರುವದಿಲ್ಲವೆಂತಲೂ, ಅದೊಂದು ವೇಳೆ ಬಲಾತ್ಕಾರದಿಂ ರಿಜಿಸ್ಟರ್ ಮಾಡಲ್ಪಟ್ಟರೆ ಅದು ಧಾರ್ಯವಾಗಿ ಸಲ್ಲತಕ್ಕದ್ದೆಂತಲೂ, ನಿರ್ಣಯಿಸಿದರು.

ಸ್ತ್ರೀಬುದ್ಧಿ ಚಮತ್ಕಾರಕ್ಕೆ ಇದೂ ಒಂದು ನಿದರ್ಶನವಾಗಿ ಅಂಗೀಕರಿಸತಕ್ಕದ್ದಾಗಿರುತಿದೇನಂದರೆ,—ರುಕ್ಮಾಬಾಯಿಯೆಂಬ ಹೆಸರುಳ್ಳ ಒಬ್ಬ ಹಿಂದೂ ಸ್ತ್ರೀಯು ೪೦ ರೂಪಾಯಿಗಳ ಕ್ರಯ ಬಾಳುವ ಕಂಠಾಭರಣವನ್ನು ೬೦ ರೂಪಾಯಿಗಳಿಗೆ ಮತ್ತೊಬ್ಬರಲ್ಲಿ ಅಡವಿಟ್ಟು, ಮಾಜೀಯಾನಾ ೩ ರೂಪಾಯಿಗಳ ಬಡ್ಡಿಗೆ ಸಾಲ ತೆಗೆದುಕೊಂಡಿದ್ದೇನೆ ಅದನ್ನು ನೀನು ಬಿಡಿಸಿಕೊಂಡು ನಿನ್ನಲ್ಲಿಯೆ ಇಟ್ಟರೆ ನನಗೆ ಹಣ ದೊರೆಯುವಾಗ ಕೊಟ್ಟು ಬಿಡಿಸಿಕೊಳ್ಳುತ್ತೇನೆಂದು, ತಾಯಮ್ಮಾಳ್ ಎಂಬವಳನ್ನು ಪ್ರೇರಿಸಿ ಅವಳಿಂದ ಅತಮಾನ ಮೊಬಲಗನ್ನು ಕೊಡಿಸಿ ಒಡವೆಯಂ ಬಿಡಿಸಿ ಅವಳಿಗಿಟ್ಟಳು. ಕೆಲವು ದಿವಸಗಳಾದ ಬಳಿಕ ರುಕ್ಮಾಬಾಯಿಯು ಸದರೀ ಅಡವಾನದಾರಳಾದ ತಾಯಮ್ಮಾಳ್ ಬಳಿಗೆ ಹೋಗಿ, ತನ್ನ ಒಡವೆ ಬಡ್ಡಿಯಲ್ಲಿ ಮುಳುಗಿಹೋಗುವ ಕಾಲ ಪ್ರಾಪ್ತವಾಗಿದೆ, ಅದು ಕ್ರಯಮಾಡಿ ಸಾಲ ತೀರಿಸಿಬಿಡಬೇಕೆಂಬ ಉದ್ದೇಶವೊದನೆ ಅದಕ್ಕೆ ಒಬ್ಬ ಗಿರಾಕಿಯನ್ನೇರ್ಪಡಿಸಿದ್ದೇನೆ ಅವರು ಅದನ್ನು ಲಾಭಕರವಾಗಿ ಮಾರಿ ಕೊಟ್ಟಲ್ಲಿ ಅತಮಾನ ಮೊಬಲಗನ್ನು ಕೂಡಲೇ ತಂದುಕೊಟ್ಟು ಬಿಡುತ್ತೇನೆ ಇಲ್ಲದ ಪಕ್ಷಕ್ಕೆ ಒಡವೆಯನ್ನು ಮರಳಿ ನಿನ್ನಲ್ಲೇ ತಂದು ಕೊಟ್ಟು ಬಿಡುವೆನೆಂದು ಅವಳಿಗೆ ನಂಬಿಕೆ ಹುಟ್ಟುವಂತೆ ತಿಳಿಸಿ ಅವಳಿಂದ ತನ್ನ ಆಭರಣವಂತೆಗೆದುಕೊಂಡು ಹೋದಳು. ಅದ್ಯಾಪಿ ಅವಳ ಪತ್ತೆಯೇ ಇಲ್ಲವು ೬೦ ರೂಪಾಯಿಗಳೇನೊ ಹೋದವು. ಒಡವೆಯೂ ಕೈತಪ್ಪಿ ಹೋಯಿತು. ಸದರೀ ರುಕ್ಮಾಬಾಯಿಯು ಚೆಂಗಲ್ಪಟ್ಟು ಪ್ರಾಂತದಲ್ಲೊಂದು ಗ್ರಾಮದಲ್ಲಿದಾಳೆಂದು ವೃತ್ತಾಂತಬಂದಿರುತಿದೆ.

ಸಕಲ ಬ್ರಿಟಿಷ ಸಾಮ್ರಾಜ್ಯದ ಪರಿಷ್ಕರಣ ಧುರವನ್ನು ವಹಿಸಿರುವದಾಗಿ ನಟಿಸುವ ಬ್ರಿಟಿಷ್ ಪಾರ್ಲಿಮೆಂಟಿ ಸಭೆಯವರು ಕೂಡ ಝಾಲಾವಾಡ ಮಹಾರಾಜರವರಾದ ಜಲಿಂ ಸಿಂಗರವರ ವಿಷಯದಲ್ಲಿ ವಿಮುಖರಾದ ವರ್ತಮಾನವನ್ನು ಕೇಳಿ ನಾವು ಬಹಳ ವಿಷಾದಿಸುತ್ತೇವೆ. ಕಳೆದ ೨೧ ನೇ ತಾರೀಖಿನ ದಿನ ಆ ಸಭೆಯಲ್ಲಿ ಮಿ. ರಾಬರ್ಟ್ಸ್ ಎಂಬವರು ಕೇಳಿದ ಪ್ರಶ್ನೆಗೆ ಉತ್ತರರೂಪವಾಗಿ ಇಂಡಿಯಾ ಸೆಕ್ರೆಟರಿಯವರು ಮಹಾರಾಜರವರು ಸಿಂಹಾಸನಾರೂಢರಾದ ಕಾಲದಲ್ಲಿ ಮಾಡಿದ ಕರಾರಿನ ಪ್ರಕಾರ ನಡೆದು ಕೊಳ್ಳಲಿಲ್ಲವಾದಕಾರಣ ಅವರು ಪದಭ್ರಷ್ಟರನ್ನಾಗಿ ಮಾಡಬೇಕಾಗಿ ಬಂತೆಂದುನ್ನೂ, ಈ ವಿಷಯದಲ್ಲಿ ಇಂಡಿಯಾ ಸರ್ಕಾರದವರು ಯುಕ್ತ ರೀತಿಯಾಗಿ ಮಾಡಿ ಅದನ್ನು ಅನುಮೋದಿಸಿರುತ್ತಾರೆಂದುನ್ನೂ, ಪ್ರಕೃತದಲ್ಲಿ ಅದರ ವಿಚಾರವು ಅನಪೇಕ್ಷಿತವೆಂದುನ್ನೂ, ಹೇಳಿದರು. ಮಹಾರಾಜರಾಣಾಯವರು ಇನ್ನೂ ಯೌವನಾವಸ್ಥೆಯಲ್ಲಿರುವರು. ಇವರು ಕಾಲಸ್ಥಿತಿಗಳಂ ತಿಳಿಯದ ಮಂತ್ರಿಗಳ ಬೋಧನೆಯಂ ಕೇಳಿ ಪೊಲಿಟಿಕಲ್ ಏಜಂಟರ ಅತೃಪ್ತಿ ಫಲವನ್ನು ಸ್ವಲ್ಪವೂ ಪರಿಗಣಿಸದೆ ತಮ್ಮ ಅಂತಸ್ಸಾಕ್ಷಿಗೆ ತೋರಿದ ನ್ಯಾಯವೇ ಲೋಕದಲ್ಲಿ ಯೆಲ್ಲಕಡೆಯೂ ಪ್ರಚಾರದೊಳರುವಂತೆ ಭಾವಿಸಿದ್ದಾಗಿ ತೋರುತಿದೆ. ಹೀಗೆತಮ್ಮನ್ನು ಕುಲದೇವತೆಯಂತೆ ಆರಾಧಿಸದೇ ಸ್ವತಂತ್ರವಾಗಿ ಆಳಲು ಯತ್ನಿಸಿದ ಮಹಾರಾಜರಿಗೆ ತಕ್ಕ ಪ್ರಾಯಶ್ಚಿತ್ತ ಮಾಡುವದಾಗಿ ಏಜಂಟರವರು ನಿಶ್ಚಯಿಸಿದರು ನಡೆಯುವವನು ಎತವದೆ ಇರುವನೆ! ಚಾಡಿ ಹೇಳಿ ಮಹಾರಾಜರಿಗೆ ಹಾನಿಯನ್ನುಂಟು ಮಾಡಲು ಸಂದರ್ಭ ಯಾವಪೊಲಿಟಿಕಲ್ ಏಜಂಟರಿಗೆ ತಾನೆ ದೊರೆಯದು. ತತ್ರಾಪಿ ವಿಚಾರಲೇಶ ಮಾಡದೇ ಇವರ ಚಾಡಿಗಳನ್ನು ಶಿರಸಾವಹಿಸಿ ಅದರಂತೆ ನಡೆಯಲು ಮೇಲಿನ ಅಧಿಕಾರಿಗಳಾದ ಇಂಡ್ಯಾಸರ್ಕಾರದವರು ಯೇರ್ಪಟ್ಟಿರುವಾಗ ಯಾವನನ್ನು ತಾನೆ ಈ ಏಜಂಟರು ಪಾಡಿಕೊಡರು?

ಈ ಇಂಡ್ಯದೇಶದಲ್ಲಿ ಬ್ರಿಟಿಷನವರ ಆಳ್ವಿಕೆಯಲ್ಲಿ ಪ್ರಭುವರ್ಗದವರಿಂದ ಏತದ್ದೇಶೀಯರು ಅನುಭವಿಸುವ ಅಪಮಾನಗಳೂ ಬಹುವಿಧಗಳಾದ ಹಿಂಸೆಗಳೂ ಈಚೆಗೆ ಹೆಚ್ಚಿ ಅಂತ ಮೊಕದ್ದಮೆಗಳ ಆನುಪೂರ್ವಿಯನ್ನು ಸಂಗ್ರಹವಾಗಿ ಸೂಚಿಸುವಂತ ಒಂದು ಪುಸ್ತಕವು ಬರೆಯುವದು ಆವಶ್ಯಕವಾಗಿ ಪರಿಣಮಿಸಿದೆ, ಇದೇ ಪ್ರಕಾರ ಬಾಬೂ ರಾಮಗೋಪಾಲ ಸನ್ಯಾಲ್ ಎಂಬ ದೊಡ್ಡ ಮನುಷ್ಯರು “ಕಳೆದ ಒಂದು ಶತಮಾನದಲ್ಲಿ ಯೂರೋಪಿಯನ್ ಜನರಿಗೂ ಈ ದೇಶೀಯರಿಗೂ ಉಂಟಾದ ಕ್ರಿಮಿನಲ್ ಮೊಕದ್ದಮೆಗಳ ವಿವರ”ವೆಂಬ ಒಂದು ಪುಸ್ತಕವನ್ನು ಎರಡನೇ ಆವರ್ತಿ ಮುದ್ರಿಸಿರುತ್ತಾರೆ. ಮೊದಲನೇ ಸಂಸ್ಕರಣದಲ್ಲಿ ೨೭ ಮೊಕದ್ದಮೆಗಳನ್ನು ಸೂಚಿಸಿದ್ದರು. ಈಗಿನ ಸಂಸ್ಕರಣದಲ್ಲಿ ೧೬೦ ಮೊಕದ್ದಮೆಗಳನ್ನು, ಕಾಲಕ್ರಮವಾಗಿ, ಅಪರಾಧಗಳು ನಡೆದಸ್ಥಲಗಳನ್ನು, ಅವುಗಳ ಸ್ವರೂಪಗಳನ್ನು ಅಪರಾಧಿಗಳ ಹೆಸರು ಮತ್ತು ಮೊಕದ್ದಮೆ ವಿಚಾರಣೆಯ ಫಲಿತಾಂಶ ಮೊದಲಾದ ಸಮಾಚಾರಗಳೊದನೆ, ವಿವರಿಸಿರುತ್ತಾರೆ. ನಮ್ಮಯವಿದ್ಜ್ಞೆ ಇಲ್ಲದೆ ಬ್ರಿಟಿಷನವರು ಈ ದೇಶದಲ್ಲಿ ಮಾಡುವ ದರ್ಪಪ್ರಭುತ್ವವನ್ನು ಹೊಗಳುವವರ ಅವಲೋಕನಕ್ಕೆ ಈ ಗ್ರಂಥವು ಅರ್ಹವಾಗಿರುತಿದೆ. ಇದರಲ್ಲಿ ವಿವರಿಸಿರುವ ೧೬೦ ಮೊಕದ್ದಮೆಗಳಲ್ಲಿ ೪೧ ಕ್ಕೆ ಕಡಮೆ ಇಲ್ಲದೆ ಖೂನಿ ಬಾಬತಾಗಿರುವದಲ್ಲದೆ ಅವುಗಳಲ್ಲಿ ೧೬ ಮೊಕದ್ದಮೆಗಳಲ್ಲಿ ಅಪರಾಧಿಗಳು ಬಿಡುಗಡೆಯಾಗಿರುತ್ತಾರೆ. ೩ ಮೊಕದ್ದಮೆಗಳಲ್ಲಿ ಮಾತ್ರವೇ ಅಪರಾಧಿಗಳು ಮರಣದಂಡನೆಯನ್ನು ಅನುಭವಿಸಿರುತ್ತಾರೆ. ಮಿಕ್ಕವುಗಳಲ್ಲಿ ಕೇವಲ ಜುಲ್ಮಾನೆ ಅಥವಾ ಅಲ್ಪಶಿಕ್ಷೆಯಿನೊದನೆ ಮುಕ್ತರಾಗಿರುತ್ತಾರೆ. ಈ ದೇಶದೊಳು ಇದುವರಿಗೆ ನಡೆದಿರುವ ಈ ಜಾತಿ ಮೊಕದ್ದಮೆಗಳು ಯಾವತ್ತನ್ನೂ ಈ ಪುಸ್ತಕದಲ್ಲಿ ನಮೂದ ಮಾಡಿರುವದಾಗಿ ಎಣಿಸಲಾಗದು. ಈ ಗ್ರಂಥಕರ್ತರಿಗೆ ತಿಳಿಯಬಂದಿರುವವುಗಳನ್ನು ಮಾತ್ರ ಬರೆದಿರುತ್ತಾರೆ. ಅಂತವುಗಳಲ್ಲೂ, ದ್ರವ್ಯಲೋಭದಿಂದಲೂ ಇತರವಿಧ ಸಹಾಯಾಭಾವದಿಂದಲೂ ಅನೇಕಗಳನ್ನು ಬಿಡಬೇಕಾಯಿತಂತೆ.

ಮುಸಲ್ಮಾನರ ಆಳ್ವಿಕೆಯಲ್ಲಿ ಎಷ್ಟು ಜನಹಿಂದುಗಳು ಇಂತ ಕಷ್ಟಗಳನ್ನು ಅನುಭವಿಸಿದರೊ ಅವುಗಳಲ್ಲಿ ಇದು ಸಾವಿರದಲ್ಲಿ ಒಂದುಪಾಲಿಲ್ಲವೆಂದು ಕೆಲವರು ಹೇಳಬಹುದು. ಆದರೇ ಬ್ರಿಟಿಷನವರಂತೆ ಮುಸಲ್ಮಾನರು ಧರ್ಮದಿಂದಲೂ ನಿಷ್ಪಕ್ಷಪಾತವಾಗಿಯೂ ಪ್ರಜಾಪಾಲನೆ ಮಾಡುವೆವೆಂಬ ನಿರ್ಬಂಧಕ್ಕೆ ಒಳಪಟ್ಟರಲಿಲ್ಲ. ಅಂತವರ ವಿಷಯದಲ್ಲಿ ಈ ಸಾಮ್ಯವು ಸಲ್ಲುವದಿಲ್ಲ. ಈಗಲೂ ಬ್ರಿಟಿಷನವರು ತಮ್ಮ ಇಷ್ಟಬಂದಂತೆ ಆಳುವೆವೆಂದಾಗಲೀ ತಮ್ಮವರಿಗೆ ಬಂದುನ್ಯಾಯ ಇತರರಿಗೆ ಮತ್ತೊಂದು ನ್ಯಾಯನಡೆಸುವೆವೆಂದಾಗಲೀ ಬಹಿರಂಗವಾಗಿ ಹೇಳುವ ಪಕ್ಷಕ್ಕೆ ಈವಿಧವಾದ ಪುಸ್ತಕಗಳಿಗಾಗಲಿ ಅಥವಾ ಬ್ರಿಟಿಷನವರ ಮೇಲೆ ಲಕ್ಷೇಪಣೆಗಾಗಲೀ ಅವಶ್ಯಕತೆ ಅಥವಾ ಅವಕಾಶಗಳೇ ಇರುವದಿಲ್ಲವು. ಮೇಲೆ ತಿಳಿಸಿರುವಂತೆ ಯತ್ಕಿಂಚಿತ್ ದೋಷಗಳನ್ನು ತಿದ್ದಿ ಪ್ರಜಾ ಸಂತೋಷವನ್ನೂ ಅನಿತರ ಸಾಧಾರಣವಾದ ಪ್ರಕಸ್ತಿಯನ್ನೂ ಉಂಟುಮಾಡಿ ಕೊಳ್ಳುವದು ಧರ್ಮಪ್ರಭ ಗಳೆನಿಸಿರುವ ಬ್ರಿಟಿಷನವರಿಗೆ ಕರ್ತವ್ಯವಾಗಿಯೂ ಅಲಂಕಾರ ವಾಗಿಯೂ ಇರುತಿದೆ,

ಮತಸ್ತ್ರೀಯ್ವಳ ಬುದ್ಧಿ ಕುಶಲತೆಯು ಇನ್ನೂ ಆಶ್ಚರ್ಯ ಪಡತಕ್ಕದ್ದಾಗಿರುತಿದೇನುವರೆ,—ಈಚೆಗ ಒಬ್ಬ ಮಹಮದಿಯನ್ ಹೆಂಗಸು ಭಾರೀ ವಸ್ತ್ರಾಭರಣಗಳಿಂದ ಅಲಂಕರಿಸಿಕೊಂಡು ಒಂದು ತಟ್ಟೆಯ ತುಂಬ ಮಿಠಾಯಿ ವಗೈರೆ ಕೆಲವು ಭೋಜ್ಯ ಪದಾರ್ಥಗಳನ್ನಿಟ್ಟು ಅದಂ ತಾನೇ ತೆಗೆದುಕೊಂಡು ಮಾರ್ಗದಲ್ಲಿ ಹೋಗುತಲಿರುವಾಗ ಬಹಳ ಧನಿಕನಾದ ಒಬ್ಬ ಮುಸಲ್ಮಾನ್ ಗ್ರಹಸ್ಥನಂಕಂಡು ಬಹಳ ಪರಿಚಯವಿರುವವಳಂತೆ ಆತನಂ ಮಾತನಾಡಿಸಿ ಫಲಾನೆ ಪೇಟೆಯಲ್ಲಿರುವ ನಿಮ್ಮ ಸೋದರರು ಫಲಾನೆಯವರು ಮೊಹರಂ ಹಬ್ಬದ ಪ್ರಯುಕ್ತ ತಮಗೆ ಈ ತಟ್ಟೆಯಲ್ಲಿರುವ ಫಲಾಹಾರಾದಿಗಳನ್ನು ನನ್ನ ಕೈಯಲ್ಲಿ ಕೊಟ್ಟು ತಲುಪಿಸಿ ಬರುವಂತೆ ಹೇಳಿದ್ದರಿಂದ ಇವಂ ತಂದಿದ್ದೇನೆ ತಾವು ಅಂಗೀಕರಿಸಬೇಕು ಎಂಬದಾಗಿ ನುಡಿದಳು. ಆಗ ನವಾಬ್ ಸಾಹೇಬರು ಅವಳ ಮಾತನ್ನು ನಿಜವೆಂದು ನಂಬಿ “ಆಪ್ ಮಾಯಿ ಅಂದರಾವ್”ಎಂದು ಹೇಳಿ ಆಕೆಯಂ ಬಹಳ ಮರ್ಯಾದೆಯೊಡನೆ ಮನೆಯೊಳಗೆ ಕರೆದುಕೊಂಡು ಹೋಗಿ ತನ್ನ ಭಾರ್ಯೆ ಮೊದಲಾದವರಿಗೆ ಆಕೆ ಬಂದಿರುವ ಕಾರಣವನ್ನರುಹಲು ಅವರೆಲ್ಲರು ಅವಳನ್ನು ಬಹಳ ಉಪಚರಿಸಿ ಒಂದೆರಡು ದಿನಗಳ ತನಕ ತಮ್ಮ ಮನೆಯಲ್ಲಿ ನಿಲ್ಲಿಸಿಕೊಂಡು ಬಂದವಳ್ಯಾರೋ ಯೆಂಬ ಶಂಕೆ ಲೇಶವೂ ಇಟ್ಟುಕೊಳ್ಳದೆ ತಮ್ಮೊಳೊಬ್ಬಳಂತೆ ಭಾವಿಸಿ ಸಕಲ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ಮೂರನೆಯ ದಿನ ಮನೆಯ ಯಜಮಾನಿಯು ಭಾರೀ ಬೆಲೆಯುಳ್ಳ ಕೆಲವು ಆಭರಣಗಳನ್ನು ತೆಗೆದಿಟ್ಟು ಸ್ನಾನಮಾಡುವದಕ್ಕಾಗಿ ಸ್ನಾನಗೃಹಕ್ಕೆ ಹೋದ ಸಮಯದಲ್ಲಿ ಸದರೀ ಹೆಂಗಸು ಆ ಆಭರಣಗಳನ್ನು ಕಿಂಚಿತ್ತೂ ಪಂಚನೇಯಿಲ್ಲದೆ ಎಲ್ಲವನ್ನು ಶೇಖರಿಸಿಕೊಂಡು ಹೇಳದೆ ಕೇಳದೆ ಹೊರಟು ಹೋಗಿರುವವಳು ಇನ್ನೂ ಬರುವ ನಿರೀಕ್ಷಣೆ ಯೊಳದಾಳೆಂದು ತಿಳಿಯಬರುತಿದೆ. ಪರವಂಚನೆಯಲ್ಲೂ ಕಳ್ಳತನದಲ್ಲೂ ವ್ಯಭಿಚಾರದಲ್ಲೂ ದಿನೇದಿನೇ ತೋರಿಸಲ್ಪಡುವ ಬುದ್ಧಿ ಕುಶಲತೆಯು ಬಹಳ ಆಶ್ಚರ್ಯ ಪಡತಕ್ಕವಾಗಿರುತಿವೆ ಯಲ್ಲವೆ ಸ್ತ್ರೀಯರನ್ನು ಅಬಲೆಯರೆಂದು ಹೇಳುವದು ಬುದ್ಧಿ ದೋಷವಲ್ಲವೆ ಬೇರೇನೂ ಅಲ್ಲವು ಅವಕಾಶವಿಲ್ಲದಿದ್ದರೆ ಎಲ್ಲರೂ ಪ್ರಾಮಾಣಿಕರೆ ಎಲ್ಲರೂ ಸಾಧ್ವಿಗಳೇ ಅವಕಾಶ ವುಂಟಾದಾಗ ಅವರು ನುಬುವದು ಮಾತ್ರ ಬಹಳ ಪ್ರತಿಭಾಸವ

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕು ಜಾಜಿ ವೃತ್ತಾಂತಗಳು.

ಬರುವ ಆಗಷ್ಟು ತಿಂಗಳ ೬ನೇ ತಾರೀಖಿನಲ್ಲಿ ಈನ್ನೂರು ಲಾಲ್‌ಬಾಗ್ ತೋಟದಲ್ಲಿ ಫಲ ಪುಷ್ಪ ಪ್ರದರ್ಶನವು ಆಗುವದಾಗಿಯೂ ಅದರಲ್ಲಿ ಕೊಡತಕ್ಕದುವ ಇನಾಂಗಳ ಸ್ವರೂಪವೂ ಕಳೆದವಾರದ ಮೈಸೂರುಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುತ್ತಿದೆ.

ಪಬ್ಲಿಕ್ ಆಫೀಸುಗಳ ಕಟ್ಟಡಗಳಿಗೆ ಡಿಸ್ಟ್ರಿಕ್ಟು ವಗೈರೇ ಕಚೇರಿಗಳು ಹೋಗಬೇಕೆಂದು ಹುಕುಂ ಆಗಿ ಇದ್ದದ್ದು ಸರಿಯಷ್ಟೆ. ಮೆ|| ಚೆಂಗೈಯ್ಯಶೆಟ್ಟರವರ ಕಚೇರಿಯ ಸಾಮಾನುಗಳು ಸಾಗಿಸಲ್ಪಟ್ಟವು, ಸವರೀಯವರು ನರಶೀಬಿ ಹೋಗಿರುವರು ವಾಪಸು ಬರುತ್ತಲೇ ಅಲ್ಲೇ ಕಚೇರಿಯನ್ನು ಮಾಡುವರು.

ಮೈಸೂರು ಡಿಸ್ಟ್ರಿಕ್ಟ್ ಟ್ರೆಜರೀ ಅಸಿಸ್ಟೆಂಟ್ ಮೆ|| ದೇವರಾಜೇ ಅರಸಿನವರಿಗೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವವರಿಗೆ ನೂರು ರೂಪಾಯಿಗಳ ಸಂಬಳ ಕೊಡಲ್ಪಡುವದೆಂದು ಹುಕುಂ ಕೊಟ್ಟದ್ದರಿಂದ ಅವರು ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಇವರು ಬ್ಯಾರಿಸ್ಟರು ಪರೀಕ್ಷೆಗೆ ಓದಲು ವಿಲಾಯತಿಗೆ ಹೋಗುವರಂತೆ.

ಅರಮನೆ ಇಲಾಖೆಗೆ ಸೇರಿದ ಕಲೋಜಪಟ್ಟೆಯಲ್ಲಿ ಶಿರಸ್ತೇದಾರರು ಕಬ್ಬಿಣದ ಪೆಟ್ಟಿಗೆಯೊಳಗೆ ಇಟ್ಟದ್ದ ೩೦೬ ಚಿಲ್ಲರೆ ರೂಪಾಯಿಗಳನ್ನು ಯಾರೋ ಕಳವು ಮಾಡಿದರೆಂದು ಪೋಲೀಸಿಗೆ ರಿಪೋರ್ಟಾಗಿದೆ. ಅರಮನೆ ಪಹರೆಯವರೇ ರಾತ್ರಿಹಗಲು ಉಸ್ತುವಾರೀ ನೋಡುತ್ತಿದ್ದಾಗ್ಯೂ ಈ ಕಳವು ನಡೆದಿರುವದು ಆಶ್ಚರ್ಯವಾಗಿದೆ.

ಮೈಸೂರು ಲೋಕಲ್ ಸರ್ವಿಸ್ ಮತ್ತು ಪ್ಲೀಡರ್ ಪರೀಕ್ಷೆಗಳು ಈ ಸಂವತ್ಸರದ ನವಂಬರ್ ತಿಂಗಳ ೧೦ನೇ ತಾ|| ಮಂಗಳವಾರ ಮೊದಲು ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್‌ಗಳಲ್ಲಿ ಷುರು ಆಗುವದಾಗಿ ಮೈಸೂರು ಗೆಜೆಟಿನಲ್ಲಿ ಪ್ರಚುರ ಆಗಿರುತ್ತೆ—ಈ ಪರೀಕ್ಷೆಗಳಿಗೆ ಹೋಗತಕ್ಕವರು ಆಗಸ್ಟು ೩೧ನೇ ತಾರೀಖಿನ ಒಳಗಾಗಿ ಅಪ್ಲಿಕೇಷನ್‌ಗಳನ್ನು ಕಳಹಿಸಬೇಕು.

ಸರ್ಕಾರೀ ಕಾಲಸ್ಥಿತಿ ರಿಪೋರ್ಟಿನಿಂದ ಹಾಸನ ತಾಲ್ಲೂಕಿನಲ್ಲಿ ವಾಂತಿ ಭೇದಿಯೂ, ಅರಸೀಕೆರೆ ತಾಲ್ಲೂಕಿನಲ್ಲಿ ಚಳಿಜ್ವರವೂ, ಚಿತ್ರದುರ್ಗ ಡಿಸ್ಟ್ರಿಕ್ಟಿನ ಹಿರಿಯೂರು ಮತ್ತು ಜಗಲೂರು ತಾಲ್ಲೂಕುಗಳಲ್ಲಿ ಪಿಡುಗು ಪ್ರಬಲವಾಗಿರುವಂತೆ ತಿಳಿಯಬರುತ್ತಿದೆ. ಈ ವಾರದಲ್ಲೆಲ್ಲ ಮೋಡ ಮಾಡುತಲಿದ್ದರೂ ಮಳೆಯು ಕುದುರಿಂಗವಾಗಿಲ್ಲ ಬಿರುಗಾಳಿಯು ಬೀಸುತಲಿದೆ. ಸಾಗುವಳಿ ಕಾಲವಾದುದರಿಂದ ಮಳೆಯು ಅತ್ಯಾವಶ್ಯಕವಾಗಿರುತ್ತದೆ. ಹೀಗೆಯೇ ಮೈಸೂರು ಡಿಸ್ಟ್ರಿಕ್ಟಿನ ಅನೇಕ ಭಾಗಗಳಲ್ಲಿ ಮಳೆಯಿಲ್ಲದೇ ಧನಲಿನಮುಂದಿನ ಸ್ಥಿತಿಯು ಚಿಂತನೀಯವಾಗಿದೆ.

ಕೂಗುಮಾರಿ—ಪ್ರಕೃತದಲ್ಲಿ ಬೆಂಗಳೂರು ನೆಲಮಂಗಲ ಈ ಸ್ಥಳದಲ್ಲಿಯೂ ಮತ್ತು ಇತರ ಗ್ರಾಮಾಂತರಗಳಲ್ಲಿಯೂ ವಿಚಾರಮಾಡಬಿದ್ದರೆ ರಮಣೀಯವಾಗಿರುವ ಪ್ರಧಾನ ಪ್ರಬಂಧವಾದ ಸಮಾಚಾರಗಳನ್ನು ಹೇಳಿಕೊಂಡು ಸುದ್ದೆ, ಸುಣ್ಣ, ಕೆಮ್ಮಣ್ಣು, ಕುಂಕುಮ ಮುಂತಾದವುಗಳಿಂದ ನಾಮವನ್ನು ಮನೆಯ ಬಾಗಲಿಗೆ ಹಾಕಿ ಪ ನೆಮಕ್ಕಳೆಲ್ಲಾ ಭಯಪಡುತ್ತಾ ಕಾಲವನ್ನು ಕಳೆಯುತ್ತಿದ್ದಾರೆ ಇದಕ್ಕೆ ಕಾರಣವೇನೆಂದು ಅಲ್ಲಲ್ಲಿ ವಿಚಾರಿಸಿದರೆ. ಕೂಗುವ ಮಾರೆಮ್ಮನೆಂಬದಾಗಿ ಒಬ್ಬ ದೇವತೆಯು ಬಂದಿರುವಳಂತೆ, ಅವಳು ಕತ್ತಲು ಕರಗುವ ಹೊತ್ತಿನಲ್ಲಿ ಮನೆಗೆ ಬಂದು ಆ ಮನೆಯವರೊಳಗೆ ಇನ್ನು ಬಂದಂತೆ ಕೂಗುವಳಂತೆ; ಆಗಪ್ರತ್ಯುತ್ತರ ಹೇಳಿದವರು ಮೃತಿಯನ್ನು ಹೊಂದುವರಂತೆ, ಉತ್ತರಕೊಡದೆ ಇದ್ದರೆ ಮನೆಯವರೆಲ್ಲರೂ ರಕ್ತವನ್ನು ಕಾರಿ ಸಾಯುವರಂತೆ, ಹಿಂದು ಮೇಲೆ ಹೇಳಿದಂತೆ ಮನೆಯಲ್ಲಿ ಎಷ್ಟು ಮಕ್ಕಳಿದ್ದರೆ ಎಲ್ಲರೂ ಹಿಂದೊಂದು ನಾಮವನ್ನು ಬಾಗಿಲಲ್ಲಿ ಬರೆದಿದ್ದರೆ ಆ ಮಾರಿಯು ಇದನ್ನು ನೋಡಿ ನಮ್ಮ ಅಣ್ಣನಾದ ನಾಮದ ಹನುಮಂತರಾಯನು ಇಲ್ಲಿರುವನು, ಇಲ್ಲಿಗೆ ಹೋಗಬಾರದೆಂದು ಮುಂದಕ್ಕೆ ತೆರಳುವಳಂತೆ. ಕುರುಡರು ನೂರುಮಂದಿ ಸೇರಿದರೆ ಒಟ್ಟಿಗೆ ಹಳ್ಳದಲ್ಲಿ ಬೀಳಲು ಸಂದೇಹವೆ? ಹೀಗೆ ಸಕಲ ಜಾತಿಯವರೂ ಈ ತೆರನಾದ ಹುಚ್ಚಿಗೆ ಒಳಗಾಗಿರುವರಲ್ಲಾ; ಏನುಹೇಳಬೇಕು? ಇನ್ನು ಏನೇನು ಪ್ರಕಾರಗಳು ಉಂಟಾಗುತ್ತವೆಯೋ ನೋಡಬೇಕು ಹಿಂದೆ ಬಂದಿದ್ದ ಎಚ್ಚರವಿಲ್ಲದ ಮಾರೆಮ್ಮನವರಿಗಳಾದ ಪಂಚಿಯು ಮಾರಮ್ಮನಿಗೆ ಇವಳೊಬ್ಬಳು ತಂಗಿ ಎಂದು ಯಾರೋ ಒಬ್ಬರು ಈಗೀಗ ತಿಳಿದುಕೊಳ್ಳುವಂತಿದೆ. ಅಮನ್ನು ಏನಾಗುತ್ತದೆಯೋ ತಿಳಿಯಬೇಕು.

THE MYSORE GAZETTE.
ಮೈಸೂರು ಗೆಜೆಟ.

ಗುರುವಾರ, ತಾ|| ೨೩ನೇ ಜುಲೈ ೧೮೯೬.

ಮೈಸೂರ್ ಗವರ್ನಮೆಂಟಿನವರಿಂದ ಹೊರಡಿಸಿದ ಇಸ್ತಿಹಾರನಾಮೆಗಳು.

ನಂ. ೯೧೪, ಜೆ. ೧೯ ತಾರೀಖ್ ೧೩ನೇ ಜುಲೈ ೧೮೯೬. ಹೋಳೇನರಸೀಪುರದ ಮುನ್ಸಫಿ ಮತ್ತು ೨ನೇ ಕ್ಲಾಸ ಮ್ಯಾಜಿಸ್ಟ್ರೇಟರಾದ ಮೆ|| ಪಿ. ಎ. ಶಿವಸ್ವಾಮಿ ಪಿಳ್ಳೆಯವರು, ೧೮೯೪ ನೇ ಇಸವಿಯ ೧೩ ನೇ ನಂಬರ್ ಬ್ರಿಟಿಷ್ ಕಂಟ್ರಾಕ್ಟ ಆಕ್ಟನ್ನು ಅನುಸರಿಸಿ ಮೊಕದ್ದಮೆಗಳನ್ನು ಫೈಸಲು ಮಾಡುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. ೧೦೨೬ ಜೆ. ೪೯, ಸರ್ ೧೮೯೬ನೇ ಜುಲೈ ೧೯ ನೇ ತಾ||—ಈ ಕೆಳಗೆ ಕಂಡ ಮೊಕದ್ದಮೆಗಳು ಮಂಜೂರ್ಮಾಡಲ್ಪಟ್ಟಿರುತ್ತವೆ.

ಪ್ರೊಫೆಸನಲ್ ಅಸಿಸ್ಟೆಂಟ್ ಕಮ್ಮಿಷನರಾದ ಮೆ|| ಎ. ಸುಬ್ರಹ್ಮಣ್ಯ ಅಯ್ಯರ್ ಬಿ. ಎ. ಯವರು ಮತ್ತೊಂದು ಹುಕುಂ ಕೊಡಲ್ಪಡುವತನಕ ಬೆಂಗಳೂರು ಅಡಿಷನಲ್‌ಮುನ್ಸಫಿ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ಮದರಾಸ ಹೈಕೋರ್ಟ ವಕೀಲ್ ಮೆ|| ವಿ. ರಂಗಾಚಾರಿ ಬಿ. ಎ. ಬಿ. ಎಲ್. ಯವರು ಮೈಸೂರಲ್ಲಿ ೩ ನೇ ಕ್ಲಾಸ ಅಡಿಷನಲ್ ಮುನಸಫರಾಗಿರತಕ್ಕದ್ದು.

ಮೈಸೂರು ಚೀಫ್‌ಕೋರ್ಟ ಅಡ್ವೊಕೇಟರಾದ ಮೆ|| ಎಂ. ಎ. ನಾರಾಯಣ ಅಯ್ಯಂಗಾರ್ ಬಿ. ಎ. ಬಿ. ಎಲ್. ಯವರು ಎಡತೊರೆ ೩ ನೇ ಕ್ಲಾಸ ಮುನಸಫರಾಗಿರತಕ್ಕದ್ದು.

ನಂ. ೧೦೪೪—ಜೆ. ೯೩, ಸರ್ ೧೮೯೬ ನೇ ಜುಲೈ ೧೯ ನೇ ತಾ|| ಈ ಕೆಳಗೆ ಕಂಡ ಬಡ್ತಿಗಳು ೧೮೯೬ ನೇ ಜುಲೈ ಗುರ್ರೇ ಲಾಗಾಯಿತು ಹುಕುಂ ಮಾಡಲ್ಪಟ್ಟಿರುತ್ತವೆ.

ಮೆ|| ಟಿ. ಜೆ. ವ್ಯಾಂಡರ್ಪ್ಲೋಗ್ ಯವರು ೧ ನೇ ಕ್ಲಾಸ ಮುನ್ಸಫರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ಎರಡನೇ ಕ್ಲಾಸ ಮುನ್ಸಫಿ ಮೆ|| ಬಿ. ಶ್ರೀನಿವಾಸರಾಯರು ಮೆ|| ಎಸ. ವೆಂಕಟವರದಯ್ಯಂಗಾರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ೧ ನೇ ಕ್ಲಾಸಿನಲ್ಲಿ ಆಕ್ಟಿಂಗ್ ತರೀಕ ಇರತಕ್ಕದ್ದು.

ಮೆ|| ಬಿ. ಬಸವಾರಾಧ್ಯರವರು ೨ ನೇ ಕ್ಲಾಸ ಮುನ್ಸಫರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ಮೂರನೇ ಕ್ಲಾಸ ಮುನ್ಸಫಿ ಮೆ|| ಪಿ. ವಿ. ಶಿವಸ್ವಾಮಿಪಿಳ್ಳೆ ಯವರು ಮೆ|| ಎಸ. ವೆಂಕಟವರದಯ್ಯಂಗಾರ್ರು ಬೇರೆ ಕೆಲಸದ ಮೇಲಿರುವ ಕಾಲದಲ್ಲಿ ೨ ನೇ ಕ್ಲಾಸಿನಲ್ಲಿ ಆಕ್ಟಿಂಗ್ ತರೀಕ ಇರತಕ್ಕದ್ದು.

ಮೆ|| ಎಲ್. ಎಸ. ವಿ. ಡಿಕ್ರೂಜ್ ಯವರು ೩ನೇ ಕ್ಲಾಸ ಮುನ್ಸಫರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ನಂ. ೧೦೪೭ ಜೆ. ೧೦೫ ತಾ|| ೨೧ನೇ ಜುಲೈ ೧೮೯೬. ೧೮೯೬ನೇ ಇಸವಿ ಜುಲೈ ೨೭ ನೇ ತಾರೀಖ್ ಮೊದಲು ಮತ್ತು ತದನಂತರವು ಬೆಂಗಳೂರು ಮತ್ತು ಮೈಸೂರ್ ಷಹರಗಳಲ್ಲಿ ಖಾಯಮವಾಗಿ ಎರಡು ಅಡಿಷನಲ್ ಮುನ್ಸಫಿ ಕೋರ್ಟುಗಳು ಸ್ಥಾಪಿಸಲ್ಪಡುವವಲ್ಲದೆ ಅದೇ ಸ್ಥಳದ ಅಡಿಷನಲ್ ಮುನ್ಸಫಿಗಳು, ಬೆಂಗಳೂರು ಮತ್ತು ಮೈಸೂರು ಮುನ್ಸಫಿಗಳ ಕ್ರಮ ಪ್ರಕಾರ ಅವರವರ ಸ್ಥಳಾಧಿಕಾರ ಪರಿಹದ್ದಿಗೆ ಒಳಪಟ್ಟಿರುವ ತಾಲ್ಲೂಕುಗಳ ಮೇಲೆ ತಮ್ಮ ಅಮಲನ್ನು ಚಲಾಯಿಸುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ ಚೀಫ್‌ಕೋರ್ಟಿನವರು, ಆಯಾ ಪ್ರದೇಶದೊಳಗಿರುವ ಮುಖ್ಯ ಮುನ್ಸಫರಿಗೂ ಅಡಿಷನಲ್‌ಮುನ್ಸಫರಿಗೂ, ಆಗಾಗ್ಗೆ ಕೆಲಸವನ್ನು ಹಂಚಿಕೊಡುವರು.

ನಂ. ೧೦೪೯—ಜೆ. ೧೦೭ ಸರ್ ೧೮೯೬ ಜುಲೈ ೨೧ ನೇ ತಾ||—ಈ ಕೆಳಗೆಕಂಡ ಮುನಸಫರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ.

ಮೆ|| ಟಿ. ಜೆ. ವ್ಯಾಂಡರ್ಪ್ಲೋಗ್ ಯವರು ಬೆಂಗಳೂರಿಂದ ಮೈಸೂರಿಗೆ.

ಮೆ|| ಬಿ. ಶ್ರೀನಿವಾಸರಾಯರು ಚಿಕ್ಕಮಗಳೂರಿಂದ ಬೆಂಗಳೂರಿಗೆ.

ಮೆ|| ಟಿ. ಅ. ಜಯರಾಮಯ್ಯರವರು ಯಡೆಯೂರಿಂದ ಹೊನ್ನಾಳಿಗೆ.

ಮೆ|| ಎ. ಟಿ. ಗೋಪಾಲಯ್ಯಂಗಾರ್ರವರು ಚಿಕ್ಕಮಗಳೂರಿಗೆ.

ಆದರೆ ಮೆ|| ಎಸ. ವೆಂಕಟವರದಯ್ಯಂಗಾರ್ರವರಿಂದ ಬಿಡುಗಡೆಯಾಗುವ ತನಕ ಶ್ರೀರಂಗಪಟ್ಟಣದಲ್ಲೇ ಆಕ್ಟಿಂಗ್ ತರೀಕ ಕೆಲಸ ನೋಡತಕ್ಕದ್ದು. ಮೈಸೂರಲ್ಲಿ ಆಕ್ಟಿಂಗ್ ಮುನಸಫರಾಗಿರುವ ಮೆ|| ಎಸ ಕೇಶಗಿರಿರಾಯರು, ಶ್ರೀರಂಗಪಟ್ಟಣದಲ್ಲಿ ಮೆ|| ಎ. ಟಿ. ಗೋಪಾಲಯ್ಯಂಗಾರ್ರು ಮುನ್ಸಫಿ ಕೆಲಸ ನೋಡುತಲಿರುವ ತನಕ ಚಿಕ್ಕಮಗಳೂರಲ್ಲಿ ಆಕ್ಟಿಂಗ್ ಮುನಸಫರಾಗಿರತಕ್ಕದ್ದು.

ನಂ. ೧೦೬೦—ಜೆ. ೧೧೦ ಸರ್ ೧೮೯೬ ಜುಲೈ ೨೦ ನೇ ತಾ||—ಬೇರೆ ಕೆಲಸದಮೇಲಿರುವ ಮೆ|| ಫಿಲಿಪ್-ಫ್ರಾನ್ಸಿಸ್ ಬೌರಿಂಗ್ ಯವರ ಬದಲಾಗಿ, ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟರಾದ ಮೆ|| ಡಿ. ಎ. ಬಾಲ್ಫೋರ್ ಯವರು ಕೋಲಾರದಿಂದ ತುಮಕೂರಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ ಪೋಲೀಸ್ ಸುಪರಿಂಟೆಂಡೆಂಟರಾದ ಮೆ|| ಜೆ. ಡನ್ನಿಂಗ್‌ಯವರನ್ನು ಕೋಲಾರಿಗೆ ವರ್ಗಮಾಡಿದೆ.

ನಂ. ೪೬೩ ಆರ್ ೧೭೮ ತಾ|| ೧೮ ನೇ ಜುಲೈ ೧೮೯೬.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೯೯ ನೇ ಆರ್ಟಿಕಲ್ ಅನುಸರಿಸಿ, ನಂಜನಗೂಡು ತಾಲ್ಲೂಕ್ ಅಮಲ್ದಾರ್ ವೈ. ನರಸಣ್ಣನವರಿಗೆ, ೧೮೯೬ ನೇ ಇಸವಿ ಜುಲೈ ಗುರ್ರೇ ಲಾಗಾಯಿತು ಮೂರುತಿಂಗಳು ಇಪ್ಪತ್ತೊಂದು ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಿದೆ. ಈಗ ಮಂಜೂರ್ಮಾಡಲ್ಪಟ್ಟಿರುವ ರಜಾ ತೀರಿದ ತಾರೀಖ್ ಲಾಗಾಯಿತು ಇವರಿಗೆ ಖರುವಂತೆ ಕೆಲಸದಿಂದ ನಿವೃತ್ತರಾಗಬೇಕಾದುದಕ್ಕೆ ಪೂರ್ವಾಂಗವಾಗಿ ಮೇಲೆ ಕಂಡ ರಜಾ ಕೊಡಲ್ಪಟ್ಟಿರುತ್ತವೆ.

ನಂ. ೪೬೬ ಆರ್. ೧೭೭ ತಾ|| ೧೮ನೇಜುಲೈ ೧೮೯೬.—ಮೈಸೂರ್ ಸರ್ವಿಸ ರೆಗ್ಯುಲೇಷನ್‌ಗಳ ೧೯೯ ನೇ ಆರ್ಟಿಕಲ್ ಅನುಸರಿಸಿ ಶ್ರೀರಂಗಪಟ್ಟಣದ ತಾಲ್ಲೂಕ್ ಅಮಲ್ದಾರ್ ಸಿ. ವೆಂಕಟಾಚಲಯ್ಯನವರಿಗೆ, ಈಗ ಮಂಜೂರಾಗಿರುವ ರಜಾ ಪೂರೈಸಿದ ತರುವಾಯ ಕೆಲಸದಿಂದ ನಿವೃತ್ತಿಯಾಗಬೇಕಾದ್ದರಿಂದ ಜಾರೀಯಲ್ಲಿ ಬರುವದಾದಕಾರಣ ೧೮೯೬ ನೇ ಇಸವಿ ಜುಲೈ ಗುರ್ರೇ ತಾರೀಖ್ ಲಾಗಾಯಿತು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೩೪೪ ಎಫ್. ಟಿ. ಎಫ್ ೯೦—೯೭ ತಾ|| ೧೮ ನೇ ಜುಲೈ ೧೮೯೬—೧೮೯೬ ನೇ ಇಸವಿ ಏಪ್ರಿಲ್ ೧೦ ನೇ ಮಹುರಂ ಉಳ್ಳ ೯೩೯೬ ಎಫ್. ಟಿ. ಎಫ್ ೯೦-೯೭ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಷಿಕಾರಿಪುರದ ಫಾರೆಸ್ಟ ಸಬ್‌ಡಿವಿಜನ್ ಚಾರ್ಜಿನಲ್ಲಿದ್ದ ಫಾರೆಸ್ಟ ಅಸಿಸ್ಟೆಂಟ್ ಕನ್ಸರ್ವೇಟರ ಮೆ|| ಬಿ. ಶ್ರೀನಿವಾಸರಾಯರಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಮೂರು ತಿಂಗಳ ರಜಾ ೧೮೯೬ ನೇ ಇಸವಿ ಏಪ್ರಿಲ್ ೧೯ ನೇ ಮಹುರಂ ಉಳ್ಳ ೯೩೭೮—ಎಫ್. ಟಿ. ಎಫ್. ೯೦—೯೭ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಎರಡುತಿಂಗಳತನಕ ಜಾಸ್ತೀ ಮಾಡಲ್ಪಟ್ಟದ್ದು ಮತ್ತೊಂದು ಆರು ವಾರಗಳ ತನಕ ಇದರಿಂದ ಜಾಸ್ತೀ ಮಾಡಲ್ಪಟ್ಟಿರುತ್ತದೆ.

ಮೆ|| ಶ್ರೀನಿವಾಸರಾಯರು ರಜಾಮೇಲೆ ಗೈರಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಷಿಕಾರಿಪುರದ ಸಬ್‌ಡಿವಿಜನ್ ಚಾರ್ಜಿನಲ್ಲಿರುತ್ತ ಫಾರೆಸ್ಟ ಎಕಸ್ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರ ಮೆ|| ಮಾಂಟೀರೋ ಯವರು ಕೆಲಸ ನೋಡುತಲಿರತಕ್ಕದ್ದು.

ನಂ. ೫೧೦. ಆರ್ ಎಫ್ ೧೮೬—೯೭ ತಾ|| ೧೭ನೇ ಜುಲೈ ೧೮೯೬.—ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೭೦ ನೇ ಆರ್ಟಿಕಲ್ ಅನುಸರಿಸಿ ಅರಕಲಗೂಡು ತಾಲ್ಲೂಕ್ ಅಮಲ್ದಾರ್ ಬಿ. ಶಂಕರಯ್ಯನವರಿಗೆ ೧೮೯೬ ನೇ ಇಸವಿ ಜುಲೈ ೧೭ ನೇ ತಾರೀಖ್ ಲಾಗಾಯಿತು ಅಥವಾ ಆವರಾ ವಹಿಸಿಕೊಳ್ಳುವ ತಾರೀಖ್ ಮೊದಲು, ಹುಂಡುದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ ಅಮಲ್ದಾರರು ರಜಾಮೇಲೆ ಗೈರಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ತಾಲ್ಲೂಕ್ ಚಾರ್ಜಿನಲ್ಲಿ ಆ ತಾಲ್ಲೂಕ್ ಶಿರಸ್ತೇದಾರರು ತಮ್ಮ ಸ್ವಂತ ಕೆಲಸದೊಡನೆ ಇರುತಲಿರತಕ್ಕದ್ದು.

ನಂ. ೬೧೪ ರೆ.—೨೪೪ ಸರ್ ೧೮೯೬ ಜುಲೈ ೨೧ನೇ ತಾ.—ಸರ್ ೧೮೯೬ ಜುಲೈ ೧೧ ನೇತಾರೀಖಿನ ನಂ. ೩೧೨—ರೆ. ೯೭ ನೇ ನಂಬರ್ ಇಸ್ತಿಹಾರನ್ನು ಬದಲಾಯಿಸಿ ಈ ಕೆಳಗೆ ಕಂಡ ಅಸಿಸ್ಟೆಂಟ್ ಕಮ್ಮಿಷನರ್‌ಗಳ ಸ್ಥಳ ವಿಲೇವಾರಿಯು ಹುಕುಂ ಮಾಡಲ್ಪಟ್ಟಿರುತ್ತವೆ.

ಮೆ|| ಕೆ. ಶ್ರೀನಿವಾಸರಾಯರು ಬೆಂಗಳೂರು ಡಿಸ್ಟ್ರಿಕ್ಟಿಗೆ.

ಮೆ|| ಸಿ. ಕೇಶವಯ್ಯಂಗಾರು ತುಮಕೂರು ಡಿಸ್ಟ್ರಿಕ್ಟಿಗೆ, ಇವರಿಂದ ಮೆ|| ಜೆ. ಹಬ್ಬಿಯೂ ಸ್ಮಿತ್ ಯವರು ಹಾಸನದಿಂದ ಬೆಂಗಳೂರಿಗೆ ಮಾಡಲ್ಪಟ್ಟಿದ್ದ ವರ್ಗವು ರದ್ದು ಮಾಡಲ್ಪಟ್ಟಿದೆ.

ನಂ. ೬೦೧ ರೆ. ೨೪೧ ಸರ್ ೧೮೯೬ ಜುಲೈ ೨೦ ನೇ ತಾ.—ಸರ್ ೧೮೯೬ ಜುಲೈ ೧೧ನೇ ತಾರೀಖ್ ನಂ. ೨೯೮—ರೆ ೪೧ ನೇ ಇಸ್ತಿಹಾರನ್ನು ಬದಲಾಯಿಸಿ ಈ ಕೆಳಗೆ ಕಂಡ ಅಮಲ್ದಾರ್‌ಗಳ ವರ್ಗಗಳು ಮಂಜೂರಾಗಿವೆ.

ಸಿ. ನರಸಿಂಗರಾಯರು ಜಗಲೂರಿಂದ ಮೂಡಿಗೆರೆಗೆ, ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

ಮಹಾದೇವರಾಯರು ಮಾಳವಾಗಲಿಂದ ಜಗಲೂರಿಗೆ.

ಇವರಿಂದ ಜಿ. ಆರ್. ಶ್ರೀನಿವಾಸಯ್ಯಂಗಾರ್ ದಾವಣಗೆರೆಯಿಂದ ಮೂಡಿಗೆರೆಗೆ ಮಾಡಿದ ವರ್ಗವು ರದ್ದಾಗಿದೆ.

VIDYASARA SANGARAHA.
A TREATISE ON THE PRINCIPLES OF
HINDU MEDICINE.
Price, including Postage Rs 5—0—0

ಈ ಕಂಪನಿಯು ಸರ್ ೧೮೯೩ನೇಯಲ್ಲಿ ಸ್ಥಾಪಿತವಾಯಿತು.
ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತತ್ತಿಯು.

ಅತ್ಯುತ್ಕೃಷ್ಟತರವಾದ ಬಳ್ಳಗಳಿಂದ ತಯಾರಿಸಿದ ಈ ಉತ್ತತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಜೇನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ತತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೭೦ ವರ್ಷಗಳ ಪ್ರಾಯವುಳ್ಳ ಮುದುಕರ ಕಾಮವಿಕಾರವಾದರೂ ಹರೆಯದ ಗಂಡಸರಂತೆ ಪ್ರಜ್ವಲಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಹುಟ್ಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಿಯ ಮುಂಚೆ ಅಥವಾ ಹಿಂದೆ ಹರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಪರಮ ಹಾಗೂ ಉಷ್ಣಸಂಬಂಧಿಕ ಬೇನೆಗಳ ನೆಲವೇ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿನಂತರವೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಶೌಚಕ್ಕಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ನಡೆಯುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆದಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳ ವರೆಗೆ ನಡೆಯತಕ್ಕ ೧ ಡಬ್ಬಿಗೆ ೧-೮-೦ ರೂ|| ಒಂದೇವೇಳೆಕ್ಕೆ ೩ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನೂ ಗಿವರಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯು ವೈದ್ಯಶಾಸ್ತ್ರಿಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯು ಪೇಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಚಿರ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಳಾಸ—ಪಿ. ಎರ್. ಎ. ಬ್ರದರ್ಸ ಮತ್ತು ಕಂಪೆನಿ,

ಸಕೆಂಡ ಇಂಗ್ಲಿಷ್ ಬ್ರ್ಯಾಂಚ್ ಆಫಿಸ್, ಡಿಸ್ಟ್ರಿಕ್ಟ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGAUM.

BANGALORE :—Printed and Published at the KARNATAKA PRESS, No. 40, HOSPITAL ROAD, CITY.—1896.

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning

[illegible] 0 2 0 / 0 1 0

[illegible] 3 0 0 | 4 0 0; 6 [illegible] 2 0 0 | 2 8 0; 3 [illegible] 1 4 0 | 1 8 0

[illegible]

Vol. XXIII. BANGALORE:—MONDAY, AUGUST 3, 1896. No. 31.

SUN INSURANCE OFFICE

ESTABLISHED—1710

Insurance effected upon almost every description of property at the current rates of premium

Total sum insured in 1894 £391,000,000.	
Premium	£ 1,021,811
Reserved Fund	£ 1,125,000

Claims arranged by the Local Agents are paid promptly and liberally.

The jurisdiction of Local Tribunals is recognised.

MADRAS, 1st Jan 1896 } PARRY & Co Agents

Royal Exchange Assurance (Incorporated A D 1720)

Funds	£ 4,000,000
Claims paid	£37,000,000

FIRE

Insurances are granted against Loss or Damage by Fire on all kinds of property at moderate rates.

LIFE

Every description of Life Assurance effected.

No older office in existence

MADRAS, 1st June 1896 } PARRY & Co Agents

NOTICE

Healthy vaccinated calves of from 1 to 2½ years old, mostly female, can be had cheap on application to

The Superintendent, Mysore Government Vaccine Institute, Bangalore

P. H. BENSON

Select Telegrams

London 29th July —Dr Jameson's trial has concluded. Lord Russell summing up, was strongly against the arguments used by Counsel for the defence.

The Jury returned a verdict of guilty, and the following sentences were passed —

Dr Jameson, fifteen months imprisonment without hard labour, Mr Willoughby, ten months, Major White, seven months and Messrs, Coventry and Grey and Colonel White five months

All the prisoners were conveyed to Holloway prison.

The sentences on the military prisoners involve the loss of commissions.

THE

Karnataka Prakasika.

MONDAY, AUGUST 3, 1896

FOOLISH INTERFERENCE

The Sheriff of Madras has behaved in a very remarkable way. A number of leading men of the place requested him to call a meeting in order to protest against this country being compelled to pay towards the expenses of the troops sent to the Soudan. This request being signed by the citizens was sent to the Sheriff, and it was expected that he would at once call a meeting. But he saw the matter in another light altogether. He declined to call the meeting and he gave what he believed to be reasons for this refusal. He says —

"I observe that comparatively few of the signatories to the requisition are well known persons and on the other hand, I have ascertained, beyond all doubt, that many leading men have either refused to sign, or are not willing to do so. In common with myself, they hold the opinion that in the present instance, a public meeting might have the undesirable effect of simulating and stimulating angry passions. I think that there are occasions and that this is one when the inhabitants of this City should not exercise their undoubted right of public meeting. You admit that the Government of India have acted firmly, and I hope that on further consideration you and your supporters will agree with me that the matter may be safely left in their hands, and that it would not be wise to spread among the people the idea that Her Majesty's Ministers are opposed to India's cause."

We believe that the statement that many of the citizens either refused to sign the requisition or were unwilling to do so is incorrect. It was thought that the number that signed was quite sufficient, nothing more was required. They sent in their request and they must have been considerably astonished when, instead of the usual notice appearing in the local papers they saw the letter, a portion of which we have noted. Now, in the first place, the Sheriff has no right whatever to refuse to call a public meeting. He is only the medium, only the instrument to get such a meeting together. He is not to ask whether it would do good. He is simply to carry out the wishes of the citizens of the place where he lives. Nothing more is required of him. How it came to pass that Mr Leighton mistook his duty in this respect we are unable to understand. He evidently fancies that the office to which he has been appointed gives him more power than it really does. In fact it gives him none at all. It is a mere sinecure with a good salary. The Sheriff may be ornamental, more especially when he walks before the Judges on their way to court, but if he refuses to call a meeting when the citizens require one to be called he cannot be said to be useful. The best plan would be to abolish the office. It is very hard that when the people pay an official a good salary to do their work he should refuse to do it. If a menial servant refused in this way he would be sent about his business at once. Why then should a Sheriff not be treated in the same way? With the object of a meeting, unless it is for a seditious purpose, the Sheriff has nothing to do, and never before have we heard of an official of the kind refusing to call a meeting when requested. Most certainly there was nothing connected with sedition in the request made by the citizens of Madras, for they intended supporting the Government of India in its struggle with the Secretary of State for India. It was to be proposed that a vote of thanks should be given to Lord Elgin and his Council for the part they have taken in the affair of the troops being paid by India. The struggle is not with the Government of India but with the Secretary of State, he has committed the evil, and he ought to be told what the opinion of the country is. But the Sheriff of Madras does not see the matter in this light, and so tells the people they are wrong to get up a meeting, and that he will not call one. He knows *better than all the men in the place.* They think that a protest should be made, he thinks it should not. He stands against the world. In the passage we have quoted the Sheriff talks about "simulating or stimulating angry passions." This is pure nonsense. The meeting would have done nothing of the kind. There have been no angry passions stirred up, the people feel they have suffered, and they want to protest against this. If they feel angry they have a right to do so, for they have been wronged. They want to show the authorities at home that they are not willing to submit to wrong, they are unwilling to pay the cost of an expedition which they care nothing about. In the next place, all classes of the community—Europeans and Natives—are of one mind. This is rarely the case, and when it does happen the most ought to be made of it. The fact ought to be noticed as prominently as possible. But the Sheriff of Madras would not allow this and so he lectured the people of that city as though he was their school master, and that they ought to obey him implicitly. Probably by this time he has found out his mistake, and, no doubt, he is sorry that he wrote the letter in question. But he cannot prevent the people from meeting together and discussing the charges of the Soudan expedition if they think proper. They have the right, when and how they like, to meet together and speak about matters of interest, and who is the Sheriff to say they shall not do so? Who is he to dictate to the people of the Madras Presidency what they shall do, how they shall think? He is the first Sheriff who has interfered in this way, and we feel certain he will be the last. Since writing the above we find that a meeting has been called without the aid of the Sheriff, and that it will take place to day.

News and Notes.

A RUMOUR reaches the *Pioneer* to the effect that Indian History is to be an optional subject, hence forward for the young men of the Indian Civil Service. We hope it is true.

It is stated that Prince Ootomsk the confidential adviser of the Czar, is specially entrusted with the mission of everywhere following the footsteps of Li Hung Chang as the latter pursues his way from one European Court to another. It will be the function of Ootomsk, at Berlin, in Egypt, and elsewhere quietly to undo the diplomacy of the old Chinaman.

A TELEGRAM was received by the Bombay Presidency Association late on Saturday evening 25th ultimo from London stating that the Royal Commission on Indian Expenditure have now accepted Dr Bahadurji's evidence on the question of the separation of the Civil Branch of the Indian Medical Service from the Military and that he will soon appear before the Commission as a witness.

Mr G. Subramania Iyer, Editor of the *Hindu*, is reported to have expressed his opinion at a public meeting that "the conversion to Christianity of any section of his countrymen would not be any the worse for them." Holding such an opinion, the "eternal fitness of things" requires that he should either change the designation of his paper or resign its Editorship unless he prefers to continue to sail under false colors.

TWELVE Municipal Commissioners of Dacca have sent in their resignation in a body to the District Magistrate as "owing to the arbitrary and illegal proceedings of the Chairman at the last meeting of the Municipal Commissioners, a copy of which has we presume, been forwarded to you, and for the reasons stated in the representation lately made and having regard also to the present chaotic state of Municipal affairs generally due to the persistence of the Chairman in occupying the chair despite an overwhelming majority, we find it impossible to continue members of the Municipal Board under the present *regime* and respectfully request you will forward to Government this our resignation."

THE *Gujarati* is gracefully cordial in wishing well to the administration of the new Dewan of Baroda. "The new Dewan," writes our contemporary "has all along been an official, and in his new capacity it is expected of him to courageously maintain intact the rights and privileges of the Baroda State and its ruler, and not meekly tolerate any encroachments thereon from outside. We wish him success in the discharge of the arduous responsibilities he has undertaken and prosperity to the State which has unfortunately come in for a good deal of unfavourable criticism. The great Ranga Charlu's work will ever be gratefully remembered at Mysore and outside and let us hope Mr Shrinivas' ability and experience will enable him to introduce substantial and beneficent reforms for the benefit of the Guickwar's subjects."

A cultivator named Madasami Tewan appealed against the conviction and sentence of four years' rigorous imprisonment passed upon him by the Sessions Judge of Tinnevelly for having on the 4th May 1894 committed dacoity with sixteen others in the Nanguneri taluk by robbing one Hindujee Desaraj and two others of jewels, precious stones, coins and other articles valued at Rs 10,000. The question was, whether, in spite of Section 132 of the Evidence Act, statement made by the prisoner in a deposition in a previous case, can be admitted against him in a trial for an offence not being perjury. The Acting Public Prosecutor who appeared in support of the conviction contended that unless the prisoner had claimed the privilege at the time such admission was not illegal—*vide* 3 *Madras* 17. Their Lordships (Justices Davies and Boddam) concurring in this view confirmed the conviction and sentence and dismissed the appeal.—*Hindu*

Local and Provincial.

A NEW POLICE PROBATIONER —We hear that a son of Mr Best, the Chief Justice of Mysore is going to be appointed as a Police Probationer.

THE PUBLIC HEALTH —Is not good at the present time, cholera being prevalent in several places, and fever in other parts. A good downpour of rain might improve matters.

THE RACES.—Commence on the 13th of this month and will last for four days. A large number of horses has come into the Station, and it is believed the sport will be very good this year.

A NEW SUB TALUQ.—We learn that the Mysore Government have decided to convert French Rocks into a sub taluq and that the Deputy Amildar of Seringapatam will be placed in charge of it.

DEWAN'S OFFICE.—We learn that Mr Lovery will be made the Registrar of the Dewan's Office, Mr Ramakrishna Rao the Deputy Registrar and Mr B Ramiah the Naib Sheristadar of the same office.—M H.

SANCTION.—We are very glad to learn from the Evening Mail that the Mysore Government has sanctioned Rs 25,000 for the purpose of constructing quarters for the Principal of the Central College, Bangalore.

INCREASE OF PAY.—We understand that the pay of Mr. J. J. Whitely, which was only Rs 700 per month before he joined the Public Works Department, is now fixed for some time to come at Rs 1,200 per month.

THE STEAM WHIRLIGIG.—This is still in Bangalore, and is largely patronised, especially by the young. Every evening a large crowd gathers round the tent in which it is placed, and sometimes the fare is kept up till late in the night.

THE WEATHER.—We have had a few showers of rain, but not enough to satisfy the ryots. Where the ground has not been ploughed it has to remain as it is till more rain comes down. The cultivators are eagerly looking out for this. In Shimoga and Hassan large quantities of rain have fallen.

A REFUSAL.—Mr. Abdul Rahiman Magistrate of the Civil and Military Station Bangalore, was offered by the Government of Mysore an Assistant Commissioner's place on a pay of Rs 400 per mouth, which we learn he declined, as he was getting already the same amount of pay in the British Service.—M H.

RESTORATION OF GRANT.—The Parakala Mutt in Mysore which was receiving a grant of Rs 4,000 from the Palace, had its grant reduced some time ago to Rs 2,000 by the late Maharaja, and the sum thus reduced was being spent for the spread of Sanskrit Education. We learn that Her Highness the Maharani Regent has been pleased to restore to the Mutt the full original grant of Rs 4,000.—M H.

THE FIVE LACS CASE.—This case against the Government of Mysore came off before the Special Court on Monday last, before Justice Jopp of Bombay and Mr Best, Chief Judge, Chief Court of Mysore. The evidence of more than a dozen witnesses had already been recorded at Madras, by the special Registrar, Mr Seshagiri Row. The evidence of two witnesses was recorded on Tuesday, and two more on Wednesday.

THE CHICACOLE YOGEESWAR.—A correspondent writes:—His Holiness Sree Sivananda Yogeeswara of Chicacole has come to Bangalore and resides in the Fort. He is a favourite of His Holiness Sringeri Jagadguru. Some of his disciples here came to visit Sree Sivananda Yogeeswara, and his Holiness explained to them some of the rules of the yoga philosophy and made them understand and believe that philosophy. On the 28th inst His Holiness had an interview with the Dewan Sir K Sheshadri Iyer, who received him most respectfully, and they both had a private conversation for about two hours. His Holiness has both theoretical and practical knowledge of yoga philosophy as well as Mantra Sastra. His Holiness Sringeri Jagadguru has, in appreciation of his knowledge, granted him a charter by which he may be respected by all the disciples of the Jagadguru throughout India.

The Mysore Gazette.

Bangalore, Thursday, 30th July 1896.

NOTIFICATIONS BY THE GOVERNMENT OF MYSORE.

GENERAL AND REVENUE.

No 1314—Mis 29, dated 24th July 1896.

It is hereby notified that the designation of Dr J W Evans, D SC, F G S, of the Geological Department is changed from "Senior Geologist and Analyst" to "Inspector of Mines in Mysore."

No 1317—Mis 32, dated 24th July 1896.

Mr R Bruce Foote, F G S, State Geologist is appointed ex-officio Secretary to Government in the Geological Department.

No 1320—Mis 35, dated, 24th July 1896.

Dr J W Evans, D SC, F G S, Inspector of Mines in Mysore, is appointed ex-officio Assistant Secretary to the Government in the Geological Department.

No 1312—J 135 dated, 24th July 1896.

Under Section 12 of the Code of Criminal Procedure Hussain Ali Beg, Amildar of Seringapatam taluk is appointed a Magistrate of the 2nd Class.

No 1346—Mis F 5 95, dated 24th July 1896.

The leave on medical certificate granted to Mr T Ananda Rao, Chief Secretary, in Government Notification No C 207, dated 25th April 1896, is hereby extended by three months.

No 1331—J 141, dated, 27th July 1896.

Under the provisions of Section 6 of the Registration Act III of 1877 the Government of Mysore are pleased to order the following transfers and appointments:—

(1) H Chintaman Rao 1st grade Sub Registrar of Nanjangud, is transferred to Mysore vice M Ranganatha Rao transferred to the Revenue Department.

(2) T Seshadriengar 1st grade Sub Registrar of Yedatore, is transferred to Nanjangud, vice H Chintaman Rao.

(3) F C Sadasiva Pillai, Record keeper, Deputy Commissioner's Office Mysore, is appointed 1st grade Sub Registrar and is posted to Yedatore vice T Seshadriengar.

No 1559—J 159, dated 29th July 1896.

The transfer to Chikmagalur of Mr S Seshagiri Rao, Acting Munsiff of Mysore ordered in Government Notification No 1159—J 117, dated 21st July 1896 is hereby cancelled.

No 825—R 323 dated, 24th July 1896.

Under Article 220 of the Mysore Service Regulations Badami Krishna Rao, Amildar of the Channapatna taluk is granted furlough for two months, with effect from such date as he may avail himself of the same.

Narasimh Srinivas Potnis, head clerk, Deputy Superintendent's office, Revenue Survey, is appointed to act as Amildar and 3rd Class Magistrate of the Channapatna taluk during the absence of Badami Krishna Rao on leave or until further orders.

No 957—R F 141 95, dated 24th July 1896.

The privilege leave granted to A Viraraghavalu Naidu, Amildar of the Arsikere taluk, in Government Notification Nos 10674—R 1216 and 11207—R F 141 95, dated 9th and 26th June 1896 respectively, is hereby extended by one month and a half.

No. 917—R 310 dated 25th July 1896.

The following transfers of Deputy Amildars are ordered:—

Syed Mohidin Ali to Hosdurga (to join forthwith).

T Venkataramaiya from Hosdurga to Yedahalli (to join immediately on being relieved).

No 944—Ft F 27 95 dated 27th July 1896.

H Srinivasa Rao Ranger, 3rd grade, is appointed to act as Sub Assistant Conservator of Forests, during the employment of Mr K. Shamsingar as acting Assistant Conservator of Forests.

No 996—R 398, dated 27th July 1896.

Under Article 168 of the Mysore Service Regulations B. Lakshman Rao, Amildar of Sagar taluk, Shimoga District, is granted privilege leave for three months with effect from 1st July 1896, prior to his retirement, which will take effect from the date of the expiry of the leave now granted.

No 1003—Ft. 75, dated, 29th July 1896.

Under Article 172 of the Mysore Service Regulations, Mr T Rayalu Chetti, Treasurer, State Huzur Treasury, is granted casual leave of absence for ten days with effect from the 28th instant or such other date as he may avail himself of the same.

ಕರ್ನಾಟಕ ಪ್ರಕಾಶಿಕಾ.

ಗ್ರ೮೯೬ನೇ ಇಸವಿ ಆಗಸ್ಟ್ ತಾ|| ೩ನೇ ಸೋಮವಾರ

ಜೆಯಿಲ್ ಖಾನೆಗಳಲ್ಲಿ ಖೈದಿಗಳು ಮಾಡುವ ಕಸಬು.

ಈ ಭೂಮಂಡಲಾಂತರ್ಗತವಾದ ಖಂಡಗಳಲ್ಲಿ ಅಮೆರಿಕಾ ಖಂಡವು ಸಂಪತ್ಪ್ರಾಭವ ವೈಭವ ವಿದ್ಯಾ ವೈಲಕ್ಷಣ್ಯಾದಿಗಳಿಂದ ಉತ್ತಮವೆನಿಸಿರುತಿದೆ. ವಿದ್ಯಾಭಿವೃದ್ಧಿಯು ಅಧಿಕವಾದ ಸ್ಥಾನಗಳಲ್ಲಿ ನಾಗರಿಕತೆಯೂ ಅತಿಶಯವಾಗಿರುವುದು ಸದರೀ ಖಂಡನಿವಾಸಿಗಳ ವಿದ್ಯಾಬುದ್ಧಿಕೌಶಲ್ಯ ಸ್ಥಿತಿಗಳನ್ನು ಪರಿಭಾವಿಸಿಯೇ ಅವರಿಗೆ ಅಸಾಧಾರಣವಾದ ಪ್ರಭುತ್ವ ಕ್ರಮವೂ ತದನುಗುಣವಾದ ನ್ಯಾಯ ನಿಬಂಧನೆಗಳೂ, ತದುಕ್ತಗಳಾದ ನೀತಿ ಧರ್ಮಗಳೂ ಕಲ್ಪಿತವಾಗಿವೆ. ಜನಗಳ ಸ್ವಾತಂತ್ರ್ಯಕ್ಕನುಗುಣವಾಗಿಯೇ ಶಿಕ್ಷಾಸ್ಮೃತಿಯೂ ದಂಡನೆಗಳೂ, ನಿರ್ಬಂಧಗಳೂ ಉಂಟುಮಾಡಲ್ಪಟ್ಟಿರುವದಾಗಿ ತಿಳಿಯಬರುತಿದೆ ಯೂನೈಟೆಡ್ ಸ್ಟೇಟ್ಸ್ ಎಂಬ ಸಂಯುಕ್ತ ರಾಜ್ಯಗಳ ಜೆಯಿಲ್‌ಖಾನೆಯಲ್ಲಿರುವ ಖೈದಿಗಳ ಶಿಕ್ಷಾನುಭವ ಕ್ರಮವನ್ನು ಅಲ್ಲಿನ ಪತ್ರಿಕೆಯೊಂದು ವಿವರಿಸಿರುತಿದೆಯೆಂತೆಂದರೆ —ಅತಿ ಕ್ರೂರವಾದ ಅಪರಾಧವನು ಮಾಡಿ ದಾರುಣವಾದ ದಂಡನೆಯು ವಿಧಿಸಲ್ಪಡತಕ್ಕವನು ಬಂದೀಖಾನೆಯಲ್ಲಿ ಮಾಡಬೇಕಾದ ಕೆಲಸವು ಇಷ್ಟೆನುತೆ ಮಣ್ಣು ಹೊರತಕ್ಕದ್ದಲ್ಲವು, ಕಠಿಣ ಜೈಲ್ ಸಜಾ ಅನುಭವಿಸುವವರೆಲ್ಲರು ವೃತ್ತಾಂತ ಪತ್ರಿಕೆಗಳನ್ನು ಪ್ರಕಟಿಸುವದರಲ್ಲಿ ಸಹಕರಿಸುತಲಿರುತ್ತಾರೆ ಈ ಖೈದಿಗಳೇ ಪತ್ರಿಕಾ ಲೇಖಕರಾಗಿಯೂ, ವರ್ಣಸಂಯೋಜಕರಾಗಿಯೂ, ಅಕ್ಷರ ಸ್ಖಾಲಿತ್ಯ ಪರಿಶೋಧಕರಾಗಿಯೂ, ತತ್ಪತ್ರಿಕಾ ಪ್ರಚಾರಕರಾಗಿಯೂ, ಯಾಂತ್ರಿಕ ವ್ಯಾಪಾರ ನಿರತರಾಗಿಯೂ ಇರುತ್ತಾರೆ ಇತರರು ಸದರೀ ಪತ್ರಿಕೆಗಳನ್ನು ಓದುವದೇ ಅವರಿಗೆ ವಿಧಾಯಕವಾಗಿರುವ ದಂಡನೆಯು. ಈ ರೀತಿಯಾಗಿ ಸದರೀ ಸಂಯುಕ್ತ ಸಂಸ್ಥಾನಗಳ ಬಂದೀಖಾನೆಗಳಲ್ಲೀಗ ಒಟ್ಟು ೩೦ ಪತ್ರಿಕೆಗಳು ಪ್ರತಿನಿತ್ಯ ಸೂರ್ಯೋದಯ ಕಾಲದಲ್ಲಿ ಖೈದಿಗಳಿಂದ ಛಾಪಿಸಲ್ಪಡುತಲಿವೆ ಈ ಪತ್ರಿಕೆಗಳು ಏಕರೂಪವಾದವಲ್ಲವು. ಪ್ರತಿ ಪತ್ರಿಕೆಯು ಪ್ರತ್ಯೇಕ ವೃತ್ತಿ ಬೋಧಕವಾಗಿಯೂ, ಆಯಾ ವೃತ್ತಿಯಲ್ಲಿ ಪ್ರವರ್ತಿಸಿರುವಂತ ವಿವಿಧ ಸಂಘದವರಿಗೆ ಉಪಯುಕ್ತವಾಗಿಯೂ ಇರುತಿವೆ. ಇವು ದೇಶಾಂತರಗಳಲ್ಲೆಲ್ಲ ವಿಸ್ತಾರವಾಗಿ ಪ್ರಚಾರವುಳ್ಳವಾಗಿರುತಿವೆ. ಓಹಿಯೋ ಸಂಸ್ಥಾನದ ಜೆಯಿಲ್‌ಖಾನೆಯಲ್ಲಿ ಮುದ್ರಿಸಲ್ಪಡುವ ವೃತ್ತಾಂತಪತ್ರಿಕೆಯು ವಿವಿಧ ರಸಾಲಂಕಾರ ಪರಿಪೂರಿತವಾಗಿ ವಾಚಕರಿಗೆ ಹೃದಯಾಹ್ಲಾದಕರವಾದುದಾಗಿರುತಿದೆ. ಇದು ಪ್ರತಿದಿನದಲ್ಲೂ ಇಪ್ಪತ್ತೈದು ಸಾವಿರ ಪ್ರತಿಗಳು ಛಾಪಿಸಲ್ಪಟ್ಟು ಆವರವರಿಗೆ ಕೊಡಲ್ಪಡುತಿದೆ. ಗದ್ಯ ಪದ್ಯಾತ್ಮಕಗಳಾದ ಏತತ್ಪತ್ರಿಕಾ ಲೇಖನವು ಪಂಡಿತ ಚಿತ್ತಾಕರ್ಷಕವಾಗಿರುತಿದೆ ಕೇವಲ ಅನ್ಯದೇಶ ವೃತ್ತಾಂತ ಪ್ರಕಟನೋದ್ದಿಷ್ಟವಾದ ಬೇರೆಯೊಂದು ಪತ್ರಿಕೆಯು ೨೫ ಸಾವಿರ ಪ್ರತಿಗಳು ಪ್ರತಿನಿತ್ಯವು ಛಾಪಿಸಲ್ಪಡುತಿವೆ. ಈ ವೃತ್ತಾಂತ ಪತ್ರಿಕೆಗಳ ಆಯತಿ ಯೆಲ್ಲವು ಆಯಾ ಸಂಘಗಳ ವಿಲಾಸಾರ್ಥ ಆವಶ್ಯಕಗಳಾದ ಸೌಕರ್ಯಗಳಂ ಕಲ್ಪಿಸುವದಕ್ಕಾಗಿಯೇ ವಿನಿಯೋಗಿಸಲ್ಪಡುತಿದೆಂದು ತಿಳಿಯಬರುತಿದೆ. ಈ ಪದ್ಧತಿಯು ಅಮೆರಿಕಾ ಖಂಡದಲ್ಲಿ ಮಾತ್ರ ನೆಲೆಗೊಂಡಿರುವದಾಗಿ ತಿಳಿಯಬರುತಿದೆಯಲ್ಲದೆ ಅನ್ಯತ್ರ ಯೆಲ್ಲಿಯೂ ಕಂಡುಬರುವದಿಲ್ಲವು. ಯೂರೋಪ್ ಖಂಡದಲ್ಲಿ ಖೈದಿಗಳಾಗಲಿಕ್ಕೆ ಪೂರ್ವ ಅಭ್ಯಾಸವಾಗಿದ್ದ ಕಸಬುಗಳನ್ನೇ ಬಂದೀಖಾನೆಯಲ್ಲೂ ಅವರು ಮಾಡಬೇಕಾದುದಲ್ಲದೆ ಅವರಿಗೆ ಅಲ್ಲಿ ಇತರ ವೃತ್ತಿಗಳು ಸುತರಾಂ ಕಲ್ಪಿಸಲ್ಪಡುವದಿಲ್ಲವಂತೆ. ಸದರೀ ಪದ್ಧತಿಯನ್ನನುಸರಿಸಿಯೇ ಈ ಇಂಡ್ಯಾ ದೇಶದಲ್ಲಿರುವ ಬಂದೀಖಾನೆಗಳಲ್ಲಿ ಕೂಡ ಅಪರಾಧಿಗಳಿಗೆ ತಿಳಿದಿರುವ ಬಡಿಗ, ನೆಯಿಗೆ, ಕೃಷಿ ಮುಂತಾದ ಕಸಬುಗಳನ್ನು ಅವರಿಂದ ಮಾಡಿಸಿ ಆ ಹುಟ್ಟುವಳಿಯಲ್ಲಿ ಖರ್ಚು ಜಾತಾ ಉಳಿದದ್ದು ಸರ್ಕಾರಕ್ಕೇ ದಾಖಲ್ಮಾಡಲ್ಪಡುತಿದೆ. ಇಲ್ಲಿನ ಬಂದೀಖಾನೆಗಳಲ್ಲಿ ಕಲಿನ ಕಾಮಗಾರಿಯು ಮಣ್ಣು ಹೊರುವದಾಗಿರುತಿದೆ. ತಿಂಡಿ ಬಟ್ಟೆಗಳು ಅಲ್ಲಿ ಸುಲಭವಾಗಿಯೂ ನಿರ್ವಿಚಾರವಾಗಿಯೂ, ಕ್ಲಿಪ್ತಕಾಲದಲ್ಲಿಯೂ ಕಳೆದು ಹೋಗುವದರಿಂದ ಯೆಲ್ಲಿಯಾದರು ಕೆಲಸಮಾಡಿಯೇ ಜೀವಿಸಬೇಕೆಂಬ ಮನೋನಿಶ್ಚಯವುಳ್ಳ ಈ ದೇಶದ ಖೈದಿಗಳು ಖಾಯಂ ಕೇಳುತಿರುವರು. ತಮಗೆ ಜೈಲ್‌ಖಾನೆ ವಾಸವು ತಪ್ಪುವ ಕಾಲಬಂದರೆ ಅದಕ್ಕಾಗಿ ಚಿಂತಿಸುತ ತಾವು ಶೀಘ್ರವಾಗಿಯೇ ಮರಳ ಬರುವಂತೆ ತಿಳಿಸಿ ಹೋಗುವಷ್ಟರ ನೆಲೆವಾಸಿಗಳಾಗಿದಾರೆ. ಇತ್ತ ಪೂರಾ ಸೋಮಾರಿಗಳಿಗೆ ಅಮೆರಿಕಾ ಖಂಡದಲ್ಲಿರುವ ಪದ್ಧತಿಯಂತೆ ಹಾಸಿಗೆ ಹಾಕಿಕೊಟ್ಟು ಯಾವಾಗಲು ನ್ಯೂಸ್‌ಪೇಪರುಗಳನ್ನೋದುತಲಿರುವಂತೆ ಹೇಳಿ ಅದಕ್ಕೆ ತಕ್ಕ ಏರ್ಪಾಡುಗಳಂ ಮಾಡಿದರೆ ಶ್ರೀಮತ್ ಮಹಾರಾಣಿಯವರ ಪ್ರಜೆಗಳೆಲ್ಲರೂ ಖೈದಿಗಳಾಗಿಯೂ, ಅವರ ರಾಜ್ಯಗಳ್ಯಾವತ್ತೂ ಬಂದೀಖಾನೆಗಳಾಗಿಯೂ ಪರಿಣಮಿಸಿ ಎಲ್ಲರೂ ಅದನ್ನೇ ಆಶಿಸಬಹುದೆಂದು ನಂಬುತ್ತೇವೆ ಆದರೆ ಅಲ್ಲಿಯೂ ಒಂದು ವಿಷಯ ಮಾತ್ರ ನಮಗೆ ಅನುಮಾನಕರವಾಗಿರುತಿದೆ. ತಾದೃಶ ನಿರ್ಬಂಧಾವಸ್ಥೆಯಲ್ಲಿ ಸದಾ ಈ ದೇಶೀಯರಿಗೆ ವೃತ್ತಾಂತ ಪತ್ರಿಕಾ ಪಠನ ಕುತೂಹಲವೂ, ತತ್ಪ್ರಯೋಜನ ಪರಿಜ್ಞಾನವೂ ಉಂಟಾಗುವದು ಸಂದಿಗ್ಧವಾಗಿರುತಿದೆ. ಏತಕ್ಕೆಂದರೆ, ಸ್ವತಂತ್ರರಾಗಿಯೂ, ಸ್ವತಃ ವಿದ್ಯಾವಂತರಾಗಿಯೂ, ಸರ್ವಜ್ಞರೆನಿಸಿಯೂ ಇರುವಂತವರು ತಾವು ನ್ಯೂಸ್‌ಪೇಪರುಗಳನ್ನು ವಿಸ್ತರಿಸಿ ಕಟ್ಟುವದಕ್ಕೂ ಮಕ್ಕಳಿಗೆ ಪಠಾಳ ಕಟ್ಟಲಿಕ್ಕೂ ಕೊಡುವದಲ್ಲದೆ ಅದಂ ಓದುವದರಿಂದ ಸದಾ ನೋಡತಕ್ಕದ್ದಲ್ಲವೆಂಬದನ್ನೇ ಕೇವಲ ಸ್ವಪ್ರತಿಷ್ಠಾರೂಪವೆ ಇ ತಿಳಿಸುತಲಿರುವಂತ ಪರಿಸ್ಥಿತಿಯ ಈ ದೇಶದಲ್ಲಿರ್ದುಟ್ಟಿರುವಾಗ ನಿರಕ್ಷರ ಕುಕ್ಷಿಗಳಾದ ಮತ್ತು ನಿರ್ಗತಿಕರಾದ ಖೈದಿಗಳಿಗೆ ವೈಲಕ್ಷಣ್ಯವನ್ನುಂಟುಮಾಡಲಪೇಕ್ಷಿಸಿದರೆ ಅದು ಯಾವ ಕಾಲದಲ್ಲಾದರು ಸಾಧ್ಯವಾದೀತೆ? ಮುಖ್ಯವಾಗಿ ನಾಗರಿಕತೆಯೆಂತನೆ ವಿದ್ಯೆಯೂ, ಸ್ವೀಯ ವಿಷಯಕತಾಭಿಮಾನವೂ, ಪರಸ್ಪರಾನುರಾಗವೂ, ಅನುರಾಗಪ್ರದರ್ಶನವಾದ ಔದಾರ್ಯವೂ ಉಂಟಾದರೇನೆ ಅದು ಶೋಭಿಸುವದಲ್ಲದೆ ಅದಿಲ್ಲದ ನಾಗರಿಕತೆಯು ಯೆಂದಿಗೂ ಪ್ರಯೋಜನಕಾರಿಯಾಗಲಾರದು, ಮುಖ್ಯವಾಗಿ ನಮ್ಮವರಿಗೆ ಅನ್ಯದೇಶೀಯರ ಸಂಬಂಧದಿಂದ ಅಪೇಕ್ಷಿತಾಂಶಗಳು ಸಿದ್ಧಿಸದೆ ಹೋದವು, ಅನಪೇಕ್ಷಿತಾಂಶಗಳು ಅನಿರೀಕ್ಷಿತವಾಗಿಯೇ ಹಸ್ತಗತವಾದವು. ನಮ್ಮ ನಾಗರಿಕತೆಯೆಲ್ಲವು ಆಹಾರ ವಿಹಾರಾದಿಗಳಲ್ಲೂ, ಸ್ವವಿಷಯಕತಾಭಿಮಾನವು ಸ್ವದೇಶ ರಕ್ಷಣೆಯಲ್ಲೂ, ಪರಸ್ಪರಾನುರಾಗವು ದಾರಾಪುತ್ರಾದಿಗಳಲ್ಲೂ, ಔದಾರ್ಯವು ಆತ್ಮವಿಷಯದಲ್ಲೂ ಮುಕ್ತಾಯವಾಗಿರುವದರಿಂದ ಅಮೆರಿಕಾ ಖಂಡ ನಿವಾಸಿಗಳ ಸ್ಥಿತಿಯು ನಾವು ಎಷ್ಟು ಕಾಲ ಕೋರಿದರೂ ಅದು ನಮಗೆ ಲಭಿಸತಕ್ಕದ್ದಲ್ಲವು ಪರಂತು ಅವರ ವೈಭವಗಳು ಕೊಂಡಾಡುತ ನಮ್ಮ ಕಾಲವಂ ಕಳೆಯಬೇಕಾದವರಾಗಿದೇವೆಯಲ್ಲದೆ ಸ್ವರೂಪತಃ ನಾವು ಯಾವವಿಧ ಪ್ರಯೋಜನಕ್ಕೂ ಬಂದವರಲ್ಲವೆಂಬ ಇಂಗ್ಲಿಷಿನವರ ಅಭಿಪ್ರಾಯವಂ ಕೇಳಿ ನಾವೇಕೆ ಅಸಮಾಧಾನ ಪಡಬೇಕೋ ತಿಳಿಯದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

ಈಚೆಗೆ ಪಂಜಾಬ್ ದೇಶಕ್ಕೆ ಸೇರಿದ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಒಳ್ಳೆಯ ವರ್ಷ ಬಿದ್ದುದರಿಂದ ಅಲ್ಲಿನ ಕಾಲಸ್ಥಿತಿಯು ಬಹಳ ಮಟ್ಟಿಗೆ ಅನುಕೂಲ್ಯ ಸ್ಥಿತಿಗೆ ಬಂದಿರುತಿದೆಯೆಂದು ಅರಿತೆವು.

ಗ್ವಾಲಿಯರ್ ಸಂಸ್ಥಾನದ ಮಹಾರಾಜರವರಾದ ಸಿಂಧಿಯಾ ಯವರು ವೈಸರಾಯ್ ಸಾಹೇಬರವರ ದರ್ಶನಾರ್ಥ ಈಚೆಗೆ ಕೆಲವು ದಿನಗಳ ಹಿಂದೆ ಸಿಂಲಾವಿಗೆ ಹೋಗಿದ್ದರಷ್ಟೆ, ಸದರೀ ಮಹಾರಾಜರವರು ಆಚೆ ಶುಕ್ರವಾರದ ದಿನ ಸ್ವದೇಶಕ್ಕೆ ಪ್ರಯಾಣಮಾಡಿದರು.

ರತ್ಲಾಂ ಸಂಸ್ಥಾನದಿಂದ ಉಜೇನೀ ಪಟ್ಟಣದವರೆಗೆ ಹಾಕಲ್ಪಡುತಲಿದ್ದ ರೆಯಿಲ್ ರಸ್ತೆಯ ಕಾಮಗಾರಿಯು ಪೂರ್ತಿಯಾಗಿ ಕಳೆದ ತಿಂಗಳ

೧೫ನೇ ತಾರೀಖಿನಲ್ಲಿ ಪ್ರಯಾಣಸ್ಥರ ಮತ್ತು ಸರುಕುಗಳ ಗಾಡಿಗಳು ನಡೆಸಲ್ಪಡುವದಕ್ಕೆ ಪ್ರಾರಂಭವಾಯಿತು.

ಮುಂಬೈಯಲ್ಲಿ ಪ್ರಸಿದ್ಧ ವೈದ್ಯರಾಗಿದ್ದ ಅಣ್ಣಾಮೋರೇಶ್ವರ ಕುಂಟೆ ಎಂಬ ದೊಡ್ಡ ಮನುಷ್ಯರು ಯಾವದೋ ಒಂದು ಪ್ರಬಲ ರೋಗದ ಮೂಲಕ ಕಾಲಗತಿಯನ್ನೈದಿದರೆಂದು ಮುಂಬೈ ಪತ್ರಿಕೆಯೊಂದರ ಮೂಲಕ ತಿಳಿಯ ಬರುತಿದೆ.

ಈಗ್ಗೆ ಕೆಲವು ದಿನಗಳ ಮೊದಲು ಪುನೆ ಪ್ರಾಂತದಲ್ಲಿ ಪ್ರತಿದಿನದಲ್ಲೂ ಮಳೆ ಬೀಳುತ ನದಿಯಲ್ಲಿ ಪ್ರವಾಹ ಹೆಚ್ಚಿ ಬೆಟ್ಟಗಳಿಂದ ಬರುವ ಜಲವು ಯವಾಗಿರುವುದು ಮತ್ತು ಘಾಟ್, ಕೆಲವು ಕಡೆ ರೆಯಿಲುರಸ್ತೆಯು ಕೊಚ್ಚಲ್ಪಟ್ಟು ಮುಂಬೈಗೆ ಹೋಗತಕ್ಕ ಪ್ರಯಾಣಸ್ಥರು ದೊಂಡಮಾರ್ಗವಾಗಿ ಸುತ್ತಿಕೊಂಡು ಹೋಗತಕ್ಕವರಾಗಿರುವಂತೆ ಆ ಪ್ರಾಂತದ ಪತ್ರಿಕೆಯಿಂದ ತಿಳಿಸುತದೆ

ಮಹಾರಾಜ್ಞೀ ವಿಕ್ಟೋರಿಯಾ ಚಕ್ರವರ್ತಿನಿಯವರು ಸಿಂಹಾಸನಾರೋಹಣ ಮಾಡಿದ ಮೊದಲು ಮುಂದಿನ ಸಂವತ್ಸರಕ್ಕೆ ಅರವತ್ತು ವರ್ಷಗಳು ಪೂರ್ತಿಯಾಗುವದಾಗಿ, ಏತದರ್ಥ ಇಂಗ್ಲಂಡಿನಲ್ಲಿ ನಡೆಸಲ್ಪಡುತದಾಗಿರುವ ಉತ್ಸವಕ್ಕೆ ಹಿಂದೂದೇಶದಿಂದ ಕರೆಯಿಸಲ್ಪಡುವ ಅನೇಕರುಗಳಲ್ಲಿ, ಮುಂದಿನ ಸಂವತ್ಸರದೊಳು ಇಂಗ್ಲಂಡಿಗೆ ಹೋಗುವ ಪ್ರಸಿದ್ಧ [illegible] ದೊರೆಯೂ ಒಬ್ಬರಾಗಿರುವರೆಂದು ಸೂಚಿಸಲ್ಪಟ್ಟಿದೆ

ಕಳೆದ ತಿಂಗಳ ೧೧ನೇ ತಾರೀಖಿನಲ್ಲಿ [illegible] ನಂದಿಗಳು ಕೇವಲ ಹಾಸ್ಯಾಸ್ಪದವಾದ ಒಂದು ಪ್ರವಾದ ಹುಟ್ಟಿ ಅಲ್ಲಿನ ಪ್ರಜೆಗಳಿಗೆ ಪ್ರಬಲ ಭೀತಿಯನ್ನುಂಟುಮಾಡಿತು ಏನೆಂದರೆ, ಅಲ್ಲಿನ ಮಹಮ್ಮದೀಯ ಜನರು ರಂಜಾನ್ ಹಬ್ಬದ ಪ್ರಯುಕ್ತ [illegible] ಹಿಂದೂ ಜನರು ಅಲ್ಲಿರುವ [illegible] ಕೊಲ್ಲಬಹುದೆಂದಾಗಿ ಅಂತರಂಗದಲ್ಲಿ ಸರ್ಕಾರದವರು ಸರ್ಕ್ಯುಲರ್ ಕೊಟ್ಟಿರುವರು ಕಡೆಗೆ ಯಿಲ್ಲವು ಸುಳ್ಳೆಂದು ನಿರ್ಣಯಿಸಲ್ಪಟ್ಟಿತು ಅದುವರೆಗೆ ಅಲ್ಲಿನ ಜನರು ನಡುಗ ತಲಿದ್ದರು.

ಇಂಡ್ಯಾ ರಾಜ್ಯದ ವೈಸ್ರಾಯಿಯವರಾದ ಲಾರ್ಡ್ ಯಲ್ಗಿನ್ ಸಾಹೇಬರವರು ಮುಂದಿನ ನವಂಬರ ತಿಂಗಳ ೩ನೇ ತಾರೀಖಿನಲ್ಲಿ ಸಿಮ್ಲಾದಿಂದ ಹೊರಟು ಮೊದಲು ಅಳ್ವಾರ್ ಸಂಸ್ಥಾನಕ್ಕೆ ಹೋಗಿ ಅಲ್ಲಿನ ಮಹಾರಾಜರವರ ಆತಿಥ್ಯವಂ ಕೈಗೊಂಡು, ಅಲ್ಲಿಂದ ಹೊರಟು ಉದಯಪುರ, ಬಿಕಾನಿರ್, ಜಯಪುರ, ಜೋಧಪುರ, ಈ ಸಂಸ್ಥಾನಗಳಂ ನೋಡಿಕೊಂಡು, ಅಲ್ಲಿಂದ ಬರೋಡೆಗೆ ಹೋಗುವರು. ಸದರೀ ಸಾಹೇಬರವರು ರಾಜಪುತಾನಾ ಸಂಸ್ಥಾನಗಳನ್ನೆಲ್ಲ ನೋಡಿದ ಮೇಲೆ ಇಂದೂರು, ಜಬ್ಬಲ್‌ಪುರ, ಮತ್ತು [illegible] ಪ್ರಾಂತಕ್ಕೆ ಹೋಗುವರು

ಈಜಿಪ್ಟ ರಾಜ್ಯದಲ್ಲಿ ನಡೆಯುವ ಯುದ್ಧದ ಬಗ್ಗೆ ಇತ್ತ ದೇಶದಿಂದ ಕಳುಹಿಸಲ್ಪಡುವ ಸೈನ್ಯದ ಖರ್ಚುಗಳಂ ಇಂಡ್ಯಾರಾಜ್ಯದ ಹುಟ್ಟುವಳಿಯಿಂದ ಕೊಡಬೇಕೆಂದು ವಿಲಾಯತಿ ಸರ್ಕಾರದವರು ಮಾಡಿದ ನಿರ್ಣಯವು ಕೇವಲ ಅನ್ಯಾಯವಾದದ್ದೆಂದು ಆಕ್ಷೇಪಣೆ ಮಾಡಿಸುವದಕ್ಕಾಗಿಯೂ, ಇಂಡ್ಯಾ ರಾಜ್ಯದ ವಿಷಯದಲ್ಲಿ ಇಂಡ್ಯಾ ಗವರ್ನಮೆಂಟಿನವರು ಪಟ್ಟಾಗಿ ನಿಂತು ಅದಕ್ಕೆ ಪೋಷಕವಾಗಿ ವಿಲಾಯತಿ ಸರ್ಕಾರಕ್ಕೆ ಬರೆದ ಬಗ್ಗೆ ಅವರಿಗೆ ಶುಭವಾದನವ ನರ್ಪಿಸುವದಕ್ಕಾಗಿಯೂ ಈ ದಿನ ಸಾಯಂಕಾಲ ಐದು ವರೆ ಘಂಟೆಗೆ ಮದರಾಸ್ ಮಹಾ ಜನಗಳು ಅಲ್ಲಿನ ವಿಕ್ಟೋರ್ಯಾ ಟೌನ್ ಹಾಲಿನಲ್ಲಿ ಸಮಾಜಸೇರುವರು

ಈಚೆಗೆ ಮದರಾಸಿನಲ್ಲಿ ಒಬ್ಬ ಮನುಷ್ಯನು ಹೆಂಡ ಕುಡಿದು ಬೀದಿಯಲ್ಲಿ ಮತ್ತೊಬ್ಬನಕೂಡ ಕುಣಿದಾಡುತ ಗದ್ದಲ ಮಾಡುತಿರುವಲ್ಲಿ ಅಲ್ಲಿ ಬೀಟಿನಮೇಲಿದ್ದ ಪೋಲೀಸ್ ಕಾನ್ಸ್ಟೆಬಲ್ ಸುಂದರ ರಾಮಾನುಜುಲು ಎಂಬಾತನು ಆ ಮನುಷ್ಯನನ್ನು ಹಿಡಿದು ಲಾಕಪ್ಪಿಗೆ ಸೆಳಕೊಂಡು ಹೋಗುವಲ್ಲಿ ಅವನು ತನಗೆ ಒಂದು ರೂಪಾಯಿ ಲಂಚ ಕೊಡುವದಕ್ಕೆ ಬಂದನೆಂದು ಸದರೀ ಪೋಲೀಸ್ ಜವಾನನು ಮ್ಯಾಜಿಸ್ಟ್ರೇಟರ ಮುಂದೆ ಚಾರ್ಜ್ ಮಾಡಲು ಮ್ಯಾಜಿಸ್ಟ್ರೇಟರು ಅಪರಾಧಿಗೆ ಇಪ್ಪತ್ತು ರೂಪಾಯಿಗಳ ಜುಲ್ಮಾನೆ ವಿಧಿಸಿದರೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ. ಈ ಮೊಕದ್ದಮೆಯಲ್ಲಿ ಪೋಲೀಸ್ ಕಾನ್ಸ್ಟೆಬಲ್ ವ್ಯಕ್ತಪಡಿಸಿದ ಪ್ರಾಮಾಣಿಕತೆಯು ನೈಜವಾದುದೆಂದು ನಾವು ನಂಬಲಾರೆವು, ಯಾತಕ್ಕೆಂದರೆ, ಝಟಕಾ ಗಾಡಿಯವರನ್ನು ಹೆದರಿಸಿ ಮೂರು ಕಾಸು ಕಿತ್ತುಕೊಳ್ಳುವ ಪೋಲೀಸ್ ಕಾನ್ಸ್ಟೆಬಲ್‌ಗಳು ಒಂದು ರೂಪಾಯಿನ ರುಷುವತ್ತನ್ನು ತಿರಸ್ಕರಿಸಬೇಕಾಗಿದ್ದರೆ ಅದಕ್ಕೆ ಬೇರೆ ಯಾವದೋ ಒಂದು ಪ್ರಬಲ ಕಾರಣವಿರಬೇಕು. ಒಂದು ಸಂದರ್ಭದಲ್ಲಿ ತನ್ನ ಪ್ರಾಮಾಣಿಕತೆಯನ್ನು ಕೋರ್ಟಿನ ಮುಂದೆ ಸ್ಥಾಪಿಸಿದರೆ ತರುವಾಯ ತಾನು ನಡಿಸಬಹುದಾದ ಅಕ್ರಮಗಳನ್ನು ಅದು ಮರೆಮಾಡುವದೆಂಬ ದುರಾಲೋಚನೆಯಿಂದ ಕೆಲವರು ಈರೀತಿ ಮಾಡುವುದೂ ಉಂಟು.

ಈಜಿಪ್ಟ ರಾಜ್ಯಕ್ಕೆ ಸೇರಿದ ಸೌಡಾನ್ ಎಂಬ ದೇಶದೊಳು, ಅಲ್ಲಿನವರಿಗೂ ಬ್ರಿಟಿಷ್ ಸರ್ಕಾರಕ್ಕೂ ಈಗ್ಗೆ ಕೆಲವು ತಿಂಗಳ ಕಾಲದ ಮೊದಲು ನಡೆಯುತಲಿರುವ ಕಲಹದ ಬಗ್ಗೆ ಸಹಾಯಾರ್ಥ ಇಂಡ್ಯಾ ದೇಶದಿಂದ ಸೈನ್ಯಗಳಂ ಅಲ್ಲಿಗೆ ಕಳಹಿಸಿ, ಆಬಗ್ಗೆ ಹಿಡಿಯುವ ಖರ್ಚುಗಳನ್ನು ಇಂಡ್ಯಾ ರಾಜ್ಯದ ಹುಟ್ಟುವಳಿಯಿಂದ ಕೊಡತಕ್ಕದ್ದೆಂದು ವಿಲಾಯತಿ ಸರ್ಕಾರದವರು ಮಾಡಿದ ನಿರ್ಣಯದ ಮೇಲೆ ಇಂಡ್ಯಾ ದೇಶೀಯರು ಬಹು ಮುಖವಾಗಿ ಆಕ್ಷೇಪಿಸುತ್ತಿರುವಲ್ಲಿ, ಸನ್ಮಾನ್ಯರಾದ ವಿಜಯನಗರದ ಮಹಾರಾಜರವರು ಬ್ರಿಟಿಷರವರಲ್ಲಿ ತಮಗಿರುವ ತಮ್ಮ ವಂಶದ ಪರಂಪರಾಗತವಾದ ರಾಜಭಕ್ತಿ ಪ್ರದರ್ಶಕನಾಗಿ ಸದರೀ ಯುದ್ಧದ ಬಗ್ಗೆ ಒಂದು ಲಕ್ಷ ರೂಪಾಯಿಗಳು ಸಹಾಯದ್ರವ್ಯ ಕೊಡುವದಾಗಿ ಗವರ್ನಮೆಂಟಿಗೆ ತಿಳಿಸಿರುವಂತೆ ಕಳೆದ ತಿಂಗಳ ೨೦ನೇ ತಾರೀಖಿನಲ್ಲಿ ವಿಜಯನಗರದಿಂದ ತಂತಿವರ್ತಮಾನ ಬಂದಿರುತಿದೆ. ಇದು ನಿಜವಾಗಿರುವ ಪಕ್ಷದಲ್ಲಿ, ಸದರೀ ದ್ರವ್ಯವನ್ನು ಇಂಡ್ಯಾ ದೇಶೀಯರ ಪ್ರಯೋಜನಾರ್ಥ ಉಪಯುಕ್ತವಾದ ಬೇರೆ ಯಾವ ಕಾರ್ಯಕ್ಕೆ ಉಪಯೋಗಿಸಬೇಕೆಂದು ಶ್ರೀಮನ್ಮಹಾರಾಜರವರ ಹೃದಯದಲ್ಲಿ ತೋರದೆ ಹೋದದ್ದು ಬಹಳ ಚಿಂತನೀಯವಾಗಿರುತಿದೆ. ಮಹಾರಾಜರವರ ಪ್ರಕೃತ ಔದಾರ್ಯಪ್ರದರ್ಶನಕ್ಕೆ ಸ್ವಪ್ರತಿಷ್ಠೆ ವಿನಾ ಬೇರೆಯಾವ ಕಾರಣವೂ ನಮ್ಮ ಬುದ್ಧಿಸ್ಥವಾಗಲಿಲ್ಲವು.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕ ಶಿಜಾತಿ ವೃತ್ತಾಂತಗಳು.

ಇಲ್ಲಿನ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲ್‌ರವರ ವಾಸಕ್ಕಾಗಿ ಒಂದು ಬಂಗ್ಲೆಯಂ ಕಟ್ಟಿಸತಕ್ಕ ಬಗ್ಗೆ ಗವರ್ನಮೆಂಟಿನವರು ೨೫೦೦೦ ರೂಪಾಯಿಗಳಂ ಮಂಜೂರ್ಮಾಡಿರುವಂತೆ ಕೇಳುತ್ತೇವೆ.

ಫ್ರೆಂಚರಾಕ್ಸನ್ನು ಒಂದು ಸಬ್ ತಾಲ್ಲೂಕಾಗಿ ಮಾಡಿ ಅದನ್ನು ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್ದಾರರ ಚಾರ್ಜಿನಲ್ಲಿಡಬೇಕೆಂದು ಮೈಸೂರು ಗವರ್ನಮೆಂಟಿನವರು ನಿರ್ಣಯಿಸಿರುವಂತೆ ಕೇಳುತ್ತೇವೆ.

ಇಲ್ಲಿನ ಚೀಫ್‌ಕೋರ್ಟ್ ಚೀಫ್‌ಜಡ್ಜಿಯರಾದ ಮಿ॥ ವಿಚ್ಟಿಯವರ ಮಕ್ಕಳೊಬ್ಬರು ಇಲ್ಲಿನ ಪೋಲೀಸ್ ಇಲಾಖೆಯಲ್ಲಿ ಪ್ರೊಬೇಷನರಾಗಿ ನೇಮಕರ್ಮಾಡಲ್ಪಡುವರೆಂದು ಮೈಸೂರು ಹೆರಾಲ್ಡ್ ಪತ್ರಿಕೆಯ ಮೂಲಕ ತಿಳಿಯ ಬರುತಿದೆ

ಇಲ್ಲಿನ ಸಿವಿಲ್ ಮಿಲಿಟೆರಿ ಸ್ಟೇಷನ್ನಿನಲ್ಲಿ ವಾಂತಿ ಭೇದಿರೋಗ ಬಲವಾಗಿ ಪ್ರಾಣಹಾನಿಗಳಾಗುತಿದೆ ಯೆಂದು ಕೇಳಿ ಬಹಳ ವಿಷಾದಿಸುತ್ತೇವೆ. ಪೇಟೆಯಲ್ಲಿ ಒಬ್ಬನಿಗೆ ತಗಲಿ ಬಲಿಯಾದಂತೆ ತಿಳಿಯ ಬರುತಿದೆ

ಚಿತ್ರದುರ್ಗ ಜಿಲ್ಲೆ ಕಟ್ಟಲ್ಪಡತಕ್ಕದಾಗಿರುವ ಟೌನ್ ಹಾಲ್ ಎಂಬ ಕಟ್ಟಡದ ಕಾರ್ಯಕ್ಕಾಗಿ ಸದರೀ ಡಿಸ್ಟ್ರಿಕ್ಟ ಪ್ರಜೆಗಳಿಂದ ಚಂದಾಮೂಲಕ ವಸೂಲಾಗಿರುವ ದ್ರವ್ಯವು ಸಾಲದೆ, ಅಲ್ಲಿನ ಡಿಸ್ಟ್ರಿಕ್ಟ ಫಂಡಿನಿಂದ ೩೦೦೦ ರೂಪಾಯಿಗಳು ಕೊಡತಕ್ಕದ್ದೆಂದು ಗವರ್ನಮೆಂಟಿನವರು ಹುಕುಂ ಮಾಡಿರುವಂತೆ ಕೇಳುತ್ತೇವೆ.

ಶ್ರೀಮನ್ಮಹಾರಾಣೀ ರೀಜಂಟರವರು ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ತಮ್ಮ ದ್ವಿತೀಯ ಪುತ್ರಿಯ ವಿವಾಹ ಮತ್ತು ಶ್ರೀಮನ್ಮಹಾರಾಜರವರ ಉಪನಯನಾರ್ಥ ಇಲ್ಲಿನ ಮಿಲಿಟೆರಿ ಆಫಿಸರುಗಳಿಗೆ ಒಂದು ದಿನ ಔತನ ಮಾಡಿಸಬೇಕೆಂದು ಯೋಚಿಸಿ ಆಬಗ್ಗೆ ಹತ್ತು ಸಾವಿರ ರೂಪಾಯಿಗಳು ಮಂಜೂರ್ಮಾಡಿರುವದಾಗಿ ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ.

ಈ ನಗರಿಗೆ ಜಲವಸತಿಯಂ ಕಲ್ಪಿಸುವದಕ್ಕಾಗಿ ನಡೆಸಲ್ಪಡುತಲಿರುವ ಬಹ್ವರ್ಥ ಸಾಧ್ಯಗಳಾದ ಪ್ರಯತ್ನಗಳಂ ಪ್ರಾಗ್ವೇ ತಿಳಿಸಿರುತ್ತೇವೆಯಷ್ಟೆ. ಈಗ ಬೀದಿಬೀದಿಗೂ ನಲ್ಲಿಗಳು ಇಡಲ್ಪಡುತಲಿವೆ ಅಲ್ಲಿಯಲ್ಲಿ ನೀರಿನ ಕೊಳವೆಗಳನ್ನಿಟ್ಟೂ ಇರುವಲ್ಲೂ ಇದಾರೆ ಪ್ರಾಯಶಃ ಈ ತಿಂಗಳ ೧೫ನೇ ತಾರೀಖಿನೊಳಗಾಗಿ ಪೇಟೆಗೆ ನೀರು ಬಿಡಲ್ಪಡುವದೆಂದು ಹೇಳಿಕೊಳ್ಳುತ್ತಾರೆ

ಹಿಂದೆ ಶ್ರೀಪರಕಾಲ ಸ್ವಾಮಿಗಳವರ ಶ್ರೀಮಠಕ್ಕೆ ಅರಮನೆಯಿಂದ ಸಾಲಿಯಾನಾ ಸಲ್ಲುತಬಂದ ನಾಲ್ಕುಸಾವಿರ ರೂಪಾಯಿಗಳು ಕೆಲವು ಸಂವತ್ಸರಗಳ ಹಿಂದೆ [illegible] ಕಡಮೆ ಮಾಡಲ್ಪಟ್ಟು ಅದು ಸಂಸ್ಕೃತ ವಿದ್ಯಾಭಿವೃದ್ಧಿ ಕಾರ್ಯಕ್ಕಾಗಿ ಉಪಯೋಗಿಸಲ್ಪಡುತಲಿತ್ತಷ್ಟೆ. ಈಚೆಗೆ ಶ್ರೀಮನ್ಮಹಾರಾಣೀ ರೀಜಂಟರವರು ಶ್ರೀಸ್ವಾಮಿಗಳವರ ಅಪೇಕ್ಷೆಯನ್ನರಿತು ಹಿಂದೆ ಕೊಡಲ್ಪಡುತಲಿತ್ತ ನಾಲ್ಕು ಸಾವಿರ ರೂಪಾಯಿಗಳನ್ನು ಶ್ರೀಮಠಕ್ಕೇನೇ ಕೊಡುತ ಬರತಕ್ಕದ್ದೆಂದು ಹುಕುಂ ಮಾಡಿರುವದಾಗಿ ಕೇಳಿ ಬಹಳ ಸಂತೋಷಿಸುತ್ತೇವೆ.

ಗತಿಸಿದ ಬ್ರಜಲಾಲ್‌ದಾಸ್‌ರವರ ವಾರಸ್‌ದಾರರು ಮೈಸೂರು ಗವರ್ನಮೆಂಟಿನ ಮೇಲೆ ತಂದಿರುವ ಐದು ಲಕ್ಷ ಚಿಲ್ಲರೆ ರೂಪಾಯಿಗಳ ಮೊಕದ್ದಮೆ ಸಂಬಂಧ ಸಾಕ್ಷಿಗಳ ವಿಚಾರಣೆಯು ಮದರಾಸಿನಲ್ಲಿ ಇಲ್ಲಿಯೂ ಪ್ರಾಯಶಃ ಪೂರ್ತಿಯಾದಂತೆ ಕಾಣುತಿದೆ ಈ ಮೊಕದ್ದಮೆಯ ವಿಚಾರಣೆಯ ಬಗ್ಗೆ ಮೊಕರರ್ಮಾಡಲ್ಪಟ್ಟಿರುವ ಜಡ್ಜಿಗಳ ತೀರ್ಮಾನವು ಶೀಘ್ರದಲ್ಲಿ ಹೊರಗಾಗಬಹುದು. ಗತಿಸಿದ ಬ್ರಜಲಾಲ್‌ದಾಸ್‌ರವರ ವಾರಸ್‌ದಾರರಲ್ಲಿ ಒಬ್ಬರ ಕಡೆ ಮದರಾಸ್ ಹೈಕೋರ್ಟ್ ವಕೀಲರಾದ ಆನರಬಲ್ ಮಿ॥ ಭಾಷ್ಯಂ ಅಯ್ಯಂಗಾರ್ಯವರು ಕಳೆದ ಬುಧವಾರದ ದಿನ ಬೆಳಗ್ಗೆ ಈ ಪುರಿಗೆ ಬಂದಿದ್ದರು

ಈಗ್ಗೆ ಒಂದು ತಿಂಗಳ ಕಾಲಕ್ಕೆ ಮೇಲ್ಪಟ್ಟು ಸೂರ್ಯರಶ್ಮಿ ಚೆಲ್ಲದೆ ಪ್ರಾಯಶಃ ಯಾವಾಗಲೂ ಮೋಡವಾಡುತ ಮಧ್ಯೇಮಧ್ಯೇ ಎಣಿಸಿದಂತೆ ಹನಿಗಳುಬೀಳುತಲಿದೆಯೇ ಹೊರತು ಒಂದು ದಿನವಾದರು ಬಲವಾದ ವರ್ಷವಿಲ್ಲವು ಡಿಸ್ಟ್ರಿಕ್ಟ ಜಾತ ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡುವಲ್ಲಿ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ಕೆಲವು ತಾಲ್ಲೂಕುಗಳಲ್ಲಿ ಮಾತ್ರ ವರ್ಷ ಬಿದ್ದಿರುವಂತೆ ಕಾಣುತಿವೆ. ಇದರಿಂದ ತಾತ್ಕಾಲಿಕ ಕಾಲಸ್ಥಿತಿಯು ಸುತರಾಂ ಪ್ರೋತ್ಸಾಹಕರವಾಗಿಲ್ಲವು. ರೈತರು ಕೈಯಲ್ಲಿದ್ದ ಬೀಜವನ್ನು ನೆಲದಲ್ಲಿ ಚೆಲ್ಲಿಬಿಟ್ಟು [illegible] ವರುಣಜಪ ಮಾಡುತಲಿದ್ದಾರೆ. ಆಹಾರ ಪದಾರ್ಥಗಳ ಧಾರಣೆಗಳು ಪಟ್ಟಾಗಿ ಹೆಚ್ಚುತಲಿವೆ, ಮುಂದೆ ದೈವಾಜ್ಞೆ ಹ್ಯಾಗಿರುವದೋ ತಿಳಿಯದು

ಶ್ರೀ ಉತ್ತರಾದಿ ಸ್ವಾಮಿಗಳವರ ಸವಾರಿಯು ಕಳೆದ ಮಂಗಳವಾರದ ದಿನ ಬೆಳಗ್ಗೆ ತುಮಕೂರು ಮಾರ್ಗವಾಗಿ ಈ ಪುರಿಗೆ ಚಿತ್ತೈಸಿರು(ವ). ಈ ಸಂಸ್ಥಾನದ ದಿವಾನರವರು, ಕೌನ್ಸಿಲರ್ ಮಿ॥ ಕೃಷ್ಣಮೂರ್ತಿಗಳವರು, ಮಿ॥ ಪೂರ್ಣಯ್ಯನವರು ಮೊದಲಾದ ಸಂಸ್ಥಾನದ ಅಧಿಕಾರಿಗಳು ಶ್ರೀ ಸ್ವಾಮಿಗಳವರನ್ನು ಎದುರ್ಗೊಂಡು ವಿಶಿಷ್ಟ ಮರ್ಯಾದೆಗಳೊಡನೆ ರಾಜಮಾರ್ಗದಲ್ಲಿ ಉತ್ಸವ ಪೂರ್ವಕ ಕರೆತಂದು ಇಲ್ಲಿನ [illegible] ಇರುವ ಸರ್ಕಾರ್ ಛತ್ರದಲ್ಲಿ ಬಿಜಯಮಾಡಿಸಿದರು. ಅದು ಮೊದಲು ಪ್ರತಿದಿನವಲ್ಲೂ ಬ್ರಾಹ್ಮಣ ಸಮಾರಾಧನೆಯು ಅತಿ ವಿಜೃಂಭಣೆಯೊಡನೆ ನಡೆಯುತಬರುತಿದೆ. ಶ್ರೀ ಸ್ವಾಮಿಗಳವರು ಚಾತುರ್ಮಾಸ್ಯ ಸಂಕಲ್ಪಕಾಲವನ್ನು ಈ ಪುರದಲ್ಲೇ ಕಳೆಯುವರೆಂದು ಕೇಳುತ್ತೇವೆ. ಸ್ವಾಮಿಗಳವರು ಈ ದೇಶಕ್ಕೆ ದಯಮಾಡಿ ಅನೇಕ ಸಂವತ್ಸರಗಳ ಕಾಲವಾದುದರಿಂ [illegible] ಮಠಕ್ಕೆ ಸೇರಿದ ಶಿಷ್ಯಕೋಟಿಯವರ [illegible] ಭಕ್ತಿ ವಿಶ್ವಾಸ [illegible] ಗುರುಸೇ[illegible] ವರೆಂದು ನಂಬುತ್ತೇವೆ

[illegible]ವೃತ್ತಾಂತ ಪತ್ರ

ತುಮಕೂರ್, [illegible]ನೇ ಜುಲೈ ೧೮೯೬.—ಇಲ್ಲಿನ ಹವಾ ಬಹಳ ಅತೃಪ್ತಿಕರವಾಗಿದೆ. ಗಾಳಿಯು ದುಸ್ಸಹವಾಗಿದೆ. [illegible] ಪ್ರಾರಂಭಕ್ಕೆ ಇದು ಅನುಕೂಲ [illegible] ದಿಂದ ಅಲ್ಲಿಯಲ್ಲಿ ಜ್ವರವೂ ಕೆಮ್ಮೂ ಭೇದಿಯೂ ಇತರ ಚಿಲ್ಲರೆ ಉಪದ್ರವಗಳೂ ವ್ಯಾಪಿಸಿವೆ. ಆರೋಗ್ಯೋಪಯೋಗಕ್ಕೆ ಬೇಕಾದಷ್ಟು ನಗರ ಪಾರಿಶುದ್ಧ್ಯತೆಯು ಸಾಲದೆಂದು ಎಣಿಸಬೇಕಾಗಿದೆ

ಇದರ ವಿಷಯದಲ್ಲಿ ಸಿಗೇ ಕೊಡುವದಕ್ಕೆ ಅಧಿಕಾರಿಗಳಲ್ಲಿ ಒಬ್ಬೊಬ್ಬರು ಒಂದೊಂದು ಕೆಲಸದಲ್ಲಿ ನಿಯುಕ್ತರಾಗಿರುವದರಿಂದ ಅದಕ್ಕೆ ಪ್ರತ್ಯೇಕ ಸಾಧನಿರುವಂತೆ ಕಾಣೆನೆವು. ಮ್ಯುನಿಸಿಪಲ್ ಮೆಂಬರುಗಳ್ಯಾರೂ ಕೆಲಸಬಿದ್ದಂತೆ ಅವರು ಯಾರೋ ಎಲ್ಲಿರುವರೋ ತಿಳಿಯದು. ಮ್ಯುನಿಸಿಪಲ್ ವಿಷಯದಲ್ಲಿ ಅನೇಕ ವಿಚಾರಣೆಗಳು ಮಾಡಬೇಕಾಗಿರುವಾಗ ಅವುಗಳಿಗೆ ಶ್ರದ್ಧೆಯಿಂದ ಕೆಲಸ ಮಾಡುವ ಆಸಾಮಿಗಳು ಬೇಕಾಗಿರುತ್ತದೆ

ಒಂದೆರಡು ಸಂವತ್ಸರಗಳ ಕಾಲವಾಗಿ ಈ ಡಿಸ್ಟ್ರಿಕ್ಟಿನಲ್ಲಿದ್ದ ಇಬ್ಬರು ಅಸಿಸ್ಟೆಂಟ್ ಕಮಿಷನರುಗಳಲ್ಲಿ ಒಬ್ಬರು [illegible] ಮತ್ತೊಬ್ಬರು ಮೈಸೂರಿಗೆ ವರ್ಗವಾದಂತೆಯೂ ಹಿಂದಿನವಾರದ ಗೆಜೆಟ್ ಮೂಲಕ ತಿಳಿಯಬಂದಿರ[illegible] ಒಬ್ಬರು ದೊಡ್ಡ ಮನುಷ್ಯರಾಗಿ ಒಬ್ಬರು ಇಲ್ಲಿಂದ ಉದ್ಯೋಗ ಬಿಟ್ಟು ಹೊರಟುಹೋಗಿ ಈಗ ಅವರು ಬೆಂಗಳೂರಲ್ಲಿ ವಕೀಲರಾಗಿ ಪ್ರ್ಯಾಕ್ಟಿಸ್ ಮಾಡುತಲಿದ್ದಾರೆ. ಇವರು ನ್ಯಾಯಸ್ಥಾನದಲ್ಲಿದ್ದು ಅದರ ಆನಂದವನ್ನು ಗೌರವವನ್ನೂ ಬಹುಕಾಲವಾಗಿ ಅನುಭವಿಸಿದವರಾದಕಾರಣ ಈಗ ತಮ್ಮ ಸ್ಥಾನದೊಳಿರುವವರನ್ನು ತಾವು ಹ್ಯಾಗೆ ಗೌರವಪೂರ್ವ ತೃಪ್ತಿಪಡಿಸಬೇಕೋ ಅದಂ ಅರಿಯುವದಕ್ಕಾಗಿಯೋ ವಕೀಲ್ ಕೆಲಸವನ್ನು ಕೈಗೊಂಡಿರುವದಾಗಿ ತೋರುತಿದೆ. ಇನ್ನೊಬ್ಬ ಅಸಿಸ್ಟೆಂಟ್ ಕಮಿಷನರು ಹೊರಡುವ ಪ್ರಯತ್ನದೊಳಿದ್ದಾರೆ. ಇವರ [illegible] ಯೋಜನೆಗೆ ಅಸ್ವಸ್ಥರೊಬ್ಬರು ಇನ್ನೂ ಇದ್ದಂದಿರುವದರಿಂದ ಸಮಯ ಸಿಕ್ಕ ಕ್ಷಣ[illegible] ಇವರ ಕೆಲಸಕ್ಕೆ ಮೈಸೂರಿಂದ ಒಬ್ಬರೂ ಬೆಂಗಳೂರಿಂದ ಒಬ್ಬರೂ ಬರುವವರಾಗಿದಾರಂತೆ

ಇಲ್ಲಿ ಸಾಗುವಳಿ ಕೆಲಸದಲ್ಲಿ ರೈತರು ಬಹಳ ಶ್ರದ್ಧೆಯುಳ್ಳವರಾಗಿರುವ ಅನೇಕ ಪ್ರದೇಶಗಳಲ್ಲಿ [illegible] ಕೆಲಸಗಳು ಪ್ರಾರಂಭಿಸಿವೆ. ಆಗಿಂದಾಗ್ಗೆ ವರ್ಷವೂ ರೈತರಿಗೆ ಅನುಕೂಲವಾದಿಸುತಲಿದೆ. ಈಚೆಗೆ ಆದ ವರ್ಷದಿಂದ ಕೆಲವು ಕಡೆಗಳಲ್ಲಿ ಕೆರೆಗಳು ತುಂಬಿ ಕೋಡಿಗಳು ಬೀಳುತಲಿವೆ

ಶ್ರೀ ಉತ್ತರಾದಿ ಸ್ವಾಮಿಗಳವರು ಅಧಿಕಾರ ಸ್ವೀಕಾರಪೂರ್ವಕವಾದ ಶಿಷ್ಯಾನುಗ್ರಹಾರ್ಥ ಈ ಪುರಿಗೆ ದಯಮಾಡಿ ಇಲ್ಲಿನ ಸರ್ಕಾರಿ ಛತ್ರದಲ್ಲಿ ಬಿಜಯಮಾಡಿದ್ದರು. ಅವರಿಲ್ಲಿ ಮೂರು ನಾಲ್ಕು ದಿನಗಳ ತನಕ ದಯಮಾಡಿದ್ದು ಇಲ್ಲಿಂದ ಮುಂದಕ್ಕೆ ಸವಾರಿ ಚಿತ್ತೈಸಿದರು. [illegible]ಗಳ ಆಗಮನದ ದೆಸೆಯಿಂದ ನಮ್ಮ ಹೆಂಗಸರು ಮನೆಯಲ್ಲಿ ಬಿಸಿನೀರು ಒಲೆಗೆ ಸಹ ಬೆಂಕಿ ಹಾಕುವದಿಲ್ಲವೆಂದು ಹೇಳಿ ತಂಬಿಗೆ ಪಾತ್ರೆಗಳನ್ನು ನಮ್ಮ ಕೈಯಲ್ಲಿ ಕೊಟ್ಟು ನಮ್ಮನ್ನು ಕಳುಹಿಸಿಬಿಟ್ಟರು. ಗುರು ಕೃಪಾಕಟಾಕ್ಷ ಲಬ್ಧವಾದ ಮಹತ್ಪ್ರಸಾದವಾದರು [illegible] ಅಪಕ್ವಾತಿಪಕ್ವ ಪದಾರ್ಥಗಳ ಮೂಲಕ ಗುರುಚರಣಾರವಿಂದ ಸಂದರ್ಶನಾನಂದವನ್ನು ಪ್ರಯಾಸವಿಲ್ಲದೆ ಅನುಭವಿಸಬಹುದಾಗಿದೆ. ಶ್ರೀಮಠದ ಕಾರ್ಯದರ್ಶಿಗಳು ಶಿಷ್ಯವರ್ಗದವರ ಆದಾಯವನ್ನೆಲ್ಲ ಯೋಗಕ್ಷೇಮ ಪೂರ್ವಕ ವಿಚಾರಿಸಿ ತಿಳಿದುಕೊಳ್ಳುತಲಿದ್ದರು. ಈ ಸಂವತ್ಸರದ ಇನ್ಕಂಟ್ಯಾಕ್ಸ್ ವಸೂಲಿಗೆ [illegible] ನಾವು ಬಳಸಬೇಕಾದವರಾಗಿದ್ದೇವೆ. ಟ್ಯಾಕ್ಸಿನಲ್ಲಿ ಕಡಮೆ ಮಾಡುವದಾದರೆ [illegible] ಜೀವಾತ್ಮನೊಡನೆ ದ್ವೈತಸಂಬಂಧ ಕೂಡಲೆ ಅನುಭವಿಸಬೇಕಾಗಿ ಬರುವದು. ಶ್ರೀ ಸ್ವಾಮಿಗಳವರ ಸವಾರಿ ಚಿತ್ತೈಸುವ ಸಮಯವು ಮುಂಚಿತವಾಗಿಯೇ ಇಲ್ಲಿನವರಿಗೆಲ್ಲ ಗೊತ್ತಾಗಿದ್ದದರಿಂದ ಈ ಡಿಸ್ಟ್ರಿಕ್ಟ ಡಿಪ್ಯುಟಿ ಕಮಿಷನರ್ ಮಹಾರಾಜ ರಾಜಶ್ರೀ ನಾರಾಯಣ ರಾಯರವರು ಸ್ವಜಾತಿ ಅನ್ಯಜಾತಿ ಯೆಂಬ ತಾರತಮ್ಯವಿಲ್ಲದಂತೆ ತಮ್ಮ ಅಧಿಕಾರ [illegible] ಎಷ್ಟು ಅಸಿಸ್ಟೆಂಟರುಗಳೊಡನೆಯೂ ಪೋಲೀಸ್ ಸೂಪರಿಂಟೆಂಡೆಂಟರೊಡನೆಯೂ ಇತರ ಅನೇಕ ಉದ್ಯೋಗಸ್ಥರೊಡನೆಯೂ [illegible] ಹೋಗಿ [illegible] ಶ್ರೀಗಳವರನ್ನು ವಿಶೇಷ ಮರ್ಯಾದಾಪೂರ್ವಕ ಆಸ್ಥಾನಕ್ಕೆ ಬಿಜಯಂಗೈಸಿ ಅವರಿಂದ ಅನುಗ್ರಹಪೂರ್ವಕ ದತ್ತವಾದ ಫಲ ಮಂತ್ರಾಕ್ಷತೆಗಳಂ ಶಿರಸಾವಹಿಸಿ ಅವರ [illegible] ಸ್ವಸ್ಥಾನಕ್ಕೆ ದಯಮಾಡಿದರು. [illegible] ಶಿಷ್ಯವರ್ಗದವರೆಲ್ಲರು [illegible] ಶ್ರೀ ಸ್ವಾಮಿಗಳವರಿಗೆ ಮಹಾರಾಣೀ ರೀಜಂಟ್ ಸರ್ಕಾರದವರ ಭಿಕ್ಷೆಯು ಯಥಾ ಯೋಗ್ಯವಾಗಿ ನೆರವೇರಿತು. ನಿತ್ಯ ತದೀಯಾರಾಧನೆ [illegible] ರಾಮಾನುಜರಿಗೆ ಇದರ ಲಾಭವು ಅಷ್ಟಾಗಿರುವಂತೆ ಕಾಣಿಸಲಿಲ್ಲವು, ಮತ್ತು ಅವರಿಗೆ [illegible] ವ್ಯಾಜ್ಯದಲ್ಲಿಯೂ, [illegible] ವಿವಾದಗಳಲ್ಲಿಯೂ ವಿಶಿಷ್ಟ ಅವಧಾನವಂ [illegible] ದರಿಂದ ಇತರ ವಿಷಯಗಳಲ್ಲಿ ಅವರಿಗೆ ವ್ಯವಧಾನವು ಕಡಮೆಯಾಗಿರುತಿದೆ. ಇದಲ್ಲದೆ ಸ್ವಯಂ [illegible] ಶ್ರೀ ವೈಷ್ಣವರ [illegible] ಇನ್ಕಂಟ್ಯಾಕ್ಸ್ [illegible] ಸ್ವಲ್ಪವೂ ಇಲ್ಲವು.

ಶ್ರೀ ಸ್ವಾಮಿಗಳವರ ಸವಾರಿಯು ದಯಮಾಡಿಸಿದ ಸಂತ[illegible] ಪ್ರದಲ್ಲಿ ಡೆಪ್ಯುಟಿ ಕಮಿಷನರವರು [illegible] ಗಿದ್ದದನ್ನು ಅಷ್ಟು ವಿಶೇಷವೆಂದು ಭಾವಿಸಲಾಗದು ಏತಕ್ಕೆಂದರೆ—ಅವರು ಸ್ವತಃ ವಿಪ್ರೋತ್ತಮರಾಗಿಯೂ [illegible] ಸದಾಚಾರಾನುವರ್ತಿಯವರಾಗಿಯೂ, ಶ್ರದ್ಧಾಳುವಾಗಿಯೂ ಇರುವದರಿಂದ ಪ್ರಸಿದ್ಧವಾದ ಗುರುಪೀಠಕ್ಕೆ [illegible] ವ್ವ [illegible] ಅವರಿಗೆ ಸ್ವಾಭಾವಿಕವೆಂಬುವೂ,

ಧರ್ಮವೆಂದೂ ಭಾವಿಸಲ್ಪಡುತ್ತಿರುತ್ತಿದೆ ಪರಂತು ಒಂದೂ ಸಂಪ್ರದಾಯಕ್ಕೆ ವಿರೋಧಿಗಳಾದ ಮುಸಲ್ಮಾನರೂ, ಯಾವ ರೊಮನ್ ವರ್ಗಗಳು ಸಹ ಕಾಲಾನುಗುಣವಾಗಿ ಈ ದೂ ಗುರುಗಳ್ಲ ನಮ್ರತೆಯನ್ನೂ ಗುರುತ್ವವನ್ನೂ ಬಾಹ್ಯತಃ ತೋರಿಸುವ ತಟಸ್ಥ್ಯಯಂತೆಯೂ ಅಧಿಕವಾಗಿ ನಟಿಸುವಂ ತೆ ನೋಡಿದರೆ, ಕೆಲ ಮಹಮದೀಯರಲ್ಲೇ ಬಾವಿಸದೇ ಕಾಣಿಸಿ. ಮುಖ್ಯವಾಗಿ ವೈಷ್ಣವ ಪ ೦ಥಿಪತಿಗಳಿಗೆ ಸ್ಮಾರ್ತರು ಭಿಕ್ಷೆ ಮಾಡಿಸಿ ಪಾದಕಾಣಿಕೆ ಕೊಡುವುದೂ, ಸ್ಮಾರ್ತ ಗುರುಗಳಿಗೆ ವೈಷ್ಣವರು ಭಿಕ್ಷೆ ಮಾಡಿಸಿ ಕಾಣಿಕೆಗಳ ನ್ನರ್ಪಿಸುವುದೂ ಹ್ಯಾಗೆ ಲೌಕಿಕ ಸಂಘಾಸಗಳಲ್ಲೊಂದಾಗಿ ಏರ್ಪಟ್ಟು ಸ್ವಾತಂತ್ರ್ಯ ಚಾತುರ್ಯ ಪ್ರದರ್ಶಕವಾದವೋ ಆದೇಶಿಕ ಅಧಿಕಾರ ಬಲಾಬಲವನ್ನೂ ಸ್ವಪ್ರಯೋಜನವನ್ನೂ ಪರ್ಯಾಲೋಚಿಸಿ ಕಾಲಾನುಗುಣವಾಗಿ ವರ್ತಿಸುವ ದಕ್ಷ ಅನ್ಯಜಾತಿಯವರು ಸಹ ಕಲಿತುಕೊಂಡದಂ ನೋಡಿ ಸಂತೋಷಿಸಬೇಕಾಗಿದೆ. ಹೀಗೆಯೇ ಮಠಾಧಿಪತಿಗಳು ಈವರ ರಾಜ್ಯತಂತ್ರ ಪ್ರಕರಣವನ್ನು ನಿತ್ಯ ವೇದಾಂತ ಕಾಲಕ್ಷೇಪದೊಡನೆ ಅನುಸಂಧಾನ ಮಾಡಿ ದಿನೇ ದಿನೇ ಅತಿ ಸೂಕ್ಷ್ಮ ರೂಪವನ್ನೈದುತ ಬರುವ ಶಿಷ್ಯವರ್ಗದವರ ಹೃದಯಸಂಪುಗೆ ರಂಜಿಸಲೆತ್ನಿಸಿದರೆ ತಮ್ಮಲ್ಲಿ ಅವರಿಗೆ ಗೌರವವು ಹೆಚ್ಚಿ ಸತ್ಕಾರಗಳು ನ್ಯೂನತೆ ಇಲ್ಲದಂತೆ ಜರಗಿಸಲ್ಪಡುವವೋ ಆ ಮಾರ್ಗವನ್ನವರೂ ಕಾಲೋಚಿತವಾಗಿ ಅರಿಯಲೆತ್ನಿಸದೇ ಕೆಂಬದೇ ಅವರ ಶಿಷ್ಯರ ಮುಖ್ಯ ಪ್ರಾರ್ಥನೆಯಾಗಿರುತಿವೆ ಇದುವರೆಗೆ ಕಾಲವೂ ಅವಕಾಶವೂ ಹೆಚ್ಚಿದ್ದರಿಂದ ಸದ್ಯಃ ಇಲ್ಲಿಗೆ ವಿರಮಿಸುವೆನು — ವರ್ತಮಾನಿ

THE MYSORE GAZETTE.
ಮೈಸೂರು ಗೆಜೆಟ್.

—o—

ಗುರುವಾರ, ತಾ॥ ೩೦ನೇ ಜುಲೈ ೧೮೯೬

ಮೈಸೂರ್ ಗವರ್ನಮೆಂಟಿನವರಿಂದ ಹೊರಟ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ ೨೦ನೇ ಜುಲೈ ೧೮೯೬

ನಂ॥ ೧೪೧೭—ಮಿ ೩೨, ಸ್ಟೇಟ್ ಜಿಯಾಲಜಿಸ್ಟ್ ಸಾ॥ ಆರ್ ಬ್ರೂಸ್‌ಫುಟ್, ಎಫ್ ಜಿ ಎಸ್ ಯವರು ಜಿಯಾಲಜಿಕಲ್ ಇಲಾಖೆಯ ಗವರ್ನಮೆಂಟ್ ಎಕ್ಸ್ ಅಫಿಷಿಯೋ ಸೆಕ್ರೆಟರಿಯವರಾಗಿ ನೇಮಕರಾಗ್ಮಲ್ಪಟ್ಟಿರುತ್ತಾರೆ

ನಂ॥ ೧೪೧೮—ಮಿ. ೩೯, ಇದುವರೆ ಪ್ರಸಿದ್ಧಪಡಿಸುವ ದೆಂದರೆ—ಜಿಯಾಲಜಿಕಲ್ ಇಲಾಖೆಯ ಡಾಕ್ಟರ್ ಜೆ ಡಬ್ಲ್ಯೂ ಇವಾನ್ಸ್, ಡಿ. ಎಸ್ ಎಫ್ ಜಿ ಎಸ್ ಯವರ ಹುದ್ದೆಯು “ಸೀನಿಯರ್ ಜಿಯಾಲಜಿಸ್ಟ್ ಮತ್ತು ಅನಲಿಸ್ಟ್ ನಿಂದ “ಮೈಸೂರ್ ಮೈನ್ಸ್ ಇನ್ಸ್‌ಪೆಕ್ಟರ್” ಗೆ ಬದಲಾಯಿಸಲ್ಪಟ್ಟಿರುತ್ತೆ

ನಂ॥ ೧೪೨೦—ಮಿ ೩೧, ಮೈಸೂರು ಮೈನ್ಸ್ ಇನ್ಸ್‌ಪೆಕ್ಟರ್ ಡಾಕ್ಟರ್ ಜೆ. ಡಬ್ಲ್ಯೂ ಇವಾನ್ಸ್, ಡಿ ಎಸ್ ಎಫ್ ಜಿ ಎಸ್, ಯವರು ಜಿಯಾಲಜಿಕಲ್ ಇಲಾಖೆಯ ಗವರ್ನಮೆಂಟ್ ಎಕ್ಸ್ ಅಫಿಷಿಯೋ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ನೇಮಕರಾಗ್ಮಲ್ಪಟ್ಟಿರುತ್ತಾರೆ

ನಂ॥ ೧೪೨೩—ಜಿ. ೧೪೫, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ ೧೨ನೇ ಸೆಕ್ಷನ್ ಅನುಸರಿಸಿ ಶ್ರೀರಂಗಪಟ್ಟಣ ತಾಲ್ಲೂಕು ಅಮಲ್ದಾರ್ ಹಸ್ತ ಅಳೀವೇಗಿಯುವವರು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕರಾಗ್ಮಲ್ಪಟ್ಟಿರುತ್ತಾರೆ

ತಾ॥ ೨೮ನೇ ಜುಲೈ ೯೬

ನಂ॥ ೧೪೪೬—ಮಿಸ್ ಎಫ್, ೫—೯೫ — ಚೀಫ್ ಸೆಕ್ರೆಟರಿ ಮ॥ಟ ಆನಂದರಾಯರವರಿಗೆ, ೧೮೯೬ನೇ ಇಸವಿ ಏಪ್ರಿಲ್ ೨೫ನೇ ಮಾರ್ಚ್ ಸಿ. ೨೦೩ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ಮೂಲಕ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟ ರಜಾ ಮತ್ತು ಮೂರು ತಿಂಗಳಿಗೆ ಜಾಸ್ತಿ ಮಾಡಲ್ಪಟ್ಟಿರುತಿದೆ

ತಾ॥ ೨೭ನೇ ಜುಲೈ ೧೮೯೬

ನಂ॥ ೧೪೯೧—ಬಿ ೧೮೦—೧೮೯೭ನೇ ಇಸವಿ III ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು ೬ನೇ ಸೆಕ್ಷನಿನ ನಿಯಮಗಳನ್ನನುಸರಿಸಿ, ಮೈಸೂರು ಗವರ್ನಮೆಂಟಿನವರು ಇದರ ಕೆಳ ಕಾಣಿಸಲ್ಪಡುವ ವರ್ಗ ವರ್ಗಗಳು ಮತ್ತು ನೇಮಕಗಳನ್ನು ಮಂಜೂರು ಮಾಡಿರುತ್ತಾರೆ.—

೧. ನಂಜನಗೂಡು ಫಸ್ಟ್‌ಗ್ರೇಡ್ ಸಬ್‌ರಿಜಿಸ್ಟ್ರಾರ್ ಚಿಂತಾಮಣಿರಾಯರು, ರೆವಿನ್ಯೂ ಇಲಾಖೆಗೆ ವರ್ಗ ಮಾಡಲ್ಪಟ್ಟ ಎಂ ರಂಗನಾಥರಾಯರಿಗೆ ಬದಲು ಮೈಸೂರಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

೨. ಎಡತೊರೆ ಫಸ್ಟ್ ಗ್ರೇಡ್ ಸಬ್ ರಿಜಿಸ್ಟ್ರಾರ್ ಟಿ ಶೇಷಾದ್ರಿ ಅಯ್ಯಂಗಾರ್ಯರು, ಎಮ್ ಚಿಂತಾಮಣಿರಾಯರಿಗೆ ಬದಲು ನಂಜನಗೂಡಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ,

೩. ಮೈಸೂರು ಡೆಪ್ಯುಟಿ ಕಮಿಷನರ್ ಆಫೀಸ್ ರೆಕಾರ್ಡ್‌ಕೀಪರ್ ಇ. ಸಿ. ಸದಾಶಿವಪಿಳ್ಳೆಯವರು ಫಸ್ಟ್ ಗ್ರೇಡ್ ಸಬ್ ರಿಜಿಸ್ಟ್ರಾರಾಗಿ ನೇಮಕರಾಗ್ಮಲ್ಪಟ್ಟ ಟಿ ಶೇಷಾದ್ರಿ ಅಯ್ಯಂಗಾರ್ಯರಿಗೆ ಬದಲು ಎಡತೊರೆಗೆ ನಿಯಮಿಸಲ್ಪಟ್ಟಿರುತ್ತಾರೆ.

ತಾ॥ ೨೯ನೇ ಜುಲೈ ೧೮೯೬

ನಂ॥ ೧೫೪೯—ಜಿ ೧೪೯, ೧೮೯೬ನೇ ಇಸವಿ ಜುಲೈ ೨೧ನೇ ಮಾರ್ಚ್ ೧೦೪೯—ಜಿ, ೧೦೬ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷರ್ ಮೂಲಕ ಮೈಸೂರು ಡಿಸ್ಟ್ರಿಕ್ಟ್ ಮುನ್ಸಿಫ್ ಮೆ॥ ಎಸ್ ಲಕ್ಷ್ಮೀನರಸಿಂಹ ಐಯ್ಯಂಗಾರ್ಯರವರನ್ನು ಚಿಕ್ಕಮಗಳೂರಿಗೆ ವರ್ಗಮಾಡಿ ಕೊಟ್ಟ ಹುಕುಂ ಇದುವರೆ ರದ್ದುಮಾಡಲ್ಪಟ್ಟಿದೆ

ತಾ॥ ೨೫ನೇ ಜುಲೈ ೧೮೯೬

ನಂ॥ ೪೨೪—ಆರ್ ೩೪೮ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೨೩ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ತಾಲ್ಲೂಕು ಅಮಲ್ದಾರ್ ಬಿ.ವಿ. ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಎರಡು ತಿಂಗಳ ಫರ್ಲೋ ರಜಾ ಕೊಡಲ್ಪಟ್ಟಿದೆ

ರೆವಿನ್ಯೂ ಸರ್ವೆ ಸಬ್ ಡಿ. ಸೂಪರ್ ಟಿ ಡಿ. ಟಿ. ಆಫೀಸ್ ಹೆಡ್ ಕ್ಲರ್ಕ ನರಸಿಂ ಶ್ರೀನಿವಾಸ ಪಟ್ಟಸ್ ಯವರು, ಬಿ.ವಿ. ಕೃಷ್ಣರಾಯರು ರಜಾ ಮೇಲೆ ಹೋಗುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಚನ್ನಪಟ್ಟಣ ತಾಲ್ಲೂಕು ಅಮಲ್ದಾರ್ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕರಾಗ್ಮಲ್ಪಟ್ಟಿರುತ್ತಾರೆ

ತಾ॥ ೨೬ನೇ ಜುಲೈ ೧೮೯೬

ನಂ॥ ೯೫೬—ಆರ್ ಎಫ್ ೧೬೦ ೯೫—೧೮೯೫ನೇ ಇಸವಿ ಜೂನ್ ೯ ಮತ್ತು ೨೬ನೇ ಮಾರ್ಚ್‌ಗಳಲ್ಲಿ ೧೦೬೭—ಆರ್ ೩೦೧೬ ಮತ್ತು ೧೧೨೦೭ — ಆರ್ ಎಫ್ ೧೬೦—೯೫ನೇ ನಂಬರ್‌ಗಳಲ್ಲಿ ಗವರ್ನಮೆಂಟ್ ನೋಟಿಫಿಕೇಷನ್‌ಗಳ ಮೂಲಕ ಅರಣ್ಯ ಶಾಖೆಯ ಅಸಿಸ್ಟೆಂಟ್ ಕನ್ಸರ್ವೇಟರವರಿಗೆ ಕೊಡಲ್ಪಟ್ಟ ಪ್ರಿವಿಲೆಜ್ ರಜಾ ಇದರಿಂದ ಒಂದೊಂದು ತಿಂಗಳಿಗೆ ಜಾಸ್ತಿ ಮಾಡಲ್ಪಟ್ಟಿರುತ್ತೆ

ತಾ॥ ೨೯ನೇ ಜುಲೈ ೧೮೯೬

ನಂ॥ ೯೧೨ ಆರ್ ೩೬೨—ಇದರ ಕೆಳಗೆ ಕಾಣಿಸಲ್ಪಡುವ ಡೆಪ್ಯುಟಿ ಅಮಲ್ದಾರರುಗಳ ವರ್ಗ ವರ್ಗಗಳು ಹುಕುಂ ಮಾಡಲ್ಪಟ್ಟಿರುತವೆ

ಸಿರಾ ಮೊಬೈಲ್ ಅಲ್ಲಿಯವರು ಹೊಸದುರ್ಗಕ್ಕೆ (ಕೂಡಲೇ ಹೋಗಿ ಸೇರತಕ್ಕದ್ದು)

ಟಿ ವೆಂಕಟಸುಬ್ರಹ್ಮಣ್ಯರಾಯರು ಹೊಸದುರ್ಗದಿಂದ ಎಡೆಹಳ್ಳಿಗೆ (ಬಿಡುಗಡೆಯಾದ ಕೂಡಲೆ ಹೋಗಿ ಸೇರತಕ್ಕದ್ದು)

ತಾ॥ ೨೭ನೇ ಜುಲೈ ೧೮೯೬

ನಂ॥ ೯೨೪ ಎಮ್ ಟಿ ಎಫ್ ೨೩ ೯೫—೩ನೆ ಗ್ರೇಡ್ ರೇಂಜರ್ ಎಸ್ ಶ್ರೀನಿವಾಸರಾಯರು, ಮೆ॥ ಕೆ ಕೆ ಮಹ್ಯಂಗಾರ್ಯರು ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರಾಗಿ ಕೆಲಸ ನೋಡುವ ಕಾಲದಲ್ಲಿ ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾಗಿ ಕೆಲಸ ನೋಡುವಂತೆ ನೇಮಕರಾಗ್ಮಲ್ಪಟ್ಟಿರುತ್ತಾರೆ

ನಂ॥ ೯೯೬—ಆರ್ ೩೯೮—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕು ಅಮಲ್ದಾರ್ ಬಿ ಲಕ್ಷ್ಮಣರಾಯರು, ಈಗ ಅವರಿಗೆ ಕೊಡಲ್ಪಟ್ಟ ರಜಾ ಪೂರ್ತಿಯಾಗುವ ತಾರೀಖಿನಲ್ಲಿ ಕೆಲಸದಿಂದ ನಿವೃತ್ತಿಯಾಗುವವರಕ್ಕೆ ಪೂರ್ವಭಾವಿಯಾಗಿ ೯೬ನೇ ಇಸವಿ ಜುಲೈ ಗುರ್ರೇ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುತ್ತಾರೆ

ತಾ॥ ೨೯ನೇ ಜುಲೈ ೧೮೯೬

ನಂ॥ ೧೦೦೭—ಎಫ್ ಟಿ ೩೪ — ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೮ನೇ ಆರ್ಟಿಕಲ್ ಅನುಸರಿಸಿ, ಸಂಸ್ಥಾನದ ಹುಜೂರ್ ಟ್ರೆಜರಿ ಖಜಾಂಚಿಯಾದ ಮೆ॥ ಟಿ ರಾಮಾಲು ಶೆಟ್ಟರವರು ಈ ತಿಂಗಳ ೨೯ನೇ ತಾರೀಖ್ ಮೊದಲು ಅದನ್ನು ಅವರು ಉಪಯೋಗಿಸಿಕೊಳ್ಳಬಹುದಾದ ಬೇರೆಯೊಂದು ತಾರೀಖ್ ಮೊದಲು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ

SUMMARY OF NEWS.
ವೃತ್ತಾಂತ ಸಂಗ್ರಹವು.

—o—

ಗೋವೆಯಲ್ಲಿ ರಾಜದ್ರೋಹಿಸಿ ಒಬ್ಬನನ್ನು ಸರಕಾರಿ ಬಲದವರು ಸಿಪಾಯಿಗಳನ್ನು ಗುಂಡು ಹಾಕಿ ಕೊಂದದ್ದನ್ನು ಹಿಂದಿನ ವಾರದಲ್ಲಿ ಪ್ರಕಟಿಸಿದ್ದೇವೆ ಅದರಿಂದ ರಾಜಕೀಯದ ಮರಾಠಿಗಳೆಲ್ಲರು ಬಹಳ ಸಂತಪ್ತರಾಗಿ ರಾಜದ್ರೋಹಿಯನ್ನು ಕೊಂದದ್ದಾಗ ಮುಖ್ಯ ಕಾರಣಸ್ಥರಾದವರ ಬದುಕಿಕ್ಕಲೊಲ್ಲೆವೆಂದು ಆಣೆ ಇಟ್ಟುಕೊಂಡಿದ್ದಾರೆ ಆದರಿಂದ ಜಗಳವು ಹುತ್ತಿ ಬೆಳೆಯುವದೆಂದದಕ್ಕೆ ಸಂದೇಹವಿಲ್ಲ

ಪುಣೆಯ ಇಂಜನಿಯರಿಂಗ್ ಕಾಲೇಜಿನಲ್ಲಿ ಲಕ್ಷ್ಮಣರಾವ್ ಕೆಂಬ ಮರಾಠಿ ವಿದ್ಯಾರ್ಥಿಯುಂಟು ಅವನಿಗೆ ೮ ವರ್ಷದ ಜಿ ವಿ ಗದ್ರೆಯೆಂಬ ಕೊಂಕಣಸ್ಥನು ವಿಧವೆಯಾದ ತನ್ನ ಹಾಲದಾ ಎಂಬ ಮಗಳನ್ನು ಕೊಟ್ಟು ಲಗ್ನ ಮಾಡಿದನು ಈ ಗದ್ರೆನು ತಾನೂ ಒಬ್ಬ ವಿಧವೆಯನ್ನೇ ಲಗ್ನ ಮಾಡಿಕೊಂಡಿದ್ದಾನೆ ಬ್ರಾಹ್ಮಣರೊಬ್ಬರಿಗೂ, ಜಗಳ ಬೆಳ್ಳ ಕನ್ಯಾ ಜೋಡು ಕೂಡಿದಂತಾಯಿತು.

ಜಗತ್ಪ್ರಸಿದ್ಧ ಬರೋಡೆಯ ಗಾಯಕರಾದ ಮೌಲಾಬಕ್ಷರವರು ಕಳೆದವಾರದಲ್ಲಿ [illegible] ಮೊದಲು ಕರ್ನಾಟಕದಲ್ಲಿ ದಾಕ್ಷಿಣಾತ್ಯ [illegible] ನಂತರ ಉತ್ತರಕ್ಕೆ ಹೋಗಿ ಹಿಂದುಸ್ಥಾನಿ ಗಾಯನ ಕಲಿತರು ಇವರ ಗಾಯನಕ್ಕೆ ಮೆಚ್ಚಿ ಬಿಟ್ಟ ಮೈಸೂರಾಯರು ಇವರಿಗೆ ಪ್ರೊಫೆಸರ್ ಎಂಬ ಅಲ್ಕಾಬ್ ಕೊಟ್ಟಿದ್ದರು ಮೈಸೂರಲ್ಲಿ ಗತಿಸಿದ ಮಹಾರಾಜರವರು ಇವರಿಗೆ ದೇಶೀಯ ಪದ್ಧತಿ ಪ್ರಕಾರ ಪಕ್ಷಿ ಗಾನಗಳನ್ನು ಬರು

ಮಾನನಾಗಿ ಕೊಟ್ಟಿದ್ದರು ಬರೋಡೆಯು ಗಾಯನ ಶಾಲೆಯ ಮುಖ್ಯ ವ್ಯಾಸ್ಯಾಗಾರರಾಗಿದ್ದರಲ್ಲದೆ, ಇವರ ಪರಿಶ್ರಮದಿಂದ ಆ ಸಂಸ್ಥಾನದಲ್ಲಿ ಗಾಯನ ಶಾಲೆಗಳು ಸ್ಥಾಪಿಸಲ್ಪಟ್ಟವು ಇವರು, ಲಯ ಹೊಂದುತ ನಡೆದಿದ್ದ ಸ್ವರಶಾಸ್ತ್ರವು ಎಷ್ಟು ಉಳ ಮಾರ್ಗದಿಂದ ಪರಿಷ್ಕೃತ — ತಮ್ಮ ತತ್ವಗಳನ್ನು ತಿಳಿಸಿದರು ಬಾಹುಲ್ಯೇ ಅಲೋ ಚನೆ, ಅವಲೋಕನ ಮಾಡುವವರಿಂದ ಸ್ವರ ಶಿಕ್ಷಣ ನಂತ ಕಠಿಣ ಭಾವವನ್ನು ತಿಳಿದುಕೊಳ್ಳವಂತ, ಸುಲಭ ಪುಸ್ತಕಗಳನ್ನು ಬರೆದಿರುತ್ತಾರೆ. ಹೀಗೆ ಇವರು ಗಂತ ಮಕ್ಕಳನ್ನು, ಹಿರಿಯ ವಸಿಗೆ ಅದೇ ಸಂಸ್ಥಾನದಲ್ಲಿ ಅದೇ ಕೆಲಸದೊಳಗೆ ೭೫ ರೂಪಾಯಿ ಸಂಬಳವಿತ್ತಿತ್ತೆ ಇವನ್ನು ನಗರ ಹಿರಿಯರಿಂದ ಶ್ರೀಮಂತ ಸಯಾಜಿರಾವ ಮಹಾರಾಜರವರು ಸಂಗೀತಕ್ಕೆ ಹೆಚ್ಚಿದ ತರದ ಗಾಯನದ ಅಭ್ಯಾಸವಾದುದಕ್ಕೆ ಕಳುಹಿಸಿದ್ದು ಆತನಿಗೆ ಅಲ್ಲಿ ಬೆಸ್ಟ ದೊರೆತ ಬಹುಮಾನವಾಗಿ ಶಿಕ್ಷಣ ದೊರೆತ್ತಿದೆ. ಈ ಪ್ರಕಾರ ತಾವು ಜಗತ್ಪ್ರಸಿದ್ಧ ಗಾಯಕರಾಗಿ, ತನ್ನ ಇಬ್ಬರು ಮಕ್ಕಳನ್ನು, ತನ್ನಂತೆ ಖ್ಯಾತಿವಂತರಾಗಿ ಮಾಡಿ ಗತಿಸಿದ ಮೌಲಾಬಕ್ಷರಂಥ ಪ್ರಸಿದ್ಧ ಹಿಂದುಸ್ಥಾನ ಒಬ್ಬ ಗಂಧರ್ವನೇ ಇಲ್ಲದಂತಾಯಿತು. ಇವರ ಮೃತ್ಯುವಾರ್ತೆ ಕೇಳಿ, ಈ ಕಾಲದಲ್ಲಿ ಗತಿಸಿದ್ದ ಎಲ್ಲ ಜನರಿಗೆ ದುಃಖವಾಗದೆ ಹೋಗದು. ಕು ಪ

ಮ್ಯಾಕ್ಸ್‌ಮುಲ್ಲರ್‌ಹೋಗಳು ಸಕಲಶಿಕ್ಷಣ ಬುದ್ಧನ ಶಿಷ್ಯನಾಗಿದ್ದನೆಂದು ಉಪನ್ಯಾಸ ಹಾತಿಪ್ರರಿಂದ ಪ್ರತಿಕ್ರಿಯೆಸು ಬುದ್ಧನ ಶಿಷ್ಯನಾಗಿದ್ದನೆಂದು ಇಲ್ಲವೋ ಎಂಬದಂ ನಿರ್ಣಯ ಮಾಡುವವರಿಗಾಗಿ ವಿಲಾಯತಿಯಲ್ಲಿ ಒಂದು ದೊಡ್ಡ ಸಭೆ ಕೂಡಿತ್ತು ಅದರಲ್ಲಿ ಮ್ಯಾಕ್ಸ್‌ಮುಲ್ಲರ್ ಸಾಹೇಬರು ಅನೇಕ ಪ್ರಮಾಣಗಳಿಂದಲೂ, ಸಿದ್ಧ ಯಾತ್ರಿಕರು ಕಂಡ ಶಿಲಾ ಶಾಸನಗಳ ಮೇಲಿಂದಲೂ ಕ್ರಿಸ್ತನು ಬುದ್ಧನ ಶಿಷ್ಯನಾಗಿದ್ದನು ನಿರ್ವಿವಾದವೆಂದು ಹೇಳಿದರು ಇವರ ಭಾಷಣವನ್ನು ಕೇಳುವವರಿಗಾಗಿ ಅನೇಕ ಜನ ಕೂಡಿದ್ದರು ... ಸ್ವಾಮಿ ಗಂಭೀರವಾದ ಭಾಷಣ ಮಾಡಿದರೂ ಅದರಿಂದ ಫಲಿತಾಂಶವೇನೂ ಹೊರಡಲಿಲ್ಲ ವಾದಿ ಪ್ರತಿವಾದಿಗಳು ಬೈಬಲಿನೊಳಗಿನ ಹೊಸ ಕರಾರುಗಳಿಗೆ ಹಿಡಿದು ಕೊಳ್ಳುವದರಿಂದಲೂ, ಬುದ್ಧನು ಕ್ರಿಸ್ತನಗಿಂತ ಮೊದಲೇ ಹುಟ್ಟಿದ್ದನೆಂಬ ಪ್ರಮಾಣಗಳು ಪ್ರಸಿದ್ಧವಾದ್ದರಿಂದಲೂ ಚಾನ್ಸಲರ್ ಹೊರೆಗಳ ಬಾಯಿ ಬಂದಾಯಿತು ಈ ಪ್ರಕಾರವಾದ್ದರಿಂದ ವಿಲಾಯತಿಯ ಜನರಿಗೆ ಒಂದು ಪ್ರಕಾರದ ಗದ್ದಲ ಎದ್ದು ಎಲ್ಲರು ಬುದ್ಧ ಧರ್ಮದ ಜಿಜ್ಞಾಸೆಯನ್ನು ಹೊಂದಿದರೋ ಹ್ಯಾಗೆ ಎಂಬ ವಿಚಾರ ಬಲ್ಲ ಮಗ್ನರಾಗಿದಾರೆ ಹೀಗಾದ ಪಕ್ಷದಲ್ಲಿ ಬುದ್ಧ ಧರ್ಮದ ಮೂಲತತ್ವವಾದ “ಅಹಿಂಸೆಯು” ತಮ್ಮಿಂದ ಒಪ್ಪ

ಲೇ ಹ್ಯಾಗೆ ಬಿದ್ದಪ್ಪಿಕ್ಕೊಂಡು ಜನರಿಗೆ ಸಂಕಟ ಒಂದಿರುತ್ತದೆ. ಮತ್ತು ಈ ಬಗ್ಗೆ ನಾನಾ ತರ್ಕ ಉತ್ತರ್ಕಗಳು ನಡೆದಿರುತ್ತವೆ ಮ್ಯಾಕ್ಸ್‌ಮುಲ್ಲರ ಧೊರೆಗಳು ಸಿದ್ಧಿಸಿದಂತೆ ಆದರೆ ಜಗತ್ಕರ್ತೆಯ ರಾಷ್ಟ್ರದವರೆಲ್ಲ ಬುದ್ಧನ ಅನುಯಾಯಿಗಳಾಗಿ ಜೀವಹಿಂಸೆಯು ಅಗದಂತೆಮಾಡತಕ್ಕದರೆ ಗೋಸಂಹಾರ ಕದನಮೆಲ್ಲಾಗಿ ಒಕ್ಕಲುತನ ಬೆಳೆಯುವ ಸಂಭವವಿದೆ. ಈ ಬೀಸ್ತ್ಯತ್ತ್ವ ಜನಾಂಗದವರು ಮಾಂಸಾಹಾರ ಬಿಟ್ಟರೆ ಮುಲ್ಲರ ಧೊರೆಗಳು ಹಿಂದುಸ್ಥಾನಕ್ಕೇ ಕಲ್ಯಾಣ ಮಾಡಿದ ದೆನ್ನಲಿಕ್ಕೆ ವಿನಾ ಅಡ್ಡಿ ಇಲ್ಲ ಮುಂದೆ ಮಾಂಸಾಹಾರಿ ಜಾತಿಗಳಲ್ಲೊಂದಾದ ಮುಸಲ್ಮಾನರಿಗೆ, ಪಾಶ್ಚಾತ್ಯರಿಗೆ ಗಂಡುಬಿದ್ದ ಮುಲ್ಲರನ ಪಕ್ಷನು ಕೂಡಿದರೆ ಕ್ರಮೇಣ ಅವರೂ ಹಾದಿಗೆ ಬಂದಾರವನ್ನಲಿಕ್ಕೆ ಅಡ್ಡಿಯಿಲ್ಲ ? ಗೋಸಂಹಾರವು ಕಡಿಮೆಯಾದರೆ ಹಿಂದುಸ್ಥಾನವು ಸ್ವಲ್ಪ ದಿವಸಗಳಲ್ಲೇ ತಿರಿಗಿ ಸುವರ್ಣಭೂಮಿ ಯೆಂದೆನ್ನಿಸಿಕೊಳ್ಳಬಹುದು —ಲೊ.

ADVERTISMENTS

ನೋಟಿಸ್.

ಬೆಂಗಳೂರು ಸಿಟಿಗೆ ಸೇರಿದ ದೊಡ್ಡ ಮಾವಳ್ಳಿಯಲ್ಲಿರುವ ಕಾನಪ್ಪನವರ ಮಗ ನಂಜುಂಡಪ್ಪನು ತಿಳಿಯಪಡಿಸುವದೇನೆಂದರೆ—

ಈಗ ಕೆಲವು ಕಾಲದಿಂದ ನನ್ನ ದಿವರನೆಯ ಮಗನಾದ ಅಚ್ಚುಮಣ್ಣ ನೆಂಬುವನು ತಂದೆ ತಾಯಿ ಅಣ್ಣಾ ತಮ್ಮಂದಿರು ಹೆಂಡತಿ ಮಗು ಇವರುಗಳನ್ನು ಬಿಟ್ಟು ದುರ್ಜನರ ಸಹವಾಸದಿಂದ ಜೂಜಾಟ ಮತ್ತು ದುರ್ವ್ಯಸನಗಳಲ್ಲಿ ಪ್ರವೇಶಿಸಿ ಜೇಬಿಗೆ ಖಿಲಾಸು ಪಡಿಸುತ ಸ್ವೇಚ್ಛೆಯಾಗಿ ತಿರುಗುವದರಿಂದ ಇವನು ಮಾಡುವ ಸಾಲ ಸಂಬಂಧವಾದ ಲೇವಾದೇವಿಗೆ ನಾನು ಅಥವಾ ಅವನ ಹೆಂಡತಿ ಮಕ್ಕಳು ಯಾರೇ ಆಗಲಿ ಗುರಿಯಾಗಲಾರೆವು, ಮತ್ತು ಪಿತ್ರಾರ್ಜಿತದ ಭಾಗಕ್ಕೆ ಇವನ ಮಕ್ಕಳು ಬಿನ್ನಾ ಹೊರ್ತು ಇವನು ಅರ್ಹನಲ್ಲವು

ತಾ॥ ೨೯—೭—೯೬. ನಂಜುಂಡಪ್ಪನ ರುಜು.

NOTICE

VIDYASARA SANGARAHA,

A TREATISE ON THE PRINCIPLES OF

HINDU MEDICINE

Price, including Postage Rs 5—0—0

ವೈದ್ಯಸಾರ ಸಂಗ್ರಹ,

ಇದು, ಚರಕ, ಸುಶ್ರುತ, ವಾಗ್ಭಟ, ಸಾರಂಗಧರ, ಇವೇ ಮೊದಲಾದ ಅನೇಕ ಪೂರ್ವ ಗ್ರಂಥಗಳ ಸಂಗ್ರಹವಾಗಿರುತಿವೆ

ಇದರ ಕ್ರಯ — ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಜೊತೆಯಲ್ಲಿ ಪ್ರತಿ, ಒಂದಕ್ಕೆ ರೂ. 5—0—0

ಈ ಕಂಪೆನಿಯು ಸ. ೧೮೯೭ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ವಜ್ರಾಂಗ ಖಜೂರಿರಸವು.

ಬಲಾದಿ ವೀರ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

೫. ಕರೆನ್ಸೀ ನೋಟುಗಳಲ್ಲಿ ಸರ್ಕಲ್ ಭೇದಗಳೂ, ಆಯಾ ಭಾಗಗಳೂ ಏರ್ಪಟ್ಟು ಒಂದು ಸರ್ಕಲ್ ನೋಟುಗಳು ಮತ್ತೊಂದು ದೇಶದಲ್ಲಿ ಸುಲಭವಾಗಿ ಚಲಾವಣೆಯಾಗದೆ ಅನ್ಯಾಯವು ಮಾಡಲ್ಪಡುತ್ತವೆ. ಇವುಗಳನ್ನೆಲ್ಲ ಏಕಪಡಿಸಿ ಒಂದೇ ಸರ್ಕಲಿನಲ್ಲಿ ಒಂದೇ ರೀತಿಯ ಕರೆನ್ಸೀ ನೋಟುಗಳನ್ನು, ಅವುಗಳ ಕಿಮ್ಮತ್ತಿಗೆ ತಕ್ಕಂತೆ ಬೇರೆ ಬೇರೆ ರಂಗುಗಳಲ್ಲಿ ಛಾಪಿಸಿದರೆ ನೋಟುಗಳ ತಯಾರಿಗಾಗಿ ಏರ್ಪಟ್ಟಿರುವ ಕರ್ಚು ಇಲಾಖಾ ಶಿಬ್ಬಂದಿಯು ಬಹಳ ಕಡಮೆಯಾಗುವ್ವದು. ಆಯಾ ಸರ್ಕಲಿನಲ್ಲಿ ಚಲಾವಣೆಗೆ ತರುವ ಕೆ ಕೊಡಬೇಕಾಗಿರುವ ಡಿಸ್ಕೌಂಟು ಮುಂತಾದ ನಷ್ಟವು ಜನರಿಗೆ ತಪ್ಪಿಹೋಗುವ್ವದು ನೋಟುಗಳ ರಂಗನ್ನು ಬದಲಾಯಿಸುವದರಿಂದ ಅವುಗಳ ಬೆಲೆಯನ್ನು ವಿಶೇಷವಾಗಿ ಸ್ಪಷ್ಟಪಡಿಸಲಿಕ್ಕೆ ಸಾಧ್ಯವಾಗಲಾರದ. ಪೋಸ್ಟೇಜ್ ಸ್ಟಾಂಪುಗಳಂತೆ ರಂಗಿನಮೇಲೆ ನೋಟುಗಳ ಅಂಕೆಯನ್ನು ನೋಡದೆಯೇ ಅದರ ಕಿಮ್ಮತ್ತನ್ನು ಎಲ್ಲರೂ ಸುಲಭವಾಗಿ ತಿಳಕೊಳ್ಳಲಿಕ್ಕೆ ಅನುಕೂಲವಾಗಿರುವ್ವದು

೬. ಆಯಾ ಸ್ಥಾನೀಯ ಪ್ರಾಂತಗಳ ಸಿವಿಲ್ ಕೋರ್ಟುಗಳ ಭಾಷೆಯು ಅಲ್ಲಿನ ದೇಶಭಾಷೆಗಳಾಗಿರುತ್ತವೆ. ಇವುಗಳಿಗೆ ಬದಲಾಗಿ ಸಮಸ್ತ ಸಿವಿಲ್ ಕೋರ್ಟುಗಳಲ್ಲಿ ಇಂಗ್ಲಿಷ್ ವ್ಯವಹಾರ ಭಾಷೆಯಾಗಿ ಅಂಗೀಕರಿಸಲ್ಪಡತಕ್ಕದ್ದು. ಸದರೀ ಕೋರ್ಟುಗಳಲ್ಲಿ ವ್ಯವಹಾರಗಳಂ ಜರಿಗಿಸುವ ವಕೀಲರುಗಳಿಗೆ ಇಂಗ್ಲಿಷ್ ಭಾಷಾಜ್ಞಾನವಿಲ್ಲದಿದ್ದರೆ ಸಿವಿಲ್ ನ್ಯಾಯ ನಿಬಂಧನೆಗಳಲ್ಲಿ ನಿರ್ಬಂಧವಾದ ಜ್ಞಾನವು ಅವರಿಗೆ ಸಿದ್ಧಿಸುವುದು ದುರ್ಲಭವು ಅಂತ ಜ್ಞಾನವಿಲ್ಲದವರು ಮೊಕದ್ದಮೆಗಳನ್ನು ಸರಿಯಾಗಿ ನ್ಯಾಯ ಸೂಕ್ಷ್ಮವನ್ನನುಸರಿಸಿ ನಡೆಸಲಾರರು. ಆ ಕಾರಣ ಸದರೀ ವಕೀಲರೂ ನ್ಯಾಯವಿಮರ್ಶಕರಾದ ಜಡ್ಜಿಗಳೂ ಪ್ರಾಯಶಃ ಇಂಗ್ಲಿಷ್ ಬಲ್ಲವರಾಗಿರುವದರಿಂದ, ಇಂಗ್ಲಿಷ್ ಭಾಷೆಯನ್ನೇ ನಡವಡಿಕೆ ಭಾಷೆಯನ್ನಾಗಿಡುವ್ವದು ಉಚಿತವಾಗಿರುವ್ವದು.

೭. ಈ ದೇಶದ ವಿಜಾತೀಯವಾದ ಸ್ಥಿತಿಯಂ ಪರ್ಯಾಲೋಚಿಸಿ ನೋಡುವಲ್ಲಿ ರುಷುವತ್ ತೆಗೆದುಕೊಳ್ಳುವಂತವನಿಗೆ ಸರಿಯಾಗಿ ಅದಂ ಕೊಡುವಂತವನಿಗೆ ಸಹ ದಂಡನೆಯಂ ವಿಧಿಸತಕ್ಕ ಕಾನೂನನ್ನು ಗವರ್ನ್ಮೆಂಟಿನವರು ರದ್ದು ಮಾಡಬೇಕಾದ್ದು ಆವಶ್ಯಕತ್ವೇನ ಕಂಡು ಬರುತ್ತದೆ ಇದರ ಪ್ರಯೋಜನವೇನೆಂದರೆ. ರುಷುವತ್ ತೆಗೆದುಕೊಂಡ ಅಂಶವನ್ನು ನಿರೂಪಿಸುವುದು ಬಹಳ ಪ್ರಯಾಸವು ಮತ್ತು ಸಾಧಾರಣವಾಗಿ ಆ ಅಂಶ ರುಜುವಾತ್ತಿಗೆ ಬರುವದಿಲ್ಲವು.

ಮೇಲೆ ಕಂಡ ಅಂಶಗಳನ್ನು ಆಯಾ ಪ್ರಾಂತದ ಕಾಂಗ್ರೆಸ್ ಕಮಿಟಿಯವರು ಪರ್ಯಾಲೋಚಿಸಿ ಸ್ವಾಭಿಪ್ರಾಯಗಳಂ ಇತರ ವಿಷಯಗಳೊಡನೆ ಸದರೀ ಸಭೆಯ ಜನರಲ್ ಸೆಕ್ರೆಟರಿಯವರಿಗೆ ಬರೆದು ಕಳುಹಿಸಬೇಕೆಂದು ಅಪೇಕ್ಷಿಸಲ್ಪಟ್ಟದೆ.

ಹಿಂದೂ ಮಹಿಳಾ ಅನ್ಯೋನ್ಯವರ್ಧಕಸಭಾ.

ಮುಂಬೈ ಗಿರಿಗಾಂವಿನಲ್ಲಿರುವ ರಾಯಬಹದೂರ ಲಕ್ಷ್ಮಣಸಿಂಗರವರ ಸದನದಲ್ಲಿ ಆಚೇ ನೋಟ ಮಾರದವಿನ ಹಿಂದೂ ನಾರೀಸಮಾಜ ವೊಂದು ನೆರಿತ್ತು. ಆ ಕಾಲದಲ್ಲಿ ಯೂರೋಪಿಯರ್ನ ಸ್ತ್ರೀಯರ್ ಮದನುರ್ದ ಯಂಗಸರು ಸುಮಾರು ೧೫೦ ಮಂದಿಯ ವರೆಗೆ ಹಾಜರಿದ್ದರು. ಮಿ॥ ದಾಜೀಕರ್ಜಿ ಕರ್ಸತಜಿಯ ವರ ಬಾರ್ಯೆಯು ಸ್ತ್ರೀ ವಿದ್ಯಾಭಿವೃದ್ಧಿಗಾಗಿ ವಿಶೇಷ ಪರಿಶ್ರಮಪಟ್ಟ ಬಹಳ ಪ್ರಾತಸ್ಮರಣೀಯ ಪದವಿರುವದರಿಂದ ಆಕೆ ಯನ್ನು ಸಭೆಯ ಅಗ್ರಾಸನ ಧಿವಸ್ಥೆಯನ್ನಾಗಿ ಮಾಡು ವಂತೆ ಎಲ್ಲರೂ ಪ್ರಾರ್ಥಿಸಿದರಾದಕಾರಣ ಅವರ ಅಭೀಷ್ಟದಂತೆ ಅವರು ಅದನ್ನಂಗೀಕರಿಸಿಗರು. ಸಭೆಯ ಕಾರ್ಯದರ್ಶಿಣಿಯಾದ ಮಿ॥ ಜೇಮಿಜಿ ಲಕ್ಷ್ಮಣಸಿಂಗರವರು ಸಾಂವತ್ಸರಿಕ ರಿಪೋರ್ಟನ್ನು ಓದಿದರು. ಮುಂಬೈ ಹೈಕೋರ್ಟ್ ಜಡ್ಜಿಯ ರಾದ ಜಸ್ಟೀಸ್ ರಾನಡೆಯವರ ಭಾರ್ಯೆಯಾದ ಶ್ರೀಮತಿ ರಾಮಾಬಾಯಿಯವರು ಕೆಲವರು ವಿ ದ್ಯಾವತಿಯರಾದ ಹಿಂದೂ ಸ್ತ್ರೀಯರ ಸಹಾ ಯದಿಂ ಹಿಂದುಸಮಾಜವನ್ನು ೧೮೯೩ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಸ್ಥಾಪಿಸಿದರು. ಈಸಭೆ ಯ ಮುಖ್ಯೋದ್ದೇಶವು ಆಯಾಜಾತಿಯ ಸ್ತ್ರೀ ಯರಿಗೆ ಪರಸ್ಪರಪ್ರೀತಿಯನ್ನುಂಟುಮಾಡುವುದು. ಸ್ತ್ರೀಯರಿಗೆ ವಿದ್ಯಾಭ್ಯಾಸವು ಮ ಹತ್ವಪೂರ್ಣವಾಗಿರುತ್ತದೆ ಅಲ್ಲಿ ಪ್ರತಿ ಬುಧವಾ ರದ ದಿನ ವಿನೋದ ಗೋಷ್ಠಿ ಒಟ್ಟುಗೂಡಿ ವಿಷಯ ದ ಕುರಿತು ಸಂಭಾಷಣೆ ಮಾಡುತ್ತಿದ್ದರು. ನೆರೆದಿ ದ್ದ ಸ್ತ್ರೀಯರು ರಿಪೋರ್ಟನ್ನು ಸಕ್ರಿಯವಾಗಿ ಓದಿ ಪ್ರಾರ್ಥನೆ ಸಹಿತವಾದರೆ ಅಗ್ರಾಸನಾಧಿಪತಿಯವರು, ಈ ಸಮಾಜಗಳ ಪ್ರಯೋಜನವು ಬಹಳ ವೆಂದು ಅನುಮೋದನ ಮಾಡಿ ಜನಾನಾ ಕಿರಿಗತ ಗಳನ್ನು ಪೋಷಿಸುವುದು ವಿದ್ಯಾಪ್ರಯುಕ್ತವಾದ ತನ್ನ ಉಪಯೋಗತೆಯು ಸರ್ವೋಪಯೋಗಿಗಳೂ ಸೇರಿಸುವುದು ತೋರ್ಪಡಿಸಿ ತನ್ನ ಸ್ವಾಭಾವಿಕ ಪ್ರಾತಸ್ಮರಣೀಯ ಯೋಗ್ಯತೆಯಾದುದು ಆವಶ್ಯಕ ವೆಂದು ಅವರ ತನ್ನ ಪ್ರಸಂಗವು ಪೂರೈಸಿದರು. ಅನಂತರ ಸಭಾಸದರಿಗೆ ಗಂಧ ಪುಷ್ಪ ತಾಂಬೂ ಲ ಕೊಡಲ್ಪಟ್ಟು ಸಭೆ ಬರಖಾಸ್ತಾಯಿತು.

ಸದರನ್ ಮರಾಠಾ ರೈಲ್ವೆ ಕಂಪೆನಿ

ಜಾಹೀರಾತು.

ಎಲ್ಲ ಜನರಿಗೆ ತಿಳಿಸುವದೇನೆಂದರೆ:— ರೈಲ್ ಕಂಬಗಳು, ಸಾಗವಾನಿ ಕಟ್ಟಿಗೆ, ರೆಡಿ ಲ್ವೆಸ್ ಕೆಲಸದ ಉಪಕರಣಗಳು, ಇವೇ ಮೊದಲಾದ ಅನೇ ಕ ಪದಾರ್ಥಗಳು ಹುಬ್ಬಳ್ಳಿ ಜನರಲ್ ಸ್ಟೋರ್ ಡಿಪೋವಿನ ಪೈಕಿ ಲಿಲಾವ್ ಆಗುವ. ೧೫ನೇ ನವೆಂಬರ್ ೧೮೯೬ನೇ ಇಸವಿ ದಿವಸ ಮುಂಜಾನೆ ೯ ತಾಸಿನಿಂದ ಪ್ರಸಿದ್ಧವಾಗಿ ಲಿಲಾವ ಮಾಡ ಲ್ಪಡುವವು.

ಸೂಚನೆ—ಲಿಲಾವಿನಲ್ಲಿ ತೆಗೆದುಕೊಂಡ ಸಾಮಾ ನುಗಳ ಖರೀದಿ ಹಣ ರೋಖ ಕೊಡತ ಕ್ಕದ್ದು.

ಈ ಲಿಲಾವಿನಲ್ಲಿ ತೆಗೆದುಕೊಂಡ ಸಾ ಮಾನುಗಳು ಸದರನ್ ಮರಾಠಾ ರೈಲ್ವೇ ಯ ಬೇಕಾದ ಸ್ಟೇಷನ್ ವರೆಗೆ ಪ್ರತಿ ಒಂದು ಮಣಕ್ಕೆ ಪ್ರತಿ ಒಂದು ಮೈಲಿಗೆ ೧ಸ್ಥ ಪೈ ಪ್ರಕಾರ ಲಿಲಾವ್ ಆದ ತಾರೀ ಖಿನಿಂದ ಮೂವತ್ತು ದಿವಸಗಳ ವರೆಗೆ ಕಡಿಮೆ ದರದಿಂದ ವೊಯ್ಯಲ್ಪಡುವವು.

ಹುಬ್ಬಳ್ಳಿ,
೧೦ನೇ ಅಕ್ಟೋಬರ್
೧೮೯೬ನೇ ಇಸವಿ.

ಜಿ. ಕಾರ್ಪೆಂಟರ್,
ಸ್ಟೋರ್ ಕೀಪರ್,
ಎಸ್. ಎಂ. ರೈಲ್ವೆ.

LOCAL AND PROVINCIAL NEWS.

ಸ್ಥಳೀಯವರ್ತಮಾನಗಳು ಮತ್ತು ದೇಶದ ವರ್ತಮಾನಗಳು.

ಈಸ್ಥಳದ ಕೋಟೆಯಲ್ಲಿರುವ ಮಹಲಿನಬಳಿ ಯಣ ಒಂದು ಚೆಲುವಿಯಲ್ಲಿ ಯಾರೋ ಪುಣ್ಯಾ ತ್ಮರೊಬ್ಬಳು (ಪ್ರಾಯೇಣ ನಿಧವೆಯಾಗಿಯೇ ಇರಬೇಕು) ಬಸುರಾಗಿ ಹಡೆದ ಮಗುವನ್ನು ಕೊಂದು ಬಿಸಾಡಿದ್ದನ್ನುಕಂಡು ಅವಳನ್ನು ಪೊ ಲೀಸಿನವರು ಪತ್ತೇ ಮಾಡುತಲಿದಾರೆಂದು ಕೇ ಳುತ್ತೇವೆ.

ಚಿನ್ನದ ಗಣಿಗಳ ಪ್ರತ್ಯೇಕವಾಗಿ ಒಬ್ಬ ಯೂರೋಪಿಯನ್ ಪೊಲೀಸ್ ಸ್ಯೂಪರಿಂಟೆಂಡೆಂಟರು ಮಾಡೋದಾಗಾ ಅಲ್ಲೊವನ್ಸಿಗಳು ಸೇ ರಿ ೩೦೦ ರೂಪಾಯಿಗಳ ತಲೆಬಿನ್ನಲ್ಲಿ ವೊಕರ ನ್ಮಾಡಲ್ಪಟ್ಟರೆಂತಲೂ, ಸೆಂಟ್ರಲ್ ಜೈಲಿನ ಚೀಫ್ ಜೈಲಿಯರು ಸದರೀ ಕೆಲಸಕ್ಕೆ ಶಿಫಾರಸು ಮಾಡ ಲ್ಪಟ್ಟಿದ್ದಾರೆಂತಲೂ ತಿಳಿಯಬರುತ್ತದೆ.

ನಂದಿದುರ್ಗ ಡಿವಿಜನ್ ಸೆಷನ್ಸ್ ಜಡ್ಜಿಯವ ರಾದ ಮಿ॥ ಟಿ. ನರಹರಿರಾಯರವರಿಗೆ ಶರೀರಾ ಲಸ್ಯವು ವೃದ್ಧಿಯಾಗುತಲಿರುವದರಿಂದ, ಅವರಿ ಗೆ ಆರೋಗ್ಯಭಾಗ್ಯವು ಸಂಪೂರ್ಣವಾಗಿ ಸಿದ್ಧಿ ಸುವತನಕ ಅಷ್ಟಗ್ರಾಮ ಡಿವಿಜನ್ ಸೆಷನ್ಸ್ ಜಡ್ಜಿಯಾದ ಮಿ॥ ಸಿ. ಕ್ರಿಸ್ ಯವರು ಈ ಪ್ರಾ ಗೆರನ ನೋಡಲ್ಪಟ್ಟ ಮೇ। ರಾಮಸ್ವಾಮಯ್ಯ ನವರು ಮೈಸೂರಿನಲ್ಲಿಯೇ ಕಾಯಂ ಮಾಡಲ್ಪಡು ವರೆಂದು ಕೇಳುತ್ತೇವೆ.

ಅರಮನೆಯ ಬಿಡದಿಯಲ್ಲಿ ನೌಕರನಾಗಿದ್ದ ಬ ಸವನೆಂಬ ಶಿವಾಚಾರದವನ ಶ್ರೀರಂಗಪಟ್ಟಣ ತಾಲ್ಲೂಕಿಗೆ ಸೇರಿದ ಕಟ್ಟೆಹಳ್ಳಿಗೆ ಹೋಗಿ ಅಲ್ಲಿ ತನ್ನೂರು ಮನೆಯಲ್ಲಿದ್ದ ತನ್ನ ಹೆಂಡತಿಯನ್ನು ಹೊಡೆದು ಕೊಂದು ಹಾಕಿದನೆಂದು ಪೊಲೀಸಿನ ವರು ಅವನನ್ನು ಹಿಡಿದು ವಿಚಾರಣೆ ಮಾಡುತಿ ದಾರೆ. ತಾಯಿ ಬಳಿಯಲ್ಲಿದ್ದ ೫–೬ ವರುಷದ ಗಂಡು ಮಗುವೇ ತಂದೆಗೆ ವಿರೋಧವಾಗಿ ಸಾಕ್ಷಿ ಹೇಳುತಿದೆಯಂತೆ. ಈ ಮೊಕದ್ದಮೆ ಛೀಫ್ ಕೋರ್ಟ್ ಕ್ಕೆ ಬರುವದಿಲ್ಲವೆಂದು ಇನ್ನೂ ಖಚಿತವಾಗಿಲ್ಲವು.

ಕೊಪ್ಪ ತಾಲ್ಲೂಕು ಯೆಡೆಹಳ್ಳಿಯಲ್ಲಿ ಇ ಟ್ಟ ನಡೆಯುತ್ತಿರುವ ಮುನಿಸಿಫ್ ಕೋರ್ಟನ್ನು ಸದ್ಯಾರವರು ತೆಗೆದು ಹಾಕಿ ಅಲ್ಲಿನ ಮುನ್ಸಿಫ ರಾದ ಮಿ॥ ಎ. ಎ. ನಾರಣಯ್ಯಂಗಾರ್ ಬಿ. ಎ. ಬಿ. ಎಲ್ ಯವರನ್ನು ಬೆಂಗಳೂರಿಗೆ ವರ್ಗ ಮಾಡುತ್ತಾರೆಂತಲೂ, ತುಮಕೂರು ಮುನ್ಸಿ ಫರಾದ ಮಿ॥ ಸಿ. ಸುಬ್ಬರಾಯರನ್ನು ಮೈಸೂರಿ ಗೂ, ಈಗರಜಾದ ಮೇಲಿರುವ ಮಿ॥ ಬಿ. ಬಸ ವಾರಾಧ್ಯ ಬಿ. ಎ. ಬಿ. ಎಲ್ ಯವರನ್ನು ತುಮ ಕೂರಿಗೂ, ಮೆ॥ ಜಯರಾಮ ಅಯ್ಯಂಗಾರವರನ್ನು ಚಿಕ್ಕಮಗಳೂರಿಗೂ ವರ್ಗಮಾಡುತ್ತಾರೆಂತಲೂ ಮೈಸೂರ್ ಹೆರಲ್ಡ್ ಪತ್ರಿಕೆಯು ತಿಳಿಸುತಿದೆ.

ಈ ಪೂರು ಬಳೇಪೇಟೆಯಲ್ಲಿರುವ ಸೂಳೆಯ ಮನೆಗೆ ಒಬ್ಬ ಉಪ್ಪಿನ ಮಳಿಗೆ ವರ್ತಕ ಶಿದ್ದ ಲಿಂಗಪ್ಪನು ಮಾಮೂಲಾಗಿ ಹೋಗುತಲಿದ್ದಂ ತೆಯೂ, ಅವನಿಗೆ ವಿರೋಧಿಗಳಾದವರು ಬೇರೆ ಕೆಲವರು ಅವನನ್ನು ಮಾಡೇ ಮರ್ಚಂಟ್ ೫ನೇ ತಾರೀಖ್ ಸೋಮವಾರರಾತ್ರಿ ಮಹಾರ್ನವಮಿ ಯ ಪೇಟೆಯಲ್ಲಿ ವೋಡ್ಡುನಿಂದ ಕಾಲ್ಪೀರ ಹೊಡೆದು ಘೋರ ಜಖಂ ಮಾಡಿದರೆಂತಲೂ, ಆತ ನೀಗ ಆಸ್ಪತ್ರೆಯಲ್ಲಿ ಚಿಕಿತ್ಸೆಯೊಳಗಿರುವಂತೆ ಯೂ, ಆಕ್ರಮಿತರುವರನ್ನು ಪೊಲೀಸಿನವರು ಪ ತ್ತೆ ಮಾಡಿ ಅವನೀಗ ಜಾಮೀನಿನಮೇಲೆ ಖುಲಾಸೆ ಮಾಡಲ್ಪಟ್ಟಿದಾನೆಂತಲೂ ತಿಳಿಯಬರುತ್ತದೆ.

ಶ್ರೀರಂಗ ಪಟ್ಟಣದ ಲಾಯರ್‌ಗಳೂ ಮುನ್ಸಿ ಫರೂ ಸೇರಿ ಈ ದಸರಾ ರಜಾವಿನಲ್ಲಿ ಕೋರ್ಟಿನ ಬಾಗಿಲನ್ನು ಮುಚ್ಚಿ ಬಿಡುತ್ತೇವೆಂದು ಛೀಫ್ ಕೋರ್ಟಿಗೆ ಬರೆದು ಕೊಂಡಿದ್ದರು. ಅದಕ್ಕೆ ಛೀಫ್ ಕೋರ್ಟಿನಿಂದ ಆ ಮುನ್ಸಿಫರಿಗೂ, ಲಾ ಯರಿಗಳಿಗೂ ಬಂದ ಹುಕುಮಿನ ಅಭಿಪ್ರಾಯ ವೇನೆಂದರೆ. ಈ ಕೋರ್ಟಿನಲ್ಲಿ ಮುನ್ಸಿಫರಿಗೆ ಕೆಲಸ ಹೆಚ್ಚಾಗಿದ್ದಲ್ಲಿ ಅವರನ್ನು ಕೆಲಸ ಕಡಮೆ ಯಾಗಿರುವಂಥಾ ಮತ್ತೊಂದು ಕೋರ್ಟಿಗೆ ವ ರ್ಗ ಮಾಡಬಹುದಾಗಿದೆ. ತಮಗಾಪೇ ಕ್ಷಣಿಕವಾ ಕ್ಕಾಗಿ ವ್ಯಥಾ ಕಾಲ ಕಳೆಯಬೇಕೆಂದು ಅಪೇಕ್ಷೆ ಸುವ ಲಾಯರುಗಳು ತಮ್ಮ ಮೊಕದ್ದಮೆಗಳ ನ್ನು ಕೆಲಸ ಮಾಡುವಂತ ಲಾಯರುಗಳಿಗೆ ಒ ಪ್ಪಿಸಿಕೊಟ್ಟು ರಜಾವನ್ನು ಉಪಯೋಗಿಸಿಕೊ ಳ್ಳಬಹುದು. ಪ್ರಜಾಪ್ರತಿನಿಧಿ ಸಭೆಗೆ ಹೋಗ ಬೇಕಾಗಿರುವಂತ ಲಾಯರುಗಳು ಮಾತ್ರ ಈ ರಜಾವನ್ನು ಉಪಯೋಗಿಸಿಕೊಳ್ಳಬಹುದಲ್ಲದೆ ಕೋರ್ಟನ್ನು ಮುಚ್ಚುವದಕ್ಕಾಗುವದಿಲ್ಲ, ಎಂ ಬುವದು. ರಾಜಧಾನಿಯಲ್ಲಿರುವ ವಕೀಲರೆಲ್ಲರು ಸೇರಿ ಈ ರಜಾ ಕಾಲದಲ್ಲಿ ತಾವು ಕೋರ್ಟ ಗೆ ಹೋಗಿ ಮೊಕದ್ದಮೆಗಳನ್ನು ನಡೆಸುವದು ಹೊಂಬಾ ಕಷ್ಟವೆಂದು ಬರಾಗಿ ಛೀಫ್ ಕೋರ್ಟಿಗೆ ಅರ್ಜಿ ಕೊಟ್ಟಿದ್ದರು. ಇವರಿಗೆ ಛೀಫ್ ಕೋ ರ್ಟನವರು ಕೊಟ್ಟ ಹುಕುಮಿನ ಅಭಿಪ್ರಾಯ ವೇನೆಂದರೆ, ಎಲ್ಲಾ ಲಾಯರುಗಳೂ ಬ್ರಾಹ್ಮಣ ರಲ್ಲವಾದ ಕಾರಣ ಅಂತವರು ಕೋರ್ಟಿಗೆ ಹೋ ಗಿ ಮೊಕದ್ದಮೆಗಳನ್ನು ನಡೆಸ ಬಹುದಾಗಿದೆ ಅದಲ್ಲದೆ ದೇವರ ಕಾರ್ಯ, ಅರಮನೆ ಕೆಲಸ, ಪ್ರಜಾ ಪ್ರತಿನಿಧಿ ಕೆಲಸ, ಇತರ ವಿಶೇಷ ಕೆಲಸ ಇವೇ ಮುಂತಾದ ಕಾರ್ಯಗಳನ್ನು ಮಾಡಬೇಕಾಗಿರು ವಂತೆ ಲಾಯರುಗಳು ಕೋರ್ಟಿಗೆ ಹೋಗಿ ಮೊಕದ್ದಮೆ ನಡೆಸಬೇಕಾದ್ದಿಲ್ಲ ಅಂತವರೆಲ್ಲಾ ತಮ್ಮ ಮೊಕದ್ದಮೆಗಳನ್ನು ನಜಾ ಫೈರೈಸಿದ ತರುವಾಯ ನಡೆಸುವಂತೆ ಹಿಯರಿಂಗ್ ಪಾಕಿಸ ಕೊಳ್ಳ ಬಹುದಾಗಿರುತ್ತೆ ಎಂಬುದು.

ವಿಜಯದಶಮಿ.

ಆಶ್ವಯುಜಶುದ್ಧ ದಶಮಿಯನ್ನು ವಿಜಯದ ಶಮಿಯೆನ್ನುವರು. ಅದರ ಹಿಂದಿನ ಬಾಭತ್ತು ದಿವಸಗಳೂ ವಿಶೇಷವಾದ ಉತ್ಸವದ ದಿವಸಗಳಾ ಗಿರುವವು ವರ್ಷಾಕಾಲವು ಕಳೆದು ಹೋಗಿ ಶ ರದೃತುವಿಗೆ ಪ್ರಾರಂಭವಾಗುವ ಕಾಲದಲ್ಲಿ ಈ ವಿಜಯದಶಮಿಯು ಬರುವದು. ಇದರ ಮುಂದ ಕ್ಕೆ ವಿಶೇಷವಾದ ಮಳೇ, ಹೊಳೆಗಳ ಅಡಚಣೆ ಯಿಲ್ಲದೆ ದೇಶ ಸಂಚಾರಕ್ಕೆ ಅನುಕೂಲವಾದ ಕಾ ಲವಾಗಿರುವದ್ದರಿಂದ, ಪೂರ್ವಕಾಲದಲ್ಲಿ ಹಿಂದೂ ರಾಜರುಗಳು ಸೈನ್ಯಗಳನ್ನು ಜೊತೆ ಮಾಡಿ ಕೊಂಡು ಶತ್ರುರಾಜರ ಮೇಲೆ ವಿಜಯೋತ್ಸವ ದಿಂದ ಹೊರಡಲು ಈ ವಿಜಯದಶಮಿಯು ಸು ದಿವಸವಾಗಿರುತ್ತಿತ್ತು. ಆ ಪಾಂಡುಪುತ್ರರ ಅ ಜ್ಞಾತವಾಸದ ಅವಧಿಯು ಪೂರೈಸಿ ಹೋಗಿ ಶ ಮೀ ವೃಕ್ಷದಲ್ಲಿ ಮುಚ್ಚಿಟ್ಟಿದ್ದ ಗಾಂಡೀವವ ನ್ನು ತೆಗೆದುಕೊಂಡು ಅರ್ಜುನನು ಉತ್ತರಗೋ ಗ್ರಹಣದಲ್ಲಿ ಕುರುಸೈನ್ಯವನ್ನು ಗೆದ್ದದ್ದು, ಈ ದಿವಸವೇನೆಂದು ಅಂದಿನಿಂದಲೂ ಶಮೀಪೂಜೆಯು ಪ ದ್ಧತಿಯೊಂದು ಪ್ರಾರಂಭವಾಯಿತು.

ಮೊದಲಿನಂತೆ ಈ ಭರತ ಖಂಡದಲ್ಲಿ ಯುದ್ಧ ಪ್ರಸಕ್ತಿಗಳಿಗೆ ಈಗ ಅವಕಾಶವಿಲ್ಲವಿದ್ದರೂ ವಿ ಜಯದಶಮಿಯ ವೈಭವವು ಕಡಮೆಯಾಗಿಲ್ಲ. ಈ ಗಲೂ ಒಂದೊಂದು ಪ್ರದೇಶದಲ್ಲಿ ಒಂದೊಂದು ವಿ ಧವಾಗಿ ವಿಜಯದಶಮಿಯು ವಿಜೃಂಭಣೆಯಿಂದ ನಡೆಯುತ್ತಿರುವದು ಅವರೆಲ್ಲರು ನಮ್ಮ ಮೈ ಸೂರು ಸಂಸ್ಥಾನದಲ್ಲಿ ನಡೆಯುವದನ್ನೇ ವಿಶೇಷ ವೆಂದು ಹೇಳಬಹುದು. ಈ ಸೀಮೆಯಲ್ಲಿ ಇದು ಇಷ್ಟು ಅತಿಶಯವಾಗಿ ನಡೆಯುವದಕ್ಕೆ ಈ ಸಂ ಸ್ಥಾನಾಧಿಪತಿಗಳು ಸಿಂಹಾಸನಾಧಿಪತಿಗಳಾಗಿ ರುವದೇ ಕಾರಣವು ಭರತ ಖಂಡದಲ್ಲಿ ಈಗಲೂ ಅನೇಕ ರಾಜರುಗಳಿದ್ದಾಗ್ಯೂ, ವಿ ತ್ತರೀಯ ರಾ ಜರೊಬ್ಬರೇ ಸಿಂಹಾಸನಾಧಿಪತಿಗಳೆನ್ನಿಸಿ ಕೊಂ ಡಿರುವರು.

ಈ ಸಿಂಹಾಸನಾಧಿಪತಿಗಳಾಗಿದ್ದವರೆಲ್ಲರೂ ವಿಜಯದಶಮಿಯನ್ನು ಬಹಳ ವಿಜೃಂಭಣೆಯಿಂ ದ ನಡೆಸುತ್ತಿದ್ದರೆಂದು ತಿಳಿಯಬರುವದು.

ಈ ದೇಶದಲ್ಲಿರುವ ಸಿಂಹಾಸನವೂ ಹಸ್ತಿನಾ ವತಿಯಲ್ಲಿ ಧರ್ಮರಾಯನು ಕುಳಿತು ರಾಜ್ಯವಾ ಳಿದ ಸಿಂಹಾಸನವು ಇದೇನೆ ನಾಳದ ದೇಶಾಧಿ ಪತಿಯಾದ ವಿಕ್ರಮಾದಿತ್ಯನಿಗೆ ಸಿಂಹಾಸನವಾ ಗಿದ್ದದ್ದು. ಅವಂತಿ ದೇಶಾಧಿಪತಿಯಾಗಿದ್ದ ಭೋಜರಾಜನಿಗೆ ಸಿಂಹಾಸನವಾಗಿದ್ದದ್ದೂ ಇ ದೇನೆ. ಮತ್ತೂ ಕಾಂಪಿಲರಾಯನು, ಹಳೇಬೀ ಡು ನಿಯಬಳ್ಳಾಳರು, ಪೆನುಗೊಂಡ ಪ್ರತಾಪರುದ್ರ ನು, ಆನೆಗುಂದಿ ನರಪತಿ ಕೃಷ್ಣರಾಯನು ಕು ಳಿತು ತಿದ್ದ ಸಿಂಹಾಸನವೂ ಇದೇನೆ ಆನೆಗುಂ ದೀ ರಾಜ್ಯವು ವಿಭಾಗಿಸಲ್ಪಟ್ಟ ತರುವಾಯ ಶ್ರೀರಂಗ ಪಟ್ಟಣದಲ್ಲಿ ನರಪತಿ ಕೃಷ್ಣರಾಯ ರ ದೌಹಿತ್ರರಾದ ಶ್ರೀರಂಗರಾಯನಲ್ಲಿ ಈ ಸಿಂ ಹಾಸನವಿತ್ತು.

ಶ್ರೀರಂಗ ಪಟ್ಟಣವನ್ನು ನಮ್ಮ ರಾಜ ಒಡೆ ಯರು ಸ್ವಾಧೀನ ಮಾಡಿಕೊಂಡಾಗ ಈ ಸಿಂಹಾ ಸನವು ಅವರ ಕೈವಶವಾಯಿತು ಅಂದಿನಿಂದ ಲೂ ನಮ್ಮ ಯದುವಂಶದ ಅರಸುಗಳು ಈ ಸಿಂ ಹಾಸನವನ್ನಲಂಕರಿಸುತ ವಿಜಯದಶಮಿಯ ವಿಜಯೋತ್ಸವದಿಂದ ವಿಜೃಂಭಿಸ ತಬಂದರು.

ಶ್ರೀರಂಗಪಟ್ಟಣವು ರಾಜಧಾನಿಯಾಗಿರುವ ವರೆಗೂ ಈ ಉತ್ಸವವೂ ಅಲ್ಲಿಯೇ ನಡೆಯುತ್ತಿ ತ್ತು. ದೊಡ್ಡ ನವಾಬನೆಂಬ ಹೈದರ್ ಖಾನನ ನಮ್ಮ ದೇಶವನ್ನು ಆಕ್ರಮಿಸಿಕೊಂಡಿದ್ದ ಕಾಲ ದಲ್ಲೂ ನೆಪಮಾತ್ರಕ್ಕೆ ರಾಜರೆನ್ನಿಸಿಕೊಂಡಿದ್ದವ ರನ್ನು ನವರಾತ್ರಿ ನಿಮಿತ್ತ ದಾವಿ ಗಳ್ಳು ವಷ್ಟಕ್ಕೆ ಮೇಲೆ ಸಿಂಹಾಸನಾರೂಢರನ್ನಾಗಿ ಮಾಡಿ ತಾನು ಪ್ರತ್ಯೇಕವಾಗಿ ಬೇರೆ ಅವರು ಮುಜರೆಗಳನ್ನು ಮಾಡು ತ್ತಿದ್ದರು. ಅವನ ಮಗನ ಕಾಲದಲ್ಲಿ ಮಾತ್ರ ಕೆ ಲವು ದಿವಸ ಇದು ನಿಂತು ಹೋಗಿತ್ತು.

ಶ್ರೀರಂಗಪಟ್ಟಣವು ಇಂಗ್ಲಿಷಿನವರ ವಶವಾ ಗಿ ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರಸಿದ್ಧ ಯದುವಂಶವನ್ನು ಅಲಂಕರಿಸಿದ ನಂತರ ಈ ಉ ತ್ಸವವು ಮೈಸೂರು ಪಟ್ಟಣದಲ್ಲಿ ಪ್ರಾರಂಭವಾ ಯಿತು. ದೇಶಾಡಳಿತವು ಇವರ ಕೈ ತಪ್ಪಿ ಹೋ ಗಿ ಇಂಗ್ಲಿಷಿನವರು ಆಳುತಿದ್ದ ಕಾಲದಲ್ಲೂ ವಿಜ ಯ ದಶಮಿಯ ಉತ್ಸವವು ಅವಿಚ್ಛಿನ್ನವಾಗಿ ನ ಡೆಯುತ್ತಿತ್ತು.

ಕಡೆಗೆ ಚಾಮರಾಜೇಂದ್ರ ಒಡೆಯರು ಸಿಂಹಾ ಸನಾರೂಢರಾದ ಮೇಲೆ ಅವರ ಯಶಸ್ಸು ಹೇಗೆ ಹೆಚ್ಚುತ್ತ ಬಂತೋ ಹಾಗೆಯೇ ಈ ವಿಜಯ ದ ಶಮಿಯ ವೈಭವವು ಹೆಚ್ಚುತ ಬಂತು. ಈ ವಿಜಯ ದಶಮಿಯ ಉತ್ಸವವನ್ನು "ಮೈಸೂ ರು ಘೋಷು" ಎಂದು ಮೊದಲು ಸುತ್ತಮುತ್ತಿನ ಹಳ್ಳೀ ಜನಗಳು ಬಂದು ನೋಡುತ್ತಿದ್ದದ್ದಕ್ಕೆ ಪ್ರತಿಯಾಗಿ ಈಗ ಡಿಲ್ಲಿ ಚಕ್ರಾಧಿಪತ್ಯವನ್ನು ಳುತ್ತಿರುವ ಪ್ರಭುಗಳೂ ಮೆಚ್ಚುವಂತಾ ಮ ಹಾಜನ ಸಭೆಯು ಸೇರಿ ದೇಶಾಡಳಿತವನ್ನು ನಡೆ ಸುವಂತಾ ಕಾಲವಾಯಿತು. ಸಕಲ ಪೃಥ್ವೀಪಾಲ ರನ್ನೊಳಗೊಂಡು ಯುಧಿಷ್ಠಿರನ ಅಶ್ವಮೇಧ ಯಾಗದಲ್ಲಿ ಹಸ್ತಿನಾವತಿ ಮೆರೆದಂತಿರುವ ಈ ವಿಜಯದಶಮಿಯ ವಿಜಯೋತ್ಸವದ ವೈಭವದಿಂ ದ ವಿಜೃಂಭಿಸುತ್ತಿರುವ ಈಗಿನ ಮೈಸೂರು ಪಟ್ಟಣವನ್ನು ವರ್ಣಿಸುವದು ಅಸಾಧ್ಯವಾಗಿರು ವದು.—ಸುರಭಿ.

THE MYSORE GAZETTE.

ಮೈಸೂರು ಗೆಜೆಟ್.

ಗುರುವಾರ, ತಾ॥ ೧ನೇ ಅಕ್ಟೋಬರ್ ೧೮೯೬. ಮೈಸೂರ್ ಗವರ್ನಮೆಂಟಿನವರಿಂದ ಹೊರಡಿಸಲ್ಪಟ್ಟ ಅಪ್ಪಣೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ ೩೦ನೇ ಸೆಪ್ಟೆಂಬರ್ ೧೮೯೬.

ನಂ ೩೪೫೦.—ಜಿ. ೫೧೪.—ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೊಕೇಟರ ಉದ್ಯೋಗವು ಮಂಜೂರ್ ಮಾಡ ಲ್ಪಟ್ಟಿರುವದರಿಂದ, ೧೮೯೬ನೇ ಮೇ ೩೦ನೇ ಮತ್ತು ೧೨ನೇ ಸೆಪ್ಟೆಂಬರ್ ಆಜ್ಞಾಪನೆಯ ಅನುಸಾರ, ಅಸಿಸ್ಟೆಂಟ ಗವರ್ನಮೆಂಟ್ ಅಡ್ವೊಕೇಟರಿಗೆ ಕ್ರಿಮಿನಲ್ ಅಪೀಲುಗಳು ಮ ತ್ತು ಕೇಸುಗಳಲ್ಲಿ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ೪೯೨ನೇ ಸೆಕ್ಷನ್ ಪ್ರಕಾರ ಕೊಡಲ್ಪಡತಕ್ಕದ್ದೆಂದು ಸರಕಾರದ ನೋಟೀಸುಗಳೂ ಈ ಆಜ್ಞೆಯ ಮೈಸೂರ್ ಗವರ್ನ ಮೆಂಟ್ ಅಡ್ವೊಕೇಟರವರಿಗೆ ಕೊಡಲ್ಪಡತಕ್ಕದ್ದೆಂದು ಗವ ರ್ನಮೆಂಟಿನವರು ಅಪ್ಪಣೆಕೊಡುತ್ತಾರೆ.

ತಾ॥ ೧ನೇ ಅಕ್ಟೋಬರ್ ೧೮೯೬.

ನಂ. ೬೪೪೪.—ಜಿ. ೫೦೦.—ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ ೧೫ನೇ ಸೆಕ್ಷನ್ ಅನುಸಾರ, ತರೀಕೆರೆ ಡಿಪ್ಯುಟಿ ಅಸಿಸ್ಟೆಂಟ್ ಕಮಿಷನರ ಮಿ॥ ಸಿ. ಬಿ. ಕೆ ಷಣಿಯವರಿಗೆ ೧ನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗ ಳು ಕೊಡಲ್ಪಟ್ಟಿರುವವು.

ಸರ್ಕಾರದವರು ಸದರೀ ಕೋಡಿನ ೬೩೩ನೇ ಸೆಕ್ಷನ್ ಅನುಸಾರ, ಸಾಕ್ಷಿಗಳ ದ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ಸ್ವಹಸ್ತಾರೆ ತೆಗೆದುಕೊಳ್ಳುವ ಟ್ಟ ನ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

SUMMARY OF NEWS.

ವೃತ್ತಾಂತ ಸಂಗ್ರಹವು.

೧೮೯೬ನೇ ವರ್ಷದ ನವೆಂಬರ್ ೧೩ನೇ ತಾ. ದಿನ ನೀ ವು ವಾಕವನಾತುವ ಭೂಮಿಗೆ ಒಂದು ಭೂಪರಿ ತು ಬ ಯುವದೆಂದು ಮೊಸಲಪಪನ್ನನವರ ಕಾಸ್ತ್ರಜ್ಞರು ತಿಳಿಸಿ ವರು.

ಕೆಲವು ದಿವಸಗಳ ಕೆಳಗೆ ದುಷ್ಟರು ಗುಡಿಮನಲ್ಲಿ ಮಿಡಿಸಿ ರಿಗಳು ಪ್ರಸಂಗ ಮಾಡುತ್ತಿದ್ದ ಕಟ್ಟಡಕ್ಕೆ ಹಿಮಗಳು ಕ ಲ್ಲುಗಳನ್ನು ಎಸೆಯುತ್ತ ಬಂದರೆಂತಲೂ ಇದರಿಂದ ಕೆಲವರಿ ಗೆ ಪೆಟ್ಟು ಬೀಳುವುದರಿಂದ ತಿಳಿದು ಬಂದಿದೆ.

ಯಾವ ಅಧಿಕಾರಿಯು ಹುಟ್ಟಿದ ದಿವಸವು ಗೊತ್ತಾಗುವದಿಲ್ಲ ವೋ ಅಂತವನು ಜುಲೈ ೧ನೇ ತಾರೀಖಿನಲ್ಲಿ ಹುಟ್ಟಿದನೆಂ ದಾಗಿ ಲೆಕ್ಕ ಮಾಡಬೇಕೆಂದು ಇಂಡಿಯಾ ಗವರ್ನಮೆಂಟಿನವ ರು ಹುಕುಂ ಮಾಡಿರುವರು.

ಉತ್ತರ ಬ್ರಾಜಿಲ್‌ನಲ್ಲಿ ಕೆಲವು ವಜ್ರಗಳನ್ನು ಭೂಮಿಯಿಂ ದ ತೆಗೆಯುವದಕ್ಕೆ ಆಗಲೇ ೬೦೦ ಕಂಪೆನಿಗಳು ಏರ್ಪಾಡಾ ದವು. ಸಣ್ಣ ದರದವರಿಗೆ ಲೈಸೆನ್ಸು ಕೊಡುವುದರ ಮೂಲಕ ಹೆಚ್ಚು ಹಣ ಉತ್ಪತ್ತಿಯಾಗುತ್ತಿದೆ. ಆ ಗಣಿಗಳನ್ನು ಕಾ ಪಿಡುವ ಸ್ಥಳದಲ್ಲಿ ಉತ್ಪನ್ನವಾಗಿ ಮಾಡುವದಕ್ಕಾಗಿ ಸರ್ಕಾರದ ವರು ಪೊಲೀಸ್ ಜವಾನರನ್ನು ಇಟ್ಟಿರುವರು.

ಚೀನ ರಾಜ್ಯಕ್ಕೆ ಸೇರಿದ ಕ್ವಾಂಟಿಂಗ್ ಯೆಂಬ ಪಟ್ಟಣದಲ್ಲಿ ಕೆಲವರು ಕೂಡಿ ೩೦ ರೋಮನ್ ಕ್ರೈಸ್ತರ ದೇವಾಲಯಗಳನ್ನು ನಾಶ ಮಾಡಿ ಅನೇಕ ಮಂದಿ ಕ್ರೈಸ್ತರನ್ನು ಕೊಂದು ಹಾಕಿದರಂತೆ.

ಬ್ಲ್ಯಾಕ್ ಫ್ರೂಟ್ ರಸಾಯನ ಶಾಸ್ತ್ರಜ್ಞನು ಉಕ್ಕನ್ನು ಬೇರೆ ಬೇರೆ ಮಾಡಿ ಆಮ್ಲ, ಹುಳಿ, ರಸಗಳಲ್ಲಿ ಕರಗಿಸಿದ್ದರಿಂದ ವಜ್ರಕ್ಕೆ ಹೋಲುವ ಸಣ್ಣ ಸಣ್ಣ ಸ್ಫಟಿಕಾಕಾರದ ರತ್ನಗಳನ್ನು ಮಾಡಿದನು.

ಅಮೇರಿಕಾ ಖಂಡದಲ್ಲಿ ನೂತನವಾಗಿ ಒಂದು ಯಂತ್ರವನ್ನು ತಯಾರುಮಾಡಿರುವರು. ಇದು ಹತ್ತು ಘಂಟೆಯೊಳಗೆ ಐದು ಲಕ್ಷ "ಪೋಸ್ಟ್‌ಕಾರ್ಡು" ಗಳನ್ನು ಎಣಿಸಿ ೫೦ರಂತೆ ಕಟ್ಟುಗಳಾಗಿ ಮಾಡಿ, ಮೇಲೆ ಕಾಗದದ ಪಟ್ಟಿಗಳನ್ನಿಟ್ಟು, ದಾರದಿಂದ ಚೆನ್ನಾಗಿ ಭದ್ರಪಡಿಸುವದು.

ಒಹ್ಯೋ ಎಂಬ ಅಮೇರಿಕಾ ಸಂಸ್ಥಾನಕ್ಕೆ ಸೇರಿದ ಒಂದು ಗ್ರಾಮದ ಜಮೀನ್ದಾರನೊಬ್ಬನ ಜಮೀನಿನಲ್ಲಿ ಕಲ್ಲೆಣ್ಣೆಯು (ಚಿನ ಎಣ್ಣೆಯು) ಊಟೆ ಬೈಲಾದ್ದರಿಂದ ಆ ಜಮೀನಿನ ಬೆಲೆ ಅತಿಶಯವಾಗಿ ಬೆಳೆದು ಹೋದ ಸಂತೋಷದ ಹೆಚ್ಚಿಗೆಯಿಂದ ಆ ಜಮೀನ್ದಾರನಿಗೆ ಹುಚ್ಚು ಹಿಡಿದು ಹೋಯಿತು.

ಲಾಕಶೈರ್ ಪಟ್ಟಣದಲ್ಲಿ ಪ್ರೌಢ ಧನಾಢ್ಯನಾದ ತಿಹ ಸೀಲ್‌ಡಾರನ ಮನೆಯನ್ನು ಪ್ರವೇಶಿಸಿ ಕಳ್ಳರು ೨೦,೦೦೦ ರೂಪಾಯಿಯ ಮಾಲು ದೋಚಿಕೊಂಡು ಹೋಗಿದ್ದರು. ಅದರಲ್ಲಿ ೧೯,೦೦೦ ರೂಪಾಯಿಯ ಬ್ಯಾಂಕ್‌ನೋಟುಗಳು ಪೋಲೀಸರಿಗೆ ಸಿಕ್ಕಿದವು ಇದರಿಂದ ಕಳ್ಳರಿಗೆ ಪೋಲೀಸರ ಸಹಾಯ ಸಿಗುತ್ತದೆಂದು ಅಪಪ್ರಯೋಗ ನಿವಾಸಿಗಳು ಶಂಕಿಸುತ್ತಾರೆ.

ಬಗಾದ್ ಪಟ್ಟಣಗಳಲ್ಲಿಯೂ ಬಹುತರ ಪ್ರತಿದಿನವೂ ಕೊಲೆಗಳಾಗುತ್ತಿವೆ. ಪೋಲೀಸಿನವರನ್ನೇ ಕಳ್ಳರು ಸುಂದುಹಾಕಿ ಕೊಲ್ಲುತ್ತಾರೆ. ಒಬ್ಬ ದೊಡ್ಡ ಮನೆತನದ ಹೆಂಗಸು ಬೀದಿಯಲ್ಲಿ ಹೋಗುವಾಗ ಕಳ್ಳರು ಅದನ್ನು ಹಿಡಿದುಕೊಂಡು ಬಾಯಿಗೆ ಬಟ್ಟೆ ಹಾಕಿ ಮೈಮೇಲಿನ ಆಭರಣಗಳನ್ನು ಬಿಚ್ಚಿಕೊಂಡು ಹೊರಟು ಹೋದರು. ಪೋಲೀಸಿನವರು ಇಲಾಖೆಯಲ್ಲಿ ಜನ ಬಿಟ್ಟಿದ್ದರಿಂದ ಕಳ್ಳರ ಬಾಧೆಯು ಅತಿ ದುಸ್ಸಹವಾಗಿದೆ.

ಕಾನ್ಸ್ಟಾಂಟಿನೋಪಲ್ ಪಟ್ಟಣದಲ್ಲಿ ಪ್ರಜೆಗಳಿಗೆಲ್ಲ ತುಂಬ ಭೀತಿಯುಂಟಾಗಿದೆ. ಅನೇಕ ಮಹಮ್ಮದೀಯರು ತಮ್ಮ ಸಂಸಾರಗಳನ್ನೆಲ್ಲ ಇತರ ಕಡೆಗಳಿಗೆ ಸಾಗಿಸುತ್ತಿದ್ದಾರೆ. ಪ್ರಾನ್ಸ್ ಸರ್ಕಾರದ ಕಡೆ ರಾಯಭಾರಿಗಳು ತುರ್ಕಿ ಸುಲ್ತಾನರನ್ನು ಕಂಡು ನೀವು ನಿಮ್ಮ ಪ್ರಜೆಗಳನ್ನೆಲ್ಲ ಸರಿಯಾಗಿ ಆಳದಿದ್ದರೆ ನಿಮ್ಮ ಆಳ್ವಿಕೆಗೆ ತೊಂದರೆ ಬರಬಹುದೆಂದು ಬುದ್ಧಿವಾದವನ್ನು ಹೇಳಿದರೆಂದು ತಂತಿ ವರ್ತಮಾನ ಬಂದಿರುತ್ತದೆ.

ಅಫಘಾನ ಜನರು ಇಸ್ಲಾಮಧರ್ಮವನ್ನು ಅಂಗೀಕರಿಸಿದ ಕಾಲಕ್ಕೆ ಅವರ ಕಾಬೂಲಿಗೆ ಪೂರ್ವದಲ್ಲಿದ್ದ ದೇಶಗಳಲ್ಲಿ ೧೪೦೦ ವರ್ಷದ ಮುದುಕನೊಬ್ಬನಿದ್ದನಂತೆ. ಇವನು ಮಹಮ್ಮದ್ ಪೈಗಂಬರನ ಆಳಾಗಿ ಅಲ್ಲಿ ಯುದ್ಧ ಮಾಡಿ ಗಾಯ ಪಟ್ಟಿರುವನೆಂತಲೂ, ಇವನ ಮಂಕದಿಂದ ಮೇಲೆ ಹಲ್ಲುಗಳು ಹುಟ್ಟಿರುತ್ತವೆಂತಲೂ, ಇವನು ಪ್ರತಿನಿತ್ಯ ಹಾಲು, ತುಪ್ಪ, ಹಣ್ಣು ಇವುಗಳನ್ನೇ ತಿನ್ನುವನು, ಇವನಿಗೆ ಬೇರೆ ಆಹಾರವೇನು ತೆಗೆದುಕೊಳ್ಳುವದಿಲ್ಲವೆಂತಲೂ, ಕಾಬೂಲಿನಿಂದ ಬಂದವರು ಹೇಳುತ್ತಾರೆ.

ಮಿಸೂರ್ಯ ಸಂಸ್ಥಾನದ ಟಂಕಶಾಲೆಗಳಲ್ಲಿ ಕಳೆದ ವರುಷ ಅಷ್ಟು ವಿಶೇಷವಾದ ಕೆಲಸಗಳು ನಡೆಯಲಿಲ್ಲ. ಕೆಲವು ಬ್ಯಾಂಕ್‌ಗಳಿಗೋಸ್ಕರ ೩೪ ಲಕ್ಷ ರೂಪಾಯಿಯ ಚಿನ್ನದ ನಾಣ್ಯಗಳು ತಯಾರಾದವು ಮತ್ತು ೯,೨೦,೦೦೦ ರೂಪಾಯಿಯಷ್ಟು ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿದರು. ಹೋದ ವರುಷ ಖೋಟಾ ನಾಣ್ಯಗಳನ್ನು ಮಾಡಿದರೆಂದು ೯೫೯ ಮೊಕದ್ದಮೆಗಳು ತರಲ್ಪಟ್ಟವು. ಅದರಲ್ಲಿ ೧,೦೩೪ ಜನರನ್ನು ಹಿಡಿದು ಪರೀಕ್ಷೆ ಮಾಡಿದರು. ಆಪೈಕಿ ೭೪೭ ಜನರಿಗೆ ಶಿಕ್ಷೆಯಾಯಿತು. ಖೋಟಾ ನಾಣ್ಯಗಳನ್ನು ಇಟ್ಟುಕೊಂಡಿದ್ದವರೂ ಚಲಾವಣೆ ಮಾಡಿದವರೂ ೬೬೬ ಜನರೆಂದು ಹಿಡಿದು ವಿಚಾರಣೆ ಮಾಡಿದ್ದರಲ್ಲಿ ೪೨೧ ಜನರ ಮೇಲೆ ಅಪರಾಧ ರುಜುವಾಯಿತು. ಅವರಿಗೆಲ್ಲ ಶಿಕ್ಷೆ ಕೊಟ್ಟಿದ್ದಾರೆ.

ಬೊಂಬಾಯಿಗೆ ಬೂಬೋನಿಕ್ ಪ್ಲೇಗ್ ಎಂಬ ಒಂದು ಹೊಸ ಜಾಡ್ಯವು ತಲೆ ಹಾಕಿದೆ. ಈ ಜಾಡ್ಯ ತಗಲಿ ಆಗಲೇ ಅನೇಕರು ಸತ್ತು ಹೋದರು. ಮ್ಯುನಿಸಿಪಾಲಿಟಿಯವರು ಈ ಜಾಡ್ಯವನ್ನು ಅಣಗಿಸುವದಕ್ಕೆ ತಕ್ಕ ಏರ್ಪಾಡುಗಳನ್ನೆಲ್ಲ ಬಹು ಆತುರವಾಗಿಯೂ ವಿಚಾರದಿಂದಲೂ ಮಾಡುತ್ತಿರುವರು. ಹಿಂದುಗಳುವರೋ ತಮ್ಮ ಮನೆಗಳನ್ನು ಶುಚಿಯಾಗಿಟ್ಟುಕೊಳ್ಳುವದಕ್ಕೆ ಪ್ರಯತ್ನ ಮಾಡದೆ ಕಾಳಿಕಾದೇವಿ ಊರನ್ನು ಪ್ರವೇಶಿಸಿದೆ ಎಂತಲೂ ಆ ದೇವತೆಯು ಕೋಪವನ್ನು ಬಲಿಗಳ ಮೂಲಕ ಇಳಿಸಿ ತಮ್ಮ ಊರಿನಿಂದ ಹೊರಕ್ಕೆ ಕಳುಹಿಸಬೇಕೆಂತಲೂ ಹೇಳುತ್ತಾ, ಬೀದಿಗಳಲ್ಲಿ ಮೆರವಣಿಗೆಗಳನ್ನೂ, ಉತ್ಸವಗಳನ್ನೂ ಮಾಡಿ ನಾನಾವಿಧವಾಗಿ ಬಲಿ ಕೊಡುತ್ತಿದ್ದಾರೆ. ದಿನ ೧ಕ್ಕೆ ೧೫-೨೦ ಜನ ಈ ಜಾಡ್ಯದಿಂದ ಸಾಯುತ್ತಿದ್ದಾರೆಂದು ತಿಳಿದುಬಂದಿದೆ.

ಸಂಯುಕ್ತ ರಾಜ್ಯದಲ್ಲಿನ ಆಬರ್ನ್ ಎಂಬ ಒಂದು ಊರಿನ ಸಮೀಪದಲ್ಲಿ ವಿಚಿತ್ರವಾದ ಒಂದು ಜೈಲ್‌ಖಾನೆ ಯಿರುವದು. ಅಲ್ಲಿನ ಅಧಿಕಾರವೆಲ್ಲ ಸ್ತ್ರೀಯರಿಂದಲೇ ನಡೆಸಲ್ಪಡುವದು. ಆ ಪ್ರದೇಶದ ಸ್ತ್ರೀಯರು ಏನಾದರೂ ತಪ್ಪನ್ನು ಮಾಡಿದರೆ ಅವರನ್ನು ಈ ಕಾರಾಗೃಹಕ್ಕೆ ಕಳುಹಿಸುವರು. ಅಲ್ಲಿನ ಉದ್ಯೋಗದಾರರು ಶ್ರದ್ಧೆಯಿಂದ ಕೆಲಸ ಮಾಡುವದರಿಂದಲೂ, ಅಪರಾಧಿಗಳನ್ನು ಕಠಿಣವಾದ ತರಬೇತಿಯಿಂದ ತಿದ್ದುತ್ತಿರುವದರಿಂದಲೂ, ಅನೇಕರು ತಿದ್ದುಕೊಂಡವರಾಗಿ ಹೊರಟು ತಮ್ಮ ತಮ್ಮ ಗೃಹಗಳಿಗೆ ಹೋಗಿ ಸರಿಯಾಗಿ ಬಾಳುವರೆಂದು ತಿಳಿದು ಬಂದಿದೆ. ಮಿಸೆಸ್ ಅಗ. ಯಂ. ಟಿಲ್ಡ ಎಂಬುವಳು ಈ ಕಾರಾಗೃಹಕ್ಕೆ ಮೇಲ್ವಿಚಾರಕಳಾಗಿರುತ್ತಾಳೆ. ಇವಳ ಕೈಕೆಳಗೆ ಅನೇಕ ಸ್ತ್ರೀಯರಿದ್ದಾರೆ. ಅಪರಾಧಿಗಳನ್ನು ನಿರ್ವಹಿಸಿ ಅವರನ್ನು ತಕ್ಕ ಸ್ಥಿತಿಯಲ್ಲಿಟ್ಟಿರುವದು ಇವರ ಕೆಲಸವಾಗಿದೆ. ಈಕೆಯು ವಿಧಿಸುವ ಕಟ್ಟುನಿಟ್ಟುಗಳು ಲೇಶವೂ ವ್ಯತ್ಯಾಸವಿಲ್ಲದಂತೆ ಸರಿಯಾಗಿ ನಡೆಯುತ್ತವೆ.

EXTRACT

ಈಚೆಗೆ ಕೆಲವು ದಿನಗಳ ಕೆಳಗೆ ಇಂದೂರಿನ ಪತ್ರಿಕೆಯಲ್ಲಿ ಒಬ್ಬ ಮಹಾ ಪತಿವ್ರತಾ ಸ್ತ್ರೀಯು ಪಾತಿವ್ರತ್ಯವು ಹ್ಯಾಗೆ ದೇವರು ಸಂರಕ್ಷಿಸಿದನೆಂಬುದನ್ನು ಕೆಳಗಿನ ಉದಾಹರಣೆಯ ಮೂಲಕ ತಿಳಿಯುವದು. ಇಂದೂರಿನ ಇಬ್ಬರು ಗೃಹಸ್ಥರು ಬಸ್ತಿಗೆ ಹೋಗಿ ಅಲ್ಲಿನ ಒಬ್ಬ ವೈದ್ಯ ಮನುಷ್ಯನಿಗೆ ನಿಮ್ಮ ಜಾಮಾತರು ಅಗದೀ ಮರಣಾವಸ್ಥೆಯಲ್ಲಿ ಇದ್ದಾನೆಂತಲೂ, ನಾವು ನಿಮ್ಮ ಮಗಳನ್ನು ಕರೆದುಕೊಂಡು ಬರಬೇಕೆಂತಲೂ ಹೇಳಿದರು; ಈ ಮನುಷ್ಯನ ಮಗಳು ಪತಿವ್ರತೆಯಾದವಳಿದ್ದದರಿಂದ ಆ ಗೃಹಸ್ಥನು ತನ್ನ ಮಗಳನ್ನೂ ಮತ್ತು ಅವಳ ಬಾಲಕನನ್ನೂ ವಸ್ತ್ರ ಒಡವೆಗಳ ಸಹಿತವಾಗಿ ಅವರ ಸಂಗಡ ಕಳುಹಿಸಿದರು. ಇದನ್ನು ನೋಡಿ ಆ ವರು ಪರ್ವತದ ಊರಹೊರಗೆ ಹೋಗುವ ಮಾರ್ಗವನ್ನು ಬಿಟ್ಟು ಗುಡ್ಡ ಗಾಡು ದಾರಿಗೆ ಹೋಗಿ ಅಲ್ಲಿ ಆಕೆಯನ್ನು ಇಳಿಸಿ ಮೈಮೇಲಿನ ಆಭರಣ ಒಡವೆಗಳನ್ನು ತೆಗೆದುಕೊಂಡು ಆಕೆಯನ್ನು ಹಗ್ಗದಿಂದ ಕಟ್ಟಿ ಅಲ್ಲಿ ಇರುವ ಒಂದು ಬಾವಿಯಲ್ಲಿ ಒಗೆಯಬೇಕೆಂದು ಯೋಚಿಸಿದರು ಮತ್ತು ಅದಕ್ಕೆ ಒಂದು ಕಲ್ಲು ಕಟ್ಟುವ ಆಲೋಚನೆಯನ್ನು ಮಾಡಿ ಕಲ್ಲು ತರಲಿಕ್ಕೆ ಹೋದರು. ಆಷ್ಟರಲ್ಲಿ ಅಲ್ಲಿ ವಾಗಿಸಾತಿಕೊಂಡಿರುವ ಒಂದು ಘೋರ ಸರ್ಪವು ಆ ಇಬ್ಬರ ಕೈಗಳನ್ನು ತನ್ನ ಬಾಲದಿಂದ ಸುತ್ತಿಕೊಂಡಿತು. ಇವರು ಅಲ್ಲಿಯೇ ಅದೇ ಮಾರ್ಗವಾಗಿ ಬರುತ್ತಿದ್ದ ಪೋಲೀಸ್ ಜವಾನರು ಬಂದು ಇದನ್ನೆಲ್ಲ ನೋಡಿ ಆ ಪತಿವ್ರತಾ ಸ್ತ್ರೀಯನ್ನೂ ಆ ಬಾಲಕನ ಬಿಡುಗಡೆಯನ್ನು ಮಾಡಿ ಅವರಿಂದ ಎಲ್ಲಾ ಸುದ್ದಿಯನ್ನು ತಿಳಿದುಕೊಂಡು ಚಕಿತರಾಗಿ ಆವಳಿದ್ದ ಎನೆಕೆಗೆ ಒಳಗೆ ಪ್ರಯತ್ನಪಟ್ಟರೂ ಆ ಸರ್ಪವು ಅವರನ್ನು ಬಿಡಲಿಲ್ಲ! ಕಡೆಗೆ ಆ ಪತಿವ್ರತೆಯು ದೇವರನ್ನು ಕುರಿತು ಪ್ರಾರ್ಥನೆಯನ್ನು ಮಾಡಿದ್ದರಿಂದ ಆ ಸರ್ಪವು ಆ ಇಬ್ಬರನ್ನು ಬಿಟ್ಟು ಆ ಮರವನ್ನು ಹತ್ತಿತು ತನ್ನ ಬಿಲವನ್ನು ಸೇರಿತು. ಆ ಮೇಲೆ ಪೋಲೀಸರು ಆ ಇಬ್ಬರ ಸಂಗಡ ತೆಗೆದುಕೊಂಡು ಚತುರ್ಭುಜ ಮಾಡಿ ಇಂದೂರಿಗೆ ಕರೆತಂದರು ಮತ್ತು ಆಕೆಯನ್ನು ಆಕೆಯ ಬಾಲಕನ ಸಹಿತವಾಗಿ ಮನೆಗೆ ಮುಟ್ಟಿಸಿದರು. ಈಗ್ಗೆ ಅವಳ ಗಂಡನು ಬೇನೆಯಿಂದೇನು ಬಿದ್ದಿಲ್ಲ ಇದೆಲ್ಲಾ ಕಳ್ಳರ ಆಪನಾಧನದ ಕಪಟವು ಪೂರ್ಣವಾಗಿ ತಿಳಿಯಿತು.

ADVERTISEMENTS

ದಕ್ಷಿಣ ಮಹಾರಾಷ್ಟ್ರ ರೈಲ್ವೆ
(ಮೈಸೂರು ಸ್ಟೇಟ್ ರೈಲ್ವೆ)
ನೋಟೀಸ್

ಸನ್ ೧೮೯೦ನೇ ಇಸವಿ ಮೈಸೂರು ರೈಲ್ವೆ ರೆಗ್ಯುಲೇಷನ್ ೪೦ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನೆಂದರೆ :—ಯಶವಂತಪುರದ ರೈಲ್ವೆ ಸ್ಟೇಷನ್‌ಬಳಿ ೨೦ ಗಾಡಿ ಹೋಜಿ ಸುಣ್ಣದ ಕಲ್ಲು, ಬೆಂಗಳೂರು ಸಿಟಿ ಗೂಡ್ಸ್‌ಷೆಡ್‌ನಲ್ಲಿ ಸುಮಾರು ಆರು ರೈಲ್ವೆ ಹೋಜಿ ಸುಣ್ಣದಕಲ್ಲ ವಾರಸುದಾರರಿಲ್ಲದೆ ಬಿದ್ದಿರುವದರಿಂದ ಅದಕ್ಕೆ ವಾರಸುದಾರರು ಬಂದು ಅದರ ಚಾರ್ಜನ್ನು ಕೊಡದೆ ಹೋಗುವ ಪಕ್ಷಕ್ಕೆ ಮೇಲ್ಕಂಡ ಎರಡು ಸ್ಟೇಷನ್‌ಗಳಲ್ಲಿ ಕ್ರಮವಾಗಿ ಈ ತಿಂಗಳ ೧೫ನೇ ಮತ್ತು ೨೦ನೇ ತಾರೀಖುಗಳಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು.

ಹರಾಜ್‌ನಲ್ಲಿ ಕೊಂಡುಕೊಳ್ಳಲು ಇಷ್ಟಪಟ್ಟವರು ಹಾಜರಿರಬೇಕು. ಕ್ರಯದ ಮೊಬಲಗು ಪೂರಾ ಕೊಟ್ಟ ಹೊರತು ಸುಣ್ಣದ ಕಲ್ಲನ್ನು ರೈಲ್ವೇ ಕಟ್ಟಡದಿಂದ ಸಾಗಿಸಿಕೊಳ್ಳುವದಕ್ಕೆ ಯಾರಿಗೂ ಕೊಡಲ್ಪಡಲಾರದು.

ಬೆಂಗಳೂರು. ತಾ||27ನೇ ಸಪ್ಟಂಬರ್, 1896 ನೇ ಇಸವಿ	ಟಿ. ಜೆ. ಮೆಕ್‌ಗ್ಲಾಷನ್, ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟ್.

"ಆಂಗ್ಲೋ ಇಂಡಿಯನ್ ಪಾಕೆಟ್ ಡೈರಿ."

ನಾವು ಪ್ರತಿ ವರ್ಷದಲ್ಲಿಯೂ ಪ್ರಚುರ ಪಡಿಸುತಲಿರುವ ಮೇರೆಗೆ ಸರ್ವರಿಗೂ ಬಹಳ ಉಪಯುಕ್ತವಾಗಿರುವಂತೆ ಇಂಗ್ಲೀಷ್ ತಿಂಗಳು, ತಾರೀಖ್, ವಾರ, ಇದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತವಾಗಿಯೂ, ನಮ್ಮ ಹಿಂದೂ ಸಿದ್ಧಾಂತ ಒಂದು ವರ್ಷದ ಪಂಚಾಂಗವೂ, ಇನ್ನೂ ಆವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರೆವಿನ್ಯೂ ಸ್ಟೇಂಪುಗಳು, ಅಲ್ಲಗೆ ರೈಲ್ವೆ ಚಾರ್ಜ್, ಪೋಸ್ಟಾಫೀಸ್ ರೂಲ್ಸ್ ಮುಂತಾದ ವಿಶೇಷ ಸಂಗತಿಗಳನ್ನು ಸೇರಿಸಿರುವ ೧೮೯೭ನೇ ಇಸವಿಯ ದಿನಚರಿ ಒಳ್ಳೆ ಸೊಗಸಾದ ಪೈ ಬಿನ ಪುಸ್ತಕವನ್ನು ವಿಕ್ರಯಕ್ಕೆ ಸಿದ್ಧಪಡಿಸುತ್ತೇವೆ. ಈ ಡೈರಿಯು ಪ್ರಾರಂಭಿಸಿ ೧೩ ವರ್ಷಗಳಾದವು, ಇದನ್ನು ಉಪಯೋಗ ಪಡಿಸುತಲಿರುವವರ ಸಂಖ್ಯೆಗೆ ತಕ್ಕಂತೆ ಪ್ರಿಂಟ್ ಮಾಡಿಸಿರುವದರಿಂದ ಈ ತಿಂಗಳ ಆಖೈರೊಳಗಾಗಿ ಬೇಕಾದವರು ತರಿಸಿಕೊಳ್ಳಬಹುದು.

ಕ್ರಯ ಪ್ರತಿ ೧ಕ್ಕೆ ಸ್ಥಳದವರಿಗೆ ,, ೦—೬—೬ ಪರಸ್ಥಳಕ್ಕೆ ಡಾಕ್ ಖರ್ಚು ಸಹಿತ ೦—೮—೦

ಜೇಬುಗಳಲ್ಲಿಡಲು ಅನುಕೂಲವಾಗಿರುವಂತೆ ಕೆಲವರು ಸಣ್ಣ ಡೈರಿಯನ್ನು ತಯಾರುಮಾಡಿಸಿ ಕೊಡಬೇಕೆಂದು ಅಪೇಕ್ಷಿಸಿದ್ದರಿಂದ ಅದಕ್ಕಾಗಿ ೪ ಇಂಚು ಅಗಲ ೩॥ ಇಂಚು ಉದ್ದ ಇರುವ ಡೈರಿಯನ್ನು ತಯಾರುಮಾಡಿಸಿ "ವಾಲ್ಕಿಂಗ್ ಪಾಕೆಟ್ ಡೈರಿ" ಎಂಬ ಪುಸ್ತಕದಲ್ಲಿನ ಅನೇಕ ಸಂಗತಿಗಳನ್ನು ಸೇರಿಸಿದೆ.

ಕ್ರಯ ಪ್ರತಿ ೧ಕ್ಕೆ ಸ್ಥಳದವರಿಗೆ ೦—೪—೦ ಪರಸ್ಥಳದವರಿಗೆ ೦—೫—೦

೧೦ ಪ್ರತಿ ಒಟ್ಟಿಗೆ ತೆಗೆದುಕೊಳ್ಳತಕ್ಕವರಿಗೆ ೧ ಪ್ರತಿ ಉಚಿತವಾಗಿ ಕಳುಹಿಸುತ್ತೇವೆ. ಬೇಕಾದವರು ಈ ಕೆಳಗೆ ಬರೆದಿರುವ ಹೆಸರಿಗೆ ಬರೆದು ತರಿಸಿಕೊಳ್ಳಬಹುದು. ಪ್ರತಿ ಒಂದಕ್ಕೂ ರಿಜಿಸ್ಟರ್ ಪಾರ್ಸಲ್ ಎಂಬ ಹಣ ಜಾಸ್ತಿ ಕಳುಹಿಸಿಕೊಡಬೇಕು. ಅಪೇಕ್ಷೆಯುಳ್ಳವರು ವಿಳಾಸ ವಗೈರೆಯನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು.

ತಾ|| ೧ನೇ ಅಕ್ಟೋಬರ್, ೧೮೯೬ ಬೆಂಗಳೂರು	ಸತ್ಯಂ ಚಂದ್ರಶೇಖರಯ್ಯ, ಪ್ರೊಪ್ರೈಟರ್, "ವರ್ನಾಕ್ಯುಲರ್ ಸ್ಟಾಂಡರ್ಡ್ ಲೈಬ್ರರಿ," ತುಳಸೀತೋಟದ ಬೀದಿ ರೋಡು



S. NARAYAN RAO AND SONS,
WATCH MAKERS AND OPTICIANS,
Brigade Road, Bangalore.



೧ ಮೆಸ್ಸರ್ಸ್ ನಾರಾಯಣರಾವ್ ಅಂಡ್ ಸನ್ಸ್ ಇವರಲ್ಲಿ, ನವೀನವಾಗಿಯೂ ಉತ್ತಮವಾಗಿಯೂ ಇರುವ ನಾನಾ ತರಹದ ಚಿನ್ನ, ಬೆಳ್ಳಿ ಮತ್ತು ಲೋಹದ ಜೇಬಿನ ಗಡಿಯಾರಗಳೂ (Watches) ಎಚ್ಚರಿಸತಕ್ಕ ಗಡಿಯಾರಗಳೂ (Alarm Time pieces), ಆಫೀಸು ಮತ್ತು ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಉಪಯೋಗವಾಗುವ ಗಡಿಯಾರಗಳೂ (Clocks) ಮತ್ತು ನಾನಾ ತರಹ ಗಡಿಯಾರ ಸಾಮಾನುಗಳು, ವಿದ್ಯುಚ್ಛಕ್ತಿಯ ಘಂಟೆಗಳೂ (Electric Bells) ಕೈಗೆ ಸಿಕ್ಕುವ ಹಾಗೆ, ಕೇವಲ ಸಾಮಾನ್ಯಕ್ರಯಕ್ಕೆ ದೊರೆಯುವವು.

೨ ಇವರು ಪ್ರತಿನಿತ್ಯವೂ ಬೆಳಿಗ್ಗೆ ೭ ಘಂಟೆಯಿಂದ ಸಾಯಂಕಾಲ ೬ ಘಂಟೆ ವರೆಗೂ ಬಹು ಸ್ವಾಭಾವಿಕವಾದ ತಸ್ವೀರುಗಳನ್ನು (Photographs) ಸುಲಭ ಕ್ರಯಕ್ಕೆ ತೆಗೆಯುವರು.

೩ ಸದರೀ ಯವರಲ್ಲಿ ಯಾವತ್ತೂ ನೇತ್ರ ವ್ಯಾಧಿಗಳನ್ನು ನಿವೃತ್ತಿ ಮಾಡುವಂತ ಚಿಂತನೆಯಿಂದ ಸಾಮಗ್ರಿಗಳನ್ನು ಶಾಸ್ತ್ರ ವನ್ನನುಸರಿಸಿ ಮಾಡಿಸಿರುವ ಉಪನೇತ್ರಗಳು (Spectacles) ಸಹ ದೊರೆಯುವವು ಮತ್ತು ಇವರು ಕಣ್ಣುಗಳನ್ನು ಸರಿಯಾದ ಪರೀಕ್ಷೆ ಮಾಡಿ ತಕ್ಕ ಉಪನೇತ್ರಗಳನ್ನು ಕೊಡುವರು.

೪ ಗಡಿಯಾರ, ಡಾಗಿನೆಗಳಿಗೆ ಮುಂತಾದ ಸಾಮಾನುಗಳನ್ನು ಸುಲಭ ಕ್ರಯದಲ್ಲಿಯೇ ಬೇಕಾದ ಹಾಗೆ ರಿಪೇರಿ ಮಾಡುವರು.

ಸರ್ವರೂ ಪ್ರೋತ್ಸಾಹಗೊಳಿಸಬೇಕಾಗಿ ಕೋರುವ,

ವಿಧೇಯ,

ಎಸ್ ನಾರಾಯಣರಾವ್ ಅಂಡ್ ಸನ್ಸ್,

ಬ್ರಿಗೇಡ್ ರೋಡ್, ಬೆಂಗಳೂರು.

ಈ ಕಂಪೆನಿಯು ೧೮೦೧ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು.

ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯಾಶ್ಚರ್ಯಕರವಾದ ಒಳ್ಳೆಗುಣದ ಹಿಂದಾಗಿ ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ನಾನಾ ಸಸಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಹುಟ್ಟಿನ ತಾಗಸಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ಪತ್ತಿಗಳು ಮಹೌಷಧಿಗಳಾದ್ದು, ಒಳ್ಳೇ ರುಚಿಯುಳ್ಳವು. ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳು ಹೋಗುತ್ತವೆ. ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಕಾಮುಕರಾದವರಾದರೂ ಹರೆಯದ ಗಂಡಸರಂತೆ ಪ್ರಸನ್ನರಾಗುತ್ತಾರೆ. ಜನನೇಂದ್ರಿಯದಲ್ಲಿ ಬಲ ಉಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಬುದ್ಧಿಯು ಮುಂದೆ ಅಥವಾ ಹಿಂದೆ ನಡೆದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ. ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಪರಮಾ ಹಾಗೂ ಉಷ್ಣಸಂಬಂಧಿಕ ಬೇನೆಗಳಿಲ್ಲದಂತಾಗಿ ಗಾತು ಪುಷ್ಟವಾಗುತ್ತದೆ. ಮೂರು ಹೊತ್ತುಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೊಟ್ಟೆಯುಬ್ಬರ ತಕ್ಷಣ ಕೊಡಲೇ ಸ್ವಚ್ಛ ಸೌಖ್ಯವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿನಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆದಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳವರೆಗೆ ಸಾಲತಕ್ಕ ೧ ಡಬ್ಬಿಗೆ ೧—೮—೦ ರೂ॥ ಒಂದೇವೇಳೆಯಲ್ಲಿಕ್ಕೆ ೩ ಡಬ್ಬಿಗಳು ತಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಪ್ರಾಣಾಂತ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ಬೇರೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ ಜನರಲ್ಲಿ ಒಹಳ ಡಬ್ಬಿಗಳು ಖರ್ಚಾಗುತ್ತವೆ. ಈ ಔಷಧವು ಈ ಕಂಪೆನಿಯಹೊರತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತವೆ. ಬರೆದು ಬಂದ ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಯು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಹ್ಯಾಲ್ಯು ಪೆಯಿಬಲ್ ಪೆಟ್ಟಿ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದದ್ದರಿಂದ ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಿಮೆ ಬೀಳುವದು.)

ಮೇಲ್ವಿಳಾಸ—ಪಿ ಎಲ್ ಎ. ಬ್ರದರ್ಸ್ ಮತ್ತು ಕಂಪನಿ,

ಸಬ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ

ಪೋಸ್ಟ್—ಬೆಳಗಾಂವ. Post BELGAUM.

BANGALORE.—Printed and Published at the KARNATAKA PRESS, No. 40, HOSPITAL ROAD, CITY,—1896.

THE

Karnataka Prakasika.

ಪ್ರಕಟನೆಯ ರಿವಾಜ. { ಮೊದಲನೆಯಾವರ್ತಿ ಪಙ್ಕ್ತಿ ಒಂದಕ್ಕೆ 0 2 0 / ಎರಡನೆಯ ದಫಾ ಪಙ್ಕ್ತಿ ಒಂದಕ್ಕೆ 0 1 0 }

[ಹೆಚ್ಚಾಗಿ ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಹಾಯಿಸಬೇಕಾದರೂ ಪಙ್ಕ್ತಿ ಒಂದಕ್ಕೆ ೧ ಆಣೆ ಯಂತೆಯೇ ಲೆಕ್ಕ ಮಾಡಲ್ಪಡುವದು.]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದಾರರಿಗೆ,—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸೇರಿ,

ಸಾಲ 1 ಕ್ಕೆ	... 3 0 0	ಸಾಲ 1 ಕ್ಕೆ ... 4 0 0
6 ತಿಂಗಳಿಗೆ	.. 2 0 0	6 ತಿಂಗಳಿಗೆ .. 2 8 0
3 ತಿಂಗಳಿಗೆ	... 1 4 0	3 ತಿಂಗಳಿಗೆ ... 1 8 0

ಪ್ರಕಾಶಿತವಿವಿಧಪ್ರವೃತ್ತ್ಯುಪಗದಾರ್ಥ ಕರ್ಣಾಟಕಪ್ರಕಾಶನಪರಾ ಬುಧಪ್ರೀತಿಕೃತಸಾಹಿತ್ಯಶೋಭಿತಾ ॥ ಮೃಗಾಂಕಹಿತಮಾಸರನಿಹಿತಮುದ್ರಾ ಸಜ್ಜನಸ್ತುತ್ಯ ಸುಪರಿಷೋಷಿತಾ ಶಿಕಶಿವಮಾನಸಂಸ್ಮಾನಂ ॥

VOL. XXIII. BANGALORE:—MONDAY, OCTOBER 19, 1896. No. 42.

SUN INSURANCE OFFICE.

ESTABLISHED 1710

Insurance effected upon almost every description of property at the current rates of premium

Total sum insured in 1894	£393,600,000
Premium	£ 1,021 811
Reserved Fund	£ 1,125,000

Claims arranged by the Local Agents are paid promptly and liberally

The jurisdiction of Local Tribunals recognised

MADRAS, 1st June 1896 } PARRY, & Co., *Agents*

Royal Exchange Assurance (Incorporated A. D. 1720)

Funds	£ 4,000,000.
Claims paid	£37,000 000.

FIRE

Insurances are granted against Loss or Damage by Fire on all kinds of property at moderate rates

LIFE.

Every description of Life Assurance effected.

No older office in existence

MADRAS 1st June 1896 } PARRY, & Co., *Agents*

NOTICE.

Healthy vaccinated calves of from 1 to 2½ years old, mostly female, can be had cheap on application to

The Superintendent, Mysore Government Vaccine Institute, Bangalore

P. H. BENSON

Select Telegrams

London, 9th Oct—Reuter's Agency is informed that the cruiser *Gibraltar* has been detached from the Mediterranean squadron for service in Zanzibar. It is understood that naval reinforcements for Zanzibar are connected with Said Khalid's flight

It is understood that the position in regard to Zanzibar affair is regarded as serious, owing to the hostile attitude assumed by Germany in the matter

Mr Bhownaggree has sailed for India, to study questions likely to arise during the oncoming Session of Parliament

Paris, 9th Oct,—A grand review of seventy thousand troops was held at Chalons to-day before the Tsar and President Faure

The spectacle was a most inspiring one, and the troops looked splendid

The Tsar, replying to a toast at the luncheon which followed the review, said that the two countries were bound by unalterable friendship and their armies were united by a profound sentiment of comradeship.

London, 11th Oct—The French and Russian Press agree that the utterances of the Tsar while in France consecrate a Russo French alliance

Berlin, 11th Oct—The *North German Gazette* says that Germany is firmly convinced that Russia will especially use the Franco agreement for peaceful objects only

Paris, 11th Oct—The Tsar, from the French frontier, has telegraphed to President Faure that he has felt the heart of France beating in the beautiful capital, and that the memory of the visit is deeply engraved on the heart of himself and the Tsarina

London, 12th Oct—The *Times* states that in consequence of Lord Rosebery suggesting Mr Asquith as his successor, and the certain opposition that there would be to Sir William Harcourt, the situation has become complicated, and Mr. Gladstone's return to the political world is seriously advocated

Contrary to the first impression, it is now believed at Rome that the Tunisian treaty has been imposed upon Italy, and therefore the Franco-Italian hostility remains unabated

The possibility, however, is being discussed of Italy joining France to compel England to evacuate Egypt and establish a Franco-Italian supremacy in the Mediterranean

THE

Karnataka Prakasika.

MONDAY, OCTOBER 19, 1896

AN AGRICULTURAL WANT.

IT is allowed on all sides that the condition of the ryots is not what it ought to be. In too many cases they are miserably poor. They can only keep body and soul together and this with hard work The land does not produce much for the labour bestowed upon it. In addition, the sowcar, in too many instances takes a large share of what the ryot is able to obtain from the land Between this person and the Government the cultivator is left in a poor way. The Mysore Government has done well in establishing Agricultural banks in different parts of the province and these are sure to be of great use to the people, more especially the ryots The institutions will be watched with the greatest interest. But there is another way in which the authorities would render assistance to the ryot. The land cannot be cultivated without bullocks. These must be procured or the land is worthless; it cannot be made to produce grain. It must be ploughed, and to this end bullocks are absolutely necessary. Those now used are, in many cases, miserable animals. They cannot perform much labour, and what they do perform is of the worst kind. They only scratch the ground instead of going deep into it, for the simple reason that they have not the strength to go deeper. What we would recommend is that the Mysore Government should breed bullocks in different parts of the province, and sell them to the ryots, at as cheap rate as possible without losing by the transaction Mysore is noted for its cattle. Some think they are the best in India. The bullocks of this province are much prized wherever they are known But we do not recommend that these valuable animals should be bred and sold to the ryots, but those of a common order—good bullocks but not too dear. They should be ordinary animals, better than those now used by the cultivators, but not of the value of those sometimes sent out of the province for sale in other parts of the country. If the ryots could obtain the bullocks we recommend they would be able to show a better result than they do now. The Government need not lose money by the transaction. It might sell the bullocks to the ryots at cost price, so that it might neither gain profit or sustain loss by the sale The object should not be direct gain but indirect That is the ryots should be benefited, and in course of time, the Government would also gain. We should very much like to see our suggestion carried out, for we feel certain it would be of the greatest benefit to the ryots at large With agricultural banks and cheap bullocks the riots might soon be in a much better condition then they are at present We trust the Government of Mysore will do something in the way we suggest.

THE PLAGUE

THE plague now in Bombay may—though all hope not—visit other parts of the country. It has caused a good many deaths in the capital of the Western Presidency, and the loss of life took place in the most insanitary parts of the place. It is believed that the disease is generated by filth, or, at least, that filth has much to do with it Mandvi, the part of Bombay where it put in an appearance first is the dirtiest part of the whole city. The condition of the place was something terrible to contemplate, but since it has been cleansed the plague has not been so virulent. This is a lesson that all the Municipalities in the land should take to heart. They should be able to understand that the great friend of the disease is insanitation. They must make the towns as clean as possible, then the plague may not pay them a visit, and should it do so, it may not carry off many victims We are glad to be able to say that the condition of the city is better than it has been for a long time past, probably better than it has ever been known to be, but this is not the case with the Civil and Military Station It is in a poor way as regards sanitation, and from what we hear very little is being done to improve matters There are some parts of the Station in a terrible state of dirt and filth, and it is to be feared that if the plague should come there it would carry away many victims Of this there can be no doubt. Plans have been made to put the station in a better state of sanitation, but these plans have to be carried out, and till they have been the place should be made as clean as possible The Mysore Government should also give orders to Municipal authorities in the Mofussil to look to the cleanliness of the places they have charge of

News and Notes.

WE are pained to hear of Mr A. O Hume's illness in England.

THE Bengal Government has under consideration the question of contributions to private individuals for the preservation of archæological remains.

THE *Times of Malabar* learns on reliable authority that His Highness the Maharajah of Travancore will visit Madras and Bombay at the beginning of January next

THE consumption of horse and donkey flesh as human food appears to be largely on the increase in Paris Last year 20,000 horses alone were thus disposed of in the French capital

ONE of the candidates for the degree of Doctor of Philosophy at Jena was seventy-seven years of age. It is interesting to learn that he passed his examination in a satisfactory manner

A MACHINE has been invented in America which counts half a million post cards in ten hours, wrapping and tying the same in packages of twenty five each They are neatly wrapped in paper and the string securely tied all by machinery.

THE reception Committee of the Poona Congress decided to place the surplus of the Congress at the disposal of the British Committee to be invested as far as possible, as a permanent fund for the Congress, the British Committee using only the interest. The balance sheet on September 1st showed a balance of twenty thousand rupees.

THE Prince of Wales has the biggest post-bag of any of the Royalties, the usual number of letters being five hundred a day Persons of every rank and station take it upon themselves to address His Royal Highness upon the most trivial matters. Of course, a large proportion of these communications are begging-letters, the average number of these received being two hundred out of the five.

A WOMAN in a case at Southwark the other day made a neat retort at the expense of the advocate who was conducting the case for the prosecution She was under cross-examination as a hostile witness, and she was asked if she had not been formerly convicted at that court. "Yes, and it was you who defended me," was her curt and yet adequate reply. The cross-examination seemed to lose energy after that.

IN his letter addressed to the Editor of *The Temple Magazine*, Mr. Gladstone says—"In my opinion there can be no words too strong for denouncing suitably the abominable practice of gambling—now, I believe, more rife even than during my youth—and the ruinous consequences to which it directly leads. I am aware of the arguments raised upon the definition of the word, but I regard them as little better than mere quibbles."

WE are glad to notice that Mr. A. Chatterji, son of the late Rai Hem Chunder Chatterji Shaib of the P W D, who stood first in the B. A Examination of the Calcutta University, and appeared in August last in the Indian Civil Service Examination in England has again headed the list of the successful candidates in the latter examination Apparently he is the first native of India who has stood first in the Indian Civil Service Examination.

THE Hindus have been led to believe by an astrologer named Joshi Dazarom Girdhar that the bubonic plague, which is due to there being five Tuesdays in the month, the new moon, and the *sankranti* also occurring on a Tuesday will disappear with the expiry of the Hindu month, The prophecy seems to have a wholesome effect on the minds of the superstitious members of the community, who expect to be totally free from the dangers attending the disease by the end of the month.

What is probably the first instance outside laboratories of the treatment of a case of snake-bite by the new antivenom serum, worked out by Professors Calmette and Fraser, is reported

ram Moorat. A boy of 11, the son of a syce, was *bitten in the foot by a krait*. Fortunately medical aid was available at once, and also some of the Calmette serum, with which the boy was inoculated within three minutes of the occurrence. *The result was a perfect recovery*, a happy omen of what the new remedy may eventually do to reduce the mortality from this hitherto intractable scourge.

THE *Champion* of Bombay makes a statement about the new Dewan of Baroda, which *will cause considerable surprise everywhere*, and which we for our part find it difficult to believe. This is what our contemporary says:—"A rumour floating about is to the effect that the new Dewan of Baroda contemplates resigning. We indeed should be sorry to see such an early termination of his connexion with Baroda, and, therefore, hope that the rumour may prove to be incorrect. We are not given to giving expression to mere idle stories, but the source of our information is such that we are unfortunately bound to credit the rumour."

A CORRESPONDENT of one of our Calcutta Contemporaries notices a strange phenomenon which he saw at Pilligulla Malapulle near Posauki. On the 4th ultimo by 2 P M when it was raining heavily a huge column of flame was seen to extend from the earth to the sky. A bullock lying near the spot of that wonderful occurrence immediately fell down senseless. A man who was running away through fear accidently caught a spark from the blazing flame which affected a portion of his body. Afterwards the column was transformed into a heap of whirling smoke and moving round with tremendous force for about two miles disappeared as suddenly as it had made its appearance.

THE Deputy Magistrate of Alipore is at present engaged in hearing a novel bigamy case. Ram Comar mondal, of Tollygunge, stands charged by his two sons-in-law, Nisi Baga and Basanta Kumar Pagri, with cheating and abetting bigamy. The accused on May last married his daughter successively to both the complainants. Both marriages took place the same night. When the first man had fallen asleep, the girl was removed and *married to the second man. The second marriage is said to have been agreed to for a large sum of money. Some days later he sent his daughter* to the house of the first son-in-law. The second son-in-law, hearing of this, brought a case against the accused. The first son-in-law *also brought a case*.

THE Editor of the *Amrita Bazar Patrika* and the Hon'ble Mr Surendra Nath Banerji met and embraced each other at the house of a common friend, in token of resumed peace *and good will. But we are sorry to see the Patrika* celebrating the happy event by a blood sacrifice the victim of which is our esteemed contemporary of the *Indian Mirror*. Not content with attacking the *Mirror's* present conduct the *Patrika* casts reflections on Mr. Norendro Nath Sen's previous birth "in which," we are told, the *Patrika* is assured "he (Mr Sen) roamed as a hippopotamus in African waters." The theory of transmigration of souls opens up a vastly wider field for journalistic invective, and we congratulate the *Patrika* on being the first to grasp the possibility and turn it to immediate account.

Local and Provincial.

THE BRITISH RESIDENT.—Left for the capital last Wednesday. He will be away for about a fortnight.

THE WEATHER.—Is dry again, and no rain has fallen for sometime past. We are not yet up to the average, and it is to be hoped that more will *come down before* long. The crops are looking well, but they will look dry soon unless rain falls. The tanks are not full but they have received a fair supply.

THE CITY POLICE.—Great complaints are made against the police of the City. Crimes are committed, but the delinquents are seldom, if ever, caught. About a week ago there was a daring robbery in the heart of the place, but the thieves are still at large, and it is not likely they will ever be caught. *The Inspector General* should put a little life into the force.

THE SUPERINTENDENT OF THE CENTRAL JAIL.—Mr Sparks, Deputy Commissioner of Kadur, will take the place of Dr. Chowksi at *the Central Jail*. Mr. Sparks will also be the Superintendent of the Mysore Government Central Press. Mr Weir, who is shortly to retire from the service of the Madras Government will take the place of Mr. Sparks at Kadur.

A SPECIAL SUB REGISTRY OFFICE AT MUDDUR.—Muddur is an important and *thriving* station on the Southern Mahratta Railway. It belongs to the Mandya Taluk. At the latter place the Sheristadar of the Taluk is the ex officio Registrar. The registration work at Muddur is also very heavy and the inhabitants of the place have petitioned the Inspector General of Registration in Mysore praying for the opening of a special sub registry office in their town. The Inspector General has submitted his proposals on the opening of the office as prayed for by the people of Muddur. It is very likely that the Government will sanction the Proposals of the Inspector General after the Dasara is over.—D. P.

The Mysore Gazette

Bangalore, Thursday, 15th October 1896

NOTIFICATIONS BY THE GOVERNMENT OF MYSORE

GENERAL AND REVENUE

No 3, dated, Camp Mysore, 7th October 1896

Mr A. R Vaidyanatha Sastri, M A, M B & C M, is promoted from the 2nd to the 1st Class of Assistant Surgeons, with effect from 5th September 1896.

No 6—Mr S Seshagiri Rao, Acting Munsiff of Sagar is appointed Munsiff, 3rd Class, *sub protem vice* Mr S Venkatavaradaiengar promoted to Sub Judge, *sub protem*

No. 9—The following transfers and postings of Munsiffs are ordered:—

Mr. C Subba Rao, from Tumkur to Seringapatam, but to act as Munsiff of the Mysore sub division during the absence of Mr I J Vanderlowen on leave or until further orders. To join on relief by Mr. Basavaradya.

Mr *B Basavaradya, from Sagar to Tumkur*. To join forthwith

Mr S. Seshagiri Rao to continue at Sagar.

No 12, dated, Camp Mysore, 9th October 1896.

The following temporary transfer and postings of Munsiffs are ordered:—

Mr *S Varadarajaiengar, from* Chitaldrug to Mysore, (*vice* Mr. Vanderlowen on leave) *To join on relief*

Mr K Mallari Rao, B A. B L, to Chitaldrug (*vice* Mr Varadarajaiengar) To join forthwith.

No 15, dated, Camp Mysore, 9th October 1896

The following temporary transfers and appointments are ordered:—

Mr C Green, District and Sessions Judge of the Ashtagram division to be District and Sessions Judge of the Nandydroog division (*vice Mr T. Narahari Rao on leave*) *To join* forthwith.

Mr B Tirumalacharlu, B L, District and Sessions Judge of the Nagar division, to be District and Sessions Judge of the Ashtagram division. To join forthwith

Mr M. *Ramaswami* Iyer, B A, B L, Acting District and Sessions Judge of the Ashtagram division, to act as District and Sessions Judge of the Nagar division. To join forthwith

Mr P Singrachar to continue to act as Subordinate Judge, 2nd Class, (*vice* Mr M, Ramaswami *Iyer*)

Mr K Mallari Rao, B A, B L, Advocate, to act as Munsiff in the last Grade, *sub-protem* (*vice* Mr Singrachar)

No 18, dated, Camp Mysore, 9th October 1896

Mr. C Subba Rao, Munsiff of Tumkur, is transferred to Seringapatam, (to join on relief by Mr. Basavaradya)

This cancels Mr Subba Rao's transfer to Mysore

No 21—Under Article 218 of the Mysore Service Regulations, Mr T Narahari Rao, M L, District and Sessions Judge of Nundydroog division, is granted leave of absence for six months on medical certificate with effect from such date as he may avail himself of it.

No. 3681—*R F* 52 96, *dated, 4th October* 1896

Under Article 172 of the Mysore Service Regulations S. Venkataramanaiya, Deputy Amildar, Alur sub taluk, Hassan district, is granted casual leave of absence for ten days with effect from such date as he may avail himself of the same

The Amildar of the Hassan taluk will, in addition to his own duties, be in charge of the sub taluk during the absence of S Venkataramanaiya on leave or until further orders

No. 24—Under Section 12 of the Code of Criminal Procedure C Venkata Rao, Amildar and 3rd Class Magistrate, Nunjangud taluk, is appointed a Magistrate of the 2nd Class

ಕರ್ಣಾಟಕ ಪ್ರಕಾಶಿಕೆ.

೧೮೯೬ನೇ ಇಸವಿ ಅಕ್ಟೋಬರು ತಾ|| ೧೯ನೇ ಸೋಮವಾರ

ತಾತ್ಕಾಲಿಕ ದೇಶ ಸ್ಥಿತಿ.

ಕಾಲವೇನೋ ವೈಪರೀತ್ಯವನ್ನೈದಿತು. ದುರ್ಭಿಕ್ಷವು ತಲೆದೋರಿತು. ರಿಕ್ತರ ದುರ್ದಶೆಯು ಹೆಚ್ಚಿತು. ವರ್ತಕರ ಆಶೆಯು ಅಧಿಕವಾಯಿತು ಕಳ್ಳರಕೊಂಡಾಟವು ಕೈಗೂಡಿತು. ದೀನರ ರೋದನವು ಉಪಕ್ರಮವಾಯಿತು. ಇದಕ್ಕೆ ತಕ್ಕಂತೆ ವಿಜಾತೀಯ ರೋಗಗಳು ಪ್ರಬಲಿಸಿ ಜನಕ್ಕೆ ಪ್ರಾಣಹಾನಿಯನ್ನುಂಟು ಮಾಡಲಾರಂಭಿಸಿತು. ಗವರ್ನಮೆಂಟಿನವರಿಗೆ ಕಂದಾಯ ಬಾಕೀ ವಸೂಲಿ ವಿಷಯದಲ್ಲಿ ಚಿಂತೆಗುಪಕ್ರಮವಾಯಿತು. ಅವರವರ ಮನೋನ್ನತಿಗಳನ್ನು ತೋರಿಸಿ ಪ್ರಯೋಜನವ ಹೊಂದಲಿಕ್ಕೆ ತಕ್ಕ ಸಮಯವು ಪ್ರಾಪ್ತವಾಯಿತೆಂಬ ಉತ್ಸಾಹವು ತಾಬೇದಾರಿ ಉದ್ಯೋಗಸ್ಥರಿಗೆ ಅಂಕುರಿಸಿತು. ಹೀಗೆ ತತ್ತತ್ಸ್ವಭಾವಾನುರೂಪವಾದ ಸ್ಥಿತಿ ಭೇದವೂ, ತಾತ್ಪರ್ಯ ಭೇದವೂ, ವೃತ್ತಿ ಭೇದವೂ ಉಂಟಾಗಲಿಕ್ಕೆ ಮಳೆಯು ಉಚಿತ ಕಾಲದಲ್ಲಿ ಬಾರದೆ ಹೋಗಿರುವದೂ, ಈ ಕಾಲದಲ್ಲಿ ಸರ್ವತ್ರ ಪೈರುಗಳು ವ್ಯವಸಾಯಕ್ಕೆ [illegible] ವೇಳಾಮಧ್ಯಕ್ಕೆ ಪ್ರಾಯವಾಗಿ ಹುಲುಸಾದ ದಿಕ್ಕಿನಲ್ಲಿ ನೋಡಿದವರಿಗೆ, ಪೈರುಗಳು ಹೊಡೆಗೆ ಬಂದ ಜಮೀನುಗಳು ಹಾಳಾಗಿರುವದೂ, ಮುಂದೆ ವರ್ಷನಿರೀಕ್ಷಣೆಯು ಕಡಿಮೆಯಾಗಿರುವದೂ ಮುಖ್ಯ ಕಾರಣಗಳಾಗಿ ಪರಿಣಮಿಸಿವೆ. ಈಗ ಸನ್ನಿಹಿತವಾಗಿರುವ ಮಹಾ ದುರ್ಭಿಕ್ಷವೆಂಬುದು ಪರಿಮಿತ ಕಾಲ ದೇಶ ಜನನಿಷ್ಠವಾದದ್ದಾಗಿಲ್ಲವೆ. ಇದು ಪ್ರಥಮತಃ ಬಂಗಾಳದಲ್ಲಿ ಜನಿಸಿ ಪಂಜಾಬ್, ವಾಯವ್ಯ ದೇಶ, ಮಧ್ಯ ರಾಷ್ಟ್ರಗಳು, ಈ ಪ್ರಾಂತಗಳಲ್ಲಿ ಸುಮಾರು ೧೪೦೦ ಮೈಲಿಗಳ ಫಾಸಲೆಗಿಂತ ಅಧಿಕವಾಗಿ ವ್ಯಾಪಿಸಿ, ಪೂರ್ವಪಶ್ಚಿಮ ಸಮುದ್ರತೀರ ಪ್ರಾಂತದವರಾಗಿ ಮೈಸೂರು ರಾಜ್ಯವನ್ನು ಪ್ರವೇಶ ಮಾಡುವದಾಗಿದೆ. ಪ್ರಕೃತ ಸ್ಥಿತಿಯನ್ನು ನೋಡಲು ಈಗ್ಗೆ ೨೦ ವರುಷಗಳಹಿಂದೆ ಪ್ರಾಪ್ತವಾಗಿ ಅನೇಕ ಕೋಟಿ ಪ್ರಜೆಗಳ ಪ್ರಾಣಗಳನ್ನು ಅಪಹರಿಸಿದಂತ ಘೋರ ಕ್ಷಾಮವು ಸಂಭವವಾಗಿರುವದೆ ಯುತಕ್ಕದ್ದಾಗಿಯೂ, ಮುಂದಿನ ದುರ್ದಶೆಯನ್ನು ಕುರಿತು ಬಹಳ ಚಿಂತಿಸಬೇಕಾದುದಾಗಿಯೂ ಇರುತಿದೆ. ನಾಗಪುರ ಪ್ರಾಂತದಲ್ಲಿ ಜನರಿಗೆ ಜೀವನಾಧಾರವಾದ ಧಾನ್ಯವು ದೊರೆಯದೆ ಹೋಗಲು ಜನರು ತಿರುಗಿಬಿದ್ದು ಲೂಟಿ ಮುಂತಾದ ದ್ರೋಹಗಳಿಗೆ ಉಪಕ್ರಮಿಸಿದಾರೆ. ದೆಹಲಿ, ಲಾಹೋರ್ (ಪಂಜಾಬ್), ಕಾನ್ಪೂರ್ ಮೊದಲಾದ ಪ್ರಾಂತಗಳಲ್ಲಿ ದುರ್ಭಿಕ್ಷ ಪೀಡಿತರಾಗಿ ಜನರು ಜೀವನಕ್ಕಿಲ್ಲದೆ ಸಂಕಟ ಪಡುತಲಿರುವದರಿಂದಲೂ, ಲೂಟಿಗೆ ಉಪಕ್ರಮಿಸಿರುವದರಿಂದಲೂ, ಧಾನ್ಯ ವರ್ತಕರು ಮಂಡಿಗಳನ್ನು ತೆಗೆಯಲಿಕ್ಕೆ ನಿರಾಕರಿಸಿರುತ್ತಾರೆ. ಗವರ್ನಮೆಂಟಿನವರ ಅಭಯಗಳೂ ಸಹಾಯಗಳೂ ಜನರಿಗೆ ತೃಪ್ತಿಕರವಾಗಿಲ್ಲವು ಮುಂದೆ ಧಾನ್ಯಗಳ ಖರೀದಿ ಹೆಚ್ಚುವದೆಂಬ ಉದ್ದೇಶದಿಂದ ವರ್ತಕರು ಅನ್ಯದೇಶಗಳಿಗೆ ಹೋಗಿ ಧಾನ್ಯಗಳನ್ನು ಖರೀದಿಮಾಡಿ ದಾಸ್ತಾನು ಇಟ್ಟುಕೊಳ್ಳಲಿಕ್ಕೆ ಪ್ರಾರಂಭಿಸಿದ್ದರಿಂದ ಆಯಾ ಸ್ಥಳಗಳಲ್ಲಿ ಖರೀದಿಗೆ ದವಸ ದೊರೆಯುವುದು ಪ್ರಯಾಸವಾಗಿದೆ ಗತಿಸಿದ ೨೦ ವರ್ಷಗಳ ಕಾಲದಲ್ಲಿದ್ದದಕ್ಕಿಂತ ರೈಲ್ವೆ ಸಂಬಂಧವು ಸರ್ವತ್ರ ಹೆಚ್ಚಿ ಈಗ ಪತ್ರ ನೋಡಿದರು ವ್ಯಾಪಾರಕ್ಕೆ ಅನುಕೂಲ್ಯವು ಅಧಿಕವಾಗಿರುವದರಿಂದ ಪದಾರ್ಥ ದೌರ್ಲಭ್ಯ ಮೂಲಕವಾದ ಶ್ರಮವನ್ನು ಇಡೀ ದೇಶೀಯರು ಸಾಮುದಾಯಕವಾಗಿ ಅನುಭವಿಸಬೇಕಾದ ಕಾಲವು ಪ್ರಾಪ್ತವಾಗುವದಾಗಿದೆ. ಈ ಸಂಸ್ಥಾನದಲ್ಲಿ ಇದುವರೆಗೆ ಕಾಲವೃಷ್ಟಿಯಾಗಿ ಜನರಿಗೆ ಉತ್ಸಾಹಕರವಾಗಿತ್ತು. ಈಗ ಒಳ್ಳೆಯ ಸಮಯದಲ್ಲಿ ವರ್ಷವು ಹಿಮ್ಮೆಟ್ಟಿದ್ದರಿಂದ ಜನರಿಗೆ ಚಿಂತೆಯು ಅಧಿಕವಾಗಿದೆ. ಕಳೆದ ವಾರದಲ್ಲಿ ಏಕಾಏಕಿ ಧಾನ್ಯಗಳ ನಿರಖ್ ಅಧಿಕವಾಯಿತು. ರಾಗಿಯ ಧಾರಣೆ ಹೆಚ್ಚಿದ್ದರಿಂದ ಅದರ ಸಂಗಡ ಅಕ್ಕಿ ಮೊದಲಾದ ಇತರ ಪದಾರ್ಥಗಳ ಖರೀದಿ ಜಾಸ್ತಿಯಾಗಿದೆ. ದುರ್ಭಿಕ್ಷಕ್ಕೆ ಪೂರ್ವಲಕ್ಷಣವಾಗಿ ಕನ್ನ ಕಳವು ಪಟ್ಟಣದಲ್ಲಿ ಪ್ರಾರಂಭವಾಗಿವೆ. ಈ ವಾರ ಸುಲ್ತಾನ್ ಪೇಟೆಯಲ್ಲಿ ಒಬ್ಬ ದೊಡ್ಡ ಮನುಷ್ಯರ ಮನೆಗೆ ರಾತ್ರಿವೇಳೆಯಲ್ಲಿ ಕಳ್ಳರು ಪ್ರವೇಶಿಸಿ ಮನೆಯವರು ಮಲಗಿರುವಾಗ ಸುಮಾರು ೧,೨೦೦ ರೂಪಾಯಿಗಳ ಖರೀದಿ ಬಾಳುವ ಆಭರಣಗಳನ್ನು ಕಳವುಮಾಡಿಕೊಂಡು ಹೋದರೆಂತಲೂ, ಸದರೀ ಕಳವು ಇದ್ಯಾಪಿ ಪತ್ತೆಯಾಗಲಿಲ್ಲವೆಂತಲೂ ತಿಳಿಯಬರುತ್ತಿದೆ. ಹೀಗೆಯೇ ಅಲ್ಲಲ್ಲಿ ಕಳವುಗಳು ಪತ್ತೆ ಇಲ್ಲದೆ ಜರುಗುತಲಿವೆ. ಕ್ಷಾಮ ನಿವಾರಕ ಕಾಮಗಾರಿಗಳನ್ನು ಪ್ರಾರಂಭಿಸಬೇಕಾದ ಆವಶ್ಯಕತೆಯು ಕ್ಷಿಪ್ರದಲ್ಲಿ ಉಂಟಾಗುವದರಲ್ಲಿ ಸ್ವಲ್ಪವಾದರೂ ಸಂದೇಹವಿಲ್ಲವು. ರೈತರು ದಾಸ್ತಾನು ಇಟ್ಟಿರುವ ಧಾನ್ಯಗಳನ್ನು ಕೊಂಚಕ್ಕೆ ಹೊರಗೆ ತೆಗೆಯಲಾರರು, ಮುಂದೆ ತಮ್ಮ ಜೀವನವೇ ತಮಗೆ ದುರ್ಭರವಾಗಿ ಪರಿಣಮಿಸುವದೆಂಬ ನಿರೀಕ್ಷಣೆಯು ಅನೇಕಜನ ಕೃಷಿಜೀವಿಗಳಿಗೆ ಉಂಟಾಗಿರುವದರಿಂದ ತಮ್ಮಲ್ಲಿ ಧಾನ್ಯವೇ ಇಲ್ಲವೆಂದು ತಿಳಿಸುತ ಎಲ್ಲರಂತೆಯೇ ತಾವೂ ಕಷ್ಟಪಡಬೇಕಾಗಿದೆ ಎಂಬದಾಗಿ ವೇಷ ಹಾಕುತಲಿದ್ದಾರೆ. ಮುಖ್ಯವಾಗಿ ಈಗ ದುರ್ಭಿಕ್ಷದಿಂದ ಸಂಕಟಪಡಬೇಕಾದವರ್ಯಾರು? ಶತಸಂಖ್ಯೆಗಳ ಪ್ರಕಾರ ವೇತನಗಳನ್ನು ಪಡೆದು ಅಧಿಕಾರವನ್ನು ನಡೆಸುವ ದೊಡ್ಡ ಉದ್ಯೋಗಸ್ಥರಲ್ಲವು. ಪರಂತು ಅವರ ಸೇವಿಗ್ಸ್ ಬ್ಯಾಂಕ್ ಖಜಾನೆ ಮೊಬಲಗಿನ್ನು [illegible] ಕಡಿಮೆ ಆಗಬಹುದೇ ಹೊರತು ಅವರ ಸಂಬಳದಲ್ಲಿ ಲೇಶವೂ ಕೊರತೆ ಬರಲಾರದು. ಕೃಷಿ ಜೀವಿಗಳಾದ ರೈತರು ಯಥೋಚಿತ ಆಹಾರಗಳನ್ನು ಕಲ್ಪಿಸಿಕೊಂಡು ಕಾಪಾಡಿಟ್ಟುಕೊಂಡಿರುತ್ತಾರಾಗಿ ಅವರಿಗೂ ವಿಶೇಷಶ್ರಮವಿಲ್ಲವು. ನಿರಾಧಾರಿಗಳಾದ ಕೂಲಿ ವೃತ್ತಿಯಿಂದ ಜೀವನ ಮಾಡುವವರಿಗೂ, ತಮ್ಮ ವೇತನಕ್ಕೆ ಸಾಲದೆ ಸಂಕಟಪಡತಕ್ಕ ಕೊಂಚ ಸಂಬಳದವರಿಗೂ ಕ್ಷಾಮ ಪೀಡೆಯು ಅಧಿಕವಾಗಿ ನಷ್ಟಕ್ಕೆ ಅವರು ಗುರಿಯಾಗುವಹಾಗೆ ಇತರರು ಗತಿಯಾಗಲಾರರಾದ ಕಾರಣ ಅಂತವರ ಸ್ಥಿತಿಯನ್ನು ಕುರಿತು ಬಹಳವಾಗಿ ಚಿಂತಿಸಬೇಕಾಗಿದೆ.

Occasional Notes.

ನೈಮಿತ್ತಿಕ ವಿಷಯನ್ಯಾಸ

ಪುದುಕೋಟೆ ಸಂಸ್ಥಾನದ ಚೀಫ್ ಕೋರ್ಟ್ ಜಡ್ಜಿ ಕೆಲಸವನ್ನು ಇದುವರೆಗೆ ಆಕ್ಟಿಂಗ್ ತರೀಕ ನೋಡುತಲಿದ್ದ ಮ॥ ರಾಘಗೋಪಾಲ ಪಿಳ್ಳೆ ಎಂಬವರನ್ನು ಸದರೀ ಕೆಲಸದಲ್ಲೇ ಅಲ್ಲಿನ ಮಹಾರಾಜರವರು ಕಾಯಂ ಮಾಡಿದರೆಂದು ತಿಳಿಯಬರುತದೆ.

ಈ ತಿಂಗಳ ೧೨ನೇ ತಾರೀಖಿನಲ್ಲಿ ಬೆರಹಾಂಪುರದಿಂದ ಮದರಾಸು ಹಿಂದೂ ಪತ್ರಿಕೆಗೆ ಬಂದ ತಂತಿ ವೃತ್ತಾಂತದಿಂದ ತಿಳಿಯಬರುವದೇನೆಂದರೆ—ಅಲ್ಲಿಯೂ ಅದರ ಆಸಪಾಸು ಡಿಸ್ಟ್ರಿಕ್ಟ್‌ಗಳಲ್ಲಿಯೂ ಮಳೆಯು ಕಿಂಚಿತ್ತಾದರೂ ಇಲ್ಲದೆ ಹೋಗಿರುವದರಿಂದ ಕ್ಷಾಮವು ಸನ್ನಿಹಿತವಾಗಿದೆ, ಭತ್ತದ ಧಾರಣೆಯು ಏಕಾಏಕಿ ಬಹಳ ಹೆಚ್ಚಿಹೋಗಿದೆ, ವರ್ತಕರು ಧಾನ್ಯ ವ್ಯಾಪಾರವನ್ನೇ ನಿಲ್ಲಿಸಿ ಜಿನಿಸಿಗಳನ್ನು ಕೊಡಲಿಕ್ಕೆ ನಿರಾಕರಿಸುತ್ತಾರೆ. ಕಾಲಸ್ಥಿತಿಯು ಅತೃಪ್ತಿಕರವಾಗಿದೆ ಜನರಿಗೆ ಅಧೈರ್ಯವು ಹೆಚ್ಚುತಲಿದೆ. ಅದಕ್ಕೆ ಅನುಗುಣವಾಗಿ ವಾಂತಿ ಭೇದಿ ಉಪದ್ರವವು ತಲೆದೋರಿ ಇದ್ಯಾಪಿ ಉಪಶಮಿಸದೆ ಜನರು ಬಾಧಿಸುತಲಿದೆ, ಎಂಬದು.

ರಷ್ಯಾ ಚಕ್ರವರ್ತಿ ಯವರೂ ಚಕ್ರವರ್ತಿನೀ ಯವರೂ ಈ ತಿಂಗಳ ೧೧ನೇ ತಾರೀಖಿನಲ್ಲಿ ಫ್ರಾನ್ಸ್ ರಾಜಧಾನಿಯಾದ ಪೇರಿಸ್ ಪಟ್ಟಣಕ್ಕೆ ದಯಮಾಡಿದ್ದ ಸಂದರ್ಭದಲ್ಲಿ ಅಲ್ಲಿನ ಜನರು ತಮ್ಮ ವಿಷಯದಲ್ಲಿ ವ್ಯಕ್ತಪಡಿಸಿದಂತ ಆಂತರವಾದ ಪ್ರೀತಿ ಗೌರವಗಳಿಗಾಗಿಯೂ, ಅವರು ಮಾಡಿದ ಸತ್ಕಾರಗಳಿಗಾಗಿಯೂ ತಾವು ಬಹಳ ಸಂತೃಪ್ತರಾಗಿರುವಂತೆಯೂ ತಮ್ಮ ಆಗಮನ ಪ್ರಯುಕ್ತವಾದ ಜ್ಞಾಪಕವು ತಮ್ಮ ಮತ್ತು ಚಕ್ರವರ್ತಿನೀ ಯವರ ಹೃದಯದೊಳು ಚಿರನಿರೂಢವಾಗಿ ನೆಲಗೊಂಡಿರುವಂತೆಯೂ ಫ್ರೆಂಚ್ ಸರಹದ್ದು ಪ್ರಾಂತದಿಂದ ಜಾರ್ ಯವರು ಫ್ರೆಂಚ್ ಪ್ರೆಸಿಡೆಂಟರಾದ ಫಾರೇ ಯೆಂಬವರಿಗೆ ಕೇಬಲ್ ಮೂಲಕ ತಿಳಿಯಪಡಿಸಿರುತ್ತಾರೆ.

ಗಯಾ ಪ್ರಾಂತದಲ್ಲಿ ಪದಾರ್ಥಗಳ ಧಾರಣೆಯು ದಿನೇದಿನೆ ಜಾಸ್ತಿಯಾಗುತಲಿದೆ. ಪಸ್ತ್ವ ಆಸ್ಕೆ

ರೂಪಾಯಿ ೧ಕ್ಕೆ ೪ ಸೇರುಗಳ ಪ್ರಕಾರ ಮಾರಲ್ಪಡುತಲಿದೆ. ಅಲ್ಲಿಯಲ್ಲಿ ಜನರು ಗುಂಪು ಕೂಡಿಕೊಂಡು ದಾನ್ಯದ ಮಂಡಿಗಳಲ್ಲಿ ನುಗ್ಗಿ ಲೂಟ ಮಾಡಲಿಕ್ಕೆ ಪ್ರಾರಂಭಿಸಿದಾರಂತೆ. ಬಾಜಾರ್‌ನಲ್ಲಿ ಅಂಗಡಿಗಳೆಲ್ಲವು ಪ್ರಾಯೇಣ ಮುಚ್ಚಲ್ಪಟ್ಟವೆ. ಸದರೀ ಡಿಸ್ಟ್ರಿಕ್ಟ ಕಲೆಕ್ಟರೂ, ಪೊಲೀಸ್ ಸೂಪರಿಂಟೆಂಡೆಂಟರೂ, ಮ್ಯುನಿಸಿಪಲ್ ವೈಸ ಪ್ರೆಸಿಡೆಂಟರೂ ಸದರೀ ಪ್ರದೇಶಕ್ಕೆ ಹೋಗಿ ಜನರಿಗೆ ದಿಲಾಸೆ ಯುಂಟುಮಾಡಿ ಲೂಟಿಗಳಿಗೆ ಅವಕಾಶ ಕೊಡದಂತೆ ಬೇಕಾದ ಬಂದೋಬಸ್ತು ಮಾಡಿ ಅಂಗಡಿಗಳನ್ನೆಲ್ಲ ಈಟಿನ ತೆಗೆಯಿಸಿದರೆಂದು ವೃತ್ತಾಂತ ಬಂದಿರುತಿವೆ

ರಷ್ಯಾ ಚಕ್ರವರ್ತಿ ಯವರು ತಮ್ಮ ಭಾರ್ಯೆಯೊಡನೆ ಫ್ರಾನ್ಸ ರಾಜಧಾನಿಗೆ ದಯಮಾಡಿದ್ದ ಸಂದರ್ಭದಲ್ಲಿ ಅಂದರೆ ಈ ತಿಂಗಳ ೯ನೇ ತಾರಿಖು ಕುಶ್ರಾವ[illegible] ಯ [illegible] ಪ್ರತಿ ಶಪಥ ೨೦ ೦೦೦ ಫ್ರಾಂಕ್ ಸೆ ನ್ನು ತನ್ನ ಕೌಶಲ್ಯವನ್ನು ಸೂಚಿಸಿ ಪ್ರಕಾರದಿಂ ರಷ್ಯಾ ಚಕ್ರವರ್ತಿಯವರಿಗೆ ತೋರ್ಪಡಿಸಿ ಒದಳ ಸುಕೀರ್ತ ನನ್ನು ಅರ್ಪಿಸಿ[illegible] ಅವರಿಗೆ ಸ್ಪುಂಟು ಮಾಡಿ ತ ತತ್ಕಾಲದಲ್ಲ ಸ್ಥ್ಯಾಪರಚೆನಾದಿ ಸೈನಿಕ ಸು ವಿಭಾಗಗಳು ಬಹಳ ಪ್ರೋತ್ಸಾಹಕವಾಗಿದ್ದವು ಮತ್ತು ಯಾವತ್ತೂ ಸ್ಯವು ಶ್ಲಾಘ್ಯತರಾಗಿಯು ಪ್ರೇಕ್ಷಣೀಯವಾಗಿಯೂ [illegible] ಸೈನಿಕ ಕೌಶ ಲ್ಯ [illegible] ಚಕ್ರವರ್ತಿಗೆ ಪಲಸಾರವು ಜರಿಗಿತು. ಆಕಾಲದಲ್ಲಿ ವ ದ ರಶ್ಯಾಸ್ಥಾನದಿಂದ ಪ್ರತಿ ಪ್ರತಿಭಾಶಾಲಿಯಾದ ಚಕ್ರವರ್ತಿ ಯವರು ಫ್ರೆಂಚ ಪ್ರೆಸಿಡೆಂಟರ ಮಾಡಿ ಯೆಂಬವರೊಡನೆ ನೇತ್ರ ಸಂದರ್ಶನವಾದರೆ, ರಷ್ಯಾ ಮತ್ತು ಫ್ರಾನ್ಸ್ ಈ ಎರಡು ಸುಸ್ಥಾನದ ರಾಷ್ಟ್ರಗಳು ಅತ್ಯಂತ ಮಾನ ವೃತ್ತಿಯಿಂದ ಪರಸ್ಪರ ಬದ್ಧರಾಗಿರು ತ್ತಾರೆ ಮತ್ತು [illegible] ಸೈನ್ಯಗಳು ನಿರಾತಂಕ ವಾಗಿ ಸ್ನೇಹಭಾವದಿಂದ [illegible] ಇರುತಿವೆ

ಆಲ್ಲಿಪುರ ಡಿಸ್ಟ್ರಿಕ್ಟ ಡೆಪ್ಯುಟಿ ಮ್ಯಾಜಿಸ್ಟ್ರೇಟರವರು ಈಗ ವಿಚಿತ್ರವಾದ ಒಂದು ವಿವಾಹದ ಬಗ್ಗೆ ಮೊಕದ್ದಮೆಯನ್ನು ದರ್ಯಾಪ್ತು ಮಾಡುತಲಿರುವಂತೆ ತಿಳಿಯಬರುತದೆ. ಈ ಮೊಕದ್ದಮೆಯ ಸ್ವರೂಪವೇನೆಂದರೆ -ತೋಲಿಗಂಜ್ ಎಂಬ ಪ್ರದೇಶದಲ್ಲಿರ ವ ರಾಮಕುಮಾರ ಮುಂಶಿ ಎಂಬಾತನವೆಲ್ಲಿ ಅವನ ಇಬ್ಬರು ಅಳಿಯಂದಿರಾದ, ನಿಶಿಬಾಗು, ಮತ್ತು ವಸಂತಕುಮಾರ ವಗ್ರಿ ಎಂಬವರು ಮೋಸ ಮಾಡಿದ ತಪ್ಪಿಗೆ ಬಗ್ಗೆ, ದ್ವಿತೀಯ ವಿವಾಹಕ್ಕೆ ಸಹಾಯಿಸಿದ ತಪ್ಪಿತದ ಬಗ್ಗೆ ಫಿರ್ಯಾದಿ ಮಾಡಿರುತ್ತಾರೆ. ಕಳೆದ ಮೇ ತಿಂಗಳಲ್ಲಿ ಫಿರ್ಯಾದಿಯು ತನ್ನ ಮಗಳನ್ನು ಪಿರ್ಯಾದಿಗಳಲ್ಲಿಬ್ಬರಿಗೂ ಒಂದೆ ದಿವಸದಲ್ಲಿ ಕೊಟ್ಟು ಮೋಸಕರವಾಗಿ ವಿವಾಹ ಮಾಡಿಸಿದನೆಂದು ತಿಳಿಯಬರುತಿದೆ. ವಿವಾಹದ ದಿನ ರಾತ್ರಿ ಮೊದಲನೆಯ ಅಳಿಯನು ನಿದ್ರೆ ಹೋಗುತಲಿದ್ದ ವೇಳೆಯಲ್ಲಿ ಅಪರಾಧಿಯಾದ ಮಾವನು ತನ್ನ ಮಗಳನ್ನು ಪ್ರತ್ಯೇಕಿಸಿ ಅದಕ್ಕೆ ಮುಂಚಿತವಾಗಿ ನಿರ್ಣಿತ ಗಿದ್ದ ಪ್ರಕಾರ ಎರಡನೆಯವನಿಗೆ ಕೊಟ್ಟು ಕಾವಲೇ ವಿವಾಹ ಮಾಡಿಸಿದನು. ಈ ಎರಡನೆಯ ವಿವಾಹವು ಜಾಸ್ತೀ ಹಣ ಕೊಟ್ಟ ತರುವಾಯ ಪರದ್ರಿಯ ಮೇಲೆ ನಿಷ್ಕರ್ಷೆಯಾದಂತೆ ತಿಳಿಯಬರುತಿದೆ. ಕನ್ಯೆ ಸ್ವಲ್ಪ ಭಾರೀಯವಳಾಗಿದ್ದದರಿಂದ ಆಗ ವರಗಳು ಸಹ ತಮೆಯು ವಿವಾಹಕ್ಕೆ ಒಡಂಬಟ್ಟಂತೆ ಕಾಣುತಿದೆ. ಕೆಲವು ದಿವಸಗಳು ಗತಿಸಿದ ತರುವಾಯ ಮಾವನು ತನ್ನ ಮಗಳನ್ನು ಮೊದಲನೆಯ ಅಳಿಯನ ಮನೆಗೆ ಕ್ರಮಪ್ರಕಾರ ಕಳುಹಿಸಿದನು. ಈ ವರ್ತಮಾನವು ಎರಡನೆಯ ಅಳಿಯನಿಗೆ ತಿಳಿಯಬಂದ ಕೂಡಲೇ ತನ್ನ ಮಾವನ ಮೇಲೆ ಮೋಸ ಮಾಡಿದ ತಪ್ಪಿತಕ್ಕಾಗಿ ಫಿರ್ಯಾದಿ ಮಾಡಿರುತ್ತಾನೆ. ಅದೇರೀತಿ ಮೊದಲನೆಯವನು ಸಹ, ತನ್ನ ಭಾರ್ಯೆಯನ್ನು ತನ್ನ ಸ್ವಾಧೀನದಿಂದ ತಪ್ಪಿಸಿ ಅನ್ಯನಿಗೆ ಕೊಟ್ಟ ವಿವಾಹ ಮಾಡಿಸಿದ ತಪ್ಪಿತಕ್ಕಾಗಿ ಫಿರ್ಯಾದಿ ಮಾಡಿರುತ್ತಾನೆ. ಅದ್ಯಾಪಿ ಮೊಕದ್ದಮೆ ವ್ಯವಸ್ಥೆಯಾಗಲಿಲ್ಲವು.

LOCAL AND PROVINCIAL NEWS

ಒಳದೇಶ ಮತ್ತು ತಾಲ್ಲೂಕ್‌ಜಾತಿ ವೃತ್ತಾಂತಗಳು.

ಮೈಸೂರು ಲೇಡಿ ಮಹಾರಾಜಾ ಚಾಮರಾಜ ಒಡೆಯರವರ ಹೆಸರಿನೊಳು ತಿರುಪದಿಯಲ್ಲಿ ೧೧,೦೦೦ ರೂಪಾಯಿಗಳಿಗೆ ಒಂದು ಸತ್ರವನ್ನು ಕಟ್ಟಿಸುವದಾಗಿ ಮಹಾರಾಣೀ ರೀಜಂಟರವರು ಹುಕುಂ ಮಾಡಿರುತ್ತಾರೆಂದು ಕೇಳುತ್ತೇವೆ.

ಈಸಲದ ದಸರಾ ವಿನೋದದ ಸಂದರ್ಶನಾರ್ಥ ರಾಜಧಾನಿಗೆ ಮದರಾಸ್ ಹೈಕೋರ್ಟ ಜಡ್ಜಿಯರಲ್ಲಿ ಒಬ್ಬರಾದ ಜಸ್ಟಿಸ್ ಬೋಡಾಂ ಯವರೂ, ಗವರ್ನರವರ ಕೌನ್ಸಿಲ್ ಸೀನಿಯರ್ ಮೆಂಬರ್ ಆನರೆಬಿಲ್ ಮೆ|| ಬ್ಲಿಸ್ ಯವರೂ ಹೋಗಿದಾರೆಂದು ತಿಳಿಯಬರುತಿದೆ

ಈ ಸಲ ಮೈಸೂರಿನಲ್ಲಿ ನಡೆದ ನವರಾತ್ರಿ ಮಹೋತ್ಸವಗಳನ್ನು ನೋಡುವದಕ್ಕೆ ಜನರು ಬೇರೆ ಬೇರೆ ಕಡೆಯಿಂದ ಅಷ್ಟು ವಿಶೇಷವಾಗಿ ಬರಲಿಲ್ಲವು. ಪ್ಲೇಗ್ ವ್ಯಾಧಿ ಉಪದ್ರವವು ತಲೆ ಹಾಕಿದೆ ಎಂಬ ವರ್ತಮಾನ ಎಲ್ಲೆಲ್ಲು ಪ್ರಕಟವಾಗಿರ ವದರಿಂದ ಜನರು ಬರುವದಕ್ಕೆ ಹಿಂದೆಗೆದರೆಂದು ಹೇಳಬೇಕಾಗಿದೆ

ಮಾರಿಕಣ ವೆ ಕಾಮಗಾರಿ ವಿಚಾರಣೆಯೊಳರುವ ಯೆಗ್ಜಿಕ್ಯೂಟಿವ್ ಇಂಜಿನಿಯರರವರು, ಸದರೀ ಕಾಮಗಾರಿಗಿಂತಲೂ ಪ್ರಯೋಜನಕರವಾಗಿರಬಹುದಾದ ಬೇರೆ ಒಂದು ಹೊಸ ಕಾಮಗಾರಿಗೆ ನಕ್ಷೆಗಳನ್ನೂ ಅದಕ್ಕಾಗಿ ತಗಲಬಹುದಾದ ಖರ್ಚಿನ ಅಂದಾಜ್ ಲೆಕ್ಕವನ್ನು ಗವರ್ನಮೆಂಟಿನವರ ಪರ್ಯಾಲೋಚನೆಯ ಬಗ್ಗೆ ಕಳುಹಿಸಿದಾರೆಂದು ಕೇಳುತ್ತೇವೆ

ಮದ್ದೂರ್ ತಾಲ್ಲೂಕ್ ನಿವಾಸಿಗಳು, ತಮ್ಮ ತಾಲ್ಲೂಕಿನಲ್ಲಿ ಪ್ರತ್ಯೇಕ ಒಂದು ಸ್ಪೆಷಿಯಲ್ ಸಬ್ ರಿಜಿಸ್ಟ್ರೀ ಆಫೀಸನ್ನು ಏರ್ಪಡಿಸಬೇಕೆಂಬದಾಗಿ, ರಿಜಿಸ್ಟ್ರೇಶನ್ ಇನ್ಸ್‌ಪೆಕ್ಟರ್ ಜನರಲ್ಲವರಿಗೆ ಮುಡಜಗ್ ಮಾಡಿಕೊಂಡಿದಾರೆಂತಲೂ ಅದೇ ವಿಷಯವನ್ನು ಕುರಿತು ಸದರೀ ತಾಲ್ಲೂಕ್ ಪ್ರತಿನಿಧಿಗಳು, ಈದಿನ ಮೈಸೂರಲ್ಲಿ ಸೇರುವ ಮಹಾಪ್ರತಿನಿಧಿ ಸಭೆಯಲ್ಲಿ ವಿಜ್ಞಾಪಿಸಿಕೊಳ್ಳುವದಾಗಿದಾರೆಂತಲೂ ಒಳದೇಶದ ಇಂಗ್ಲಿಷ್ ಪತ್ರಿಕೆ ತಿಳಿಸುತಿದೆ

ಮದರಾಸಿನಲ್ಲಿರುವ ಪ್ರಸಿದ್ಧರಾದ ಹೈಕೋರ್ಟ ವಕೀಲರು ಕೆಲವರು ಮೈಸೂರ ಚೀಫ್ ಕೋರ್ಟ ಅಡ್ವೋಕೇಟಗಳಾಗಿ ದಾಖಲಾಗಬೇಕೆಂದಿದಾರೆಂತಲೂ, ದಸರಾ ರಜಾ ಪೂರೈಸಿದ ಕೂಡಲೇ ದಾಖಲ್ ಬಗ್ಗೆ ಅವರು ಅರ್ಜಿ ಕೊಡುವವರಾಗಿದಾರೆಂತಲೂ ತಿಳಿಯಬರುವದಾಗಿ ಈವಿನಿಂಗ ಮೆಯಿಲ್ ಪತ್ರಿಕೆ ತಿಳಿಸುತಿದೆ. ಪ್ರಾಯಶಃ ಸದರೀ ಲಾಯರಗಳು ಮದರಾಸಿಗಿಂತಲೂ ಮೈಸೂರ್ ಸೀಮೆಯು ತಮ್ಮ ವಿಶೇಷ ಉನ್ನತಿಗೆ ಯೋಗ್ಯವಾದ ಪ್ರದೇಶವೆಂದು ಭಾವಿಸಿದ್ದಾರೆಂದು ತೋರುತಿದೆ

